ದೇವದುರ್ಗ ತಾಲ್ಲೂಕಿನ ಶಾಸನಗಳು ಮತ್ತು ಅವಶೇಷಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ಮಹೇಶ್
ಎಂ.ಎ.,ಎಂ.ಫಿಲ್

ಮಾರ್ಗದರ್ಶಕರು
ಡಾ. ದೇವರಕೊಂಡಾರೆಡ್ಡಿ
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸೆಪ್ಟೆಂಬರ್ ೨೦೦೬

ದೇವದುರ್ಗ ತಾಲ್ಲೂಕಿನ ಶಾಸನಗಳು ಮತ್ತು ಅವಶೇಷಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ

ಮಹೇಶ್

ಎಂ.ಎ.,ಎಂ.ಫಿಲ್

ಮಾರ್ಗದರ್ಶಕರು

ಡಾ. ದೇವರಕೊಂಡಾರೆಡ್ಡಿ

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸೆಪ್ಟೆಂಬರ್ ೨೦೦೬

ಸಂಶೋಧಕರ ಪ್ರಮಾಣ ಪತ್ರ

ದೇವದುರ್ಗ ತಾಲ್ಲೂಕಿನ ಶಾಸನಗಳು ಮತ್ತು ಅವಶೇಷಗಳು ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ಡಾ.ದೇವರಕೊಂಡಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 12-10-2006
ಸ್ಥಳ : ವಿದ್ಯಾರಣ್ಯ

ಮಹೇಶ್
ಸಂಶೋಧಕ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಮಹೇಶ್ ಅವರು ದೇವದುರ್ಗ ತಾಲ್ಲೂಕಿನ ಶಾಸನಗಳು ಮತ್ತು ಅವಶೇಷಗಳು ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ದೇವರಕೊಂಡಾರೆಡ್ಡಿ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 12.10.2006
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

೧

ಪ್ರಸ್ತಾವನೆ

ಕರ್ನಾಟಕವು ಪೌರಾಣಿಕ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದ ಪ್ರಾಚೀನ ದೇಶವಾಗಿದೆ. ಕರ್ನಾಟಕದಲ್ಲಿರುವ ಅನೇಕ ಪ್ರದೇಶಗಳು ಹಲವಾರು ರಾಜಮನೆತನಗಳ ಆಳ್ವಿಕೆಗೊಳಪಟ್ಟು ಸರ್ವಧರ್ಮಗಳ ಸಮನ್ವಯ ಭೂಮಿಯಾಗಿದೆ. ಅಲ್ಲದೆ ಕರ್ನಾಟಕವೂ ತನ್ನ ಸುದೀರ್ಘವಾದ ಪರಂಪರೆಯನ್ನು ಕಾಲಗರ್ಭದಲ್ಲಿ ಅಡಗಿಸಿಕೊಂಡಿದೆ. ಪುರಾತನವಾದ ಸಂಸ್ಕೃತಿಯನ್ನುಳ್ಳ ಕರ್ನಾಟಕವು ಸಮನ್ವಯತೆಯನ್ನು ಪಾಲಿಸಿಕೊಂಡು ಬಂದಿದೆ. ಇಲ್ಲಿನ ಅರಸರು, ಸಂತರು, ಕವಿಗಳು, ಸುಧಾರಕರು, ಬೋಧಕರು ಮತ್ತು ಕಲಾಕಾರರು ಈ ಅಂಶವನ್ನು ಪೋಷಿಸಿಕೊಂಡು ಬಂದಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯು ಧರ್ಮ, ಸಂಸ್ಕೃತಿ, ವಾಸ್ತುಶಿಲ್ಪ, ಕಲೆ, ಸಾಹಿತ್ಯ ಮೊದಲಾದವುಗಳಿಗೆ ಪ್ರೋತ್ಸಾಹದಾಯಕ ಪ್ರದೇಶವಾಗಿದೆ.

ರಾಯಚೂರು ಜಿಲ್ಲೆಯು ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವೆ ಇರುವ "ದೋ ಆಬ್" ಎಂಬ ನಾಮವನ್ನು ಹೊಂದಿರುವ ಫಲವತ್ತಾದ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಬರುವ ದೇವದುರ್ಗವು ಪ್ರಮುಖ ಪುರಾಣ ಪ್ರಸಿದ್ಧ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಪಡೆದ ತಾಲೂಕು ಸ್ಥಳವಾಗಿದೆ.

ದೇವದುರ್ಗ ಪ್ರದೇಶದ ಅಂದಿನ ಗತವೈಭವ ಮತ್ತು ಸಂಸ್ಕೃತಿಯನ್ನು ಸಾರಿ ಹೇಳುವಂತಹ ಅನೇಕ ಶಾಸನಗಳು ಮತ್ತು ಸ್ಮಾರಕಗಳಾದ ದೇವಾಲಯಗಳು, ಸುಂದರ ವಿಗ್ರಹಗಳು, ಬಸದಿಗಳು, ಶರಣರ ಗದ್ದುಗೆಗಳು, ಮಸೀದಿಗಳು, ಮಠಗಳು, ಕೋಟೆ ಕೊತ್ತಲಗಳು, ಬಾವಿಗಳು ಹಾಗೂ ಕಲೆ ಸಾಹಿತ್ಯ, ಸಂಗೀತ, ನಾಟಕ, ಬಯಲಾಟ ಮುಂತಾದ ಕಲೆಗಳನ್ನು ನಾವು ಈ ಪ್ರದೇಶದಲ್ಲಿ ಕಾಣುತ್ತೇವೆ.

ಕಲ್ಯಾಣಿ ಚಾಲುಕ್ಯರ, ಕಲಚೂರಿಗಳ, ರಾಷ್ಟ್ರಕೂಟರ ಮತ್ತು ಯಾದವರ ಕಾಲದಲ್ಲಿ ರಚನೆಗೊಂಡ ಈ ಎಲ್ಲಾ ಸ್ಮಾರಕಗಳು ಇಂದು ಜನರ ನಿರ್ಲಕ್ಷ್ಯ ಹಾಗೂ ಅಸಡ್ಡೆಯಿಂದಾಗಿ ಜನರು ವಾಸಿಸುವ ಮನೆಗಳಾಗಿಯೋ, ಜಾನುವಾರುಗಳು ವಾಸಿಸುವ ತಾಣಗಳಾಗಿಯೋ ಮತ್ತು ಗೋಡೆಯ ಕಲ್ಲುಗಳಾಗಿ

ಮತ್ತು ಬೀದಿಗೆ ಹಾಸುವ ಕಲ್ಲುಗಳಾಗಿವೆ. ಅಲ್ಲದೆ ಇನ್ನೂ ಕೆಲವು ಸ್ಮಾರಕಗಳು ಮಣ್ಣಿನಲ್ಲಿ ಸೇರಿ ಹುದುಗಿವೆ.

ದೇವದುರ್ಗ ಪ್ರದೇಶವು ಈ ಎಲ್ಲಾ ಏಳು ಬೀಳುಗಳಿಗೆ ತುತ್ತಾಗಿದ್ದರೂ ಸಾಂಸ್ಕೃತಿಕ ದೃಷ್ಟಿಯಿಂದ ಸರ್ವಕ್ಷೇತ್ರಗಳಲ್ಲೂ ಅಪಾರ ಪ್ರಗತಿ ಸಾಧಿಸಿದ ಕೀರ್ತಿಯನ್ನು ಪಡೆದಿದೆ.

ಈ ಪ್ರದೇಶದ ಗೊಬ್ಬೂರನ್ನು "ಗೋಪುರಪುರ", "ಹಿರಿಯಗೊಬ್ಬೂರು", "ಪೆದ್ದವಾಡ" ಎಂದು, ಮಸರಕಲ್ಲು(ಮೊಸಳೆಕಲ್)ನ್ನು 'ಧಾರಾಗಿರಿ' ಪಟ್ಟಣವೆಂದು ಅಥವಾ "ಧಾರಾನಗರ"ವೆಂದು, ಚಂದನಕೇರಿಯನ್ನು "ಚಂದ್ರಗಿರಿ" ಪಟ್ಟಣವೆಂದು, ದೇವದುರ್ಗವನ್ನು "ರತ್ನಮೇಕಲಗಿರಿ" ಎಂದು ಕರೆಯುವ ವಾಡಿಕೆ ಈ ಪ್ರದೇಶದ ಪೌರಾಣಿಕ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಓರಿಯ ಅಗ್ರಹಾರವಾದ ಗಬ್ಬೂರಿನಲ್ಲಿ ೩೦೦ ಮಹಾಜನರು ಇದ್ದು, ವಿದ್ಯಾಕ್ಷೇತ್ರವೆಂದು ಶಾಸನಗಳು ತಿಳಿಸುತ್ತವೆ. ಶಾಸನವು ಗಬ್ಬೂರಿನಲ್ಲಿ ಬ್ರಹ್ಮ ಜೀನಾಲಯವಿದ್ದ ಬಗ್ಗೆ ತಿಳಿಸುತ್ತದೆ. ಶಾಸನಗಳಲ್ಲದೆ ಇತರೆ ಸ್ಮಾರಕಗಳು ಗಬ್ಬೂರು ಚಂದನಕೇರಿ, ದೇವದುರ್ಗ, ರಾಮದುರ್ಗ, ನಾಗೋಲಿ, ಕ್ಯಾದಿಗೇರಾ, ಗಲಗ, ಗೊಗಲ್ಲು ಮುಂತಾದ ಹಳ್ಳಿಗಳಲ್ಲಿ ಕಾಣಬಹುದು. ರಾಮದುರ್ಗ, ಗಬ್ಬೂರು, ದೇವದುರ್ಗ, ಕ್ಯಾದಿಗೇರಾಗಳಲ್ಲಿ ಪುರಾತನವಾದ ಕೋಟೆಗಳನ್ನು ಕಾಣುತ್ತೇವೆ.

ಈ ಪ್ರದೇಶ ಸಾಮಾಜಿಕ, ಧಾರ್ಮಿಕ ಚಟುವಟಿಕೆಯ ಜೀವನಾಡಿಗಳಂತಿದ್ದ ದೇವಾಲಯಗಳ ಕೇಂದ್ರವಾಗಿದೆ. ಇಲ್ಲಿರುವ ದೇವಾಲಯಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳಾಗಿವೆ. ಇದರ ಜೊತೆಗೆ ರೂವಾರಿಗಳ ಶಿಲ್ಪ ನೈಪುಣ್ಯವನ್ನು ತೋರಿಸುವ ಆಡಳಿತವರ್ಗ ಮತ್ತು ಪ್ರಜಾವರ್ಗದವರು ಕಲೆಗೆ ನೀಡಿರುವ ಪ್ರೋತ್ಸಾಹವನ್ನು ಸಾರುವ ಅಪೂರ್ವ ಕಲಾಮಾಧ್ಯಮಗಳಿಂದ ಕೂಡಿದೆ. ಇದಕ್ಕೆ ಗಬ್ಬೂರಿನ ದೇವಾಲಯಗಳಾದ ಮೇಲಶಂಕರ ದೇವಾಲಯ, ವೆಂಕಟೇಶ್ವರ ದೇವಾಲಯ, ಏಳುಬಾವಿ ಬಸವಣ್ಣ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಬಂಗಾರು ಬಸವಣ್ಣ ದೇವಾಲಯ, ನೀಲಕಂಠೇಶ್ವರ ದೇವಾಲಯ, ಕೇಶವ ದೇವಾಲಯ, ಬಜಾರ ಹನುಮಾನ ದೇವಾಲಯ, ಬೋಗನಾಥ ದೇವಾಲಯ, ಹಂಪಣ್ಣ ಗುಡಿ, ಸೂಗೂರೇಶ್ವರ ದೇವಾಲಯ, ಚೌಡೇಶ್ವರ ದೇವಾಲಯ, ಸೋಮೇಶ್ವರ ದೇವಾಲಯ. ಹಾಗೂ ಗೊಗಲ್ಲು ಗ್ರಾಮದ ಅಲ್ಲಮ ಪ್ರಭುಸ್ವಾಮಿ ದೇವಾಲಯ, ಚಂದನಕೇರಿಯ ಈಶ್ವರ ದೇವಾಲಯ, ಆಂಜನೇಯ ದೇವಾಲಯ, ಕೊಪ್ಪರ ಗ್ರಾಮದ ನರಸಿಂಹ ದೇವಾಲಯ, ಮಾನಸಗಲ್‌ನ ರಂಗನಾಥಸ್ವಾಮಿ ದೇವಾಲಯ, ರಾಮದುರ್ಗದ ರಾಮಲಿಂಗೇಶ್ವರ ದೇವಾಲಯ, ಜಾಗಟಗಲನ್ ಬಸವಣ್ಣ ದೇವಾಲಯ, ಬೆಣಕಲ್ಲಿನ ಅಣೆಮಲ್ಲೇಶ್ವರ ದೇವಾಲಯ, ಜಾಲಹಳ್ಳಿಯ ರಂಗನಾಥಸ್ವಾಮಿ ದೇವಾಲಯ, ದೇವದುರ್ಗದ ಗೋಪಾಲಸ್ವಾಮಿ, ಶಂಭುಲಿಂಗೇಶ್ವರ ದೇವಾಲಯ ಮೊದಲಾದವು ಈ ದೇವಾಲಯಗಳೆಲ್ಲ ಉತ್ತಮ ನಿದರ್ಶನಗಳಾಗಿವೆ.

ಈ ಎಲ್ಲಾ ಅಂಶಗಳಿಂದಾಗಿ ದೇವದುರ್ಗ ಪ್ರದೇಶದ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನಗಳು ತೀವ್ರಗತಿಯಿಂದ ನಡೆಯುತ್ತಿದ್ದರೂ ಅದಕ್ಕೆ ಪೋಷಕವಾಗುವ ಲೇಖನ ಮತ್ತು ಗ್ರಂಥಗಳು ವಿಪುಲವಾಗಿ ಬರಬೇಕಾಗಿದೆ. ಈ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಅನೇಕ ಪ್ರದೇಶಗಳಲ್ಲಿ ವ್ಯಾಪಕ ಅಧ್ಯಯನ ನಡೆಯಬೇಕಾಗಿದೆ. ಇದುವರೆಗೆ ವಿ.ಶಿವಾನಂದ ಅವರು "ಹೈದರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು" ಎಂಬ ತಮ್ಮ ಕೃತಿಯಲ್ಲಿ ಗಬ್ಬೂರಿನ ಕೇವಲ ೮ ಶಾಸನಗಳನ್ನು ಮಾತ್ರ ಪ್ರಕಟಿಸಿದ್ದಾರೆ. ಆದರೆ ದೇವದುರ್ಗ ತಾಲೂಕಿನ ಇತರೆ ಊರುಗಳ ಶಾಸನಗಳನ್ನು ಪ್ರಕಟಿಸಿಲ್ಲ. ಚನ್ನಬಸವ ಹಿರೇಮಠ ಅವರು "ರಾಯಚೂರು ಕೊಪ್ಪಳ ಜಿಲ್ಲೆಯ ಶಾಸನಗಳು ಎಂಬ ಪುಸ್ತಕದಲ್ಲಿ ದೇವದುರ್ಗ ತಾಲೂಕಿನ ಒಂದು ಶಾಸನ ಕೂಡಾ ಪ್ರಕಟಿಸಿಲ್ಲ. Annual Report on Indian Epigraphy- 1958-59, Annual Report on Indian Epigraphy-1960-61ರಲ್ಲಿ ಕೆಲವು ಶಾಸನಗಳ ಸಾರಾಂಶ ಮಾತ್ರ ಪ್ರಕಟಗೊಂಡಿವೆ. ಡಾ.ಸಿ.ಎಸ್.ಪಾಟೀಲರ "Temples of Raichur and Bellary Districts" ಎಂಬ ಗ್ರಂಥದಲ್ಲಿ ಗಬ್ಬೂರಿನ ಮೂರುನಾಲ್ಕು ದೇವಾಲಯಗಳು ಹಾಗೂ ಶಾಸನಗಳನ್ನು ಮಾತ್ರ ಪ್ರಕಟಿಸಿದ್ದಾರೆ. ಬಿ.ಟಿ.ಲಲಿತಾನಾಯಕ್ ಅವರು "ದೇವದುರ್ಗ ತಾಲ್ಲೂಕು ದರ್ಶನ" ಎಂಬ ಕಿರು ಪುಸ್ತಕದಲ್ಲಿ ದೇವದುರ್ಗದ ಸಂಕ್ಷಿಪ್ತ ಮಾಹಿತಿಯನ್ನು ತಿಳಿಸಿಕೊಟ್ಟಿದ್ದಾರೆ. ಆದರೆ ಯಾವುದೇ ವಿಷಯ ವಿವರವಾಗಿ ಹೇಳಿಲ್ಲ. ಚನ್ನಬಸಪ್ಪ.ಬಿ ಇವರು "ದೇವದುರ್ಗ ತಾಲ್ಲೂಕು: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಕಿರು ನಿಬಂಧದಲ್ಲಿ ಕೆಲವು ಅಂಶಗಳನ್ನು ಉಲ್ಲೇಖಿಸಿದ್ದಾರೆ. ಇದೊಂದು ಸೀಮಿತ ಅಧ್ಯಯನವಾಗಿದ್ದು, ಅನೇಕ ವಿವರಗಳು ನೀಡಿರುವುದಿಲ್ಲ. ಡಾ.ಕೆ.ಜಿ.ಭಟ್ಟಸೂರಿ ಇವರು "Sculpture in the Government Museum Raichur, 1997" ಎಂಬ ಅಧ್ಯಯನದಲ್ಲಿ ಕೇವಲ ಗಬ್ಬೂರಿನ ಕೆಲವು ಮೂರ್ತಿಗಳ ಬಗ್ಗೆ ಹೆಚ್ಚಿನ ಒಲವು ತೋರಿಸಿದ್ದಾರೆ. ಸೂರ್ಯನಾಥ ಯು. ಕಾಮತ್ ಇವರು "ಕರ್ನಾಟಕ ರಾಜ್ಯ ಗ್ಯಾಸೇಟಿಯರ್ " ಭಾಗ-೨ ರಲ್ಲಿ ದೇವದುರ್ಗದ ಸಂಕ್ಷಿಪ್ತ ಮಾಹಿತಿಯನ್ನು ಮಾತ್ರ ಕೊಟ್ಟಿದ್ದಾರೆ. ತಿರುಳಗನ್ನಡ ೬ನೇ ಅ.ಭಾ.ಕ. ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆಯಲ್ಲಿ ಕೆಲವು ಬಿಡಿ ಲೇಖನಗಳು ಪ್ರಕಟಗೊಂಡಿವೆ. ಬಸವಲಿಂಗ ಸೊಪ್ಪಿಮಠ ಇವರು "ಇತಿಹಾಸ ದರ್ಶನ"ದಲ್ಲಿ "ಗಬ್ಬೂರು ಬಿಬ್ಬಿಬಾಚಯ್ಯನ ಕೆಲವು ಹೊಸ ವಿಚಾರಗಳು" ಎಂಬ ಬಿಡಿ ಲೇಖನ ಪ್ರಕಟಿಸಿದ್ದಾರೆ. ಸಿ.ಎಸ್.ಪಾಟೀಲ ಅವರು "ಕರ್ನಾಟಕದ ಕೋಟೆಗಳು" ಎಂಬ ಸಂಪುಟಗಳಲ್ಲಿ ದೇವದುರ್ಗದ ಕೋಟೆಗಳಲ್ಲಿ ಒಂದನ್ನೂ ಗಮನಿಸಿಲ್ಲ. ಕೆಲವು ದಿನಪತ್ರಿಕೆಗಳಲ್ಲಿ ದೇವದುರ್ಗಕ್ಕೆ ಸಂಬಂಧಿಸಿದ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಇತ್ತೀಚಿನ ದಿನಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದವರು 'ರಾಯಚೂರು ಜಿಲ್ಲೆಯ ಶಾಸನ ಸಂಪುಟ' ಪ್ರಕಟಿಸಿದ್ದಾರೆ. ಇದರಲ್ಲಿ ೫೫ ಶಾಸನಗಳನ್ನು ಪ್ರಕಟಿಸಿದ್ದಾರೆ. ಗಬ್ಬೂರಿನ ಎರಡು ಶಾಸನಗಳು ಹಾಗೂ ಹೀರೇಬೂದೂರು ಒಂದು ಶಾಸನ ಪ್ರಕಟಗೊಂಡಿರುವುದಿಲ್ಲ. ದೇವದುರ್ಗ ತಾಲೂಕು ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆಯಲ್ಲಿ ಕೆಲವು

ಲೇಖನಗಳನ್ನು ಪ್ರಕಟಿಸಲಾಗಿದೆ. ಚಂದ್ರಶೇಖರ ನಾರಣಾಪುರ ಇವರು "ಕರ್ನಾಟಕ ವೀರಶೈವ ಮಠಗಳು" ಎಂಬುದರಲ್ಲಿ ದೇವದುರ್ಗ ತಾಲ್ಲೂಕಿನ ಕೆಲವು ಮಠಗಳ ಬಗ್ಗೆ ಮಾತ್ರ ವಿವರಗಳನ್ನು ಪ್ರಕಟಿಸಿದ್ದಾರೆ. ಡಾ.ಕೆ.ಬಿ.ಶಿವತಾರಕ್ ಇವರು "ಕರ್ನಾಟಕದ ಪುರಾತತ್ವ ನೆಲೆಗಳು" ಎಂಬ ಪುಸ್ತಕದಲ್ಲಿ ದೇವದುರ್ಗ ತಾಲೂಕಿನ ಕೆಲವು ಸ್ಥಳಗಳು ಪುರಾತತ್ವ ನೆಲೆಗಳಾಗಿದ್ದವೆಂದು ತಿಳಿಸಿದ್ದಾರೆ. ಸುಜಾತ ಮಲ್ಲನಗೌಡ ಅವರ ರಾಯಚೂರು-ಕೊಪ್ಪಳ ಜಿಲ್ಲೆಯ ಕೋಟೆ ಕೊತ್ತಲಗಳ ಅಧ್ಯಯನದಲ್ಲಿ ದೇವದುರ್ಗ ತಾಲ್ಲೂಕಿನ ದೇವದುರ್ಗ, ರಾಮದುರ್ಗ, ಗಬ್ಬೂರಿನ ಕೋಟೆಗಳ ಬಗ್ಗೆ ತಿಳಿಸಿದ್ದಾರೆ.

ಒಟ್ಟಿನಲ್ಲಿ ದೇವದುರ್ಗ ಪ್ರದೇಶದ ಮೇಲೆ ಏನೇ ಅಧ್ಯಯನ ನಡೆದಿದ್ದರೂ ಅವುಗಳಲ್ಲಿ ಕೆಲವು ಅಂಶಗಳು ಮಾತ್ರ ಉಲ್ಲೇಖಗೊಂಡಿವೆ. ದೇವದುರ್ಗ ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಸಮಗ್ರವಾಗಿ ನಿರೂಪಿಸುವ ಕೃತಿಗಳು ರಚಿತವಾಗಿಲ್ಲ. ಇಲ್ಲಿ ಗಣನೀಯ ಪ್ರಮಾಣದಲ್ಲಿ ಚಾರಿತ್ರಿಕ ಸಾಮಗ್ರಿ ಲಭ್ಯವಿದ್ದರೂ ಅದನ್ನು ಬೆಳಕಿಗೆ ತರುವಲ್ಲಿ ಸಂಶೋಧಕರು ಗಂಭೀರವಾಗಿ ಪ್ರಯತ್ನಿಸಿಲ್ಲ. ಈ ಕೊರತೆಯ ಹಿನ್ನೆಲೆಯಲ್ಲಿ ದೇವದುರ್ಗ ತಾಲೂಕಿನ ಅವಶೇಷಗಳ ವಿವಿಧ ಮುಖಗಳನ್ನು ಪರಿಚಯಿಸಿಕೊಡುವುದೇ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಇದರ ಜೊತೆಗೆ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ದೇವದುರ್ಗ ಪ್ರದೇಶವು ವಹಿಸಿದ ಪಾತ್ರ ಮತ್ತು ಈ ತಾಲೂಕಿನ ಪ್ರದೇಶ ಕರ್ನಾಟಕ ಚರಿತ್ರೆಗೆ ನೀಡಿದ ಕೊಡುಗೆಗಳನ್ನು ತಿಳಿಸುವುದು ಸಹ ಈ ಸಂಶೋಧನೆಯ ಉದ್ದೇಶವಾಗಿದೆ. ಆದ್ದರಿಂದ ನಾನು ವಿಸ್ತಾರವಾದ ಅಧ್ಯಯನ ಕೈಗೊಳ್ಳುವ ಉದ್ದೇಶದಿಂದ "ದೇವದುರ್ಗ ತಾಲೂಕಿನ ಶಾಸನಗಳು ಮತ್ತು ಅವಶೇಷಗಳು(ಸ್ಮಾರಕಗಳು)" ಎಂಬ ವಿಷಯದ ಮೇಲೆ ಅಧ್ಯಯನ ಕೈಗೊಂಡಿರುವೆನು.

ದೇವದುರ್ಗ ಪ್ರದೇಶದ ಶಾಸನಗಳು ಮತ್ತು ಸ್ಮಾರಕಗಳ ಬಗೆಗೆ ಮೊದಲ ಬಾರಿಗೆ ಇಲ್ಲಿ ವಿವರವಾಗಿ ಅಧ್ಯಯನ ನಡೆಸಲಾಗಿದೆ.

ದೇವದುರ್ಗ ತಾಲೂಕಿನ ಇತಿಹಾಸವನ್ನು ತಿಳಿಯಲು ತುಂಬಾ ಸಹಾಯಕವಾಗಿರುವ ಮೂಲಾಧಾರಗಳೆಂದರೆ ಶಾಸನಗಳು. ನಾವು ಪ್ರಮಾಣಭೂತವಾದ ಆಧಾರದ ಮೇಲೆ ಇತಿಹಾಸವನ್ನು ಪುನಾರಚಿಸಬೇಕಾದರೆ ಶಿಲಾಶಾಸನಗಳಿಗೆ ಮೊರೆ ಹೋಗಬೇಕಾಗುತ್ತದೆ. ನಮ್ಮ ನಾಡಿನ ಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಅಂತೆಯೇ ಅವುಗಳು ಪ್ರಾಚೀನ ಬದುಕಿನ ಸಮಸ್ತ ಸಂವೇದನೆಗಳ ಪ್ರಾಮಾಣಿಕ ಧ್ವನಿಗಳಾಗಿರುವುದರಿಂದ ಇತಿಹಾಸ ರಚನೆಗೆ ಅಧಿಕೃತ ರೂಪದ ದಾಖಲೆಗಳಾಗಿವೆ. ಈ ಪ್ರದೇಶಕ್ಕೆ ಸಂಬಂಧಿಸಿದ ಬಹುಪಾಲು ಶಾಸನಗಳು ತ್ರುಟಿತ ಹಾಗೂ ಅಸ್ಪಷ್ಟವಾಗಿವೆ. ಆದರೂ ಇವು ಈ ಪ್ರದೇಶದ ಇತಿಹಾಸವನ್ನು ರಚಿಸಲು ತುಂಬಾ ಸಹಾಯಕವಾದ ವಿಷಯ ಸಾಮಗ್ರಿಗಳಾಗಿವೆ. ನಮ್ಮ ಈ ಅಧ್ಯಯನಕ್ಕೆ ಈ ಪ್ರದೇಶದಲ್ಲಿ ದೊರೆಯುವ ಸುಮಾರು ೫೦ಕ್ಕೂ ಹೆಚ್ಚು ಶಾಸನಗಳಿವೆ.

ಶಾಸನಗಳಂತೆ ದೇವದುರ್ಗ ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯುವಲ್ಲಿ ಸ್ಮಾರಕಗಳೂ ಸಹ ಪ್ರಮುಖ ಪಾತ್ರ ವಹಿಸುತ್ತವೆ. ಸ್ಮಾರಕಗಳಾದ ದೇವಾಲಯಗಳು ಕೋಟೆ ಕೊತ್ತಲ, ಬಾವಿಗಳು, ವೀರಗಲ್ಲು, ಮಾಸ್ತಿಗಲ್ಲು, ಮೂರ್ತಿಗಳು, ಮಠಗಳು ಮುಂತಾದ ಸ್ಮಾರಕಗಳು ನಮಗೆ ಸಹಾಯಕವಾಗಿವೆ.

ದೇವಾಲಯಗಳ ವಾಸ್ತುಶೈಲಿ, ನಿರ್ಮಾಣ ತಂತ್ರ, ಶಿಲ್ಪ, ವಸ್ತು ಹಾಗೂ ಅವುಗಳಲ್ಲಿ ಕಂಡುಬರುವ ವಿಷಯ ವೈವಿಧ್ಯ ಮೊದಲಾದ ಅಂಶಗಳನ್ನು ಗಮನಿಸಿದರೆ ಪ್ರಾಚೀನ ಕಾಲದ ಜನರ ಕಲಾಪ್ರಿಯತೆಯನ್ನು ಕಲೆಗೆ ನೀಡಿರುವ ಪ್ರೋತ್ಸಾಹವನ್ನು ಕಲಾಶೈಲಿಯನ್ನು ಹಾಗೂ ಧಾರ್ಮಿಕ ಸ್ಥಿತಿಯನ್ನು ತಿಳಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಈ ತಾಲೂಕಿನಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಪ್ರಮುಖ ದೇವಾಲಯಗಳನ್ನು ಸಂದರ್ಶಿಸಿ ಅಂತಹ ಪ್ರಮುಖ ದೇವಾಲಯಗಳನ್ನು ಈ ಪ್ರಬಂಧದಲ್ಲಿ ವಿವರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ದೇವಾಲಯಗಳಂತೆಯೇ ಈ ತಾಲೂಕಿನಲ್ಲಿ ವೀರಗಲ್ಲು, ಮಾಸ್ತಿಕಲ್ಲುಗಳು ಲಭ್ಯವಾಗಿವೆ. ಇಲ್ಲಿನ ವೀರಗಲ್ಲುಗಳು ದೇವದುರ್ಗ ಪ್ರದೇಶದ ವೀರ ಪರಂಪರೆಯ ದ್ಯೋತಕಗಳಾಗಿರುವುದರೊಂದಿಗೆ ಅಪುರೂಪವಾದ ರಣರಂಗದ ಚಿತ್ರಣವನ್ನು ಹಾಗೂ ಅದಕ್ಕೆ ಪೂರಕವಾದ ಸಾಧನ ಸಾಮಗ್ರಿಗಳ ವಿವರವನ್ನು ಒದಗಿಸುತ್ತವೆ. ಹಾಗೆಯೇ, ಮೂರ್ತಿಶಿಲ್ಪಗಳು ಪುರಾತನ ಕಾಲದ ಪುಷ್ಕರಣಿಗಳು, ಕೋಟೆ ಕೊತ್ತಲಗಳು ಮತ್ತು ಬೂದಿದಿಬ್ಬಗಳು ಇತ್ಯಾದಿ ಅವಶೇಷಗಳು ಅಂದಿನ ಕಾಲದ ಸಂಸ್ಕೃತಿಯನ್ನು ಅಭ್ಯಸಿಸುವಲ್ಲಿ ಸಹಾಯಕವಾಗಿದೆ.

ಸಾಹಿತ್ಯವು ಜನಜೀವನದ ಪ್ರತಿಬಿಂಬವಾದುದರಿಂದ ಆಯಾ ಕಾಲದ ಜನಜೀವನವನ್ನು ಪಡಿಮೂಡಿಸುತ್ತಿರುವ ಕಾವ್ಯ-ಪುರಾಣಗಳ ಮಹತ್ವ ಇತಿಹಾಸ ರಚನೆಯಲ್ಲಿ ಇಂದು ಹೆಚ್ಚಿದೆ. ದೇವದುರ್ಗದ ಪ್ರದೇಶದಲ್ಲಿ ಬರುವ ತತ್ವಪದಕಾರರು, ವಚನಕಾರರು, ಕವಿಗಳು ಮುಂತಾದವರ ಸಾಹಿತ್ಯವು ಅಂದಿನ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ.

ಒಟ್ಟಾರೆಯಾಗಿ ಒಂದು ಗ್ರಾಮದಲ್ಲಿ ದೊರೆಯುವ ಶಾಸನಗಳು ಮತ್ತು ಅವಶೇಷಗಳ ಆಧಾರದಿಂದ ದೇವದುರ್ಗ ಪ್ರದೇಶದ ಪರಂಪರೆ ಮತ್ತು ಸಂಸ್ಕೃತಿಯನ್ನು ಪುನರ್ ರಚಿಸಲು ಪ್ರಯತ್ನಿಸಲಾಗಿದೆ. ಐತಿಹಾಸಿಕ ಹಿನ್ನೆಲೆಯೊಂದಿಗೆ ನಡೆಸಲಾದ ಈ ಅಧ್ಯಯನದಲ್ಲಿ ದೊರಕಿರುವ ಎಲ್ಲ ಆಕರಗಳನ್ನು ಬಳಸಿಕೊಂಡು ಉತ್ತರ ಕರ್ನಾಟಕದ ಒಂದು ಸಾಂಸ್ಕೃತಿಕ ಪ್ರದೇಶಗಳಲ್ಲಿ ಒಂದಾದ ದೇವದುರ್ಗ ಪ್ರದೇಶವನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಸಿಸಲು ಪ್ರಯತ್ನಿಸಿರುವ ಮಹಾಪ್ರಬಂಧ ಇದಾಗಿದೆ.

ಅಧ್ಯಾಯ ೨

ದೇವದುರ್ಗ ಪ್ರದೇಶದ ಭೌಗೋಳಿಕ ಅಂಶಗಳು

೨

ದೇವದುರ್ಗ ಪ್ರದೇಶದ ಭೌಗೋಳಿಕ ಅಂಶಗಳು

ಭೌಗೋಳಿಕ ಪರಿಸರ

ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಗಳ ಬೆಳವಣಿಗೆಯಲ್ಲಿ ಅಲ್ಲಿಯ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತು ಬಹುಮುಖ್ಯ ಪ್ರಭಾವ ಬೀರುತ್ತವೆ. ಆಡಳಿತದ ಅನುಕೂಲತೆಗಾಗಿ ವಿಭಾಗಗಳನ್ನು ಮಾಡುವಾಗ ಪ್ರಾಚೀನ ಕಾಲದಿಂದ ಇಂದಿನವರೆಗೆ ಈ ನೈಸರ್ಗಿಕ ಅಂಶಗಳನ್ನವಲಂಬಿಸಿರುವುದು ತಿಳಿದುಬರುತ್ತದೆ. ಆದ್ದರಿಂದ ಅಧ್ಯಯನಕ್ಕಾಗಿ ಆಯ್ದುಕೊಂಡ ಪ್ರದೇಶದ ಭೌಗೋಳಿಕ ವಿವರಗಳನ್ನು ಅರಿತುಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ.

ದೇವದುರ್ಗದ ಭೌಗೋಳಿಕ ಪರಿಸರದಲ್ಲಿ ಕಂಡುಬರುವ ವಾಯುಗುಣ, ಉಷ್ಣಾಂಶ, ಮಳೆ ಮತ್ತು ಭೌತಿಕ ಲಕ್ಷಣಗಳು ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳ ಪರಸ್ಪರ ನಿಕಟ ಸಂಬಂಧ ಹೊಂದಿದ್ದು, ಇಂತಹ ಭೌಗೋಳಿಕ ವೈಶಿಷ್ಟ್ಯಗಳನ್ನು ಮರೆತು ಇತಿಹಾಸವನ್ನು ಬರೆಯಲು ಸಾಧ್ಯವಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ದೇವದುರ್ಗ ತಾಲೂಕು ರಾಯಚೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿದೆ. ಉತ್ತರದಲ್ಲಿ ಕೃಷ್ಣಾನದಿ ಹರಿಯುತ್ತಿದ್ದು, ಅದರಾಚೆಗೆ ಗುಲ್ಬರ್ಗಾ ಜಿಲ್ಲೆಯ ಸುರಪುರ, ಶಹಪುರ ತಾಲೂಕುಗಳಿಂದ ಬೇರ್ಪಡಿಸುವ ಸೀಮಾ ರೇಖೆಯೂ ಆಗಿದೆ. ದೇವದುರ್ಗ ತಾಲೂಕು ಪ್ರದೇಶಕ್ಕೆ ಮೇರೆಯಾಗಿ ಪೂರ್ವಕ್ಕೆ ರಾಯಚೂರು, ದಕ್ಷಿಣಕ್ಕೆ ಮಾನ್ವಿ ಮತ್ತು ಪಶ್ಚಿಮದಲ್ಲಿ ಲಿಂಗಸೂಗೂರು ತಾಲೂಕುಗಳಿವೆ.

ದೇವದುರ್ಗ ತಾಲೂಕು ಸಮುದ್ರ ಮಟ್ಟದಿಂದ ೩೯೮.೪ ಮೀಟರ್ ಎತ್ತರದಲ್ಲಿದೆ. ೧೬೦.೨೫ ಅಕ್ಷಾಂಶ ಹಾಗೂ ೭೬೦.೫೬ ರೇಖಾಂಶಗಳ ನಡುವೆ ಈ ತಾಲೂಕು ವಿಸ್ತರಿಸಿದೆ. ಆಡಳಿತದ ಅನುಕೂಲಕ್ಕಾಗಿ ಈ ತಾಲೂಕನ್ನು ದೇವದುರ್ಗ, ಗಬ್ಬೂರು, ಜಾಲಹಳ್ಳಿ ಮತ್ತು ಅರಕೇರ ಎಂಬ ನಾಲ್ಕು ಹೋಬಳಿಗಳಾಗಿ ವಿಂಗಡಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ ಒಟ್ಟು ೧೮೮ ಹಳ್ಳಿಗಳಿವೆ. ಇವುಗಳಲ್ಲಿ ೧೭೩ ಗ್ರಾಮಗಳಲ್ಲಿ ಜನವಸತಿ ಇರುತ್ತದೆ. ೧೫ ಗ್ರಾಮಗಳಲ್ಲಿ ಜನವಸತಿ ಇರುವುದಿಲ್ಲ. ದೇವದುರ್ಗವೇ ಈ ತಾಲೂಕಿನ ಆಡಳಿತ ಕೇಂದ್ರ ಮತ್ತು ದೊಡ್ಡ ಪಟ್ಟಣ.

ಅಂಕಿ ಅಂಶಗಳು : ದೇವದುರ್ಗ ತಾಲೂಕು ವಿಸ್ತೀರ್ಣ ೧೫೯೦೭೯ ಹೆಕ್ಟೇರ್ ಅಥವಾ ೧೫೨೩ ಚದರ ಕಿ.ಮೀ.ಗಳು ಇದೆ. ೧೯೯೧ರ ಜನಗಣತಿ ಪ್ರಕಾರ ದೇವದುರ್ಗ ತಾಲೂಕಿನ ಒಟ್ಟು ಜನಸಂಖ್ಯೆ ೧೭೬೮೦೧ ಇದ್ದರೆ, ಇದರಲ್ಲಿ ಗಂಡಸರು ೮೯೫೭೫ ಮತ್ತು ಹೆಂಗಸರು ೮೭೨೨೬ ಇದ್ದಾರೆ.

ಹವಾಗುಣ-ಮಳೆ : ದೇವದುರ್ಗ ತಾಲೂಕು ಒಣಹವೆಯಿಂದ ಕೂಡಿದ್ದು, ನವೆಂಬರ್‌ನಿಂದ ಮೇ ತಿಂಗಳವರೆಗೆ ಶುಷ್ಕ ಹವೆ ಇರುತ್ತದೆ. ಉಷ್ಣತೆಯೂ ಹೆಚ್ಚು. ಬೇಸಿಗೆಯಲ್ಲಿ ಗರಿಷ್ಠ ಉಷ್ಣಾಂಶ ಸು.೪೦ ಸೆಂಟಿಗ್ರೇಡ್. ಈ ತಾಲೂಕಿನ ವಾಡಿಕೆ ಮಳೆ ಪ್ರಮಾಣ ೬೩೩.೩ ಮಿ.ಮೀ. ವಾಸ್ತವಿಕ ಸರಾಸರಿ ಮಳೆ ೭೦೭.೬ ಮಿ.ಮೀ.ಗಳು. ಇಲ್ಲಿಯ ವಾರ್ಷಿಕ ಮಳೆ ೭೯೯.೨ ಮಿ.ಮೀ. ಆಗಿದೆ.

ಜನವರ್ಗಗಳು : ಈ ತಾಲೂಕಿನಲ್ಲಿ ಹಿಂದೂ ಧರ್ಮದ ಜನ ಹೆಚ್ಚಾಗಿದ್ದಾರೆ. ಇವರಲ್ಲಿ ಬೇಡರು, ನೇಕಾರರು, ಕುರುಬರು, ಗೊಲ್ಲರು, ವೀರಶೈವರು, ಬ್ರಾಹ್ಮಣರು, ವಡ್ಡರು, ಕಬ್ಬೇರರು, ಮಾದರು, ಹೊಲೆಯರು, ನೂಲಿಯವರು, ದಾಸರು, ಕುಂಬಾರರು, ಹೂಗಾರರು, ಕೊರವರು, ವೇಷಗಾರರು, ಮೋಡಿಕಾರರು ಮೊದಲಾದ ಜನಾಂಗದವರು ಇದ್ದಾರೆ. ಇಲ್ಲಿನ ಬೇಡರನ್ನು ವಾಲ್ಮೀಕಿ ಅಥವಾ ನಾಯಕರು ಅಥವಾ ದೊರೆಗಳು ಎಂದು ಕರೆಯುತ್ತಾರೆ. ಇವರು ಈ ಪ್ರದೇಶದಲ್ಲಿ ಸಾಮಂತ ಪಾಳೆಯಗಾರರಾಗಿ ಆಳ್ವಿಕೆ ಮಾಡಿದ್ದಾರೆ. ದೇವದುರ್ಗ, ಚಂದನಕೇರಿ, ಕ್ಯಾದಿಗೇರಾ, ಅರಕೇರ, ಗೊಗಲ್, ಗಾಗಲ್, ಜಾಲಹಳ್ಳಿ ಮುಂತಾದ ಊರುಗಳಲ್ಲಿ ನಾಯಕರ ಆಳ್ವಿಕೆಯ ಕುರುಹುಗಳು ಇಂದಿಗೂ ಇವೆ. ಗಣೇಕಲ್‌ನಲ್ಲಿ ಮಾತ್ರ ನಾಡಗೌಡರ ಆಳ್ವಿಕೆಯಿತ್ತು. ದೇವದುರ್ಗ ತಾಲೂಕಿನಲ್ಲಿ ಕನ್ನಡ ಭಾಷೆಯ ಜೊತೆಗೆ ತೆಲುಗು, ಹಿಂದಿ, ಉರ್ದು ಮಾತಾಡಿದರೂ ಸಹಿತ ಕನ್ನಡವೇ ಪ್ರಧಾನ ಬಳಕೆಯ ಭಾಷೆಯಾಗಿದೆ.

ನದಿ, ಕೆರೆಗಳು, ಬಾವಿಗಳು

ಕೃಷ್ಣಾನದಿ : ಕರ್ನಾಟಕದ ಜೀವನದಿಗಳಲ್ಲಿ ಒಂದಾಗಿರುವ ಕೃಷ್ಣಾ ನದಿಯು ಉತ್ತರ ಕರ್ನಾಟಕದ ಭಾಗಕ್ಕೆ ಅತಿ ಉಪಯುಕ್ತವಾದ ನದಿಯಾಗಿದೆ. ಇದು ಪವಿತ್ರ ನದಿ ಎಂದು ಹೆಸರು ಗಳಿಸಿದೆ. ಸ್ಥಳೀಯರು ಇದಕ್ಕೆ ಹಿರೇಹೊಳೆ ಮತ್ತು ಕರಿಹೊಳೆ ಎಂಬ ಹೆಸರಿನಿಂದ ಕರೆಯುತ್ತಾರೆ. ಶಾಸನಗಳಲ್ಲಿ 'ಪೆರ್ದೊರೆ' ಸಂಸ್ಕೃತದಲ್ಲಿ 'ಕೃಷ್ಣವೇಣಿ' ಎಂಬ ಹೆಸರುಗಳು ಕಂಡುಬರುತ್ತವೆ. ಲಿಂಗಸೂಗೂರು ತಾಲೂಕಿನ ಕಮಲದಿನ್ನಿ ಗ್ರಾಮದ ಶಾಸನಗಳಲ್ಲಿ ಕೃಷ್ಣಾವೇಣಿ ಎಂದು ಕರೆದಿದೆ.

ಹಿಂದಿನ ಅನೇಕ ಬರಹಗಳಲ್ಲಿ ಕೃಷ್ಣಾನದಿಯ ಉಲ್ಲೇಖವಿದೆ. ಸ್ಕಂದ ಪುರಾಣದ ಕೃಷ್ಣಾ ಮಹಾತ್ಮೆ ವಿಭಾಗದಲ್ಲಿ ಹೇಳಿರುವಂತೆ ಸ್ವರ್ಗದಿಂದ ಈ ನದಿಯನ್ನು ಭೂಲೋಕಕ್ಕೆ ತಂದಂತೆ, ಕಲಿಯುಗದಲ್ಲಿ ಧರ್ಮಗ್ಲಾನಿಯಿಂದ ಬೇಸತ್ತ ಋಷಿಗಳು ನಾರದನನ್ನು ಮೊರೆ ಹೊಕ್ಕಾಗ ನಾರದ ತನ್ನ ತಂದೆ ಬ್ರಹ್ಮನನ್ನು

ಪ್ರಾರ್ಥಿಸಿದ. ಆಗ ಬ್ರಹ್ಮ ಅನೇಕ ತೀರ್ಥಗಳನ್ನು ಸೃಷ್ಟಿಸಿದ. ಹಾಗೆ ನಾರಾಯಣನನ್ನು ಧರ್ಮರಕ್ಷಣೆಗೆ ಪ್ರಾರ್ಥಿಸಿದಾಗ ನಾರಾಯಣನ ಶರೀರದಿಂದ ಈ ನದಿ ಹುಟ್ಟಿತೆಂದೂ ಆದ್ದರಿಂದಲೇ ಇದಕ್ಕೆ ಕೃಷ್ಣಾನದಿ ಎಂಬ ಹೆಸರು ಬಂದಿತೆಂದೂ ಹೇಳುವರು. ಜೊತೆಗೆ ಸಹ್ಯಾದ್ರಿಯ ದೊರೆ ನಾರಾಯಣನನ್ನು ಕುರಿತು ತಪಸ್ಸು ಮಾಡಿದಾಗ ನಾರಾಯಣ ಪ್ರತ್ಯಕ್ಷನಾಗಿ ವರರೂಪವಾಗಿ ಕೃಷ್ಣಾನದಿಯಾಗಿ ಹರಿದನೆಂದು ಹೇಳುವರು. ಕೃಷ್ಣಾ ಎಂದರೆ ಪಾಪವನ್ನೆಲ್ಲ ಕೊಚ್ಚಿಕೊಂಡು ಹೋಗುವುದು ಎಂಬ ಅರ್ಥವನ್ನು ಹೇಳುವುದುಂಟು. ಪದ್ಮ ಮತ್ತು ಬ್ರಹ್ಮ ಪುರಾಣಗಳಲ್ಲಿಯೂ ಕೃಷ್ಣಾನದಿಯ ಮಹಿಮೆ ಕುರಿತು ಹೇಳಿದೆ. ಕೃಷ್ಣಾ ನದಿಯನ್ನು ದಕ್ಷಿಣ ಗಂಗೆ ಎಂದು ಕರೆಯುತ್ತಾರೆ. ದೇವದುರ್ಗ ತಾಲೂಕಿನಲ್ಲಿ ಹರಿಯುವ ಮುಖ್ಯ ನದಿ ಕೃಷ್ಣಾ ನದಿಯಾದರೂ ಇದು ತಾಲೂಕಿನ ಉತ್ತರದಲ್ಲಿ ಹರಿಯುವುದರಿಂದ ನೀರಾವರಿ ಸೌಲಭ್ಯ ಅಷ್ಟು ಆಗಿಲ್ಲ.

ತುಂಗಭದ್ರಾ ನದಿ : ತುಂಗ ಮತ್ತು ಭದ್ರಾ ಎಂಬ ಎರಡು ನದಿಗಳು ಸೇರಿ ಮುಂದೆ ತುಂಗಭದ್ರಾ ಎಂಬ ಹೆಸರನ್ನು ಪಡೆದು ಕರ್ನಾಟಕದ ಮಧ್ಯಭಾಗದಲ್ಲಿ ಈಶಾನ್ಯಾಭಿಮುಖವಾಗಿ ಹರಿಯುವ ದೊಡ್ಡ ನದಿ. ದೇಶದ ಆರ್ಥಿಕತೆಯಲ್ಲಿ ಪ್ರಾಚೀನ ಕಾಲದಿಂದಲೂ ಉಪಯುಕ್ತ ಪಾತ್ರ ವಹಿಸಿದ್ದು, ದಕ್ಷಿಣ ಗಂಗೆ ಎಂದು ಪವಿತ್ರ ಎನಿಸಿರುವ ಜೀವನದಿ. ಈ ನದಿ ಪ್ರಾಗೈತಿಹಾಸಿಕ ಕಾಲದಿಂದಲೂ ಜನೋಪಯೋಗಿ ಯಾಗಿದ್ದು, ಇಲ್ಲಿ ಅನೇಕ ಜನವಸತಿ ಬೆಳೆಯಲು ಕಾರಣವಾಗಿದೆ. ಪುರಾಣಗಳಲ್ಲಿ ತುಂಗಭದ್ರಾ ನದಿಯ ಬಗ್ಗೆ ಉಲ್ಲೇಖಗಳು ಬರುತ್ತವೆ. ರಾಮಾಯಣದಲ್ಲಿ ಇದು ಪಂಪ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಬ್ರಹ್ಮಾಂಡ ಪುರಾಣದ ತುಂಗಭದ್ರಾ ಮಹಾತ್ಮೆಯಲ್ಲಿ ಈ ನದಿಯ ಮೂಲವನ್ನು ಹೀಗೆ ಹೇಳಿದೆ. ಹಿಂದೆ ಹಿರಣ್ಯಾಕ್ಷ ಭೂದೇವಿಯನ್ನು ಅಪಹರಿಸಿಕೊಂಡು ಸಮುದ್ರದಲ್ಲಿ ಬಚ್ಚಿಟ್ಟುಕೊಂಡಿದ್ದಾಗ, ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಿದರು. ಆಗ ವಿಷ್ಣು ವರಾಹ ಅವತಾರ ತಾಳಿ ಹಿರಣ್ಯಾಕ್ಷನನ್ನು ಕೊಂದು ಭೂದೇವಿಯನ್ನು ಕಾಪಾಡಿ, ವಿಶ್ರಾಂತಿಗಾಗಿ ಪಶ್ಚಿಮ ಘಟ್ಟದ ಮೇಲೆ ಕುಳಿತುಕೊಂಡ. ಅದೇ ವರಾಹ ಪರ್ವತವಾಯಿತು. ವರಾಹನ ಬಲ ಕೊಂಬಿನಿಂದ ಸುರಿದ ಬೆವರೇ ಭದ್ರಾನದಿ, ಎಡಕೊಂಬಿನಿಂದ ಸುರಿದ ಬೆವರೇ ತುಂಗಾನದಿ. ಮಹಾಭಾರತದಲ್ಲಿ ಗಂಗಾ, ಕೃಷ್ಣಾ ನದಿಗಳ ಜೊತೆಗೆ ತುಂಗಭದ್ರಾ ನದಿಯನ್ನು ಸೇರಿಸಿ ಈ ಮೂರು ಪವಿತ್ರ ನದಿಗಳೆಂದು ಹೇಳಿದೆ.

ಕೆರೆಗಳು : ದೇವದುರ್ಗ ತಾಲೂಕಿನಲ್ಲಿ ಒಟ್ಟು ೧೫೧ ಕೆರೆಗಳಿವೆ. ಇವುಗಳಲ್ಲಿ ಚಂದನಕೇರಿ, ದೇವದುರ್ಗಕೆರೆ, ಡೊಂಕೆರೆ, ಕೊತ್ತದೊಡ್ಡಿ ಕೆರೆ, ಮಲ್ಲಿನಾಯಕನದೊಡ್ಡಿ ಕೆರೆ, ನಾಗೋಲಿ ಕೆರೆ, ಗಲಗಕೆರೆ, ರಾಮದುರ್ಗಕೆರೆ, ಹೊನ್ನಕಾಟಮಳ್ಳಿ ಕೆರೆ, ಹಮನೂರು ಕೆರೆ, ಅರಕೇರಿ ಕೆರೆ, ಖಾನಾಪುರ ಕೆರೆ, ಬಂಗಾರಪ್ಪನ ಕೆರೆ, ಗಣೇಕಲ್ ಕೆರೆ ಮುಂತಾದ ಕೆರೆಗಳು ಇವೆ.

ಬಾವಿಗಳು : ದೇವದುರ್ಗ ಪ್ರದೇಶದ ಕೊತ್ತೊದೊಡ್ಡಿ, ಇರಬಗೇರಾ, ಬೆಂಡರ ಗಣೇಕಲ್, ಅರಕೇರ, ಮಲ್ಲಿನಾಯಕನದೊಡ್ಡಿ, ಪಿಲಿಗುಂಡ, ಮಲ್ಕಂದಿನ್ನಿ, ಜರದ-ಬಂಡಿ, ಗಬ್ಬೂರು, ಖಾನಾಪುರ, ರಾಮದುರ್ಗ ಮುಂತಾದ ಹಳ್ಳಿಗಳಲ್ಲಿ ಬಾವಿ ನೀರಾವರಿಗೆ ಪ್ರಸಿದ್ಧವಾಗಿದೆ.

ಬೆಟ್ಟಗಳು : ದೇವದುರ್ಗ ತಾಲೂಕಿನಲ್ಲಿರುವ ಕೆಲವು ಸಣ್ಣ ಬೆಟ್ಟಗಳನ್ನು ಕರಡಿಗುಡ್ಡ, ಮಸರಕಲ್ಲು, ಕಾಕರಗಲ್ಲು ಬೆಟ್ಟ ಶ್ರೇಣಿಗಳೆಂದು ಕರೆಯುತ್ತಾರೆ. ಅವು ಸುಮಾರು ೧೫೦೦ರಿಂದ ೧೭೭೪ ಅಡಿಗಳಷ್ಟು ಎತ್ತರವಿದ್ದು ಕಾಕರಗಲ್, ಗಬ್ಬೂರು, ಅರಕೇರ, ಮಲ್ಲಿನಾಯಕನದೊಡ್ಡಿ, ಬೆಂಡರ ಗಣೇಕಲ್, ಕೊತ್ತದೊಡ್ಡಿ, ದೇವದುರ್ಗ, ಕರಡಿಗುಡ್ಡ, ಮುಂಡರಗಿ, ಜಿನ್ನಾಪುರ, ಜಾಗಟಗಲ್, ಮಲದಕಲ್, ರಾಮದುರ್ಗ, ಹುನಗುಂದಬಾಡ ಹಾಗೂ ಗಲಗ ಮೊದಲಾದೆಡೆಗಳಲ್ಲಿ ಹರಡಿಕೊಂಡಿವೆ.

ದೇವದುರ್ಗ ತಾಲೂಕಿನ ಗಬ್ಬೂರು, ವಂದಲಿ, ವಟಗಲ್ಲ, ಅಂಜಳಾ, ಅಂಚೆಸೂಗೂರು, ಇಟಗಿ, ಕರ್ಕಿಹಳ್ಳಿ, ಕೋಣಚಪ್ಪಳಿ, ಗೋಪಾಳಪುರ, ಬುದ್ದಿನ್ನಿ ಮುಂತಾದ ಹಳ್ಳಿಗಳು ಪ್ರಾಗೈತಿಹಾಸಿಕ ಕಾಲದ ನೆಲೆಗಳಾಗಿವೆ.

ಗಬ್ಬೂರಿನ ಸೂಗೂರೇಶ್ವರ ಬೆಟ್ಟದಲ್ಲಿ ಹಾಗೂ ಮಲದಕಲ್ಲು ಗ್ರಾಮದ ಬೆಟ್ಟದಲ್ಲಿ ಪ್ರಾಗೈತಿಹಾಸಿಕ ಕಾಲದ ಅನೇಕ ಕುರುಹುಗಳನ್ನು ನೋಡಬಹುದು. ಸೂಗೂರೇಶ್ವರ ದೇವಾಲಯದ ಹಿಂದಿನ ಕೆಳ ಭಾಗದಲ್ಲಿ ಒಂದು ನೀರಿನ ಬುಗ್ಗೆಯಿದ್ದು, ಇದರ ಪಕ್ಕದಲ್ಲಿ ವಿಶೇಷವಾಗಿ ಕಂಡುಬರುವ ಜ್ವಾಲಾಮುಖಿ ಸ್ಫೋಟದಿಂದ ಉಂಟಾದ ಶಿಲಾ ಬಂಡೆಗಲ್ಲು ಇದೆ. ಇದರಲ್ಲಿ "ಬ್ಯಾತೋಲಿಥ" ಎಂದು ಕರೆಯಲ್ಪಡುವ ಕಪ್ಪು ಶಿಲಾ ಪದರಿನ ಅವಶೇಷವನ್ನು ಕಾಣಬಹುದಾಗಿದೆ. ಇದರ ವೈಶಿಷ್ಟ್ಯವೆಂದರೆ ಜ್ವಾಲಾಮುಖಿ ಸ್ಫೋಟಗೊಂಡಾಗ ಹೊರಬರುವ ಲಾವಾರಸವೂ ಪ್ರಾಥಮಿಕ ಸ್ವರೂಪದ ಶಿಲೆಗಳನ್ನು ಅಂದರೆ ಅಗ್ನಿಶಿಲೆ ಗಳನ್ನು ನಿರ್ಮಿಸುತ್ತದೆ. ಇದರ ಲಕ್ಷಣವೆಂದರೆ ಎರಡೂ ಕಡೆ ಬಿಳಿ ಅಗ್ನಿಶಿಲೆಗಳ ಮಧ್ಯಭಾಗದಲ್ಲಿ ಕಪ್ಪು ಬಣ್ಣದ ಅಗ್ನಿಶಿಲೆ ಕಂಡುಬರುವುದು. ಇದು ಸುಮಾರು ೧೦ ಮೀಟರಕ್ಕಿಂತಲೂ ಹೆಚ್ಚು ಉದ್ದವಾಗಿದೆ. ಇದೊಂದು ಅಪುರೂಪದ ಭೌಗೋಳಿಕ ಅವಶೇಷವಾಗಿದೆ. ಅಲ್ಲದೆ ಈ ಬೆಟ್ಟದಲ್ಲಿ ಪ್ರಾಗೈತಿಹಾಸ ಕಾಲದ ಅನೇಕ ರೇಖಾಚಿತ್ರಗಳನ್ನು ಕಾಣಬಹುದು. ದೇವದುರ್ಗ ತಾಲ್ಲೂಕಿನ ಬೆಟ್ಟಗಳಲ್ಲಿ ಹೆಚ್ಚಾಗಿ ಸಸ್ಯ ಸಂಪತ್ತು ಇರದೆ ಕಲ್ಲಿನಿಂದ ತುಂಬಿದವುಗಳಾಗಿದ್ದು ಬೋಳಾಗಿವೆ.

ಅರಣ್ಯ ಪ್ರದೇಶ : ಈ ತಾಲೂಕಿನ ಅರಣ್ಯ ವಿಸ್ತೀರ್ಣ ೫೩೦೧ ಹೆಕ್ಟೇರುಗಳು. ಕೃಷ್ಣಾ ನದಿ ದಂಡೆಯುದ್ದಕ್ಕೂ ಈ ಅರಣ್ಯವಿದೆ. ಅಷ್ಟು ದಟ್ಟವಾಗಿಲ್ಲದ ಈ ಕಾಡಿನಲ್ಲಿ ತರೆ, ತುಮರಿ, (ಬೀಡಿ ಎಲೆಯ ಮರ) ಕಕ್ಕೆ, ಜಾಲಿ, ಬೆಟ್ಟಲ, ಹೊಂಗೆ, ಹುಣಸೆ, ಇಪ್ಪೆ, ಮುತ್ತಗಿ, ತಿರುಮನೆ, ದಿಂಡಿಗೆ, ಚುಜ್ಜಲು, ಬೀಜಸಾರ, ಹೊನ್ನೆ, ಮತ್ತಿ, ಬೇವಿನ ಮರ, ನೀಲಗಿರಿ, ಬಾರೆ ಮುಂತಾದವುಗಳಿದ್ದು,

ದೇವದುರ್ಗ, ಅರಕೇರ, ಕ್ಯಾದಿಗ್ಗೇರಾ ಮೊದಲಾದ ಊರುಗಳ ಬೆಟ್ಟ ಪ್ರದೇಶಗಳಲ್ಲಿ 'ಸೀತಾಫಲ' ಹಣ್ಣಿನ ಗಿಡಗಳು ಸಾಕಷ್ಟಿವೆ. ದೇವದುರ್ಗ ತಾಲೂಕಿನ ಜಾಲಹಳ್ಳಿ ನಿಂಬೆ ಹಣ್ಣಿಗೆ ಪ್ರಸಿದ್ಧವಾಗಿದೆ. ಇಲ್ಲಿ ನಿಂಬೆ ಗಿಡಗಳು ಅಧಿಕ ಪ್ರಮಾಣದಲ್ಲಿ ಇರುವುದರನ್ನು ಕಾಣಬಹುದು. ದೇವದುರ್ಗ ತಾಲೂಕಿನ ಅರಕೇರ ಗುಡ್ಡದಲ್ಲಿ ಸರ್ಕಾರದವರು ನೀಲಗಿರಿ ಸಸಿಗಳನ್ನು ನೆಟ್ಟು ಅಲ್ಲಿ ಸ್ವಲ್ಪ ಪ್ರಮಾಣದಲ್ಲಿ ಅರಣ್ಯ ರೀತಿಯಾಗಿ ಮಾಡಿದ್ದಾರೆ.

ದೇವದುರ್ಗ ತಾಲೂಕಿನ ಪ್ರದೇಶದಲ್ಲಿ ಅನೇಕ ರೀತಿಯ ಪ್ರಾಣಿಗಳನ್ನು ನೋಡಬಹುದು. ಅದರಲ್ಲಿ ಮೊಲ, ನರಿ, ಜಿಂಕೆ, ತೋಳ, ಕಾಡುಹಂದಿ, ಮಂಗ, ಕತ್ತೆ ಕಿರುಬ ಮೊದಲಾದ ಪ್ರಾಣಿಗಳಿವೆ. ಇವು ಗುಡ್ಡದ ಗವಿಗಳಲ್ಲಿ ವಾಸ ಮಾಡುತ್ತವೆ. ಪ್ರಾಣಿಗಳಲ್ಲದೆ ಈ ತಾಲೂಕಿನಲ್ಲಿ ಪಕ್ಷಿಗಳಾದ ಬೆಳ್ಳಕ್ಕಿ, ಕೌಜಗ, ಪಾರಿವಾಳ, ಗೀಜಗನ ಹಕ್ಕಿ, ಬುರ್ಲಿ, ಬೆಳುವ, ಸವಳಕ್ಕಿ, ಟಿವ್ವ, ರಣಹದ್ದು, ಕಾಗೆ, ಗೂಬೆ, ಕೊಕ್ಕರೆ ಮುಂತಾದ ಪ್ರಾಣಿಗಳನ್ನು ಕಾಣಬಹುದು.

ಮಣ್ಣುಗಳ ವಿಧಗಳು : ದೇವದುರ್ಗ ತಾಲೂಕಿನ ಪ್ರದೇಶದ ಭೂಮಿಯನ್ನು ಮುಖ್ಯವಾಗಿ ಐದು ಪ್ರಕಾರವಾಗಿ ವಿಂಗಡಿಸಬಹುದು.

೧. ಕೆಂಪು ಮಣ್ಣು : ಈ ಮಣ್ಣು ಜಾಲಹಳ್ಳಿ, ಗಲಗ, ಮುಂಡರಗಿ, ಅರಕೇರ, ಕ್ಯಾದಿಗ್ಗೇರಾ, ಬೆಂಡರ ಗಣೇಕಲ್ ಈ ಆಲ್ಕೋಡ ಆಕಲ ಕುಂಪಿ ಪ್ರದೇಶದಲ್ಲಿ ಹೆಚ್ಚಾಗಿದೆ.

೨. ಕಪ್ಪು ಮಣ್ಣು : ದೇವದುರ್ಗ, ಮೊಸರಕಲ್ಲು, ಮಲದಕಲ್, ಗಣೇಕಲ್, ರಾಮದುರ್ಗ, ಸುಂಕೇಶ್ವರ ಹಾಳ, ನಾಗಡದಿನ್ನಿ, ಗಬ್ಬೂರು, ಮಲ್ಕಂ ದಿನ್ನಿ, ಹಿರೇಬೂದೂರು, ತೆಗ್ಗಿಹಾಳ, ಖಾನಾಪುರ, ಪ್ರದೇಶದಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು.

೩. ಮರಳು ಮಣ್ಣು : ಈ ಮಣ್ಣನ್ನು ಮರದ ಕಲ್, ಗೂಗಲ್, ಕೂಡ್ಲಿಗಿ ಮತ್ತು ಗುಡ್ಡಗಾಡು ಪ್ರದೇಶದಲ್ಲಿರುವುದು.

೪. ಜೇಡಿ ಮಣ್ಣು : ಭೂ ಪ್ರದೇಶದ ಒಡಕು, ಮೇಲ್ಪದರದಲ್ಲಿ ತೆಳುವಾದ ಕೆಂಪು ಜೇಡಿ ಮಣ್ಣು ಕೆಲವು ಪ್ರದೇಶದಲ್ಲಿದೆ.

೫. ಮೆಕ್ಕಲು ಮಣ್ಣು : ಈ ಮಣ್ಣು ಕೃಷ್ಣಾನದಿ ಹರಿಯುವ ದೇವದುರ್ಗ ತಾಲೂಕಿನ ಚಿಂಚೋಡಿ, ಅಂಜಳಾ, ಬೆಣಕಲ್, ಕೊಪ್ಪರ, ಕುರ್ಕಿಹಳ್ಳಿ, ಯಾಟಗಲ್, ಇಟಗಿ, ಗಾಗಲ್, ಗೊಗಲ್, ಹೀರೆರಾಯ ಕುಂಪಿ ಮುಂತಾದ ಗ್ರಾಮಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಫಲವತ್ತಾದ ಮೆಕ್ಕಲು ಮಣ್ಣನ್ನು ಕಾಣಬಹುದು.

ಬೆಳೆಗಳು : ಈ ತಾಲೂಕಿನಲ್ಲಿ ಬೆಳೆಗಳನ್ನು ಎರಡು ಅವಧಿಯಲ್ಲಿ ಬೆಳೆಯುತ್ತಾರೆ. ಅವುಗಳೇ ಮುಂಗಾರು ಬೆಳೆಗಳು ಮತ್ತು ಹಿಂಗಾರು ಬೆಳೆಗಳು ಆಗಿವೆ.

೧. **ಮುಂಗಾರು ಬೆಳೆಗಳು :** ಸೇಂಗಾ, ತೊಗರಿ, ಸಜ್ಜೆ, ಅಲಸಂದಿ, ಕೆಂಪುಜೋಳ, ಹೆಸರು, ನವಣೆ ಇವುಗಳನ್ನು ಸಾಮಾನ್ಯವಾಗಿ ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡಿ ಬೆಳೆಯುತ್ತಾರೆ.

೨. **ಹಿಂಗಾರು ಬೆಳೆಗಳು :** ಹತ್ತಿ, ಜೋಳ, ಕುಸಬೆ, ಗೋಧಿ, ಕಡಲೆ, ಹುರುಳಿ ಇತ್ಯಾದಿ ಬೆಳೆಗಳನ್ನು ಅಕ್ಟೋಬರ್ ಅಥವಾ ನವಂಬರ್ ತಿಂಗಳಿನಲ್ಲಿ ಬಿತ್ತನೆ ಮಾಡುತ್ತಾರೆ.

ಖನಿಜ ಸಂಪತ್ತು : "ಹಿಂದೆ ಡೆಕ್ಕನ್ ಮೈನಿಂಗ್ ಕಂಪನಿಯವರು ಕೆಲಕಾಲ ವಂಡಳ್ಳಿ(ವಂದಲಿ), ದೇವದುರ್ಗ ಮೊದಲಾದ ಸ್ಥಳಗಳಲ್ಲಿ ಬಂಗಾರವನ್ನು ತೆಗೆದರು. ಆದರೆ ಉತ್ಪತ್ತಿಗಿಂತ ಚಿನ್ನ ತೆಗೆಯುವ ವೆಚ್ಚ ಹೆಚ್ಚಾಗಿದುದರಿಂದ ಗಣಿ ಕೆಲಸವನ್ನು ನಿಲ್ಲಿಸಲಾಯಿತು. ಹಿರೇಹೊನ್ನುಣಿ ಎಂಬ ಸ್ಥಳದಲ್ಲಿ ಬಂಗಾರ ದೊರಕುತ್ತಿತ್ತೆಂದು ತಿಳಿದುಬರುತ್ತದೆ". ಸುಣ್ಣದಕಲ್ಲು ಗ್ರಾಮದ ಬಳಿ ಸುಣ್ಣದ ಹರಳುಗಳು ಸಿಗುತ್ತವೆ. ಸುಣ್ಣದ ಉತ್ಪಾದನೆಗೆ ಇಲ್ಲಿ ಅವಕಾಶವಿರುತ್ತದೆ. (ದೇ.ತಾ.ದ. ಬಿ.ಟಿ. ಲಲಿತಾನಾಯಕ, ಪು.೪ ಮತ್ತು ೭)


ಕರ್ನಾಟಕ ರಾಜ್ಯ
ರಾಯಚೂರು ಜಿಲ್ಲೆ
ಉ
ಪ
ಪೂ
ದ
ಗುಲ್ಬರ್ಗಾಜಿಲ್ಲೆ
ದೇವದುರ್ಗ
ಕೃಷ್ಣಾನದಿ
ರಾಯಚೂರು
ಲಿಂಗಸೂಗೂರು
ಮಾನ್ವಿ
ಸಿಂಧನೂರು
ತುಂಗಭದ್ರಾನದಿ
ಆಂಧ್ರಪ್ರದೇಶ
ಕೊಪ್ಪಳಜಿಲ್ಲೆ
ಬಳ್ಳಾರಿಜಿಲ್ಲೆ
ಸೂಚನೆ
ತಾಲೂಕು ಕೇಂದ್ರಸ್ಥಳ
ತಾಲೂಕು ಗಡಿ
ಜಿಲ್ಲಾಗಡಿ
ನದಿಗಳು

ಅಧ್ಯಾಯ ೨

ಪ್ರಾಗೈತಿಹಾಸಿಕ ಕಾಲ

ರಾಜಕೀಯ ಹಿನ್ನೆಲೆ ಮತ್ತು ಆಡಳಿತ ವಿಭಾಗಗಳು

೩

ಪ್ರಾಗೈತಿಹಾಸಿಕ ಕಾಲ
ರಾಜಕೀಯ ಹಿನ್ನೆಲೆ ಮತ್ತು ಆಡಳಿತ ವಿಭಾಗಗಳು

ಐತಿಹಾಸಿಕ ಹಿನ್ನೆಲೆ

ಹಿಂದಿನ ಯಡತೊರೆನಾಡಿನ ಭಾಗವಾಗಿದ್ದ ರಾಯಚೂರು ಜಿಲ್ಲೆಯು ಹಳೆಯ ಶಿಲಾಯುಗದ ಸಂಸ್ಕೃತಿಯಿಂದ ಪ್ರಾರಂಭವಾಗಿ, ಬ್ರಿಟಿಷರ ಅಧಿಕಾರದ ವಿರುದ್ಧ ಹಾಗೂ ಹೈದರಾಬಾದ ನಿಜಾಮನ ಸರಕಾರದ ದಬ್ಬಾಳಿಕೆಯ ವಿರುದ್ಧ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಪ್ರಮುಖ ಪಾತ್ರ ವಹಿಸಿದೆ.

ಈ ಜಿಲ್ಲೆಯ ಅನೇಕ ಭಾಗಗಳಲ್ಲಿ ದೊರೆತ ಶಿಲಾಚಿತ್ರಗಳು, ಶಿಲಾಶಾಸನಗಳು, ಅಳಿದುಳಿದು ನಿಂತಿರುವ ಕೋಟೆ ಕೊತ್ತಲಗಳು ಹಾಗೂ ದೇವಾಲಯಗಳು ಈ ಜಿಲ್ಲೆಯ ಇತಿಹಾಸದ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ.

ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಅಶೋಕನ ಶಾಸನವೊಂದು ದೊರೆತಿದ್ದು, ಇದರ ಆಧಾರದಿಂದ ಈ ಜಿಲ್ಲೆಯ ಇತಿಹಾಸವನ್ನು ಕ್ರಿ.ಪೂ. ೩೦೦ರಷ್ಟು ಹಿಂದಕ್ಕೆ ಒಯ್ಯಬಹುದು. ಮುಂದೆ ಕ್ರಿ.ಪೂ. ೩೦೦ರಿಂದ ಕ್ರಿ.ಶ. ೧೯೦೦ರವರೆಗೂ ಈ ಪ್ರದೇಶದಲ್ಲಿ ಶಾಸನಗಳು ದೊರೆಯುತ್ತವೆ. ಆದರೆ ಇವು ಕಾಲಾನುಕ್ರಮಣಿಕೆಯ ಹಂತದಲ್ಲಿ ದೊರೆಯುವುದಿಲ್ಲ. ದೇವದುರ್ಗ ಸಮೀಪವಿರುವ ಮಸ್ಕಿಯಲ್ಲಿ ಅಶೋಕನ ಕಾಲದ ಶಾಸನವನ್ನು ಬಿಟ್ಟರೆ, ಮತ್ತೆ ಬಾದಾಮಿ ಚಾಲುಕ್ಯರ ಕೊನೆಗಾಲದವರೆಗೆ ಶಾಸನಗಳು ದೊರೆಯುವುದಿಲ್ಲ. ಆನಂತರ ಕಲ್ಯಾಣಿ ಚಾಲುಕ್ಯರ ಕಾಲಾವಧಿಯಿಂದ ಆರಂಭವಾಗಿ ಮುಂದೆ ಬಹಮನಿ ಹಾಗೂ ವಿಜಯನಗರ ಮತ್ತು ಸ್ಥಳಿಯರ ಆಳ್ವಿಕೆಯವರೆಗೆ ಐತಿಹಾಸಿಕ ದಾಖಲೆಗಳು ದೊರೆಯುತ್ತವೆ.

ರಾಯಚೂರಿಗೆ ಸೇರಿದ ದೇವದುರ್ಗ ಪ್ರದೇಶವು ಪ್ರಾಚೀನ ಕಾಲದಲ್ಲಿ ಇತಿಹಾಸ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿದೆ. ಶತಮಾನಗಳ ಇತಿಹಾಸದಲ್ಲಿ ದೇವದುರ್ಗ ಪ್ರದೇಶವು ಅನೇಕ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟು ವಿಭಿನ್ನ ಸಂಸ್ಕೃತಿಯನ್ನು ಪರಿಚಯಿಸಿದೆ. ರಾಯಚೂರು ಜಿಲ್ಲೆಯನ್ನೊಳಗೊಂಡಂತೆ ದೇವದುರ್ಗ ಪ್ರದೇಶವನ್ನು ಅನೇಕ ಅರಸು ಮನೆತನಗಳು ಆಳಿದ್ದು,

ಅವುಗಳಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಸೇವುಣರು, ವಿಜಯನಗರ ಅರಸರು, ಆದಿಲ್ ಶಾಹಿಗಳು, ಮೊಗಲರು, ನಿಜಾಂ ಅರಸರಲ್ಲದೆ, ಮಾಂಡಳಿಕ ಅರಸರಾದ ನೊಳಂಬರು, ಸಿಂಧರು, ಹೈಹೆಯ ವಂಶದ ಅರಸರು, ಸುರಪುರದ ಅರಸರು, ದೇವದುರ್ಗದ ನಾಯಕರು ಪ್ರಮುಖರಾಗಿದ್ದಾರೆ.

ಪ್ರಾಗೈತಿಹಾಸಿಕ ಕುರುಹುಗಳು

ಸಾಮಾನ್ಯವಾಗಿ ಪ್ರಾಗೈತಿಹಾಸಿಕ ಕಾಲವೆಂದರೆ ನಮಗೆ ಲಿಖಿತ ದಾಖಲೆ ಸಿಕ್ಕುವವರೆಗೆ ಇರುವ ಕಾಲಾವಧಿಯನ್ನು ಪ್ರಾಗೈತಿಹಾಸಿಕ ಅವಧಿ ಎಂದು ಕರೆಯಲಾಗುತ್ತದೆ. ಅಂದರೆ ಬರೆದಿಡಲ್ಪಟ್ಟ ಇತಿಹಾಸವು ಹುಟ್ಟುವ ಮುನ್ನ ಇದ್ದ ಕರ್ನಾಟಕ ಚರಿತ್ರೆಯೆಂದು ಅರ್ಥ. ಇಂತಹ ಕಾಲದಲ್ಲಿ ವ್ಯಕ್ತಿ ಬಂಡೆಗಳ ಆಸರೆಯಲ್ಲಿ, ಗುಹೆಯಲ್ಲಿ, ನದಿಗಳ ದಡದಲ್ಲಿ ವಾಸಿಸುತ್ತಿದ್ದ. ಪ್ರಾಣಿ ಬೇಟೆಯಿಂದ ತನ್ನ ಆಹಾರವನ್ನು ಗಳಿಸುತ್ತಿದ್ದ. ಪ್ರಾಣಿಗಳ ಚರ್ಮ ಗಿಡಗಳ ತೊಗಟೆಗಳೇ ಅವನ ವಸ್ತ್ರಗಳಾಗಿದ್ದವು. ಈ ಸಾಧನೆ ಗಳಿಕೆಯಲ್ಲಿ ಕಲ್ಲಿನ ಆಯುಧಗಳನ್ನು ಅಧಿಕವಾಗಿ ಬಳಕೆಯಲ್ಲಿ ತಂದಿದ್ದ. ಆದ್ದರಿಂದ ಮನುಷ್ಯನ ಬದುಕಿನ ಈ ಕಾಲವನ್ನು ಶಿಲಾಯುಗವೆಂದು ಕರೆಯಲಾಗಿದೆ. ಈ ಶಿಲಾಯುಗವನ್ನು ಅಧ್ಯಯನದ ದೃಷ್ಟಿ ಯಿಂದ ನಾವು ೩ ವಿಧಗಳಲ್ಲಿ ಕಾಣಬಹುದಾಗಿದೆ. ಅಥವಾ ಶಿಲಾಯುಗಕ್ಕೆ ಸಂಬಂಧಿಸಿದಂತೆ ದೇವದುರ್ಗ ತಾಲ್ಲೂಕಿನ ಐತಿಹಾಸಿಕ ಅವಶೇಷಗಳ ಸೂಕ್ಷ್ಮ ಅಧ್ಯಯನದ ಪ್ರಕಾರ ಮತ್ತು ಭೌಗೋಳಿಕ ಲಕ್ಷಣಗಳ ರಚನೆ ಪ್ರಕಾರ ದೇವದುರ್ಗ ಪ್ರದೇಶದ ಇತಿಹಾಸವನ್ನು ಪ್ರಾಗೈತಿಹಾಸಿಕ ಕಾಲದಿಂದಲೂ ಗುರುತಿಸಬಹುದಾಗಿದೆ.

೧. ಹಳೆಯ ಶಿಲಾಯುಗ

ಕರ್ನಾಟಕದಲ್ಲಿ ಹಳೆಯ ಶಿಲಾಯುಗವು ಕ್ರಿ.ಪೂ. ೨೦.೦೦೦ ಕ್ರಿ.ಪೂ. ೧೦.೦೦೦ ವರ್ಷಗಳವರೆಗೆ ಜಾರಿಯಲ್ಲಿತ್ತು. ಈ ಅವಧಿಯಲ್ಲಿ ಮನುಷ್ಯ ಕಾಡುಮನುಷ್ಯನಾಗಿದ್ದು, ಅರಣ್ಯದಲ್ಲಿ ಅಲೆದಾಡುತ್ತಾ ಪ್ರಾಣಿಗಳ ಹಸಿಮಾಂಸ ತಿನ್ನುತ್ತಿದ್ದನು. ಇದರ ಜೊತೆಗೆ ಕಾಡುಗಳಲ್ಲಿ ದೊರೆತ ಹಣ್ಣುಗಳು, ಗೆಡ್ಡೆಗೆಣಸುಗಳು, ಇವನ ಆಹಾರವಾಗಿದ್ದವು. ಮತ್ತು ಪ್ರಾಣಿಗಳ ಚರ್ಮ ಮತ್ತು ಗಿಡಗಳ ತೊಗಟಗಳೇ ಇವನ ವಸ್ತ್ರಗಳಾಗಿದ್ದವು. ಗುಡ್ಡಗಳ ಗವಿ ಮರದ ಪೊಟರೆಗಳೇ ಇವನ ಮನೆಗಳಾಗಿದ್ದವು (ಕ.ಇ., ಎನ್.ಆರ್.ಅಪರಂಜಿ, ಪು.೨೩).

ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮದಲ್ಲಿ ಪ್ರಾಗೈತಿಹಾಸಿಕ ಕಾಲದ ಕೊರೆದ ರೇಖಾ ಚಿತ್ರಗಳನ್ನು ಕಾಣಬಹುದಾಗಿದೆ. ಬೆಟ್ಟದ ಮೇಲೆ ಇರುವ ಚಾಚು ಬಂಡೆಗಳ ಒಳಭಾಗದಲ್ಲಿ ಈ

ಚಿತ್ರಗಳನ್ನು ಕೊರೆಯಲಾಗಿದೆ. ಇಕ್ಕಟ್ಟಾದ ದಾರಿಯಿಂದ ರೇಖಾಚಿತ್ರಗಳಿರುವ ಸ್ಥಳಕ್ಕೆ ಹೋಗಬಹುದು. ಮೇಲೆ ವಿಶಾಲವಾದ ತೆರೆದ ಸ್ಥಳವಿದೆ. ಈ ಸ್ಥಳದಲ್ಲಿ ಬಂಡೆಗಳ ಒಳಮುಖದಲ್ಲಿ ಈ ಕೊರೆದ ರೇಖಾ ಚಿತ್ರಗಳನ್ನು ಕಲ್ಲಿನ ತುದಿಯಿಂದ ತಿದ್ದಿ ಆಳವಾಗಿ ಕೊರೆಯಲಾಗಿದೆ. ಈ ಕೊರಕ ರೇಖಾಚಿತ್ರಗಳಲ್ಲಿ ಗೂಳಿ, ಜಿಂಕೆ, ಕೋಣ ಮತ್ತು ಇತರೆ ಪ್ರಾಣಿಗಳ ಚಿತ್ರಗಳನ್ನು ಕಾಣಬಹುದು. ಸಣ್ಣ ಗುಹೆಗಳಲ್ಲಿ ಕೆಲವು ಅರ್ಥವಾಗದ ರೇಖೆಗಳನ್ನು ಬಿಡಿಸಲಾಗಿದೆ. ಒಂದು ಚಿತ್ರವು ತ್ರಿಶೂಲದಂತಿದೆಯಾದರೂ ಅದು ತ್ರಿಶೂಲವಲ್ಲ. ಈ ರೇಖೆಗಳ ಬಳಿ ಬಂಡೆಯ ಮೇಲೆ ಪ್ರಾಗೈತಿಹಾಸಿಕ ಕಾಲದಲ್ಲಿ ಮಾಡಿರಬಹುದಾದ ಕುಳಿಗಳಿವೆ. ಅಲ್ಲದೆ ಕೊರೆಯುವಾಗ ಕೊರೆಯುವ ಕಲ್ಲು ಮೊಂಡಾದಾಗ ಅದನ್ನು ಚೂಪಾಗಿ ಮಾಡಿ ಕೊಳ್ಳಲು ಪ್ರಾಗೈತಿಹಾಸಿಕ ಕಾಲದ ಮಾನವನು ಮಾಡಿರಬಹುದಾದ ಉಜ್ಜುವಿಕೆಯಿಂದ ಸವೆದ ಕಲ್ಲನ್ನು ಕಾಣಬಹುದು (ರಾ.ವಾಣಿ. ದಿನಪತ್ರಿಕೆ, ಗಬ್ಬೂರಿನಲ್ಲಿ ಪ್ರಾಗೈತಿಹಾಸಿಕ ಅವಶೇಷಗಳ ಪತ್ತೆ, ಡಾ.ದೇವರಕೊಂಡಾ ರೆಡ್ಡಿ).

ಗಬ್ಬೂರು ಗ್ರಾಮದಿಂದ ಪಶ್ಚಿಮ ಭಾಗದಲ್ಲಿರುವ ಒಂದು ಸಣ್ಣಗ್ರಾಮ ಮಲದಕಲ್ಲು. ಈ ಗ್ರಾಮವು ಪ್ರಾಗೈತಿಹಾಸಿಕ ಕಾಲದ ನೆಲೆವೀಡು ಆಗಿತ್ತೆಂಬುದಕ್ಕೆ ಇಲ್ಲಿ ದೊರೆತ ಅನೇಕ ಕುರುಹುಗಳೇ ಸಾಕ್ಷಿ. ಈ ಗ್ರಾಮವು ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸ ಕಾಲದವರೆಗೆ ಐತಿಹಾಸಿಕ ಮಹತ್ವ ಪಡೆದಿದೆ. ಅಂದರೆ ಇಲ್ಲಿಯ ಬೆಟ್ಟದಲ್ಲಿ ಅನೇಕ ದೊಡ್ಡ ದೊಡ್ಡ ಬಂಡೆಗಲ್ಲುಗಳಲ್ಲಿ ಕುಟ್ಟಿ ಬಿಡಿಸಿದ ರೇಖಾ ಚಿತ್ರಗಳಿವೆ. ಈ ರೇಖಾಚಿತ್ರಗಳಲ್ಲಿ ಹಳೇ ಶಿಲಾಯುಗಕ್ಕೆ ಸಂಬಂಧಿಸಿದ ಹಾಗೂ ಹೊಸ ಶಿಲಾಯುಗಕ್ಕೆ ಸಂಬಂಧಪಟ್ಟ ಅನೇಕ ರೇಖಾಚಿತ್ರಗಳಿವೆ. ಇಂತಹ ಚಿತ್ರಗಳನ್ನು ಕುಟ್ಟುವಾಗ ಆದಿಮಾನವ ಬಳಸಿದ ಕಲ್ಲುಗಳನ್ನು ಮೊಂಡಾದಾಗ ಅದನ್ನು ಚೂಪಾಗಿ ಮಾಡಿಕೊಳ್ಳಲು ಬಳಸಿದ ಕಲ್ಲಿನ ತಗ್ಗುಗಳನ್ನು ಕಾಣಬಹುದು. ಒಂದು ದೊಡ್ಡದಾದ ಬಂಡೆಯಲ್ಲಿ ಹಳೇ ಶಿಲಾಯುಗದ ರೇಖಾಚಿತ್ರಗಳಿದ್ದು, ಅದರಲ್ಲಿ ಜಿಂಕೆಯ ತಂಡವೇ ಇದೆ. ಒಂದು ಕುಟುಂಬದಂತಿರುವ ಜಿಂಕೆಯ ತಂಡಕ್ಕೆ ಹುಲಿಯ ಪ್ರವೇಶವಾದಾಗ ಜಿಂಕೆಯ ಸ್ಥಿತಿಯನ್ನು ವಿವರಿಸುವ ದೃಶ್ಯವನ್ನು ಇಲ್ಲಿ ಬಿಡಿಸಲಾಗಿದೆ.

ಒಂದು ದೊಡ್ಡ ಹುಲಿಯನ್ನು ಕೊರೆಯಲಾಗಿದೆ. ಇದು ತುಂಬಾ ಉದ್ದವಾಗಿದ್ದು, ಇದರ ಬೆನ್ನು ಅಥವಾ ಡುಬ್ಬವನ್ನು ತೆಳುವಾಗಿ ಭಾಗಿದ ರೀತಿಯಲ್ಲಿ ಬಿಡಿಸಲಾಗಿದೆ. ಇದರ ಸುತ್ತಲೂ ಅನೇಕ ತಾಯಿ ಹಾಗೂ ಮರಿ ಜಿಂಕೆಗಳು ಚೆಲ್ಲಾಪಿಲ್ಲಿಯಾಗಿ ಓಡುತ್ತಿರುವವು. ಅದರಲ್ಲಿ ಎರಡು ಜಿಂಕೆಗಳು ಎದುರು ಬದುರಾಗಿ ಓಡುತ್ತಾ ಇರುವಂತೆ ಬಿಡಿಸಿದೆ. ಇವುಗಳ ಕೋಡುಗಳನ್ನು ತುಂಬಾ ಚಿಕ್ಕದಾಗಿ ಕೊರೆಯಲಾಗಿದೆ. ಕಾಲುಗಳು ಹಾಗೂ ಬಾಲವನ್ನು ಚಿಕ್ಕದಾಗಿ ಬಿಡಿಸಿದೆ. ಇದರ ಬೆನ್ನು ಅಥವಾ ಡುಬ್ಬವನ್ನು ಉದ್ದವಾಗಿ, ತೆಳುವಾಗಿ ಬಿಡಿಸಿದೆ. ಇನ್ನೊಂದು ಮೂಲೆಯಲ್ಲಿ ಇನ್ನೆರಡು ಜಿಂಕೆಗಳಿವೆ. ಒಂದು ಜಿಂಕೆಯ ಬಾಲ ಹಾಗೂ

ಅದರ ಕಾಲುಗಳು ಚಿಕ್ಕದಾಗಿವೆ. ಇದರ ಕುತ್ತಿಗೆ ಮತ್ತು ಕೊಡುಗಳು ಅಂಕುಡೊಂಕಾಗಿ ಉದ್ದವಾಗಿ ಕೊರೆಯಲಾಗಿದೆ. ಈ ಜಿಂಕೆಯ ಕೆಳಗೆ ಮತ್ತೊಂದು ಜಿಂಕೆಯಿದೆ. ಇದಕ್ಕೆ ಎತ್ತರವಾದ ಕುತ್ತಿಗೆ ಹಾಗೂ ಬಾಗಿದ ಬೆನ್ನು ಇದೆ. ಕೋಡುಗಳು ಅಗಲವಾಗಿ ಚಿಕ್ಕದಾಗಿವೆ. ಇದರ ಬಾಲವನ್ನು ಚಿಕ್ಕದಾಗಿ ಬಿಡಿಸಿದೆ. ಹುಲಿಯ ಕೆಳಗೆ ಹಾಗೂ ಎರಡು ಮೂಲೆಯ ಭಾಗದಲ್ಲಿ ಅನೇಕ ಸಣ್ಣ ಸಣ್ಣ ಜಿಂಕೆಗಳನ್ನು ಕೊರೆಯಲಾಗಿದೆ. ಇವು ಭಯದಿಂದ ಚೆಲ್ಲಾಪಿಲ್ಲಿಯಾಗಿ ಓಡುತ್ತಿರುವುವು. ಇವುಗಳ ಕೋಡುಗಳು ಮತ್ತು ಬಾಲವು ಚಿಕ್ಕದಾಗಿ ಹಾಗೂ ಕೆಲವು ಜಿಂಕೆಯ ಕೋಡುಗಳು ಅಗಲವಾಗಿ ಕೊರೆಯಲಾಗಿದೆ.

ಅದೇ ಬೆಟ್ಟದ ಇನ್ನೊಂದು ಬಂಡೆಯಲ್ಲಿ ಒಂದು ದೊಡ್ಡದಾದ ಎತ್ತನ್ನು ಬಿಡಿಸಿದೆ. ಇದು ನೋಡಲು ಜಿಂಕೆಯಂತೆ ಕಂಡುಬಂದರೂ, ಅದು ಎತ್ತು ಎಂದು ಖಚಿತಪಡಿಸಿಕೊಳ್ಳಲು ಒಂದು ಕುರುಹುವು ಇದೆ. ಇದಕ್ಕೆ ಎತ್ತರವಾದ ಕೊಂಬುಗಳಿವೆ. ಅವುಗಳನ್ನು ತುಂಬಾ ಅಗಲವಾಗಿ ಬಿಡಿಸಿದೆ. ಇದರ ಕಿವಿ ಬಾಲವನ್ನು ಬಿಡಿಸಿದೆ. ಇದರ ಕಾಲುಗಳನ್ನು ಚಿಕ್ಕದಾಗಿ ಕೊರೆಯಲಾಗಿದೆ. ಇದರ ಬೆನ್ನಿನ ಮೇಲೆ ಇರುವ ಡುಬ್ಬವೇ ಈ ಚಿತ್ರವನ್ನು ಎತ್ತು ಎಂದು ಖಚಿತಪಡಿಸಿಕೊಳ್ಳಲು ಸಹಾಯಕವಾಗಿದೆ. ಅದರ ಮತ್ತೊಂದು ಬಂಡೆಯಲ್ಲಿ ಮತ್ತೊಂದು ಒಂಟಿಯಾಗಿರುವ ಜಿಂಕೆಯನ್ನು ಬಿಡಿಸಿದೆ. ಇದು ಸರಳವಾಗಿದೆ. ಇದರ ಕಾಲುಗಳನ್ನು ಉದ್ದವಾಗಿ ನೇರವಾಗಿ ಗೆರೆಯ ತರಹ ಬಿಡಿಸಿದೆ. ಇದರ ಕೊಂಬು ಚಿಕ್ಕದಾಗಿದೆ.

೨. ಮೆಸೋಲಿಥಿಕ್ ಅಥವಾ ಮಧ್ಯಶಿಲಾಯುಗ

ಹಳೆಯ ಮತ್ತು ಹೊಸ ಶಿಲಾಯುಗದ ಮಧ್ಯದಲ್ಲಿ ಬರುವುದೇ ಮೆಸೋಲಿಥಿಕ್ ಯುಗ. ಕರ್ನಾಟಕದಲ್ಲಿ ಮೆಸೋಲಿಥಿಕ್ ಯುಗವು ಸು.ಕ್ರಿ.ಪೂ. ೧೦,೦೦೦ ಎಂದು ಹೇಳಲಾಗಿದೆ. ಈ ಯುಗದಲ್ಲಿ ಮನುಷ್ಯ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದನು. ಈ ಯುಗದಲ್ಲಿ ನುಣಪಾಗಿ ಮಾಡಿದ ಕಲ್ಲಿನ ಚಾಕು, ಬೈರಿಗೆ, ಕುರುಪಿ ಮುಂತಾದ ಆಯುಧಗಳನ್ನು ಬಳಸಿದ್ದಾನೆ. ಮಧ್ಯ ಹಳೆ ಶಿಲಾಯುಗಕ್ಕೆ ಸಂಬಂಧಿಸಿದಂತೆ ದೇವದುರ್ಗ ತಾಲ್ಲೂಕಿನ ಪ್ರಮುಖ ಗ್ರಾಮಗಳಾದ ಅಂಚೆಸೂಗೂರು, ಅಂಜಾಳ, ಕರ್ಕಿಗಳ್ಳಿ, ಕೊಂಚೆಪಡಿ, ಕೊಂಚೆಪ್ಲಿ, ಗೊಗಲ್, ಗೋಪಾಲಪುರ, ಚಿಕ್ಕರಾಯಕುಂಪಿ, ಹಿರೇ ರಾಯಕುಂಪಿ, ದೊಂಡಂಬ್ಲಿ, ಬೆಣಕಲ್ಲು, ಯಾಟಗಲ್ಲು, ಹೂವಿನ ಹೆಡಗಿ ಇವು ಮಧ್ಯ ಶಿಲಾಯುಗಕ್ಕೆ ಸಂಬಂಧಿಸಿದ ನೆಲೆಗಳಾಗಿದ್ದು, ಇಲ್ಲಿ ವಿವಿಧ ಮಾದರಿಯ ಉಪಕರಣಗಳು ದೊರೆತಿವೆ (A.R. Hydrabad Dept of. Arch, 1937-38, P.No.7).

ಬೂದ್ದಿನ್ನಿಯಲ್ಲಿ ಇಲ್ಲಿ ಬೂದಿದಿಬ್ಬವನ್ನು ಕಾಣಬಹುದು. ಮಾದರಕಲ್ಲು ಹಳೇ ಸಂಸ್ಕೃತಿಯ ನೆಲೆಯದು. ಇಲ್ಲಿ ಶಿಲಾವೃತ್ತಗಳು ದೊರೆತಿವೆ.

೩. ಕರ್ನಾಟಕದಲ್ಲಿ ಹೊಸ ಶಿಲಾಯುಗ

ದೇವದುರ್ಗ ತಾಲ್ಲೂಕಿನ ಗಬ್ಬೂರಿನಲ್ಲಿ ಗೋರಿಗಳಿಂದ ಆವೃತವಾಗಿರುವ ದಿಬ್ಬವನ್ನು ಕಾಣಬಹುದು. ಅಂದರೆ ಇಲ್ಲಿ ಮನುಷ್ಯರ ಹೆಣವನ್ನು ಹೂಳಲ್ಪಟ್ಟ ಕುರುಹುಗಳಿವೆ. ಆದ್ದರಿಂದ ಇದನ್ನು ನೂತನ ಶಿಲಾಯುಗವೆಂದು ಸೂಚಿಸಬಹುದಾಗಿದೆ. ಇವುಗಳಲ್ಲದೆ, ಗಬ್ಬೂರಿನ ಬೆಟ್ಟದಲ್ಲಿ ಸೂಗೂರಪ್ಪನ ಕುದುರೆ ಹೆಜ್ಜೆಗಳ ಬಳಿಯೂ ಈ ಪ್ರಾಗೈತಿಹಾಸಿಕ ಕುರುಹುಗಳು ಕಂಡುಬಂದಿದ್ದು, ಅಲ್ಲಿ ಬೆಣಚು ಕಲ್ಲಿನ ಹರಿತವಾದ ಚಾಕುವಿನಂತಹ ಕಲ್ಲು ದೊರೆತಿದೆ. ಇದೇ ಬೆಟ್ಟದಲ್ಲಿ ನೀರಿನ ಬುಗ್ಗೆಯಿದೆ. ಇದರ ಪಕ್ಕದಲ್ಲಿ ಕಪ್ಪು ಶಿಲಾ ಪದರಿನ ಅವಶೇಷವನ್ನು ಕಾಣಬಹುದು. ಗಬ್ಬೂರಿನ ನಾಗರ ಬೆಟ್ಟದ ಬಳಿ ಮಣ್ಣಿನ ಮಡಿಕೆ, ಕುಡಿಕೆ ಹಾಗೂ ಗುಹೆಗಳನ್ನು ಕಾಣಬಹುದಾಗಿದೆ.


ಮಲದಕಲ್ಲು ಬೆಟ್ಟದಲ್ಲಿ ಕೆಲವು ರೇಖಾಚಿತ್ರಗಳು ಹೊಸ ಶಿಲಾಯುಗಕ್ಕೆ ಸಂಬಂಧಿಸಿವೆ. ಅದರಲ್ಲಿ ಒಂದು ಎತ್ತು ಇದೆ. ಇದರ ಕಾಲುಗಳು ತುಂಬಾ ಉದ್ದವಾಗಿದೆ. ಇದರ ಕೊಂಬುಗಳು ನೇರವಾಗಿವೆ. ಚಿಕ್ಕದಾದ ಭುಜ ಅಥವಾ ಡುಬ್ಬವಿದೆ. ಬಾಲವು ಬಾಗಿದ ರೀತಿಯಲ್ಲಿದೆ. ಇದಕ್ಕೆ ನೇರವಾಗಿ ಒಂದು ಲಿಂಗವನ್ನು ಬಿಡಿಸಿದೆ.

ಇನ್ನೊಂದು ಬಂಡೆಯಲ್ಲಿ ಮತ್ತೊಂದು ಎತ್ತು ಇದೆ. ಇದು ಪುನಃ ಆಧುನಿಕ ಯುಗದ ತರಹದ ಎತ್ತಿನ ರೀತಿಯಲ್ಲಿ ಬಿಡಿಸಿದೆ. ಆದರೂ ಇದು ಸಹ ಪ್ರಾಗೈತಿಹಾಸಿಕ ಕಾಲದಲ್ಲಿ ಕೊರೆದ ರೇಖಾ ಚಿತ್ರವಾಗಿದೆ. ಇದರಲ್ಲಿ ಸಹ ಭಾಗಿದ ಎರಡು ಕೊಂಬುಗಳಿವೆ. ನೇರವಾದ ನಾಲ್ಕು ಕಾಲುಗಳನ್ನು ಬಾಗಿದ ಚಿಕ್ಕದಾದ ಬಾಲವಿದೆ. ಎತ್ತರವಾದ ಭುಜ, ಅಥವಾ ಡುಬ್ಬವಿದೆ. ಇದರಲ್ಲಿ ನೇರವಾಗಿ ಒಂದು ಲಿಂಗವನ್ನು ಬಿಡಿಸಿದೆ.

ಮತ್ತೊಂದು ಬಂಡೆಯಲ್ಲಿ ಮೂರು ಎತ್ತುಗಳನ್ನು ಬಿಡಿಸಲಾಗಿದೆ. ಇವು ಸ್ವಲ್ಪ ಹಳೆಯದಾದ ರೀತಿಯವು. ಇವು ಅಗಲವಾದ ಸ್ವಲ್ಪ ಎತ್ತರದ ಕೊಂಬುಗಳನ್ನು ಹೊಂದಿವೆ. ಇವು ಭುಜ ಮತ್ತು ಬಾಲವನ್ನು ಹೊಂದಿವೆ. ಕಾಲುಗಳು ಸಣ್ಣದಾಗಿವೆ. ಇಂತಹ ಅನೇಕ ಪ್ರಾಗೈತಿಹಾಸಿಕ ಕುರುಹುಗಳು ವಟಗಲ್ಲು ಗ್ರಾಮದಲ್ಲಿ ಕಾಣುತ್ತವೆ. ವಟಗಲ್ಲು ಇದೇ ಕಾಲಕ್ಕೆ ಸಂಬಂಧಿಸಿದ ಪ್ರಾಗೈತಿಹಾಸಿಕ ಕಾಲದ ಗ್ರಾಮವಾಗಿತ್ತೆಂದು ತಿಳಿದುಬರುತ್ತದೆ. ದೇವದುರ್ಗ ತಾಲ್ಲೂಕಿನ ಶಾವಂತಗಲ್ಲ ಗ್ರಾಮದ ಬೆಟ್ಟದಲ್ಲೂ ಹೊಸ ಶಿಲಾಯುಗಕ್ಕೆ ಸಂಬಂಧಿಸಿದ ಕೆಲವು ರೇಖಾಚಿತ್ರಗಳಿವೆ. ಇಲ್ಲಿ ಜಿಂಕೆ ನಾಯಿ ಇತರ ಶಿಲ್ಪಗಳನ್ನು ಬಿಡಿಸಿದೆ.

ಮಾಸರಕಲ್ಲಿನ ಬೆಟ್ಟದಲ್ಲಿ ೧೦-೧೬ ನೇ ಶತಮಾನದ ಕೆಲವು ರೇಖಾಚಿತ್ರಗಳಿವೆ. ಒಂದು ಈಶ್ವರ ಹಾಗೂ ಆಂಜನೇಯ ಶಿಲ್ಪಗಳಿವೆ. ಮತ್ತೊಂದು ಪದ್ಮಾಸನದಲ್ಲಿ ಕುಳಿತಿರುವ ರೇಖಾಚಿತ್ರವಿದೆ.


ಮಲದಕಲ್ಲು ಬೆಟ್ಟದ ಪ್ರಾಗೈತಿಹಾಸಿಕ ಕುರುಹುಗಳು



ಹುಲಿ ಜಿಂಕೆಗಳನ್ನು ಬೇಟೆಯಾಡುವ ದೃಶ್ಯ



ಮಲ್ಲದಕಲ್ಲು ಬೆಟ್ಟದಲ್ಲಿರುವ ಪ್ರಾಗೈತಿಹಾಸಿಕ ಕುರುಹುಗಳು






ಮಲದಕಲ್ಲ್ ಬೆಟ್ಟ



ಸೂಗೂರೇಶ್ವರ ಬೆಟ್ಟ ಗಬ್ಬೂರು



ಮಲದಕಲ್ ಬೆಟ್ಟ



ಹುಲಿ ಜಿಂಕೆಗಳನ್ನ ಬೇಟೆಯಾಡುವ ದೃಶ್ಯ



ಜಿಂಕೆ,ಎತ್ತು ಗಬ್ಬೂರು ಬೆಟ್ಟ



ಎತ್ತು,ಮಲದಕಲ್ ಬೆಟ್ಟ



ಎತ್ತು ಮಲದಕಲ್ಲ್ ಬೆಟ್ಟ



ಎತ್ತು ಮಲದಕ್ ಬೆಟ್ಟ



ಎತ್ತು ಮಲದಕಲ್ಲ್ ಬೆಟ್ಟ

ಮೌರ್ಯರು : ಪಾಟಲೀಪುತ್ರವನ್ನು ರಾಜಧಾನಿಯನ್ನಾಗಿಸಿಕೊಂಡು ಆಳಿದ ಪ್ರಖ್ಯಾತ ರಾಜವಂಶಗಳಲ್ಲೊಂದಾದ ಮೌರ್ಯವಂಶದ ಅರಸರು ಈ ಭಾಗವನ್ನು ಆಳಿದರು. ಮೌರ್ಯ ದೊರೆ ಅಶೋಕನ ಶಾಸನಗಳು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ದೊರೆತಿದ್ದು, ಅವುಗಳಲ್ಲಿ ದೇವದುರ್ಗ ಪ್ರದೇಶದ ಸಮೀಪ ಇರುವ ಮಸ್ಕಿಯಲ್ಲಿ ದೊರೆತ ಶಾಸನ ಪ್ರಮುಖವಾಗಿದೆ. ಈ ಶಾಸನ ದೊರೆಯುವುದಕ್ಕಿಂತ ಮೊದಲು ದೇವಾನಂಪಿಯ ಪಿಯದಸಿ ರಾಜನೇ ಅಶೋಕನಿರಬಹುದೆಂದು ವಿದ್ವಾಂಸರು ಊಹಿಸಿದ್ದರು. ಮಸ್ಕಿ ಶಾಸನದಲ್ಲಿ ಬಂದಿರುವ ದೇವಾನಂಪಿಯಸ ಅಶೋಕಸ ಎಂಬ ಹೆಸರಿನ ಆಧಾರದ ಮೇಲೆ ತಮ್ಮ ಊಹೆಯನ್ನು ವಿದ್ವಾಂಸರು ಸ್ಥಿರೀಕರಿಸಿದರು. ಈ ಮಸ್ಕಿ ದೇವದುರ್ಗದ ಸಮೀಪವಿರುವುದರಿಂದ ದೇವದುರ್ಗ ತಾಲೂಕು ಅಶೋಕನ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತು ಎಂದು ಹೇಳಬಹುದು.

ಶಾತವಾಹನರು : ಮೌರ್ಯರ ನಂತರ ಡೆಕ್ಕನ್‌ನಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸಿ ಪೈಥಾನ ಅಥವಾ ಪೈಠಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೪೫೦ ವರ್ಷಗಳವರೆಗೆ ರಾಜ್ಯಭಾರ ಮಾಡಿದರು. ನಂತರ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು ಹಾಗೂ ವಿಜಯನಗರ ಅರಸರು, ದೇವದುರ್ಗ ನಾಯಕರು, ಬಹುಮನಿ ಸುಲ್ತಾನರು ಆಳ್ವಿಕೆಯನ್ನು ಮಾಡಿದ್ದಾರೆ.

ರಾಷ್ಟ್ರಕೂಟರು : ಕ್ರಿ.ಶ.೭೫೩ರಲ್ಲಿ ಬಾದಾಮಿ ಚಾಲುಕ್ಯರನ್ನು ಬದಿಗೊತ್ತಿ ದಂತಿದುರ್ಗನು ರಾಷ್ಟ್ರಕೂಟ ರಾಜ್ಯವನ್ನು ಸ್ಥಾಪಿಸಿದನು. ರಾಷ್ಟ್ರಕೂಟರು ಸುಮಾರು ೨೦೦ ವರ್ಷಗಳ ಕಾಲ ಬಲಿಷ್ಠ ಹಾಗೂ ವಿಶಾಲವಾದ ರಾಜ್ಯವನ್ನು ಕಟ್ಟಿ ಆಳಿದರು. ಗುಲ್ಬರ್ಗಾ ಜಿಲ್ಲೆಯ ಮಾನ್ಯಖೇಟವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿದ್ದರಿಂದ ಇವರನ್ನು ಮಾನ್ಯಖೇಟದ ರಾಷ್ಟ್ರಕೂಟರು ಎಂದು ಕರೆಯಲಾಗಿದೆ. ಇವರ ಕಾಲದ ಶಾಸನಗಳು ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲೂಕಿನ ಯರಡೋಣಿ, ಮಾನ್ವಿ ತಾಲ್ಲೂಕಿನ ಕುರುಡಿ, ಬಲ್ಲಟಿಗೆ, ಬೋಗಾವತಿ, ರಾಯಚೂರು ತಾಲ್ಲೂಕಿನ ಕಲ್ಮಾಲದಲ್ಲಿ ದೊರೆತಿವೆ. ಆದ್ದರಿಂದ ರಾಯಚೂರು ಜಿಲ್ಲೆಯನ್ನು ಒಳಗೊಂಡಂತೆ ದೇವದುರ್ಗ ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೆ ಸೇರಿತು. ಇದಕ್ಕೆ ಆಧಾರವೆಂಬಂತೆ ದೇವದುರ್ಗ ತಾಲ್ಲೂಕಿನ ನಾಗೋಲಿ ಗ್ರಾಮದಲ್ಲಿ ರಾಷ್ಟ್ರಕೂಟರ ಶಾಸನ ದೊರೆತಿದ್ದು, ಅದರ ಸಮೀಪದ ಬಸವಣ್ಣ ದೇವಾಲಯವು ರಾಷ್ಟ್ರಕೂಟರ ದೇವಾಲಯಗಳ ಲಕ್ಷಣಗಳನ್ನೊಳಗೊಂಡಿದೆ. ಈ ಪ್ರದೇಶದಲ್ಲಿ ದೊರೆತಿರುವ ಉದಾಹರಣೆ ಇದಾಗಿದೆ. ಅಲ್ಲದೆ ಚಂದನಕಾರಿಯಲ್ಲಿ ರಾಷ್ಟ್ರಕೂಟರ ಬಾಗಿಲವಾಡದ ಅವಶೇಷ, ನಾಗೋಲಿಯಲ್ಲಿ ಶಿಲ್ಪಗಳು ದೊರೆತಿವೆ. ಹೀಗಾಗಿ ಈ ಪ್ರದೇಶ ಇವರ ಆಳ್ವಿಕೆಗೆ ಸೇರಿತ್ತೆಂಬುದನ್ನು ನಿರ್ವಿವಾದವಾಗಿ ಹೇಳಬಹುದಾಗಿದೆ. ಶಾಸನದ ಬಹುಭಾಗ ಮಣ್ಣಿನಲ್ಲಿ ಸೇರಿರುವುದರಿಂದ ರಾಜನ ಉಲ್ಲೇಖ ದೊರೆಯುವುದಿಲ್ಲ. ಇಷ್ಟಾದರೂ ದೇವದುರ್ಗದ ಪಕ್ಕದ ಗ್ರಾಮಗಳಲ್ಲಿ ಇವರ ಕಾಲದ ಶಾಸನಗಳು ಲಭ್ಯವಾಗಿವೆ.

ಗಬ್ಬೂರಿನ ಹತ್ತು ಕಿ.ಮೀ. ದೂರದ ಕಲ್ಮಾಲ ಗ್ರಾಮದ ಕ್ರಿ.ಶ.೯೧೪ರ ಶಾಸನದಲ್ಲಿ ರಟ್ಟವಂಶದ ನಿತ್ಯವರ್ಷದೇವನ ಆಳ್ವಿಕೆಯಲ್ಲಿ ಒಬ್ಬ ಸಾಮಂತಾಧಿಪತಿಯ ಆಳ್ವಿಕೆ ಸೂಚಿಸುತ್ತದೆ. ಅದೇ ಗ್ರಾಮದ ಕ್ರಿ.ಶ.೯೪೦ರ ಶಾಸನದಲ್ಲಿ ರಾಷ್ಟ್ರಕೂಟ ರಟ್ಟಕುಲ ವಂಶದ ಕನ್ನರದೇವನು ಆಳುತ್ತಿದ್ದಾಗ ಬುಟ್ಟರಸನಿದ್ದು, ಮತ್ತು ಬುಟ್ಟರಸ, ಪಿಡ್ಡಬ್ಬೆ, ಕನ್ನರ ದೇವ ಮೂವರು ಸೇರಿದ್ದಾಗ ಉತ್ತರ ಸಂಕ್ರಾಂತಿಯ ಕಾಲದಲ್ಲಿ ಮಲ್ಲಿಕಾರ್ಜುನ ದೇವರ ಪೂಜೆಗಾಗಿ ಕಲ್ಮೇಲಯ ಆದಿತ್ಯಭಟ್ಟಾರನಿಗೆ ೩೪ ಮತ್ತರ ಭೂಮಿ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೩೩). ಲಿಂಗಸೂಗೂರಿನ ಯರಡೋಣಿಯ ಕ್ರಿ.ಶ.೯೨೮ರ ಶಾಸನದಲ್ಲಿ ರಾಷ್ಟ್ರಕೂಟ ದೊರೆ ಹಿರಣ್ಯವರ್ಷನ ಆಳ್ವಿಕೆಯ ಕಾಲದಲ್ಲಿ ಕರಡಿಕಲ್ಲ ನಾಡಿನ ಮಾಗ ಊರಿನ ಕಿನಕಭಟ್ಟ ಎಂಬುವವನಿಗೆ ೪೦ ಮತ್ತರು ಭೂಮಿಯನ್ನು ದಾನ ಕೊಟ್ಟ ಉಲ್ಲೇಖವಿದೆ(ಕವಿಶಾಸಂ ೭, ಪು.೧೫೧). ಬಲ್ಲಟ್ಟಗಿಯ ಕ್ರಿ.ಶ.೧೦ನೆಯ ಶತಮಾನದ ಶಾಸನದಲ್ಲಿ ರಾಷ್ಟ್ರಕೂಟರ ರಾಜ ನಿತ್ಯವರಿದ ದೇವನ ಉಲ್ಲೇಖವಿದೆ(ಕವಿಶಾಸಂ ೭, ಪು.೩೦೨). ಬಲ್ಲಟ್ಟಗಿಯ ಕ್ರಿ.ಶ.೧೦ನೇಯ ಶತಮಾನದ ಶಾಸನದಲ್ಲಿ ರಾಷ್ಟ್ರಕೂಟರ ರಾಜ ನಿತ್ಯವರಿದ ದೇವನ ಉಲ್ಲೇಖವಿದೆ. ಭೋಗಾವತಿಯ ಗ್ರಾಮದ ಆ ಕಾಲವರ್ಷನ ತಮ್ಮನಾದ ಜಗತ್ತುಂಗನು ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೨೪೨). ಹೀಗೆ ದೇವದುರ್ಗ ಹಾಗೂ ಇದರ ಪಕ್ಕದ ಗ್ರಾಮಗಳು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದೆಂದು ಸ್ಪಷ್ಟವಾಗುತ್ತದೆ.

ಕಲ್ಯಾಣದ ಚಾಲುಕ್ಯರು : ಕರ್ನಾಟಕವನ್ನಾಳಿದ ಪ್ರಮುಖ ರಾಜ ಮನೆತನಗಳಲ್ಲಿ ಕಲ್ಯಾಣಿ ಚಾಲುಕ್ಯರ ಮನೆತನವು ಒಂದಾಗಿದೆ. ರಾಷ್ಟ್ರಕೂಟರನ್ನು ಸೋಲಿಸಿ ಉತ್ತರಾಧಿಕಾರಿಗಳಾಗಿ ಬಂದ ಈ ಮನೆತನವು ಕ್ರಿ.ಶ.೯೭೩ರಲ್ಲಿ ಸ್ಥಾಪಿತವಾಗಿ ಕ್ರಿ.ಶ.೧೧೮೯ರಲ್ಲಿ ಕೊನೆಗೊಂಡಿತು. ಕಲ್ಯಾಣ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡಿದ ಇವರನ್ನು ಕಲ್ಯಾಣದ ಚಾಲುಕ್ಯರೆಂದು ಇತಿಹಾಸಕಾರರು ಗುರುತಿಸಿದ್ದಾರೆ.

ಮೊದಲ ಅರಸನಾಗಿ ಇಮ್ಮಡಿ ತೈಲಪನು ಕ್ರಿ.ಶ.೯೭೩ರಿಂದ ೯೯೭ರವರೆಗೆ ಆಳ್ವಿಕೆ ಮಾಡಿದನು. ಇವನ ನಂತರ ಸತ್ಯಾಶ್ರಯ ಕ್ರಿ.ಶ.೯೯೭-೧೦೦೮ರವರೆಗೆ ಮತ್ತು ಐದನೇ ವಿಕ್ರಮಾದಿತ್ಯನು ಕ್ರಿ.ಶ.೧೦೦೮-೧೦೧೫ರವರೆಗೆ ಆಳ್ವಿಕೆಯನ್ನು ನಡೆಸಿದ್ದಾನೆ. ಆದರೆ ಇವರ ಕಾಲದ ಶಾಸನಗಳು ನಮಗೆ ಈ ತಾಲೂಕಿನಲ್ಲಿ ದೊರಕಿರುವುದಿಲ್ಲ. ಇವನ ನಂತರ ಬಂದ ಇಮ್ಮಡಿ ಜಯಸಿಂಹನು ಕ್ರಿ.ಶ.೧೦೧೫-೧೦೪೪ರವರೆಗೆ ಆಳ್ವಿಕೆ ಮಾಡಿದ್ದಾನೆ. ಈತನಿಗೆ ಜಗದೇಕಮಲ್ಲ ಮತ್ತು ಮಲ್ಲಿಕಾಮೋದ ಎಂಬ ಬಿರುದುಗಳಿದ್ದವು. ದೇವದುರ್ಗ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ದೊರೆತಿರುವ ಕಲ್ಯಾಣಿ ಚಾಲುಕ್ಯರ ಶಾಸನಗಳಲ್ಲಿ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಶಾಸನಗಳೇ ಪ್ರಥಮ ಶಾಸನಗಳಾಗಿವೆ. ಗಣಜಾಲಿ ಊರಿನ ಹನುಮಂತ ದೇವಾಲಯದ ಪ್ರಕಾರದಲ್ಲಿ ನಿಲ್ಲಿಸಿರುವ ಕ್ರಿ.ಶ. ೧೦೨೩ಗ ತ್ರುಟಿತ ಶಾಸನದಲ್ಲಿ ಶಕವರ್ಷ ೯೪೫ ರುಧಿರೋದ್ಗಾರಿ, ಕಾರ್ತಿಕ, ಸು.೫, ಸೋಮವಾರವೆಂದಿದ್ದು ಇದು ಜಗದೇಕ ಮಲ್ಲನ

ಆಳ್ವಿಕೆಯಲ್ಲಿ ದಾಸರಸನೆಂಬುವನು ೨೦ ಮತ್ತರ ಹೊಲವನ್ನು ನಾಗೇಶ್ವರ ದೇವರಿಗೆ ಬಿಟ್ಟಂತೆ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೧). ಇದೇ ಶಾಸನದ ಕೆಳಗಡೆ ತಿರುಮಲ ದೇವರ ಗದ್ದೆಯ ಬಗ್ಗೆ ತಿಳಿಸುತ್ತದೆ. ಇವನ ಆಳ್ವಿಕೆಯ ಇನ್ನೊಂದು ಶಾಸನ ಹಿರೇಬೂದೂರು ಗ್ರಾಮದಲ್ಲಿ ದೊರೆತಿದೆ. ಇದು ತ್ರುಟಿತ ಶಾಸನವಾಗಿದ್ದು, ಜಗದೇಕ ಮಲ್ಲನು (ಗ್ರಾಮದ ಉಲ್ಲೇಖವಿಲ್ಲ) ಆಳುತ್ತಿದ್ದು, ಪ್ರಥಮ, ದ್ವಿತೀಯ ನಿವೇಶನಗಳನ್ನು ದಾನ ನೀಡಿದ ಉಲ್ಲೇಖವಿದೆ (ಅಪ್ರಕಟಿತ). ಇವನ ನಂತರದ ಅರಸನಾಗಿ ಒಂದನೆಯ ಸೋಮೇಶ್ವರ ಕ್ರಿ.ಶ.೧೦೪೪-೧೦೬೮ರವರೆಗೆ ಆಳ್ವಿಕೆ ಮಾಡಿದ್ದಾನೆ. ಇವನಿಗೆ ತ್ರೈಲೋಕ್ಯಮಲ್ಲ, ಆಹವಮಲ್ಲ, ರಾಜನಾರಾಯಣ ಎಂಬ ಬಿರುದುಗಳಿದ್ದವು. ಇವನ ಕಾಲದ ಬಾಗೂರು ಈರಣ ದೇವರ ಕಟ್ಟೆಯಲ್ಲಿರುವ ಕ್ರಿ.ಶ.೧೦೬೩ರ ಶಾಸನದ ಪ್ರಕಾರ "ಇರಿವಬೆಡೆಂಗ ಸತ್ಯಾಶ್ರಯ ದೇವನ ರಾಜ್ಯಭಾರವು ನಡೆಯುತ್ತಿದ್ದಂತೆ ಹೇಳಿದೆ. ಇವನ ಕೈಕೆಳಗಿದ್ದ ಸಾಹಣಿ ಪೆರ್ಗ್ಗಡೆ ಭೋಗೇಸ್ವರ ದೇವಾಲಯವನ್ನು ಮಾಡಿಸಿ ಮಾನ್ಯ ಬಿಟ್ಟಂತೆ" ಎಂದು ತಿಳಿದು ಬರುತ್ತದೆ(ಕವಿಶಾಸಂ ೭, ಪು.೯೬). ನಂತರ ಎರಡನೆಯ ಸೋಮೇಶ್ವರ ೧೦೬೮ರಿಂದ ೧೦೭೬ರವರೆಗೆ ಆಳ್ವಿಕೆ ಮಾಡಿದ್ದು, ಇವನ ಕಾಲದ ಶಾಸನಗಳು ದೇವದುರ್ಗ ಪ್ರದೇಶದಲ್ಲಿ ಇರುವುದಿಲ್ಲ. ಇವನ ನಂತರ ಬಂದ ಪ್ರಮುಖ ಅರಸನಾದ ಆರನೆಯ ವಿಕ್ರಮಾದಿತ್ಯನು ಕಲ್ಯಾಣದ ಚಾಲುಕ್ಯರ ಪಟ್ಟವನ್ನೇರಿದನು. ಇವನು ಕಲ್ಯಾಣಿ ಚಾಲುಕ್ಯರ ವಂಶದಲ್ಲಿ ಪ್ರಸಿದ್ಧ ದೊರೆಯಾಗಿದ್ದನು. ಇವನು ಮಹಾ ಪ್ರತಾಪಶಾಲಿಯೂ ವ್ಯವಹಾರ ಜ್ಞಾನವುಳ್ಳವನಾಗಿದ್ದನು. ಇವನು ಅಧಿಕಾರಕ್ಕೆ ಬಂದ ಕ್ರಿ.ಶ.೧೦೭೬ರಲ್ಲಿ ವಿಕ್ರಮಶಕೆಯನ್ನು ಪ್ರಾರಂಭಿಸಿದನು. ಆರನೆಯ ವಿಕ್ರಮಾದಿತ್ಯನಿಗೆ ಕಲಿವಿಕ್ರಮ, ಪೆರ್ಮಾಡಿ ದೇವ, ತ್ರಿಭುವನಮಲ್ಲ ಎಂಬ ಬಿರುದುಗಳಿದ್ದವು. ಅಂದರೆ ಕ್ರಿ.ಶ.೧೦೭೬-೧೧೨೬ರ ಆಳ್ವಿಕೆಯ ಅವಧಿಯಲ್ಲಿ ಅನೇಕ ಶಾಸನಗಳು ದೊರೆಕಿದ್ದು, ಅವು ಈ ಕೆಳಗಿನಂತಿವೆ.

ಊರ ಹೊರೆಗೆ ಹಂಪಯ್ಯನ ಬಾವಿಯ ಬಳಿಯ ಕ್ರಿ.ಶ.೧೦೮೪ರ ಶಾಸನವು ಚಾಳುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ, ಅವನ ಸಾಮಂತನಾಗಿ ಚಂದ್ರರಸನಿರುತ್ತಾನೆ. ಇವನನ್ನು ಮಹಿಪ್ಮತೀಪುರವರೇಶ್ವರ, ಪ್ರತಾಪ ಲಂಕೇಶ್ವರ, ಪ್ರಳಯ ಭೈರವ ಮುಂತಾದ ವಿಶೇಷಣಗಳಿಂದ ಹೊಗಳಲಾಗಿದೆ. ಇವನ ತಮ್ಮ ಕಣ್ವಲ ದೇವ ಈ ಅಣ್ಣ ತಮ್ಮಂದಿರಿಬ್ಬರು ಕೂಡಿ ಮಹಾ ಸಾಮಂತ ಬಸವದೇವ ಭಿನ್ನಪದಂತೆ ಧರ್ಮ ಕಾರ್ಯತತ್ಪರರಾಗಿ ಜೀನದೇವರ ಅರ್ಚನೆಗಾಗಿ ಗೂಬ್ಬೂರ ಮೂಲಿಗ ಮಹಾಜನರಿಗೆ ಬೆಳೆದರೆಯನ್ನು ದಾನ ಬಿಟ್ಟಂತೆ ಉಲ್ಲೇಖಿಸುತ್ತದೆ(ಕವಿಶಾಸಂ ೭, ಪು.೮೬). ಸೂಗರೇಶ್ವರ ಬೆಟ್ಟದ ದಾರಿಯಲ್ಲಿ ಬಿದ್ದಿರುವ ಕ್ರಿ.ಶ. ೧೦೮೪ರ ಮತ್ತೊಂದು ಶಾಸನವು ಚಾಳುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಜೋಯಿಮಯ್ಯರಸನಿರುತ್ತಾನೆ. ಇವನನ್ನು ಮದನ ಮಹೇಶ್ವರ, ಅಭಿನವ ಚಾರದತ್ತ, ಉಭಯಬಳಚರಣಚಾರ್ಯ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಇವನು ಎಡೆದೊರೆ ಎರಡು ಸಾವಿರ, ಕಲ್ಲಕೆಳಗೈನೂರು, ಪ್ರಾಂತ್ಯಗಳನ್ನು ದುಪ್ಪನಿಗ್ರಹ,

ಶಿಷ್ಟಪಾಳನಾ ಮಾಡಿಕೊಂಡು ಆಳುತ್ತಿದ್ದ. ಮನೆವೆಗ್ಗೆಡೆ ಮತ್ತು ದಂಡನಾಯಕ ಕಲ್ಲಿಪ್ಪಯ್ಯನಾ ವಿನಂತಿಯ ಮೇರೆಗೆ ಗೂಬ್ಬೂರ ಕಲಿದೇವಸ್ವಾಮಿಯ ಪೂಜಾ ವಿಧಾನಕ್ಕೆ ದೇಗುಲದ ನವಕರ್ಮಕ್ಕೆಂದು ಮಹಾಮಂಡೇಶ್ವರ ಜೋಯಿಮರಸನು ಮುಗುಂದೂರು ೩೦೦ ಬಳಿಯ ಗ್ರಾಮದ ಹಳ್ಳಸಿಂತೆಯನ್ನು ಧರ್ಮವಾಗಿ ಬಿಟ್ಟನು. ಗಬ್ಬೂರಿನ ಮೇಲಶಂಕರ ದೇವಾಲಯದ ಮುಂದೆ ನಿಲ್ಲಿಸಲಾಗಿರುವ ಕ್ರಿ.ಶ. ೧೦೮೫ರ ಶಾಸನದಲ್ಲಿ ಹಿರಿಯ ಅಗ್ರಹಾರವಾದ ಗಬ್ಬೂರಿನ ಮಹಾಜನಗಳ ವರ್ಣನೆಯಿದೆ. ಅವರನ್ನು ಗೊಬ್ಬೂರ ವಿಪ್ರಚೂಡಮಣಿಗಳೆಂದಿದೆ. ಈ ಗ್ರಾಮವು ಅಯಣ್ಯವಾಡಿ ನಾಡಿನಲ್ಲಿ ಪ್ರಸಿದ್ಧವಾದ ಗೋಪುರ ಗ್ರಾಮವೆಂದು ಪ್ರಸಿದ್ಧಿ ಪಡೆದಿತ್ತು. ಈ ಊರಿನಲ್ಲಿ ಮೇಳೇಶ್ವರ ದೇವರು ನೆಲಿಸಿ ಗ್ರಾಮದ ಜನಗಳನ್ನು ತನ್ನ ಅನುಗ್ರಹಕ್ಕೆ ಪಾತ್ರರನ್ನಾಗಿಸಿಕೊಂಡಿದ್ದು, ತಿಳಿದುಬರುತ್ತದೆ. ಆದರೆ ಇಲ್ಲಿ ಇದ್ದಂತಹ ಮಾಂಡಲಿಕನ ಹೆಸರು ತಿಳಿದುಬಂದಿಲ್ಲ(ಕವಿಶಾಸಂ ೭, ಪು.೪೭). ಇದೇ ದೇವಾಲಯದ ಬಲಗಡೆಯಲ್ಲಿರುವ ಕಲ್ಲಿನ ಮೇಲೆ ಇರುವ ಕ್ರಿ.ಶ.೧೦೮೮ರ ಶಾಸನದಲ್ಲಿ ಹಿರಿಯ ಗಬ್ಬೂರಿನ ಮುಂಮರಿದಂಡ ಸಾಸ್ಸಿರರು ಅಯ್ಯಾವೊಳೆ ಅಯಿನೂರ್ವ್ವರು ಮುಂತಾದ ವ್ಯಾಪಾರಿಗಳು ಮಹಾಲಿಂಗ ಮೇಲೇಶ್ವರ ದೇವರಿಗೆ ಭತ್ತವನ್ನು ದಾನ ಮಾಡಿದ ವಿಷಯದ ವಿಸ್ತಾರವಾದ ವರ್ಣನೆಯಿದೆ(ಕವಿಶಾಸಂ ೭, ಪು.೫೦). ಬಂಗಾರ ಬಸವಣ್ಣ ದೇವಾಲಯ ದಲ್ಲಿರುವ ಕ್ರಿ.ಶ.೧೧೯೬ರ ಶಾಸನವು. ಹಿಂದೆ ಅಹವಮಲ್ಲನು ಕೋಟಿ ಹೋಮ ದಕ್ಷಣೆ ನಿಮಿತ್ತವಾಗಿ ೨೦೦ ಮಹಾಜನರಿಗೆ ಮಾಣಿಕೇಶ್ವರ ಕೋಲ್ನಲ್ಲಿ ೧೧೩ ಮತ್ತರ ಭೂಮಿ ನೀಡಿದ ಆದರೆ ಅದು ಇವರ ಕೈತಪ್ಪಿತ್ತು. ಮುಂದೆ ತ್ರಿಭುವನ ಮಲ್ಲನು ಹಾವಿನಹಾಳು ಮತ್ತು ಕಲ್ಮೈಲೆಯನ್ನು ತ್ರಿಬೋಗಾಭ್ಯಂತರವಾಗಿ ಪುನರ್ ದತ್ತಿಯಾಗಿ ನೀಡಿದ ವಿವರವಿದೆ(ಕವಿಶಾಸಂ ೭, ಪು.೬೦). ಬಾಲಾಂಜನೇಯ ದೇವಾಲಯದ ಮನೆಯ ಮುಂದೆ ಇರುವ ಕ್ರಿ.ಶ.೧೧೦೩ರ ಶಾಸನವು ಬಹುಭಾಗ ಈಗ ಹಾಳಾಗಿದ್ದು, ಉಕ್ತವಾದ ಕಾಲವು ಚಾಳುಕ್ಯ ವರ್ಷ ಚಿತ್ರ(ಭಾನು) ಸಂವತ್ಸರದ ಮಾಘದ ಮಾವಾಸ್ಯೆ ಸೋಮವಾರವಾಗಿದೆ(ಕವಿಶಾಸಂ ೭, ಪು.೮೩). ಗಬ್ಬೂರಿನ ಬಸದಿಯಲ್ಲಿರುವ ಕ್ರಿ.ಶ.೧೧೧೦ರ ಶಾಸನದಲ್ಲಿ ತ್ರಿಭುವನ ಮಲ್ಲನು ಜಯಂತೀಪುರದ ನೆಲೆವೀಡಿನಲ್ಲಿದ್ದಾಗ ಅಗ್ರಹಾರ ಹಿರಿಯ ಗೊಬ್ಬೂರ ನಖರಗಳು, ಕಮ್ಮಟದ ಅಧಿಕಾರಿಗಳು, ಕಮ್ಮಟಕಾರರು ಊರಲ್ಲಿಯ ಬ್ರಹ್ಮ ಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲೆ ತೆರಿಗೆಯನ್ನು ಬಿಟ್ಟ ಉಲ್ಲೇಖವಿದೆ (ಕವಿಶಾಸಂ ೭, ಪು.೭೪). ರಾಯಚೂರು ಅಗಸಿಯ ಹನುಮಂತ ದೇವಾಲಯ ಆಭರಣದಲ್ಲಿರುವ ಕ್ರಿ.ಶ.೧೧೧೯ರ ಶಾಸನವು ತ್ರಿಭುವನ ಮಲ್ಲನ ಆಳ್ವಿಕೆಯಲ್ಲಿ ಗಬ್ಬೂರಿನ ಜನ್ನಯ್ಯಭಟ್ಟ ಸೋಮಯಾಜಿ ತನ್ನ ಪಾಲಿನ ವೃತ್ತಿಯ ಬೆಟ್ಟ ಬಾಗಿನವೆಂಬ ಸ್ಥಳದಲ್ಲಿ ಮಾಣಿಕೇಶ್ವರದ ಕೋಲಲ್ಲಿ ೫ ಮತ್ತರ ಭೂಮಿಯನ್ನು ಕರಿಯ ಮಸಣ್ಣ ಭಟ್ಟೋಪಾಧ್ಯಾಯ ಕಲಿಯ್ಯನು ದಾನ ಮಾಡಿದುದ್ದನ್ನು ಶಾಸನದಲ್ಲಿ ಹೇಳಲಾಗಿದೆ. ಶಾಸನ ಮುಂದುವರಿದು ಮುಸ್ಯಣಭಟ್ಟ ಅವನ ಪತ್ನಿ ನಾಲಿಕಬ್ಬೆಯರು ಮಹಾದೇವರ ಪೂಜಾಕಾರ್ಯಗಳಿಗೆ ಭೂದಾನ ನೀಡಿರುವಂತೆ ಉಲ್ಲೇಖಿಸುತ್ತದೆ(ಕವಿಶಾಸಂ

೭, ಪು.೪೫). ಭೋಗೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕ್ರಿ.ಶ.೧೧೨೬ರ ಶಾಸನದಲ್ಲಿ ಹರಿದೇವನ ಮಗನಾದ ಮಾಧವ ಸೋಮಯಾಜಿಯು ಗೋಪುರ ನಗರದಲ್ಲಿ ಕೇಶವ ದೇವಾಲಯವನ್ನು ನಿರ್ಮಿಸಿದ ಚಾಳುಕ್ಯ ತ್ರಿಭುವನಮಲ್ಲದೇವನು ಜಯಂತಿಪುರದ ನೆಲೆವೀಡಿನಲ್ಲಿದ್ದಾಗ ಸೂರ್ಯಗ್ರಹಣ ನಿಮಿತ್ತವಾಗಿ ಆದಿತ್ಯಭಟ್ಟ ಸೋಮಯಾಜಿಯು ತಾನು ಮಾಡಿಸಿದ ಕೇಶವ, ಹರಿಹರ, ಗಣಪತಿ, ಸರಸ್ವತಿ, ಸೂರ್ಯ ಮುಂತಾದ ದೇವರ ಪೂಜೆಗಾಗಿ ಭೂದಾನ ನೀಡಿರುತ್ತಾನೆ(ಕವಿಶಾಸಂ ೭, ಪು.೭೭).

ಇವನ ಕಾಲದಲ್ಲಿ ದೇವದುರ್ಗದ ಪ್ರದೇಶದಲ್ಲಿ ಶಾಸನಗಳಲ್ಲದೆ ಅನೇಕ ದೇವಾಲಯಗಳು, ಪುಷ್ಕರಣಿಗಳು, ಜಿನ ಬಸದಿಗಳು, ಸ್ಮಾರಕಗಳು, ರಚಿತವಾದಂತೆ ಬೇರೆ ಬೇರೆ ಶಾಸನಗಳಿಂದ ತಿಳಿದುಬರುತ್ತದೆ. ಆರನೇ ವಿಕ್ರಮಾದಿತ್ಯನನ್ನು, ಕಲ್ಯಾಣವನ್ನು ಕುರಿತು ವಿಜ್ಞಾನೇಶ್ವರನು ತನ್ನ 'ಮಿತಾಕ್ಷರ ಸಂಹಿತೆ'' ಎಂಬ ಗ್ರಂಥದಲ್ಲಿ 'ಕಲ್ಯಾಣದಂತ ನಗರ ಹಿಂದಿರಲಿಲ್ಲ, ಮುಂದಿರಲಾರದು, ಮತ್ತು ವಿಕ್ರಮಾದಿತ್ಯನಂತ ಅರಸನನ್ನು ಕಂಡಿಲ್ಲ ಮತ್ತು ಕೇಳಿಲ್ಲ' ಎಂದು ಹೇಳಿದ್ದಾನೆ. ಆರನೇಯ ವಿಕ್ರಮಾದಿತ್ಯನ ಮಗನಾದ ಮೂರನೆಯ ಸೋಮೇಶ್ವರನು ಕ್ರಿ.ಶ.೧೧೨೭ರಲ್ಲಿ ಪಟ್ಟಕ್ಕೆ ಬಂದನು. ಇವನು ಕ್ರಿ.ಶ.೧೧೨೭ ರಿಂದ ೧೧೩೮ ರವರೆಗೆ ಆಳ್ವಿಕೆ ಮಾಡಿದನು. ಇವನನ್ನು ಶಾಸನದಲ್ಲಿ ಭೂಲೋಕಮಲ್ಲ, ಸರ್ವಜ್ಞಾಭೂಪ, ಸರ್ವಜ್ಞಾ ಚಕ್ರವರ್ತಿ ಮುಂತಾಗಿ ಕರೆಯಲಾಗಿದೆ. ಇವನ ಕಾಲದ ಶಾಸನವು ಹಿರೇರಾಯಕುಂಪಿಯ ಈಶ್ವರ ದೇವಾಲಯದ ಎದುರು ಬಿದ್ದಿರುವ ಕಲ್ಲಿನಲ್ಲಿದೆ. ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ವೀರಪೇರ್ಮಾಡಿ ದೇವನಿರುತ್ತಾನೆ. ಇವನನ್ನು ಶಾಸನದಲ್ಲಿ ಅಹಿಹಯ(ಐಹಯ) ವಂಶದವನೆಂದೂ ಮಾಲ ಪರೆಘೋಪಣ, ಅತ್ಯುಗ್ರ ನರಶಿರೋದರ್ಪಣ ಧ್ವಜ ವಿರಾಜಮಾನ್ಯ ಅಣ್ಣಲದೇವನ ಸೇವಕ ಪೇಮಾಡಿ ದೇವ ಎಂದು ಕರೆದಿದೆ. ಇವನು ಅಯ್ಯಣವಾಡಿ ನಾಡನ್ನು ಆಳುತ್ತಿದ್ದಾಗ ಮುದ್ಗನೂರಿನ ಬಳಿಯ ರಾಕುರ್ಪ್ಪೆಯಲ್ಲಿ ಜಯರಾಮ ಎಂಬವನು ಮಾಡಿಸಿದ ದೇವಾಲಯದ ಅಂಗಭೋಗ, ಜೀರ್ಣೋದ್ಧಾರ ಮುಂತಾದ ಕಾರ್ಯಗಳಿಗಾಗಿ ಧರಣಿ ದೇವನ ಕೊಲಿನಲ್ಲಿ ೪೦ ಮತ್ತರು ಹೊಲ, ತೋಟ ಮುಂತಾದವನ್ನು ನೀಡುತ್ತಾನೆ. ಶಾಸನ ಮುಂದುವರಿದು ಮಂತ್ರಿಯಾದ ದೇವರಾಜನು ಅನೇಕ ಕೆರೆ, ದೇವಾಲಯಗಳನ್ನು ಕಟ್ಟಿಸಿದಂತೆ ಶಾಸನ ತಿಳಿಸುತ್ತದೆ(ಕವಿಶಾಸಂ ೭, ಪು.೯೦-೯೧). ಇವನ ಆಳ್ವಿಕೆಯ ಇನ್ನೊಂದು ಶಾಸನವು ಗಬ್ಬೂರಿನ ಬಾಲಾಂಜನೇಯ ದೇವಾಲಯ ಗರುಡ ಗಂಬದ ಬಳಿ ಇರುವ ಶಾಸನದಲ್ಲಿದೆ. ಇದರಲ್ಲಿ ಚಾಳುಕ್ಯರ ಬಿರುದುಗಳಿದ್ದು, ಶಾಸನ ಅಪೂರ್ಣವಾಗಿದ್ದು, ಸರ್ವಜ್ಞಾ ಚಕ್ರವರ್ತಿ ಎಂಬ ಬಿರುದು ಇರುವುದರಿಂದ ಇದು ಭೂಲೋಕಮಲ್ಲನ ಆಳ್ವಿಕೆಗೆ ಸೇರಿರಬಹುದಾಗಿದೆ (ಕವಿಶಾಸಂ ೭, ಪು.೮೪). ೩ನೇ ಸೋಮೇಶ್ವರನ ನಂತರ ಎರಡನೆಯ ಜಗದೇಕಮಲ್ಲ ಕ್ರಿ.ಶ.೧೧೩೮-೧೧೫೦ವರೆಗೆ ಆಳ್ವಿಕೆ ಮಾಡಿದನು. ಇವನು ತನ್ನ ಅಜ್ಜನಾದ ಆರನೆಯ ವಿಕ್ರಮಾದಿತ್ಯನ ಕಾಲದಿಂದಲೂ ಆಡಳಿತದಲ್ಲಿ ಭಾಗಿಯಾಗಿದ್ದನು. ಈತನನ್ನು ಪ್ರತಾಪ ಚಕ್ರವರ್ತಿ, ಜಗದೇಕ ಮಲ್ಲ ಎಂಬ ಬಿರುದಿನಿಂದ ಕರೆಯಲಾಗಿದೆ.

ಗಬ್ಬೂರು ವೀರಭದ್ರದೇವಾಲಯದ ಬಳಿಯ ಕ್ರಿ.ಶ. ೧೧೪೧ರ ಶಾಸನದಲ್ಲಿ ಗೊಬ್ಬೂರಿನ ಪರಮ ಭಾಗವತನಾದ ವೈಷ್ಣವ ಮಂಚೈಪ್ಪಣ್ಣನು ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ನಿಟ್ಟಾರಿಯ ವೈಷ್ಣವ ಕಂದರ್ಪಭಟ್ಟನಿಂದ ಮನೆ ನಿವೇಶನಗಳನ್ನೂ, ಹೊಲದ ಬೆಳೆಯನ್ನು ಪಡೆದು ತಾನು ಪ್ರತಿಷ್ಠೆ ಮಾಡಿದ ಪ್ರಸನ್ನಕೇಶವ ದೇವರ ಪೂಜೆಗಾಗಿ ನೀಡುತ್ತಾನೆ(ಕವಿಶಾಸಂ ೭, ಪು.೬೭).

ನೀಲಕಂಠೇಶ್ವರ ದೇವಾಲಯದ ಬಳಿ ಅಗಸಿಗೆ ಸೇರಿಸಿರುವ ಕ್ರಿ.ಶ. ೧೧೪೫ರ ಶಾಸನದಲ್ಲಿ ಇದೇ ಅರಸನ ಆಳ್ವಿಕೆಯಲ್ಲಿ ಗೊಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ ಪುನಸ್ಕಾರಕ್ಕೆ ಮತ್ತು ನಾಗಭೂಷಣ ದೇವರ ಸತ್ರಕ್ಕೆ ಮಹಾಜನಗಳು ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೭೧). ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೧೪೮ರ ಇದೇ ಅರಸನ ಶಾಸನವೊಂದರಲ್ಲಿ ಗೂಬ್ಬೂರಿನ ಅಶೇಷ ಮಹಾ ಜನಗಳಲ್ಲಿ ಒಬ್ಬನಾದ ವೈಷ್ಣವ ಚಾಕಣಭಟ್ಟಯ್ಯ ಎಂಬುವವನು ಗೋಪುರ ಗ್ರಾಮದಲ್ಲಿ ತಾನು ಮಾಡಿಸಿದ ಕೇಶವ ದೇವರ ಪೂಜೆ ಪುನಸ್ಕಾರ, ಚೈತ್ರಾ-ಪವಿತ್ರ, ನೈವೇದ್ಯ, ನಂದಾದೀಪ, ದೇವಾಲಯದ ನಿರ್ವಹಣೆ ಮುಂತಾದವುಗಳಿಗೆ ಯಾಜ್ಞಕ ತಿಪ್ಪಣ್ಣಭಟ್ಟ ಮತ್ತು ಅವನ ಹೆಂಡತಿ ಮಲ್ಲಿಯ್ಯಕ್ಕನ ಮಗನಾದ ಮಲ್ಲದೇವನ ಕೈಯಲ್ಲಿ ಮನೆ ನಿವೇಶನಗಳನ್ನು ತೋಟವೊಂದನ್ನು ಪಡೆಯುತ್ತಾನೆ(ಕವಿಶಾಸಂ ೭, ಪು.೫೭). ಕೊರವರ ಬಾವಿಗೆ ಸೇರಿಸಿರುವ ಕ್ರಿ.ಶ.೧೧೪೮ರ ಇನ್ನೊಂದು ಶಾಸನದ ಪ್ರಕಾರ ಜಗದೇಕಮಲ್ಲನ ಆಳ್ವಿಕೆಯಲ್ಲಿ ಹಿರಿಯ ಗೊಬ್ಬೂರ ಮಹಾಜನಗಳ ಪಾದಾರಾಧಕರಾಗಿದ್ದ ಸೋಮೇಶ್ವರ ದೇವರ ಭಕ್ತರಾದ ಜೇಡಕುಳ ತಿಲಕ ಜೇಡರ ದಾಸಿಮಯ್ಯನ ಪ್ರಿಯಪುತ್ರರಾದ ಸಕಲ ಜೋಡಗೊತ್ತಳಿಗಳು ಸೇರಿ ತಮ್ಮ ಕುಲದೈವವಾದ ಗೊಜ್ಜೇಶ್ರ ದೇವರ ಮತ್ತು ಆ ದೇವರ ಉತ್ತರಕ್ಕೆ ಮಾದಿಯಣ್ಣನು ಕಟ್ಟಿಸಿದ ಮಲ್ಲಿಕಾರ್ಜುನ ದೇವರಿಗೆ ದಾನವನ್ನು ನೀಡಿದ ಉಲ್ಲೇಖವಿದೆ. ಜೇಡ ದಾಸಿಮಯ್ಯನನ್ನು ತಮ್ಮ ಕುಲಜನಕನನ್ನಾಗಿ ಪರಿಗಣಿಸಿದ್ದು ಈ ಶಾಸನದಲ್ಲಿ ತಿಳಿಯುತ್ತದೆ(ಕವಿಶಾಸಂ ೭, ಪು.೮೧). ಜಗದೇಕ ಮಲ್ಲನ ನಂತರ ಕಲ್ಯಾಣಿ ಚಾಲುಕ್ಯ ಅರಸನಾಗಿ ಮೂರನೆಯ ತೈಲಪನು ಕ್ರಿ.ಶ.೧೧೪೯-೧೧೬೨ರವರೆಗೆ ಆಳ್ವಿಕೆ ಮಾಡಿದ್ದಾನೆ. ಇವನು ಎರಡನೇ ಜಗದೇಕಮಲ್ಲನ ಸಹೋದರನಾಗಿದ್ದು, ಮೂರನೇ ತೈಲ ಅಥವಾ ತ್ರೈಲೋಕ್ಯಮಲ್ಲನೆಂದು ಕರೆಸಿಕೊಂಡಿರುವವನು.

ಗಬ್ಬೂರಿನ ಮೇಲಶಂಕರ ದೇವಾಲಯದ ಎಡಬದಿಗೆ ಒದಗಿಸಿರುವ ಕ್ರಿ.ಶ. ೧೧೫೪ರ ಶಾಸನದ ಆರಂಭದಲ್ಲಿ ಚಾಳುಕ್ಯರ ವಂಶಾವಳಿಯನ್ನು ನೀಡಲಾಗಿದೆ. ಇದು ತ್ರೈಲೋಕ್ಯಮಲ್ಲನ ಕಾಲದ ಶಾಸನವಾಗಿದ್ದು, ಆಯಣ್ಣವಾಡಿ ಅದರಲ್ಲಿ ಹಿರಿಯಗೊಬ್ಬರಿನ ೨೦೦ ಮಹಾಜನರ ಬಗ್ಗೆ ವಿವರಗಳಿವೆ. ಗೊಬ್ಬೂರಿನಲ್ಲಿ ತ್ರಿಪುರಾಂತಕ ದೇವರ ಪ್ರತಿಷ್ಠೆ ಮಾಡಿ ಅದರ ಪೂಜೆ ಪುನಸ್ಕಾರಕ್ಕೆಂದು ಕೆಲವು ಸೆಟ್ಟರು ದಾನ ನೀಡುತ್ತಾರೆ. ತ್ರಿಪುರಾಂತಕ ಮುಂದೆ ಇದ್ದ ಕೇಶವ ದೇವರಿಗೆ ಇದರ ಜೊತೆಯಲ್ಲಿಯೇ ದಾನ

ನೀಡುತ್ತಾರೆ. ಮಾಲೆಗಾರರು ಎರಡು ದೇವರ ಹೂದೋಟಕ್ಕೆ ದಾನ ನೀಡುತ್ತಾರೆ. ಅಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗೂಬ್ಬೂರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವ ದೇವರ ಪೂಜೆ ಇತ್ಯಾದಿಗಳಿಗೆ ಭಾಗಕೊಡಬೇಕೆಂದು ನಿರ್ಣಯಿಸಿದರು ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೫೩). ತ್ರೈಲೋಕ್ಯಮಲ್ಲ ದೇವನ ಆಳ್ವಿಕೆಯ ಇನ್ನೊಂದು ಶಾಸನದಲ್ಲಿ ಶಾಲಿಸೆಟ್ಟಿ ಮಾಡಿಸಿದ ಹರಿಹರ ದೇವರ ನೈವೇದಕ್ಕೆ ಮೂಲಿಗರು ಕಾಣಿಕೆಯನ್ನು ನೀಡಿದಂತೆ ತಿಳಿದುಬರುತ್ತದೆ. ನಂತರ ನಾಲ್ಕನೆಯ ಸೋಮೇಶ್ವರನು ಕ್ರಿ.ಶ. ೧೧೮೪-೧೧೯೮ರವರೆಗೆ ರಾಜ್ಯಭಾರ ಮಾಡಿದನು. ಇವನ ಅವಧಿಯಲ್ಲಿ ಅನೇಕ ಸಾಮಂತ ಅರಸರು ಸ್ವತಂತ್ರವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿದರು. ಇವನ ನಂತರ ಚಾಲುಕ್ಯರ ಸಾಮ್ರಾಜ್ಯವು ಇತಿಹಾಸದಲ್ಲಿ ಕಣ್ಮರೆಯಾಗಿ ಹೋಯಿತು.

ಅಹಿಹಯರು (ಐಹೇಯರು)

ಹೈಹೆಯ ವಂಶಾವಳಿಯನ್ನು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಆದರೂ ಶಾಸನಗಳ ಕಾಲವನ್ನು ಆಧರಿಸಿ ಈ ಕೆಳಗಿನಂತೆ ನೋಡಬಹುದು. ಇವರು ಮೂಲತಃ ಮಾಂಡಲಿಕರಾಗಿ ಆಳ್ವಿಕೆಯನ್ನು ನಡೆಸಿದ್ದಾರೆ. ಅದರಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಆಳಿದ್ದಾರೆ.

ಲೋಕರಸ, ನುಂಗ್ಯಪರಸ, ರೇವರಸ, ಮಳೆಯರಸ, ಘಟಿದೇವ ಚಂದರಸ, ಅಣ್ಣಲದೇವ, ಅಯಣ್ಣದೇವ ಬೂಚಿದೇವ ೨ನೇ ಘಟಿದೇವ, ಹಿರಿಯಮಲ್ಲರಸ, ಮೈಳುಗಿದೇವ, ಹಲ್ಲೆಗದೇವ, ಮಲ್ಲರಸ, ಅಲ್ಲಹುಲಿದೇವ, ಹಲ್ಲೆಗದೇವ, ಒಯರುಗಿದೇವ, ಇಮ್ಮಡಿ ಮಲ್ಲದೇವ ಈ ರೀತಿಯಾಗಿ ಇವರು ಕ್ರಮವಾಗಿ ಆಳ್ವಿಕೆಯನ್ನು ನಡೆಸಿದ್ದಾರೆ. ದೇವದುರ್ಗದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ಮಾಡಿದ್ದಾರೆ.

ಗಬ್ಬೂರಿನ ಹಂಪಯ್ಯನ ಬಾವಿಯ ಬಳಿಯಲ್ಲಿರುವ ಕ್ರಿ.ಶ. ೧೦೮೪ರ ಶಾಸನ ಸಾಮಂತ ಚಂದ್ರರಸನ ಉಲ್ಲೇಖವಿದೆ. ಈತನನ್ನು ಶಾಸನದಲ್ಲಿ ಮಹಿಷ್ಮತೀಪುರವರೇಶ್ವರ, ಪ್ರತಾಪ ಲಂಕೇಶ್ವರ, ಪ್ರಳಯ ಭೈರವ ಎಂದು ಹೊಗಳಲಾಗಿದೆ. ಚಂದ್ರರಸನ ತಮ್ಮ ಅಣ್ಣಲದೇವ ಇಬ್ಬರೂ ಕೂಡಿ ಮಹಾಸಾಮಂತ ಬಸವದೇವನ ಭಿನ್ನಪದಂತೆ ಜಿನದೇವರ ಅರ್ಚನೆಗಾಗಿ ದಾನ ಬಿಟ ಉಲ್ಲೇಖವಿದೆ(ಕವಿಶಾಸಂ ೭, ಪು.೮೬). ಸೂಗೂರೇಶ್ವರ ದೇವಾಲಯದ ಬೆಟ್ಟದ ದಾರಿಯಲ್ಲಿರುವ ಕ್ರಿ.ಶ. ೧೦೮೪ರ ಇನ್ನೊಂದು ಶಾಸನ ದಲ್ಲಿ ಮಹಾಮಂಡಳೇಶ್ವರ ಜೋಯಿಮಯ್ಯರಸನ ಉಲ್ಲೇಖವಿದೆ. ಈತನನ್ನು ಶಾಸನದಲ್ಲಿ ಮದನ ಮಹೇಶ್ವರ, ಅಭಿನವ ಚಾರುದತ್ತ ಉಭಯದಳ ರಣಾಚಾರ್ಯ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಇವನು ಎಡದೊರೆ ಎರಡು ಸಾವಿರ, ಕಲ್ಲಕೆಳಗೈನೂರು ಪ್ರಾಂತ್ಯಗಳನ್ನು ಆಳುತ್ತಿದ್ದನು. ಮತ್ತು ಜೋಯಿಮರಸನು ಮುಗುಂದರು-೩೦೦ ಬಳಿಯ ಗ್ರಾಮವಾದ ಹಳ್ಳಸಿಂತೆಯನ್ನು ಧರ್ಮವಾಗಿ ಬಿಟ್ಟನು. ಈ ಶಾಸನದಲ್ಲಿ ಚಂದ್ರರಸ, ಕಣಲದೇವ ಜಕ್ಕರಸರ ಉಲ್ಲೇಖವಿದೆ(ಕವಿಶಾಸಂ ೭, ಪು.೮೮).

ಹಿರೇರಾಯಕುಂಪಿ ಈಶ್ವರ ದೇವಾಲಯದ ಎದುರು ಇರುವ ಕ್ರಿ.ಶ. ೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಇವನ ಸಾಮಂತನಾಗಿ ವೀರಪೆರ್ಮಾಡಿದೇವನಿರುತ್ತಾನೆ. ಅಹಿಹಯ ವಂಶದವನಾದ ಅಣ್ಣಲದೇವನ ಸೇವಕನಾದ ಪೇರ್ಮಾಡಿದೇವನು ಅಯ್ಯಣವಾಡಿನಾಡನ್ನು ಆಳುತ್ತಿದ್ದಾಗ ಮುದನೂರಿನ ಬಳಿಯ ರಾಕುರ್ಪ್ಪೆಯಲ್ಲಿ ಜಯರಾಮ ಮಾಡಿಸಿದ ದೇವಾಲಯದ ಅಂಗಭೋಗ ಜೀರ್ಣೋದ್ಧಾರಕ್ಕಾಗಿ ಧರಣಿದೇವನ ಕೊಲಿನಲ್ಲಿ ೪೦ ಮತ್ತರ ಹೊಲ, ತೋಟ, ದಾನವಾಗಿ ನೀಡುತ್ತಾನೆ(ಕವಿಶಾಸಂ ೭, ಪು.೯೧). ನಿಲವಂಜಿ ಗ್ರಾಮದ ಹನುಮಂತರಾಯ, ಮಾಲಿ ಪಾಟೀಲರ ಹೊಲದಲ್ಲಿರುವ ಕ್ರಿ.ಶ. ೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮ ರಾಜ್ಯಭಾರ ಮಾಡುತ್ತಿದ್ದಾಗ ಇವನ ಮಹಾಮಂಡಳೇಶ್ವರನಾಗಿ ಹಿರಿಯ ಮಲ್ಲರಸನಿರುತ್ತಾನೆ. ಇವನನ್ನು ಶಾಸನದಲ್ಲಿ ಗಂಗಾತೀರ ಪರಿಯಾತ್ರ, ಮಾಹಿಷ್ಮತಿ ಪುರವರಾಧೀಶ್ವರ ಸಹಸ್ರ ಬಾಹುಪ್ರತಾಪ, ಅಹಿಹಯವಂಶ, ಅತ್ಯುಗ್ರ ನರಸಿಂಹ ದರ್ಪಣ ಧ್ವಜ ವಿರಾಜಮಾನ ಮುಂತಾಗಿ ವರ್ಣಿಸಿದೆ. ಈ ಮಲ್ಲರಸನು ನಿಲ್ಲಜಿಗೆಯ ಮಲ್ಲಿಕಾರ್ಜುನ ದೇವರ ಅಂಗಭೋಗ, ನೈವೇದ್ಯಕ್ಕೆ ಕುರಕುಂದೆ ಗಡಿಂಬದಲ್ಲಿ ೧೮ ಮತ್ತರ ಭೂಮಿಯನ್ನು ನೀಡಿದನು. ಮಹಾಮಂಡಳೇಶ್ವರ ಅಯ್ಯರಸನು ಸೂರ್ಯಗ್ರಹಣದ ದಿನ ಕರೆ ಕಂಠಪಂಡಿತನಿಗೆ ಕುರುಕುಂದೆ ಗಡಿಂಬದ ಕೂಲಲ್ಲಿ ೧೨ ಮತ್ತರ ಭೂಮಿ ನೀಡುತ್ತಾನೆ(ಕವಿಶಾಸಂ ೭, ಪು.೯೪). ಚಂದನಕೇರಿಯ ಹನುಮಂತ ದೇವಾಲಯದ ಸಮೀಪವಿರುವ ಕ್ರಿ.ಶ. ೧೨ನೇ ಶತಮಾನದ ಶಾಸನದಲ್ಲಿ ಮಂಡಳೇಶ್ವರ ಹೆಮ್ಮಡಿ ದೇವರಸನು ತಾನು ಪ್ರತಿಷ್ಠೆ ಮಾಡಿಸಿ ಹೇಮ್ಮೇಶ್ವರ ದೇವರಿಗೆ ಊರಿನ ಉತ್ತರಕ್ಕೆ ಬಳಿ ಗೇಣ ಕೊಲಲ್ಲಿ ಅಳೆದು ಒಂದೂವರೆ ಮತ್ತರು ಭೂಮಿ ಬಿಡುತ್ತಾನೆ. ಗದ್ದೆ ೧೦೦ ಕಮ್ಮವಲ್ಲದ ಮಲ್ಲಿಕಾರ್ಜುನದೇವರ ಕೆರೆಯ ಪಶ್ಚಿಮಕ್ಕೆ ೧ ಮತ್ತರ ಹೊಲವನ್ನು ನಂದಾದೀವಿಗೆಗೆ ೧ ಗಾಣವನ್ನು ೧ ನಿವೇಶನವನ್ನು ನೀಡುತ್ತಾನೆ. ದೇವರ ಭಕ್ತನಾದ ಹಾಚಿದೇವರಸನ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೭-೧೦೮).

ವೀರಗೂಟ ಗ್ರಾಮದ ಕ್ರಿ.ಶ. ೧೨೨೩ರ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆ ವೀಡಿನಲ್ಲಿದ್ದಾಗ ಇವನ ಮಹಾಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ವ್ಯಾಪಾರಿ ಸಂಘಗಳು, ಸೆಟ್ಟಿಯರು, ಸೇರಿ ಸಂಕರ ದೇವರಿಗೆ ಹರಳ-ಹನ್ನೆರಡರಲ್ಲಿ ಒಂದು ಗ್ರಾಮವನ್ನು ನೀಡುತ್ತಾರೆ. ಜೊತೆಗೆ ಚಾವುಂಡರಸನು ಭೂದಾನ ನೀಡಿದ್ದಾನೆ(ಕವಿಶಾಸಂ ೭, ಪು.೯೮).

ಕಳಚೂರಿಗಳು : ಕ್ರಿ.ಶ. ೧೧೫೭-೧೧೮೩

ಕಲ್ಯಾಣದ ಚಾಲುಕ್ಯರ ಮುಖ್ಯ ಸಾಮಂತ ಅರಸರಲ್ಲಿ ಒಬ್ಬರಾದ ಕಲಚೂರಿಗಳು ಸ್ವತಂತ್ರರಾಗಿ ರಾಜ್ಯಭಾರ ನಡೆಸಿದುದು ಬಹು ಕಡಿಮೆ ಕಾಲವೆಂದು ಹೇಳಬಹುದು. ಇವರು ತಾವು ಯದು ಮತ್ತು ಕಾರ್ತವೀರ್ಯಾರ್ಜುನನ ಕುಲಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ.

ಇವರು ತಮ್ಮ ಆಳ್ವಿಕೆಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ರಾಜಧಾನಿಗಳನ್ನು ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದರು. ಕ್ರಿ.ಶ. ೬ನೇ ಶತಕದ ಆದಿಯಲ್ಲಿ ಅವರು ಮೊಳ್ವ ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಇವರ ವಂಶವು ಶಿವನ ವರ ಪ್ರಸಾದದಿಂದ ಆರಂಭವಾಯಿತೆಂದೂ, ಅವರು ಶಿವನ ವಾಹನವಾಗಿದ್ದ ವೃಷಭ ಅಥವಾ ನಂದಿಯನ್ನು ತಮ್ಮ ಲಾಂಛನವಾಗಿಟ್ಟುಕೊಂಡು ಆಳ್ವಿಕೆ ನಡೆಸಿದ್ದಾರೆ.

ಮೊದಲ ಅರಸನಾಗಿ ಜೋಗಮನು ಕಲ್ಯಾಣದ ಚಾಲುಕ್ಯರ ಸಾಮಂತನಾಗಿದ್ದು, ಅವರ ರಾಜ್ಯ ವಿಸ್ತರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಇವನು ತನ್ನ ಮಗಳಾದ ಸಾವಳಿದೇವಿಯನ್ನು ಆರನೇ ವಿಕ್ರಮಾದಿತ್ಯನಿಗೆ ಧಾರೆಯೆರದು ಕೊಟ್ಟು ತಾನು ಅವನ ಸಾಮಂತನಾಗಿ ಉಳಿದ. ಇವನ ಮಗನೇ ಪೇರ್ಮಾಡಿ. ಪೇರ್ಮಾಡಿಯ ನಂತರ ಬಿಜ್ಜಳನು ಕ್ರಿ.ಶ. ೧೧೩೦ರಿಂದ ೧೧೬೮ರವರೆಗೆ ಕಳಚೂರಿ ವಂಶದ ಅಗ್ರಗಣ್ಯ ಅರಸನಾಗಿ ಆಳ್ವಿಕೆ ಮಾಡಿದನು. ಬಿಜ್ಜಳನಿಗೆ “ತ್ರಿಭುವನ ಮಲ್ಲ”, “ಭುಜಬಲ ಚಕ್ರವರ್ತಿ”, “ಕಲಚೂರಿ ಚಕ್ರವರ್ತಿ” ಎಂಬ ಬಿರುದುಗಳಿದ್ದವು. ಇವನ ಕಾಲದ ಶಾಸನಗಳು ದೇವದುರ್ಗ ತಾಲೂಕಿನಲ್ಲಿ ದೊರಕಿರುವುದಿಲ್ಲ. ಇವನ ನಂತರ ಬಂದ ಇವನ ಮಗ ರಾಯಮುರಾರಿ ಸೋವಿದೇವ ಕ್ರಿ.ಶ. ೧೧೬೮-೭೭ರವರೆಗೆ ಆಳ್ವಿಕೆ ಮಾಡಿದ. ಇವನ ಕಾಲದ ಶಾಸನಗಳು ಈ ಪ್ರದೇಶದಲ್ಲಿ ದೊರೆತಿವೆ.

ಕಳಚೂರಿ ರಾಯಮುರಾರಿ ಭುಜಬಳಮಲ್ಲದೇವನ ಕ್ರಿ.ಶ. ೧೧೭೦ರ ಗಬ್ಬೂರಿನ ಹರಿಹರ ದೇವಾಲಯದಲ್ಲಿರುವ ಶಾಸನದಲ್ಲಿ ರಾಯಿಕೊಡ ಹರಿಹರಿ ದಾಸರಾದ ಸೋಮೆಶ್ವರಭಟ್ಟರ ಮಗಳು ಲಕ್ಷುಮಕ್ಕ ಸರ್ವನಮಸ್ಯದ ಅಗ್ರಹಾರವಾದ ಹಿರಿಯ ಗೂಬ್ಬೂರಿನ ಮಾಸಂಗಿಯ ಭಾಗದಲ್ಲಿ ರಾಯಿ ಕೊಡವರ ಭಾಗದಲ್ಲಿ ತನ್ನ ತಂದೆಯ ಕಡೆಯಿಂದ ತನ್ನ ಭಾಗವಾಗಿ ಬಂದ ಬೆಳೆಯ ಭಾಗವನ್ನು ಕೋಟಿ ಹೋಮಕ್ಕೆ ಮತ್ತು ತನ್ನ ತಂದೆ ಗೂಬ್ಬೂರಲ್ಲಿ ಪ್ರತಿಷ್ಠೆ ಮಾಡಿಸಿದ ಹರಿಹರ ದೇವರಿಗೆ ಮತ್ತು ಸಿದ್ದ ಸೋಮನಾಥ ದೇವರಿಗೆ ಪೂಜೆ, ಪುನಸ್ಕಾರ, ಧೂಪ, ದೀಪ, ನೈವೇದ್ಯ, ವಸ್ತ್ರಾಲಂಕಾರ, ಚೈತ್ರ ಪೈತ್ರ, ಧರ್ಮದ ಏತಕ್ಕೆ ಸಲ್ಲುವಂತೆ ತನಗೆ, ತನ್ನ ಗಂಡನಿಗೆ, ತನ್ನ ತಂದೆಗೆ ಶ್ರೇಯೋಭಿವೃದ್ಧಿಗೆಂದು ಬಿಡುತ್ತಾಳೆ (ಕವಿಶಾಸಂ ೭, ಪು.೫೬).

ರಾಯಮುರಾರಿ ಸೋವಿದೇವನ ಕಾಲದ ಗಬ್ಬೂರಿನ ಏಳೂ ಬಾವಿ ಬಸವಣ್ಣನ ಗುಡಿಯ ಬಲ ಪಕ್ಕದಲ್ಲಿದ್ದ ಶಾಸನವು ಗೊಬ್ಬೂರಿನ ನೀರಕೋಟೆಯಲ್ಲಿ ಚಾಕಣಭಟ್ಟನು ಪ್ರತಿಷ್ಠೆ ಮಾಡಿಸಿದ ಪ್ರಸನ್ನ ಕೇಶವ ದೇವರ ಅಂಗಭೋಗ ರಂಗಭೋಗ ಮುಂತಾದವುಕ್ಕೆ ಹೇರಿಗೆ ೫೦ ಎಲೆಯನ್ನು ಶಂಕರದೇವ ಲಬ್ದವರ ಪ್ರಸಾದರಾದ ಬಳ್ಳಿಯ ಸಾಸಿರ್ವ್ವರು ಬಿಟ್ಟದ್ದನ್ನು ಉಲ್ಲೇಖಿಸುತ್ತದೆ(ಕವಿಶಾಸಂ ೭, ಪು.೫೯). ಗಬ್ಬೂರಿನ ಸೂಗೊರೇಶ್ವರ ದೇವಾಲಯದ ನವರಂಗ ಮಂಟಪದ ಕಂಬದಲ್ಲಿ ಎರಡು ಭಾಗದಲ್ಲಿದ್ದು, ಇದು ಕಳಚೂರಿ ವಂಶದ ಸೋವಿದೇವನ ಉಲ್ಲೆಖವಿದೆ. ಸೋವಿದೇವನ ಆಳ್ವಿಕೆಯಲ್ಲಿ ಹಿರಿಯ

ಗಬ್ಬೂರಿನ ಕಲಿದೇವರಿಗೆ ದಾನ ನೀಡಿದ ಉಲ್ಲೇಖವಿದೆ (ಅಪ್ರಕಟಿತ). ಮುಂದಿನ ಶಾಸನಗಳು ಸಂಕಮ ದೇವನನ್ನು ಉಲ್ಲೇಖಿಸುತ್ತದೆ. ಇವನು ೧೧೭೭ರಿಂದ ೧೧೮೦ರವರೆಗೆ ರಾಜ್ಯಭಾರ ಮಾಡಿದನು.

೧. ಇವನ ಕಾಲದ ಶಾಸನವು ನಿಲವಂಜಿ ಗ್ರಾಮದ ಹನುಮಂತರಾಯ ಮಾಲಿ ಪಾಟೀಲರ ಹೊಲದಲ್ಲಿರುವ ಕ್ರಿ.ಶ. ೧೧೭೭ರಲ್ಲಿ ಹಿರಿಯಮಲ್ಲರಸ ನಿಲ್ಲಜಗೆಯ ಮಲ್ಲಿಕಾರ್ಜುನದೇವರ ಅಂಗಭೋಗ ನೈವೇದ್ಯ ತಪೋಧರನ್ನದಾನ ಮುಂತಾದವಕ್ಕೆ ಅಲ್ಲಿಯ ಸ್ಥಾನಾಧಿಪತಿ ಚಂದ್ರಶೇಖರ ಪಂಡಿತನ ಕಾಲನ್ನು ತೊಳೆದು ಕುರುಕುಂದೆ ಗಡಿಂಬದಲ್ಲಿ ೧೮ ಮತ್ತರ ಭೂಮಿ ನೀಡುತ್ತಾನೆ. ಹಾಗೂ ಮಹಾಮಂಡಳೇಶ್ವರ ಅಯ್ಯರಸನು ಸೂರ್ಯಗ್ರಹಣದ ದಿನ ಕೆರೆ ಕಂಠ ಪಂಡಿತನಿಗೆ ಕುರುಕುಂದೆ ಗಡಿಂಬದ ಕೋಲಲ್ಲಿ ೧೨ ಮತ್ತರ ಭೂಮಿ ನೀಡುತ್ತಾನೆ. ಕಳುಚುರ್ಯ ಸಂಕಮದೇವನು ಮೇಲೆ ಉಲ್ಲೇಖಿತ ಕಾಲದಲ್ಲಿ ಶಿಲಾಶಾಸನ ಬರೆಸಿ ಪುನರ್ದ್ಧಾರೆಯಾಗಿ ದೇವರಿಗೆ ನೀಡಿದ. ಈ ಶಾಸನವನ್ನು ಹಾಚಿದೇವರಸನ ಆಜ್ಞೆಯಂತೆ ಶ್ರೀಕರಣದ ವೆರ್ಗ್ಗಡೆ ಬರೆಸಿದ ಎಂದು ಇದೆ(ಕವಿಶಾಸಂ ೭, ಪು.೯೪).

ನಂತರ ಕಲ್ಯಾಣ ಚಾಲುಕ್ಯ ಅರಸ ನಾಲ್ಕನೆಯ ಸೋಮೇಶ್ವರನು ಸಂಕಮನ ಮೇಲೆ ದಾಳಿ ಮಾಡಿದನು. ಈ ಯುದ್ಧದಲ್ಲಿ ಸಂಕಮ ಅಸು ನೀಗಿದನೆಂದು ತೋರುತ್ತದೆ. ಸಂಕಮ ನಂತರದಲ್ಲಿ ಅವನ ತಮ್ಮ ಆಹವಮಲ್ಲನು ಕ್ರಿ.ಶ.೧೧೮೦ ರಿಂದ ೧೧೮೩ರ ವರೆಗೆ ರಾಜ್ಯಭಾರ ಮಾಡಿದನು. ಇವನ ಆಳ್ವಿಕೆಯಲ್ಲಿ ಗೂಬ್ಬರ ಸ್ಥಳದ ಉಲ್ಲೇಖವನ್ನ ಅಲಂಪುರ ಗ್ರಾಮದ ಕ್ರಿ.ಶ. ೧೧೮೨ರ ಶಾಸನದಲ್ಲಿ ಕಳಚೂರ್ಯ ಚಕ್ರವರ್ತಿ ಭುಜಬಳಮಲ್ಲ ಆಹವಮಲ್ಲದೇವನು ಅಯ್ಯವೊಳೆ ಐನೂರ್ವರು. ಉಭಯ ನಾನಾದೇಶಿಗಳು, ಮೂವತ್ತಾರು ಬೀಡುಗಳ ಮುಮ್ಮರಿದಂಡೆಗಳು, ಕನ್ನಡ ೪೦೦೦, ತುಂಬುಳ ಸ್ಥಳ, ಗೂಬ್ಬೂರ ಸ್ಥಳ, ಮದ್ದೂರು ಸ್ಥಳ, ಮಂತಳ ಗೂಡಿನ ಸ್ಥಳ ಗರಿಂಜೆಯ ಸ್ಥಳ ಅಲಂಪುರ ಸ್ಥಳ ಮೊದಲಾದ ವ್ಯಾಪಾರಿ ಕೇಂದ್ರಗಳ ಜನ ಸಭೆ ಸೇರಿ ಗವರೇಶ್ವದೇವರ ಸೇವೆಗೆ ಬೇರೆ ಬೇರೆ ಸುಂಕಗಳಿಂದ ಬರುವ ಆದಾಯವನ್ನು ದತ್ತಿಯಾಗಿ ಕೊಟ್ಟರೆಂದು ಇದರಲ್ಲಿ ದಾಖಲಿಸಿದೆ. ಗವರೇಶ್ವರದ ಸ್ಥಾನಪತಿಯಾಗಿ ಕೇಶವರಾಸಿಯ ಎಂಬುವವನಿದ್ದ(ಕವಿಶಾಸಂ ೫ ಪು.೧೫೦, ಅಲಂಪುರ). ಇವನ ನಂತರ ಆಹವಮಲ್ಲನ ತಮ್ಮ ಸಿಂಘಣ ಕ್ರಿ.ಶ. ೧೧೮೩ರಿಂದ ೧೧೮೪ರವರೆಗೆ ಆಳ್ವಿಕೆ ನಡೆಸಿದನು. ಕ್ರಿ.ಶ. ೧೧೮೪ರಲ್ಲಿ ಕಲ್ಯಾಣ ಚಾಲುಕ್ಯ ನಾಲ್ಕನೇ ಸೊಮೇಶ್ವರನು ತಾನು ಕಳೆದುಕೊಂಡಿದ್ದ ಕಲ್ಯಾಣದ ಸಿಂಹಾಸನವನ್ನು ಪುನಃ ಕಳಚೂರ್ಯರಿಂದ ಕಸಿದುಕೊಂಡನು. ಆದರೆ ಸೊಮೇಶ್ವರನಿಂದ ಪುನಃ ಸ್ಥಾಪಿಸಲ್ಪಟ್ಟ ಚಾಳುಕ್ಯ ವಂಶದ ಆಳ್ವಿಕೆ ಬಹುಕಾಲ ಮುಂದುವರಿಯಲಿಲ್ಲ. ಸಾಮ್ರಾಜ್ಯದ ಉತ್ತರ ಭಾಗದಲ್ಲಿ ಸೇವುಣರು, ದಕ್ಷಿಣದಲ್ಲಿ ಹೊಯ್ಸಳರು, ಪ್ರಬಲರಾದರು. ಕ್ರಿ.ಶ. ೧೧೮೯ರಲ್ಲಿ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯವು ಅಳಿದು ಹೋಯಿತು. ಕೇವಲ ೨೮ ವರ್ಷಗಳ ಕಾಲ ಆಳ್ವಿಕೆ ಮಾಡಿದ ಕಳಚೂರ್ಯರು ಕನ್ನಡ ನಾಡಿನ ಇತಿಹಾಸದಲ್ಲಿ ಮುಖ್ಯ ಘಟನಾವಳಿಗಳಿಂದ ಕೂಡಿದ ಅರಸರಾಗಿದ್ದಾರೆ. ಇವರ ಕಾಲದಲ್ಲಿ ಬಸವಣ್ಣ

ಮುಂತಾದವರ ನೇತೃತ್ವದಲ್ಲಿ ಧಾರ್ಮಿಕ ಚಳುವಳಿ ನಡೆದು ಇಂದಿನ ವೀರಶೈವ ಎಂಬ ಮತದ ಉಗಮಕ್ಕೆ ಕಾರಣವಾಯಿತು.

ನಂತರ ಬಂದ ಅರಸರು ಅದಕ್ಷರಾಗಿದ್ದರಿಂದ ಮಾಂಡಲಿಕರ ಪ್ರಭಾವ ಹೆಚ್ಚಿತು. ಮುಂದೆ ದೇವದುರ್ಗ ಪ್ರದೇಶವು ಸೇವುಣರ ಆಡಳಿತಕ್ಕೆ ಸೇರ್ಪಡೆಯಾಯಿತು.

ದೇವಗಿರಿ ಯಾದವರು(ಸೇವುಣರು)

ದೇವಗಿರಿಯ ಯಾದವರು ಕಲ್ಯಾಣ ಚಾಲುಕ್ಯರ ನಂತರ ಸುಮಾರು ೧೩ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದು ದಕ್ಷಿಣ ಭಾರತದ ರಾಜಕೀಯ ರಂಗದಲ್ಲಿ ಮಹತ್ವದ ಪಾತ್ರ ವಹಿಸಿದರು. ಯಾದವರ ಪೂರ್ವಜರು ಸುಮಾರು ೩೦೦ ವರ್ಷಗಳ ಕಾಲ ಮಾನ್ಯಖೇಟದ ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಖಾನ್ ದೇಶ, ನಾಸಿಕ್ ಮತ್ತು ಅಹ್ಮದ್ ನಗರ ಜಿಲ್ಲೆಗಳನ್ನೊಳಗೊಂಡ ಪ್ರದೇಶಕ್ಕೆ ಒಡೆಯರಾಗಿದ್ದರು.

ಸೇವುಣರಿಗೆ ಯಾದವರೆಂಬ ಹೆಸರಿದ್ದು ಈಗಿನ ಮಹಾರಾಷ್ಟ್ರ ರಾಜ್ಯದಲ್ಲಿರುವ ದೇವಗಿರಿ ಅವರ ರಾಜಧಾನಿಯಾಗಿತ್ತು. ಆದ್ದರಿಂದ ರಾಜವಂಶಗಳ ಶಾಸನಗಳಲ್ಲಿ ದೇವಗಿರಿ ಅರಸ ವಂಶಜರನ್ನು ಸೇವುಣರೆಂದು ಕರೆಯಲಾಗಿದೆ. ಅಲ್ಲದೆ ಈ ದೇವಗಿರಿ ರಾಜ್ಯದ ಪ್ರಾಬಲ್ಯಕ್ಕೆ ಮೂಲ ಕಾರಣನಾದವನು ಸೇವುಣ ಚಂದ್ರನೆಂಬುವವನಾದ್ದರಿಂದ ಇವರನ್ನು ಸೇವುಣರೆಂದು ಕರೆಯಲಾಗಿದೆ.

ಸೇವುಣರು ಕನ್ನಡನಾಡು ಒಳಗೊಂಡಂತೆ ರಾಯಚೂರು ಜಿಲ್ಲೆಯ ದೇವದುರ್ಗ ಪ್ರದೇಶದ ಬಹುಭಾಗವನ್ನು ಆಳಿದರು. ಈ ಅವಧಿಯಲ್ಲಿ ದ್ವಾರಸಮುದ್ರ ಹೊಯ್ಸಳರೊಡನೆ ತೀವ್ರ ಹೋರಾಟ ನಡೆಸಿ ಕರ್ನಾಟಕದ ಉತ್ತರ ಭಾಗದಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು.

ಸೇವುಣರ ಮೊದಲ ಅರಸ ಸೇವುಣ ಚಂದ್ರನಾಗಿದ್ದು, ಈತನು ೮೯೦-೯೦೦ರವರೆಗೆ ನಂತರ ದಡಿಯಪ್ಪ, ಒಂದನೇ ಭಿಲ್ಲಮ, ಒಂದನೇ ಬಡ್ಡಿಗ, ರಾಜಗಿ, ೨ನೇ ಬಿಲ್ಲಮ, ೩ನೇ ಬಿಲ್ಲಮ, ವಾಡುಗಿ, ೪ನೇ ಬಿಲ್ಲಮ, ೨ನೇ ಸೇವುಣ ಚಂದ್ರ ಇವನ ಮಗ ಐರಮದೇವ, ೧ನೇ ಸಿಂಘಣ ೧೧೦೫-೧೧೨೦ ಅಮರ ಗಾಂಗೇಯ, ಅಮರ ಮಲ್ಲಗಿ, ಐದನೇ ಬಿಲ್ಲಮ ಮುಂತಾದವರು ಆಳ್ವಿಕೆ ನಡೆಸಿದ್ದಾರೆ. ಆದರೆ ಇವರ ಕಾಲದ ಶಾಸನಗಳು ಹಾಗೂ ಸ್ಮಾರಕಗಳು ಈ ಪ್ರದೇಶದಲ್ಲಿ ದೊರೆಯುವುದಿಲ್ಲ. ಇವರ ನಂತರ ಬಂದ ಚೈತುಗಿಯ ಮಗನಾದ ಎರಡನೇ ಸಿಂಘಣನ ಆಳ್ವಿಕೆಯು ಸೇವುಣ ಇತಿಹಾಸದಲ್ಲಿ ರಾಜ್ಯ ವಿಸ್ತರಣವಾಯಿತು. ಸಿಂಘಣನು ಕ್ರಿ.ಶ. ೧೨೧೦ರಲ್ಲಿ ಅಧಿಕಾರಕ್ಕೆ ಬಂದನೆಂದು ಹೇಳಲಾಗುತ್ತದೆ. ಇವನ ೧೨೧೦ರಿಂದ ೧೨೪೭ರ ಅಧಿಕಾರಾವಧಿಯ ಶಾಸನಗಳು ದೇವದುರ್ಗ ತಾಲ್ಲೂಕಿನಲ್ಲಿ ಲಭ್ಯವಾಗಿವೆ.

ಗಬ್ಬೂರಿನ ವೆಂಕಟೇಶ್ವರ ದೇವಾಲಯದ ಆವರಣದಲ್ಲಿನ ಕಂಬದಲ್ಲಿನ ಕ್ರಿ.ಶ. ೧೨೧೩ರ ಶಾಸನವು ನಾಗರಿ ಲಿಪಿ, ಸಂಸ್ಕೃತ ಭಾಷೆಯಲ್ಲಿದ್ದು, ಯಾದವ ಸಿಂಹಣನು ಗೋಪುರದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿ, ಇದರೊಂದಿಗೆ ಕೇಶವಾದಿ ಚತುರ್ವಿನಂಶತಿ ಮೂರ್ತಿಗಳನ್ನೂ ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದಂತೆ ಹೇಳಿದೆ. ಗೋಪುರವನ್ನು ಇವನ ದಂಡನಾಯಕ ಲಕ್ಷ್ಮದೇವನು ಆಳುತ್ತಿದ್ದು, ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ. ನೇರುಡಿಗೆ ಗ್ರಾಮವನ್ನು ನೀಡಿದೆ(ಕವಿಶಾಸಂ ೭, ಪು.೬೧).

ವೀರಗೋಟ ಊರಿನ ಮೌನೇಶ್ವರರು ತಪಸ್ಸು ಮಾಡಿದ ಗುಡಿಯಲ್ಲಿರುವ ಕ್ರಿ.ಶ. ೧೨೨೩ರ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ ಅವನ ಅಧೀನದಲ್ಲಿದ್ದ ಸರ್ವಾಧಿಕಾರಿ ಮಹಾಪ್ರಧಾನಿ ಬಾಹತ್ತರ ನಿಯೋಗಾಧಿಪತಿ, ಪುರಷೋತ್ತಮನಾಯಕನ ತಮ್ಮನಾದ ನರೋತ್ತಮದೇವನು ಮತ್ತು ಮಹಾಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ವ್ಯಾಪಾರಿ ಸಂಘಗಳವರು ಯೆರಡಯ್ಯಣವಾಡಿನಾಡ ರೇಚಿಸೆಟ್ಟಿ, ಪದ್ಮಿಸೆಟ್ಟಿ, ಮಾಚಿಸೆಟ್ಟಿ, ಕರಡಿಕಲ್ಲನಾಡ ಸೆಟ್ಟಿಗುತ್ತ ಸೇಗಿಸೆಟ್ಟಿ, ಹಗರಗಟ್ಟಿಯ ಸೆಟ್ಟಿ ಮುಂತಾದವರೆಲ್ಲಾ ಸೇರಿ ಮಹಾನಾಡಾಗಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ನೀಡುತ್ತಾರೆ(ಕವಿಶಾಸಂ ೭, ಪು.೯೮).

ಇವನ ನಂತರ ಜೈತುಗಿಯ ಮೊಮ್ಮಗ ಕೃಷ್ಣಸೇವುಣ ರಾಜನಾದನು. ಇವನ ನಂತರ ಮಹಾದೇವ ಅಧಿಕಾರ ವಹಿಸಿಕೊಂಡನು. ಕೃಷ್ಣನ ತರುವಾಯ ಅವನ ಹಿರಿಯ ಮಗ ರಾಮಚಂದ್ರನಿಗೆ ಅಧಿಕಾರ ಬರಬೇಕಾಗಿತ್ತು. ಆದರೆ ಅವನಿಗೆ ಅಧಿಕಾರ ಬರಲಿಲ್ಲ. ಆದ್ದರಿಂದ ರಾಮಚಂದ್ರನು ತನ್ನ ತಮ್ಮನ ಮಗ ಅಮಣನನ್ನು ಕೊಂದು ಅಧಿಕಾರಕ್ಕೆ ಬಂದನು. ಇವನು ೪೦ ವರ್ಷಗಳ ದೀರ್ಘ ಆಳ್ವಿಕೆಯ ಕಾಲದಲ್ಲಿ ಹೊಯ್ಸಳರು, ಕಾಕತೀಯರೊಡನೆ ನಿರಂತರ ಯುದ್ಧದಲ್ಲಿ ತೊಡಗಿದ್ದರು. ಈ ವೇಳೆಗಾಗಲೇ ಉತ್ತರ ಭಾರತದಲ್ಲಿ ಮಹಮ್ಮದಿಯರ ದಾಳಿಗಳು ಯಶಸ್ವಿಯಾಗತೊಡಗಿದ್ದವು. ದಕ್ಷಿಣದ ರಾಜರು ಉತ್ತರದಲ್ಲಿ ಸ್ಥಾಪಿತವಾದ ಸುಲ್ತಾನರ ಬಲಿಷ್ಠ ಸಾಮ್ರಾಜ್ಯ ಹಾಗೂ ಅದರಿಂದ ಮುಂದೊದಗಬಹುದಾದ ಪರಿಣಾಮಗಳನ್ನು ಕುರಿತು ಯೋಚಿಸದೆ, ಪರಸ್ಪರ ಅಂತಃಕಲಹದಲ್ಲೇ ತೊಡಗಿದ್ದರು. ದಕ್ಷಿಣ ಭಾರತದ ಮೇಲೆ ಪ್ರಥಮವಾಗಿ ಅಲ್ಲಾವುದ್ದೀನ್ ಖಿಲ್ಜಿಯು ದಾಳಿಯನ್ನು ಪ್ರಾರಂಭಿಸಿದನು. ಇವನು ಕ್ರಿ.ಶ. ೧೨೯೪ರಲ್ಲಿ ದೇವಗಿರಿಯನ್ನು ಮುತ್ತಿದನು. ದೇವಗಿರಿಯ ವಿನಾಶವನ್ನು ತಪ್ಪಿಸಲು ರಾಮಚಂದ್ರನು ಅಲ್ಲಾವುದ್ದೀನನೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಂಡನೆಂದು ತಿಳಿದುಬರುತ್ತದೆ.

ಅಲ್ಲಾವುದ್ದೀನ್ ಖಿಲ್ಜಿಯು ದೇವಗಿರಿಯನ್ನೊಳಗೊಂಡಂತೆ ಕ್ರಿ.ಶ.೧೩೦೯ರಲ್ಲಿ ವಾರಂಗಲ್ಲನ್ನು ದೋರಸಮುದ್ರ(ಹಳೇಬೀಡು) ಮತ್ತು ಮಧುರೆ ಹಾಗೂ ಇತರ ಮುಖ್ಯ ನಗರಗಳನ್ನು ಸೂರೆ ಹೊಡೆಯಲು ಮಲ್ಲಿಕಾಫರನನ್ನು ಕಳುಹಿಸಿದನು. ಪದೇ ಪದೇ ನಡೆದ ದಾಳಿಗಳಿಂದ ಜರ್ಝರಿತವಾದ

ರಾಮಚಂದ್ರನು ಕ್ರಿ.ಶ. ೧೩೧೨ರಲ್ಲಿ ಮರಣ ಹೊಂದಿದನು. ಇವನ ನಂತರ ಸಿಂಘಣ, ಬಲ್ಲಣ, ಮಲ್ಲದೇವ ಎಂಬುವರು ಸೇವುಣ ರಾಜ್ಯವನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸಿ ವಿಫಲರಾದರು. ಕ್ರಿ.ಶ. ೧೩೧೮ರಲ್ಲಿ ರಾಮಚಂದ್ರನ ಅಳಿಯ ರಾಜ್ಯ ಸ್ಥಾಪಿಸಲು ಪ್ರಯತ್ನಿಸಿ ವಿಫಲನಾದನು. ಇಲ್ಲಿಗೆ ಇವರ ಆಳ್ವಿಕೆ ಕೊನೆಗೊಂಡಿತು.

ವಿಜಯನಗರ

ಭಾರತದ ಭವ್ಯ ಹಾಗೂ ವೈವಿಧ್ಯಮಯ ಇತಿಹಾಸದ ಪುಟಗಳಲ್ಲಿ ಸುಮಾರು ೨೦೦ ವರ್ಷಗಳಿಗೂ ಹೆಚ್ಚು ಕಾಲ ಅಸ್ತಿತ್ವದಲ್ಲಿದ್ದು ವೈಭವಪೂರ್ಣವಾಗಿ ರಾಜ್ಯಭಾರ ಮಾಡಿದ ಸಾಮ್ರಾಜ್ಯವೇ ವಿಜಯನಗರ ಸಾಮ್ರಾಜ್ಯ. ಮುಸ್ಲಿಂರ ದಾಳಿ ಹೊಡೆತಗಳಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮದ ಶ್ರೀರಕ್ಷೆಯಾಗಿ ಉದಯವಾದ ಇದು ರಾಜಕೀಯ ಅಸ್ಥಿರತೆಯನ್ನು ತೊಡೆದು ಹಾಕಿದುದಲ್ಲದೆ, ಮುಸ್ಲಿಮರ ದಾಳಿಯನ್ನು ಸತತವಾಗಿ ಎರಡು ಶತಮಾನಗಳಿಗೂ ಹೆಚ್ಚು ಕಾಲ ತಡೆ ಹಿಡಿದರು. ಹದಿನಾಲ್ಕನೆಯ ಶತಮಾನದ ಆದಿಭಾಗದ ವೇಳೆಗೆ ಹೊಯ್ಸಳರು ತಮ್ಮ ರಕ್ಷಣೆಯನ್ನು ಕಳೆದುಕೊಂಡರು. ಮತ್ತು ದೇವಗಿರಿಯ ಸೇವುಣರು ಅವನತಿಯ ಹಾದಿಯಲ್ಲಿದ್ದರು. ಓರಂಗಲ್ಲಿನ ಕಾಕತೀಯರು ಇತಿಹಾಸದಿಂದ ಕಣ್ಮರೆಯಾಗಿದ್ದರು. ಇಂತಹ ಸಂದಿಗ್ಧ ಸಮಯದಲ್ಲಿ ಅಂದರೆ ಕ್ರಿ.ಶ. ೧೩೩೬ರಲ್ಲಿ ಸಂಗಮ ೫ ಮಕ್ಕಳಲ್ಲಿ ಹಿರಿಯರಾದ ಹಕ್ಕ ಮತ್ತು ಬುಕ್ಕರು ವಿದ್ಯಾರಣ್ಯ ಮುನಿಯ ಸಹಾಯದಿಂದ ಈ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇವರ ರಾಜಮುದ್ರೆ 'ಶ್ರೀ ವಿರೂಪಾಕ್ಷ' ಎಂದಾದರೆ ಇವರ ಲಾಂಛನ "ವರಾಹ"ವಾಗಿದೆ. ಕ್ರಿ.ಶ. ೧೫೬೫ ತಾಳಿಕೋಟೆಯ ಕದನದಲ್ಲಿ ಸೋಲುವವರೆಗೆ ವಿಜಯನಗರ ಪಟ್ಟಣವೇ(ಹಂಪಿ) ಇವರ ರಾಜಧಾನಿಯಾಗಿತ್ತು. ಸಂಗಮ ವಂಶದ ಮೊದಲ ದೊರೆ ಹರಿಹರ. ಇವನು ಕ್ರಿ.ಶ. ೧೩೩೬ರಿಂದ ೧೩೫೬ರವರೆಗೆ ರಾಜ್ಯವಾಳಿದನು. ಇವನ ನಂತರ ಬುಕ್ಕರಾಯ ೧೩೫೬-೧೩೭೭ರವರೆಗೆ ಆಳಿದನು. ನಂತರ ಎರಡನೆ ಹರಿಹರಿ ೧೩೭೭-೧೪೦೪ರವರೆಗೆ ನಂತರ ೧ನೇ ದೇವರಾಯ ೧೪೦೬-೧೪೨೨ರವರೆಗೆ, ನಂತರ ೨ನೇ ದೇವರಾಯನ ೧೪೨೪-೪೬ರವರೆಗೆ ರಾಜ್ಯಭಾರ ಮಾಡಿದರು. ಇವರ ಆಳ್ವಿಕೆಯ ಶಾಸನ ರಾಯಚೂರು ಜಿಲ್ಲೆಯ ಮುದಗಲ್‌ನಲ್ಲಿ ದೊರೆಯುವ ಪ್ರಥಮ (೧೪೩೬ರ) ಶಾಸನವಾಗಿದೆ. ನಂತರ ಸಾಳುವವಂಶದ ಸಾಳುವ ನರಸಿಂಹ ೧೪೮೫-೯೧ರವರೆಗೆ, ನಂತರ ತಿಮ್ಮಭೂಪ, ೨ನ ನರಸಿಂಹ ಆಳ್ವಿಕೆ ಮಾಡಿದರು. ೧೫೦೩ರಲ್ಲಿ ಈ ವಂಶ ಪತನ ಹೊಂದಿ ನಂತರ ೧೫೦೫ರಲ್ಲಿ ಇಮ್ಮಡಿ ನರಸಿಂಹ ತುಳುವ ಸಂತತಿಯನ್ನು ಆರಂಭಿಸಿದನು.

೧೫೦೩ರಲ್ಲಿ ೨ನೇ ನರಸನಾಯಕ ಕಾಲವಾದ ಮೇಲೆ ಇವನ ಮಕ್ಕಳಾದ ವೀರನರಸಿಂಹ ಕೃಷ್ಣದೇವರಾಯ ಆಳ್ವಿಕೆ ಪ್ರಾರಂಭಿಸಿದರು. ತುಳುವ ವಂಶದ ಮೊದಲ ದೊರೆಯಾಗಿ ವೀರನರಸಿಂಹ ಕ್ರಿ.ಶ. ೧೫೦೫-೧೫೨೦ರವರೆಗೆ ಆಳ್ವಿಕೆ ಮಾಡಿದನು. ಇವನ ನಂತರ ಕೃಷ್ಣದೇವರಾಯ ಪಟ್ಟಕ್ಕೆ ಬಂದನು.

ಇವನು ೧೫೧೦ರಿಂದ ೧೫೨೯ರವರೆಗೆ ರಾಜ್ಯಭಾರ ಮಾಡಿದನು. ಕೃಷ್ಣದೇವರಾಯನು ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ, ಸಮಗ್ರ ಭಾರತದ ಇತಿಹಾಸದಲ್ಲಿಯೂ ಒಬ್ಬ ಶ್ರೇಷ್ಠ ಅರಸನಾಗಿ ಮೆರೆದಿದ್ದಾನೆ. ಈತನು ವೀರಸೇನಾನಿ, ಉತ್ತಮ ಆಡಳಿತಗಾರ, ಪರಮಧರ್ಮ ಸಹಿಷ್ಣು, ಸಾಹಿತ್ಯ ಪ್ರೇಮಿ ಮಾತ್ರವಲ್ಲದೆ ಸ್ವತಃ ಸಾಹಿತಿ, ಕಲಾ ಪೋಷಕನಾಗಿದ್ದನು. ಈತನ ಆಳ್ವಿಕೆಯು ವಿಜಯನಗರದ ಇತಿಹಾಸದಲ್ಲಿ ಸುವರ್ಣಯುಗವಾಗಿದೆ. ಇವನ ಆಳ್ವಿಕೆಯ ಕಾಲದಲ್ಲಿ ರಾಯಚೂರು ಜಿಲ್ಲೆಯು ಪ್ರಮುಖ ಸ್ಥಾನ ಪಡೆದಿದೆ. ಇವನ ಆಳ್ವಿಕೆ ಕಾಲದ ಶಾಸನಗಳು ಮಾನ್ವಿ ತಾಲ್ಲೂಕಿನ ಚೀಕಲಪರ್ವಿ ಕ್ರಿ.ಶ. ೧೫೨೧ರ ಶಾಸನದಲ್ಲಿ ಕೃಷ್ಣದೇವರಾಯನು ಮಾನವೆ, ಹಾನಗಲ್ಲು ಅಲಂಪೂರು, ರಾಯಚೂರು, ಮಾಗಡೆ ದುರ್ಗಗಳನ್ನು ಗೆದ್ದು ಕೃಷ್ಣಾ ಮತ್ತು ಭೀಮಾನದಿ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಿ ತನ್ನ ಹೆಂಡತಿ ಚಿಂನಾದೇವಿ ಕೈಯಲ್ಲಿ ಗೋದಾನವನ್ನು ತಿರುಮಲದೇವಿ ಕೈಯಲ್ಲಿ ಕನಕದಾನವನ್ನು ಮಾಡಿಸಿದ ಉಲ್ಲೇಖವಿದೆ(ಕವಿಶಾಸಂ ೭, ಪು.೨೪೩) ಮತ್ತು ಸಿಂಧೂರಿನ ಸಾಲಗುಂದ ಗ್ರಾಮದ ೧೫೨೮ರ ಶಾಸನ(ಕವಿಶಾಸಂ ೭, ಪು.೩೪೮), ಕ್ರಿ.ಶ. ೧೫೩೦ರಲ್ಲಿ ಪಟ್ಟಕ್ಕೆ ಬಂದ ಅಚ್ಚುತದೇವರಾಯನ ಶಾಸನವು ಮಸ್ಕಿ ಪ್ರದೇಶದಲ್ಲಿ ದೊರೆತಿದೆ. ಈ ಭಾಗವನ್ನು ಕ್ರಿ.ಶ. ೧೫೩೭ರವರೆಗೆ ಅಚ್ಯುತರಾಯನ ಸಾಮಂತನಾಗಿ ಇಮ್ಮಡಿ ಮೇದಿನಿರಾಯನು ಆಳುತ್ತಿದ್ದುದಕ್ಕೆ ಅನೇಕ ಶಾಸನಗಳಲ್ಲಿ ಉಲ್ಲೇಖವನ್ನು ಕಾಣಬಹುದು(ಕವಿಶಾಸಂ ೭, ಪು.೧೭೦). ನಂತರ ಕ್ರಿ.ಶ. ೧೫೪೩ರಲ್ಲಿ ಸದಾಶಿವರಾಯನು ಪಟ್ಟಕ್ಕೆ ಬರುತ್ತಾನೆ. ಸಿಂಧೂರಿನ ತಾಲ್ಲೂಕಿನ ಮುಕ್ಕುಂದಿ ಗ್ರಾಮದಲ್ಲಿ ಹಾಗೂ ಮಾನ್ವಿಯಲ್ಲಿ ದೊರೆತ ಶಾಸನಗಳು ಇವನ ಆಳ್ವಿಕೆಯ ಉಲ್ಲೇಖವನ್ನು ತಿಳಿಸುತ್ತದೆ. ರಾಯಚೂರು ಪ್ರದೇಶ ಕ್ರಿ.ಶ. ೧೫೩೬ರ ಯುದ್ಧದವರೆಗೆ ವಿಜಯನಗರದ ಅರಸರ ಆಳ್ವಿಕೆಯಲ್ಲಿತ್ತು. ಕ್ರಿ.ಶ. ೧೫೬೫ರ ನಂತರ ಅದು ಬಿಜಾಪುರದ ಅರಸರ ವಶವಾಗುತ್ತದೆ.

ಮಸ್ಕಿ ಗ್ರಾಮದ ೧೫೩೦-೧೫೩೭ರ ಶಾಸನದಲ್ಲಿ ಅಚ್ಯುತರಾಯನು ರಾಜ್ಯವಾಳುತ್ತಿದ್ದಗ ಮೊಸಿಗೆ ಸೀಮೆಯ ಯೆರಯಹಲನ ಗ್ರಾಮ ತಿದಗಿಬಾವಿಯೆಂಬ ಗ್ರಾಮವನ್ನು ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೧೭೨).

ಕ್ರಿ.ಶ. ೧೫೪೭ರ ಶಾಸನದಲ್ಲಿ ಸದಾಶಿವ ಮಹಾರಾಯನು ಆಳುತ್ತಿದ್ದಾಗ ಮಾಸಿಗೆ ಸೀಮೆಗೆ ಸೇರುವ ಒಂದು ಗ್ರಾಮವನ್ನು ದಾನ ನೀಡುತ್ತಾನೆ. ಹೀಗೆ ಇವರ ಆಳ್ವಿಕೆಯಲ್ಲಿ ದೇವದುರ್ಗ ಮಾನ್ವಿ ಲಿಂಗಸೂಗೂರು, ಸಿಂಧೂನೂರು ರಾಯಚೂರನ್ನು ಒಳಗೊಂಡಂತೆ ಅನೇಕ ಗ್ರಾಮಗಳು ಇವರ ಆಳ್ವಿಕೆಗೆ ಒಳಪಟ್ಟಿದ್ದು, ಇವರ ಕಾಲದಲ್ಲಿ ಅನೇಕ ಸ್ಮಾರಕಗಳ ನಿರ್ಮಾಣವಾಗಿದೆ. ಅಲ್ಲದೇ ಅನೇಕ ಹೋರಾಟಗಳು ನಡೆದ ಉಲ್ಲೇಖವನ್ನು ನಾವು ಕಾಣುತ್ತೇವೆ.

ಬಹಮನಿ ಸಾಮ್ರಾಜ್ಯ

ಬಹಮನಿ ಸಾಮ್ರಾಜ್ಯವು ಕ್ರಿ.ಶ. ೧೩೪೭ರಲ್ಲಿ ಹಸನಗಂಗು ಎಂಬುವವನು ದೆಹಲಿ ಸೈನ್ಯವನ್ನು ಸೋಲಿಸಿ ಅಲ್ಲಾ ಉದ್ದೀನ್ ಬಹುಮನ್ ಷಹ ಎಂಬ ಬಿರುದು ಧರಿಸಿ ಸಿಂಹಾಸನವೇರಿದನು. ಇವನು

ಕ್ರಿ.ಶ. ೧೩೫೮ರವರೆಗೆ ರಾಜ್ಯವಾಳಿದ. ಇವನ ಕಾಲದಲ್ಲಿಯೇ ರಾಜ್ಯವನ್ನು ನಾಲ್ಕು ತರಫ್‌ಗಳಾಗಿ (ಪ್ರಾಂತ್ಯ) ವಿಂಗಡಿಸಿ ಕಲ್ಬುರ್ಗಿ, ಬಿದರ, ದೌಲತ್ ಬಾದ್ ಮತ್ತು ಬಿರಾರ್ ಅವುಗಳಿಗೆ ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿದನು. ರಾಯಚೂರು ಜಿಲ್ಲೆಯಲ್ಲಿ ಇವರ ಆರಂಭದ ಶಾಸನಗಳು ದೊರೆಯದಿದ್ದರೂ ಕ್ರಿ.ಶ. ೧೩೯೫ರ ಇಮ್ಮಡಿ ಮಹಮ್ಮದ್ ಷಾ ಹೆಸರಿಸುವ ಶಾಸನ ರಾಯಚೂರಿನಲ್ಲಿ ದೊರೆತಿದೆ. ಮತ್ತು ರಾಯಚೂರು ಜಿಲ್ಲೆಯ ಲಿಂಗಸೂಗೂರಿನ ತಾಲ್ಲೂಕಿನಲ್ಲಿ ಮಾನ್ವಿ, ಸಿಂಧೂರಿನ ತಾಲ್ಲೂಕುಗಳಲ್ಲಿ ಇವರ ಕಾಲದ ಶಾಸನಗಳು ಲಭ್ಯವಾಗಿವೆ. ದೇವದುರ್ಗಕ್ಕೆ ಸಂಬಂಧಿಸಿದಂತೆ ಲಿಂಗಸೂಗೂರಿನ ತಾಲ್ಲೂಕಿನ ಗೋಣೆವತ್ತಿ ಗ್ರಾಮದ ಕ್ರಿ.ಶ.೧೫೮೫ರ ಶಾಸನದಲ್ಲಿ ಬಾದುಶಹ ಸಾಹೇಬರಿಗೆ ಪುಣ್ಯವಾಗಬೇಕೆಂದು ಮುದುಗಲ್ಲ ಸೀಮೆಯ ದೇವದುರ್ಗದ ಬಳಿಯ ಕಂಬಿತೆರದೊಡಿ ಗ್ರಾಮವನ್ನು ಅಜರಜಖಾನೆ ಬೋದಾಯ ಚಂನ ಖಾನೆ ಅಜಂ ಮನಾಸುಕೆಖಾನನು ಬಾದಶಹ ಸಾಹೇಬನಿಗೆ ಪುಣ್ಯವಾಗಬೇಕೆಂದು ದೊಂಬರಬಂದಿ ಹನುಮಂತ ಮತ್ತು ಮಲ್ಲೋಜರಿಗೆ ಮಜಗೂರು ಗ್ರಾಮವನ್ನು ಇನಾಮು ಕೊಟ್ಟ ವಿಷಯವಿದೆ(ಕವಿಶಾಸಂ ೭, ಪು.೧೪೯). ಆದ್ದರಿಂದ ದೇವದುರ್ಗದ ಕೆಲವು ಸ್ಥಳಗಳು ಇವರ ಆಳ್ವಿಕೆಗೆ ಒಳಪಟ್ಟಿರಬೇಕೆಂದು ತಿಳಿದುಬರುತ್ತದೆ.

ಗಬ್ಬೂರು ಇವರ ಕಾಲದಲ್ಲಿ ಇವರ ಅಧೀನದಲ್ಲಿದ್ದ ಉಲ್ಲೇಖವು ರಾಯಚೂರಿನ ಕ್ರಿ.ಶ.೧೪೯೮-೯೯ ಅವಧಿಯ ಶಾಸನದಲ್ಲಿ ಮಲ್ಲಿಕ್ ಹಾಜಿಯು ರಾಯಚೂರು ಜಿಲ್ಲೆಯ ಗ್ರಾಮವಾದ "ಗಬ್ಬೂರ" ಗ್ರಾಮದ ಒಂಬತ್ತು ಚವರ ಭೂಮಿಯನ್ನು ಮಸೀದಿಗೆ ದಾನ ನೀಡಿದ ಉಲ್ಲೇಖವಿದೆ. ಅಂದರೆ ದೇವದುರ್ಗ ಹಾಗೂ ದೇವದುರ್ಗದ ಅನೇಕ ಗ್ರಾಮಗಳು ಬಹುಮನಿ ಸುಲ್ತಾನರಿಗೆ ಸೇರಿತ್ತೆಂಬುದು ಸ್ಪಷ್ಟವಾಗುತ್ತದೆ.

ದೇವದುರ್ಗದ ನಾಯಕರು

ದೇವದುರ್ಗ ಪ್ರದೇಶವನ್ನು ಮೌರ್ಯರು ಶಾತವಾಹನರು, ಕಲ್ಯಾಣ ಚಾಲುಕ್ಯರು, ಯಾದವರು (ಸೇವುಣರು) ಆರಂಭದಲ್ಲಿ ಈ ಪ್ರದೇಶವನ್ನು ಆಳಿದರು. ವಿಜಯನಗರ ಅರಸರ ಆಳ್ವಿಕೆಯಲ್ಲಿ ಬೇಡ ಜನಾಂಗದವರಿಗೆ ಸೈನ್ಯದಲ್ಲಿ ಮುಖ್ಯ ಹುದ್ದೆಗಳನ್ನು ನೀಡಲಾಗಿತ್ತು. ಜೊತೆಗೆ "ರಾಜಾ" ಎಂಬ ಬಿರುದನ್ನು ನೀಡಿ ಗೌರವಿಸಲಾಗಿತ್ತು. ವಿಜಯನಗರ ಸಾಮ್ರಾಜ್ಯ ಪತನಗೊಂಡ ನಂತರ ನಾಯಕರೆಲ್ಲರೂ ಸ್ವತಂತ್ರವಾಗಿ ಸುರಪುರ, ದೇವದುರ್ಗಗಳಂತಹ ಚಿಕ್ಕಪುಟ್ಟ ಸಂಸ್ಥಾನಗಳನ್ನು ಕಟ್ಟಿಕೊಂಡು ಆಳತೊಡಗಿದರು. ಇವರಲ್ಲಿ ಕೆಲವರು ವಿಜಾಪುರದ ಮಾಂಡಳಿಕರಾಗಿದ್ದರು. ಹಾಗೂ ಮುಂದೆ ಮೊಗಲ್ ಚಕ್ರವರ್ತಿಗಳಿಂದ ಗೌರವದ ಸನದುಗಳನ್ನೂ ಪಡೆದರು. ಅದರಲ್ಲಿ ದೇವದುರ್ಗದ ನಾಯಕರು ಪ್ರಮುಖರಾಗಿದ್ದಾರೆ (ದೇ.ತಾ.ದ. ಬಿ.ಟಿ.ಲಲಿತನಾಯಕ, ಪು.೮).

ದೇವದುರ್ಗದ ಈರಣ್ಣದೇವರ ದೊಡ್ಡ ಬಂಡೆಯಲ್ಲಿರುವ ಕ್ರಿ.ಶ.೧೮೯೦ರ ಶಾಸನದಲ್ಲಿ (ಶಾಲಿವಾಹನ ಶಕ ೧೬೧೨) ಅರಿಕೇರಿಯ ಗೋಪಾಲನಾಯ್ಕರ ಮಗ ತಿರುಮಲನಾಯ್ಕ ಈತನ ಮಗ ಚಿಕ್ಕ ಕೇಶವ ನಾಯ್ಕನ ಉಲ್ಲೇಖವಿದೆ. ಈತನು ವಿಜಯನಗರ ಸಾಮ್ರಾಜ್ಯದ ದಂಡನಾಯಕನಾಗಿದ್ದು, ದೇಸಾಯಿ ಮತ್ತು ಸರದೇಸಾಯಿಗಳಿಂದ ರಾಯಚೂರಿನಲ್ಲಿ ಕಪ್ಪ-ಕಾಣಿಕೆಗಳನ್ನು ಪಡೆಯುತ್ತಿದ್ದನು ಎಂದು ತಿಳಿಸುತ್ತದೆ.

ದೇವದುರ್ಗದ ಸಂಸ್ಥಾಪಕನೆನ್ನಲಾಗುವ ಕೇಶವ ನಾಯಕ(ಕೇಶವ್ವಯಗವೊಡ)ನು ನಳನಾಮ ಸಂವತ್ಸರದಲ್ಲಿ ದೇವದುರ್ಗದಲ್ಲಿ ಕೆರೆ ಕಟ್ಟಿಸಿ, ದೇವದುರ್ಗವನ್ನು ನಿರ್ಮಿಸಿದ. ಊರಿನ ಗೋವರ್ಧನ ಗೋಪಾಲಕೃಷ್ಣನ ಪ್ರತಿಷ್ಠೆ ಮಾಡಿಸಿ, ಪೇಟೆ ಕಟ್ಟಿಸಿ, ಸಂತೆ ಸೇರಿಸಿದ ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೧೧೪). ಈ ಅರಸು ಮನೆತನದವರು ಎತ್ತರದ ಕೋಟೆ, ಕೊತ್ತಲಗಳನ್ನು ಮಂದಿರಗಳನ್ನು ಉಪಯುಕ್ತವಾದ ಹಲವಾರು ಕೆರೆ ಬಾವಿಗಳನ್ನು ತೊಡಿಸಿ ಪಟ್ಟಣದ ಜನತೆಗೆ ಸೌಕರ್ಯ ಒದಗಿಸಿದ್ದರು. ಹೈದರಾಬಾದಿನ ಒಂದನೆ ಆಸಫ್ ಜಾನ್ ಕಾಲಕ್ಕೆ ದೇವದುರ್ಗ ಕಿಲ್ಲೆ ಬೇಡರ ದೊರೆಯೊಬ್ಬನ ಆಡಳಿತಕ್ಕೊಳಪಟ್ಟಿದ್ದಾಗ ಆಸಫ್ ಜಾ ಆ ದೊರೆಯ ಸಹಾಯ ಕೋರಿದ್ದನೆಂದು ತಿಳಿದುಬರುತ್ತದೆ. ಕೇಶವನಾಯ್ಕ ಕಟ್ಟಿಸಿದ ಭವ್ಯವಾದ ಅರಮನೆ ಶಿಥಿಲವಾಗಿದ್ದರೂ, ಉಳಿದ ಭಾಗ ಸೊಗಸಾಗಿದ್ದನ್ನು ಇಂದಿಗೂ ನೋಡಬಹುದಾಗಿದೆ. ಇದನ್ನು "ದರ್ಬಾರ್" ಎಂದು ಕೂಡ ಕರೆಯಲಾಗುತ್ತದೆ. ಇವನ ಕಾಲದಲ್ಲಿ ಸಂಸ್ಥಾನದ ವಾರ್ಷಿಕ ಆದಾಯ ಆ ಕಾಲಕ್ಕೆ ಮೂರು ಲಕ್ಷ ರೂಪಾಯಿಗಳಾಗಿತ್ತೆಂದು ತಿಳಿದುಬರುತ್ತದೆ. ಕೊನೆಗೆ ಇವರ ನಂತರ ಆಡಳಿತ ವಹಿಸಿಕೊಂಡ ಹೈದರಾಬಾದ್ ನಿಜಾಮನು ೧೮೫೭ರ ಹೊತ್ತಿಗೆ ದೇವದುರ್ಗ ಸಂಸ್ಥಾನವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ದೇವದುರ್ಗ ಪ್ರಮುಖ ಪಾತ್ರ ವಹಿಸಿತ್ತು ಎಂಬುದಕ್ಕೆ ಇಲ್ಲಿಯ ಸ್ವಾತಂತ್ರ್ಯ ಹೋರಾಟಗಾರ ಆದ ರಾಜಶೇಖರ ಆದಿ ಎಂಬ ವಕೀಲರು(ದೇ.ತಾ.ದ. ಬಿ.ಟಿ.ಲಲಿತನಾಯಕ, ಪು.೪). ಇವರ ಕಾಲಕ್ಕೆ ಸಂಬಂಧಿಸಿದ ದೇವದುರ್ಗದ ಕ್ರಿ.ಶ.೧೮ನೇ ಶತಮಾನದ ಶಾಸನದಲ್ಲಿ ಪವಿನಾಯಕ ಎಂಬ ಹೆಸರು ಬಂದಿದೆ(ಕವಿಶಾಸಂ ೭, ಪು.೧೧೭). ಹಾಗೂ ದೇವದುರ್ಗ ಶ್ರೀನಾಥಪ್ಪನ ಮಠದಲ್ಲಿ ವೀರಭದ್ರನ ಗುಡಿಗೆ ಸೇರಿಸಿರುವ ಶಾಸನದಲ್ಲಿ ಕೃಷ್ಣಪ್ಪನಾಯಕನ ಉಲ್ಲೇಖವಿದ್ದು, ಹಾಗೂ ಕೃಷ್ಣದೇವರ ಪಾದಪೂಜೆ ಮಾಡಿಸಬೇಕೆಂದಿದೆ(ಕವಿಶಾಸಂ ೭, ಪು.೧೧೯).

ದೇವದುರ್ಗದ ಕೊಳ್ಳಿ ರಂಗಪ್ಪನಾಯಕನೊಡನೆ ಕಾಳಗ (೧೭೯೦-೯೪)

ದೇವದುರ್ಗದ ರಂಗಪ್ಪನಾಯಕನು ಇಮ್ಮಡಿ ವೆಂಕಟಪ್ಪನಾಯಕನ ಸೋದರಮಾವನು. ದೇವದುರ್ಗ-ಚಂದನಕೇರಿ ಪಾಳೆಯಗಳು ವಾಸ್ತವವಾಗಿ ದೇವದುರ್ಗದ ದೊರೆಗಳ ಆಧೀನದಲ್ಲಿದ್ದರೂ ಶತ್ರುಗಳಿಂದ

ಈ ಭಾಗವನ್ನು ರಕ್ಷಿಸಲು ಪಾಮನಾಯಕನಿಗೆ ಕೊಡಲಾಗಿತ್ತು. ಪೀತಾಂಬರ ಪಿಡ್ಡನಾಯಕನ ಕಾಲದಲ್ಲಿ ಈ ರಂಗಪ್ಪನಾಯಕನ ಅಜ್ಜ ವಾಸುದೇವನಾಯಕನಿಗೆ ಮೊಗಲರಿಂದ ಪೀತಾಂಬರ ನಾಯಕನ ವಿರುದ್ಧ ಸಹಾಯ ಮಾಡಿದುದಕ್ಕಾಗಿ ರಾಯಚೂರು ಪ್ರಾಂತದ ಜಮೀಂದಾರಿ ಸಿಕ್ಕ ಸಂಗತಿಯೂ ವಿದಿತವೇ. ಆದರೂ ದೇವದುರ್ಗವನ್ನು ವೆಂಕಟಪ್ಪನಾಯಕನಿಗೆ ಕೊಟ್ಟಿದ್ದನು. ರಂಗಪ್ಪನಾಯಕನು ಒಪ್ಪದೇ ತಿರುಗಿಬಿದ್ದನು. ಈ ಮಧ್ಯ ಕನಕಗಿರಿಯ ನರಸಿಂಗಮ್ಮನ ಉದರದಿಂದ ಜನಿಸಿದ ಶ್ರೀನಿವಾಸನಾಯಕನ "ಜಾವಳ" ಕಾರ್ಯಕ್ರಮಕ್ಕೆ ಸೋದರಮಾವನಾದ ರಂಗಪ್ಪನಾಯಕನನ್ನೂ ಇತರ ಬಂಧು ಬಳಗವನ್ನು ಕರೆ ಕಳುಹಿಸಿದನು. ಆದರೆ ಅವರಾರೂ ಬರಲಿಲ್ಲ. ಕಾರಣವೇನೆಂದರೆ ವೆಂಕಟಪ್ಪನಾಯಕನು ಮುಸಲ್ಮಾನೀ ಸ್ತ್ರೀಯಳನ್ನು ಮದುವೆಯಾಗಿದ್ದನು. ಇದು ಈತನಿಗೆ ಇಷ್ಟವಿರಲಿಲ್ಲ. ಇದೆಲ್ಲಕ್ಕೂ ರಂಗಪ್ಪನಾಯಕನೇ ಕಾರಣನೆಂದು ಭಾವಿಸಿದ ವೆಂಕಟಪ್ಪನಾಯಕನು ಇವರಲ್ಲಿ ಜಾಗೀರು ಇನಾಮುಗಳನ್ನು ಕಸಿದುಕೊಂಡನು. ಅಲ್ಲದೆ ಸಾಸಿವಿಗೇರಿ, ಚಂದನಕೇರಿ ಮತ್ತು ದೇವದುರ್ಗದ ಪ್ರಮುಖ ಬಂಟರನ್ನು ತನ್ನಂತೆ ಮಾಡಿಕೊಂಡನು. ನಂತರ ಸುರಪುರದ ಸದರ ಬಾರಗೀರ ಗಾರಡಿಯವರು, ಶಿಲೇದಾರ, ಕೂಟಗಾರ ಮುಂತಾದ ದಂಡಿನ ಮುಖ್ಯಸ್ಥರನ್ನು ಒಟ್ಟುಗೂಡಿಸಿ, ನಿಷ್ಠವೀರಪ್ಪನ ನೇತೃತ್ವದಲ್ಲಿ ಯುದ್ಧಕ್ಕೆ ಅಣಿಯಾಗಿ ದೇವದುರ್ಗದ ರಂಗಪ್ಪನಾಯಕನನ್ನು ಸೆರೆ ಹಿಡಿದು ತರಬೇಕೆಂದು ಅಪ್ಪಣೆ ಮಾಡಿದನು. ಸುರಪುರದ ಸೈನ್ಯವು ಅಂಜಳ ಸ್ಥಳದಲ್ಲಿ ಒಂದು ದಿನ ಶಿಬಿರ ಹಾಕಿ ಮರುದಿನ ಉತ್ತರದ ನದಿ ಹರಿಯುತ್ತಿದ್ದ ಭಾಗ ಬಿಟ್ಟು ಮೂರು ಕಡೆಗಳಿಂದ ಆಕ್ರಮಣಗೈದರು. ಇತ್ತ ರಂಗಪ್ಪನಾಯಕನು ೮೦೦೦ ಸೈನ್ಯ ೫೦ ಕುದುರೆ ಇತ್ಯಾದಿಗಳ ಸಹಿತ ಕೃಷ್ಣಾ ತೀರದಲ್ಲಿರುವ ತುಮಕೂರು, ಸಮತಿನ ವಡಿಗೇರಿ, ಬೀಳ್ವಾರ, ಪುಡಪುಡಿಗಿ, ಕಂಡಳ್ಳಿ, ಬೆಂಡೆ ಬೊಮ್ಮನಹಳ್ಳಿ ಸುಲಿಗೆ ಮಾಡಿ ಅಲ್ಲಿಯ ಜನರಿಗೆ ಕಷ್ಟ ಕೊಡತೊಡಗಿದನು. ವೆಂಕಟಪ್ಪನಾಯಕನು ಅವರನ್ನು ಸಮಾಧಾನಗೊಳಿಸಿ ದೇವದುರ್ಗ ರಂಗಪ್ಪನಾಯಕನ ಮೇಲೆ ಯುದ್ಧ ಪ್ರಾರಂಭಿಸಿದನು. ರಂಗಪ್ಪನಾಯಕನ ೮೦೦೦ ಸೈನ್ಯವು ಇವರನ್ನು ಎದುರಿಸಿತು. ಅವರ ತೋಪುಗಳ ಹೊಡೆತ ಸಹಿಸಲಾಗದೆ ಕೇವಲ ಒಂದೇ ತಾಸಿನಲ್ಲಿ ಹಿಮ್ಮೆಟ್ಟಿದರು ಸುರಪುರದವರು. ಅವರ ಬೆನ್ನು ಹತ್ತಿ ದೇವದುರ್ಗವನ್ನು ಲೂಟಿ ಮಾಡಿದ ತರುವಾಯ ರಂಗಪ್ಪನಾಯಕನನ್ನು ಹುಡುಕ ಹತ್ತಿದರು. ಸೋಲಿನ ಅವಮಾನದಿಂದ ಉಳಿಯುವುದಕ್ಕಾಗಿ ರಂಗಪ್ಪನಾಯಕನು ೩ ತಾಸುಗಳವರೆಗೆ ಧೈರ್ಯದಿಂದ ಹೋರಾಡಿದನು. ಗೆಲ್ಲುವ ಆಸೆ ಕಂಡುಬರಲಿಲ್ಲ. ಈ ಸಮಯದಲ್ಲಿ ನಿರಾಸೆ ಹೊಂದಿ ರಂಗಪ್ಪನಾಯಕ ತನ್ನ ಕೈಯಲ್ಲಿದ್ದ ಕೊಳ್ಳಿಯಿಂದ ಸಿಡಿಮದ್ದಿಗೆ ಬೆಂಕಿ ಹಚ್ಚಿದಾಗ ತಾನು ತನ್ನ ಪರಿವಾರವೂ ಒಳಗೆ ಪ್ರವೇಶ ಮಾಡಲು ಬಂದ ಶತ್ರು ಸೈನಿಕರು ಎಲ್ಲರೂ ಸ್ಫೋಟಕ್ಕೊಳಗಾಗಿ ಗುರುತು ಕೂಡ ಸಿಗದೇ ಭಸ್ಮಗೊಂಡರು. ಈ ಕೃತ್ಯದಿಂದಲೇ ರಂಗಪ್ಪನಾಯಕನನ್ನು ಕೊಳ್ಳಿ ರಂಗಪ್ಪನಾಯಕನೆಂದು ಕರೆಯಲಾಗಿದೆ(ಮರೆಯಲಾಗದ ಸುರಪುರ ರಾಜರ ಚರಿತ್ರೆ, ಶ್ರೀ.ವಿ.ಕೃಷ್ಣಮಚಾರ್ಯ, ಪು.೧೧೦).

ಕರಿಗುಡ್ಡದ ಮೇಲೆ ದಾಳಿ(ಏಳು ಪಾಳ್ಯದ ಮೇಲೆ ಯುದ್ಧ) ೧೭೭೪-೭೫

ಸುರಪುರದ ನಾಯಕನು ದೇವದುರ್ಗದ ಕರಿಗುಡ್ಡದ ಮೇಲೆ ದಾಳಿ ಮಾಡಿದನು. ಸುಬೇದಾರ ವರಸಿಂಗರಾಯ ಸಬನೇಶಿ ಸೀನಪ್ಪ, ರಾಮಬಾಣದ ಝಟ್ಟರು, ಕೂಟಗಾರರು, ಗುರಕಾರ ರಾವುತ, ಘಂಟ ಚಿಮ್ಮಯ್ಯ, ವಜ್ರದಯ್ಯ, ತಳ್ಳಳ್ಳಿ ವಾಸಪ್ಪ ಇವರೆಲ್ಲರನ್ನು ಯುದ್ಧ ಒಳಗೊಂಡಿದೆ. ಸುರಪುರದ ನಾಯಕನು ಕರಿಗುಡ್ಡ, ಚಂದನ ಕೇರಿ, ಅರಿಕೇರಿಗಳನ್ನು ಸುಲಿದು ಅರಿಕೇರಿಯಲ್ಲಿದ ಬೊಕ್ಕಪ್ಪನ ತಲೆ ಕಡಿದು ಝುಂಡಕ್ಕೇರಿಸಿ, ಅರಿಕೇರಿಯನ್ನು ವಶಪಡಿಸಿಕೊಂಡು, ವಾಗಿನಗೇರಿಗೆ ಹಿಂದಿರುಗಿದನು. ನಂತರ ಕೊದ್ದಡ್ಡಿ, ಕೇದ್ಗಿಗೇರಿಯನ್ನು ಸುಲಿದ ಗಲುಗಿನ ರಾಜನಿಂದ ೬ ಸಾವಿರ ವಸೂಲು ಮಾಡಲು ಸದರು ಬಾಲ್ಗರಿಯರಿಗೊಪ್ಪಿಸಿದನು. ನಂತರ ಗೂಬ್ಬೂರು ಲೂಟಿಗೈದು ಪಾಂದುದುರ್ಗದ ದೇಶಿಪಾಂಡೆಯವರಿಂದ ೧೭೦೦ ರುಸುಮು, ಮೊಸರುಕಲ್ಲಿನ ನಾಡಿಗನನ್ನು ಕೈದು ಮಾಡಿ ದಂಡಿನ ಖರ್ಚು ೧೦ ಸಾವಿರ ತರಲು ಕೂಟಗಾರರಿಗೆ ಒಪ್ಪಿಸಿದನು. ಮೊಲದಕಲ್ಲಿನ ದೇಸಾಯಿಯಿಂದ ೧೫ ಸಾವಿರ ಜಾಲಹಳ್ಳಕ ದೊರೆಯಿಂದ ೨೦ ಸಾವಿರ ಐದುಬಾವಿಯ ರುಸಮುಗೋನವಟ್ಲ ಗುಂತುಗಳೆಯವರಿಂದ ೧೦ ಸಾವಿರ ಕೊಡುವಂತೆ ಒಪ್ಪಿಗೆ ಕಾಲೇಚೌಧರಿ ದಖನಿ ಮತ್ತು ಗಲ್ಬಾಡ್ ದಖನಿಯವರಿಗೂಪ್ಪಿಸಿ ಒಟ್ಟು ೨,೪೬,೭೪೦ ರೂ. ಏಳು ಪಾಳ್ಯದ ರಖಮು ತಂದು ತೋಪುಖಾನಿಗೆ ಸೇರಿಸಿದನು(ಮರೆಯಲಾರದ ಸುರಪುರ ರಾಜರ ಚರಿತ್ರೆ, ಶ್ರೀ.ಬಿ.ಕೃಷ್ಣಚಾರ್ಯ, ಪು.೧೪೪-೧೫೬).

ಆಡಳಿತದ ವಿಭಾಗಗಳು

ಅರಸರು ತಮ್ಮ ರಾಜ್ಯದ ಆಡಳಿತವನ್ನು ಹಿಡಿತದಲ್ಲಿಟ್ಟುಕೊಳ್ಳಲು ಅನೇಕ ಭಾಗಗಳಾಗಿ ವಿಂಗಡಿಸಿದ್ದರು. ಈ ಭಾಗಗಳಿಗೆ ಕೆಲವೊಮ್ಮೆ ನದಿ, ಬೆಟ್ಟದಂತಹ ಭೌಗೋಳಿಕ ಗಡಿಗಳೇ ಮೇರೆಯಾಗಿದ್ದವು. ಇದರೊಂದಿಗೆ ಆ ಕಾಲಕ್ಕಿದ್ದ ಪ್ರಸಿದ್ಧ ಸ್ಥಳಗಳನ್ನು ಕೇಂದ್ರಗಳನ್ನಾಗಿಸಿ ಆ ನಾಡನ್ನು ಅದೇ ಹೆಸರಿನಿಂದ ಕರೆಯುತ್ತಿದ್ದರು. ಈ ನಾಡುಗಳನ್ನು ರಾಜವಂಶದವರು ಅಥವಾ ರಾಜಪ್ರತಿನಿಧಿಗಳು, ಸಾಮಂತರು, ಆಳುವಂತೆ ನೇಮಿಸುತ್ತಿದ್ದರು. ಕೆಲವೊಮ್ಮೆ ಯುವರಾಜರು, ರಾಣಿಯರು ಇಂತಹ ಪ್ರಾಂತ್ಯಾಧಿಕಾರಿಗಳಾಗಿ ರಾಜ್ಯಭಾರ ಮಾಡುತ್ತಿದ್ದುದೂ ಉಂಟು. ಭೌಗೋಳಿಕ ಪ್ರದೇಶಗಳಿಗೆ ಯಾವುದಾದರೂ ಪ್ರಸಿದ್ಧ ಪಟ್ಟಣ ರಾಜಧಾನಿಯಾಗುತ್ತಿತ್ತು. ಇಂತಹ ಆಡಳಿತದ ಕೆಲವು ಭಾಗಗಳು ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಕಾಣಬಹುದಾಗಿದೆ.

೧. ಅಯ್ಯಣವಾಡಿ-೩೦೦

ಈ ನಾಡಿನ ಪ್ರದೇಶಗಳಾದ ಬಲ್ಲಟಗಿ, ಸುಂಕೇಶ್ವರ, ಕುರಡಿ, ಕಲ್ಲೂರು, ಗಬ್ಬೂರು ಗ್ರಾಮಗಳು ಈ ನಾಡಿಗೆ ಸೇರಿದ್ದವು. ಮಾನ್ವಿ ತಾಲ್ಲೂಕಿನ ಶಾಸನಗಳಲ್ಲಿ ಮತ್ತು ದೇವದುರ್ಗ ತಾಲ್ಲೂಕಿನ

ಶಾಸನಗಳಲ್ಲಿ ಇದರ ಉಲ್ಲೇಖವನ್ನು ಕಾಣಬಹುದು. ಕ್ರಿ.ಶ.೧೨೩೫ರ ದೇವದುರ್ಗ ತಾಲ್ಲೂಕಿನ ವೀರಗೋಟ ಗ್ರಾಮದ ಶಾಸನದಲ್ಲಿ ಯರಡ್ಡೆಯಣವಾಡಿ ನಾಡಿನ ಸೇಟಿಗಳು ಸೇರಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ನೀಡಿದ್ದಾರೆ(ಕವಿಶಾಸಂ ೭, ಪು.೯೧). ಅಂದರೆ ಇಲ್ಲಿ ಎರಡು ಅಯ್ಯಣವಾಡಿ ನಾಡುಗಳ ಉಲ್ಲೇಖ ಸ್ಪಷ್ಟವಾಗುತ್ತದೆ. ಅಯ್ಯಣವಾಡಿ-೩೦೦ ಎಂಬುದು ಗಬ್ಬೂರಿನ ಸುತ್ತಮುತ್ತಲ್ಲಿನ ಪ್ರದೇಶವನ್ನು ಸೂಚಿಸುತ್ತದೆ. ಯರಡ್ಡೆಯ್ಯಣವಾಡಿ ಎಂದಾಗ ವೀರಗೋಟದ ಸುತ್ತಮುತ್ತಲ್ಲಿನ ಪ್ರದೇಶವನ್ನು ಒಳಗೊಂಡಿದ್ದಿರಬೇಕು. ಯರಡ್ಡಣವಾಡಿನ ನಾಡು ಎಂದರೆ ಒಂದು ಅಯ್ಯಣ-೩೦೦ ಹಾಗೂ ಕರಡಿಕಲ್ಲು-೩೦೦ ಎಂಬ ಪ್ರಾಂತಗಳು ಸೇರಿ ಆ ಹೆಸರಿನಿಂದ ಸೂಚಿತವಾಗಿವೆ. ಕ್ರಿ.ಶ.೧೧೫೪ರ ಶಾಸನವು ಅಯ್ಯಣ ವಾಡಿನಾಡಿನಲ್ಲಿನ ಪಿರಿಯ ಗೊಬ್ಬೂರು ಎಂದು ಉಲ್ಲೇಖಿಸುತ್ತದೆ (ಕವಿಶಾಸಂ ೭, ಪು.೫೩). ಅಂದರೆ ಗಬ್ಬೂರು ಗ್ರಾಮವು ಅಯ್ಯಣವಾಡಿಯಲ್ಲಿ ಒಂದು ಪ್ರದೇಶವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಗೊಬ್ಬೂರು ಗ್ರಾಮದ ೧೦೮೫ರ ಶಾಸನದಲ್ಲಿ ಅಯ್ಯಣವಾಡಿ ನಾಡಿನಲ್ಲಿ ಪ್ರಸಿದ್ಧವಾದ ಗೋಪುರಗ್ರಾಮ ಎಂದು ಉಲ್ಲೇಖವಿದೆ. ಹಿರೇರಾಯ ಕುಂಪಿ ಗ್ರಾಮದ ಕ್ರಿ.ಶ.೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅಹಿಹಯ ವಂಶದವನಾದ ಅಣ್ಣಲದೇವನ ಸೇವಕನಾದ ಪೇರ್ಮಾಡಿದೇವನು ಅಯ್ಯಣವಾಡಿ ನಾಡನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ(ಕವಿಶಾಸಂ ೭, ಪು.೯೦). ಕ್ರಿ.ಶ.೧೦೯೭ರ ಮಾನ್ವಿ ತಾಲೂಕಿನ ಸುಂಕೇಶ್ವರ ಗ್ರಾಮದ ಶಾಸನದಲ್ಲಿ ಚಾಲುಕ್ಯ ತ್ರಿಭುವನಮಲ್ಲದೇವರ ಆಳ್ವಿಕೆಯಲ್ಲಿ ನೊಳಂಬ ಪಲ್ಲವ ಪೆರ್ಮಾಡಿ ಉದಯಾದಿತ್ಯ ದೇವನು ಅಯ್ಯಣ ವಾಡಿಯನ್ನು ಆಳುತ್ತಿದ್ದನೆಂದು ತಿಳಿಸಿದೆ(ಕವಿಶಾಸಂ ೭, ಪು.೨೫೦). ಕಲ್ಲೂರಿನ ಕ್ರಿ.ಶ.೧೧೫೧ ಶಾಸನದಲ್ಲಿ ಅಯ್ಯಣ ವಾಡಿಯ ಹೆಗ್ಗಡಿ ಮತ್ತು ದಂಡನಾಯಕನಾದ ಸುರಿಗೆ ವೆಣ್ಣಮರಸನು ಮತ್ತು ಮಹಾಮಂಡಳೇಶ್ವರನಾದ ಬೂಚಿ ದೇವರಸರು ಸೇರಿ ಕಲ್ಲೂರಿನ ಮಾರಟೇಶ್ವರ ದೇವರ ಅಂಗಭೋಗಕ್ಕೆ ನಂದಾದೀವಿಗೆಗೆ ದಾನ ಬಿಟ್ಟ ಉಲ್ಲೇಖವನ್ನು ಕಾಣುತ್ತೇವೆ(ಕವಿಶಾಸಂ ೭, ಪು.೨೮೯).

೨. ಎಡದೊರೆ-೨೦೦೦

ಎಡದೊರೆ ಹೆಸರಿನ ಇನ್ನು ಕೆಲವು ವಿಭಾಗಗಳು ಪ್ರಾಚೀನ ಕರ್ನಾಟಕದಲ್ಲಿ ಆಡಳಿತ ವಿಭಾಗಗಳಾಗಿದ್ದುದು ಶಾಸನಗಳಿಂದ ತಿಳಿಯುತ್ತದೆ. ಮತ್ತು ಎಡದೊರೆ ಎನ್ನುವ ಶಬ್ದವನ್ನು ಸಾಮಾನ್ಯವಾಗಿ ಅರ್ಥೈಸಿದಾಗ ಎಡ ಮತ್ತು ತೊರೆ ಎಂದು ಬಿಡಿಸಿದಾಗ ಎಡ ಎಂದರೆ ಎಡಭಾಗ ಎಂದು ಅರ್ಥೈಸುತ್ತಾರೆ. ಆದರೆ ಎರಡು+ತೊರೆ=ಎರಡುತೊರೆ ಎಡತೊರೆ ಅಂದರೆ ಎರಡು ನದಿಗಳ ಮಧ್ಯದ ಪ್ರದೇಶದ ಭಾಗಗಳಂದು ಅರ್ಥೈಸಬೇಕಾಗುತ್ತದೆ. ಮುಂದೆ ಬಳಕೆಯಲ್ಲಿ ಈ ಭಾಗವನ್ನು ದೋ-ಆಬ್ ಎಂದು ಕರೆದಿರುವುದನ್ನು ಗಮನದಲ್ಲಿಟ್ಟುಕೊಂಡಲ್ಲಿ ಎರಡು ತೊರೆಯ ಮಧ್ಯದ ಪ್ರದೇಶವನ್ನು ಎಡದೊರೆ ೨೦೦೦ ಎಂದು ಅರ್ಥೈಸುವುದು ಸೂಕ್ತವಾಗಿದೆ. ಈ ಮೇಲಿನ ಸಂಖ್ಯಾ ಪ್ರದೇಶಗಳಾದ ಮೊಸಳಿಕಲ್ಲು

೩೦೦, ಕುದಿಯ ಪರವಿ-೨೦, ಸಾಗ-೩೦೦, ಆಯಜ್ಯ-೩೦೦, ಕೆಳವಾಡಿ ೩೨೦, ಕರಡಿಕಲ್ ೩೦೦, ಅತ್ತಿನೂರು-೮೦, ಮಂಚಾಲ-೩೬, ತೆಕ್ಕೆಕಲ್ಲು-೧೨, ನೆಲ್ಲುಡಿ-೧೧, ಮಾಸವಾಡಿ-೧೪೦, ಕುಕನೂರು-೩೦, (ಎಡೆದೊರೆನಾಡು, ಡಾ.ಚನ್ನಬಸವ ಹಿರೇಮಠ, ಪು.೩) ಎಡೆದೊರೆನಾಡು ಮುಂತಾದ ನಾಡುಗಳು ಸೇರಿಸಿದಾಗ ಎಡದೊರೆ-೨೦೦೦ ಸಂಖ್ಯೆ ಆಗುತ್ತದೆ. ತುಂಗಭದ್ರ ಕೃಷ್ಣಾ ನದಿಯ ಸಂಗಮದವರೆಗಿನ ಭಾಗಗಳು ಎಡದೊರೆ ೨೦೦೦ದಲ್ಲಿ ಅಂತರ್ಗತವಾಗಿವೆ.

ಎಡದೊರೆ ೨೦೦೦ದ ಉಲ್ಲೇಖ ರಾಷ್ಟ್ರಕೂಟರ ಅರಸ ಅಕಾಲವರ್ಷನ ಶಾಸನದಲ್ಲಿ ಬಂದಿದೆ. ಆಗ ಜಗತುಂಗನು ಎಡದೊರೆ ೨೦೦೦ವನ್ನು ಆಳುತ್ತಿದ್ದ. ಗಬ್ಬೂರಿನ ಗ್ರಾಮದ ಕ್ರಿ.ಶ.೧೦೮೪ರ ಶಾಸನದಲ್ಲಿ ಚಾಳುಕ್ಯ ತ್ರಿಭುವನಮಲ್ಲ ರಾಜ್ಯಭಾರ ಮಾಡುತ್ತಿದ್ದಾಗ ಮಹಾಮಂಡಳೇಶ್ವರನಾದ ಜೋಯಿಮರಸನು ಎಡೆದೊರೆ-೨೦೦೦ ಪ್ರಾಂತವನ್ನು ಆಳುತ್ತಿದ್ದನು ಎಂದು ಉಲ್ಲೇಖಿಸುತ್ತದೆ(ಕವಿಶಾಸಂ ೭, ಪು.೮೮). ಚಾಳುಕ್ಯ ಜಗದೇಗಮಲ್ಲನ ಹೆಂಡತಿ ಸೋಮಲದೇವಿ ೧ನೆಯ ಸೋಮೇಶ್ವರನ ಪತ್ನಿ ಚಾಮಲದೇವಿ, ತ್ರಿಭುವನ ಮಲ್ಲ ತಮ್ಮ ದಸವರ್ಮ ಮುಂತಾದವರು ಈ ರಾಜ್ಯದ ಕೆಲವು ಭಾಗಗಳನ್ನು ಆಳಿದ್ದಾರೆ. ಈಗಿನ ಮಾನ್ವಿ ಮತ್ತು ಸಿಂಧೂನೂರು ದೇವದುರ್ಗ ತಾಲ್ಲೂಕಿನ ಗಬ್ಬೂರು, ಭೋಗಾವತಿ, ಬಲ್ಲಟಗಿ, ಮೂಡಶಿರವಾರ, ನುಗಡೋಣಿ, ಅತ್ತನೂರು, ಹರಪ, ದೇವರಗುಡಿ, ಕಲ್ಲೂರು, ಸಾಲುಗುಂದೆ ಲಿಂಗಸೂಗೂರಿನ ಕರಡಿಕಲ್ ಅಂದು ಈ ನಾಡಿನ ಮುಖ್ಯ ಗ್ರಾಮಗಳಾಗಿದ್ದವು.

೩. ಮೊಸಳಿಕಲ್-೩೦೦

ಕ್ರಿ.ಶ.೧೦೩೬ರ ಶಾಸನದಲ್ಲಿ ಈ ಜಿಲ್ಲೆಯಲ್ಲಿ ಮೊದಲಿಗೆ ಈ ನಾಡಿನ ಉಲ್ಲೇಖ ಬಂದಿದೆ. ಎಡದೊರೆ-೨೦೦೦ದ ಭಾಗವಾಗಿ ಮಾಸಳಿಕಲ್ -೩೦೦ ಇತ್ತೆಂಬ ಅಂಶ ಇದರಿಂದ ತಿಳಿಯುತ್ತದೆ. ಮಾನ್ವಿ ತಾಲ್ಲೂಕಿನ ಕ್ರಿ.ಶ.೧೦೩೬ರ ಶಾಸನ ಕ್ರಿ.ಶ.೧೦೮೯ರ ಕಪಗಲ್ ಶಾಸನ, ಕ್ರಿ.ಶ.೧೦೭೬ರ ಸಿರವಾರ ಶಾಸನಗಳು ಈ ನಾಡನ್ನು ಉಲ್ಲೇಖಿಸುತ್ತವೆ. ದೇವದುರ್ಗ ಪ್ರದೇಶದ ಪಕ್ಕದ ನಾಡಾಗಿ ಇದು ಉಲ್ಲೇಖಿಗೊಂಡಿದೆ. ತ್ರೈಲೋಕ್ಯಮಲ್ಲ ಇವನ ಮಗ ಭುವನೈಕಮಲ್ಲ ಇವನ ತಮ್ಮ ವಿಕ್ರಮಾದಿತ್ಯನ ಕಾಲದಲ್ಲಿ ಈ ನಾಡಿನ ಉಲ್ಲೇಖವಿದೆ. ಈ ನಾಡಿನಲ್ಲಿದ್ದ ಪ್ರಸಿದ್ಧ ಅಗ್ರಹಾರ ಬಳ್ಳನಿಟ್ಟಿಗೆಯಲ್ಲಿ ಜಯಸಿಂಹನ ಪತ್ನಿ ಸೋಮಲದೇವಿ, ೧ನೆಯ ಸೋಮೇಶ್ವರನ ಪತ್ನಿ ಚಾಮಲಾದೇವಿ ಭುವನೈಕಮಲ್ಲನ ಹೆಂಡತಿ ಪಂಪಾದೇವಿಯರು ದೇವಾಲಯಗಳಿಗೆ ದಾನಗಳನ್ನು ನೀಡಿದ್ದಾರೆ.

೪. ಮುದಗುಂದೂರು-೩೦೦

ಕಲ್ಯಾಣಿ ಚಾಲುಕ್ಯ ವಿಕ್ರಮಾದಿತ್ಯನ ಆಳ್ವಿಕೆಯ ಶಾಸನದಲ್ಲಿ(ಕ್ರಿ.ಶ.೧೧೨೪) ಈ ನಾಡಿನ ಉಲ್ಲೇಖ ಮೊದಲಿಗೆ ಬಂದಿದೆ. ಈ ಶಾಸನದಲ್ಲಿ ಸೇದೊರೆ ಮೇಳನಾಯಕನೆಂಬುವವನ ವರ್ಣನೆ ಬಂದಿದೆ.

ಕ್ರಿ.ಶ.೧೧೩೪ರ ಶಾಸನದಲ್ಲಿ ಮುದಗುಂದೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹೈಹೇಯ ವಂಶದ ಬಾಚಿದೇವ ಆಳುತ್ತಿದ್ದಂತೆ ಹೇಳಿದೆ. ಕ್ರಿ.ಶ.೧೧೩೦ರ ಶಾಸನದಲ್ಲಿ ಪೇರ್ಮಾಡಿದೇವನು ಅಯ್ಯಣವಾಡಿನಾಡನ್ನು ಆಳುತ್ತಿದ್ದಾಗ ಮುದ್ದನೂರಿನ ಬಳಿ ರಾಕುರ್ಪ್ಪ(ರಾಯಕುಂಪಿ)ಯಲ್ಲಿ ಜಯರಾಮ ಎಂಬುವನು ಮಾಡಿಸಿದ ದೇವಾಲಯ ಕಾರ್ಯಗಳಿಗಾಗಿ ಧರಣಿ ದೇವನ ಕೊಲಿನಲ್ಲಿ ೪೦ ಮತ್ತರ ಹೊಲ ತೋಟ ಮುಂತಾದವನ್ನು ನೀಡುತ್ತಾನೆ(ಕವಿಶಾಸಂ ೭, ಪು.೯೦). ಮುದಗುಂದೂರು-೩೦೦ ಎಂಬುದು ಅಯ್ಯಣವಾಡಿ ನಾಡಿನ ಪೂರ್ವಕ್ಕೆ ಇದ್ದ ಪ್ರದೇಶ ಎಂಬುದು ರಾಯಚೂರು ಶಾಸನದಿಂದ ವಿದಿತವಾಗುತ್ತದೆ.

ಗಬ್ಬೂರಿನ ಕ್ರಿ.ಶ.೧೦೮೪ರ ಶಾಸನದಲ್ಲಿ ಮಹಾಮಂಡಳೇಶ್ವರ ಜೋಯಿಮರಸನು (ಮುದಗುಂದೂರಿನ-೩೦೦) ಗಬ್ಬೂರ ಕಲಿದೇವ ಸ್ವಾಮಿಯ ಪೂಜಾವಿಧಾನಕ್ಕೆ ದೇಗುಲದ ಖಂಡ ಸ್ಫುಟಿತ ನವಕರ್ಮಕ್ಕೆಂದು ಮುದಗುಂದೂರಿನ-೩೦೦ರ ಬಳಿಯ ಗ್ರಾಮವಾದ ಹಳ್ಳಸಿಂತೆಯನ್ನು ಧರ್ಮವಾಗಿ ಬಿಟ್ಟ ಉಲ್ಲೇಖವಿದೆ. ಪೇರ್ಮಾಡಿದೇವನು ಮುದಗುಂದೂರಿನ ಬಳಿ ಜಯರಾಮ ಎಂಬುವನು ಮಾಡಿಸಿದ ದೇವಾಲಯದ ಕಾರ್ಯಗಳಿಗಾಗಿ ಧರಣಿ ದೇವನ ತೋಟ ಮುಂತಾದವನ್ನು ನೀಡುತ್ತಾನೆ. ಅದೇ ಕ್ರಿ.ಶ.೧೦೮೪ರ ಗಬ್ಬೂರಿನ ಹಂಪಯ್ಯ ಬಾವಿಯ ಬಳಿ ಇರುವ ಶಾಸನದಲ್ಲಿ ಮಹಾಸಾಮಂತ ಬಸವದೇವನ ಭಿನ್ನಪದಂತೆ ಸಾಮಂತನಾದ ಚಂದ್ರರಸ ಇವನ ತಮ್ಮ ಅಣ್ಣಲದೇವ ಈ ಅಣ್ಣತಮ್ಮಂದಿಬ್ಬರೂ ಕೂಡಿ ಜಿನದೇವರ ಅರ್ಚನೆಗಾಗಿ ಗೊಬ್ಬೂರ ಮಾಲಿಗರು ಮಹಾಜನರು ಮುದಗುಂದೂರಿನ ಮೂಲಿಗದರೆ ಮತ್ತು ಬೆಳೆದೆರೆಯನ್ನು ದಾನ ಬಿಟ್ಟಂತೆ ಉಲ್ಲೇಖಿಸುತ್ತದೆ. ಈ ಶಾಸನಗಳು ಗಬ್ಬೂರು ರಾಯಕುಂಪಿಯಲ್ಲಿ ದೊರೆತಿರುವ ಸ್ಥಳಗಳನ್ನು ಗಮನಿಸಿದಾಗ ಈ ಪ್ರದೇಶವು ದೇವದುರ್ಗ ತಾಲ್ಲೂಕಿನಲ್ಲಿ ಇರಬಹುದೆಂದು ಊಹಿಸಬಹುದಾಗಿದೆ. ಇದರ ರಾಜಧಾನಿ ಮುದಗುಂದೂರು ಆಗಿದೆ. ಈ ಮುದಗುಂದ ಯಾವುದೆಂಬುದನ್ನು ಗುರುತಿಸಲು ಕಷ್ಟವಾಗಿದೆ.

೫. ಕರಡಿಕಲ್ಲು-೩೦೦

ಕರಡಿಕಲ್ಲು ಕದಂಬ ಅರಸರ ಒಂದು ಶಾಖೆಯ ರಾಜಧಾನಿಯಾಗಿತ್ತು. ದೇವದುರ್ಗದ ತಾಲ್ಲೂಕಿನ ವೀರಗೋಟ ಗ್ರಾಮದ ಕ್ರಿ.ಶ.೧೨೨೩ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ ಮಹಾಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ಕರಡಿಕಲ್ಲನಾಡ ಸೆಟ್ಟಿಗುತ್ತ ಸೇಣಿಸಟ್ಟಿ, ಹಗರಟಿಗೆಯಸೆಟ್ಟಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ನೀಡುತ್ತಾರೆ (ಕವಿಶಾಸಂ ೭, ಪು.೯೮). ಈ ನಾಡು ಬಹುತೇಕವಾಗಿ ಲಿಂಗಸೂಗೂರಿನ ಪಶ್ಚಿಮ ಭಾಗದಲ್ಲಿದ್ದಿರಬಹುದು. ಈಗಿನ ಲಿಂಗಸೂಗೂರು ಈ ನಾಡಿಗೆ ಸೇರಿತ್ತು. ಹಾಗೂ ಈ ನಾಡಿನಲ್ಲಿ ಮುಖ್ಯ ಗ್ರಾಮಗಳೆಂದರೆ ಹಿರಿಯ ಹೆಸರೂರು, ಕರಡಿಕಲ್ಲು, ಜಲದುರ್ಗ, ಮತ್ತು ನವಿಲೆ, ಈ ಗ್ರಾಮವು ಪ್ರಸಿದ್ಧವಾದ ತೀರ್ಥಕ್ಷೇತ್ರವಾಗಿತ್ತು.

೬. ಹರಳ-೧೨

ದೇವದುರ್ಗ ತಾಲ್ಲೂಕಿನ ವೀರಗೋಟ ಗ್ರಾಮದ ಕ್ರಿ.ಶ.೧೨೨೩ರ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ ಮಹಾ ಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ವ್ಯಾಪಾರಿ ಸಂಘಗಳಾದ ಯೆರಡ್ಡೈಯಣ ವಾಡಿನಾಡಿನ ಶೆಟ್ಟಿಗಳೂ, ಕರಡಿಕಲ್ಲು ನಾಡ ಶೆಟ್ಟಿಗಳು ಸೇರಿ ಮಹಾನಾಡಾಗಿ ಹರಳಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ನೀಡುತ್ತಾರೆ(ಕವಿಶಾಸಂ ೭, ಪು.೯೮). ಇದನ್ನು ಹರಳ ಹನ್ನೆರಡರ ಪಳ್ಳಿ ಎಂದು ಕರೆಯಲಾಗಿದೆ.

೭. ಕಲ್ಲಕೆಳಗೈನೂರು ಅಥವಾ ಕಲ್ಲಕೆಳಗೆ-೫೦೦

ದೇವದುರ್ಗ ತಾಲ್ಲೂಕಿನ ಗಬ್ಬೂರ ಗ್ರಾಮದ ಕ್ರಿ.ಶ.೧೦೮೪ರ ಶಾಸನದಲ್ಲಿ ಚಾಳುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಜೋಯಿಮಯ್ಯರಸನಿರುತ್ತಾನೆ. ಇವನು ಎಡದೊರೆ ಎರಡು ಸಾವಿರ ಕಲ್ಲಕೆಳಗೈಯರು ಪ್ರಾಂತ್ಯಗಳನ್ನು ಆಳುತ್ತಿದ್ದಾಗ ಗೊಬ್ಬರು ಕಲಿದೇವಸ್ವಾಮಿಯ ಪೂಜಾ ವಿಧಾನಕ್ಕೆ ಮುಗುಂದೂರ-೩೦೦ರ ಬಳಿಯ ಗ್ರಾಮವಾದ ಹಳ್ಳಸಿಂತೆಯನ್ನು ಧರ್ಮವಾಗಿ ಬಿಟ್ಟ ಉಲ್ಲೇಖವಿದೆ(ಕವಿಶಾಸಂ ೭, ಪು.೮೮).

೮. ಕುಂದರಗೆ-೭೦

ಕ್ರಿ.ಶ.೧೦೨೭ರ ಶಾಸನದಲ್ಲಿ ಈ ನಾಡಿನ ಉಲ್ಲೇಖ ಬಂದಿದೆ. ಈ ನಾಡನ್ನು ತ್ರೈಲೋಕ್ಯಮಲ್ಲ ನಾಮಾದಿ ವಿಜಯಾದಿತ್ಯದೇವನೆಂಬುವವನು ಕುಂದರಗೆ-೭೦ ಬಳಿಯ ಕಟ್ಟಿಗೆಗೆ ದಕ್ಷಿಣ ದಿಕ್ಕಿನ ಮೊರಗನೂರನಿಂದ ಆಳುತ್ತಿದ್ದಂತೆ ಹೇಳಿದೆ. ದೇವದುರ್ಗದ ಕ್ರಿ.ಶ.೧೦೮೫ರ ಶಾಸನದಲ್ಲಿ ಮಹಾಮಂಡಳೇಶ್ವರ ಜೋಯಿರಸನು ಈ ಪ್ರದೇಶವನ್ನು ಆಳುತ್ತಿದ್ದಂತೆ ತಿಳಿಯುತ್ತದೆ. ಎಡದೊರೆ-೨೦೦೦ ಪಕ್ಕದಲ್ಲಿ ಈ ನಾಡಿದ್ದಿರಬೇಕು.

ಕೆಲವು ಮುಖ್ಯ ಅಧಿಕಾರಿಗಳು

ರಾಜ್ಯಾಡಳಿತವು ಸುಗಮವಾಗಿ ಸಾಗಲು ಅರಸನಷ್ಟೇ ಅಲ್ಲದೆ ಅವನ ಕೈಕೆಳಗಿನ ಅಧಿಕಾರಿಗಳೂ ಕಾರಣರಾಗಿರುತ್ತಾರೆ. ಇವರು ವಂಶಪಾರಂಪರ್ಯ ಮಾಂಡಳಿಕರಲ್ಲ, ಅಧಿಕಾರದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇವರು, ಸೈನ್ಯಾಧಿಕಾರಿಗಳಾಗಿ ದಂಡನಾಯಕರಾಗಿ, ಸುಂಕದ ವಸೂಲಿಗಾರರಾಗಿ ಕಾರ್ಯ ನಿರ್ವಹಿಸುತ್ತಾರೆ. ಹೀಗೆ ವಿವಿಧ ಅಧಿಕಾರಗಳಲ್ಲಿದ್ದು ದೇವಾಲಯ ನಿರ್ಮಾಣ, ಛತ್ರಗಳ ನಿರ್ಮಾಣ, ಬಾವಿಗಳ ನಿರ್ಮಾಣ ಮುಂತಾದ ಜನೋಪಯೋಗಿ ಕೆಲಸಗಳನ್ನು ಮಾಡಿರುತ್ತಾರೆ. ಈ ನಿರ್ಮಾಣಗಳಲ್ಲಿ ಅನೇಕವು ಇಂದಿಗೂ ಅಸ್ತಿತ್ವದಲ್ಲಿವೆ.

ಹಿರೇರಾಯಕುಂಪಿ ಗ್ರಾಮದ ಕ್ರಿ.ಶ.೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಮಂತ್ರಿಯಾದ ದೇವರಾಜನ ಉಲ್ಲೇಖ ಬಂದಿದೆ. ಈತನು ಅನೇಕ ಕೆರೆ ದೇವಾಲಯಗಳನ್ನು ಕಟ್ಟಿಸಿದಂತೆ ಶಾಸನ ತಿಳಿಸುತ್ತದೆ. ಮುಂದೆ ಗಬ್ಬೂರು ಗ್ರಾಮದ ೧೧೪೯ರ ಶಾಸನದಲ್ಲಿ ಚಾಂವುಡರಾಯನ ವರ್ಣನೆ ಬಂದಿದೆ. ಶಾಸನ ಮುಂದುವರಿದು ಮಲ್ಲಿಯಕ್ಕನ ಮಗನಾದ ಮಲ್ಲದೇವನ ಕೈಯಲ್ಲಿ ಪ್ರಥಮ ದ್ವಿತೀಯ ನಿವೇಶನಗಳ ಸಮೇತ ತೋಟವೊಂದನ್ನು ಕೇಶವ ದೇವರ ಪೂಜೆ ಪುನಸ್ಕಾರಕ್ಕೆ ದಾನವಾಗಿ ನೀಡುತ್ತಾರೆ. ಹಾಗೂ ಜತಪ್ಪನೆಂಬುವನು ಎರಡು ದೇವರಿಗೆ ಒಂದು ದೊಡ್ಡ ನಿವೇಶನವನ್ನು ನೀಡುತ್ತಾನೆ (ಕವಿಶಾಸಂ ೭, ಪು.೯೦). ಮುಂಡರಗಿ ಶಾಸನದಲ್ಲಿ ಲಿಂಗಪ್ಪದೇವ ಎಂಬುವವನು ಗುಡಿಯನ್ನು ಕಟ್ಟಿಸಿ ಮುಂಡರಗಿ ಭೂಮಿಯನ್ನು ದೇವರ ಫಲಕಾರ್ಯಕ್ಕಾಗಿ ಬಿಟ್ಟ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೨). ಶ್ಯಾವಂತಗಲ್ ಶಾಸನದಲ್ಲಿ ತಿಮ್ಮನಗೌಡನು ತಿಮರಸನಿಗೆ ಭೂಮಿ ದಾನ ಮಾಡಿದ ವಿಷಯವಿದೆ(ಕವಿಶಾಸಂ ೭, ಪು.೧೦೪). ಕ್ಯಾದ್ಗಿಗೇರಾ ಶಾಸನದಲ್ಲಿ ಹೋಬೋಜನ ಮಗನಾದ ಮುದಕಪನ್ನ ಹೆಸರಿಸುತ್ತದೆ. ಚಂದನಕೇರಿಯ ಕ್ರಿ.ಶ.೧೧ ಶತಮಾನದ ಶಾಸನದಲ್ಲಿ ಹೆಜ್ಜುಂಕ ಬಿಲ್ಕೊಡೆಯ ಅಧಿಕಾರಿಗಳ ಮತ್ತು ಸೋಮೇಶ್ವರದೇವರ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೭). ದೇವದುರ್ಗದ ಕ್ರಿ.ಶ.೧೮ನೇ ಶತಮಾನದ ಶಾಸನದಲ್ಲಿ ಚಂದನ ಕೇರಿ ಗುರು ಕೃಷ್ಣಯ್ಯನ ಮತ್ತು ಪದಿನಾಯಕ, ಚನಬಸವಣ್ಣ, ಕೃಷ್ಣಪ್ಪನಾಯಕ, ದೊಡ್ಡಬಸಪ್ಪ ಮುಂತಾದವರ ಉಲ್ಲೇಖವಿದೆ(ಕವಿಶಾಸಂ ೭, ಪು.೧೧೦).

ಕ್ರಿ.ಶ.೧೦೮೫ರ ಶಾಸನದಲ್ಲಿ ತ್ರಿಭುವನಮಲ್ಲ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಚಂದ್ರರಸನಿರುತ್ತಾನೆ. ಇವನನ್ನು ಶಾಸನದಲ್ಲಿ ಪ್ರತಾಪ ಲಂಕೇಶ್ವರ, ಪ್ರಳಯ ಭೈರವ, ಪರಾಕ್ರಮ ಕಂಠೀರವ, ಸಾಹಸ ವೈನತೇಯಂ ಮುಂತಾದ ವಿಶೇಷಣಗಳಿಂದ ಹೊಗಳಲಾಗಿದೆ(ಕವಿಶಾಸಂ ೭, ಪು.೮೮). ಗಬ್ಬೂರಿನ ಕ್ರಿ.ಶ.೧೦೮೫ರ ಇನ್ನೊಂದು ಶಾಸನ ಚಂದ್ರರಸನ ಬದಲಾಗಿ ಜೋಯಿಮಯ್ಯರಸನು ಈ ಗ್ರಾಮದ ಅಧಿಕಾರಿಯಾಗಿ ಬಂದಿದ್ದನು. ಚಾಳುಕ್ಯ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾ ಮಂಡಳೇಶ್ವರನಾಗಿ ಜೋಯಿಮಯ್ಯರಸನಿರುತ್ತಾನೆ. ಇವನನ್ನು ಶಾಸನದಲ್ಲಿ ಮದನ ಮಹೇಶ್ವರ ಅಭಿನವ ಚಾರದತ್ತ ಉಭಯ ಬಳಕರಣಾಚಾರ್ಯ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಗಬ್ಬೂರಿನ ಕ್ರಿ.ಶ.೧೨೧೪ರ ಶಾಸನದಲ್ಲಿ ಯಾದವ ಸಿಂಹಣನ ಕಾಲದಲ್ಲಿ ದಂಡನಾಯಕನಾದ ಲಕ್ಷ್ಮೀದೇವನು ಆಳುತ್ತಿದ್ದು ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ ಹಾಗೂ ನೇರುಡಿಗೆ ಗ್ರಾಮವನ್ನು ನೀಡಿದನೆಂದು ತಿಳಿಯುತ್ತದೆ(ಕವಿಶಾಸಂ ೭, ಪು.೬೧). ರಾಯಕುಂಪಿಯ ಕ್ರಿ.ಶ.೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ವೀರ ಪೆರ್ಮಾಡಿ ದೇವನು ಇರುತ್ತಾನೆ. ಇವನು ಅಯ್ಯಣವಾಡಿ ನಾಡನ್ನು ಆಳುತ್ತಿದ್ದಂತೆ ತಿಳಿಸಿದೆ(ಕವಿಶಾಸಂ ೭, ಪು.೯೧). ನಿಲವಂಜಿ ಗ್ರಾಮದ ಕ್ರಿ.ಶ. ೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮನು ರಾಜ್ಯಭಾರ ಮಾಡುತ್ತಿದ್ದಾಗ

ಇವನ ಮಹಾಮಂಡಳೇಶ್ವರನಾಗಿ ಹಿರಿಯ ಮಲ್ಲರಸನಿರುತ್ತಾನೆ. ಇವನನ್ನೆ ಶಾಸನದಲ್ಲಿ ಗಂಗಾತೀರ ಪಾರಿಯಾತ್ರ ತನುಮಧ್ಯ ದೇಶಾಧೀಶ್ವರ, ಮಾಹಿಷ್ಮತೀ ಪುರವರಾಧೀಶ್ವರ, ಸಹಸ್ರಬಾಹು ಪ್ರತಾಪ, ಮಾಲೆಪರ ಘೋಷಣ ಮುಂತಾಗಿ ವರ್ಣಿಸಿದೆ. ಇವನ ನಿಲ್ಲಜಿಗೆಯ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಮುಂದೆ ಮಂಡಳೇಶ್ವರ ಅಯ್ಯರಸನು ಕರೆಕಂಠ ದಂಡಿತರಿಗೆ ೧೨ ಮತ್ತರ ಭೂಮಿ ನೀಡುತ್ತಾನೆ. ಚಂದನಕೇರಿಯ ಕ್ರಿ.ಶ.೧೨ನೇ ಶತಮಾನದ ಶಾಸನದಲ್ಲಿ ಮಂಡಳೇಶ್ವರ ಹೆಮ್ಮಡಿ ದೇವರಸನು ತಾನು ಪ್ರತಿಷ್ಠೆ ಮಾಡಿದ ಹೆಮ್ಮೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೯೪).

ಈ ರೀತಿಯಾಗಿ ಶಾಸನಗಳಲ್ಲಿ ಸಾಮಂತರು, ಮಹಾಮಂಡಳೇಶ್ವರರೂ ದಂಡನಾಯಕರುಗಳ ಹೆಸರು ಬಂದಿದ್ದು, ಇವರನ್ನು ಅನೇಕ ವಿಶೇಷಣಗಳಿಂದ ಹೊಗಳಲಾಗಿದೆ ಹಾಗೂ ಇವರು ಮಾಡಿದ ಕಾರ್ಯದ ಉಲ್ಲೇಖ ಕಂಡುಬರುತ್ತದೆ. ದೇವದುರ್ಗ ಪ್ರದೇಶದಲ್ಲಿ ಬ್ರಾಹ್ಮಣ ಪ್ರಭಾವಿತ ಪ್ರದೇಶವಾದರಿಂದ ಇಲ್ಲಿ ಅಧಿಕಾರಿಗಳಿಗಿಂತ ಸ್ಥಳದ ಬ್ರಾಹ್ಮಣರೇ ಹೆಚ್ಚಾಗಿ ಉಕ್ತವಾಗಿದ್ದಾರೆ. ಅಂತಹ ಬ್ರಾಹ್ಮಣರ ಹೆಸರುಗಳನ್ನು ಇಲ್ಲಿ ನೋಡಬಹುದು. ಜನ್ನಯ್ಯಭಟ್ಟ ಸೋಮಯಾಜಿ, ಮುಸ್ಸಣಭಟ್ಟಪಾಧ್ಯಾಯ, ಡೋಣಭಟ್ಟ, ಸೋಮೇಶ್ವರಭಟ್ಟ ಮತ್ತು ಮಗಳಾದ ಲಕ್ಷುಮಕ್ಕ, ವೈಷ್ಣವ ಚಾಕಣ ಭಟ್ಟಯ್ಯ, ತಿಪ್ಪಣಭಟ್ಟ ಈತನ ಹೆಂಡತಿಯಾದ ಮಲ್ಲಿಯಕ್ಕ, ಮಗನಾದ ಮಲ್ಲದೇವ ಭಟ್ಟ, ವೈಷ್ಣವ ಮಂಚೈಪ್ಪಣ್ಣ, ವೈಷ್ಣವ ಕಂದರ್ಪಭಟ್ಟ, ಭಟ್ಟೋಪಾಧ್ಯಯ ಸೋಮಯಾಜಿ. ಆದಿತ್ಯಭಟ್ಟ ಸೋಮಯಾಜಿ, ಮಂಚಿಭಟ್ಟೋಪಾಧ್ಯಾಯ ಸೋಮಯಾಜಿ, ಶಂಕರ ಭಟ್ಟೋಪಾಧ್ಯಾಯ ಸೋಮಯಾಜಿ, ಶ್ರೀಪತಿಭಟ್ಟೋಪಾಧ್ಯಾಯ ಸೋಮಯಾಜಿ, ಶ್ರೀಧರ ಭಟ್ಟೋಪಾಧ್ಯಾಯ ಮುಂತಾದವರು ಅನೇಕ ರಚನಾ ಕಾರ್ಯಗಳಲ್ಲಿ ಸಕ್ರಿಯರಾಗಿದ್ದರು.

ರಾಜಧಾನಿ ನೆಲೆವೀಡು, ಪಯಣದ ನೆಲೆವೀಡು, ಗ್ರಾಮಗಳು

ಕಾಲ ಕ್ರಿ.ಶ.	ರಾಜನ ಹೆಸರು	ನೆಲೆವೀಡು	ಗ್ರಾಮಗಳು	ಉಲ್ಲೇಖ
೧೧೫೪	ತ್ರೈಲೋಕ್ಯಮಲ್ಲ	-	ಕಲ್ಲುರು	ಗಬ್ಬೂರು-೪
೧೧೭೦	ರಾಯಮುರಾರಿ	ಭಜಬಳಮಲ್ಲದೇವ	ಮಾಸಂಗಿ	ಗಬ್ಬೂರು-೫
೧೧೯೫	ತ್ರಿಭುವನಮಲ್ಲ	- ಹಾವಿನಹಾಳು	ಕಲ್ಮೆಲೆ	ಗಬ್ಬೂರು-೧೧
೧೧೧೯	ತ್ರಿಭುವನಮಲ್ಲ	ಜಯಂತಿಪುರ	-	ಗಬ್ಬೂರು-೧೬
೧೧೨೬	ತ್ರಿಭುವನಮಲ್ಲ	ಜಯಂತಿಪುರ	-	ಗಬ್ಬೂರು-೧೮


೧೦೮೫	ತ್ರಿಭುವನಮಲ್ಲ	-	ಮುದುಗುಂದಿರೂ	ಗಬ್ಬೂರು-೨೫
೧೧೬೬	ಚಾಳುಕ್ಯ ವಿಕ್ರಮ	ಕಲ್ಯಾಣಪುರ	ಕುರುಕುಂದೆ	ನಿಲವಂಜಿ ೨೯
೧೨೨೩	ಯಾದವಸಿಂಘಣ	ದೇವಗಿರಿ	-	ವೀರಗೋಜನ ೩೧
೧೬೨೭	- -	ರಾಯದುರ್ಗ		ಗಲಗುಗಲಗ್ ೩೫
೧೬೨೭	- -	ಅರಸಿಕೆರೆ		ಚಂದನಕೇರಿ ೩೯
೧೭೧೭	- -	ಬೆಳೂಡೋಣಿ		ರಾಮದುರ್ಗ ೪೫
೧೭೯೦	ಕೇಸವ್ವಯಗವಡ	ದೇವದುರ್ಗ ಚಂದನಕೇರಿ ಅರಕೇರಿ ದೇವ-೪೭		

ಮಹಾಜನರು

ಮಹಾಜನರು(ಬ್ರಾಹ್ಮಣರು) ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖವಿದ್ದು, ಇವರು ಅನೇಕ ಕಾರ್ಯಗಳಾದ ದೇವಾಲಯ ನಿರ್ಮಾಣ, ಕೆರೆ, ಬಾವಿ ಮುಂತಾದ ಕೆಲಸದ ವಿವರಣೆ ಶಾಸನಗಳಲ್ಲಿ ಕಾಣಬಹುದು.


ಗಬ್ಬೂರು ಗ್ರಾಮದ ಕ್ರಿ.ಶ.೧೧೦೩ರ ಶಾಸನದಲ್ಲಿ ಮಹಾಜನಗಳ ಉಲ್ಲೇಖವಿದೆ. ಇವರನ್ನ ಗೊಬ್ಬರ ವಿಪ್ರ ಚೂಡಾಮಣಿಗಳೆಂದು ಕರೆಯಲಾಗಿದೆ. ಅದೇ ಗ್ರಾಮದ ೧೧೫೪ರ ಶಾಸನದಲ್ಲಿ ತ್ರೈಲೋಕ್ಯಮಲ್ಲ ಕಾಲದಲ್ಲಿ ೨೦೦ ಮಹಾ ಜನರ ಉಲ್ಲೇಖವಿದೆ. ಅದೇ ಗ್ರಾಮದ ಕ್ರಿ.ಶ.೧೧೪೯ರ ಶಾಸನದಲ್ಲಿ ಗಬ್ಬೂರ ಅಶೇಷ ಮಹಾಜನಗಳಲ್ಲಿ ಒಬ್ಬನಾದ ವೈಷ್ಣವ ಚಾಕಣಭಟ್ಟ ಎಂಬುವನು ಗೋಪುರದಲ್ಲಿ ತಾನು ಮಾಡಿಸಿದ ಕೇಶವ ದೇವರಿಗೆ ದಾನ ಮಾಡಿದ ಉಲ್ಲೇಖವಿದೆ. ಅದೇ ಗ್ರಾಮದ ೧೧೬೧ರ ಶಾಸನದಲ್ಲಿ ಮಹಾಜನರು ಗೌಡಗರೆಯಲ್ಲಿ ಮಾಣಿಕೇಶ್ವರ ಕೂಲಲ್ಲಿ ನಾಲ್ಕು ಮತ್ತರು ಭೂಮಿ ನೀಡುತ್ತಾರೆ. ಅದೇ ಗ್ರಾಮದ ೧೧೪೪ರ ಶಾಸನದಲ್ಲಿ ಮಹಾಜನಗಳು ನಾಗಭೂಷಣ ದೇವರ ಸತ್ರಕ್ಕೆ ಜೋಳವನ್ನು ಬಿಡುತ್ತಾರೆ. ಅದೇ ಗ್ರಾಮದ ಕ್ರಿ.ಶ.೧೧೨೭ರ ಶಾಸನದಲ್ಲಿ ಮಹಾಜನರು ಕೇಶವ ದೇವರ ಪ್ರತಿಷ್ಠೆಯೆಂದು ೨ ಮತ್ತರು ಮತ್ತು ೨೨೫ ಕಂಮ್ಮ ಭೂಮಿಯನ್ನು ಬಿಡುತ್ತಾರೆ. ಅದೇ ಗ್ರಾಮದ ಕ್ರಿ.ಶ.೧೧೪೮ರ ಶಾಸನದಲ್ಲಿ ಹಿರಿಯ ಗಬ್ಬೂರ ಮಹಾಜನಗಳ ಪಾದಾರಾಧಕರಾಗಿದ್ದ ಸೋಮೇಶ್ವರ ದೇವರ ಭಕ್ತರಾದ ಜೇಡಕುಳತಿಳಕ ಜೇಡರ ದಾಸಿಮಯ್ಯನ ವಂಶದವರಾದ ಸಕಲ ಜೇಡ ಗೊತ್ತಳಿಗಳು ಸೇರಿ ತಮ್ಮ ಕುಲದೈವವಾದ ಗೊಬ್ಬೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ.

ದೇವದುರ್ಗ ತಾಲ್ಲೂಕಿನ ಶಾಸನ ಸ್ಥಳಗಳು




ಕೃಪೆ ಡಾ.ದೇವರಕೊಂಡಾರೆಡ್ಡಿ

ಗಬ್ಬೂರಿನ ಶಾಸನಗಳು



ಕೃಪೆ ಡಾ.ದೇವರಕೊಂಡಾರೆಡ್ಡಿ

ಗಬ್ಬೂರಿನ ಶಾಸನಗಳು



ಕೃಪೆ ಡಾ.ದೇವರಕೊಂಡಾರೆಡ್ಡಿ

ಅಧ್ಯಾಯ ೪

ದೇವದುರ್ಗ ತಾಲ್ಲೂಕಿನ ಸ್ಥಳನಾಮಗಳು

೪

ದೇವದುರ್ಗ ತಾಲ್ಲೂಕಿನ ಸ್ಥಳನಾಮಗಳು

ಸ್ಥಳನಾಮಗಳು

ಪ್ರತಿಯೊಂದು ಊರಿನ ಹೆಸರಿನ ಹಿಂದೆ ಅದರದೇ ಆದ ವಿಶೇಷಾರ್ಥ ಅಡಗಿರುತ್ತದೆ. ಈ ಅರ್ಥವು ಇತಿಹಾಸದ ವೃತ್ತಾಂತ ಹಾಗೂ ಭೌಗೋಳಿಕ ಪರಿಸರಗಳ ಮಹತ್ವವನ್ನು ಹೊಂದಿರುತ್ತದೆ. ಒಂದು ಊರಿನ ಹೆಸರು ಆ ಪ್ರದೇಶದ ಗುಣಸ್ವಭಾವಗಳನ್ನು ಬಣ್ಣಿಸುತ್ತದೆ. ಅದರಂತೆ ಒಂದು ಪ್ರದೇಶದ ಐತಿಹಾಸಿಕ ಮತ್ತು ಭೌಗೋಳಿಕ ವಿಶೇಷಗಳು ಅಲ್ಲಿಯ ಜನರು ಬಾಳಿ ಬದುಕಿದ ಉನ್ನತ ಸಂಸ್ಕೃತಿ ಅವರ ಧರ್ಮಾಚರಣೆ ಊರಿನ ಹೆಸರುಗಳಲ್ಲಿ ಪಡಿಯಚ್ಚುಗೊಂಡಿರುತ್ತವೆ. ಅಂತೆಯೇ ಊರಿನ ಹೆಸರು ಆ ಪ್ರದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ.

ಯಾವುದೇ ಒಂದು ಪ್ರದೇಶದ ಬೆಟ್ಟ-ಗುಡ್ಡಗಳು, ತಗ್ಗು ದಿಣ್ಣೆಗಳು, ಕೆರೆ-ಬಾವಿಗಳು, ಬಗಡಿ-ಮೊರಡಿಗಳು, ಕಲ್ಲು-ಮುಳ್ಳುಗಳು, ಮಣ್ಣು-ಬಣ್ಣ ಇತ್ಯಾದಿ ಭೌಗೋಳಿಕ ಲಕ್ಷಣಗಳಲ್ಲದೆ ಮರ-ಗಿಡ, ಹೂ-ಬಳ್ಳಿ, ಪಶು-ಪಕ್ಷಿ, ಸಾಗರ ಮೊದಲಾದ ಸ್ವಭಾವಗಳು ಸಾಹಿತ್ಯ-ಸಂಗೀತ, ತ್ಯಾಗ-ಬಲಿದಾನ, ಆಚಾರ-ವಿಚಾರ, ಭಾಷೆ-ಕಲೆ ಇತ್ಯಾದಿ ಗುಣ ವಿಶೇಷಗಳು ಸ್ಥಳನಾಮಗಳಲ್ಲಿ ಬಿಂಬಿತವಾಗಿರುತ್ತವೆ. ಇಂದಿನ ಸ್ಥಳನಾಮಗಳು ಅಂದು ಹೊಂದಿದ ಅರ್ಥವನ್ನು ಕಳೆದುಕೊಂಡಿವೆ. ಜನರ ಸಂಸ್ಕೃತಿ ಪರಭಾಷೆಯ ಪ್ರಭಾವ ಹಾಗೂ ಕಾಲಘಟ್ಟಗಳ ಅಂತರಗಳು ಇವುಗಳಿಗೆ ಮುಖ್ಯ ಕಾರಣಗಳಾಗಿವೆ.

ದೇವದುರ್ಗ ತಾಲ್ಲೂಕು ಜಿಲ್ಲೆಯ ಉತ್ತರ ದಿಕ್ಕಿನ ತುತ್ತ ತುದಿಗೆ ಪೂರ್ವ ಪಶ್ಚಿಮ ದಿಕ್ಕಿನಲ್ಲಿ ಮೈಚಾಚಿ ಹರಡಿಕೊಂಡಿದೆ. ಉತ್ತರದಲ್ಲಿ ಕೃಷ್ಣ ನದಿಯು ಹರಿದು ಈ ತಾಲ್ಲೂಕಿನ ನಾಗರೀಕತೆ ಮತ್ತು ಸಂಸ್ಕೃತಿಗಳಿಗೆ ವರದಾನವಾಗಿದೆ. ಕೃಷ್ಣಾ ನದಿ ಆಚೆ ದಂಡೆಯ ಸಗರನಾಡಿನ ಸಂಸ್ಕೃತಿ ಮತ್ತು ಭಾಷೆಗಳು ಈ ತಾಲ್ಲೂಕಿನ ಮೇಲೆ ಪ್ರಭಾವ ಬೀರಿದಂತೆ ಕಂಡುಬರುತ್ತದೆ. ಇಲ್ಲಿಯ ಸ್ಥಳನಾಮಗಳಲ್ಲಿ ಕನ್ನಡ ಸಂಸ್ಕೃತಿಯ ಸೊಗಸು ಮತ್ತು ಅಚ್ಚಗನ್ನಡದ ಸೊಗಡು ಹಾಗೂ ಹಳೆಗನ್ನಡ ಪದರೂಪಗಳ ಬೆಡಗು ಇಲ್ಲಿ ದಟ್ಟವಾಗಿರುವುದು ಕಾಣುತ್ತದೆ.

ಇಡೀ ದೇವದುರ್ಗ ತಾಲ್ಲೂಕು ಭೌಗೋಳಿಕವಾಗಿ ಗುಡ್ಡ-ಬೆಟ್ಟ, ಕಾಡು-ಮೇಡು ಮತ್ತು ಹಳ್ಳ-ಕೊಳ್ಳಗಳಿಂದ ಆವೃತವಾಗಿದೆ. ಇಲ್ಲಿಯ ಗುಡ್ಡ-ಬೆಟ್ಟ ಕಲ್ಲುಗಳು ಜನರ ಬದುಕಿನ ಅಂಗವಾಗಿವೆ.

ಕೃಷ್ಣಾನದಿ ಮತ್ತು ಅದರ ತಟದಲ್ಲಿರುವ ಪುಣ್ಯಕ್ಷೇತ್ರಗಳು ಜನರ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ವರದಾನವಾಗಿವೆ. ಇಲ್ಲಿರುವ ದಿನ್ನಿ-ಮೊರಡಿ-ಬಂಡೆಗಳು ಪ್ರಾಕೃತಿಕ ವಿಶೇಷತೆಯನ್ನು ತೋರಿಸುತ್ತವೆ. ಗೋಡು-ಹಟ್ಟಿ-ದೊಡ್ಡಿಗಳು ತಾಲೂಕಿನ ಜನರು ವಾಸಿಸಲು ಆರಂಭಿಸಿದುದನ್ನು ತಿಳಿಸುತ್ತದೆ. ಇಲ್ಲಿಯ ಗುಂಡ-ಕುಂಪಿ ಶಬ್ದ ರೂಪಗಳು ಕೃಷಿಗೆ ಸಂಬಂಧಿಸಿದೆ. ಹೀಗೆ ದೇವದುರ್ಗ ತಾಲ್ಲೂಕು ಪಡೆದುಕೊಂಡ ನೈಸರ್ಗಿಕ, ಸ್ವಾಭಾವಿಕ ಮತ್ತು ಪ್ರಾಕೃತಿಕಗಳ ಗುಣ ಸ್ವಭಾವಗಳನ್ನು ಅಲ್ಲಿನ ಗ್ರಾಮದ ಹೆಸರುಗಳಲ್ಲಿ ಅಡಗಿಸಿಕೊಂಡಿರುವ ಸ್ಥಳನಾಮಗಳು ಔಚಿತ್ಯಪೂರ್ಣವಾಗಿವೆ.

ಆರಂಭದ ದಿನದಲ್ಲಿ ಮನುಷ್ಯ ಅಲೆಮಾರಿಯಾಗಿದ್ದ. ನಂತರ ಅವನ ಬದುಕು ಒಂದೆಡೆ ವಾಸಿಸುವಂತಾಯಿತು. ಬರುಬರುತ್ತ ನಾಗರಿಕರಾದಂತೆ ಒಂದೊಂದು ಸಣ್ಣ ಸಣ್ಣ ಗುಂಪುಗಳಾಗಿ ನೆಲಸತೊಡಗಿದರು. ಮುಂದೆ ಹಲವು ಗುಂಪುಗಳು ಒಟ್ಟಿಗೆ ಬದುಕುವುದನ್ನು ಆರಂಭಿಸಿದವು. ಇದೇ ಗ್ರಾಮದ ಮೂಲ ಸ್ಥಿತಿಯೆಂದು ತಿಳಿಯಬಹುದು. ಅದರಂತೆ ಆಯಾ ಭೌಗೋಳಿಕ ಪರಿಸರದಲ್ಲಿ ವಾಸಿಸುವ ಗುಂಪುಗಳು ನೆಲೆಗಳು ಆರಂಭವಾದವು. ಈ ನೆಲೆಗಳಿಗೆ ಹೆಸರು ಕರೆಯುವ ಸಲುವಾಗಿ ಒಂದು ಹೆಸರಿನ ಅಗತ್ಯ ತೋರಿ ಬಂದಿತು. ಈ ಅಗತ್ಯವೇ ನೆಲೆಗಳಿಗೆ ಹೆಸರಿಸುವ ಗ್ರಾಮ, ಸ್ಥಳನಾಮಗಳ ಆರಂಭದ ಕುರುಹು ಎನ್ನಬಹುದು. ಆರಂಭದ ಕಾಲದಲ್ಲಿ ಪರಿಸರ, ಪ್ರಾಕೃತಿಕ ಹೆಸರುಗಳಾದ ಬೆಟ್ಟ, ಗುಡ್ಡ, ಗಿಡ, ಮರ, ಕಲ್ಲು, ಮಣ್ಣು ಮುಂತಾದ ಹೆಸರುಗಳಿಂದ ಬಂದವು. ಕಾರಣ. ಆರಂಭದ ದಿನಗಳಲ್ಲಿ ನಾಗರಿಕತೆಗಳು ಹುಟ್ಟಿ ಬಂದಿದ್ದು ನದಿಗಳ ದಂಡೆಯ ಮೇಲೆ ಎಂಬುದನ್ನು ಗಮನಿಸಬಹುದು.

ನಂತರ ಗ್ರಾಮಗಳಿಗೆ ತಮ್ಮ ಜನಾಂಗ, ಜನಾಂಗದ ವ್ಯಕ್ತಿಗಳ ಚಾರಿತ್ರಿಕ ವ್ಯಕ್ತಿಗಳ, ಧಾರ್ಮಿಕ ವ್ಯಕ್ತಿಗಳ, ಹೆಸರನ್ನಿಟ್ಟು ಕರೆಯುವ ರೂಢಿ ಬೆಳೆದು ಬಂದಿತ್ತು. ಅಂದರೆ ಸಸ್ಯವಾಚಿಯ ನಂತರ ಜನಾಂಗವಾಚಿ, ವ್ಯಕ್ತಿವಾಚಿಗೆ ಮುಂದಾದವು.

ಈ ಸ್ಥಳನಾಮಗಳ ಅಧ್ಯಯನಗಳು ಮೊದಲು ಪಾಶ್ಚಾತ್ಯ ವಿದ್ವಾಂಸರು ಆರಂಭಿಸಿರು. ನಂತರ ಭಾರತದಲ್ಲಿ ಇದರ ಬಗ್ಗೆ ಅಧ್ಯಯನಗಳು ಆರಂಭವಾದವು. ೧೯೪೦ರಲ್ಲಿ ಶಂಬಾ ಜೋಶಿಯವರು ತಮ್ಮ ಸಂಸ್ಕೃತಿಯ ಅಧ್ಯಯನದಲ್ಲಿ ಸ್ಥಳನಾಮಗಳನ್ನೇ ಆಕರಗಳನ್ನಾಗಿ ಬಳಸಿಕೊಂಡಿದ್ದಾರೆ. ಇವರ "ಎಡಗಳು ಹೇಳುವ ಕಂನಾಡ ಕತೆ" ಎಂಬುದರ ಮೇಲೆ ಅಧ್ಯಯನ ಮಾಡಿದ್ದಾರೆ(ಆಂಧ್ರ ಕ.ಗ.ಪ್ರ.ಸ್ಥಳನಾಮಗಳು, ಡಾ.ಜಾಜಿ ದೇವೇಂದ್ರಪ್ಪ).

ಪ್ರಾಕೃತಿಕ ಸ್ಥಳನಾಮಗಳು

೧. ಜಲವಾಚಿ

ಪ್ರಾಚೀನ ಕಾಲದ ಹರಪ್ಪ ನಾಗರಿಕತೆಯಿಂದಿಡಿದು ಇಂದಿಗೂ ಜಲಕ್ಕೆ ಮುಖ್ಯ ಸ್ಥಾನವಿದೆ. ಬಹುತೇಕ ನಾಗರಿಕತೆಗಳು ಹುಟ್ಟಿಕೊಂಡಿದ್ದು ನದಿಯ ದಂಡೆಯ ಮೇಲೆಯೇ. ಹಾಗೆಯೇ ಜಲಕ್ಕೆ ಮಹತ್ವ

ಕೊಟ್ಟಿದ್ದು, ಪ್ರಾಚೀನ ಕಾಲದ ನಾಗರಿಕರು ಒಂದೆಡೆ ನೆಲೆಸುವುದಕ್ಕಾಗಿ ಕಾಡನ್ನು ತೊರೆದು, ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡರು. ಅಥವಾ ಸಹಜವಾಗಿ ಹರಿಯುವ ನೀರಿಗೆ ಕೆರೆ-ಕೊಳ ಕುಂಟೆಗಳಂತಹ ಕೃತಕ ಜಲ ಸಂಗ್ರಾಹಕಗಳನ್ನು ನಿರ್ಮಿಸಿಕೊಂಡರು. ಇಂದಿಗೂ ಗ್ರಾಮಗಳ ನಿರ್ಮಾಣ ನೀರನ್ನು ಅವಲಂಬಿಸಿ ರಚನೆಯಾಗುತ್ತವೆ. ಹೀಗೆ ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಆ ಜಲವನ್ನವಲಂಬಿಸಿಯೇ ಕೆಲವು ಗ್ರಾಮಗಳಿಗೆ ಹೆಸರು ಕರೆದುಕೊಳ್ಳುವ ರೂಢಿ ಆರಂಭವಾಯಿತು.

ದೇವದುರ್ಗ ತಾಲೂಕಿನಲ್ಲಿ ಕೊಳ, ಕುಂಟೆ-ಕೆರೆ, ಬಾವಿ-ಡೊಣೆಗಳಿಂದ ಕೊನೆಯಾಗುವ ಜಲವಾಚಿ ಸ್ಥಳನಾಮಗಳಿವೆ. ಇನ್ನು ಕೆಲವು ಪ್ರದೇಶದಲ್ಲಿ ನದಿ, ಸಮುದ್ರ, ಏರಿ, ಚಲನ ಏರು ಮುಂತಾದ ಸ್ಥಳನಾಮಗಳು ಕಂಡುಬರುತ್ತವೆ. ಕುಂಟ, ದೂಣ, ಏರು, ಚರ್ಲ ಎಂಬ ನಾಲ್ಕು ತೆಲುಗು ಭಾಷೆಯ ಜಲವಾಚಿ ವಾರ್ಗಿಕಗಳು ಆಗಿವೆ(ಆಂಧ್ರ ಕ.ಗ.ಪ್ರ.ಸ್ಥಳನಾಮಗಳು, ಡಾ.ಜಾಜಿ ದೇವೇಂದ್ರಪ್ಪ, ಪು.೬೦). ಜಲವಾಚಿ ನಾಮಗಳಲ್ಲಿ ಬಳಕೆಯಾಗುವ ಕೆರೆ, ಕೇರಿ ಹಾಗೂ ಗೇರಿ ಎಂಬುವು ಒಂದೇ ಎಂದು ಭಾವಿಸಲಾಗುತ್ತದೆ.

ಗುಂಡಿ ಅಥವಾ ಗುಂಡ ಇವುಗಳನ್ನು ನೀರು ನಿಲ್ಲುವ ತಗ್ಗು, ಗುಳಿ, ಕೊಳ ಎಂದು ಅರ್ಥೈಸಬಹುದು. ಡೊಣೆ ಎಂದರೆ ಬಂಡೆಗಳ ಮಧ್ಯೆಯಿರುವ ಜಲಾಶಯ ದೂನ/ದೊಣ (ತೆಲುಗು), ದ್ರೋಣಿ(ಸಂಸ್ಕೃತ) ನಗರಗುಂಡ, ಪಿಲ್ ಗುಂಡ, ಬೊಮನ ಗುಂಡ, ರಾಮನ ಗುಂಡ, ಮೂಡಲಗುಂಡ, ಹಂಪೇರ ಗುಂಡಿ, ಮುದಲಗುಂಡ, ಚಿಂತಲಕುಂಟಾ, ಗೆಜ್ಜೆಬಾವಿ, ತೆಗ್ಗಿಹಾಳ, ಚಿಕ್ಕಹೊನ್ನಾಕುಣಿ, ಹಿರೇ ಹೊನ್ನಾಕುಣಿ, ಕರಡೋಣ, ಅರೇಕೇರಾ, ಚಂದನಕೇರಿ, ಶಾವಂತಗೇರಿ, ಕ್ಯಾದ್ಗಿಗೇರಿ ಈ ಮುಂತಾದ ಸ್ಥಳಗಳು ದೇವದುರ್ಗ ಪ್ರದೇಶದಲ್ಲಿವೆ.

೨. ಶಿಲಾವಾಚಿ

ಪ್ರಾಚೀನ ಕಾಲದ ಜನತೆ ಕಲ್ಲನ್ನು ಅತಿ ಹೆಚ್ಚಾಗಿ ಗಮನದಲ್ಲಿಟ್ಟುಕೊಂಡಿದ್ದರು. ಹಾಗೂ ಕಲ್ಲನ್ನು ಉಪಯೋಗಿಸಿದ್ದರು ಎನ್ನುವುದಕ್ಕೆ ಅನೇಕ ಗ್ರಾಮಗಳು ಇವೆ.

ಆದಿಮಾನವರು ಕಲ್ಲನ್ನು ತಮ್ಮ ಜೀವನದಲ್ಲಿ ಅನೇಕ ವಸ್ತುಗಳನ್ನಾಗಿ ಬಳಸುವುದರ ಜೊತೆಗೆ ಕಲ್ಲಿನ ಹೆಸರುಗಳಿಂದ ಊರುಗಳನ್ನು ಕರೆದಿದ್ದಾರೆ ಮತ್ತು ಪ್ರಾಗೈತಿಹಾಸಿಕ ಕಾಲದ ಮಾನವ ಕಲ್ಲಿನಿಂದಲೇ ರೇಖಾ ಚಿತ್ರಗಳನ್ನು ಕೆತ್ತುವುದು, ಕಲ್ಲಿನ ಆಯುಧಗಳನ್ನು ಬಳಸಿರುವುದು ಕಂಡುಬರುತ್ತದೆ.

ಕಲ್ಲು, ಗುಂಡು, ಬಂಡೆ, ಅರೆ ಎಂಬುವು ನಾಲ್ಕು ಶಿಲಾವಾಚಿ ನಾಮಗಳಾಗಿವೆ. ಈ ಹೆಸರಿನ ಗ್ರಾಮಗಳು ಇಲ್ಲಿ ಕಾಣಬಹುದು. ಅಲ್ಲದೆ ಪ್ರೊ.ಕ.ವೆಂ.ರಾಜ ಗೋಪಾಲ್ ಅವರು ಕಲ್, ಕಲ್ಲು ಎಂದು ಕೊನೆಯಾಗುವ ಊರುಗಳು ಪ್ರಾಗೈತಿಹಾಸಿಕ ಕಾಲದ ಗ್ರಾಮಗಳೆಂದು ಅಭಿಪ್ರಾಯಪಡುತ್ತಾರೆ. ಗಣೆಕಲ್,

ಗೊಗಲ್, ಗಾಗಲ್, ಜಾಗಟಗಲ್, ದೇವತಗಲ್, ಬೆಣಕಲ್, ಕಾಕರಗಲ್, ಮಸರಕಲ್, ನೀಲಗಲ್, ಮದರಕಲ್, ಮಲದಕಲ್, ಮಾನಸಗಲ್, ಯಾಚಗಲ್, ಶಾವಂತಗಲ್, ಪಿಳಿಕಲ್ ದೇವದುರ್ಗದಲ್ಲಿವೆ.

೩. ಪರ್ವತ, ದುರ್ಗ ಕೋಟೆ, ದಿನ್ನೆ ಗುಡ್ಡ, ಬಯಲು ಸೂಚಿಸುವ ನಾಮಗಳು

ದುರ್ಗ : ರಾಮದುರ್ಗ, ದೇವದುರ್ಗ ಮುಂತಾದ ಹೆಸರುಗಳಲ್ಲಿ ದುರ್ಗ, ಕೋಟೆ ಮತ್ತು ಬೆಟ್ಟ ಗುಡ್ಡಗಳಿಂದ ಸುತ್ತವರಿದಿರುವ ಊರು ಎಂದು ಅರ್ಥ ಕೊಡುತ್ತದೆ. ರಾಮದುರ್ಗವು ಬೆಟ್ಟ ಗುಡ್ಡಗಳಿಂದ ಹಾಗೂ ಕೋಟೆಯಿಂದ ಆವರಿಸಿದೆ. ಇದರಂತೆ ದೇವದುರ್ಗವು ಕೋಟೆ ಗುಡ್ಡಗಳಿಂದ ಸುತ್ತುವರೆದು ಇದರ ಮಧ್ಯ ಊರು ಇದೆ. ದೇವದುರ್ಗದ ಈರಣ್ಣ ದೇವರ ಗುಡ್ಡದ ಬಂಡೆಗಲ್ಲಿನಲ್ಲಿರುವ ಶಾಸನದಲ್ಲಿ ದೇವದುರ್ಗವನ್ನು ರತ್ನ ಮೇಕಲಗಿರಿ ಎಂದು ಕರೆಯಲಾಗಿದೆ.

ಗುಡ್ಡ - ಪರ್ವತ : ಗುಡ್ಡ, ಪರ್ವತ ಎಂದರೆ ಎತ್ತರವಾದ ಪ್ರದೇಶ, ಸ್ಥಳ. ಶಿಖರ, ಸಸ್ಯ ಅಥವಾ ಕಲ್ಲುಗಳಿಂದ ಆವೃತವಾಗಿರುವ ಎತ್ತರದ ಪ್ರದೇಶ ಎಂದು ಅರ್ಥವಾಗುತ್ತದೆ. ಅಡಕಲಗುಡ್ಡ, ಬಂಡಾಗುಡ್ಡ, ಸೊಲದ ಗುಡ್ಡ, ಮಂಡಲಗುಡ್ಡ, ಚಡಕಲಗುಡ್ಡ, ಯರಗುಡ್ಡ, ಕರೆಗುಡ್ಡ, ಕೋತಿ ಗುಡ್ಡ, ಜಾವಗುಡ್ಡ, ಕರಡಿಗುಡ್ಡ ಮುಂತಾದ ನಾಮಗಳನ್ನು ಇಲ್ಲಿ ನೋಡಬಹುದು. ಇಲ್ಲಿಯೂ ಗುಡ್ಡಗಳ ವಿಶೇಷಣಗಳನ್ನು ಪೂರ್ವಪದವು ಸೂಚಿಸುತ್ತದೆ.

ದಿನ್ನಿ-ಮೊರಡಿ : ಮಣ್ಣಿನ ಎತ್ತರದ ಪ್ರದೇಶ ದಿನ್ನಿಯಾದರೆ, ಕಲ್ಲುರಾಶಿಯ ಚಿಕ್ಕ-ಬೆಟ್ಟ ಮೊರಡಿ ಎನಿಸಿದೆ. ದಿಣ್ಣೆ ಮೂಲಪದ ಕನ್ನಡವಾಗಿದ್ದು ತೆಲುಗಿನ ಪ್ರಭಾವದಿಂದ ದಿನ್ನಿ ಶಬ್ದವಾಗಿ ಬದಲಾಗಿದೆ. ಈ ತಾಲೂಕಿನಲ್ಲಿ ದಿನ್ನಿ-ಮೊರಡಿಗಳು ಹಲವಿದೆ. ಇವೆರಡು ಪದಗಳಿಂದ ಅಂತ್ಯವಾಗಿರುವ ಸ್ಥಳನಾಮಗಳನ್ನು ಇಲ್ಲಿ ಕಾಣಬಹುದು. ಇಲ್ಲಿಯೂ ಕೂಡ ದಿನ್ನಿ ಉತ್ತರಪದವಾಗಿದ್ದು, ಅದರ ಪೂರ್ವಪದ ವಿಶೇಷಣದಿಂದ ಕೂಡಿದೆ. ಕಮಲದಿನ್ನಿ, ಗಾಜಲದಿನ್ನಿ, ಜಾಗೀರ ಜಾಡಲದಿನ್ನಿ, ಜಮಾಲದಿನ್ನಿ, ತಿಪ್ಪಲದಿನ್ನಿ, ನಾಗಡದಿನ್ನಿ, ಬುದ್ದಿನ್ನಿ, ಮಲಕಮದಿನ್ನಿ, ಮರಕಮದಿನ್ನಿ, ಸುತಾರ ದಿನ್ನಿ, ಹೆಗ್ಗಡದಿನ್ನಿ ತೆಲುಗೀಕರಣವಾಗಿದೆ. ಕನ್ನಡ ಹೆಗ್ಗಡೆಯಾದರೆ ತೆಲುಗು ಹೆಗ್ಗಡವಾಗಿದೆ. ಅಂದರೆ ತೆಲುಗಿನ ಭಾಷೆಯ ಪ್ರಭಾವ ಈ ಗ್ರಾಮದ ಮೇಲೆ ಬಿದ್ದಿರುವುದು ಸ್ಪಷ್ಟವಾಗಿದೆ. ಹಾಗೂ ಚೊಟ ಮಾರಡಿ, ಪಲಕನ ಮಾರಡಿ, ಬೇನಕನ ಮಾರಡಿ, ಸೋಮನ ಮರಡಿ ಮುಂತಾದವುಗಳನ್ನು ಇಲ್ಲಿ ಕಾಣುತ್ತೇವೆ.

ಗೋಡು-ಗೂಡು : ಕೋಡು ಎಂಬ ಶಬ್ದದಿಂದ ನಿಷ್ಪತ್ತಿಯಾಗಿರುವ ಶಬ್ದ ಗೋಡು. ಇದು ಮುಂದೆ ಗೂಡು ಎಂದಾಗಿದೆ. ಕೋಡು ಪದಕ್ಕೆ ಶಿಖರ, ಬೆಟ್ಟದ ತುದಿಯೆಂದು ಅರ್ಥ. ಇಂತಹ ಗ್ರಾಮಗಳನ್ನು ಇಲ್ಲಿ ಕಾಣಬಹುದು. ಅಡಕಲ ಗೋಡು, ಕದಲಿಗೋಡು, ಕಾರೆಗೋಡು, ಕೋಟಗಿಗೋಡು, ಜೀವಗೋಡು, ನವಲಗೋಡು, ಬಂಡೆಗೋಡು, ಮಲ್ಲಿದೇವ ಗೋಡು, ಸೂಳದ ಗೋಡು.

ಹಟ್ಟಿ, ಊರು, ಹಾಳು, ಪುರ, ದೊಡ್ಡಿ : ಆರಂಭದಲ್ಲಿ ಹಟ್ಟಿ, ಹಾಡಿ, ಬಾಡ, ಹಾಳ್ ಈ ನಾಡಿನ ಗೋವಳರು, ಕುರುಂಬರು, ಹಟ್ಟಿಕಾರರು, ಗೌಡರ ಮೂಲ ನೆಲೆಗಳೆಂದು ಶಂಬಾರವರ ಅಭಿಪ್ರಾಯವಾಗಿದೆ. ಆದರೆ ಗ್ರಾಮ ಊರು, ಪುರ ಎಂಬುವು ಅಷ್ಟು ಪುರಾತನವಲ್ಲ ಎನ್ನುವ ಶಂಬಾರವರು ಪುರಾತನ ವಸತಿ ಸೂಚಕವಾದ ಹೆಸರು "ಹಟ್ಟಿ" ಎಂದು ಊಹಿಸುವರು. ಹಟ್ಟಿಯ ಮೂಲ ರೂಪ ಪಟ್ಟಿ ಎಂದೂ, ಇದಕ್ಕೆ ತಮಿಳಿನಲ್ಲಿ ಮನೆ, ಹಳ್ಳಿ ಎಂಬ ಅರ್ಥವಿದೆಯೆಂದು ವಾದಿಸುತ್ತಾರೆ(ಆಂಧ್ರ ಕ.ಗ.ಪ್ರ.ಸ್ಥಳನಾಮಗಳು, ಡಾ.ಜಾಜಿ ದೇವೇಂದ್ರಪ್ಪ, ಪು.೩೭).

ದೊಡ್ಡಿ ಪದ ಹಟ್ಟಿ ಪದಕ್ಕೆ ಸಮಾನ. ದೊಡ್ಡಿ ಎಂದರೆ ದನಗಳನ್ನು ಕೂಡುವ ಸ್ಥಳ ಎಂದು ಅರ್ಥ. ಚಿಕ್ಕಲದೊಡ್ಡಿ, ನಿಂಬಲದೊಡ್ಡಿ, ಬಂಕಲ ದೊಡ್ಡಿ, ಮಲ್ಲಿನಾಯಕನ ದೊಡ್ಡಿ, ಯರಕಮದೊಡ್ಡಿ, ಕೊತ್ತದೊಡ್ಡಿ ಮುಂತಾಗಿ ಇಲ್ಲಿಯ ಹೆಸರುಗಳಲ್ಲಿಯೂ ತೆಲುಗು ಭಾಷೆಯ ಪ್ರಭಾವ ಎದ್ದುಕಾಣುತ್ತದೆ.

ಪುರ : ಪುರ ಎಂದರೆ ಸಾಮಾನ್ಯವಾಗಿ ದೇವರಿಗೆ ಅಥವಾ ವೀರಶೈವರಿಗೆ ಅಥವಾ ಬ್ರಾಹ್ಮಣರಿಗೆ ದಾನ ನೀಡಿರುವ ಗ್ರಾಮ. ಗಬ್ಬೂರು, ಪರತಪುರು, ಸಲಿಕ್ಯಾಪುರ, ಚಿಕ್ಕ ಬೂದೂರು. ಹಿರೇಬೂದೂರು. ಮಿಯ್ಯಾಪುರ, ಗೋಪಾಲಪುರ, ಮಸಿದೀಪುರ, ಅಮರಪುರ, ಬನವಂತಪುರ, ಖಾನಾಪುರ, ಹೆಮನೂರು, ಮುದ್ದುರು, ಶಾಖಾಪುರ, ಜಿನ್ನಪುರ, ರಾಮಪುರ, ಮಲ್ಲಿಪುರ, ಬಾಗೂರು, ತಿಮ್ಮಾಪುರ, ನಾಗಲಾಪುರ, ಹೊಸರು, ಸಿದ್ದಾಪುರ, ಬಸ್ಸಪುರ, ಹೇರೂರು

ಊರು : ಗಬ್ಬೂರು, ಚಿಕ್ಕಬೂದೂರು, ಹಿರೇಬೂದರು, ಹೇಮನೂರು, ಮುಷ್ಟರು, ಬಾಗೂರು, ಹೇರೂರು, ಹೂಸರು

ಹಳ್ಳಿ : ದೊಂಡಂಬಳಿ, ಕೋಣ ಚಪ್ಪಳಿ, ಕರಕಹಳ್ಳಿ, ಕುರುಕೆ ಹಳ್ಳಿ, ಮಾತಪಳ್ಳಿ, ಹೊನ್ನಕಾಡಮಳ್ಳಿ, ಜಾಳಹಳ್ಳಿ, ಲಿಂಗದಹಳ್ಳಿ, ಕಾಚಮಳ್ಳಿ, ಬೊಮ್ಮನಹಳ್ಳಿ.

ಹಾಳು : ನಾಗರಹಾಳ್, ಗುಂಬ್ರಾಳ್, ಸಲಾಗರಾಳ್, ಹೆಮನಾಳ, ಕಮದಾಳ ಸುಂಕೇಶ್ವರಹಾಳ, ಹದಿನಾಳ ಇಂಗಳದಾಳ, ಮಸಿಹಾಳ ಅಪಳ್, ಬೊಮ್ಮನಾಳ, ಗಾಣದ ಹಾಳ

ಕುಂಪಿ : ಕುಪ್ಪೆ ಪದದ ಗ್ರಾಮ್ಯರೂಪ ಕುಪ್ಪೆ. ಕುಪ್ಪೆ ಎಂದರೆ ರಾಶಿ, ಕುಂಪೆ ಪದದ ಪ ಕಾರವು ತನ್ನ ದ್ವಿತ್ವವನ್ನು ಕಳೆದುಕೊಂಡು ಬಿಂದುಸಹಿತ ಕುಂಪೆಯೆಂದಾಗಿದೆ. ಈಗ ಅದು ಕುಂಪಿ ಎಂದು ಪ್ರಯೋಗದಲ್ಲಿದೆ. (ಸಿರಿದುರ್ಗ, ಪು.೫೭) ಆಕಳಕುಂಪಿ, ಚಿಕ್ಕರಾಯಕುಂಪಿ, ಹಿರೇರಾಯಕುಂಪಿ.

ರಾಯಕುಂಪಿ ಶಾಸನದಲ್ಲಿ ಆ ಗ್ರಾಮವನ್ನು ರಾಕುಪ್ಪಿ ಎಂದು ಉಲ್ಲೇಖವಿದೆ. ಕುಪ್ಪಿ ಎಂದರೆ ಬೆಳೆಯನ್ನು ರಾಶಿ ಹಾಕುವುದೆಂದು ಅರ್ಥ.

೪. ಸಸ್ಯಮೂಲದಿಂದ ಬಂದ ನಾಮಗಳು : ಕೆಲವು ಊರುಗಳ ಹೆಸರಿನಲ್ಲಿ ಸಸ್ಯ, ಹೂ, ಮರ, ಬಳ್ಳಿ ಮುಂತಾದವನ್ನು ಸೂಚಿಸುವಂತ ಹೆಸರುಗಳಿವೆ. ಕರಕಿಹಳ್ಳಿ, ಕುರಕಿಹಳ್ಳಿ, ಜಾಳಹಳ್ಳಿ, ಬೊಮ್ಮನಹಳ್ಳಿ,

ಸಾಸಿವಗೇರಾ, ಶ್ಯಾವಂತಗೇರಾ, ಕ್ಯಾದ್ಗಿಗೇರಾ ಇವು ಮತ್ತು ಮರಗಳ ಹೆಸರುಗಳನ್ನೊಳಗೊಂಡಿವೆ. ಜೋಳದಡಿಗೆ, ಹೂವಿನ ಹೆಡಿಗೆ, ಅರಿಶಿಣಿಗೆ ಇತ್ಯಾದಿಗಳನ್ನು ಇಲ್ಲಿ ಕಾಣುತ್ತೇವೆ.

೫. ಲೋಹ ಸಂಪತ್ತನ್ನು ಸೂಚಿಸುವ ನಾಮಗಳು : ಹೊನ್ನು, ಚಿನ್ನ ಮುಂತಾದ ಹೆಸರಿನ ಪದಗಳಲ್ಲಿ ಬಂಗಾರದ ಅರ್ಥವಿದ್ದು, ಆ ಪದದಿಂದ ಕೊನೆಯಾಗುವ ಗ್ರಾಮಗಳನ್ನು ನೋಡಬಹುದು. ಚಿಕ್ಕ ಹೊನ್ನಕುಣಿ, ಹೊನ್ನಾಟಗಿ, ಚಿಂಚೂಡಿ

೬. ವ್ಯಕ್ತಿವಾಚಿ : ಇಲ್ಲಿ ವ್ಯಕ್ತಿಗಳನ್ನು, ದೇವರುಗಳನ್ನು, ಜಾತಿಯನ್ನು, ಇಲ್ಲಿ ಸೇರಿಸಬಹುದು. ಗೋಡನ ದೇವರ ಹಳ್ಳಿ, ಗೋವಿಂದ ಪಲ್ಲಿ, ಗೋಪಾಲಪುರ, ಮಲ್ಲಿದೇವರ ಗುಡ್ಡ, ದೇವತಗಲ್, ಮಾನಸಗಲ್, ರಾಮನಾಳ, ರಾಮಪುರ, ರಾಮನ ಗುಂಡ, ಸೋಮನಮರಡಿ ಮುಂತಾದ ಹೆಸರನ್ನು ಸೂಚಿಸುವ ಗ್ರಾಮಗಳೂ ಇಲ್ಲಿ ಇವೆ.

೭. ಪ್ರಾಣಿಮೂಲ ಮತ್ತು ಪಕ್ಷಿಮೂಲದ ನಾಮಗಳು : ಸ್ಥಳನಾಮ ನಿರ್ದೇಶನದಲ್ಲಿ ಪ್ರಾಣಿ, ಪಕ್ಷಿಗಳೂ ತಮ್ಮ ಸ್ಥಾನವನ್ನು ಪಡೆದುಕೊಂಡಿವೆ. ವ್ಯಕ್ತಿಯೊಂದಿಗೆ ಬದುಕುವ ಅನೇಕ ಪ್ರಾಣಿಗಳ ಮತ್ತು ಪಕ್ಷಿಗಳ ಹೆಸರನ್ನೇ ತಮ್ಮ ವಾಸದ ನೆಲೆಗಳಿಗೆ ಕಂಡುಕೊಂಡಿದ್ದಾರೆ. ಬಂಡೆ, ತಗ್ಗು, ಬೆಟ್ಟ, ಕುಂಟೆ, ಕಾಡು, ಮರ ಯಾವುದೋ ಸ್ಥಳದಲ್ಲಿ ಪ್ರಾಣಿಗಳನ್ನು ಹಾಕುವುದರ ಮೂಲಕ ಅಥವಾ ಅಲ್ಲಿ ಸಾಕುವುದರ ಮೂಲಕ ಅವುಗಳಿಗೆ ಆ ಪ್ರಾಣಿಗಳ, ಪಕ್ಷಿಗಳ ಹೆಸರಿನಿಂದಲೇ ಕರೆದಿದ್ದಾರೆ. ದೇವದುರ್ಗ ತಾಲೂಕಿನಲ್ಲಿ ಸಹ ಇಂತಹ ಗ್ರಾಮಗಳನ್ನು ನೋಡಬಹುದು. ಕರಡಿಗುಡ್ಡ, ಕೋತಿಗುಡ್ಡ, ಹಿರಬಗೇರಾ, ಮಲದಕಲ್, ಕೋಣಚಪ್ಪಳ್ಳಿ, ಹದ್ದಿನಹಾಳ, ಆಕಳಕುಂಪಿ, ಹುಲಿಗುಡ್ಡ, ನವಿಲಗುಡ್ಡ ಇತ್ಯಾದಿಗಳು ಪ್ರಾಣಿ ಮೂಲದ ಹೆಸರುಗಳಾಗಿವೆ.

ಏಕಪದ ನಾಮಗಳು : ದೇವದುರ್ಗ ತಾಲ್ಲೂಕಿನಲ್ಲಿ ಏಕಪದ ನಾಮಗಳನ್ನು ಹೊಂದಿದ ಊರುಗಳಿವೆ. ನಾಗೋಲಿ, ವಂದಲಿ, ಗಲಗ ಮುಂತಾದವುಗಳನ್ನು ಇಲ್ಲಿ ನೋಡಬಹುದು. ನಾಗೋಲಿ ಪದ ಸಂಸ್ಕೃತದ ನಾಗವಲ್ಲಿ ಪದದ ಕನ್ನಡ ತದ್ಭವ ರೂಪ. ನಾಗವಲ್ಲಿ ಎಂದರೆ ವೀಳ್ಯದ ಎಲೆ ಎಂದು ಅರ್ಥ. ಅಂದರೆ ಹಿಂದೆ ಇಲ್ಲಿ ಹೇರಳವಾಗಿ ವೀಳ್ಯದ ಎಲೆ ಬೆಳೆಯುತ್ತಿದ್ದಿರಬಹುದು. ಆದರೆ ಈಗ ಇರುವುದಿಲ್ಲ.

ಶಾಸನ ಉಲ್ಲೇಖಿತ ನಗರ ಪಟ್ಟಣ ಅಥವಾ ವ್ಯಾಪಾರ ಕೇಂದ್ರಗಳು : "ಅಯ್ಯಣವಾಡಿ ೫೩, ಅಸಗೆಗೆರೆ, ಜಯಂತಿಪುರ, ಮುದುಗುಂದೂರು, ಹಳ್ಳಸಿಂತೆ, ಕಲ್ಯಾಣಪುರು, ದೇವಗಿರಿ, ಹರಳ ಹನ್ನೆರೆಡು, ಕರಡಿಕಲ್ಲು, ಹಗರಗಟಗೆ, ರಾಮದುರ್ಗ, ಅರಸಿಕೆರೆ, ದೇವದುರ್ಗ, ಚಂದನಕೆರೆ, ಎಡದೊರೆ, ಮಾಸಳಿಕಲ್, ಕುಂದರಗೆ, ಕಲ್ಲಕೆಳಗ್ಯೆನೂರು, ಹಾವಿನಹಾಳು, ಕಲ್ಮಲೆ ಮುಂತಾದ ಸ್ಥಳಗಳು ಶಾಸನಗಳಲ್ಲಿ ಉಲ್ಲೇಖವಾಗಿದ್ದು. ಇವು ಪ್ರಾಚೀನಕಾಲದಲ್ಲಿ ಆಡಳಿತ ವಿಭಾಗಗಳು ಹಾಗೂ ವ್ಯಾಪಾರ ಕೇಂದ್ರಗಳಾಗಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ"(ಕವಿಶಾಸಂ ೭).

ಅಧ್ಯಾಯ ೫

ಸಾಮಾಜಿಕ ಮತ್ತು ಆರ್ಥಿಕ ಜೀವನ

೩

ಸಾಮಾಜಿಕ ಮತ್ತು ಆರ್ಥಿಕ ಜೀವನ

೩.೧. ಸಾಮಾಜಿಕ ಜೀವನ

ಒಂದು ಸಮಾಜವನ್ನು ನಾವು ಅವಲೋಕಿಸಿದಾಗ ಮತ್ತು ಅಲ್ಲಿಯ ಸಾಮಾಜಿಕ ವ್ಯವಸ್ಥೆಯ ಬಗ್ಗೆ ನಮಗೆ ತಿಳಿದು ಬರೆಯಬೇಕಾದರೆ ನಾವು ಇತಿಹಾಸದ ಮೊರೆ ಹೋಗಬೇಕಾಗುತ್ತದೆ. ಯಾವುದೇ ಒಂದು ಸಮಾಜವನ್ನು ತೆಗೆದುಕೊಂಡಾಗ ಅದು ಪ್ರಾಗೈತಿಹಾಸಿಕ ಕಾಲದಿಂದ ಆಧುನಿಕ ಕಾಲದವರೆಗೆ ಮಾಡಿದ ಅನೇಕ ಸಾಧನೆಗಳು ನಮಗೆ ಸ್ಪಷ್ಟವಾಗುತ್ತವೆ. ಅಲ್ಲದೆ ಪ್ರಾಗೈತಿಹಾಸಿಕ ಕಾಲದ ಜನ ಸಮುದಾಯವು ಜೀವನೋಪಾಯಕ್ಕಾಗಿ ಬಳಸುತ್ತಿದ್ದ ವಸ್ತುಗಳು, ಉಪಕರಣಗಳು, ಸ್ಮಾರಕಗಳಾದ ದೇವಾಲಯ, ಕೋಟೆ, ಶಾಸನಗಳು, ಮುಂತಾದವುಗಳು. ನಮಗೆ ಅವರು ಮಾಡಿದ ಸಾಮಾಜಿಕ ರಂಗದ ಧಾರ್ಮಿಕ ರಂಗದ, ಆರ್ಥಿಕ, ಹೀಗೆ ಎಲ್ಲಾ ರಂಗಗಳಲ್ಲಿ ಮಾಡಿದ ಸಾಧನೆ ಜೀವನ ವಿಧಾನವನ್ನರಿಯುವುದಕ್ಕೆ ಸಾಕ್ಷಿಗಳಾಗಿವೆ.

ದೇವದುರ್ಗದ ಶಾಸನಗಳ ತಳಹದಿಯ ಮೇಲೆ ಸಮಾಜವನ್ನು ನೋಡಿದಾಗ. ಸಾಮಾಜಿಕ ಜೀವನದ ಅನೇಕ ಮುಖಗಳ ಪರಿಚಯವಾಗುತ್ತದೆ. ಅದರಲ್ಲೂ ಪ್ರಧಾನವಾಗಿ ಶಾಸನಗಳು ದಾನಧರ್ಮಗಳಿಗಾಗಿಯೇ ಹುಟ್ಟಿದವುಗಳಾದುದರಿಂದ ಆ ಒಂದು ಮುಖವೇ ಅಲ್ಲಿ ಗೋಚರಿಸುವುದು ಸಹಜ. ಇದರ ಜೊತೆಗೆ ಇತರ ವ್ಯವಸ್ಥೆಗಳನ್ನು ನಾವು ಕಾಣಬಹುದು.

ಸಾಮಾಜಿಕ ಜೀವನದ ನೆಮ್ಮದಿಗೆ ಬೇಕಾದ ಮೂಲಭೂತವಾದ ಅಂಶಗಳನ್ನು ಶಾಸನಗಳು ಸೂಚಿಸುತ್ತವೆ. ವಿದ್ಯಾಭ್ಯಾಸಕ್ಕಾಗಿ ಅನೇಕ ದೇವಾಲಯಗಳಿಗೆ, ಮಠಗಳಿಗೆ ನೀಡಿದ ದಾನ, ಬ್ರಾಹ್ಮಣರ ನಿವಾಸಕ್ಕಾಗಿ ಬಿಟ್ಟುಕೊಟ್ಟ ಹಳ್ಳಿಗಳು, (ಅಗ್ರಹಾರಗಳು), ರಾಜಕೀಯ ಮತ್ತು ಧಾರ್ಮಿಕ, ಸಾಮಾಜಿಕ ರಂಗಗಳಲ್ಲಿ ಸ್ತ್ರೀಯರಿಗೆ ಉನ್ನತವಾದ ಸ್ಥಾನ ಕೊಟ್ಟಿದ್ದರೆಂಬುದನ್ನು ಶಾಸನಗಳು ಸಾರುತ್ತವೆ. ಚತುರ್ವರ್ಣಗಳು, ಪರಿಪಾಲನೆ ಮತ್ತು ವಂಶ ಪಾರಂಪರ್ಯವಾಗಿ ಆಯಾಯ ವರ್ಣಗಳ, ವೃತ್ತಿಗಳ ಜೊತೆಗೆ ಸಾಮಾಜಿಕ ಕಾರ್ಯಗಳಾದ ಕೆರೆ, ಬಾವಿ ಮುಂತಾದ ಕೆಲಸಗಳಲ್ಲಿ ಜನತೆಯಲ್ಲಿದ್ದ ಸಹಕಾರ ಮನೋಭಾವನೆ ಮುಂತಾದ ಸಾಮಾಜಿಕ ವ್ಯವಸ್ಥೆಯ ವಿವಿಧ ವಿಷಯಗಳು ಶಾಸನಗಳಿಂದ ತಿಳಿದು ಬರುತ್ತವೆ.

ಪ್ರಮುಖ ಜಾತಿಗಳು ಮತ್ತು ವರ್ಗಗಳು

ಜಾತಿ ಎಂಬುದು ಭಾರತೀಯರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಒಂದು ಸಾಮಾಜಿಕ ವ್ಯವಸ್ಥೆ. ಸಮಾಜದ ಜನರ ಧರ್ಮ. ಸಂಪ್ರದಾಯ, ಆಚರಣೆ, ವೃತ್ತಿಗಳು, ಇನ್ನಿತರ ಅನೇಕ ಚಟುವಟಿಕೆಗಳು ಜಾತಿಯಿಂದ ನಿರ್ಧಾರವಾಗುತ್ತವೆ. ಜನರ ವೈಯಕ್ತಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಜನರ ಕಾರ್ಯಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಒಂದು ಪ್ರಮುಖ ವ್ಯವಸ್ಥೆಯಾಗಿ ಜಾತಿ ಪದ್ಧತಿಯು ಬೆಳೆದಿದೆ. ಈ ಜಾತಿ ಪದ್ಧತಿಯಲ್ಲಿ ಅನೇಕ ಆಚರಣೆಯ ಜೊತೆಗೆ ಕೆಲವು ಕಟ್ಟಳೆಗಳನ್ನು ನಾವು ಕಾಣುತ್ತವೆ. ದೇವದುರ್ಗ ತಾಲ್ಲೂಕಿನಲ್ಲಿ ಬರುವ ಅನೇಕ ಜಾತಿಗಳನ್ನು, ವರ್ಗಗಳನ್ನು ಶಾಸನಗಳ ಮೂಲಕ ನಾವು ನೋಡಬಹುದಾಗಿದೆ.

ಬ್ರಾಹ್ಮಣರು : ವೇದಗಳ ಕಾಲವನ್ನು ತೆಗೆದುಕೊಂಡಾಗ ನಾವು ಈ ನಾಲ್ಕು ವರ್ಗಗಳು ಜಾತಿಗಳು ಕಾಣುತ್ತವೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಎಂಬ ವರ್ಗಗಳ ನೋಡುತ್ತವೆ. ಬ್ರಾಹ್ಮಣರು ವೇದಾಧ್ಯಯನ ಮತ್ತು ಪೌರೋಹಿತ್ಯ ಮಾಡುತ್ತಿದ್ದರು. ಇತ್ತೀಚೆಗೆ ಬ್ರಾಹ್ಮಣರು ಇತರ ಕಸುಬುಗಳಲ್ಲಿ ತೊಡಗಿದ್ದಾರೆ.

ಗಬ್ಬೂರು ಗ್ರಾಮದ ಕ್ರಿ.ಶ.೧೧೧೮ರ ಶಾಸನವು ಬ್ರಾಹ್ಮಣರಾದ ಜನ್ನಯಭಟ್ಟ, ಸೋಮಯಾಜಿ, ಮುಸ್ಮಣ ಭಟ್ಟೋಪಾಧ್ಯಾಯ, ಡೋಣಭಟ್ಟ, ಮುಸ್ಯಣ ಭಟ್ಟನ ಪತಿ, ನಾಲಿಕಬ್ಬೆಯರು ಮಹಾದೇವರ ಪೂಜಾ ಕಾರ್ಯಗಳಗಾಗಿ ಭೂದಾನ ನೀಡಿದ್ದಾರೆ(ಕವಿಶಾಸಂ ೭, ಪು.೪೫). ಗಬ್ಬೂರು ಗ್ರಾಮದ ಕ್ರಿ.ಶ.೧೧೭೦ರ ಶಾಸನದಲ್ಲಿ ಹರಿಹರ ದಾಸರಾದ ಸೋಮೇಶ್ವರ ಭಟ್ಟ ಮತ್ತು ಮಗಳಾದ ಲಕ್ಷುಮಕ್ಕ ಹರಿಹರ ದೇವರಿಗೆ ಮತ್ತು ಸಿದ್ಧಸೋಮನಾಥ ದೇವರಿಗೆ ಧರ್ಮದ ಏತಕ್ಕೆ ಸಲ್ಲುವಂತೆ ತನ್ನ ತಂದೆ ಮತ್ತು ಗಂಡನ ಶ್ರೇಯೋಭಿವೃದ್ಧಿಗೆಂದು ಬಿಡುತ್ತಾಳೆ(ಕವಿಶಾಸಂ ೭, ಪು.೫೭). ಗಬ್ಬೂರು ಗ್ರಾಮದ ಕ್ರಿ.ಶ.೧೧೪೯ರ ಶಾಸನದಲ್ಲಿ ವೈಷ್ಣವ ಚಾಕಣಭಟ್ಟ, ತಿಪ್ಪಣ ಭಟ್ಟ, ಇವನ ಹೆಂಡತಿ ಮಲ್ಲಿಯಕ್ಕ ಮಗನಾದ ಮಲ್ಲಿದೇವ, ದೇವಣಭಟ್ಟ, ಸೋಮಯಾಜಿ, ವಾಮದೇವ ಭಟ್ಟ ಪದ್ಮನಾಭಭಟ್ಟ ಕೇಶವ ದೇವರಿಗೆ ತೋಟ ಮತ್ತು ಭೂಮಿಯನ್ನು ದೇವರಿಗೆ ನೀಡುತ್ತಾರೆ(ಕವಿಶಾಸಂ ೭, ಪು.೫೭).

ಅದೇ ಗ್ರಾಮದ ಕ್ರಿ.ಶ.೧೧೨೪ರ ಶಾಸನದಲ್ಲಿ ಗೂಬ್ಬೂರು ಪಟ್ಟಣ ಕೇಶವ ದೇವರಿಗೆ ಬೇತಾಳಿಯ ಸೋಮೇಶ್ವರಭಟ್ಟನ ಮಗ ಮಲ್ಲಿದೇವ ಭಟ್ಟನು ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೭೪). ಅದೇ ಗ್ರಾಮದ ಕ್ರಿ.ಶ.೧೧೨೭ರ ಶಾಸನದಲ್ಲಿ ಮಾಧವ ಸೋಮಯಾಜಿ, ಆದಿತ್ಯಭಟ್ಟ ಸೋಮಯಾಜಿ, ಮೆಂಚಿಭಟ್ಟೋಪಾಧ್ಯಯ ಸೋಮಯಾಜಿ, ಶಂಕರ ಭಟ್ಟೋಪಾಧ್ಯಾಯ, ಶ್ರೀಪತಿ ಭಟ್ಟೋಪಾಧ್ಯಯ, ಶ್ರೀಧರ ಭಟ್ಟೋಪಾಧಾಯ ಕೇಶವ ಹರಿಹರ, ಗಣಪತಿ, ಸರಸ್ವತಿ, ಸೂರ್ಯ,

ಉಮಾ ಮಹೇಶ್ವರ ದೇವರ ಪೂಜೆಗಾಗಿ ಭೂದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೭೭). ಅದೇ ಗ್ರಾಮದ ಕ್ರಿ.ಶ.೧೨೧೩ರ ಶಾಸನದಲ್ಲಿ ನಾಗದೇವಭಟ್ಟ, ಗೋವಿಂದ ಭಟ್ಟ, ಕೇಶವ ಭಟ್ಟ, ಮೈಲಾರ ಭಟ್ಟ, ರೇವಣ್ಣ ಭಟ್ಟ, ನರಸಿಂಹಭಟ್ಟ, ಮುದ್ದಣ್ಣಭಟ್ಟ, ತಿಪ್ಪಣ ಭಟ್ಟ, ವಿಶ್ವನಾಥ ಭಟ್ಟ ಮುಂತಾದವರ ಉಲ್ಲೇಖವಿದೆ(ಕವಿಶಾಸಂ ೭, ಪು.೬೪). ಅದೇ ಗ್ರಾಮದ ಕ್ರಿ.ಶ.೧೧೪೧ ಹಾಗೂ ೧೯೫ರ ಶಾಸನದಲ್ಲಿ ವೈಷ್ಣವ ಮುಂಚೈಪ್ಪಣ್ಣ, ವೈಷ್ಣವ ಕಂದರ್ಪಭಟ್ಟ, ಕೇಶವಭಟ್ಟ, ಭಟ್ಟೋಪಾಧ್ಯಯ, ಸೋಮಯಾಜಿಯೆಂಬುವರು, ರಾಮೇಶ್ವರ ದೇವರಿಗೆ ಕೇಶವ ದೇವರಿಗೆ ದಾನ ನೀಡುತ್ತಾರೆ(ಕವಿಶಾಸಂ ೭, ಪು.೬೮-೬೯).

೨. ಕ್ಷತ್ರಿಯರು : ಕ್ಷತ್ರಿಯರು ಬ್ರಹ್ಮನ ಭುಜಗಳಿಂದ ಜನಿಸಿದವರು ಎಂದು ಹೇಳಲಾಗುತ್ತದೆ. ಅಂದರೆ ರಾಜನಿಗೆ ಸಹಾಯ ಮಾಡುವುದರ ಜೊತೆಗೆ ಅನೇಕ ಯುದ್ಧಗಳನ್ನು ಮಾಡಿ ಪ್ರಜೆಗಳ ರಕ್ಷಣೆ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಇವರ ಉಲ್ಲೇಖವಿಲ್ಲವೆಂದರೂ ರಾಯಚೂರು ಜಿಲ್ಲೆಯ ಅನೇಕ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿಸಿದ್ದರೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಗಬ್ಬೂರು ಗ್ರಾಮದ ಕ್ರಿ.ಶ.೧೧೪೪ ಶಾಸನದಲ್ಲಿ ಬಿಲ್ಲ ಮುನ್ನೂರುವರು ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೭೧). ಅಂದರೆ ಬಿಲ್ಲರು ಎಂದರೆ ಸೈನಿಕರು. ಮುನ್ನೂರು ಎಂಬುದು ಇವರ ಸಂಖ್ಯೆ. ಬಿಲ್ಲ ಮುನ್ನೂರು ಎಂದರೆ ಯೋಧರ ಸಂಘ ಎಂದು ಅರ್ಥವಾಗುತ್ತದೆ. ಚಂದನ ಕೇರಿಯ ಕ್ರಿ.ಶ.೧೨ನೇ ಶತಮಾನದ ಶಾಸನದಲ್ಲಿ ಬಿಲ್ಲ ಮುನ್ನೂರುರು ಹೇಮ್ಮ್ಮೇಶ್ವರ ದೇವರಿಗೆ, ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೮).

೩. ವೈಶ್ಯರು : ಬ್ರಹ್ಮನ ತೊಡೆಗಳಿಂದ ಜನಿಸಿದ ವೈಶ್ಯರು ಕೃಷಿ, ವ್ಯಾಪಾರ, ಉದ್ದಿಮೆಯಲ್ಲಿ ನಿರತರಾಗಿದ್ದರು. ಅಂದರೆ ವ್ಯಾಪಾರವನ್ನು ಮಾಡುವುದರ ಜೊತೆಗೆ ದೇಶದ ಸಂಪತ್ತನ್ನು ಹೆಚ್ಚಿಸುವುದು. ಇವರ ಮುಖ್ಯ ಕರ್ತವ್ಯವಾಗಿತ್ತು.

ಇವರು ತಮ್ಮನ್ನು ಆರ್ಯವೈಶ್ಯ, ಕೋಮಟಿ ಮತ್ತು ಶೆಟ್ಟಿ ಎಂದು ಕರೆದುಕೊಳ್ಳುತ್ತಾರೆ. ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ, ಅನೇಕ ರೀತಿಯ ವೃತ್ತ ಸಂಘಗಳಿದ್ದು, ಅವುಗಳಲ್ಲಿ ಮಾಲಗಾರ ಅರವತ್ತೊಕ್ಕಲು, ಬಿಲ್ಲರು, ನಕರರು, ಕಮ್ಮಟಗಾರ, ಕಂಚುಗಾರರು, ಮೇಳಾಸಿರ್ಪಿರ್ವರು (ಒಕ್ಕಲಿಗರು) ಮುಂತಾದವರನ್ನು ನೋಡಬಹುದಾಗಿದೆ.

ಮಾಲಗಾರರು : (ಹೂಗಾರರು) ಹೂಗಳಿಂದ ಬಾಸಿಂಗ, ಹೂವಿನ ಹಾರ, ದಂಡೆ ಮುಂತಾದವುಗಳನ್ನು ಮಾಡಿ ವ್ಯಾಪಾರ ಮಾಡುವರು. ಗಬ್ಬೂರು ಗ್ರಾಮದ ಕ್ರಿ.ಶ.೧೧೫೪ರ ಶಾಸನದಲ್ಲಿ ಈ ಮಾಲೆಗಾರರು ತ್ರಿಪುರಾಂತಕ ಮುಂದೆ ಇದ್ದ ಕೇಶವ ದೇವರಿಗೆ ಎರಡು ಹೂದೋಟಗಳ ದಾನ ನೀಡುತ್ತಾರೆ(ಕವಿಶಾಸಂ

೭, ಪು.೫೩). ಅದೇ ಗ್ರಾಮ ಕ್ರಿ.ಶ.೧೧೪೪ ಶಾಸನದಲ್ಲಿ ಗೂಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ, ಪುರಸ್ಕಾರಕ್ಕೆ ಗೂಬ್ಬೂರಿನ ಮಾಲೆಗಾರ ಅರವತ್ತೊಕ್ಕಲು ಭತ್ತ ನೀಡಬೇಕೆಂದಿದೆ(ಕವಿಶಾಸಂ ೭, ಪು.೭೧). ಚಂದನಕೇರಿಯ ಗ್ರಾಮದ ಕ್ರಿ.ಶ.೧೨ನೇ ಶತಮಾನದ ಶಾಸನದಲ್ಲಿ ಮಲ್ಲಿಕಾರ್ಜುನ ದೇವರಿಗೆ ದಾನ ನೀಡುತ್ತಾರೆ(ಕವಿಶಾಸಂ ೭, ಪು.೧೦೮).

ಕಂಚುಗಾರರು : ಇವರು ಪ್ರಾಚೀನ ಕಾಲದಲ್ಲಿ ತಾಮ್ರಪಟಗಳನ್ನು ನಾಣ್ಯಗಳನ್ನು ತಯಾರಿಸುತ್ತಿದ್ದರು. ಗಬ್ಬೂರಿನ ಕ್ರಿ.ಶ.೧೧೯೮ರ ಶಾಸನದಲ್ಲಿ ಕಮ್ಮಟಗಾರರು (ಟಂಕಸಾಲೆ) ಬ್ರಹ್ಮಜಿನಾಲಯಕ್ಕೆ ವೀಸ-೨, ಕಾಣಿ-೨, ವೀಸ-೧ ಮತ್ತು ಕಂಚಿನ ಭಂಡವ (ಆಂಡ) ಕೊಂಡಲ್ಲಿ ಕೊಟ್ಟ ತೆರಿಗೆಯನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪). ಗೂಗಲ್ಲು ಗ್ರಾಮದ ಕ್ರಿ.ಶ.೧೮೨೫ರ ಶಾಸನದಲ್ಲಿ ದೇವಾಲಯದ ಗಂಟೆಯನ್ನು ಗೂಬ್ಬೂರು ಕಂಚಗಾರ ಅಮ್ಮ ಮಾಡಿಸಿದಂತೆ ಹೇಳಲಾಗಿದೆ(ಕವಿಶಾಸಂ ೭, ಪು.೯೩).

ಶೆಟ್ಟಿಯರು(ಕೆಟ್ಟಿಯರು) : ವ್ಯಾಪಾರವನ್ನು ಮಾಡುವ ಪ್ರಮುಖ ವ್ಯಕ್ತಿಗಳು ಶೆಟ್ಟಿಯರು ಎಂದು ಕರೆಯುತ್ತಾರೆ. ಗಬ್ಬೂರು ಗ್ರಾಮದ ಕ್ರಿ.ಶ.೧೧೭೧ರ ಶಾಸನದಲ್ಲಿ ಹಂನವಣದ ಸೆಟ್ಟಿಯರು ತಾವು ಮಾರಿದ ಎಲೆಯ ಹೇರಿಗೆ ೫೦ ಎಲೆಯನ್ನು ಪ್ರಸನ್ನಕೇಶವ ದೇವರಿಗೆ ದಾನ ಬಿಡುತ್ತಾರೆ(ಕವಿಶಾಸಂ ೭, ಪು.೫೯).

ವೀರಗೋಟ್ ಗ್ರಾಮದ ಕ್ರಿ.ಶ.೧೨೨೩ರ ಶಾಸನದಲ್ಲಿ ವ್ಯಾಪಾರ ಸೆಟ್ಟಿಗುತ್ತರಾದ ರೇಚಿಸೆಟ್ಟಿ, ಪದ್ಮಿಸೆಟ್ಟಿ, ಮಾಚಿಸೆಟ್ಟಿ ಸಂಕರದೇವರಿಗೆ ಒಂದು ಗ್ರಾಮವನ್ನು ನೀಡುತ್ತಾರೆ.

೪. ಶೂದ್ರರು : ೩ ವರ್ಗಗಳನ್ನು ಬಿಟ್ಟ ಕಾರ್ಯಗಳನ್ನು ಮಾಡುವರು. ಅಂದರೆ ಮೇಲಿನ ವರ್ಗಗಳ ಜನರ ಸೇವೆಯನ್ನು ಮಾಡುವರು. ಇವರು ಬ್ರಹ್ಮನ ಪಾದಗಳಿಂದ ಜನಿಸಿದವರು. ಹಾಗೂ ಗೋವುಗಳನ್ನು ಕಾಯುವವರು ಆಗಿದ್ದಾರೆ.

ಗಬ್ಬೂರು ಗ್ರಾಮದ ಕ್ರಿ.ಶ.೧೦೮೪ರ ಶಾಸನದಲ್ಲಿ ಗಬ್ಬೂರು ಹಳ್ಳಿಗಳ ಜನರು ನೊಗಕಟ್ಟಿ ಉತ್ತು ಬಿತ್ತಿ ಬೆಳೆದ ಬೆಳೆಯಲ್ಲಿ ಸೂಡು ಜೋಳವನ್ನು ಹಾಗೂ ವರುಷಪ್ರತಿ ಬಳಸುವ ಒಂದೊಂದು ಕುಂಟಿಗೆ ಒಂದು ಹಣದ ಲೆಕ್ಕದಲ್ಲಿ ನೀಡಬೇಕೆಂದು ತೀರ್ಮಾನಿಸುತ್ತಾರೆ(ಕವಿಶಾಸಂ ೭, ಪು.೪೭).

ಇತರ ಪ್ರಮುಖ ಜಾತಿಗಳು

೧. ಗಾಣಿಗರು : ಎಣ್ಣೆ ಹಿಂಡುವುದು ಮತ್ತು ಮಾರುವುದು ಇವರ ಮುಖ್ಯ ಕಸುಬು. ವ್ಯಾಪಾರವನ್ನೇ ಉದ್ಯೋಗವಾಗಿಸಿಕೊಂಡಿರುವ ಇವರು ಈಗೀಗ ಕೃಷಿಕರಾಗಿಯೂ, ಕೆಲವರು ಕೃಷಿ ಕೂಲಿಕಾರರಾಗಿಯೂ ದುಡಿಯುತ್ತಾರೆ. ಇವರಲ್ಲಿ ನಾಲ್ಕು ಪಂಗಡಗಳಿವೆ. ಜ್ಯೋತಿಪಣ, ಜ್ಯೋತಿನಗರ, ದೇವಗಾಣಿಗ ಮತ್ತು ಸಜ್ಜನ ಗಾಣಿಗ ಎಂದು ಕರೆಯುತ್ತಾರೆ. ಇವರು ದೇವದುರ್ಗದ ಅನೇಕ ಗ್ರಾಮಗಳಲ್ಲಿದ್ದಾರೆ.

ಗಬ್ಬೂರು ಗ್ರಾಮದ ಕ್ರಿ.ಶ.೧೧೫೪ರ ಶಾಸನದಲ್ಲಿ ಗಾಣದ ಕಾಡಿಸೆಟ್ಟಿ, ಗಾಣದ ದಾಸಿಮಯ್ಯ ತ್ರಿಪುರಾಂತಕ ದೇವರಿಗೆ ದಾನವನ್ನು ನೀಡುತ್ತಾರೆ(ಕವಿಶಾಸಂ ೭, ಪು.೫೪). ಗಬ್ಬೂರು ಗ್ರಾಮದ ಕ್ರಿ.ಶ.೧೦೮೪ರ ಶಾಸನದಲ್ಲಿ ಚಿಕ್ಕರಸನೆಂಬುವವನು ನಂದಾದೀವಿಗೆಗೆ ಎಣ್ಣೆ ಗಾಣವನ್ನು ಬಿಡುತ್ತಾನೆ(ಕವಿಶಾಸಂ ೭, ಪು.೮೮). ಚಂದನಕೇರಿಯ ಕ್ರಿ.ಶ.೧೨ನೇ ಶಾಸನವು ಹೆಮ್ಮಡಿ ದೇವರಸನು ಹೇಮೇಶ್ವರ ದೇವರ ನಂದಾ ದೀವಿಗೆಗೆ ೧ ಗಾಣವನ್ನು ನೀಡುತ್ತಾನೆ(ಕವಿಶಾಸಂ ೭, ಪು.೧೦೮).

ಜೇಡರು : ಜೇಡರು ಅಥವಾ ನೇಕಾರರು ಬಟ್ಟೆ ನೇಯ್ಗೆ ಮತ್ತು ಬಣ್ಣ ಹಾಕುವವರು. ಅವರು ತಮ್ಮನ್ನು ಕುರುಹಿನ ಶೆಟ್ಟಿ, ಬಿಳಿಮಗ್ಗ, ತೊಗಟೆ(ಸಾಲೆ), ಸೇಣಿಗ, ಜಮಖಾನ, ಪದ್ಮಸಾಲೆ ಎಂದು ಕರೆದುಕೊಳ್ಳುತ್ತಾರೆ.

ಚಂದನಕೇರಿಯ ೧೨ನೇ ಶತಮಾನದ ಶಾಸನದಲ್ಲಿ ಹೆಮ್ಮಡಿದೇವರಸನು ಜೇಡರೊಕ್ಕಲುಗಳು ದಾನ ನೀಡುತ್ತಾರೆ. ಜೇಡರ ಜಾತಿಯ ಒಕ್ಕಲಿಗರು ಎಂದು ಅರ್ಥ. ಗಬ್ಬೂರು ಗ್ರಾಮದ ಕ್ರಿ.ಶ.೧೧೪೮ರ ಶಾಸನದಲ್ಲಿ ಸೋಮೇಶ್ವರ ದೇವರ ಭಕ್ತರಾದ ಜೇಡಕುಳತಿಳಕ ಜೇಡರ ದಾಸಿಮಯ್ಯನ ಪ್ರಿಯಪುತ್ರರಾದ ಸಕಲ ಜೇಡ ಗೊತ್ತಳಿಗಳು ಸೇರಿ ತಮ್ಮ ಕುಲದೈವವಾದ ಗೊಜ್ಜೇಶ್ವರ ದೇವರ ಪೂಜೆ ಪುನಸ್ಕಾರಕ್ಕೆ ೧ ಹಾಗವನ್ನು ಬಿಡುತ್ತಾರೆ. ಮಲ್ಲಿಕಾರ್ಜುನ ದೇವರಿಗೆ ೫೦೦ ಜನ ಜೇಡಗೊತ್ತಳಿಗಳು ಆರು ವೀಸವನ್ನು ಬಿಡುತ್ತಾರೆ. ಜೇಡೇಶ್ವರ ದೇವರಿಗೆ ಸೂಳೆ ಹೇಮವ್ವ ಒಂದು ಹಣ ನೀಡುತ್ತಾಳೆ(ಕವಿಶಾಸಂ ೭, ಪು.೮೧).

ಬೇಡರು : ಇವರನ್ನು ನಾಯಕ, ವಾಲ್ಮೀಕಿ, ತಳವಾರ, ಪಾಳೇಗಾರ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ವಾಲ್ಮೀಕಿಯು ಬೇಡನಾಗಿದ್ದ ಎಂಬ ನಂಬಿಕೆಯಿಂದ ಇವರು ವಾಲ್ಮೀಕಿ ಮತಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ. ಅರಸೊತ್ತಿಗೆ ಕಾಲದಲ್ಲಿ ಇವರು ಸೈನಿಕರಾಗಿದ್ದರು ಮತ್ತು ಅನೇಕ ಸಂಸ್ಥಾನಗಳಲ್ಲಿ ಪಾಳೇಗಾರರಾಗಿಯೂ ಇದ್ದರು. ಇವರಲ್ಲಿ ಊರ ಬೇಡರು ಮತ್ತು ಮ್ಯಾಸ ಬೇಡರು ಎಂಬ ಒಳ ವಿಭಾಗಗಳಿವೆ.

ದೇವದುರ್ಗದ ಕ್ರಿ.ಶ.೧೬೧೨ರ ಶಾಸನದಲ್ಲಿ ಕೇಶವನಾಯಕನು ದೇವದುರ್ಗದಲ್ಲಿ ಕೆರೆ, ಗೋಪಾಲಕೃಷ್ಣನ ದೇವಾಲಯ, ಅರಮನೆ ನಿರ್ಮಿಸಿದ ವಿವರಗಳಿವೆ. ಅದೇ ಗ್ರಾಮದ ಕ್ರಿ.ಶ.೧೮ನೇ ಶತಮಾನದ ಶಾಸನದಲ್ಲಿ ಪವಿನಾಯಕ ಎಂದು ಉಲ್ಲೇಖವಿದೆ. ಅದೇ ಗ್ರಾಮದ ಕೃಷ್ಣಪ್ಪ ನಾಯಕನ ಉಲ್ಲೇಖವಿದೆ (ಕವಿಶಾಸಂ ೭, ಪು.೧೧೪). ಅಲ್ಲದೆ ದೇವದುರ್ಗ, ಕ್ಯಾದ್ಗಿಗೇರ, ಅರಕೇರ, ಜಾಲಹಳ್ಳಿ ನಾಯಕ ಸಂಸ್ಥಾನಗಳು ಆಳ್ವಿಕೆ ಮಾಡಿದ್ದು, ಇವರ ಅನೇಕ ಕುರುಹುಗಳಿವೆ.

ಕುರುಬರು : ಇವರು ಸಾಂಪ್ರದಾಯಕವಾಗಿ ಕುರಿ ಸಾಕುವರು ಮತ್ತು ಕಂಬಳಿ ನೇಯುವವರು. ಹಲವರು ಕೃಷಿಯಲ್ಲಿ ತೊಡಗಿದ್ದಾರೆ. ಹಾಲು ಕುರುಬರು, ಹಂಡೆ ಕುರುಬರು ಮತ್ತು ಕಂಬಳಿ ಕುರುಬರು ಎಂಬ ೩ ಪಂಗಡಗಳಿವೆ. ಇವು ಗಿಡ, ಮರ, ಪ್ರಾಣಿಗಳ ಕಂಬಳಿ, ಕುಲಲಾಂಛನ ಹೊಂದಿರುತ್ತವೆ. ಕುರುಬರಲ್ಲಿ

ಕೆಲವರು ಶೈವ ಮತಾವಲಂಬಿಗಳಾದರೂ ಎಲ್ಲರೂ ಬೀರ, ಬೀರಪ್ಪ, ಬೀರಲಿಂಗ, ಅನ್ನುವ ದೇವರನ್ನು ಪೂಜಿಸುತ್ತಾರೆ. ಈ ದೇವರ ಗೌರವಾರ್ಥವಾಗಿ ಡೊಳ್ಳು, ಕುಣಿತವನ್ನು ಮಾಡುತ್ತಾರೆ.

ಗಬ್ಬೂರಿನಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದ ಬರಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ಬೀರಪ್ಪದೇವರು ಅನೇಕ ಕುರಿ ಮೇಕೆಗಳ ಜೊತೆಗೆ ಇದ್ದಾನೆ. ಹಾಗೂ ರಾಮದುರ್ಗದ ಬೆಳೂಣಿ ಸಿದ್ಧೇಶ್ವರ ದೇವಾಲಯದ ಪಕ್ಕದಲ್ಲಿ ಕುರುಬನು ವೀರಾವೇಶದಿಂದ ಹೋರಾಡಿ ಮರಣವನ್ನು ಹೊಂದಿದ ಸ್ಮರಣಾರ್ಥವಾಗಿ ಅಲ್ಲಿ ವೀರಗಲ್ಲುಗಳಿವೆ. ವೀರನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬರ್ಚಿ ಸೊಂಟದಲ್ಲಿ ಸಣ್ಣ ಕತ್ತಿ ಅನೇಕ ವಸ್ತ್ರಾಭರಣಗಳು ಎಡಭಾಗದಲ್ಲಿ ಕುರಿ ಮೇಕೆಯ ಚಿತ್ರಗಳನ್ನು ಕಾಣಬಹುದು. ಎರಡನೆಯ ವೀರಗಲ್ಲಿನಲ್ಲಿ ವೀರನು ಎರಡು ಕೈಯಲ್ಲಿ ಡಮರುಗಳನ್ನು ಹಿಡಿದ್ದಾನೆ. ಅನೇಕ ಮೇಕೆಗಳು ಇವೆ. ಆತನ ಪಕ್ಕದಲ್ಲಿ ಅವನ ಹೆಂಡತಿ ಇದ್ದಾಳೆ. ಬಿಬ್ಬಿಬಾಚಯ್ಯ ತನ್ನ ವಚನದಲ್ಲಿ ಹೀಗೆ ತಿಳಿಸಿದ್ದಾನೆ.

ಹಿಂಡಿನೊಳಗಣ ಕುರುಬ, ತೋಳ ತಿಂಬಾಗ
ಕುರಿ ಮಾಣಿಸಬಲ್ಲವೆ?
ಕಟ್ಟೊಡೆಯ ಕೊಲುವಾಗ
ಮತ್ತೊಬ್ಬರು ಬೇಡಾ ಎನಲುಂಟೆ
ಹುಟ್ಟಿಸಿದಾತ ಭವದ ಗೊತ್ತಿಂಗೆ ತಳ್ಳುವಡೆ
ನಮ್ಮಗೊತ್ತಿನ ಅರಿವೇನ ಮಾಡುವುದು?
ಉಭಯವು ನಿನ್ನಾಟ, ಏಣಾಂಕಧರ ಸೋಮೇಶ್ವರ ಲಿಂಗವೆ
(ಗೊಬ್ಬೂರು ಬಿಬ್ಬಿಬಾಚಯ್ಯ, ಡಾ.ಬಸವಲಿಂಗ ಸೊಪ್ಪಿಮಠ, ಪು.೬೦)

ಇಲ್ಲಿ ಕುರುಬನ ಕುರಿ ತೋಳದ ಉದಾಹರಣೆಯನ್ನು ಮನುಷ್ಯನ ಶರೀರ ಕರ್ಮ ಶರೀರವನ್ನು ತಿನ್ನಲಿ. ಆದ್ದರಿಂದ ತನ್ನಾತ್ಮಕ್ಕೆ ಬಾಧೆ ಏನು ಎನ್ನುತ್ತಾನೆ. ಅಂದರೆ ಹುಟ್ಟು-ಸಾವು ನಮ್ಮ ಕೈಯಲ್ಲಿಲ್ಲ. ಎನ್ನುವ ಅರ್ಥ ತಿಳಿದುಬರುತ್ತದೆ.

ಬಣಜಿಗರು : ಇವರನ್ನು ಶೆಟ್ಟರು, ನಾಯ್ಡು, ಬಲಿಜಿ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಇವರ ಕಸುಬು ವ್ಯಾಪಾರ. ಇವರಲ್ಲಿ ಪಂಚಮ ಬಣಜಿಗರು, ಶೀಲವಂತ ಬಣಜಿಗರು ಎಂದು ಎರಡು ಪಂಗಡಗಳಿವೆ. ಇವರು ಲಿಂಗಾಯತ ಮತಕ್ಕೆ ಸೇರಿದವರು.

ಚಂದನಕೇರಿಯ ಕ್ರಿ.ಶ.೧೧ನೇ ಶತಮಾನದ ಶಾಸನದಲ್ಲಿ ೫೦೦ ಜನ ಬಣಜಿಗರು ದಾನ ಬಿಟ್ಟ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೭). ಅಲ್ಲದೆ ದೇವದುರ್ಗ ಅನೇಕ ಗ್ರಾಮಗಳಲ್ಲಿ ಬಣಜಿಗರು ಇದ್ದು ವ್ಯಾಪಾರವನ್ನು ಹಾಗೂ ಇತರ ಕೆಲಸಗಳನ್ನು ಮಾಡುತ್ತಾರೆ.

ಡೊಂಬರು : ಡೊಂಬರು ಸಾಂಪ್ರದಾಯಕವಾಗಿ ಡೊಂಬರಾಟ ಆಡುವವರು ಮತ್ತು ಹಾವಾಡಿಗರು. ತಮ್ಮನ್ನು ಡೋಮ, ದೊಂಬ, ದೊಮ್ಮರ ಎಂದು ಕರೆದುಕೊಳ್ಳುತ್ತಾರೆ. ಇವರು ಉತ್ತರ ಭಾರತದ ಡೋಮ ಕುಲಸಂಜಾತರೆಂದು ನಂಬಲಾಗುತ್ತದೆ. ತಮ್ಮ ಸಾಂಪ್ರದಾಯಕ ಕುಶಲತೆ, ಕಸರತ್ತು ಮುಂತಾದವುಗಳಿಂದ ಇವರು ತಮ್ಮ ಜೀವನ ನಡೆಸುತ್ತಾರೆ (ಕರ್ನಾಟಕ ಕನ್ನಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೪).

ಮುಸ್ಲಿಂರು : ಇವರಲ್ಲಿ ಅನೇಕ ಉಪಜಾತಿಗಳಿವೆ. ಅದರಲ್ಲಿ ಬುಡುಬುಡಕಿಯರು, ವಜೀರರು ಈ ತಾಲ್ಲೂಕಿನಲ್ಲಿ ವಿಶೇಷವಾಗಿದ್ದಾರೆ. ಬುಡುಬಡುಕಿಯರು ತಮ್ಮನ್ನು ಗಿಡ್ಡಿಕ್ಕಿ ಮತ್ತು ಪಿಂಗಳೆ ಎಂದು ಕರೆದುಕೊಳ್ಳುತ್ತಾರೆ. ರಾಮದುರ್ಗದ ಕ್ರಿ.ಶ.೧೬೧೬ರ ಶಾಸನದಲ್ಲಿ ಹಿಂದೂ ವಜೀರರು, ತುರುಕ ವಜೀರರು ಎಂದು ಉಲ್ಲೇಖವಿದೆ.

ಗೊಲ್ಲರು : ಗೊಲ್ಲರು ಯಾದವಗೊಲ್ಲ, ಗೋಪಾಲ ಎಂಬ ಅನೇಕ ಹೆಸರುಗಳಿಂದ ಪರಿಚಿತರಾಗಿದ್ದಾರೆ. ಸಾಂಪ್ರದಾಯಿಕವಾಗಿ ಗೋವುಗಳನ್ನು ಕಾಯುವವರು ಮತ್ತು ಹೈನುಗಾರಿಕೆ ಮಾಡುವವರು. ಗೊಬ್ಬೂರು, ಗೊಂದಪಲ್ಲಿ, ಗೊಗಲ್ಲು ಮುಂತಾದ ಊರುಗಳನ್ನು ತೆಗೆದುಕೊಂಡಾಗ ಗೋವುಗಳ ಹೆಸರು ಸ್ಪಷ್ಟವಾಗುತ್ತದೆ. ಅಲ್ಲದೆ, ಇಲ್ಲಿ ಅನೇಕ ಗೊಲ್ಲರು ಇಂದಿಗೂ ಹೈನುಗಾರಿಕೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಕುಂಬಾರರು : ಇವರು ಸಾಂಪ್ರದಾಯಕವಾಗಿ ಮಡಿಕೆ ಹಂಚುಗಳನ್ನು ತಯಾರಿಸುವವರು. ಇವರು ವೀರಶೈವ ಮತಾವಲಂಬಿಗಳಾಗಿದ್ದು ಇಂದಿಗೂ ದೇವದುರ್ಗದ ಅನೇಕ ಗ್ರಾಮಗಳಲ್ಲಿ ಮಡಿಕೆ, ಇಟ್ಟಿಗೆ, ಗಡಿಗೆ ಮುಚ್ಚಳ, ಸಣ್ಣ ಸಣ್ಣ ಪಾತ್ರೆಗಳನ್ನು ಮಾಡುತ್ತಿದ್ದಾರೆ.

ಒಡ್ಡರು : ಒಡ್ಡರನ್ನು ಭೋವಿಗಳೆಂದು ಕರೆಯುತ್ತಾರೆ. ಇವರಲ್ಲಿ ಕಲ್ಲು ಒಡ್ಡರು, ಮಣ್ಣು ಒಡ್ಡರು ಮತ್ತು ಉಪ್ಪು ಒಡ್ಡರು ಎಂಬ ಮೂರು ಪಂಗಡಗಳಿವೆ. ಇವರು ಬಂಡೆಗಳನ್ನು ಸೀಳುವುದು, ಕಲ್ಲು ಒಡೆಯುವುದು, ಬಾವಿ ತೋಡುವುದು ಮುಂತಾದ ಉದ್ಯೋಗಗಳನ್ನು ಮಾಡುತ್ತಾರೆ.

ಕೂರುವರು : ಕೂರುವರನ್ನು ಕೊರಮಶೆಟ್ಟಿ, ಕಂಚಿಕೊರವ, ಕೊರಚ ಎಂದೆಲ್ಲಾ ಕರೆಯುತ್ತಾರೆ. ಇವರು ದೇವದುರ್ಗ ಅನೇಕ ಗ್ರಾಮಗಳಲ್ಲಿ ಇದ್ದಾರೆ. ಇವರ ಉದ್ಯೋಗಗಳೆಂದರೆ ಬಿದರಿನಿಂದ ಬುಟ್ಟಿ, ಬಾರಿಗೆ, ಚಾಪೆ ಮುಂತಾದವುಗಳನ್ನು ಮಾಡಿ ಮಾರಾಟ ಮಾಡುವುದು. ಇವರಲ್ಲದೆ ದೇವದುರ್ಗದ ಅನೇಕ ಗ್ರಾಮಗಳಲ್ಲಿ ಚೆಲುವಾದಿಗಳು, ಅಗಸರು, ಬೇಡರು, ಬಡಿಗರು, ಲಂಬಾಣಿಗಳು ಮುಂತಾದ ಉಪಜಾತಿಗಳನ್ನು ಕಾಣಬಹುದಾಗಿದೆ.

ವರ್ಗಗಳು : ವರ್ಗಗಳಿಗೆ ಸಂಬಂಧಿಸಿದಂತೆ ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಸಹ ಅಧಿಕಾರಿ ವರ್ಗ, ಪ್ರಭುವರ್ಗ ಮುಂತಾದ ವರ್ಗಗಳನ್ನು ಕಾಣಬಹುದಾಗಿದೆ.

ಪ್ರಭುವರ್ಗ : ದೇವದುರ್ಗ ತಾಲ್ಲೂಕಿನ ಅನೇಕ ಶಾಸನಗಳಲ್ಲಿ ಪ್ರಭುವರ್ಗವಾಗಿರುವ ಮಹಾಜನರ ಉಲ್ಲೇಖವನ್ನು ಕಾಣಬಹುದು.

ಗಬ್ಬೂರಿನ ಕ್ರಿ.ಶ.೧೦೮೫ರ ಶಾಸನದ ಪ್ರಭುವರ್ಗವಾದ ಈ ಮಹಾಜನಗಳ ವರ್ಣನೆಯಿದೆ. ಇವರನ್ನು ಗೊಬ್ಬೂರ ವಿಪ್ರಚೂಡಾಮಣಿಗಳೆಂದಿದೆ(ಕವಿಶಾಸಂ ೭, ಪು.೪೭). ಗಬ್ಬೂರಿನ ಕ್ರಿ.ಶ.೧೧೯೫ರ ಶಾಸನದಲ್ಲಿ ಅಹವಮಲ್ಲನು ಕೋಟಿ ಹೋಮ ದಕ್ಷಿಣೆ ನಿಮಿತ್ತವಾಗಿ ೨೦೦ ಮಹಾಜನರಿಗೆ ಮಾಣಿಕೇಶ್ವರ ಕೋಲಲ್ಲಿ ೧೧೩ ಮತ್ತರ ಭೂಮಿ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೬೯). ಗಬ್ಬೂರ ಕ್ರಿ.ಶ.೧೧೪೮ರ ಶಾಸನದಲ್ಲಿ ಶೀಲ ಸಂಪನ್ನರು, ಉಪಾಸನಾಗ್ನಿ ಹೋತ ದ್ವಿಜಗುರು, ಪೂಜಾತತ್ವರು ಮುಂತಾದ ಬಿರುದುಗಳನ್ನು ಹೊಂದಿದ ಅಶೇಷ ಮಹಾಜನಗಳ ಪಾದಾರಾಧಕರಾಗಿದ್ದ ಸಕಲ ಜೇಡ ಗೊತ್ತಳಿಗಳು ಸೇರಿ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೮೧). ಗಬ್ಬೂರು ಕ್ರಿ.ಶ.೧೧೪೬ರ ಶಾಸನದಲ್ಲಿ ಗಬ್ಬೂರು ಅಶೇಷ ಮಹಾಜನಗಳಲ್ಲಿ ಒಬ್ಬನಾದ ವೈಷ್ಣವ ಚೌಕಣಭಟ್ಟಯ್ಯ ಕೇಶವ ದೇವರಿಗೆ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೫೭).

ಶ್ರಮಿಕ ವರ್ಗ : ಇದು ಕೆಳವರ್ಗವಾಗಿದ್ದು, ಇಲ್ಲಿ ಅಕ್ಕಸಾಲಿಗರು, ಕಂಚಗಾರರು, ಕಮ್ಮಾರರು, ಕಲ್ಲುಕುಟಿಗರು, ಬಡಗಿಗಳು ಮುಂತಾದವರು ಬರುತ್ತಾರೆ. ಇವರು ವಿವಿಧ ವೃತ್ತಿಗಳನ್ನಾಶ್ರಯಿಸಿದ ಕುಶಲ ಕರ್ಮಿಕರು.

ಕ್ಯಾದಿಗೇರಾ ಗ್ರಾಮದ ಕ್ರಿ.ಶ.೧೭ನೇ ಶತಮಾನದ ಶಾಸನದಲ್ಲಿ ಸಮಸ್ತ ಪ್ರಜೆಗಳು ಸೆಟ್ಟಿಗಳು ಸೇರಿ ಬಾಲವೀರಯ, ಲಿಂಗದ ವೀರಯ ಇವರಿಗೆ ಅಕಸಾಲಿ ಕೆಂಚನ ಹೊಲದ ಪೈಕಿ ಹನ್ನೆರಡುವರೆ ಮಾನ್ಯ ಎಂದು ಗುತ್ತಿಗೆ ಬರಸಿ ನೀಡುತ್ತಾರೆ(ಕವಿಶಾಸಂ ೭, ಪು.೧೦೫). ಗಬ್ಬೂರಿನ ಬಸದಿಯಲ್ಲಿನ ಕ್ರಿ.ಶ.೧೧೯೦ರ ಶಾಸನದಲ್ಲಿ ಗಬ್ಬೂರಿನ ಟಂಕಸಾಲೆಯ ಅಧಿಕಾರಿಗಳು, ಕಮ್ಮಡಗಾರರು ಊರಲ್ಲಿಯ ಬ್ರಹ್ಮಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲಿನ ತೆರಿಗೆಯನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪). ಗೊಗಲ್ಲಿನ ಕ್ರಿ.ಶ.೧೮೨೫ರ ಶಾಸನವು ಅಲ್ಲಮ ಪ್ರಭುಸ್ವಾಮಿ ಗುಡಿಯ ಗಂಟೆಯನ್ನು ಕಂಚಗಾರ ಅಮ್ಮ ಮಾಡಿಸಿದಂತೆ ಹೇಳಲಾಗಿದೆ(ಕವಿಶಾಸಂ ೭, ಪು.೯೩).

ಕಲ್ಲು ಕುಟಿಕರು : ಇವರು ದೇವದುರ್ಗ ತಾಲೂಕಿನಲ್ಲಿ ಅನೇಕ ಶಾಸನಗಳು, ವೀರಗಲ್ಲು, ಮಾಸ್ತಿಕಲ್ಲು ಹಾಗೂ ದೇವಾಲಯಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ನಿಲವಂಜಿಯ ಕ್ರಿ.ಶ.೧೧೭೭ರ ಶಾಸನದಲ್ಲಿ ಹಾಚಿದೇವರಸನ ಆಜ್ಞೆಯಂತೆ ಶ್ರೀಕರಣ ವೆರ್ಗ್ಗಡೆ ಬರೆದ ಎಂದು ಹೇಳಿದೆ(ಕವಿಶಾಸಂ ೭, ಪು.೯೪). ಕಲ್ಲುಕುಟಿಗರ ಕಾರ್ಯವನ್ನು ಗಮನಿಸಿದಾಗ ದೇವದುರ್ಗದ ಅನೇಕ ಸ್ಮಾರಕಗಳ ನಿರ್ಮಾಣದಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ.

ವಿದ್ಯಾಭ್ಯಾಸ : ಮಠಗಳು, ದೇವಸ್ಥಾನಗಳು, ಘಟಿಕಸ್ಥಾನ, ಬ್ರಹ್ಮಪುರಿ, ಅಗ್ರಹಾರ ಮುಂತಾದವುಗಳು ಶಿಕ್ಷಣವನ್ನು ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಶಿಕ್ಷಣವು ಮಾನವನ ದೈಹಿಕ, ಬೌದ್ಧಿಕ ಬೆಳವಣಿಗೆಯನ್ನು ವಿಕಾಸ ಮಾಡುವಲ್ಲಿ ಶಿಕ್ಷಣ ಪಾತ್ರ ಹಾಗೂ ಶಿಕ್ಷಕನ ಪಾತ್ರವೂ ಪ್ರಮುಖವಾಗಿದೆ. ಈ ಎಲ್ಲಾ ಶಿಕ್ಷಣ ಕೇಂದ್ರಗಳಲ್ಲಿ ಆಧ್ಯಾತ್ಮಿಕ, ಭೌದ್ಧಿಕ, ವ್ಯಾಕರಣ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ದೇವದುರ್ಗದ ಅನೇಕ ಗ್ರಾಮಗಳು ಶಿಕ್ಷಣದ ಕೇಂದ್ರಗಳಾಗಿದ್ದವು ಎಂಬುದಕ್ಕೆ ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿರುವ ಹೆಸರುಗಳನ್ನು ನಾವು ನೋಡಬಹುದು.

ಅಗ್ರಹಾರ : ಅಗ್ರಹಾರಗಳು ಪ್ರಾಚೀನ ಕಾಲದ ವಿದ್ಯಾಕೇಂದ್ರಗಳಾಗಿದ್ದು ಬಹುಸಂಖ್ಯೆಯ ಅಗ್ರಹಾರಗಳು ಹಳ್ಳಿ ಹಳ್ಳಿಗಳ್ಲಲಿ ಶೈಕ್ಷಣಿಕ ಸೌಲಭ್ಯಗಳನ್ನು ಪಡೆದುಕೊಂಡು ಶಿಕ್ಷಣವನ್ನು ಒದಗಿಸುತ್ತಿದ್ದವು. ಇವುಗಳಿಗೆ ಅನೇಕ ರಾಜರ ಸಾರ್ವಜನಿಕರ ಆಶ್ರಯವಿರುತ್ತಿತ್ತು. ದೇವದುರ್ಗದ ತಾಲ್ಲೂಕಿನಲ್ಲಿ ಬರುವ ಗೂಬ್ಬರು ಪ್ರಸಿದ್ಧ ಅಗ್ರಹಾರವಾಗಿದ್ದು. ಪ್ರಮುಖ ಪಾತ್ರವಹಿಸಿತ್ತೆಂಬುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಗೂಬ್ಬೂರಿನ ಕ್ರಿ.ಶ.೧೦೮೫ರ ಶಾಸನದಲ್ಲಿ ಹಿರಿಯ ಅಗ್ರಹಾರ ಗೂಬ್ಬೂರ ವರ್ಣನೆ ಇದೆ.

ಸರ್ವ್ವನಮಶ್ಯದಗ್ರಹಾರಂ ಹಿರ್ಯ್ಯ ಗೊಬ್ಬೂರ ಇದು ವಿದ್ಯಾಕ್ಷೇತ್ರ ಲೋಕಕ್ಕದಿಕ ಭುವನ ವಿಖ್ಯಾತ ದೀಗೋಪುರಂ ತಾನಿದು ಪುಂಣ್ಯೋದಾನ ದಾನರುಹ ವಿಬುಧ ಜನೋರ್ವ್ವದಿ ವಿದ್ವಜಂಗಳು ಮುದದಿಂದಾನಂದ ದಿಂದಂ ಕೊಡುವರೊಲಿದು ಮಂತ್ರಾಕ್ಷರಂ ಧೃತಿಯಿಂದು ಪದುಳಂ ಚಂದ್ರರ್ಕ ತಾರಂನೆವುರಮಧಿಕಮತ್ಯೂರ್ಜ್ಜಿತಂ ಗ್ರಾಮ ರಾಜಂ ಇದು ಹಿರಿಯ ಅಗ್ರಹಾರ ವಿದ್ಯಾಕ್ಷೇತ್ರ ವಿಬುಧ ಜನರ ಕ್ಷೇತ್ರ. ವಿದ್ವಜ್ಜನಗಳು ನೆಲಸಿ ಗ್ರಾಮರಾಜನಂತಿದೆ ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೪೭).

ಗಬ್ಬೂರಿನ ಕ್ರಿ.ಶ.೧೧೭೦ರ ಶಾಸನದಲ್ಲಿ ರಾಯಕೊಡ ಹರಿಹರ ದಾಸರಾದ ಸೋಮೇಶ್ವರ ಭಟ್ಟರ ಮಗಳು ಲಕ್ಷುಮಕ್ಕ ಹಿರಿಯ ಗಬ್ಬೂರಿನ ಮೊಸಂಗಿ ಭಾಗದಲ್ಲಿನ ತನ್ನ ಬೆಳೆಯ ಭಾಗವನ್ನು ಹರಿಹರ ಸಿದ್ಧಸೋಮನಾಥ ದೇವರಿಗೆ ಸಲ್ಲುವಂತೆ ಬಿಡುತ್ತಾಳೆ(ಕವಿಶಾಸಂ ೭, ಪು.೫೬). ಗಬ್ಬೂರಿನ ೧೧೯೮ರ ಶಾಸನದಲ್ಲಿ ಅಗ್ರಹಾರ ಹಿರಿಯ ಗೂಬ್ಬೂರ ನಖರಗಳು ಕಮ್ಮಟದ ಅಧಿಕಾರಿಗಳು ಬ್ರಹ್ಮ ಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲಿನ ತೆರಿಗೆಯನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪).

ಬ್ರಹ್ಮಪುರಿ : ನಗರಗಳ ಒಂದು ಭಾಗದಲ್ಲಿ ವಾಸವಾಗಿರುವ ಬ್ರಾಹ್ಮಣರ ಗಲ್ಲಿಗಳನ್ನು ಬ್ರಹ್ಮಪುರಿಗಳೆಂದು ಕರೆಯುತ್ತಾರೆ. ಇವು ಶಿಕ್ಷಣದ ಕೇಂದ್ರಗಳಾಗಿದ್ದವು. ಗಬ್ಬೂರಿನ ಕ್ರಿ.ಶ.೧೧೪೪ರ ಶಾಸನದಲ್ಲಿ "ಹಿರಿಯ ಬ್ರಹ್ಮಪುರಿ ಸರ್ವ್ವನಮಶ್ಯದಗ್ರಾಹಾರಂ ಹಿರಿಯ ಗಬ್ಬೂರ" ಎಂದು ಉಲ್ಲೇಖಗೊಂಡಿದೆ(ಕವಿಶಾಸಂ ೭, ಪು.೭೧). ಗಬ್ಬೂರು ಬ್ರಹ್ಮಪುರಿಯಾಗಿತ್ತೆಂದು ಈ ಶಾಸನ ಹೇಳುತ್ತದೆ. ಮಠಗಳು, ದೇವಸ್ಥಾನಗಳು, ಘಟಿಕಾಸ್ಥಾನ ಇವು ಶಿಕ್ಷಣದ ಅಂಗಳಾಗಿದ್ದು, ಶಿಕ್ಷಣವನ್ನು ನೀಡುವ ಹೊಣೆಯನ್ನು ಹೊತ್ತಿದ್ದವು.

ಸಂಪ್ರದಾಯ ಮತ್ತು ನಂಬಿಕೆಗಳು

ಭಾರತೀಯ ಸಂಸ್ಕೃತಿಯನ್ನು ನಾವು ತೆಗೆದುಕೊಂಡಾಗ ಅದು ಶ್ರೇಷ್ಠವಾದ, ಉನ್ನತವಾದ ಸಂಸ್ಕೃತಿಯಾಗಿದೆ. ಇಂತಹ ಸಂಸ್ಕೃತಿಯು ಅನೇಕ ನಂಬಿಕೆ ಮತ್ತು ಸಂಪ್ರದಾಯಗಳಾದ ಧರ್ಮ, ಹಬ್ಬ, ಜಾತ್ರೆ, ದೇವರು, ದೇವಾಲಯ, ಮಠ, ಮಸೀದಿ ಮುಂತಾದವುಗಳು ಧಾರ್ಮಿಕ ರಂಗದಲ್ಲಿ ವಹಿಸಿದ ಪಾತ್ರ ಅಮೋಘವಾದುದು.

ದೇವದುರ್ಗ ತಾಲ್ಲೂಕಿನ ಶಾಸನಗಳನ್ನು ಗಮನಿಸಿದಾಗ ಆ ಶಾಸನಗಳಲ್ಲಿರುವ ಪಾಪ, ಪುಣ್ಯ, ದಾನ, ಧರ್ಮ, ಕರ್ಮ, ನರಕ, ದಾನದ ವೈಶಿಷ್ಟ್ಯವನ್ನು ವಿಶೇಷವಾಗಿ ಕಾಣಬಹುದು. ಸಮಾಜದಲ್ಲಿ ಬಾಳುವ ಪ್ರತಿಯೊಬ್ಬ ವ್ಯಕ್ತಿಯು ಪಾಪ-ಪುಣ್ಯ, ಸ್ವರ್ಗ-ನರಕ, ಧರ್ಮ-ಕರ್ಮ ಮುಂತಾದವುಗಳ ಕಲ್ಪನೆಯನ್ನಿಟ್ಟುಕೊಂಡು ದಾನವನ್ನು ಮಾಡುವುದರ ಮೂಲಕ ನಾವು ಸ್ವರ್ಗಕ್ಕೆ ಹೋಗುತ್ತೇವೆ, ಇಲ್ಲವಾದರೆ ನರಕಕ್ಕೆ ಹೋಗುತ್ತೇವೆ ಎಂಬ ಭಾವನೆ, ಕಲ್ಪನೆಯನ್ನು ನಾವು ಇಂದಿಗೂ ಸಮಾಜದಲ್ಲಿ ಕಾಣಬಹುದಾಗಿದೆ.

ದೇವರು ಸರ್ವಶಕ್ತ, ಭಕ್ತರು ಸಲ್ಲಿಸುವ ಸೇವೆಗೆ ಒಲಿದು, ಬೇಡಿದ್ದನ್ನು ನೀಡುವ ಕರುಣಾಳು. ನಮ್ಮೆಲ್ಲ ತಪ್ಪುಗಳನ್ನು ಮನ್ನಿಸಿ ಕಾಪಾಡುವ ದಯಾಮಯ. ವಿಶಾಲ ಹೃದಯವುಳ್ಳ ಆ ದೇವರನ್ನು ನಾನಾ ವಿಧವಾಗಿ ಆರಾಧಿಸುವ ಕೆಟ್ಟ ಪದ್ಧತಿ ಇದೆ. ಜನ ತಮ್ಮ ಕಷ್ಟಗಳನ್ನು ಪರಿಹರಿಸಿ ಕೈಹಿಡಿದು ರಕ್ಷಿಸುವವನು ದೇವರೆಂದ ಮೇಲೆ, ಆ ದೇವರನ್ನು ಪೂಜಿಸಬೇಕು, ಪ್ರಾರ್ಥಿಸಬೇಕು ಎಂದು ಅನೇಕ ದೇವಾಲಯಗಳನ್ನು, ಛತ್ರಗಳನ್ನು, ಮಂದಿರಗಳನ್ನು ದೇವರ ಮೂರ್ತಿಗಳನ್ನು ನಿರ್ಮಿಸುವುದರ ಜೊತೆಗೆ ಅವುಗಳಿಗೆ ದಾನ ನೀಡುವುದನ್ನು ಕಲಿತರು. ಹೀಗೆ ಪಾಪ ಪುಣ್ಯದ ಕಲ್ಪನೆಯೊಂದಿಗೆ ದಾನ ಬೆಳೆದುಕೊಂಡು ಬಂದಿದೆ. ಇಂತಹ ದಾನದ ಸ್ವರೂಪವನ್ನು ದೇವದುರ್ಗದ ಅನೇಕ ಶಾಸನಗಳಲ್ಲಿ ನಾವು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ದೊರೆತ ಹೆಚ್ಚಿನ ಸಂಖ್ಯೆಯ ಶಾಸನಗಳು ದಾನ ಶಾಸನಗಳಾಗಿವೆ. ಇವು ಕರ್ನಾಟಕ ಸಂಸ್ಕೃತಿಯ ಒಂದು ಪ್ರಧಾನವಾದ ಅಂಶವನ್ನು ಎತ್ತಿ ತೋರಿಸುತ್ತವೆ. ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ಈ ಶಾಸನಗಳಲ್ಲಿ ಪ್ರತಿಬಿಂಬಿತವಾಗಿದೆ. ಶಾಸನಗಳ ಉಗಮಕ್ಕೆ ಈ ಮನೋಧರ್ಮವೇ ಪ್ರೇರಕ ಶಕ್ತಿಯೆನ್ನಬಹುದು. ಇಂತಹ ದಾನದ ಸ್ವರೂಪವನ್ನು ದೇವದುರ್ಗದ ಅನೇಕ ಶಾಸನಗಳಲ್ಲಿ ನಾವು ಕಾಣಬಹುದಾಗಿದೆ.

ಗಬ್ಬೂರಿನ ಕ್ರಿ.ಶ.೧೦೮೫ರ ಶಾಸನದಲ್ಲಿ ದೇವರ ಒಕ್ಕಲುಗಳನ್ನು ಮೇಳ್ಯಾಸಿರ್ಬ್ಬರು ಎಂದು ಕರೆಯುತ್ತಿದ್ದರು. ಇವರು ಗಬ್ಬೂರಿನಲ್ಲಿ ಮೇಳೇಶ್ವರ ದೇವಾಲಯವನ್ನು ಕಟ್ಟಿಸಿ ಆ ದೇವರ ಪೂಜೆ ಪುನಸ್ಕಾರಕ್ಕೆ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೪೭). ಕ್ರಿ.ಶ.೧೧೫೪ರ ಶಾಸನದಲ್ಲಿ

ಅಯ್ಯಣವಾಡಿಯ ೩೦೦ ಮಹಾಜನರು ಗೂಬ್ಬೂರಿನಲ್ಲಿ ತ್ರಿಪುರಾಂತಕ ದೇವರ ಪ್ರತಿಷ್ಠೆ ಮಾಡಿ ಅದರ ಪುರಸ್ಕಾರಕ್ಕೆಂದು ದಾನ ನೀಡುತ್ತಾರೆ(ಕವಿಶಾಸಂ ೭, ಪು.೫೩). ಕ್ರಿ.ಶ.೧೧೪೯ರ ಶಾಸನದಲ್ಲಿ ವೈಷ್ಣವ ಚಾಕಣ ಭಟ್ಟಯ್ಯ ಎಂಬುವನು ಗೋಪುರದಲ್ಲಿ ತಾನು ಮಾಡಿಸಿದ ಕೇಶವದೇವರ ಪೂಜೆ ಪುನಸ್ಕಾರ-ದೇವಾಲಯದ ನಿರ್ವಹಣೆಗಾಗಿ ತೋಟವೊಂದನ್ನು ದೇವರಿಗೆ ನೀಡುತ್ತಾನೆ(ಕವಿಶಾಸಂ ೭, ಪು.೫೭). ಕ್ರಿ.ಶ.೧೧೪೧ರ ಶಾಸನದಲ್ಲಿ ಗೊಬ್ಬೂರಿನ ಪರಮ ಭಾಗವತನಾದ ವೈಷ್ಣವ ಮಂಚಪ್ಪಣ್ಣನು ತಾನು ಪ್ರತಿಷ್ಠೆ ಮಾಡಿದ ಪ್ರಸನ್ನ ಕೇಶವದೇವರ ಪೂಜೆಗಾಗಿ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೬೭). ಕ್ರಿ.ಶ.೧೧೯೦ರ ಶಾಸನದಲ್ಲಿ ಗಬ್ಬೂರಿನ ನಖರಗಳು, ಕಮ್ಮಟದ ಅಧಿಕಾರಿಗಳು, ಕಮ್ಮಟಕಾರರು, ಊರಲ್ಲಿಯ ಬ್ರಹ್ಮಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲಿನ ತೆರಿಗೆಯನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪).

ರಾಮದುರ್ಗದ ಕ್ರಿ.ಶ.೧೬೧೬ರ ಶಾಸನದಲ್ಲಿ ಮುಂಮಡಿ ಪ್ರತಾಪರಾಯನೆಂಬುವನು ಪರಗಣೆ ಬೆಳುಡೋಣಿಯ ರಾಮಲಿಂಗದೇವರಿಗೆ ಗ್ರಾಮವನ್ನು ಏಕಭೋಗವಾಗಿ ಕೊಟ್ಟ ಉಲ್ಲೇಖವಿದೆ(ಕವಿಶಾಸಂ ೭, ಪು.೧೧೨). ದೇವದುರ್ಗದ ಕ್ರಿ.ಶ.೧೯೫೦ರ ಶಾಸನದಲ್ಲಿ ಹಿರೇರಾಯಕುಂಪಿ ಕ್ರಿ.ಶ.೧೧೩೦ರ ಶಾಸನದಲ್ಲಿ ಮುದ್ಗನೂರಿನ ಬಳಿಯ ರಾಕುರ್ಪ್ವೆಯಲ್ಲಿ ಜಯರಾಮ ಎಂಬುವನು ಮಾಡಿಸಿದ ದೇವಾಲಯದ ಅಂಗಭೋಗ ಜೀರ್ಣೋದ್ಧಾರ ಮುಂತಾದ ಕಾರ್ಯಗಳಿಗಾಗಿ ೫೦ ಮತ್ತರ ಹೊಲ ತೋಟ ದಾನ ನೀಡುತ್ತಾನೆ(ಕವಿಶಾಸಂ ೭, ಪು.೯೧). ಹೀಗೆ ದೇವದುರ್ಗದ ಪ್ರದೇಶದಲ್ಲಿನ ಜನತೆಯೂ ಕೂಡ ಪಾಪ ಪುಣ್ಯದ ಕಲ್ಪನೆ ದೇವಾಲಯದ ನಿರ್ಮಾಣ, ಕೆರೆ ನಿರ್ಮಾಣ ಹೀಗೆ ಮುಂತಾದ ಕಾರ್ಯಗಳನ್ನು ಮಾಡುವುದರ ಜೊತೆಗೆ ದಾನ ನೀಡಿಕೆ ಪ್ರಧಾನವಾಗಿ ಬೆಳೆದು ಬಂದಿತ್ತೆಂದು ಹೇಳಬಹುದಾಗಿದೆ.

ಆಹಾರ ಪಾನಿಯಗಳು : ಸಾಮಾಜಿಕ ರಂಗದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೆ ನೈಸರ್ಗಿಕವಾದ ಗಾಳಿ, ಮಳೆ, ಆಹಾರ, ನೀರು ಅವಶ್ಯಕವಾಗಿ ಬೇಕೇ ಬೇಕಾಗುತ್ತದೆ. ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೂ ವ್ಯಕ್ತಿಗೆ ಇವು ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿವೆ. ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿಯೂ ನೀರಿನ ಅನೇಕ ಕುರುಹುಗಳು ಆಹಾರದ ಉಲ್ಲೇಖವನ್ನು ಶಾಸನದಲ್ಲಿ ಕಾಣಬಹುದಾಗಿದೆ.

ಗೂಬ್ಬೂರಿನ ಕ್ರಿ.ಶ.೧೦೮೮ರ ಶಾಸನದಲ್ಲಿ ಮೇಳೇಶ್ವರ ದೇವರಿಗೆ ಭತ್ತ ದಾನ ಮಾಡಿದ ವಿಷಯವಿದೆ. ಈ ಭತ್ತವನ್ನು ಬೆಳೆಯಲು ನೀರಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು ಎಂದು ತಿಳಿದುಬರುತ್ತದೆ(ಕವಿಶಾಸಂ ೭, ಪು.೫೦). ಅದೇ ಗ್ರಾಮದ ಕ್ರಿ.ಶ.೧೧೪೯ರ ಶಾಸನದಲ್ಲಿ ಕೇಶವ ದೇವರಿಗೆ ತೋಟವೊಂದನ್ನು ಹಾಗೂ ಭೂಮಿಯನ್ನು ದೇವರಿಗೆ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೫೭). ಕ್ರಿ.ಶ.೧೧೭೧ರ ಶಾಸನದಲ್ಲಿ ಹಂನವಣದ ಸೆಟ್ಟಿಯರು ತಾವು ಮಾರಿದ ಎಲೆಯ ಹೇರಿಗೆ ೫೦ ಎಲೆಯನ್ನು ಪ್ರಸನ್ನ ಕೇಶವದೇವರಿಗೆ ದಾನ ಬಿಡುತ್ತಾರೆ. ಅಂದರೆ ಎಲೆಯ ಬೆಳೆಯು ಇಲ್ಲಿ

ಇತ್ತು ಎಂದು ತಿಳಿದುಬರುತ್ತದೆ(ಕವಿಶಾಸಂ ೭, ಪು.೫೯). ಕ್ರಿ.ಶ.೧೧೪೪ರ ಶಾಸನದಲ್ಲಿ ಮಹಾಜನಗಳು ನಾಗಭೂಷಣ ದೇವರ ಸತ್ರಕ್ಕೆ ಜೋಳವನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪). ಕ್ರಿ.ಸ.೧೧೩೦ರ ಶಾಸನದಲ್ಲಿ ಜಯರಾಮ ಎಂಬುವನು ದೇವಾಲಯಗಳಿಗೆ ಧರಣಿ ದೇವನ ಕೂಲಿನಲ್ಲಿ ೪೦ ಮತ್ತರ ಹೊಲ, ತೋಟ ನೀಡುತ್ತಾನೆ. ಹಾಗೂ ದೇವರಾಜನು ಅನೇಕ ಕೆರೆ, ದೇವಾಲಯಗಳನ್ನು ಕಟ್ಟಿಸಿದನು ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೯೧). ನಿಲವಂಜಿಯ ೧೧೭೭ ಶಾಸನದಲ್ಲಿ ಅಯ್ಯರಸನು ಸಂಕರದೇವರಿಗೆ ದಾನ ನೀಡಿ, ನಂತರ ಉಪ್ಪು, ಭತ್ತ, ಅಡಿಕೆ, ಕಾಜು ಇವನ್ನು ಮಾರಿದಲ್ಲಿ, ಕೊಂಡಲ್ಲಿ ಬರುವ ಆದಾಯದಲ್ಲಿ ಕೆಲವು ರಿಯಾಯಿತಿಗಳನ್ನು ನೀಡಿದ್ದಾನೆ(ಕವಿಶಾಸಂ ೭, ಪು.೯೪). ಕ್ರಿ.ಶ.೧೬೯೦ರ ದೇವದುರ್ಗದ ಶಾಸನದಲ್ಲಿ ಕೇಸವ್ವೆಯ ಗವುಡನು ನಳನಾಮ ಸಂವತ್ಸರದಲ್ಲಿ ದೇವದುರ್ಗದ ಕೆರೆ ಕಟ್ಟಿಸಿ, ದೇವದುರ್ಗವ ನಿರ್ಮಿಸಿದ ಹಾಗೂ ಪೇಟೆ ಕಟ್ಟಿಸಿ, ಸಂತೆ ಸೇರಿಸಿದ ಎಂದಿದೆ. ಅಂದರೆ ದೇವದುರ್ಗ ಶಾಸನಗಳಲ್ಲಿನ ಅನೇಕ ಭತ್ತ, ಜೋಳ, ಕೆರೆ, ಬಾವಿ, ತೋಟ, ಹೂ ಮುಂತಾದ ಅಂಶಗಳನ್ನು ನೋಡಿದಾಗ ಇಲ್ಲಿಯ ಕಾಳುಗಳ ವ್ಯಾಪಾರದ ಸಂತೆ, ದನಗಳ ಸಂತೆ ಇಂದಿಗೂ ಈ ಪ್ರದೇಶದಲ್ಲಿ ಪ್ರಮುಖವಾಗಿ ಇಂದಿಗೂ ಇದೆ(ಕವಿಶಾಸಂ ೭, ಪು.೧೧೪).

ಪ್ರಾಣಿಗಳು : ಪ್ರಾಣಿಗಳು ಸಾಮಾಜಿಕ ವ್ಯವಸ್ಥೆಯ ಒಂದು ಭಾಗ ಅಥವಾ ಒಂದು ಅಂಶ ಎಂದರೆ ತಪ್ಪು ಆಗಲಿಕ್ಕಿಲ್ಲ. ಏಕೆಂದರೆ, ಪ್ರಾಚೀನ ಕಾಲದಿಂದ ನಾವು ನೋಡಿದಾಗ ಪ್ರಾಣಿಗಳ ಪಾತ್ರ ಪ್ರಮುಖವಾಗಿದೆ.

ಎಮ್ಮೆ, ಆಕಳು, ಕುರಿ, ಮೇಕೆಗಳು ಹೈನುಗಾರಿಕೆಗೆ ಪ್ರಮುಖ ಪಾತ್ರ ವಹಿಸಿದರೆ, ಕೃಷಿ ರಂಗಕ್ಕೆ ಎತ್ತು, ಕೋಣ, ಕತ್ತೆ ಮುಂತಾದವುಗಳು ಪ್ರಮುಖ ಪಾತ್ರ ವಹಿಸುತ್ತವೆ. ಇನ್ನು ಸಾಕು ಪ್ರಾಣಿಗಳಾಗಿ ಕೋಳಿ, ಪಾರಿವಾಳ, ಕುರಿಗಳು ಮುಂತಾದವುಗಳು ವ್ಯಾಪಾರಕ್ಕೆ ಸರಿಸಾಟಿಯಾಗಿವೆ. ಹೀಗೆ ಪ್ರಾಣಿಗಳು ಹೈನುಗಾರಿಕೆ, ಕೃಷಿ, ವ್ಯಾಪಾರಕ್ಕೆ ಹಾಗೂ ಆರೋಗ್ಯಕ್ಕೆ ಉಪಯೋಗವಾಗುವಂತಹ ಅನೇಕ ಪ್ರಾಣಿಗಳನ್ನು ನಾವು ಕಾಣಬಹುದಾಗಿದೆ. ಈ ಪ್ರಾಣಿಗಳಿಗೆ ಸಂಬಂಧಿಸಿದಂತೆ ದೇವದುರ್ಗ ತಾಲ್ಲೂಕಿನಲ್ಲಿ ಸಂತೆಗಳು, ಜಾತ್ರೆಗಳು ನಡೆಯುತ್ತವೆ. ಕೆಲವು ಪ್ರಾಣಿಗಳ ಉಲ್ಲೇಖವನ್ನು ಸಹ ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಕಾಣಬಹುದಾಗಿದೆ.

ಗಬ್ಬೂರಿನ ಕ್ರಿ.ಶ.೧೧೫೪ರ ಶಾಸನದಲ್ಲಿ
ಶ್ರೀ ಪ್ರಸನ್ನ ಕೇಶವದೇವರ
ಪೂಜೆ ಪುನಸ್ಕಾರ, ಧೂಪ ದೀಪ
ನೈವೇದ್ಯ ಸದಾದೇವರ ಕಾರ್ಯ್ಯ
ನಡೆವನ್ತಾಗಿ ಎತ್ತಿನ ಮೂಲಿಗರವನ

ಕೋಣನ ಮೂಲೆಗರವನ

ಕತ್ತೆಯ ಮೂಲೆಗೆ ಸೊಲ ಅನ್ತಾ

ಕ್ರವದಲೆ ಮೂಲೆವರ್ತಿ ಮನೆಮದು

ಆ ಚಂದ್ರಾರ್ಕ್ಕಾಸ್ಥಾಯಿವರು

ತಾಂಬ್ರಶಾಸನವಾಗಿ ಕೊಟ್ಟರು ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೫೫).

ಆತ್ಮಬಲಿಯ ವಿಧಗಳು

ಕರ್ನಾಟಕ ಉನ್ನತ ಸಂಸ್ಕೃತಿಗೆ ಹೆಸರುವಾಸಿಯಾದಂತೆ, ಬಲಿಗೆ ಅಥವಾ ಆಹುತಿಗೆ ಕೂಡಾ ಹೆಸರುವಾಸಿಯಾಗಿದೆ. ಅದರಲ್ಲಿಯೂ ಉತ್ತರ ಕರ್ನಾಟಕವು ಇದಕ್ಕೆ ವಿಶೇಷವಾಗಿದೆ. ಇಲ್ಲಿಯ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ಸಹ ಈ ಆತ್ಮಬಲಿ, ಪ್ರಾಣಬಲಿಗೆ ಮೊದಲಿನಿಂದಲೂ ಹೆಸರುವಾಸಿಯಾದದ್ದನ್ನು ನಾವು ಕಾಣಬಹುದಾಗಿದೆ. ಇದರಲ್ಲಿ ಮುಖ್ಯವಾಗಿ ಐತಿಹಾಸಿಕ ಕುರುಹುಗಳಾಗಿ ನಿಂತ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಹಾಗೂ ಇಲ್ಲಿಯ ದೇವರ ಜಾತ್ರೆಗಳು ಇದಕ್ಕೆ ಸಾಕ್ಷಿಯಾಗಿವೆ.

ದೇವದುರ್ಗ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ದೇಶದ ಉನ್ನತಿಗಾಗಿ, ಊರಿನ ಹಿತ ಕಾರ್ಯಕ್ಕಾಗಿ, ನಿಷ್ಠೆಯಿಂದ ಹೋರಾಡಿ ಮರಣವನ್ನಪ್ಪಿದ ವೀರರ ಶೂರರ ಸ್ಮರಣಾರ್ಥವಾಗಿ ನಿಲ್ಲಿಸಿದ ಅನೇಕ ವೀರಗಲ್ಲುಗಳಿವೆ. ಸತ್ತ ಗಂಡನ ಸುದ್ದಿಯನ್ನು ತಿಳಿದ ಪತ್ನಿಯ ಪ್ರಾಣಬಲಿ ಮಾಡಿದ ಮಾಸ್ತಿಕಲ್ಲುಗಳು ಹಾಗೂ ದೇವರ ಶಾಂತಿಗಾಗಿ ಪ್ರಾಣಬಲಿ ಕೊಟ್ಟಿರುವುದನ್ನು ಕಾಣಬಹುದಾಗಿದೆ.

ಗಬ್ಬೂರಿನ ಹಂಪಣ ಗುಡಿಯ ಮುಂದೆ ೫ ವೀರಗಲ್ಲುಗಳಿವೆ. ಮೇಲೆ ಶಂಕರ ದೇವಾಲಯದ ಮುಂದೆ ಇರುವ ವೀರಗಲ್ಲುಗಳು, ಕ್ಯಾದಿಗೇರಾ, ದೇವದುರ್ಗ, ಚಂದನಕೇರಿ, ಕಾಕರಗಲ್ಲು, ಮಸರಕಲ್ಲು, ಹಿರೇಬೂದುರು ಹೀಗೆ ಅನೇಕ ಊರುಗಳಲ್ಲಿ ಈ ವೀರಗಲ್ಲುಗಳನ್ನು ನೋಡಬಹುದಾಗಿದೆ. ಇದರಂತೆ ಗೂಬ್ಬೂರು, ಹುನುಗುಂದಾಬಾಡಾ, ಹಿರೇರಾಯಕುಂಪಿ, ಕ್ಯಾದ್ಗಿಗೇರಾ ಮುಂತಾದವುಗಳಲ್ಲಿ ಮಹಾಸತಿಗಳ ಕಲ್ಲುಗಳನ್ನು ಕಾಣಬಹುದು. ದೇವದುರ್ಗ ಅನೇಕ ಗ್ರಾಮಗಳಲ್ಲಿ ದಾವೆಮ್ಮ, ಮಾರೆಮ್ಮ, ಸಾವರೆಮ್ಮ, ಹುಲಿಗಮ್ಮ ಮುಂತಾದ ದೇವರಿಗೆ ಪ್ರಾಣಿ ಬಲಿ ಕೊಡುವ ಪದ್ಧತಿಯನ್ನು ನೋಡಬಹುದಾಗಿದೆ.

ಸ್ತ್ರೀಯರ ಸ್ಥಾನಮಾನ

ಸ್ತ್ರೀಯರು ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಹೊಂದಿದ್ದರು. ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಸ್ತ್ರೀಯರ ಸ್ಥಾನವು ಪುರುಷನಿಗಿಂತ ಉನ್ನತವಾಗಿತ್ತು ಎಂಬುದಕ್ಕೆ ಪ್ರಾಚೀನ ಕಾಲದ ಸ್ತ್ರೀಯರಾದ ಅಪಲಾ, ಲೋಪಮುದ್ರಾ, ಮೈತ್ರೇಯಿ, ಗಾರ್ಗಿ ಇವರು ಶಿಕ್ಷಣವನ್ನು ಕಲಿತ ಮಹಿಳೆಯರಾಗಿದ್ದರು ಎಂಬ ಅಂಶವನ್ನು ನಾವು ಇಂದಿಗೂ ಓದುತ್ತಾ ಬಂದಿದ್ದೇವೆ.

ಸ್ತ್ರೀ ಕಾರ್ಯವ್ಯಾಪ್ತಿಯು ಕೇವಲ ಮನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅವಳು ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಕಲೆ, ವಾಸ್ತುಶಿಲ್ಪ ಮುಂತಾದ ರಂಗಗಳಲ್ಲಿ ಪುರುಷನಂತೆ ಸಮವಾಗಿ ಭಾಗವಹಿಸುತ್ತಿದ್ದಳು. ದೇವದುರ್ಗ ತಾಲ್ಲೂಕಿನಲ್ಲಿ ಸ್ತ್ರೀಯು ಎಲ್ಲಾ ರಂಗದಲ್ಲಿ ಭಾಗವಹಿಸಿದ್ದಳು ಎನ್ನುವುದನ್ನು ಅನೇಕ ಶಾಸನಗಳಲ್ಲಿ ನಾವು ನೋಡಬಹುದಾಗಿದೆ. ಸ್ತ್ರೀಯು ಸಂಗೀತ ನೃತ್ಯಗಳಲ್ಲಿ ಪರಿಣತಿಯನ್ನು ಹೊಂದಿದ್ದಳು. ಒಟ್ಟಿನಲ್ಲಿ ಸ್ತ್ರೀಯರ ಸ್ಥಾನಮಾನ ಉನ್ನತವಾಗಿದ್ದರೂ, ಸಹಗಮನ ಪದ್ಧತಿ, ವೇಶ್ಯಾವಾಟಿಕೆ ಮುಂತಾದವುಗಳಲ್ಲಿ ಸ್ತ್ರೀಯ ಪಾತ್ರವಿತ್ತು ಎಂದು ಹೇಳಬಹುದಾಗಿದೆ. ವೇಶ್ಯರಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಉಲ್ಲೇಖಗೊಂಡಿವೆ.

ಗೊಬ್ಬೂರಿನ ಕ್ರಿ.ಶ.೧೧೪೮ರ ಶಾಸನದಲ್ಲಿ ಸಕಲ ಜೇಡ ಗೊತ್ತಳಿಗಳು ಸೇರಿ ತಮ್ಮ ಕುಲದೈವವಾದ ಗೊಜ್ಜೇಶ್ವರ ದೇವರ ಪೂಜೆ, ಪುನಸ್ಕಾರ ನೈವೇದ್ಯಕ್ಕೆ ೫೦೦ ಜನರು ಆರು ದೀಪವನ್ನು ಬಿಡುತ್ತಾರೆ. ಸೂಳೆ ಹೇಮವ್ವ ಒಂದು ಹಣ ನೀಡುತ್ತಾಳೆ ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೮೧).

ಗೂಗಲ್ಲಿನ ಕ್ರಿ.ಶ.೧೮೭೫ರ ಶಾಸನದಲ್ಲಿ ದೇವಾಲಯದ ಗಂಟೆಯನ್ನು ಗೊಬ್ಬೂರ ವೇಶ್ಯೆ ಕಂಚಗಾರ ಅಲ್ಲಮಪ್ರಭುಸ್ವಾಮಿ ಮುಂತಾದವರು ಮಾಡಿಸಿದಂತೆ ಹೇಳಲಾಗಿದೆ(ಕವಿಶಾಸಂ ೭, ಪು.೯೩). ಅರಸರ ಆಳ್ವಿಕೆಯಲ್ಲಿ ವೇಶ್ಯರು ನೃತ್ಯ ಸಂಗೀತದಲ್ಲಿ ಪ್ರಮುಖ ಪಾತ್ರ ವಹಿಸಿದ್ದರೆಂಬುದಕ್ಕೆ ಅನೇಕ ಉದಾಹರಣೆಗಳಿವೆ.

ಸಾರ್ವಜನಿಕ ಕಾರ್ಯಗಳು

ಸಾರ್ವಜನಿಕರು ಹಾಗೂ ರಾಜರು ಎಲ್ಲಾ ವ್ಯಕ್ತಿಗಳ ಸಹಕಾರ ಮನೋಭಾವನೆಯಿಂದ ಸಾರ್ವಜನಿಕ ಕಾರ್ಯಗಳಾದ ಕೆರೆಗಳನ್ನು, ಭಾವಿಗಳನ್ನು ಕಟ್ಟಿಸುವುದು, ಊರಿನಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದರು. ಅವರು ಸಾಮಾಜಿಕ ಕಾರ್ಯಗಳನ್ನು, ಶಿಕ್ಷಣದ ಕಾರ್ಯಗಳನ್ನು, ಧಾರ್ಮಿಕ ಕಾರ್ಯಗಳನ್ನು, ಸಾರ್ವಜನಿಕರಿಗಾಗಿ ಊರಿನ ಎಲ್ಲಾ ವ್ಯಕ್ತಿಗಳು ಕೂಡಿ ಮಾಡುವಂತಹ ಅನೇಕ ಕಾರ್ಯಗಳಿದ್ದವು. ಇವುಗಳನ್ನು ಯಾರು ಯಾವ ರೀತಿ ಮಾಡುತ್ತಿದ್ದರು ಎಂಬ ಅಂಶಗಳನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ ವಿಜಯನಗರದ ಪ್ರೌಢಪ್ರತಾಪದೇವರಾಯನ ಕಾಲದಲ್ಲಿ ರಚಿತವಾದ (೧೪೧೧) ಹಂಪೆಯ ಶಾಸನದಲ್ಲಿ ಬರುವ ಒಂದು ಪದ್ಯ, ಸಾಮಾಜಿಕ ಜೀವನಕ್ಕೆ ಹಿನ್ನೆಲೆಯಾಗಿದೆ. ಇದು ಉದಾತ್ತ ಸಂಸ್ಕೃತಿಯನ್ನು ಅರ್ಥವತ್ತಾಗಿ ಸೂಚಿಸುತ್ತದೆ. ಪ್ರೌಢಪ್ರತಾಪದೇವರಾಯನ ಮಂತ್ರಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅದರೊಂದಿಗೆ ಉದಾತ್ತ ವಿಚಾರದ ಸಂಸ್ಕೃತಿಯನ್ನು ರಕ್ತಗತವಾಗುವಂತೆ ಎರೆದಳೆಂಬುದನ್ನು ಶಾಸನ ಕವಿ ಹೀಗೆ ಹೇಳಿದ್ದಾನೆ.

"ಕೆಱೆಯಂ ಕಟ್ಟಿಸು, ಬಾವಿಯಂ ಸಮಸು, ದೇವಾಗಾರಮಂ ಮಾಡಿಸು ಜೆಱೆಯಿಯಾಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗೆಬುಕೆಯ್ ನಂಬದ|

ರ್ಗೆಱುವೆಟ್ಟಾಗಿರು ಶಿಷ್ಟರಂ ಪೊರೆಯನುತ್ತಿಂತೆಲ್ಲವಂ ಪಿಂದೆ ತಾ
ಯಾರೆದಳ್ವಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ||
(ಶಾಸನ ಮತ್ತು ಗದ್ಯ, ಹು.ಕ.ಜಯದೇವ, ಪು.೫೨)

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷನನ್ನು ರಕ್ಷಿಸು ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಹಾಕಿದಳಂತೆ ತಾಯಿ. ಇಂತಹ ಅರ್ಥವತ್ತಾದ ಕಲ್ಪನೆ ಕವಿಯದು.

ಸಾಮಾಜಿಕ ಜೀವನದ ನೆಮ್ಮದಿಗೆ ಬೇಕಾದ ಮೂಲಭೂತವಾದ ಅಂಶಗಳನ್ನು ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ. ದೇವದುರ್ಗದ ಅನೇಕ ಶಾಸನಗಳಲ್ಲಿಯೂ ಸಾರ್ವಜನಿಕ ಕಾರ್ಯದ ಉಲ್ಲೇಖವನ್ನು ಕಾಣಬಹುದಾಗಿದೆ.

ಹಿರೇರಾಯಕುಂಪಿಯ ೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಮಂತ್ರಿಯಾದ ದೇವರಾಜನು ಅನೇಕ ಕೆರೆ, ದೇವಾಲಯಗಳನ್ನು ಕಟ್ಟಿಸಿದಂತೆ ಶಾಸನ ತಿಳಿಸುತ್ತದೆ. ಚಂದನಕೇರಿಯ ಶಾಸನದಲ್ಲಿ ಅರಸಿಯಕೆರೆಯ ಉಲ್ಲೇಖವಿದ್ದು, ಕೆರೆ ಮಾಡಿದ್ದಕ್ಕೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ತಿಳಿದುಬರುತ್ತದೆ(ಕವಿಶಾಸಂ ೭, ಪು.೧೦೬). ದೇವದುರ್ಗದ ಕೇಸವ್ವೆಯಗವುಡನು ನಳನಾಮ ಸಂವತ್ಸರದಲ್ಲಿ ಕ್ರಿ.ಶ.೧೬೭೭ರಲ್ಲಿ ದೇವದುರ್ಗದ ಕೆರೆ ಕಟ್ಟಿಸಿ, ಗೋಪಾಲಕೃಷ್ಣನ ಪ್ರತಿಷ್ಠೆ ಮಾಡಿಸಿ, ಪೇಟೆ ಕಟ್ಟಿಸಿ, ಸಂತೆ ಸೇರಿಸಿದ. ಹೀಗೆ ಸಾರ್ವಜನಿಕ ಕಾರ್ಯಗಳನ್ನು ಕೇಸವ್ವಯಗವುಡ ಮಾಡಿದನೆಂದು ಶಾಸನ ತಿಳಿಸುತ್ತದೆ(ಕವಿಶಾಸಂ ೭, ಪು.೧೧೪). ಗಬ್ಬೂರಿನ ೧೧೭೧ರ ಶಾಸನದಲ್ಲಿ ಗೂಬ್ಬೂರಿನ ನೀರಕೋಟೆಯಲ್ಲಿ ಚಾಕಣಭಟ್ಟನು ಪ್ರತಿಷ್ಠೆ ಮಾಡಿಸಿದ ಕೇಶವದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಮತ್ತು ಜತ್ಯಪ್ಪನೆಂಬುವವನು ಎರಡೂ ದೇವರಿಗೆ ನೀರಕೋಟೆಯ ಪಶ್ಚಿಮಕ್ಕೆ ಒಂದು ದೊಡ್ಡ ನಿವೇಶನವನ್ನು ನೀಡುತ್ತಾನೆ. ಈ ಶಾಸನದಲ್ಲಿ ಕೋಟೆಯ ಉಲ್ಲೇಖ ಹಾಗೂ ನೀರಿನ ಬಾವಿಯ ಉಲ್ಲೇಖವನ್ನು ನಾವು ಕಾಣಬಹುದು(ಕವಿಶಾಸಂ ೭, ಪು.೫೯). ಅಲ್ಲದೆ ದೇವದುರ್ಗ, ರಾಮದುರ್ಗ, ಗಬ್ಬೂರು, ಹುನುಗಂದ, ಬಾಡ, ಕ್ಯಾದ್ಗಿಗೇರ ಚಂದನಕೆರೆ, ಅರಕೆರೆ ಮುಂತಾದವುಗಳ ಹೆಸರಿನಲ್ಲಿ ಕೆರೆಯ ಉಲ್ಲೇಖವಿದೆ. ಹಾಗೂ ದೇವದುರ್ಗದ ಅನೇಕ ಪ್ರದೇಶಗಳಲ್ಲಿ ಕೆರೆ, ಬಾವಿ, ಕೋಟೆ, ದೇವಾಲಯಗಳು ಹೀಗೆ ಸಾರ್ವಜನಿಕ ಕಾರ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಕಾಣಬಹುದಾಗಿದೆ.

ಕೆರೆ-ಬಾವಿ : ಸಾರ್ವಜನಿಕ ಪ್ರಯೋಜನಾರ್ಥವಾಗಿ ಕೆರೆ ಕಟ್ಟಿಸಿದವರಲ್ಲಿ ವರ್ತಕರೂ ಕಂಡುಬರುತ್ತಾರೆ. ಕೆರೆ ಕಟ್ಟಿಸಿ ಜನರಿಗೆ ನೀರನ್ನು ಒದಗಿಸುವುದರಿಂದ ಪುಣ್ಯ ಲಭಿಸುವುದೆಂಬ ಭಾವನೆ ಕರ್ನಾಟಕದಲ್ಲಿತ್ತು. ಹೀಗಾಗಿ ವರ್ತಕರೂ ಈ ಭಾವನೆಯಿಂದ ಕೆರೆಯನ್ನು ಕಟ್ಟಿಸಿರಬೇಕು. ಹಿರೇರಾಯಕುಂಪಿಯ ಕ್ರಿ.ಶ.೧೧೩೦ರ ಶಾಸನದಲ್ಲಿ ದೇವರಾಜನು ಕೆರೆ ಕಟ್ಟಿಸಿದಂತೆ ಉಲ್ಲೇಖವಿದೆ. ಚಂದನಕೇರಿಯ ಶಾಸನದಲ್ಲಿ ಕೆರೆ ಮಾಡಿದ್ದಕ್ಕೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ತಿಳಿಸಲಾಗಿದೆ. ಸಾಲಗುಂದೆ(ಸಿ) ೧೫೨೮ರ ಶಾಸನದಲ್ಲಿ ಗ್ರಾಮದ ಪಶ್ಚಿಮಕ್ಕೆ ಕಟ್ಟಿರುವ ಕರಿಯ ಕೆರೆಯುದ್ದ ಭೂಮಿಯನ್ನು ದಾನ ಬಿಟ್ಟ ಉಲ್ಲೇಖವಿದೆ(ಕವಿಶಾಸಂ ೭, ಪು.೯೧). ಅದೇ ಗ್ರಾಮದ ೧೦೮೫ ನಾಗದೇವ ಬಾವಿ, ಕೆರೆ ಕಟ್ಟಿಸಿದ ಉಲ್ಲೇಖವಿದೆ. ಮುಕ್ಕಂದಿ ಶಾಸನದಲ್ಲಿ ಅಭಿಸಾಣಿ ಅಯ್ಯನ ಕಾರ್ಯಕರ್ತನಾದ ಜೊಂಮರಾಹತನೆಂಬುವವನು ಮುಕುಂದಿಯ ಗವುಡ ಸೇನಬೋವ ಮೊದಲಾದವರಿಗೆ ಕೆರೆಯನ್ನು ಕಟ್ಟಿಸಿದುದಕ್ಕೆ ದಸವಂದವಾಗಿ ಕಡುಮಾನ್ಯ ನೀಡುತ್ತಾನೆ. ಈ ಗೌಡ ಮತ್ತು ಸೇನಬೋವರು ಕಟ್ಟಿಸಿದ ಕೆರೆಗಳೆಂದರೆ ಗೌಡ ಸೇನಬೋವರು ಕಟ್ಟಿಸಿದ ಕೆರೆ, ಆಯಿತೆರೆಡಿ ಕಟ್ಟಿಸಿದ ಕೆರೆ, ಸೂಗುರ ಸಾಗಪ್ಪನ ಕೆರೆ, ಆಟುಲಪರುವತನ ಕೆರೆ, ಕೊಟೆಗಾರ ತಿಪರಂಗ ಮುಕುಂದಿ ಉಪಾರ ಯಿಸೊರಯ್ಯನ ಕಾಲುವೆ ೧ ಅಂತು ೪ ಕೆರೆ, ೨ ಕುಂಟೆ ಮತ್ತು ಒಂದು ಕಾಲುವೆಯನ್ನು ಮಾಡಿಸಿದ್ದು, ಇದರ ಕೆಳಗೆ ಬರುವ ಆದಾಯದಲ್ಲಿ ಕುಳಪಾಲ ಎರಡು ಮತ್ತು ರಾಜಪಾಲು ಒಂದರ ಲೆಕ್ಕದಲ್ಲಿ ಹಂಚಿಕೊಳ್ಳಬೇಕೆಂದು ಹೇಳಲಾಗಿದೆ. ದೇವದುರ್ಗ ಕೇಸವ್ವೆಯಗವುಡನ ನಳನಾಮ(ಕ್ರಿ.ಶ.೧೬೭೭) ಸಂವತ್ಸರದಲ್ಲಿ ಕೆರೆ ಕಟ್ಟಿಸಿದೆಂದು ಉಲ್ಲೇಖವಿದೆ(ಕವಿಶಾಸಂ ೭, ಪು.೧೧೪). ಇವುಗಳನ್ನು ಕಟ್ಟುವ ಉದ್ದೇಶ ಸಮಾಜದ ಜನತೆಗೆ ಮಾಡುವ ಪರೋಪಕಾರವನ್ನು ತೋರಿಸುತ್ತವೆ.

ಮದುವೆ : ಕುಟುಂಬ ಜೀವನದ ಮೂಲಕ ಬದುಕು ನಡೆಸಿದ ಆಗಿನ ಜನತೆಯ ಮದುವೆಯ ಸಂಬಂಧಗಳು ಹೇಗೆ ನಡೆಯುತ್ತವೆಂಬುದರ ವಿವರ ಶಾಸನಗಳಲ್ಲಿ ಇಲ್ಲದಿದ್ದರೂ ಅಲ್ಲಲ್ಲಿ ಅಲ್ಪ ಸ್ವಲ್ಪ ಮದುವೆಯ ಉಲ್ಲೇಖಗಳಿವೆ. ವರ್ತಕರು ತಮ್ಮ ಸರಿಸಮಾನ ವರ್ತಕರೊಂದಿಗೆ ಬೀಗತನ ಮಾಡುತ್ತಿದ್ದರೂ ಕೆಲವರು ಅರಸು ಮನೆತನದ ಹೆಣ್ಣು ಮಕ್ಕಳೊಂದಿಗೂ ವಿವಾಹವಾದುದುಂಟು. (ರಾ) ಮದುಗಲ್ಲ್‌ನ ಕ್ರಿ.ಶ.೧೨೧೫ರ ಶಾಸನದಲ್ಲಿ ವೈಶ್ಯರ ಮನೆ ಮದುವೆಯಲ್ಲಿ ಜೌಲದಲ್ಲಿ, ಮೈನೆರದಲ್ಲಿ ಇನ್ನು ಮುಂತಾದ ಸಮಯಗಳಲ್ಲಿ ಇಂತಿಷ್ಟು ಹಣವನ್ನು ಕೊಡಬೇಕೆಂದು ನಿಯಮ ಮಾಡಿ ದಾನವನ್ನು ಬಿಡಲಾಗಿದೆ(ಕವಿಶಾಸಂ ೭, ಪು.೧೮೩). ಕುರುಡಿ ಗ್ರಾಮದ ಕ್ರಿ.ಶ.೧೧೩೭ ಶಾಸನದಲ್ಲಿ ಮಹಾಪ್ರಧಾನ ನಿಂಬಣಯ್ಯನ ಮಗಳು ದಾನ ಕೊಟ್ಟ ವಿವರವಿದೆ. ಅಲ್ಲದೆ ಇಬ್ಬರು ಹೆಣ್ಣು ಮಕ್ಕಳಾದ ನಾಗಲದೇವಿ ಹಾಗೂ ಗಂಗಣಬ್ಬೆಯರನ್ನು ಶಂಕರಾಯ್ಯನಿಗೆ ಹಾಗೂ ಅವರ ತಮ್ಮ ಮಹಾದೇವನಿಗೆ ಮದುವೆ ಮಾಡಿಕೊಡಲಾಗಿತ್ತು ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೨೬೨).

ಅನ್ನಛತ್ರ : ಊರಿಂದೂರಿಗೆ ಬಂದ ಅತಿಥಿ, ವಿದ್ಯಾರ್ಥಿಗಳಿಗೆ ಭೋಜನ ವ್ಯವಸ್ಥೆಗಾಗಿ ವ್ಯಾಪಾರಿಗಳು ಅನ್ನಛತ್ರ ಕಟ್ಟಿಸುವುದು ಮತ್ತು ಅವುಗಳಿಗೆ ದಾನ ಕೊಡುವುದನ್ನು ಶಾಸನದಲ್ಲಿ ಕಾಣುತ್ತೇವೆ. ಗಬ್ಬೂರಿನ ಕ್ರಿ.ಶ.೧೧ಳಳರ ಶಾಸನದಲ್ಲಿ ಮಹಾಜನಗಳು ನಾಗಭೂಷಣದೇವರ ಸತ್ರಕ್ಕೆ ಜೋಳವನ್ನು ಬಿಡುತ್ತಾರೆ.

೫.೨. ಆರ್ಥಿಕ ಜೀವನ

ಅರ್ಥಶಾಸ್ತ್ರವು ಮಾನವನ ಇತಿಹಾಸದಷ್ಟೇ ಪುರಾತನವಾಗಿದ್ದರೂ ಅದಕ್ಕೆ ಬಹುಕಾಲದವರೆಗೆ ತನ್ನದೇ ಆದ ಒಂದು ಸ್ವತಂತ್ರವಾದ ಅಸ್ತಿತ್ವವಿದ್ದಿಲ್ಲ. ಕೈಗಾರಿಕಾ ಕ್ರಾಂತಿಯ ಮೂಲಕ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಬದಲಾವಣೆಗಳಾಗಿದ್ದರಿಂದ ಅರ್ಥಶಾಸ್ತ್ರಕ್ಕೆ ಎಂದಿಲ್ಲದ ಮಹತ್ವ ಪ್ರಾಪ್ತವಾಯಿತು. ೧೭೭೬ರಲ್ಲಿ ಆಡಂ ಸ್ಮಿಥ್ ಎಂಬ ಆಂಗ್ಲ ಅರ್ಥಶಾಸ್ತ್ರಜ್ಞರು 'ವೆಲ್ತ್ ಆಫ್ ನೇಶನ್ಸ್' ಎಂಬ ಗ್ರಂಥವನ್ನು ಪ್ರಕಟಿಸಿದರು. ಅದನ್ನು ಅರ್ಥಶಾಸ್ತ್ರದ ಬಗ್ಗೆ ರಚಿಸಲಾದ ಶ್ರೇಷ್ಠ ಗ್ರಂಥವೆಂದು ಪರಿಗಣಿಸಲಾಯಿತು. ಮತ್ತು ಆಡಂ ಸ್ಮಿಥ್ ಅವರಿಗೆ 'ಆಧುನಿಕ ಅರ್ಥಶಾಸ್ತ್ರದ ಪಿತಾಮಹ'ನೆಂದು ಕರೆಯಲಾಯಿತು. ಅಂದಿನಿಂದ ಅರ್ಥಶಾಸ್ತ್ರವು ಒಂದು ಸ್ವ ತಂತ್ರವಾದ ಸಾಮಾಜಿಕ ಶಾಸ್ತ್ರವೆಂಬ ರೀತಿಯಲ್ಲಿ ಬೆಳೆಯಲು ಪ್ರಾರಂಭಿಸಿತು. ಸಾಮಾನ್ಯವಾಗಿ ಅರ್ಥಶಾಸ್ತ್ರವೆಂದರೆ ಸಂಪತ್ತನ್ನು ಕುರಿತು ಅಧ್ಯಯನ ಮಾಡುವುದೇ ಆಗಿದೆ. ಅಥವಾ ಸಂಪತ್ತನ್ನು ಅರಸುವ ಶಾಸ್ತ್ರ ಎಂದು ಆಡಂ ಸ್ಮಿಥ್‌ರು ವ್ಯಾಖ್ಯೆಯನ್ನು ಕೊಟ್ಟಿದ್ದಾರೆ.

ಒಂದು ದೇಶದ ಜನರು ಸರಕು-ಸೇವೆಗಳನ್ನು ಹೇಗೆ ಉತ್ಪಾದಿಸುತ್ತಾರೆ ಮತ್ತು ಅವುಗಳನ್ನು ಹೇಗೆ ಉಪಭೋಗಿಸುತ್ತಾರೆ ಎಂಬುದು ಆ ದೇಶದಲ್ಲಿಯ ಆರ್ಥಿಕ ವ್ಯವಸ್ಥೆಯನ್ನವಲಂಬಿಸಿದೆ. ಆರ್ಥಿಕ ವ್ಯವಸ್ಥೆಯು ಆರ್ಥಿಕ ಸಂಘಟನೆ ಮತ್ತು ಆರ್ಥಿಕ ಸಂಘ ಸಂಸ್ಥೆಗಳನ್ನೊಳಗೊಂಡಿರುತ್ತದೆ. ಇಂಥ ಆರ್ಥಿಕ ವ್ಯವಸ್ಥೆಯು ದೇಶದಿಂದ ದೇಶಕ್ಕೆ ಬದಲಾಗುತ್ತ ಹೋಗುತ್ತದೆ. ಅಲ್ಲದೆ ಒಂದೇ ದೇಶದಲ್ಲಿ ಕಾಲ ಕಾಲಕ್ಕೆ ಬದಲಾಗುತ್ತ ಹೋಗುತ್ತದೆ. ಆದುದರಿಂದ ಒಂದು ದೇಶದಲ್ಲಿನ ಆರ್ಥಿಕ ಚಟುವಟಿಕೆಗಳು ಆ ದೇಶದಲ್ಲಿ ಆಚರಣೆಯಲ್ಲಿರುವ ಆರ್ಥಿಕ ವ್ಯವಸ್ಥೆಯನ್ನೇ ಅವಲಂಬಿಸಿರುತ್ತವೆ.

ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಆರ್ಥಿಕ ಅಂಶಗಳು ಹೆಚ್ಚಾಗಿ ತಿಳಿದುಬರುತ್ತದೆ. ಇಲ್ಲಿಯ ವ್ಯಾಪಾರ ಪದ್ಧತಿ, ಸುಂಕದ ಕ್ರಮ, ತೆರಿಗೆ ಪದ್ಧತಿ, ಕಂದಾಯ ಕ್ರಮ, ಕೃಷಿ, ವ್ಯಾಪಾರ ಸಂಘಗಳು, ವೃತ್ತಿ ಸಂಘಗಳು, ನೀರಾವರಿ ಪದ್ಧತಿ ಹಾಗೂ ರಾಜನು ಕೊಡುತ್ತಿದ್ದ ದಾನದತ್ತಿಗಳು ಉಂಬಳಿಗಳು, ಇನಾಮು ಗ್ರಾಮಗಳು, ಇವುಗಳು ಆರ್ಥಿಕ ವ್ಯವಸ್ಥೆಯ ಅಂಶಗಳನ್ನು ಶಾಸನಗಳು ತಿಳಿಸುತ್ತವೆ. ಕರ್ನಾಟಕದ ಹಲವು ರಾಜಮನೆತನಗಳಾದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ನಡೆಸಿಕೊಂಡು ಬಂದ ಆರ್ಥಿಕ ಪದ್ಧತಿಯನ್ನು ನಂತರ ಬಂದ ಕಲ್ಯಾಣ ಚಾಲುಕ್ಯರು, ಕಳಚೂರಿಗಳು,

ದೇವಗಿರಿಯ ಯಾದವರು(ಸೇವಣರು) ನಾಯಕರು ಮುಂತಾದವರು ಮುಂದುವರಿಸಿಕೊಂಡು ಬಂದರು. ನಮಗೆ ಆರ್ಥಿಕ ವ್ಯವಸ್ಥೆಯನ್ನು ಅರಿಯಲು ಇಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳ ಕಾಲಾವಧಿಯ ಶಾಸನಗಳು ಸೂಕ್ತ ಮಾಹಿತಿ ಕೊಡುತ್ತವೆ.

ಭೂ-ಸಂಪತ್ತು

೧. ಭೂಮಿಯ ವಿಧಗಳು : ದೇವದುರ್ಗ ತಾಲ್ಲೂಕಿನಲ್ಲಿ ಮುಖ್ಯವಾಗಿ ೪ ವಿಧದ ಮಣ್ಣಿನ ಪ್ರಕಾರಗಳನ್ನು ನೋಡಬಹುದಾಗಿದೆ. ಮುಂಗಾರಿನ ಬೆಳೆಯನ್ನು ಬೆಳೆಯುವ ಕೆಂಪು ಮಣ್ಣು, ಹಿಂಗಾರಿ ಬೆಳೆಯನ್ನು ಬೆಳೆಯುವ ಕಪ್ಪು ಮಣ್ಣು, ಕೆಲವು ತಗ್ಗು, ಗುಡ್ಡಗಾಡು ಹಳ್ಳಿಗಳಲ್ಲಿರುವ ಜೇಡಿ ಮಣ್ಣು ಅಥವಾ ಸವುಳು ಮಣ್ಣು, ಹಳ್ಳಿಗಳಲ್ಲಿರುವ ಮರಳು ಮಣ್ಣು ಭೂಮಿಯನ್ನು ಇಲ್ಲಿ ಕಾಣಬಹುದಾಗಿದೆ. ಕೆಲವೆಡೆ ಕಪ್ಪು ಕೆಂಪು ಮಿಶ್ರಿತ ಭೂಮಿಯನ್ನು ನಾವು ದೇವದುರ್ಗ ಗ್ರಾಮಗಳಲ್ಲಿ ಕಾಣುತ್ತೇವೆ.

೨. ವ್ಯವಸಾಯ : ಇಲ್ಲಿಯ ಪ್ರಮುಖ ಕಸುಬು ಕೃಷಿ. ಶೇ.೮೦ರಷ್ಟು ಮಳೆಯನ್ನು ಅವಲಂಬಿಸಿಯೇ ಇಲ್ಲಿನ ರೈತರು ಕೃಷಿಯನ್ನು ಮಾಡುತ್ತಾರೆ.

ಈ ತಾಲೂಕಿನ ಪ್ರಧಾನ ಆಹಾರದ ಬೆಳೆಗಳಾದ ಜೋಳ, ಹೆಸರು ಮತ್ತು ಶೇಂಗಾ, ಗೋಧಿ, ಸಜ್ಜೆ, ಕಡಲೆ, ತೊಗರಿ, ಎಳ್ಳು, ಸಣ್ಣ ಕಾರಳ್ಳು ಮುಂತಾದವು ಸೂರ್ಯಕಾಂತಿ, ಹತ್ತಿ, ಉಳಗಡ್ಡಿ, ತರಕಾರಿ ಬೆಳೆಗಳು ಮುಂತಾದವು ವಾಣಿಜ್ಯ ಬೆಳೆಗಳಾಗಿವೆ.

೩. ತೋಟಗಾರಿಕೆ : ದೇವದುರ್ಗ ತಾಲ್ಲೂಕಿನಲ್ಲಿ ಶೇ.೨೦ರಷ್ಟು ಮಾತ್ರ ಕೃಷ್ಣಾ ನದಿ ದಡದಲ್ಲಿ ಕೊಳವೆಗಳ ಮೂಲಕ ನೀರಿನ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇತರ ಹಳ್ಳಿಗಳಲ್ಲಿ ತೆರೆದ ಬಾವಿಗಳಿಂದ, ಕೆರೆಗಳಿಂದ ನೀರಾವರಿ ಸೌಲಭ್ಯವನ್ನು ಪಡೆದುಕೊಂಡು ತೋಟಗಾರಿಕೆಯನ್ನು ಪ್ರಾರಂಭಿಸಿದ್ದಾರೆ. ನಾಗಡದಿನ್ನಿ, ಹೆಗ್ಗಡದಿನ್ನಿ, ತಿಪ್ಪಲದಿನ್ನಿ, ಯರಮೆರಸ್, ಭತ್ತ, ಶೇಂಗಾ, ಉಳ್ಳಾಗಡ್ಡಿ ಬೆಳೆಯುತ್ತಾರೆ. ಇನ್ನು ಜಾಲಹಳ್ಳಿ, ಅರಕೇರಾ, ದೇವದುರ್ಗ, ಖಾನಾಪುರ, ಚಂದನಕೇರಿ ಮುಂತಾದವುಗಳಲ್ಲಿ ಕಡಲೆ, ಶೇಂಗಾ, ಉಳ್ಳಗಡ್ಡಿ, ನಿಂಬೆಹಣ್ಣಿಗೆ ಹೆಸರುವಾಸಿಯಾಗಿವೆ. ನಿಂಬೆ ರಾಯಚೂರು ಜಿಲ್ಲೆಯ ವಿವಿಧ ಭಾಗಗಳಿಗೆ ಇಲ್ಲಿಂದ ರವಾನೆಯಾಗುತ್ತದೆ. ಇತರ ಊರುಗಳಲ್ಲಿ ಕಲ್ಲಂಗಡಿ, ಮಾವು, ತರಕಾರಿಗಳನ್ನು ಬೆಳೆಯುತ್ತಾರೆ. ೧೯೮೦-೮೧ರ ಸಾಲಿನಲ್ಲಿ ಸಸ್ಯಪಾಲನಾ ಕ್ಷೇತ್ರ ಮತ್ತು ಹಣ್ಣಿನ ತೋಟ ಯೋಜನೆಗಳನ್ನು ಪ್ರಾರಂಭಿಸಿ ಮಾವು ಹಾಗೂ ಇತರ ಹಣ್ಣಿನ ಮರ ಗಿಡಗಳನ್ನು ಬೆಳೆಸಿ ರೈತರಿಗೆ ವಿತರಣೆ ಮಾಡುತ್ತಿದೆ. ಅಲ್ಲದೆ ರೈತರಿಗೆ ಉಪಯೋಗವಾಗುವಂತಹ ಯೋಜನೆಗಳನ್ನು ಹಾಕಿಕೊಂಡಿದೆ. ಶಾಸನಗಳಲ್ಲಿಯೂ ಅನೇಕ ತೋಟಗಳ ಉಲ್ಲೇಖವಿರುವುದನ್ನು ನೋಡಬಹುದಾಗಿದೆ. ಆದರೆ ಈ ಶಾಸನೋಲ್ಲೇಖಿತ ಮಾಹಿತಿಗಳು ಆಯಾ ದೇವಾಲಯದ ಹೂವಿನ ತೋಟಕ್ಕೆ ಸಂಬಂಧಿಸಿದವಾಗಿವೆ.

ಗಬ್ಬೂರಿನ ಕ್ರಿ.ಶ.೧೧೫೪ರ ಶಾಸನದಲ್ಲಿ ಕೇಶವ ದೇವರ ತ್ರಿಪುರಾಂತಕ ದೇವರಿಗೆ ಮಾಲೆಗಾರರು ಎರಡೂ ದೇವರ ಹೂದೋಟಕ್ಕೆ ದಾನ ನೀಡುತ್ತಾರೆ(ಕವಿಶಾಸಂ ೭, ಪು.೫೪). ೧೧೪೯ರ ಶಾಸನದಲ್ಲಿ ಕೇಶವ ದೇವರಿಗೆ ನಿವೇಶನ ಹಾಗೂ ತೋಟ ಮತ್ತು ಭೂಮಿಯನ್ನು ದಾನವಾಗಿ ನೀಡುತ್ತಾರೆ(ಕವಿಶಾಸಂ ೭, ಪು.೫೭). ಗಬ್ಬೂರಿನ ಕ್ರಿ.ಶ.೧೦೮೪ರ ಶಾಸನದಲ್ಲಿ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಜಕ್ಕರಸನೆಂಬವನು ದೇವರ ನಿತ್ಯಪೂಜೆಯ ಹೂವಿಗೆಂದು ಹೊಲ, ತೋಟಗಳನ್ನು ಬಿಡುತ್ತಾರೆ(ಕವಿಶಾಸಂ ೭, ಪು.೮೮). ಹಿರೇರಾಯಕುಂಪಿಯ ಕ್ರಿ.ಶ.೧೧೩೦ ಶಾಸನದಲ್ಲಿ ಭೂಲೋಕ ಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಜಯರಾಮ ಎಂಬುವನು ಮಾಡಿಸಿದ ದೇವಾಲಯದ ಅಂಗಭೋಗ, ಜೀರ್ಣೋದ್ಧಾರ ಮುಂತಾದ ಕಾರ್ಯಗಳಿಗಾಗಿ ಧರಣಿ ದೇವನ ಕೂಲಿನಲ್ಲಿ ೪೦ ಮತ್ತರ ಭೂಮಿ ತೋಟ ನೀಡುತ್ತಾನೆ (ಕವಿಶಾಸಂ ೭, ಪು.೯೦). ಈ ಶಾಸನೋಲ್ಲೇಖಿತ ತೋಟಗಳು ದೇವಾಲಯದ ಬಳಿ ಇದ್ದಿರಬಹುದಾದ ಬಾವಿಯಿಂದ ನೀರನ್ನು ಪಡೆಯುತ್ತಿದ್ದವು.

ಭೂಸ್ವಾಮ್ಯ : ಮಾನವನ ಸಮಸ್ತ ದುಡಿಮೆ ಉತ್ಪಾದನೆ ಅಭಿವೃದ್ಧಿಗಳು ಆತ ಸ್ವತಂತ್ರ್ಯವಾಗಿ ಹೊಂದಿರುವ ಭೂಸ್ವಾಮ್ಯ ಮಾಲಿಕತ್ವವನ್ನು ಅವಲಂಬಿಸಿದೆ. ದೇವದುರ್ಗದ ಅನೇಕ ಶಾಸನಗಳಲ್ಲಿ ಭೂದಾನ ಮಾಡಿದ ಉಲ್ಲೇಖಗಳನ್ನು ಕಾಣಬಹುದು. ನಿಲವಂಜಿಯ ಕ್ರಿ.ಶ.೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮನು ಕಲ್ಯಾಣಪುರದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಮಹಾಮಂಡಳೇಶ್ವರ ಅಯ್ಯರಸನು ಸೂರ್ಯಗ್ರಹಣದ ದಿನ ಕರಕಂಠ ಪಂಡಿತನಿಗೆ ಕುರುಕುಂದೆ ಗಡಿಂಬದ ಕೂಲಲ್ಲಿ ೧೨ ಮತ್ತರು ಭೂಮಿ ನೀಡುತ್ತಾನೆ. ಕ್ರಿ.ಶ.೧೨೨೩ ವೀರಗೋಟ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ ಸೆಟ್ಟಿಗಳು ಚಾಮರಸನೂ ಭೂದಾನ ನೀಡುತ್ತಾನೆ(ಕವಿಶಾಸಂ ೭, ಪು.೯೮). ಗಣಜಾಲ ಊರಿನ ಕ್ರಿ.ಶ.೧೦೨೩ರ ಶಾಸನದಲ್ಲಿ ದಾಸರಸನೆಂಬುವನು ಗಣಜಾಲಿಯ ನಾಗೇಶ್ವರ ದೇವರಿಗೆ ೨೦ ಮತ್ತರು ಹೊಲವನ್ನು ಬಿಟ್ಟಂತೆ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೧). ಗೂಬ್ಬೂರಿನ ಕ್ರಿ.ಶ.೧೧೧೮ರ ಶಾಸನದಲ್ಲಿ ಜನ್ನಯ ಭಟ್ಟ ಸೋಮಯಾಜಿ ಮತ್ತು ಮುಸ್ಯಣಭಟ್ಟ ಅವನ ಪತ್ನಿ ನಾಲಿಕಬ್ಬೆಯರು ಮಹಾದೇವರ ಪೂಜಾಕಾರ್ಯಗಳಿಗಾಗಿ ಭೂದಾನ ನೀಡಿರುವಂತೆ ಉಲ್ಲೇಖವಿದೆ(ಕವಿಶಾಸಂ ೭, ಪು.೪೫). ಅದೇ ಕ್ರಿ.ಶ.೧೧೭೧ರ ಶಾಸನದಲ್ಲಿ ಜತ್ಯಪ್ಪನೆಂಬುವನು ಮಾಣಿಕೇಶ್ವರ ಕೊಲಲ್ಲಿ ನಾಲ್ಕು ಮತ್ತರು ಭೂಮಿಯನ್ನು ನೀಡುತ್ತಾನೆ(ಕವಿಶಾಸಂ ೭, ಪು.೫೯).

ಅದೇ ೧೧೪೯ರ ಶಾಸನದಲ್ಲಿ ವೈಷ್ಣವ ಚಾಕಣಭಟ್ಟಯ್ಯ ಎಂಬುವನು ಕೇಶವ ದೇವರಿಗೆ ಎರಡು ಮತ್ತರು ಕರಿಯ ಹೊಲ, ಮಣಿಕೇಶ್ವರದ ಮೂರು ಮತ್ತರು ಕರಿಯ ಹೊಲ, ಅಸಗೆರೆಯಲ್ಲಿ ಮೂರು ಮತ್ತರು ಭೂಮಿಯನ್ನು ನೀಡುತ್ತಾನೆ(ಕವಿಶಾಸಂ ೭, ಪು.೫೭). ಹೀಗೆ ದೇವದುರ್ಗದ ಅನೇಕ

ಶಾಸನಗಳಲ್ಲಿ ಭೂಸ್ವಾಮ್ಯ ಮಾಲಿಕತ್ವ ಮತ್ತು ಭೂಮಿಯ ದಾನದ ಉಲ್ಲೇಖವನ್ನು ನಾವು ನೋಡಬಹುದಾಗಿದೆ.

ಪಶುಸಂಗೋಪನೆ : ದೇವದುರ್ಗ ತಾಲ್ಲೂಕಿನಲ್ಲಿ ಪ್ರಾಣಿಗಳ ಸಂಖ್ಯೆ ಕಡಿಮೆ. ಈ ತಾಲ್ಲೂಕಿನ ಜಾಲಹಳ್ಳಿ, ದೇವದುರ್ಗ, ಗೂಗಲ್ಲು ಮುಂತಾದಗಳಲ್ಲಿ ಭಾರೀ ಪ್ರಮಾಣದಲ್ಲಿ ದನಗಳ ಜಾತ್ರೆ ಜರುಗುತ್ತದೆ. ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿಯೂ ಪ್ರಾಣಿಗಳ ಉಲ್ಲೇಖ ಹಾಗೂ ಪ್ರಾಣಿಗಳ ಹೆಸರಿನ ದೇವಾಲಯಗಳನ್ನು ಕಾಣಬಹುದಾಗಿದೆ. ಗಬ್ಬೂರಿನ ಕ್ರಿ.ಶ.೧೧೫೪ರ ಶಾಸನದಲ್ಲಿ ಪ್ರಾಣಿಗಳಾದ ಎತ್ತು, ಕೋಣ, ಕತ್ತೆ ಮುಂತಾದವುಗಳ ಉಲ್ಲೇಖವಿದೆ(ಕವಿಶಾಸಂ ೭, ಪು.೫೫).

ಉತ್ಪಾದನೆ-ಕೈಗಾರಿಕೆಗಳು

೧. ಎಣ್ಣೆ ಕೈಗಾರಿಕೆ : ಎಣ್ಣೆ ತೆಗೆಯುವರನ್ನು ತಲ್ಲಿಗ, ಗಾಣಿಗ ಎಂದು ಕರೆಯುವರು. ಎಣ್ಣೆಗಾಣಗಳನ್ನು ಹಾಕಿ ಎಣ್ಣೆ ಹಿಂಡುವುದು ಮತ್ತು ಮಾರುವುದು ಇವರ ಮುಖ್ಯ ಕಸುಬು. ಶಾಸನಗಳಲ್ಲಿ ಅವರ ಹೆಸರು ಹಾಗೂ ಗಾಣವನ್ನು ದಾನವಾಗಿ ಕೊಟ್ಟ ಉಲ್ಲೇಖಗಳಿವೆ.

ಚಂದನಕೇರಿಯ ಕ್ರಿ.ಶ.೧೨ನೇ ಶತಮಾನದ ಶಾಸನವು ಹೆಮ್ಮಡಿ ದೇವರಸನು ಹೆಮ್ಮೇಶ್ವರ ದೇವರಿಗೆ ನಂದಾದೇವಿಗೆ ೧ ಗಾಣವನ್ನು ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೮). ಕ್ರಿ.ಶ.೧೦೮೪ ಗಬ್ಬೂರಿನ ಶಾಸನದಲ್ಲಿ ಜಕ್ಕರಸನೆಂಬುವನು ನಂದಾದೇವಿಗೆ ಎಣ್ಣೆಗಾಣವನ್ನು ನೀಡುತ್ತಾನೆ(ಕವಿಶಾಸಂ ೭, ಪು.೮೮). ಅದೇ ಕ್ರಿ.ಶ.೧೧೫೪ ಶಾಸನದಲ್ಲಿ ಗಾಣದ ಕಾಡಿಸೆಟ್ಟಿ, ಗಾಣದ ದಾಸಿಮಯ್ಯ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೫೨). ಹೀಗೆ ಇಂದಿನ ಕಾಲದಿಂದಲೂ ಎಣ್ಣೆ ತೆಗೆಯುವುದು ಒಂದು ಪ್ರಾಚೀನ ಕಸುಬಾಗಿತ್ತು.

೨. ಅದಿರು ಕರಗಿಸುವ ಕೈಗಾರಿಕೆ : ಈ ತಾಲ್ಲೂಕಿನ ವಂದಳ್ಳಿ ಭಾಗದಲ್ಲಿ ಪ್ರಾಚೀನ ಕಾಲದಲ್ಲಿ ಅದಿರು ಕರಗಿಸುವ ಕಾರ್ಖಾನೆಗಳಿದ್ದವೆಂದು ತಿಳಿದುಬಂದಿದೆ.

೩. ಬಟ್ಟೆ ಕೈಗಾರಿಕೆ : ದೇವದುರ್ಗದಲ್ಲಿ ಅನೇಕ ಕೈಮಗ್ಗಗಳಿದ್ದು, ಕೈ ಮಗ್ಗದ ಬಟ್ಟೆಗಳ ತಯಾರಿ ಒಂದು ಕೈಗಾರಿಕೆಯಾಗಿತ್ತು. ದೇವರದಾಸಿಮಯ್ಯನ ಉಲ್ಲೇಖವಿರುವ ಒಂದು ಶಾಸನದಲ್ಲಿ ಜೇಡ ಗೊತ್ತಳಿಗಳ ಉಲ್ಲೇಖ ಬಂದಿದೆ. ಅಂದರೆ ಈ ಪ್ರದೇಶವು ಹಿಂದಿನಿಂದಲೂ ಬಟ್ಟೆ ನೇಯುವ ಸ್ಥಳವಾಗಿತ್ತೆಂಬುದನ್ನು ಇದು ಸೂಚಿಸುತ್ತದೆ.

ವಾಣಿಜ್ಯ-ವ್ಯವಹಾರ

ದೇವದುರ್ಗ ತಾಲ್ಲೂಕಿನಲ್ಲಿ ಅರಸರ ಆಳ್ವಿಕೆಯಿಂದಲೂ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಜ್ಞಾನ ಉಳ್ಳವರಾಗಿದ್ದರು. ವ್ಯಾಪಾರವು ಉತ್ತಮವಾಗಿದ್ದು ಉನ್ನತ ಮಟ್ಟದ್ದಾಗಿತ್ತು. ದೇವದುರ್ಗದಲ್ಲಿ ವಿವಿಧ

ವ್ಯಾಪಾರಸ್ಥರು ತಮ್ಮ ಸಂಘಗಳನ್ನು ರಚಿಸಿಕೊಂಡಿದ್ದರು. ವಸ್ತುಗಳ ವಿನಿಮಯ ಪದ್ಧತಿ ರೂಢಿಯಲ್ಲಿತ್ತು. ಬಂಡಿ, ಎತ್ತು, ಕೋಣಾ, ಕತ್ತೆ, ಕುದುರೆಗಳ ಮೂಲಕ ವಸ್ತುಗಳನ್ನು ಸಾಗಿಸಲಾಗುತ್ತಿತ್ತು. ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸೆಟ್ಟಿ, ನಾನಾದೇಶಿ, ನಕರರು, ಮುಂದುರಿದಂಡ ಮೊದಲಾದವರು ವ್ಯಾಪಾರವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ದೇವದುರ್ಗ ತಾಲ್ಲೂಕಿನ ಅನೇಕ ಶಾಸನಗಳಲ್ಲಿ ಇವರನ್ನು ಕುರಿತ ಉಲ್ಲೇಖಗಳನ್ನು ಗಮನಿಸಬಹುದಾಗಿದೆ.

ಶಾಸನಗಳಲ್ಲಿರುವ ವರ್ತಕರು

ಶೆಟ್ಟಿಗಳು : ಶಾಸನಗಳಲ್ಲಿರುವ ವರ್ತಕರು ಪ್ರಮುಖವಾಗಿ ಅಯ್ಯವೊಳೆ ಅಯಿನೊರ್ವ್ವರು, ಮುಂಮರಿದಂಡ ಸಾಸಿರ್ವರು, ಮಾಲೆಗಾರರು, ಪನ್ನಾಯದವರು, ಬಿಲ್ಲ ಮನೂರುವರು ಮುಂತಾದವರನ್ನು ನಾವು ಶಾಸನಗಳಲ್ಲಿ ಕಾಣುತ್ತೇವೆ. ಅದರಲ್ಲಿಯೂ ಶೆಟ್ಟಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಶೆಟ್ಟಿಗಳಲ್ಲಿ ಪ್ರಮುಖವಾಗಿ ಎರಡು ವರ್ಗಗಳನ್ನು ಕಾಣುತ್ತೇವೆ. ೧. ಲಿಂಗಾಯತ ಮತಕ್ಕೆ ಸೇರಿದವರು(ಬಣಜಿಗರು) ಮತ್ತು ವೈಷ್ಣವ ಅಥವಾ ಶೈವ ಮತಕ್ಕೆ ಸೇರಿದ ತೆಲುಗು ಶೆಟ್ಟರು. ಇವರ ಮುಖ್ಯ ಕಸುಬು ವ್ಯಾಪಾರ. ಬೇರೆ ಬೇರೆ ಸ್ಥಳಗಳಿಂದ ಬಂದು ವ್ಯಾಪಾರವನ್ನು ಮಾಡುವುದು ಮತ್ತು ಇದರ ಜೊತೆಗೆ ಅನೇಕ ಧರ್ಮ ಕಾರ್ಯಗಳಿಗೆ ದಾನ ಕೊಟ್ಟಿದ್ದನ್ನು ಶಾಸನಗಳು ತಿಳಿಸುತ್ತವೆ.

ಗಬ್ಬೂರಿನ ಕ್ರಿ.ಶ.೧೧೫೪ರ ಶಾಸನದಲ್ಲಿ ಗೂಬ್ಬೂರಿನ ತ್ರಿಪುರಾಂತಕ ದೇವರಿಗೆ ಕೆಲವು ಸೆಟ್ಟರು ದಾನ ನೀಡುತ್ತಾರೆ. ಮತ್ತು ಹಂನವಣದ ಸೆಟ್ಟಿಯರು ತಾವು ಮಾರಿದ ಎಲೆಯ ಹೇರಿಗೆ ೫೦ ಎಲೆಯನ್ನು ಪ್ರಸನ್ನ ಕೇಶವದೇವರ ಪೂಜಾರ್ಥವಾಗಿ ದಾನ ಬೀಡುತ್ತಾರೆ(ಕವಿಶಾಸಂ ೭, ಪು.೫೨). ಅದೇ ಗ್ರಾಮದ ಕ್ರಿ.ಶ.೧೧ ಶತಮಾನದ ಶಾಸನದಲ್ಲಿ ಶಾಲಿಸೆಟ್ಟಿ ಎಂಬುವನು ಹರಿಹರ ದೇವರನ್ನು ಮಾಡಿಸಿದ ಎಂದು ಉಲ್ಲೇಖವಿದೆ. ವೀರಗೋಟದ ಕ್ರಿ.ಶ.೧೨೩೭ರ ಶಾಸನವು ಯೆರಡೈಯ್ಯಣ ವಾಡಿನಾಡ ಸೆಟ್ಟಗುತ್ತರಾದ ರೇಚಿಸೆಟ್ಟಿ, ಪದ್ಮಿಸೆಟ್ಟಿ, ಮಾಚಿಸೆಟ್ಟಿ ಮತ್ತು ಕರಡಿಕಲ್ಲನಾಡ ಸೆಟ್ಟಿಗುತ್ತರಾದ ಸೆಗಿಸೆಟ್ಟಿ, ಹಗರಟಿಗೆ ಸೆಟ್ಟಿ ಮುಂತಾದವರಲ್ಲಿ ಸೇರಿ ಮಹಾನಾಡಾಗಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ಬಿಡುತ್ತಾರೆ(ಕವಿಶಾಸಂ ೭, ಪು.೯೮). ಕ್ಯಾದ್ಗಿಗೇರಾ ಗ್ರಾಮದ ಕ್ರಿ.ಶ.೧೭ನೇ ಶತಮಾನದ ಶಾಸನವು ಕ್ಯಾದ್ಗಿಗೇರಿಯ ಗವುಡರು, ಕುಲಕರ್ಣಿ, ಪ್ರಜೆಗಳು ಹಾಗೂ ಸೆಟ್ಟಿಗಳು ಸೇರಿ ಬಾಲವೀರಯ, ಲಿಂಗದ ವೀರಯ ಇವರಿಗೆ ಅಕಸಾಲಿ ಕೆಂಚನ ಹೊಲದ ಪೈಕಿ ಹನ್ನೆರಡುವರೆ ಮಾನ್ಯ ಎಂದು ಗುತ್ತಿಗೆ ಬರೆಸಿ ನೀಡುತ್ತಾರೆ(ಕವಿಶಾಸಂ ೭, ಪು.೧೦೫).

ಜಲದುರ್ಗದ ೧೦೮೭ರ ಶಾಸನದಲ್ಲಿ ಕರಡಿಕಲ್ಲು ಮುನ್ನೂರರ ಬಣಜಿಗರಾದ ನಾಮಸೆಟ್ಟಿ, ಕೇಸವಸೆಟ್ಟಿ, ರೇವಿಸೆಟ್ಟಿ, ಆದಿಮಸೆಟ್ಟಿ, ಮುಪ್ಪಿಸೆಟ್ಟಿ, ಜಾಮಿಸೆಟ್ಟಿ ಮುಂತಾದವರು ಸೇರಿ ತಾವು ವ್ಯಾಪಾರ ಮಾಡುವ ವಸ್ತುಗಳಿಗೆ ಇಂತಿಷ್ಟು ತೆರಿಗೆಯೆಂಬಂತೆ ಹಲವು ರೂಪದಲ್ಲಿ ದತ್ತಿ ಬಿಡುತ್ತಾರೆ.

ನಾನಾದೇಶಿಯರು : ನಾನಾದೇಶಿಯರು ದೇವದುರ್ಗದ ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿದ್ದು, ಇದು ವಿಶಿಷ್ಟ ವರ್ತಕರ ಸಂಘವಾಗಿದೆ. ಹೆಸರು ಸೂಚಿಸುವಂತೆ ನಾನಾದೇಶಿ ಅಂದರೆ ನಾನಾ ದೇಶಗಳಿಂದ ಬಂದು ವ್ಯಾಪಾರ ಮಾಡುತ್ತಿದ್ದರು. ಅಂದರೆ ಬೇರೆ ಬೇರೆ ಸ್ಥಳಗಳಿಂದ ಸಂಚಾರ ಕೈಗೊಂಡು ವ್ಯಾಪಾರವನ್ನು ಮಾಡುವರು ಎಂದು ಅರ್ಥವಾಗುತ್ತದೆ.

ನಾನಾದೇಶಿಯರು ಹಲವು ಬಗೆಯ ಸರಕು ತೆಗೆದುಕೊಂಡು ಕರ್ನಾಟಕದ ವಿವಿಧ ಗ್ರಾಮ, ಪಟ್ಟಣಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದರು. ಜೊತೆಗೆ ಆಯಾ ಪ್ರದೇಶಗಳಲ್ಲಿ ಬೆಳೆಯುವ ವಸ್ತುಗಳನ್ನು ಖರೀದಿಸುತ್ತಿದ್ದರು. ಹೀಗೆ ವ್ಯಾಪಾರವನ್ನು ನಡೆಸುವ ಮೂಲಕ ನಾಡಿನ ತುಂಬಾ ಸಂಚರಿಸುತ್ತಿದ್ದರು. ಮುಖ್ಯವಾಗಿ ನಾನಾದೇಶಿಯರ ವ್ಯಾಪಾರ, ನಿಷ್ಠೆ, ಸಂಚಾರ, ಸಾಹಸಗಳು ಪ್ರವೃತ್ತಿಗಳು ಮೆಚ್ಚುವಂತಹವುಗಳಾಗಿವೆ. ನಾಡಿನ ವ್ಯಾಪಾರೋದ್ಯಮವನ್ನು ಶ್ರೀಮಂತಗೊಳಿಸಿದವರು. ಆರ್ಥಿಕಾಭಿವೃದ್ಧಿ, ಜೀವನ ಮಟ್ಟಗಳನ್ನು ಎತ್ತರಿಸುವಲ್ಲಿ ಹಲವು ಬಗೆಯಲ್ಲಿ ನೂರಾರು ಕೈಗಳಿಂದ ದುಡಿದ ಕೀರ್ತಿ ಇವರದಾಗಿದೆ. ನಾನಾದೇಶಿಯರು ವಿದೇಶ ವ್ಯಾಪಾರವನ್ನು ಮಾಡುತ್ತಿದ್ದರು ಎಂದು ತಿಳಿದುಬರುತ್ತದೆ. ಗಬ್ಬೂರಿನ ಕ್ರಿ.ಶ.೧೦೮೮ರ ಶಾಸನದಲ್ಲಿ ನಾನಾದೇಶಿಯರ ಉಲ್ಲೇಖವಿದೆ(ಕವಿಶಾಸಂ ೭, ಪು.೫೦). ಇವರು ಯಾವ ಮೂಲದಿಂದ ಬಂದರು ಎಂಬುದು ಶಾಸನದಲ್ಲಿಲ್ಲ. ಒಟ್ಟಿನಲ್ಲಿ ಇವರು ವ್ಯಾಪಾರ ಮಾಡುವುದಕ್ಕಾಗಿ ಬೇರೆ ಬೇರೆ ಸ್ಥಳಗಳಿಗೆ ಹೋಗುವ ವರ್ತಕರು.

ನಕರರು : ಪ್ರಾಚೀನ ಕನ್ನಡ ನಾಡಿನ ವರ್ತಕರ ಪ್ರಕಾರಗಳಲ್ಲಿ ನಕರರು ಪ್ರಮುಖರಾಗಿದ್ದಾರೆ. ನಕರರನ್ನು ಶಾಸನಗಳು ಅಂಗಡಿ ಶೆಟ್ಟಿಯರೆಂದು ಕರೆದಿರುವುದರಿಂದ ಸಂತೆ ಪಟ್ಟಣಗಳ ಸ್ಥಿರವಾದ ಅಂಗಡಿ ವ್ಯಾಪಾರಿಗಳಿವರೆಂದು ಹೇಳಬಹುದು. ನಕರರು ಸಂತೆ ಪೇಟೆಗಳಿಗೆ ಬಂದ ವಿವಿಧ ಸರಕುಗಳನ್ನು ಖರೀದಿಸಿ ಬಯಲು ಅಂಗಡಿ ಹಾಗೂ ಮಳಿಗೆಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದರು. ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಇವರ ಉಲ್ಲೇಖವನ್ನು ಕಾಣಬಹುದು.

ಗಬ್ಬೂರಿನ ಕ್ರಿ.ಶ.೧೧೯೦ರ ಶಾಸನದಲ್ಲಿ ತ್ರಿಭುವನ ಮಲ್ಲನು ಜಯಂತೀಪುರದ ನೆಲೆವೀಡಿನಲ್ಲಿದ್ದಾಗ ಅಗ್ರಹಾರ ಹಿರಿಯ ಗೂಬ್ಬೂರ ನಖರಗಳು ಊರಲ್ಲಿಯ ಬ್ರಹ್ಮಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲಿನ ತೆರಿಗೆಯನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪).

ಮುಂಮುರಿದಂಡ : ಇದು ಕರ್ನಾಟಕದ ಪ್ರಮುಖ ವರ್ತಕರ ಪ್ರಕಾರ. ಮುಮ್ಮುರಿ ಪದಕ್ಕೆ ಕಾಸಿದ ಮಳಲು ಎಂದರ್ಥ. ಈ ಅರ್ಥದ ಜಾಡನ್ನು ಹಿಡಿದು ಮುಂಮರಿ ದಂಡ ಅಂದರೆ ವ್ಯಾಪಾರಿಗಳು ಸೈನ್ಯವೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿರುವರು. ಇಲ್ಲಿ ಸೈನ್ಯವೆಂಬುದನ್ನು ಸಾಧಿಸಲು ಇವರು ಮುಂಮುರಿದಂಡ ಶಬ್ದವನ್ನು ಮುಂಮುರಿ ತಂಡವಾಗಿ ಪರಿಭಾವಿಸಿದ್ದಾರೆ. ಆದರೆ ಶಾಸನಗಳಲ್ಲಿ

ಮುಂಮುರಿ ತಂಡ ಪ್ರಯೋಗವಿಲ್ಲ. ಕಾರಣ ಇಲ್ಲಿಯ ಎರಡನೆಯ ಪದಗುಂಪು ಸಮೂಹ ಅರ್ಥದ ತಂಡವಲ್ಲ, ಕೋಲು ಅರ್ಥದ ದಂಡ, ಹೀಗಾಗಿ ಇದರ ನಿಜರೂಪ ಮುಂಮುರಿದಂಡ.

ಈ ಹಿನ್ನೆಲೆಯಲ್ಲಿ ಮುಂಮುರಿದಂಡವೆಂದರೆ ಮೂರು ಮುರಿಗೆಯ ದಂಡ (ಕೋಲು) ಎಂದರ್ಥವಾಗುವುದು. ಈ ವರ್ತಕರ ಪೂರ್ವಜರಲ್ಲಿ ಯಾರೋ ಒಬ್ಬರು ಇಂಥ ದಂಡವನ್ನು ಉಪಯೋಗಿಸಿರಬೇಕು. ಕಾರಣ ಮುಂದೆ ಈ ವಂಶದಲ್ಲಿ ಬಂದವರು ಕೋಲು ಹಿಡಿಯಲಿ ಬಿಡಲಿ ಮುಂಮುರಿದಂಡ, ಮುಂಮುರಿದಂಡರು ಎಂದು ಅಭಿದಾನ ಹೊಂದುವಂತಾಯಿತು. ಹೀಗಾಗಿ ಮುಂಮುರಿದಂಡ ವ್ಯಾಪಾರಿಗಳ ಸೈನ್ಯದಲ್ಲಿ ವರ್ತಕರ ಪ್ರಕಾರ. "ಮುಂಮುರಿದಂಡಗಳು ಅಡಿಕೆ, ಅರಿಷಿಣ, ಮೆಣಸು ಮೊದಲಾಗಿ ಸಕಳ ಧ್ಯಾನ್ಯಕ್ಕಂ ಕೊಂಡಲ್ಲಿಯುಂ ಕೊಟ್ಟೆಲ್ಲಿಯಂ ಮುಂಮುರಿದಣ್ಣಂಗಳು ಭಣ್ಣವೆಂ ತೂಗಿಸಿ ಕೊಂಡಲ್ಲಿ" ಎಂಬ ಉಲ್ಲೇಖಗಳಿಂದ ಇವರು ಸರಕು ಹೇರಿಕೊಂಡು ಸಂತೆ-ಪೇಟೆಗಳಿಗೆ ಹೋಗಿ ಮಾರಾಟ ಮಾಡುವ ವರ್ತಕರೆಂದು ಹೇಳಬಹುದು. ಗಬ್ಬೂರಿನ ಕ್ರಿ.ಶ.೧೦೮೮ರ ಶಾಸನದಲ್ಲಿ ಹಿರಿಯ ಗೂಬ್ಬೂರಿನ ಮುಂಮುರಿದಂಡ ಸಾಸಿರ್ವರು ವ್ಯಾಪಾರಿಗಳು ಮಹಾಲಿಂಗ ಮೇಳೇಶ್ವರ ದೇವರಿಗೆ ಭತ್ತವನ್ನು ದಾನ ಮಾಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೫೦). ಅಂದರೆ ಮುಂಮುರಿ(ದಂಡ) ಸೈನ್ಯ ಒಂದು ಸಾವಿರ ಎಂದು ಅರ್ಥ ಕೊಡುತ್ತದೆ.

೨. ವೃತ್ತಿಸಂಘಗಳು ಅಥವಾ ಶ್ರೇಣಿಗಳು

ಪ್ರಾಚೀನ ಶಾಸನಗಳಲ್ಲಿ ಈ ಸಂಘಗಳನ್ನು ಶ್ರೇಣಿ ಎಂದು ಹೆಚ್ಚಾಗಿ ಪ್ರಯೋಗಿಸಲಾಗಿದೆ. ಶ್ರೇಣಿ ಮೊದಮೊದಲು ಯಾವುದೇ ವರ್ಣದ ಕಸುಬುದಾರ ಅಥವಾ ಸಣ್ಣ ವ್ಯಾಪಾರಿಗಳ ಸಂಘಟನೆಯನ್ನು ಸೂಚಿಸುತ್ತಿತ್ತು. ನಂತರದ ಕೃತಿಗಳಲ್ಲಿ ಉಲ್ಲೇಖಗೊಂಡ ಅಷ್ಟಾದಶ ಶ್ರೇಣಿಗಳು ಜಾತಿಯ ಪರ್ಯಾಯ ಪದಗಳಂತೆ ಬಳಕೆಯಾಗತೊಡಗಿದವು. ಆದರೂ ಕೆಲವು ಕಡೆ ಇವುಗಳನ್ನು ಕೊತ್ತಳೆ, ಒಕ್ಕಲು, ಸಮಯ, ಶ್ರೇಣಿ ಮತ್ತು ಸಂಖ್ಯೆಗಳಿಂದಲೂ ಸೂಚಿಸಲಾಗಿದೆ. ಈ ಸಂಘಗಳನ್ನು ಉತ್ಪಾದಕರ ಸಂಘ, ವಿನಿಮಯ ಸಂಘ, ಉತ್ಪಾದಕ ವಿನಿಮಯ ಸಂಘ ಹಾಗೂ ಇತರ ಸಂಘಗಳೆಂದು ವರ್ಗೀಕರಿಸಲಾಗಿದೆ. ಗಬ್ಬೂರಿನ ಕ್ರಿ.ಶ.೧೧೫೪ರ ಶಾಸನದಲ್ಲಿ ಅಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಕೇಶವ ದೇವರಿಗೆ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೫೩).

ಅ. ಮೇಳಿಸಾಸಿರ್ವರು : ಮೇಳಿಸಾಸಿರ್ವರು ಅಥವಾ ಮೇಲ್ಸಾಸಿರ್ಬರು ಅಂದರೆ ಇದು ರೈತರ ಸಂಘವಾಗಿದ್ದು, ಇವರ ಸಂಖ್ಯೆ ಒಂದು ೧೦೦೦ ಆಗಿದೆ. ಇವರು ಹೊಲಗಳಲ್ಲಿ ಎರಗುವುದು, ಕುಂಟೆ ಹೊಡೆಯುವುದು, ಬಿತ್ತುವುದು ಇಲ್ಲವೆ ತತ್ಸಮ ಕೆಲಸಗಳನ್ನು ಮಾಡುವ ರೈತರ ಸಂಘ. ಇವರನ್ನು ಶಾಸನಗಳಲ್ಲಿ ಅನೇಕ ವಿಶೇಷಣಗಳಿಂದ ಹೊಗಳಲಾಗಿದೆ. ಸಕಳ ಜೀವರಕ್ಷಕರು, ಪರೋಪಕಾರಾರ್ಥ

ಶರೀರರು, ಚಕ್ರವರ್ತಿಯ ರಾಜ್ಯವನ್ನು ಉದ್ಧರಿಸುವವರು, ಶ್ರೀಮಂತರು, ವಿನಯರು, ಸತ್ಯವಂತರು, ದಾನಿಗಳು, ಧರ್ಮಕಾರ್ಯ ಧುರಂಧರರು ಮುಂತಾಗಿ ವರ್ಣಿಸಲಾಗಿದೆ(ಕವಿಶಾಸಂ ೭, ಪು.೫೨).

ಗಬ್ಬೂರಿನ ಕ್ರಿ.ಶ.೧೦೮೫ರ ಶಾಸನದಲ್ಲಿ ಇವರನ್ನು ದೇವರ ಒಕ್ಕಲುಗಳೆಂದು ಕರೆಯಲಾಗಿದೆ. ಇವರು ಗೂಬ್ಬೂರಿನಲ್ಲಿ ಮೇಳೇಶ್ವರ ದೇವಾಲಯವನ್ನು ಕಟ್ಟಿಸಿ ಆ ದೇವರ ಪೂಜೆ ಹಾಗೂ ಪರಿಪಾಲನೆ ಕೆಲಸಗಳಿಗಾಗಿ ಗೂಬ್ಬೂರು ಅದಕ್ಕೆ ಸೇರಿದ ಹಳ್ಳಿಗಳ ಜನರು ಸೇರಿ ನೊಗಕಟ್ಟಿ ಉತ್ತು ಬಿತ್ತಿ ಬೆಳೆದ ಬೆಳೆಯಲ್ಲಿ ಸೂಡು ಜೋಳವನ್ನು ಮತ್ತು ಒಂದೊಂದು ಕುಂಟೆಗೆ ಒಂದು ಹಣದ ಲೆಕ್ಕದಲ್ಲಿ ನೀಡಬೇಕೆಂದು ತೀರ್ಮಾನಿಸುತ್ತಾರೆ(ಕವಿಶಾಸಂ ೭, ಪು.೪೭). ಚಂದನಕೇರಿಯ ಕ್ರಿ.ಶ.೧೨ನೆಯ ಶತಮಾನ ಶಾಸನದಲ್ಲಿ ಮಲ್ಲಿಕಾರ್ಜುನ ದೇವರಿಗೆ ಜೇಡರೊಕ್ಕಲು ದಾನ ಮಾಡಿದ ಉಲ್ಲೇಖವಿದೆ. ಜೇಡರ ಜಾತಿಯ ಒಕ್ಕಲುಗಳು ಇದರಲ್ಲಿ ಉಲ್ಲೇಖವಾಗಿದೆ. ಗಬ್ಬೂರಿನ ೧೦೮೮ರ ಮೇಳಿಸಾಸಿರ್ಬ್ಬರು ಮಹಾಲಿಂಗ ಮೇಳೇಶ್ವರ ದೇವರಿಗೆ ದಾನ ಬಿಟ್ಟ ಉಲ್ಲೇಖವಿದೆ(ಕವಿಶಾಸಂ ೭, ಪು.೫೦).

ಆ. ಮಾಲಗಾರ ಅರವತ್ತೊಕ್ಕಲು : ಮಾಲೆಯನ್ನು ಮಾಡುವವರು ಅಥವಾ ಹಾರವನ್ನು ಮಾಡುವವರು. ಅಂದರೆ ಹೂಗಳಿಂದ ಹೂವಿನ ಹಾರ, ಮಾಲೆಯನ್ನು ಮಾಡಿ ಮಾರುವವರು. ಹೂಗಳಿಂದ ಬಾಸಿಂಗ, ದಂಡೆ, ಮಾಲೆ, ಮಾಡಿ ಮಾರುವವರ ಸಂಘ. ಇವರ ಸಂಖ್ಯೆ ೬೦ ಆಗಿರಬೇಕು. ಆದ್ದರಿಂದ ಶಾಸನಗಳಲ್ಲಿ ಇವರನ್ನು ಮಾಲೆಗಾರ ಅರವತ್ತೊಕ್ಕಲು ಎಂದು ಉಲ್ಲೇಖಿಸಲಾಗಿದೆ.

ಗಬ್ಬೂರಿನ ಕ್ರಿ.ಶ.೧೧೫೪ರ ಶಾಸನದಲ್ಲಿ ಮಾಲೆಗಾರರು ತ್ರಿಪುರಾಂತಕ ಮತ್ತು ಕೇಶವದೇವರಿಗೆ ಹೂದೋಟವನ್ನು ದಾನ ನೀಡುತ್ತಾರೆ(ಕವಿಶಾಸಂ ೭, ಪು.೫೨). ಅದೇ ಕ್ರಿ.ಶ.೧೧೪೪ರ ಶಾಸನದಲ್ಲಿ ಕನಕಗಿರಿಯ ನಾಗಭೂಷಣ ದೇವರಿಗೆ ಮಾಲೆಗಾರ ಅರವತ್ತೊಕ್ಕಲು ಭತ್ತ ನೀಡಬೇಕೆಂದಿದೆ(ಕವಿಶಾಸಂ ೭, ಪು.೭೧). ಚಂದನಕೇರಿಯ ಕ್ರಿ.ಸ.೧೨ನೇ ಶತಮಾನದ ಶಾಸನದಲ್ಲಿ ಮಂಡಳೇಶ್ವರ ಹೆಮ್ಮಡಿ ದೇವರಸನು ತಾನು ಪ್ರತಿಷ್ಠೆ ಮಾಡಿದ ಹೆಮ್ಮೇಶ್ವರ ದೇವರಿಗೆ ಮಾಲೆಗಾರರು ದಾನ ನೀಡುತ್ತಾರೆ(ಕವಿಶಾಸಂ ೭, ಪು.೧೦೮).

ಇ. ಬಿಲ್ಲರು : ವರ್ತಕರು ಬೆಲೆಯುಳ್ಳ ಸರಕುಗಳನ್ನು ಸಾಗಿಸಿಕೊಂಡು ಊರಿಂದೂರಿಗೆ ಹೋಗುವಾಗ ಮಾರಿದ ಸರಕಿನಿಂದ ಬಂದ ಹಣವನ್ನು ಜೊತೆಯಲ್ಲಿ ತರುವಾಗ ದಾರಿಗಳ್ಳರ ದಾಳಿಗೆ ತುತ್ತಾಗುತ್ತಿದ್ದರು. ಈ ದಾರಿಗಳ್ಳರ ಉಪಟಳದಿಂದ ಸರಕು, ಹಣ, ಪ್ರಾಣ ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ವರ್ತಕರು ಯೋಧಪಡೆಯನ್ನು ಹೊಂದಬೇಕಾಗುತ್ತಿತ್ತು. ಈ ಯೋಧಪಡೆಯನ್ನು 'ಬಿಲ್ಲ ಮುನ್ನೂರ್ವರು' ಎಂಬ ಹೆಸರಿನಿಂದ ಕರೆಯಲಾಗಿದೆ. ಈ ಯೋಧರ ಹೆಸರು ಬಿಲ್ಲರು. ಇವರ ಸಂಘದ ಸಂಖ್ಯೆ ೩೦೦ ಆಗಿರಬೇಕು. ಆದ್ದರಿಂದ ಈ ಹೆಸರು ಬಂದಿದೆ.

ಗಬ್ಬೂರಿನ ಕ್ರಿ.ಶ.೧೧೪೪ರ ಶಾಸನದಲ್ಲಿ ನಾಗಭೂಷಣ ದೇವರಿಗೆ ಬಿಲ್ಲ ಮುನ್ನೂರುವರು ಬಾಡುಕಾಯಿ ಮಾರಿದ ಹೆಡಗೆಗೆ ಅರವಾನ ಭತ್ತ ನೀಡಬೇಕೆಂದಿದೆ. ಚಂದನಕೇರಿಯ ಕ್ರಿ.ಶ.೧೨ನೇ ಶತಮಾನದ ಶಾಸನದಲ್ಲಿ ಹೆಮ್ಮೇಶ್ವರ ಮಲ್ಲಿಕಾರ್ಜುನ ದೇವರಿಗೆ ಬಿಲ ಮುನ್ನೂರ್ವರು ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೧೦೮).

ಈ. ೫೦೦ ಅಯ್ಯವೊಳೆ ಸ್ವಾಮಿಗಳು : ಐಹೊಳೆಯಲ್ಲಿ ೫೦೦ ಜನ ಮಹಾಜನರಿದ್ದರು. ಈ ೫೦೦ ಮಹಾಜನರೇ ಅಯ್ಯಾವಳೆ ೫೦೦ ಸ್ವಾಮಿಗಳೆನಿಸಿದರು. ಅಯ್ಯವೊಳೆಯಲ್ಲಿ ೫೦೦ ಮಹಾಜನರು ೫೦೦ ಸದಸ್ಯರ ವರ್ತಕರ ಸಂಘ ಇದ್ದುದನ್ನು ಏಕಕಾಲಕ್ಕೆ ಶಾಸನ ಹೇಳುತ್ತವೆ. ದೇವದುರ್ಗ ತಾಲ್ಲೂಕಿನ ಅನೇಕ ಶಾಸನಗಳಲ್ಲಿ ಇವರ ಉಲ್ಲೇಖವಾಗಿದೆ.

ಗಬ್ಬೂರ ಕ್ರಿ.ಶ.೧೧೫೪ರ ಶಾಸನದಲ್ಲಿ ಗಾಣದ ಕಾಡಿಸೆಟ್ಟಿ ಗಾಣದ ದಾಸಿಮಯ್ಯ, ಅಯ್ಯವೊಳೆ ಆಯ್ನೂವ್ವರು ಸ್ವಾಮಿಗಳು ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೫೨). ಅದೇ ಗ್ರಾಮದ ಕ್ರಿ.ಶ.೧೦೮೮ರ ಶಾಸನದಲ್ಲಿ ಅಯ್ಯವೊಳೆ ಅಯಿನೂರ್ವ್ವರು ಮಹಾಲಿಂಗ ಮೇಳೇಶ್ವರ ದೇವರಿಗೆ ಭತ್ತವನ್ನು ದಾನ ಮಾಡಿದ ವಿಷಯವಿದೆ. ಅದೇ ಗ್ರಾಮದ ತ್ರೈಳೋಕ್ಯಮಲ್ಲನ ಆಳ್ವಿಕೆಯಲ್ಲಿ ಅಯ್ಯವೊಳೆ ಐನೂರ್ವ್ವರು ಉಲ್ಲೇಖವಿದೆ. ವೀರಗೋಟ ಗ್ರಾಮದ ೧೨೨೩ರ ಶಾಸನದಲ್ಲಿ ಅಯ್ಯವೊಳೆ ಅಯಿನೂರ್ವ್ವರು ಉಲ್ಲೇಖವಿದೆ(ಕವಿಶಾಸಂ ೭, ಪು.೫೦).

ಉ. ಕಮ್ಮಟಕಾರರು : ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಕಮ್ಮಟಗಳೆಂದು, ಅಚ್ಚಿನ ಟಂಕಸಾಲೆಗಳೆಂದೂ ಕರೆಯುತ್ತಿದ್ದರು. ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗಳನ್ನು ರಾಜನು ಕಮ್ಮಟಗಳಲ್ಲಿ ನೇಮಿಸುತ್ತಿದ್ದನು. ಈ ಅಕ್ಕಸಾಲಿಗರು ಅಥವಾ ಕಮ್ಮಟದೋಜಗಳು ತಾವೇ ಪ್ರತ್ಯೇಕವಾಗಿ ಶ್ರೇಣಿಗಳನ್ನು ಸ್ಥಾಪಿಸಿಕೊಂಡಿದ್ದರು. ದೇವದುರ್ಗ ಶಾಸನಗಳಲ್ಲಿ ಈ ಕಮ್ಮಟಗಾರರು ಹಾಗೂ ಕಮ್ಮಟ ಅಧಿಕಾರಿಗಳ ಉಲ್ಲೇಖವಿದೆ.

ಗಬ್ಬೂರಿನ ಕ್ರಿ.ಶ.೧೧೧೯ರ ಶಾಸನದಲ್ಲಿ ತ್ರಿಭುವನ ಮಲ್ಲನು ಜಯಂತೀಪುರ ನೆಲೆವೀಡಿನಲ್ಲಿದ್ದಾಗ ಗೊಬ್ಬರ ಕಮ್ಮಟದ ಅಧಿಕಾರಿಗಳು, ಕಮ್ಮಟಕಾರರು ಬ್ರಹ್ಮಜಿನಾಲಯಕ್ಕೆ ತಾವು ಮಾರಿದ ವಸ್ತು ಮೇಲಿನ ತೆರಿಗೆಯನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪). ಕ್ಯಾದ್ಗಿಗೇರಾ ಗ್ರಾಮದ ಕ್ರಿ.ಶ.೧೮ನೇ ಶತಮಾನದ ಶಾಸನದಲ್ಲಿ ಕೇದಿಗೆರೆಯ ಪ್ರಜೆಗಳು ಸೆಟ್ಟಿಗಳು ಸೇರಿ ಅಕಸಾಲಿ ಕೆಂಚನಹೊಲದ ಪೈಕಿ ಹನ್ನೆರಡುವರೆ ಮಾನ್ಯ ಎಂದು ಗುತ್ತಿಗೆ ಬರೆಸಿ ನೀಡುತ್ತಾರೆ. ಗೂಗಲ್ಲು ಗ್ರಾಮದ ಕ್ರಿ.ಶ.೧೮೨೫ರ ಶಾಸನದಲ್ಲಿ ಅಲ್ಲಮಪ್ರಭುಸ್ವಾಮಿ ದೇವರ ಗಂಟೆಯನ್ನು ಗಬ್ಬೂರ ಕಂಚಗಾರ ಅಮ್ಮ ಪ್ರಭುಸ್ವಾಮಿ ಮಾಡಿಸಿದಂತೆ ಹೇಳಲಾಗಿದೆ(ಕವಿಶಾಸಂ ೭, ಪು.೬೩).

ಊ. ಪನ್ನಾದವರು : ಪ್ರಮುಖ ವರ್ತಕರ ಸಂಘಗಳಲ್ಲಿ ಪನ್ನಾದವರ ವ್ಯಾಪಾರ ಸಂಘವು ಒಂದಾಗಿದೆ. ಇವರು ವೀಳ್ಯದೆಲೆಯನ್ನು ಮಾರುವ ವ್ಯಾಪಾರ ಸಂಘದವರು. ಇವರು ಶಾಸನಗಳಲ್ಲಿ ಉಲ್ಲೇಖಗೊಂಡಿದ್ದಾರೆ.

ಗಬ್ಬೂರಿನ ಕ್ರಿ.ಶ.೧೧೨೬ರ ತ್ರಿಭುವನಮಲ್ಲನ ಆಳ್ವಿಕೆಯ ಕಾಲದಲ್ಲಿ ಮಂಚಣವ್ವೇದಿಗೆ ಪನ್ನಾಯದವರು ತಿಂಗಳಿಗೆ ೫ ಪಣವನ್ನು, ಮಹಾಜನರು ಕೇಶವದೇವರ ಪ್ರತಿಷ್ಠೆಯಂದು ೨ ಮತ್ತರು ಮತ್ತು ೨೨೫ ಕಂಮ್ಮ ಭೂಮಿಯನ್ನು ಬಿಡುತ್ತಾರೆ(ಕವಿಶಾಸಂ ೬, ಪು.೬೬). ಅದೇ ಕ್ರಿ.ಶ.೧೧೬೧ರ ಶಾಸನದಲ್ಲಿ ಹನವಣದ ಸೆಟ್ಟಿಯರು ತಾವು ಮಾರಿದ ಎಲೆಯ ಹೇರಿಗೆ ೫೦ ಎಲೆಯನ್ನು ಪ್ರಸನ್ನ ಕೇಶವ ದೇವರಿಗೆ ಬಿಡುತ್ತಾರೆ. ಚಂದನಕೇರಿಯ ಕ್ರಿ.ಶ.೧೨ನೇ ಶತಮಾನದಲ್ಲಿ ಬೆತ್ತ ಮಾರಿದಲ್ಲಿ ೨ ಎಲೆ, ಹರಗೆ ಎಲೆ ೧೦೦ ಹೆರಿಗೆ ಎಲೆ ೫೦ ದಾನ ನೀಡುತ್ತಾರೆ(ಕವಿಶಾಸಂ ೬, ಪು.೫೯).

ಋ. ಬಣಜಿಗರು ೫೦೦ : ಇವರು ವ್ಯವಹಾರವನ್ನು ಮಾಡುವ ವರ್ತಕರು ಆಗಿದ್ದಾರೆ. ಇವರ ಸಂಖ್ಯೆ ೫೦೦ ಆಗಿದೆ. ಚಂದನಕೇರಿಯ ಕ್ರಿ.ಶ.೧೧ನೇ ಶತಮಾನ ಬಣಜಿಗರ ೫೦೦ ಇವರು ದಾನ ಬಿಟ್ಟ ಉಲ್ಲೇಖವಿದೆ(ಕವಿಶಾಸಂ ೬, ಪು.೧೦೬).

ನಾಣ್ಯಗಳು

ಆರ್ಥಿಕ ರಂಗದಲ್ಲಿ ಬಹುಮುಖ್ಯ ಪಾತ್ರ ವಹಿಸುವ ಮತ್ತೊಂದು ಅಂಶವೇ ಈ ನಾಣ್ಯಗಳು. ಅರಸರ ಆಳ್ವಿಕೆಯಲ್ಲಿ ಅನೇಕ ನಾಣ್ಯಗಳು ಚಲಾವಣೆಯಲ್ಲಿದ್ದವು. ಅವರದೇ ಆದ ಹೊಸ ಹೊಸ ನಾಣ್ಯಗಳನ್ನು ಚಲಾವಣೆಯಲ್ಲಿ ತಂದು ದೇಶದ ಸಂಪತ್ತನ್ನು ಹಾಗೂ ನೆಮ್ಮದಿಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿದ್ದರು. ಇವರು ನಾಣ್ಯಗಳನ್ನು ಟಂಕಿಸುವುದಕ್ಕಾಗಿ ಅನೇಕ ಕಮ್ಮಟಗಳನ್ನು ಮತ್ತು ಟಂಕಸಾಲೆಗಳನ್ನು ನಿರ್ಮಿಸಿ ಅನೇಕ ಕಮ್ಮಟಕಾರರನ್ನು ನೇಮಿಸುತ್ತಿದ್ದರು. ಶಾಸನಗಳ ಹಣದ ಉಲ್ಲೇಖವಾಗಿರುವುದನ್ನು ನಾವು ಕಾಣಬಹುದಾಗಿದೆ.

ಗಬ್ಬೂರಿನ ಕ್ರಿ.ಶ.೧೦೮೫ರ ಶಾಸನದಲ್ಲಿ ದೇವರ ಒಕ್ಕಲುಗಳು ಹಳ್ಳಿಗಳ ಜನರು ಸೇರಿ ಮೇಳೇಶ್ವರ ದೇವರಿಗೆ ವರುಷಪ್ರತಿ ಬಳಸುವ ಒಂದೊಂದು ಕುಂಟೆಗೆ ಒಂದು ಹಣದ ಲೆಕ್ಕದಲ್ಲಿ ನೀಡಬೇಕೆಂದು ತೀರ್ಮಾನಿಸುತ್ತಾರೆ. ಅದೇ ಗ್ರಾಮದ ಕ್ರಿ.ಶ.೧೧೪೮ರ ಶಾಸನದಲ್ಲಿ ಮಲ್ಲಿಕಾರ್ಜುನ ದೇವರಿಗೆ ೧ ವೀಸವನ್ನು ೫೦೦ ಜನ ಜೇಡಗೊತ್ತಳಿಗಳು ಆರು ವೀಸವನ್ನು ಬಿಡುತ್ತಾರೆ. ಜೇಡೇಶ್ವರ ದೇವರಿಗೆ ಸೂಳೆ ಹೇಮವ್ವ ಒಂದು ಹಣ ನೀಡುತ್ತಾಳೆ(ಕವಿಶಾಸಂ ೬, ಪು.೮೧).

ಭೂಮಾಪನ : ಪ್ರಾಚೀನ ಕರ್ನಾಟಕದಲ್ಲಿ ಬಳಸುತ್ತಿದ್ದ ಅಳತೆ ಮತ್ತು ತೂಕಗಳನ್ನು ದೇವದುರ್ಗ ಪ್ರದೇಶದಲ್ಲಿಯೂ ಸಹ ಪ್ರಚಲಿತದಲ್ಲಿತ್ತೆಂದು ಹೇಳಬಹುದು. ಹೊಲಗಳನ್ನು ಅಳೆಯಲು ಬಳಸಿರಬಹುದಾದಂತ ವಿಧಾನಗಳನ್ನು ಶಾಸನಗಳಲ್ಲಿ ಉಲ್ಲೇಖಿಸಿದ್ದಾರೆ. ಅಂದರೆ ಭೂಮಿಯನ್ನು ದಾನ

ಮಾಡುವಾಗ ಪ್ರಾಚೀನ ಕರ್ನಾಟಕದಲ್ಲಿ ಮತ್ತರಿನ ಲೆಕ್ಕದಲ್ಲಿ ನೀಡುತ್ತಾರೆ. ಇದಕ್ಕೆ ಕಡಿಮೆ ಅಳತೆಯೆಂದರೆ ಕಮ್ಮ ಎಂಬುದು. ೯೦೦ ಕಮ್ಮ(ಕಂಬ)ಗಳಿಗೆ ಒಂದು ಮತ್ತರು ಅಳತೆ, ನಿವೇಶಗಳನ್ನು ದಾನ ಮಾಡುವಾಗ ಕೈ ಅಳತೆಯಲ್ಲಿ ನೀಡಿರುತ್ತಾರೆ. ಇಲ್ಲಿ ಕೈ ಎಂದರೆ ಹಸ್ತ ಎನ್ನುವುದಕ್ಕಿಂತ ಮಾರು ಎಂದು ಅರ್ಥೈಸುವುದು ಸೂಕ್ತ. ಏಕೆಂದರೆ ೧೦ ಕೈ X ೧೫ಕೈ ಅಗಲವೆಂದಾಗ ಮೊಳದ ಲೆಕ್ಕದಲ್ಲಿ ನೀಡಿದಾಗಲೂ ಅದು ಚಿಕ್ಕದೇ ಆಗಿರುತ್ತದೆ. ಇಂತಹ ಕಡೆ ಎರಡೂ ಕೈಗಳನ್ನು ಉದ್ದ ಮಾಡಿದಾಗ ಬರುವ ಅಳತೆಯೆಂದು ಅರ್ಥೈಸಬೇಕಾಗುವುದು. ಅಳತೆಗೋಲುಗಳ ಸಹಾಯದಿಂದ ಅಳೆಯುತ್ತಿದ್ದ ವಿಧಾನ ವ್ಯವಹಾರ ಗಣಿತ ಮತ್ತು ಕ್ಷೇತ್ರ ಗಣಿತಗಳ ಕರ್ತೃವಾದ ರಾಜಾದಿತ್ಯ ಹೊಲಗಳನ್ನಳೆಯಲು ಬಳಸುತ್ತಿದ್ದರೆಂದು ಹೇಳಲಾಗಿದೆ.

ಇಂದಿಗೂ ಭೂಮಾಪನಕ್ಕಾಗಿ ಸರಪಳಿಯನ್ನು ಬಳಸುತ್ತವೆ. ಒಂದು ಸರಪಳಿ ಎಂದರೆ ಅನೇಕ ಲಿಂಕ್‌ಗಳನ್ನು ಹೊಂದಿರುತ್ತದೆ. ಹಾಗೆಯೇ ಕರ್ನಾಟಕದಲ್ಲಿ ಪ್ರಮುಖವಾದ ಊರುಗಳಲ್ಲಿ ಆ ಊರಿನ ಹೆಸರಿನಲ್ಲಿಯೋ, ವ್ಯಕ್ತಿಯ ಹೆಸರಿನಲ್ಲಿಯೋ ಅಥವಾ ದೇವರ ಹೆಸರಿನಲ್ಲಿಯೋ ಒಂದು ಅಳತಗೋಲನ್ನು ಇಟ್ಟಿರುತ್ತಿದ್ದರು. ಈ ಕೋಲನ್ನು ಗಳೆ, ಗಡಿಂಬ, ಗಡಿಬ ಮುಂತಾಗಿ ಕರೆಯಲಾಗಿದೆ. ಎಲ್ಲಾ ಕೋಲುಗಳೂ ಒಂದೇ ಅಳತೆಯಲ್ಲಿರಲಿಲ್ಲ. ಕೆಲವು ಕಡೆ ಗಳೆಗೆ ಯಾವ ಹೆಸರೂ ಇಲ್ಲದೆ ೩೬ ಗೇಣಗಳೆ, ಹಿರಿಯ ಕೋಲು ಎಂದು ಹೇಳಲಾಗಿದೆ. ಕೆಲವೊಮ್ಮೆ ಒಂದೇ ಊರಿನಲ್ಲಿ ಮೂರು ಬಗೆಯ ಕೋಲುಗಳು ಬಳಕೆಯಲ್ಲಿದ್ದವು. ಬಹುಮನಿಗಳ ಅಡಳಿತದಲ್ಲಿ ಭೂಮಿಯನ್ನು ಚದರದ ಲೆಕ್ಕದಲ್ಲಿ ಹೇಳುತ್ತಿದ್ದರು. ದೇವದುರ್ಗ ಶಾಸನಗಳಲ್ಲಿ ಉಲ್ಲೇಖವಾಗಿರುವ ಅಳತೆಯ ಹೆಸರುಗಳು ಈ ಕೆಳಗಿನಂತಿವೆ.

೧.	ಗಬ್ಬೂರು	ಕ್ರಿ.ಶ.೧೧೧೮	ಮಾಣಿಕೇಶ್ವರ ಕೋಲಲ್ಲಿ ೫ ಮತ್ತರು
೨.	,,	ಕ್ರಿ.ಶ.೧೦೮೫	ಒಂದೊಂದು ಕುಂಟಿಗೆ ಒಂದು ಹಣ ಲೆಕ್ಕದಲ್ಲಿ
೩.	,,	ಕ್ರಿ.ಶ.೧೧೪೯	ಮಾಣಿಕೇಶ್ವರದ ಮೂರು ಮತ್ತರು
೪.	,,	ಕ್ರಿ.ಶ.೧೧೭೧	ಮಾಣಿಕೇಶ್ವರದ ಕೋಲಲ್ಲಿ ನಾಲ್ಕು ಮತ್ತರು
೫.	,,	ಕ್ರಿ.ಶ.೧೧೪೧	ಮಾಣಿಕೇಶ್ವರ ಕೋಲಲ್ಲಿ ನಾಲ್ಕು ಮತ್ತರು
೬.	,,	ಕ್ರಿ.ಶ.೧೧೯೫	೧೧೩ ಮತ್ತರು ಮತ್ತು ಹತ್ತಿ ಮತ್ತರು ಮಾಣಿಕೇಶ್ವರ ಕೊಲಲ್ಲಿ
೭.	,,	ಕ್ರಿ.ಶ.೧೧೪೪	ಹೆಡಗೆಗೆ ಬಮ್ಮಾನ, ಹೆಡಗೆಗೆ ಅರವಾನ
೮.	,,	ಕ್ರಿ.ಶ.೧೧೨೬	ಮಾಣಿಕೇಶ್ವರದ ೧೦ ಮತ್ತರು ಮಾಣಿಕೇಶ್ವರದ ೨ ಮತ್ತರು ೨೨೫ ಕಂಮ್ಮ
೯.	,,	೧೦೮೪	ಮೂರುವರೆ ಮತ್ತರು ನೆಲ

೧೦. ಹಿರೇರಾಯಕುಂಪಿ	ಕ್ರಿ.ಶ.೧೧೩೦	ಧರಣಿದೇವನ ಕೊಲಿನಲ್ಲಿ ೪೦ ಮತ್ತರು
೧೧. ನಿಲವಂಜಿ	ಕ್ರಿ.ಶ.೧೧೭೭	೧. ಕುರುವೆಂದೆ ಗಡಿಂಬದಲ್ಲಿ ೧೮ ಮತ್ತರು. ೨. ಕುರುಕುಂದೆ ಕೋಲಲ್ಲಿ ೧೨ ಮತ್ತರು, ೩. ಕಂಮ್ಮ ೪೫೦
೧೨. ಗಣಚಾಲಿ	ಕ್ರಿ.ಶ.೧೦೨೩	೨೦ ಮತ್ತರು
೧೩. ಚಂದನಕೇರಿ	ಕ್ರಿ.ಶ.೧೨ನೇ ಶ	೪೮ ಗೇಣ ಕೊಲಲ್ಲಿ ಅಳೆದು ಒಂದೂವರೆ ಮತ್ತರು (ಕವಿಶಾಸಂ ೭)

ತೆರಿಗೆ ಪದ್ಧತಿ ಅಥವಾ ಕಂದಾಯ ಪದ್ಧತಿ

ಒಂದು ದೇಶದ ಅಭಿವೃದ್ಧಿ ಮತ್ತು ಸುಭದ್ರತೆಗಳು ಅದರ ಹಣಕಾಸಿನ ವ್ಯವಸ್ಥೆಯನ್ನವಲಂಬಿಸಿರುತ್ತದೆ. ಹಣಕಾಸು ಅಥವಾ ಕಂದಾಯವು ರಾಜ್ಯದ ಬೊಕ್ಕಸಕ್ಕೆ ಆದಾಯವನ್ನು ತರುವ ಮೂಲ ಸಾಧನವಾಗಿತ್ತು. ಅಂತೆಯೇ ರಾಜ್ಯದ ಸಪ್ತಾಂಗಗಳಲ್ಲಿ ಕೋಶವು ಒಂದಾಗಿದೆ.

ರಾಜ್ಯಕ್ಕೆ ಬರುವ ಆದಾಯದ ಬಹುಪಾಲನ್ನು ತೆರಿಗೆಯ ರೂಪದಲ್ಲಿ ವಸೂಲಿ ಮಾಡಿದುದು ಕಂಡುಬರುತ್ತದೆ. ಹಿಂದಿನ ಕಾಲದಲ್ಲಿ ರಾಜನು ನಾನಾ ರೀತಿಯ ತೆರಿಗೆಗಳನ್ನು ಜನರಿಂದ ವಸೂಲಿ ಮಾಡಿ ಅದನ್ನು ಸಾರ್ವಜನಿಕ ಕಾರ್ಯಗಳಿಗಾಗಿ ವೆಚ್ಚ ಮಾಡುತ್ತಿದ್ದರು.

ಮುಖ್ಯವಾಗಿ ತೆರಿಗೆಗಳನ್ನು ಆಮದು ಮತ್ತು ರಫ್ತುಗಳ ಮೇಲಿನ ತೆರಿಗೆ, ವ್ಯಾಪಾರ ಮತ್ತು ಗೃಹಕೈಗಾರಿಕೆಗಳ ಮೇಲಿನ ತೆರಿಗೆ, ಸಾಮಾಜಿಕ, ಧಾರ್ಮಿಕ ತೆರಿಗೆ ಇವುಗಳಲ್ಲದೆ ಗಣೆ, ಕಾಡು, ಮದ್ಯಗಳ ಮೇಲೆ ತೆರಿಗೆಗಳನ್ನು ಹಾಕಲಾಗುತ್ತಿತ್ತು.

ಕೆಲವು ಸಂದರ್ಭಗಳಲ್ಲಿ ವ್ಯಾಪಾರಿಗಳು ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳಲು ಬೇರೊಂದು ಮಾರ್ಗವನ್ನು ಹಿಡಿದು ಹೋಗುತ್ತಿದ್ದರು. ಅಂತವರನ್ನು ಅಧಿಕಾರಿಗಳು ಹಿಡಿದು ದಂಡವನ್ನು ವಿಧಿಸುತ್ತಿದ್ದರೆಂದು ತೋರುತ್ತದೆ. ಕೆಲವರು ಇದೇ ಸಮಯವನ್ನು ಉಪಯೋಗಿಸಿಕೊಂಡು ಸುಂಕವನ್ನು ಕೊಡುವಾಗ ಕಳ್ಳ ಹಣವನ್ನು ಕೊಡಲು ಪ್ರಯತ್ನಿಸುತ್ತಿದ್ದರು. ಕೆಲವರು ಸುಂಕಕ್ಕೆ ಹೆದರಿ ಸರಕನ್ನು ಹೊತ್ತು ರಾತ್ರಿಯಲ್ಲಿ ಪ್ರಯಾಣ ಮಾಡುತ್ತಿದ್ದದ್ದು ತಿಳಿದುಬರುತ್ತದೆ. ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ತೆರಿಗೆಯನ್ನು ವಿಧಿಸುತ್ತಿದ್ದ ಹಾಗೂ ತೆರಿಗೆಯನ್ನು ಧಾರ್ಮಿಕ ಸಾರ್ವಜನಿಕ ಕಾರ್ಯಗಳಿಗಾಗಿ ಬಿಟ್ಟಿದ್ದನ್ನು ಕಾಣಬಹುದಾಗಿದೆ.

ಗಬ್ಬೂರಿನ ಕ್ರಿ.ಶ.೧೧೯೮ರ ಶಾಸನದಲ್ಲಿ ಅಗ್ರಹಾರ ಹಿರಿಯ ಗೊಬ್ಬೂರ ನಖರಗಳು, ಕಮ್ಮಟಕಾರರು ಮತ್ತು ಕಮ್ಮಟದ ಅಧಿಕಾರಿಗಳು ಊರಲ್ಲಿಯ ಬ್ರಹ್ಮಜಿನಾಲಯಕ್ಕೆ ತಾವು ಮಾಡಿದ

ವಸ್ತುಗಳ ಮೇಲಿನ ತೆರಿಗೆಯನ್ನು ಬಿಡುತ್ತಾರೆ(ಕವಿಶಾಸಂ ೭, ಪು.೭೪). ಗಬ್ಬೂರಿನ ಕ್ರಿ.ಶ.೧೦೮೪ರ ಶಾಸನದಲ್ಲಿ ಚಾಳುಕ್ಯ ತ್ರಿಭುವನ ಮಲ್ಲನ ಆಳ್ವಿಕೆಯ ಮಹಾಸಾಮಂತನಾದ ಚಂದರಸ ಮತ್ತು ಕಂಣಲದೇವನು ಸೇರಿ ಹಳಸಿಂತೆಯ ಮಾನ್ಯದ ತೆರಿಗೆಯನ್ನೆಲ್ಲಾ ದೇವರಿಗೆ ಬಿಟ್ಟಿದ್ದನ್ನು ತಿಳಿಸುತ್ತದೆ(ಕವಿಶಾಸಂ ೭, ಪು.೮೮). ನಿಲವಂಜಿಯ ಗ್ರಾಮದ ಕ್ರಿ.ಶ.೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮನು ಕಲ್ಯಾಣಪುರದ ನೆಲವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರರಾಗಿ ಅಯ್ಯರಸನು ಇರುತ್ತಾನೆ. ಅಯ್ಯರಸನು ಸೂರ್ಯ ಗ್ರಹಣದ ದಿನ ಕರೆ ಕಂಠಪಂಡಿತನಿಗೆ ಕುರುಕುಂದ ಗಡಿಂಬದ ಕೋಲಲ್ಲಿ ೧೨ ಮತ್ತರು ಭೂಮಿ ಮತ್ತು ಗೋಧುವೆಯ ಹೊಲಕ್ಕೆಂದು ಒಂದು ಮತ್ತರು ಹಾಗೂ ತೊರೆಯ ಸಂಕರದೇವರಿಗೆ ಎರಡು ಮತ್ತರು ಭೂಮಿ ನೀಡಿದ್ದಲ್ಲದೆ, ಕಂಮ್ಮ ೪೫೦ ಬಿಟ್ಟು ಉಪ್ಪು, ಭತ್ತ, ಅಡಿಕೆ, ಕಾಜು ಇವನ್ನು ಮಾರಿದಲ್ಲಿ ಕೊಂಡಲ್ಲಿ ಬರುವ ಆದಾಯವನ್ನು ಕೆಲವು ರಿಯಾಯತಿಗಳನ್ನು ನೀಡಿದ್ದಾನೆ(ಕವಿಶಾಸಂ ೭, ಪು.೯೪). ಚಂದನಕೇರಿಯ ತ್ರುಟಿತ ಶಾಸನದಲ್ಲಿ ಅರಸಿಕೆರೆಯಲ್ಲಿ ಕೆರೆ ಮಾಡಿದ್ದಕ್ಕೆ ತೆರಿಗೆಗಳನ್ನು ಬಿಟ್ಟ ಉಲ್ಲೇಖವಿದೆ. ಗಬ್ಬೂರು ಗ್ರಾಮದ ಕ್ರಿ.ಶ.೧೭ನೇ ಶತಮಾನದ ಶಾಸನದಲ್ಲಿ ಗಬ್ಬೂರು ಹೊಲದ ಬೆಳೆಯಲ್ಲಿನ ಬೆಳೆ ಪಾಲನ್ನು ಮಾಫು ಮಾಡಿದಂತೆ ತಿಳಿಯುತ್ತದೆ. ಅಂದರೆ ಬೆಳೆಯ ಮೇಲಿನ ತೆರಿಗೆ ಬಿಟ್ಟಿರುವ ಉಲ್ಲೇಖವಿದೆ. ಬಾಗೂರು ಗ್ರಾಮದ ಕ್ರಿ.ಶ.೧೦೬೪ರ ಶಾಸನದಲ್ಲಿ ಇರಿವಬೆಡಂಗ ಸತ್ಯಾಶ್ರಯದೇವರ ರಾಜ್ಯಭಾರ ಮಾಡುತ್ತಿರುವಾಗ ಇವನ ಕೈಕೆಳಗಿದ್ದ ಸಾಹಣಿಪೆರ್ಗ್ಗಡೆ ಭೂಗೇಶ್ವರ ದೇವಾಲಯವನ್ನು ಕಟ್ಟಿಸಿ ಮಾನ್ಯ ಬಿಟ್ಟಂತೆ ಎಂದು ಉಲ್ಲೇಖಿಸಿದೆ(ಕವಿಶಾಸಂ ೭, ಪು.೯೬). ಕ್ಯಾದಿಗೇರೆಯ ಗ್ರಾಮದ ಕ್ರಿ.ಶ.೧೭ನೇ ಶತಮಾನದ ಶಾಸನದಲ್ಲಿ ಕೇದಿಗೆರೆಯ ಸಮಸ್ತ ಪ್ರಜೆಗಳು, ಸೆಟ್ಟಿಗಳು ಸೇರಿ ಬಾಲವೀರಯ, ಲಿಂಗದ ವೀರಯ ಇವರಿಗೆ ಅಕಸಾಲಿ ಕೆಂಚನ ಹೊಲದ ಪೈಕಿ ಹನ್ನೆರಡುವರೆ ಮಾನ್ಯ ಎಂದು ಗುತ್ತಿಗೆ ಬರೆಸಿ ನೀಡುತ್ತಾರೆ(ಕವಿಶಾಸಂ ೭, ಪು.೧೦೮). ಗಲಗ್ ಗ್ರಾಮದ ಕ್ರಿ.ಶ.೧೭೨೬ ಶಾಸನದಲ್ಲಿ ಗಲಗು ಮತ್ತು ರಾಯದುರ್ಗದ ಸೀಮೆಯಲ್ಲಿ ಯಾರು ದಂಡವನ್ನು ತೆಗೆದುಕೊಳ್ಳಬಾರದೆಂದೂ ಮತ್ತು ನ್ಯಾಯದಿಂದ ಕೊಡಬೇಕೆಂದೂ ಕಟ್ಟಳೆ ವಿಧಿಸಿದೆ.

ಹೀಗೆ ಕಂದಾಯ ಪದ್ಧತಿಯಲ್ಲಿ ಆದಾಯದ ಮೂಲಗಳ ಪದ್ಧತಿಯನ್ನು ದೇವದುರ್ಗದ ಅನೇಕ ಶಾಸನಗಳಲ್ಲಿ ಕಾಣುತ್ತೇವೆ.

ವ್ಯಯ ಅಥವಾ ಖರ್ಚು : ಹಲವಾರು ಶಾಸನಗಳು ರಾಜ್ಯದ ವರಮಾನದ ವಿವರಣೆಯನ್ನು ನೀಡುತ್ತವೆ. ಆದರೆ ಅದರ ಖರ್ಚಿನ ವಿವರಣೆಯನ್ನು ಕೊಡುವುದಿಲ್ಲ. ರಾಜ್ಯದ ಹೆಚ್ಚಿನ ಆದಾಯ ರಾಜ್ಯದ ರಕ್ಷಣೆಗಾಗಿ ವಿನಿಯೋಗವಾಗುತ್ತಿತ್ತೆಂದು ತಿಳಿದುಬಂದಿದೆ.

ಆದಾಯದ ಹೆಚ್ಚಿನ ಭಾಗವು ಅಧಿಕಾರಿಗಳಿಗೆ ವೇತನ ಕೊಡುವುದಕ್ಕಾಗಿ, ಕೋಟೆ, ಸೈನ್ಯ, ಆಯುಧಗಳು ಹಾಗೂ ಸೈನಿಕರ ವೇತನ ಮತ್ತು ರಾಜನ ವೈಯಕ್ತಿಕ ಜೀವನಕ್ಕೂ ಸಾಕಷ್ಟು ಹಣವು

ವ್ಯಯವಾಗುತ್ತಿತ್ತು. ದೇವದುರ್ಗ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿರುವ ದೇವಾಲಯಗಳು ಕೋಟೆ, ಶಾಸನಗಳ ನಿರ್ಮಾಣ, ಕೆರೆ, ಸತ್ರ, ಬಾವಿಗಳು ವಿದ್ಯಾಭ್ಯಾಸಕ್ಕೆ ಹೀಗೆ ಮುಂತಾದ ಕಾರ್ಯಗಳಿಗೆ ವ್ಯಯ ಮಾಡುತ್ತಿದ್ದರೆಂದು ಇಲ್ಲಿಯ ಶಾಸನಗಳು ತಿಳಿಸುತ್ತವೆ.

ನೀರಾವರಿ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಕೆರೆಗಳ ರಚನೆಗೆ ಸಂಬಂಧಿಸಿದಂತೆ ಶಾಸನಗಳು ತೀರಾ ಕಡಿಮೆ. ಇದಕ್ಕೆ ಈ ಪ್ರದೇಶ ಕೃಷ್ಣಾ ಮತ್ತು ತುಂಗಭದ್ರ ನದಿ ಮದ್ಯೆ ಇರುವುದು. ಇದಲ್ಲದೆ ಕೆಲವು ಸಣ್ಣ ಸಣ್ಣ ಹಳ್ಳಗಳೂ ಮಧ್ಯ ಹರಿಯುತ್ತವೆ. ಆದರೆ ಪ್ರಯಾಣಿಕರ, ಊರಿನವರ ಅನುಕೂಲಕ್ಕಾಗಿ ಅಲ್ಲಲ್ಲಿ ಬಾವಿಗಳು ಹಾಗೂ ಇದರಿಂದ ನೀರನ್ನು ಮೇಲಕ್ಕೆ ಎತ್ತಲು ಧರ್ಮದ ಏತಗಳನ್ನು ಸ್ಥಾಪಿಸಿದ್ದ ಸಂಗತಿ ಶಾಸನಗಳಿಂದ ತಿಳಿಯುತ್ತದೆ. ಶಾಸನಗಳಲ್ಲಿ ದೇವಾಲಯದ ಬಳಿ ಪುಷ್ಕರಣಿಗಳನ್ನು ಮಾಡಿಸಿದ ಹಾಗೂ ರಾಜರು ಕೆರೆಗಳ ನಿರ್ಮಾಣ ಮಾಡಿದ ಉಲ್ಲೇಖ ಶಾಸನಗಳಲ್ಲಿ ಇವೆ. ಆದರೂ ನೀರಾವರಿಗೆ ಸಂಬಂಧಿಸಿದಂತೆ ಶಾಸನಗಳು ಕಡಿಮೆ. ಹಿರೇರಾಯಕುಂಪಿ ಗ್ರಾಮದ ಕ್ರಿ.ಶ.೧೧೩೦ರ ಶಾಸನದಲ್ಲಿ ಭೂಲೋಕಮಲ್ಲನ ಆಳ್ವಿಕೆ ಕಾಲದಲ್ಲಿ ಮಂತ್ರಿ ದೇವರಾಜನ ಉಲ್ಲೇಖ ಬಂದಿದೆ. ಈತನು ಅನೇಕ ಕೆರೆಗಳನ್ನು ಕಟ್ಟಿಸಿದಂತೆ ಶಾಸನ ತಿಳಿಸುತ್ತದೆ(ಕವಿಶಾಸಂ ೭, ಪು.೯೦-೯೧).

ಚಂದನಕೇರಿಯ ಶಾಸನದಲ್ಲಿ ಕೆರೆ ಮಾಡಿದ್ದಕ್ಕೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ತಿಳಿಸುತ್ತದೆ. ದೇವದುರ್ಗದ ಕ್ರಿ.ಶ.೧೬೯೦ರ ಶಾಸನದಲ್ಲಿ ರಾಜೇಶ್ರೀ ಕೇಸವ್ವೆಯಗವುಡನು ನಳಮಾನ ಸವಂತ್ಸರದ(ಕ್ರಿ.ಶ.೧೬೭೭)ಲ್ಲಿ ದೇವದುರ್ಗದ ಕೆರೆ ಕಟ್ಟಿಸಿದನೆಂದು ಹೇಳಿದೆ(ಕವಿಶಾಸಂ ೭, ಪು.೧೧೪). ಈ ಮೇಲಿನ ಕೆರೆಗಳ ಉಲ್ಲೇಖಗಳಲ್ಲದೆ, ಶಾಸನಗಳಲ್ಲಿ ದಾನವನ್ನು ನೀಡುವಾಗ ಗದ್ದೆಯ ಉಲ್ಲೇಖ, ತೋಟಗಳ ಬಾವಿಗಳ ಉಲ್ಲೇಖ ಬಂದಿರುವುದರಿಂದ ನೀರಾವರಿ ವ್ಯವಸ್ಥೆಯ ಬಗ್ಗೆ ಸ್ವಲ್ಪ ಮಾಹಿತಿ ಸಿಗುತ್ತದೆ. ಮತ್ತು ದೇವದುರ್ಗ ತಾಲ್ಲೂಕಿನಲ್ಲಿ ಅನೇಕ ಬಾವಿ, ಹಳ್ಳ, ಕೆರೆಗಳು ಇಂದಿಗೂ ಇದ್ದುದನ್ನು ಕಾಣಬಹುದು.

ವ್ಯಾಪಾರ ಕೇಂದ್ರಗಳು

ವ್ಯಾಪಾರ ನಡೆಯುವುದಕ್ಕೆ ಒಂದು ಸೂಕ್ತವಾದ ಸ್ಥಳ ಬೇಕೇ ಬೇಕು. ಅದಕ್ಕಾಗಿ ಪ್ರಾಚೀನ ಕಾಲದಲ್ಲಿ ಸಂತೆಗಳು, ಸಂತೆ ಕಟ್ಟೆಗಳು, ಅಂಗಡಿಗಳು, ಪೇಟೆ ಮುಂತಾದವುಗಳನ್ನು ಕಟ್ಟಿ ಅದರ ಮೂಲಕ ವ್ಯಾಪಾರವನ್ನು ಮಾಡುತ್ತಿದ್ದರು. ಇಂತಹ ಕೆಲ ಉದಾಹರಣೆಗಳು ಇಲ್ಲಿವೆ.

ಸಂತೆಗಳು : ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಮುಖ್ಯ ವೇದಿಕೆ ಸಂತೆ. ಸಂತೆಗಳು ವ್ಯಾಪಾರದ ಪ್ರಗತಿಯಲ್ಲದೆ ರಾಜಕೀಯ, ಸಾಮಾಜಿಕ, ಆರ್ಥಿಕ, ಔದ್ಯೋಗಿಕ ರಂಗದಲ್ಲಿ ಅಭಿವೃದ್ಧಿಯನ್ನು

ಸಾಧಿಸುವಲ್ಲಿ ಈ ಸಂತೆ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಇದು ಸಂಸ್ಥಾ>ಸಂಸ್ಥೆ>ಸಂತೆ ಹೀಗೆ ಸಂಸ್ಕೃತದಿಂದ ರೂಪುಗೊಂಡಿದೆ(ಕವಿಶಾಸಂ ೭, ಪು.೧೧೪). ಇವುಗಳನ್ನು ಅನೇಕ ಅರಸರು ಊರಿನ ಗೌಡರು, ಮಹಾಪ್ರಭುಗಳು ಕಟ್ಟಿಸುತ್ತಿದ್ದರು ಮತ್ತು ಹೊಸದಾಗಿ ಪ್ರಾರಂಭಿಸಿದ ಸಂತೆಗೆ ವರ್ತಕರನ್ನು ಆಕರ್ಷಿಸಲು ಸರಕುಗಳಿಗೆ ಸುಂಕದ ರಿಯಾಯಿತಿ ಬಿಡುತ್ತಿದ್ದರು. ಕೆಲವು ಅಧಿಕಾರಿಗಳು ಸಂತೆಗೂ ದಾಳಿ ಮಾಡಿ ಸರಕು-ಹಣ ದೋಚಿಕೊಂಡು ಹೋಗುತ್ತಿದ್ದಿರಬಹುದು. ಹೀರೆಬೇವಿನೂರು ಶಾಸನದಲ್ಲಿ ಅಧಿಕಾರಿಗಳು ಧರ್ಮಸಂತೆಯ ಮೇಲೆ ದಾಳಿ ಮಾಡಿದರೆ ಅವರು ಗೋದ್ವಿಜ ಮಾಂಸ ಮೆಲದಿವರು ಎಂಬ ಶಾಪೋಕ್ತಿ ಹೇಳುವುದನ್ನು ನಾವು ಕಾಣಬಹುದು(ಹಿರೇಬೆವಿನೂರು ಶಾಸನ, ಇಂಡಿ, ಕ್ರಿ.ಶ.೧೧೯೦, ಪು.೧೧೬).

ದೇವದುರ್ಗದ ಕ್ರಿ.ಶ.೧೬೯೦ರ ಶಾಸನದಲ್ಲಿ ರಾಜೇಶ್ರೀ ಕೇಸವ್ವೆಯ ಗವುಡನು ನಳನಾಮ ಸಂವತ್ಸರದಲ್ಲಿ ಊರಿನ ಗೋವರ್ಧನ ಗೋಪಾಲಕೃಷ್ಣನ ಪ್ರತಿಷ್ಠೆ ಮಾಡಿಸಿ, ಪೇಟೆ ಕಟ್ಟಿಸಿ, ಸಂತೆ ಸೇರಿಸಿದ ಎಂದು ಉಲ್ಲೇಖಿಸಲಾಗಿದೆ(ಕವಿಶಾಸಂ ೭, ಪು.೧೧೪). ಸಿಂಧೂರಿನ ತಾಲ್ಲೂಕಿನ ಮುಕ್ಕಂದಿ ಗ್ರಾಮದ ಕ್ರಿ.ಶ.೧೫೮೫ ಶಾಸನದಲ್ಲಿ ಮುಕಂದಿಯ ಸಂತೆಯನ್ನು ಹೊಸದಾಗಿ ಮಾಡಿಸಿ, ಮಳಿಗೆ, ಮನೆಗಳನ್ನು ಕಟ್ಟಿಸಿದ ಉಲ್ಲೇಖವಿದೆ.

ವ್ಯಾಪಾರ ಅಭಿವೃದ್ಧಿಗೆ ಮತ್ತು ವರ್ತಕರ ಅನುಕೂಲತೆಗಾಗಿ ಸಂತೆ, ಪೇಟೆಗಳನ್ನು ಕಟ್ಟಿಸುವುದರ ಮೂಲಕ ಕರ್ನಾಟಕದಲ್ಲಿ ಆರ್ಥಿಕ ಸಂಪನ್ಮೂಲಗಳಲ್ಲಿ ಇವು ಒಂದಾಗಿದ್ದವು.

ಅಂಗಡಿ, ಮಳಿಗೆಗಳು : ಸಂತೆಯಲ್ಲಿ ಅಂಗಡಿಗಳನ್ನು ಕಟ್ಟಿ ವ್ಯಾಪಾರ ಮಾಡುತ್ತಿದ್ದ ಉಲ್ಲೇಖಗಳನ್ನು ನಾವು ನೋಡಬಹುದಾಗಿದೆ. ಸಂತೆಯಲ್ಲಿ ಕಟ್ಟಿದ ಮಳಿಗೆಗಳು ಸಂತೆಯ ದಿನ ಮಾತ್ರ ತೆರೆದಿರುತ್ತಿದ್ದವು. ಈ ಸಂತೆಯ ಅಂಗಡಿಗಳಲ್ಲಿ ಕೆಲವು ಬಾರಿ ಬಯಲು ಅಂಗಡಿಗಳು ಮತ್ತು ಕಟ್ಟಿದ ಅಂಗಡಿಗಳು ಎಂಬ ಎರಡು ವಿಧದಲ್ಲಿ ಕಾಣಲಾಗುತ್ತದೆ. ಅಲ್ಲದೆ ಧರ್ಮದ ಅಂಗಡಿ, ದೇವರ ಅಂಗಡಿ, ಮಾನ್ಯದ ಅಂಗಡಿ ಇತ್ಯಾದಿ ಪ್ರಭೇದಗಳು ಕಂಡುಬರುತ್ತವೆ. “ಈ ಅಂಗಡಿಗಳ ಮೇಲೆ ಅಂಗಡಿ ಅಧಿಕಾರಿಯಿದ್ದು, ಈತನು ಅಂಗಡಿಯಿಂದ ದೇವಾಲಯಗಳಿಗೆ ಸಲ್ಲಿಸಬೇಕಾದ ವಸ್ತುಗಳನ್ನು ಪಡೆಯುವ ಮೇಲ್ವಿಚಾರಣೆ ಮಾಡುತ್ತಿದ್ದ.”(ಕವಿಶಾಸಂ ೭, ಪು.೧೧೬) ಕೆಲವು ಬಾರಿ ಒಬ್ಬ ವ್ಯಕ್ತಿ ಅನೇಕ ಮಳಿಗೆಗಳ ಒಡೆಯನಾಗಿರುತ್ತಿದ್ದ, ಆದ್ದರಿಂದ ಈ ಮಳಿಗೆಗಳಿಗೆ ವ್ಯಕ್ತಿಯ ಹೆಸರು ಇಡುತ್ತಿದ್ದರು. ಉದಾ : ಚಂದ್ರ ವೌಳಿಯಣ್ಣನಂಗಡಿ, ಬೊಮ್ಮಲದೇವಿಯರಂಗಡಿ, ಕೇತಲದೇವಿಯರಂಗಡಿ, ಬೊಪ್ಪದೇವನ ಬಸದಿಯಂಗಡಿ(ಕವಿಶಾಸಂ ೭, ಪು.೧೧೭) ಲಕ್ಕುಂಡಿಶಾಸನ ಪ್ರಕಾರ ನಾಕಿಸೆಟ್ಟಿಯು ಹದಿನೈದು ಅಂಗಡಿಗಳ ಒಡೆಯನಾಗಿದ್ದುದನ್ನು ತಿಳಿದುತ್ತದೆ.

ಕರಡ್ಕಲ್ ಕ್ರಿ.ಶ.೧೦೭೪ರ ಶಾಸನದಲ್ಲಿ ಹೆಗ್ಗಡೆ ಸೂಕ್ಷ್ಮಶಿವಭಟಾರ ಮತ್ತು ತಪೋಧನರು ಸೇರಿಕೊಂಡು ದಾಸಿಸೆಟ್ಟಿಗೆ ಮತ್ತು ವ್ಯಾಪಾರಿಗಳಿಗೆ ಕೆಲವು ಕಟ್ಟಳೆಗಳನ್ನು ಹಾಕಿದ್ದಾರೆ. ಹಾಗೂ ನೆಡೆಮುಡಿಗೆ ಸಂಬಂಧಪಟ್ಟಂತೆ ಕೀಳುಕುಲದವರು ತಮ್ಮ ಮದುವೆಯ ಬಂಡಿಯನ್ನು ಅಂಗಡಿ ಬೀದಿಯೊಳಗೆ ತರಬಾರದೆಂದೂ ಹಾಗೇನಾದರು ಬಂದರೆ ಹನ್ನೆರಡು ಗದ್ಯಾಣ ಹೊನ್ನನ್ನು ದಂಡವಾಗಿ ಕೊಡಬೇಕೆಂಬ ಕಟ್ಟಳೆ ವಿಧಿಸುತ್ತಾರೆ. ಇದಕ್ಕೆ ಶ್ರೀ ಬಲ್ಲವರಸ ಮತ್ತು ರಾಜ ಗುರುದೇವರಾಣೆಯನ್ನು ಹಾಕಲಾಗಿದೆ(ಕವಿಶಾಸಂ ೭, ಪು.೧೩೫). ಇದನ್ನು ನೊಡಿದಾಗ ಅಂಗಡಿ ಮಳಿಗೆಗಳು ಉನ್ನತವರ್ಗದವರಾಗಿದ್ದವುವೆಂದು ತಿಳಿದುಬರುತ್ತದೆ.

ಕಲ್ಲೂರು ಗ್ರಾಮದ ೧೧೯೭ರ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಮಾಂಡಳಿಕನಾಗಿ ಹೈಹಯ ಕುಲದ ಚಂದರಸನಿದ್ದು ಈತನು ಮಾರಟೇಸ್ವರ ದೇವರಿಗೆ ತೋಟ, ಗಾಣ ಒಂದು ಅಂಗಡಿ ಐದು ನಿವೇಶನಗಳನ್ನು ದಾನ ನೀಡಿದ ಉಲ್ಲೇಖವಿದೆ.

ರಾಯಚೂರಿನ ದಪ್ತರೀ ಮಸೀದಿಯ ಕ್ರಿ.ಶ.೧೯೪೮-೪೯ರ ಶಾಸನದಲ್ಲಿ ಮಲಿಕ್ ಹಾಜಿ ಎಂಬುವನು ರಾಯಚೂರು ಸೀಮೆಗೆ ಸೇರಿದ ಗಬ್ಬೂರಿನಲ್ಲಿ ಒಂಬತ್ತು ಚವರ ಭೂಮಿಯನ್ನು ರಾಯಚೂರಿನ ಮಸೀದಿಯಲ್ಲಿ ಹುಪಜ್ (ಕುರಾನನ್ನು ಬಾಯಿಪಾಠ ಮಾಡುವವರು) ಗಾಣಿ ಇಮಾಮರಿಗೆ ಹಾಗೂ ಮವುದ್ದೀನರಿಗೆ ದತ್ತಿ ನೀಡಿದ್ದನ್ನು ಉಲ್ಲೇಖಿಸಲಾಗಿದೆ. ಶಾಸನ ಮುಂದುವರಿದು ಈ ಒಂಬತ್ತು ಚವರ ಭೂಮಿಯನ್ನು ಸದ್ಯ ರಾಯಚೂರು ನಗರದಲ್ಲಿರುವ ನಲವತ್ತು ಮಳಿಗೆ ಮಸೀದಿಯೂ ದೀಪ ಜಮಖಾನೆ ಹಾಗೂ ರಿಪೇರಿ ಕೆಲಸಗಳ ನಿರ್ವಹಣೆಗಾಗಿ ಬಳಸಬೇಕೆಂದು ದಾಖಲಿಸಲಾಗಿದೆ. ಇಲ್ಲಿ ೪೦ ಮಳಿಗೆ ಅಂದರೆ ಅಂಗಡಿಗೆ ದಾನ ಬಿಟ್ಟ ಉಲ್ಲೇಖವನ್ನು ಕಾಣುತ್ತೇವೆ.(ಕ.ಪ.ಅರೇಬಿಕ್, ಉರ್ದು ಶಾಸನ, ಪು.೨೩೭)

೩. **ಪೇಟೆಗಳು** : ಸಂತೆಯಲ್ಲಿರುವ ಪೇಟೆ, ಪಟ್ಟಣದಲ್ಲಿರುವ ಪೇಟೆ, ಅಂದರೆ ಹೊರಪೇಟೆ, ಒಳಪೇಟೆ ಎಂದು ಎರಡು ವಿಧ. ವಾರದಲ್ಲೊಂದು ದಿನ ಸಂತೆ ನೆರೆದಾಗ ಹೊರಪೇಟೆಯಲ್ಲಿ ಉಳಿದ ದಿನಗಳಲ್ಲಿ ಒಳಪೇಟೆಯಲ್ಲಿ ವ್ಯಾಪಾರ ನಡೆಯುತ್ತಿದ್ದಿತು. ಶಾಸನಗಳಲ್ಲಿ ಸಹ ಪೇಟೆಗಳ ಉಲ್ಲೇಖ ಬಂದಿದ್ದನ್ನು ಕಾಣಬಹುದು.

ದೇವದುರ್ಗದ ಕ್ರಿ.ಶ.೧೭೯೦ರ ಶಾಸನದಲ್ಲಿ ರಾಜೇಶ್ರೀ ಕೇಸವ್ವೆಯಗವುಡನ ನಳನಾಮ ಸಂವತ್ಸರದಲ್ಲಿ ಪೇಟೆ ಕಟ್ಟಿಸಿ, ಸಂತೆ ಸೇರಿಸಿದ ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೧೧೪). ಇದರ ಆಗಿನ ರಾಜ ಮಹಾರಾಜರು ಸಾಮಂತ ಅರಸರು ಅಥವಾ ಊರಿನ ಗೌಡರು ಪೇಟೆಗಳನ್ನು ಸಂತೆಗಳನ್ನು ಮಳಿಗೆಗಳನ್ನು ಕಟ್ಟಿಸಿ ಕೊಡುವುದರ ಮೂಲಕ ಅವರಿಗೆ ಸುಂಕ ರಿಯಾಯಿತಿ ಇತರ ಸೌಲಭ್ಯಗಳನ್ನು

ಒದಗಿಸಿಕೊಡುತ್ತಿದ್ದರು. ಕೃಷ್ಣರಾಯಪುರ ಪೇಟೆಯಲ್ಲಿ ಬಂದು ನೆಲೆಸುವ ಒಕ್ಕಲುಗಳಿಗೆ ೩ ವರ್ಷ ಸುಂಕ ಪರಿಹಾರವಿದ್ದಿತು ಎಂದು ವಲ್ಲಮಡುಗು (ತಾ) ಗೂಟಿ (ಶಾ.ಕ.ವ. ಪು.೧೧೭) ಶಾಸನದಲ್ಲಿ ತಿಳಿಸಲಾಗಿದೆ. ಇಂತ ಅನೇಕ ಸೌಕರ್ಯಗಳಿಗಾಗಿ ವರ್ತಕರು ಪೇಟೆಗಳತ್ತ ಬಂದು ವ್ಯಾಪಾರ ಮಾಡಲು ಅನುಕೂಲಕರವಾಯಿತು. ಕೆಲವೊಂದು ಪೇಟೆಗಳಿಗೂ ಅರಸರ ಮನೆತನದವರು ಹೆಸರಿಡುವ ಪರಿಪಾಠವಿದ್ದಿತು. ಬುಕ್ಕಪಟ್ಟಣ ಶಾಸನದಲ್ಲಿ ಬರುವ ವರದರಾಜಮ್ಮನ ಪೇಟೆ(ಶಾ.ಕ.ವ. ಪು.೧೧೭) ಎಂದು ಉಲ್ಲೇಖವಿದೆ.

ಪಟ್ಟಣ : ಸಂತೆ ಮಾಡಿಸುವುದರಿಂದ ಮಾತ್ರ ಗ್ರಾಮವು ಪಟ್ಟಣವೆನಿಸಿಕೊಳ್ಳುತ್ತಿದ್ದಿತು. ಕೆಲವು ಸಲ ಸಂತೆ ಕಟ್ಟಿಸಿ ಗ್ರಾಮವನ್ನೇ ಪಟ್ಟಣವನ್ನಾಗಿ ಪರಿವರ್ತಿಸುತ್ತಿದ್ದರು. ಆದರೆ ಹೊಸದಾಗಿ ನಿರ್ಮಿಸಿದ ಪಟ್ಟಣ ಮೂಲ ಗ್ರಾಮದಿಂದ ಪ್ರತ್ಯೇಕವಾಗಿರುತ್ತಿದ್ದುದನ್ನು ಬೆವೂರು ಶಾಸನ ತಿಳಿಸುತ್ತದೆ(ಶಾ.ಕಾ.ವ. ಪು.೧೧೮). ಬೇರೆ ಬೇರೆ ಭಾಗದ ವರ್ತಕರ ಕುಟುಂಬಗಳು ಹೊಸ ಪಟ್ಟಣದಲ್ಲಿ ಬಂದು ನೆಲೆಸುತ್ತಿದ್ದವು. ಇದಲ್ಲದೆ ಹೊಸದಾಗಿ ಕಟ್ಟಿಸಿದ ಪಟ್ಟಣದಲ್ಲಿ ಬಂದು ವಾಸಿಸುವ ವರ್ತಕರಿಗೆ ವಿಶೇಷ ಸೌಲಭ್ಯ ಕರ ವಿನಾಯಿತಿ ನೀಡಲಾಗುತ್ತಿತ್ತು. ಇದ್ದರಿಂದ ವಾಣಿಜ್ಯೋದ್ಯಮ ಅಭಿವೃದ್ಧಿ ಪಡಿಸುವುದು ಇದರ ಉದ್ದೇಶವಾಗಿತ್ತು.

ಪಟ್ಟಣ ನಿರ್ಮಾಣ ಕಾರ್ಯ ಕೈಗೊಂಡವರಲ್ಲಿ ಗ್ರಾಮದ ಹಿರಿಯ ಹಾಗೂ ಪ್ರಮುಖ ಆಡಳಿತಾಧಿಕಾರಿಗಳಾದ ಗೌಡರು, ಪ್ರಭುಗಳು, ಅರಸ ಕುಟುಂಬದವರು ಪ್ರಮುಖರಾಗಿದ್ದಾರೆ. ಇವರ ಹುಮ್ಮಸ್ಸು, ಒಲವು, ಆಸಕ್ತಿ ಫಲವಾಗಿ ಗ್ರಾಮಗಳು ವ್ಯಾಪಾರ ಚಟುವಟಿಕೆಯ ಪ್ರಧಾನ ಕೇಂದ್ರಸ್ಥಳಗಳಾಗಿ ರೂಪುಗೊಂಡವು. ಅರಸನ ಸಂಪ್ರೀತಿಗಾಗಿಯೋ, ಶುಭ ಹಾರೈಕೆಗಾಗಿಯೋ ಪಟ್ಟಣಗಳಿಗೆ ಅರಸು, ಅರಸಿ ಮತ್ತು ಅವರ ಮಕ್ಕಳ ಹೆಸರಿಡುತ್ತಿದ್ದರು.

ಗಬ್ಬೂರ ಕ್ರಿ.ಶ.೧೧೨೪ರ ಶಾಸನದಲ್ಲಿ ಗೂಬ್ಬೂರ ಪಟ್ಟಣದಲ್ಲಿರುವ ಕೇಶವ ದೇವರಿಗೆ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೭೦). ಹೀಗೆ ಪೇಟೆ-ಪಟ್ಟಣಗಳನ್ನು ಕಟ್ಟಿಸಿ ಸಂತೆ ನೆರೆಯಿಸುವುದರಿಂದ ರಾಜ್ಯದ ಆದಾಯ, ಉದ್ಯೋಗಾವಕಾಶ, ಸಾರಿಗೆ-ಸಂಪರ್ಕ ಹೆಚ್ಚಿಸುವಲ್ಲಿ ಇವು ಗಮನಾರ್ಹವಾಗಿವೆ.

ವ್ಯಾಪಾರ : ವ್ಯಾಪಾರವನ್ನು ಮಾಡುವುದಕ್ಕಾಗಿ ವಿವಿಧ ವ್ಯಾಪಾರಿಗಳು ಬೇರೆ ಬೆರೆ ಸ್ಥಳಗಳಿಗೆ ಹೋಗುತ್ತಿದ್ದರು. ಇವರು ಪಾದಮಾರ್ಗ, ಜಲಮಾರ್ಗದ ಮೂಲಕ ಒಂಟಿಯಾಗಿ ಅಥವಾ ಗುಂಪಾಗಿಯೂ ಹೋಗುವುದರ ಮೂಲಕ ವ್ಯಾಪಾರವನ್ನು ಮಾಡುತ್ತಿದ್ದರು.

ಮೂಟೆ, ಚರ್ಮದ ಚೀಲ, ಬಿದರಿನ ಕೊಳವೆ ಮುಂತಾದವುಗಳಲ್ಲಿ ವಸ್ತುಗಳನ್ನು ತೆಗೆದುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದರು. ಇಂತಹ ತುಂಬಿದ ಸರಕುಗಳ ಬಂಡಿಯನ್ನು ಎತ್ತು, ಕತ್ತೆ, ಕೋಣ, ಎಮ್ಮೆ, ಕುದುರೆಗಳ ಮೂಲಕ ಸಾಗಿಸುತ್ತಿದ್ದರು. ಗಬ್ಬೂರ ಗ್ರಾಮದ ಕ್ರಿ.ಶ.೧೧೫೪ರ ಶಾಸನದಲ್ಲಿ ಎತ್ತಿನ

ಮೂಲಿಗರವನ, ಕತ್ತೆಯ, ಕೋಣನ ಮೊಲಿಗರವನ ಎಂದು ಉಲ್ಲೇಖವಿದೆ. ಅಂದರೆ ವ್ಯಾಪಾರಕ್ಕಾಗಿ ಎತ್ತು, ಕೋಣ, ಕತ್ತೆಗಳನ್ನು ಉಪಯೋಗಿಸುತ್ತಿದ್ದರೆಂದು ತಿಳಿದುಬರುತ್ತದೆ. ನಿಲವಂಜಿ ಗ್ರಾಮದ ಕ್ರಿ.ಶ.೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮನು ಕಲ್ಯಾಣಪುರದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಮಹಾಮಂಡಳೇಶ್ವರ ಅಯ್ಯರಸನು ಸೂರ್ಯಗ್ರಹಣದ ದಿನ ಕೆರೆಕಂಠಪಂಡಿತನಿಗೆ ಭೂಮಿಯನ್ನು ದಾನ ನೀಡಿ ಮತ್ತು ಉಪ್ಪು ಭತ್ತ, ಅಡಿಕೆ, ಕಾಜು ಮಾರಿದಲ್ಲಿ ಕೊಂಡಲ್ಲಿ ಬರುವ ಆದಾಯದಲ್ಲಿ ಕೆಲವು ರಿಯಾಯಿತಿಗಳನ್ನು ನೀಡುತ್ತಾನೆ(ಕವಿಶಾಸಂ ೭, ಪು.೯೪). ಅಂದರೆ ಉಪ್ಪು ಭತ್ತ, ಅಡಿಕೆ, ಕಾಜು ಮುಂತಾದವು ವ್ಯಾಪಾರದ ಸರಕುಗಳಾಗಿದ್ದವೆಂದು ತಿಳಿದುಬರುತ್ತದೆ.

ಗಬ್ಬೂರಿನ ೧೧೫೪ರ ಶಾಸನವು ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗೊಬ್ಬೂರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವ ದೇವರ ಪೂಜೆಗೆ ದಾನ ಕೊಟ್ಟ ವಿಷಯ ತಿಳಿದುಬರುತ್ತದೆ(ಕವಿಶಾಸಂ ೭, ಪು.೫೨). (ರಾ.ಜಿ) ಕುರುಡಿ ಗ್ರಾಮದ ಶಾಸನದಲ್ಲಿ ತ್ರಿಭುವಮಲ್ಲನು ರಾಜ್ಯಭಾರ ಮಾಡುವಾಗ ಇಲ್ಲಿಯ ವ್ಯಾಪಾರಿಗಳು ತಾವು ಮಾರುವ ಮೆಣಸು, ಶುಂಠಿ, ಹಿಪ್ಪಲಿ, ಸಕ್ಕರೆ, ಅಲ್ಲ, ಸಾಸುವೆ, ಜೀರಿಗೆ ಮುಂತಾದವುಗಳಿಂದ ಬರುವ ಲಾಭಾಂಶವನ್ನು ವಾಸುದೇವ ದೇವಾಲಯಕ್ಕೆ ದಾನವಾಗಿ ಬಿಡುತ್ತಾರೆ(ಕವಿಶಾಸಂ ೭, ಪು.೨೭೧). ಗಬ್ಬೂರು ಗ್ರಾಮದ ೧೧೨೬ರ ಶಾಸನದಲ್ಲಿ ಎಲೆ ವ್ಯಾಪಾರಿಗಳು ತಿಂಗಳಿಗೆ ೫ ಪಣವನ್ನು ಕೇಶವದೇವರಿಗೆ ದಾನ ನೀಡುತ್ತಾರೆ. ಸೆಟ್ಟಿಯರು ಇತರ ವ್ಯಾಪಾರಿಗಳು ದಾನ ನೀಡಿದ ಉಲ್ಲೇಖವನ್ನು ನಾವು ನೋಡಿದಾಗ ಇಲ್ಲಿಯ ವ್ಯಾಪಾರದ ಬಗ್ಗೆ ಸ್ಪಷ್ಟವಾಗುತ್ತದೆ.

ಮಾರ್ಗಗಳು : ವ್ಯಾಪಾರವು ಪ್ರಮುಖವಾಗಿ ಪಾದಮಾರ್ಗ, ಜಲಮಾರ್ಗದ ಮೂಲಕ ಸಾಗುತ್ತಿತ್ತು. ಬಂಡೆಯ ದಾರಿ, ಬಂಡಿಯ ಹೆದ್ದಾರಿ, ರಾಜಬೀದಿ ಮತ್ತು ನದಿ ಹಳ್ಳಗಳನ್ನು ತೆಪ್ಪ, ದೋಣಿ ಮೂಲಕ ದಾಟುತ್ತಿದ್ದರು. ನದಿಯ ನೀರು ಕಡಿಮೆ ಇದ್ದಾಗ ಕಾಲನಡಿಗೆ ಮೂಲಕ ಹೋಗುತ್ತಿದ್ದರು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ ಹಲವಾರು ದಿನ ಹಿಡಿಯುತ್ತಿದ್ದವು. ಆಗ ಮಧ್ಯದ ಊರುಗಳಲ್ಲಿ ವ್ಯಾಪಾರ ಮುಗಿಸಿ ಅಲ್ಲಿ ತಂಗುವುದರ ಮೂಲಕ ಮರುದಿವಸ ಬೇರೆಯೂರಿಗೆ ಹೋಗುತ್ತಿದ್ದರು. ಲಕ್ಷ್ಮೇಶ್ವರದಿಂದ ಕಳಸಾಪುರ ತಲುಪಲು ಎರಡು ದಿನ ಬೇಕಾಗುತ್ತಿದ್ದ ವಿಷಯ ಲಕ್ಷ್ಮೇಶ್ವರ ಶಾಸನದಲ್ಲಿದೆ(ಶಾ.ಕ.ವ., ಪು.೧೨೧).

ಪಾದಮಾರ್ಗದಿಂದ ಹೋಗುವಾಗ ಮಾರ್ಗಮಧ್ಯದಲ್ಲಿ ಹಾದಿಗಳ್ಳರು ದಾಳಿ ಮಾಡಿ ಸರಕು ಮತ್ತು ಪ್ರಾಣಿಗಳನ್ನು ದೋಚಿಕೊಂಡು ಹೋಗುತ್ತಿದ್ದರು. ಆಗ ವರ್ತಕರು ಹೋರಾಡಿ ಪ್ರಾಣವನ್ನರ್ಪಿಸಿದ್ದಾರೆ. ತಂಬುಲಿಗೆರ ಎತ್ತನ್ನು ಕಳ್ಳರು ಅಪಹರಿಸಿದಾಗ ತಳವಾರ ಗೊಜ್ಜಿಗ ಅವರೊಡನೆ ಹೋರಾಡಿ ಮಡಿದ ಉಲ್ಲೇಖ ಬಂಕಾಪುರ(ತಾ) ಹೊಟ್ಟೂರ ಶಾಸನದಲ್ಲಿದೆ(ಶಾ.ಕ.ವ., ಪು.೧೨೧). ರಾಜಿ ಸೆಟ್ಟಿಯ ಮಗ

ದುಗ್ಗಣ ಹರಿಹರಕ್ಕೆ ಬರುತ್ತಿರುವಾಗ ನಿಟ್ಟೂರ ಹಾರಿವಾಳದೆಡೆಯಣ ಗೊಡ್ಡಿಸಾಲದಲ್ಲಿ ಎದುರಾದ ಬಟ್ಟೆಗಳ್ಳರೊಡನೆ ಹೋರಾಡಿ ಹಲವರನ್ನು ಕೊಂದು ತಾನು ವೀರಮರಣ ಹೊಂದಿದುದನ್ನು ಹಿರೇಕೆರೂರ(ತಾ) ಎಮ್ಮಿಗನೂರ ಶಾಸನ ತಿಳಿಸುತ್ತದೆ.

ಕರ್ನಾಟಕದ ಬೇರೆ ಬೇರೆ ಪ್ರದೇಶದ ಕಾಲದಲ್ಲಿ ಸಾರಿಗೆ ವಾಹನಗಳ ಮೇಲೆ ವಸ್ತುಗಳ ಮೇಲೆ ಸುಂಕವನ್ನು ಹಣ ಹಾಗೂ ವಸ್ತುಗಳ ರೂಪದಲ್ಲಿ ಹಾಕಲಾಗುತ್ತಿತ್ತು. ಆದರೆ ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಇಂತಹ ಉಲ್ಲೇಖವಿಲ್ಲ. ಕೃಷ್ಣಾ ನದಿಯು ಸುರಪುರ ತಾಲೂಕು, ಶಹಾಪುರ ತಾಲೂಕು ಯಾದಗಿರ ತಾಲೂಕು-ದೇವದುರ್ಗದ ಗಬ್ಬೂರು ಜಾಲಹಳ್ಳಿ ದೇವದುರ್ಗ ಮುಂತಾದ ಊರುಗಳಿಗೆ ವ್ಯಾಪಾರ ಸಂಪರ್ಕ ಕಲ್ಪಿಸಿಕೊಟ್ಟಿತ್ತು. ತುಂಗಭದ್ರಾ ನದಿಯು ಆಂಧ್ರಪ್ರದೇಶ ಹಾಗೂ ಕರ್ನಾಟಕದ ಮಧ್ಯ ಸಂಪರ್ಕವನ್ನು ಕಲ್ಪಿಸಿಕೊಟ್ಟಿತ್ತು. ಆಂಧ್ರ ಪ್ರದೇಶದ ಅಲ್ಲಂಪುರ ಗ್ರಾಮದ ಕ್ರಿ.ಶ.೧೧೮೨ರ ಶಾಸನದಲ್ಲಿ, ಅಯ್ಯವೊಳೆ ಐನೂರ್ವರು ಉಭಯ ನಾನಾದೇಶಿಯಗಳು, ಮೂವತ್ತಾರು ಬೀಡುಗಳು ಮುಮ್ಮುರಿದಂಡಗಳು ಕನ್ನಡ ೪೦೦೦, ತುಂಬುಳ ಸ್ಥಳ, ಗಬ್ಬೂರ ಸ್ಥಳ, ಮದ್ದೂರ ಸ್ಥಳ, ಮಂತಳ ಗೂಡಿನ ಸ್ಥಳ, ಗವಿಂಜೆಯ ಸ್ಥಳ, ಅಲಂಪುರ ಸ್ಥಳ ಮೊದಲಾದ ವ್ಯಾಪಾರಿ ಕೇಂದ್ರಗಳ ಜನ ಸಭೆ ಸೇರಿ ಗವರೇಶ್ವರ ದೇವರ ಸೇವೆಗೆ ದತ್ತಿ ಕೊಟ್ಟ ಉಲ್ಲೇಖವಿದೆ. ಅಂದರೆ ಈ ಮೇಲಿನ ಎಲ್ಲಾ ಸ್ಥಳಗಳು ವ್ಯಾಪಾರದ ಪ್ರಮುಖ ಕೇಂದ್ರಗಳೆಂದು ತಿಳಿದುಬರುತ್ತದೆ(ಆ ಪ್ರದೇಶದ ಕನ್ನಡ ಶಾ. ಸಂ.೫, ಅಲ್ಲಂಪುರ).

ಸರಕುಗಳು : ಶಾಸನಗಳಲ್ಲಿ ಉಲ್ಲೇಖವಾಗಿರುವ ಜೋಳ, ಭತ್ತ, ಜೀರಿಗೆ, ಸಾಸಿವೆ, ಮೆಣಸು, ಅಲ್ಲ, ಶುಂಠಿ, ಅರಿಷಿಣ, ಯಾಲಕ್ಕಿ, ಮೆಂತ್ಯೆ, ಕಡಲೆ, ತೊಗರಿ, ಹತ್ತಿ, ಸಕ್ಕರೆ, ಉಪ್ಪು, ಲವಂಗ, ಚಂದನ, ಕಾಯಿಪಲ್ಯೆ, ತೆಂಗಿನಕಾಯಿ, ಇಂಗು, ಕೊತ್ತಂಬರಿ, ಬೆಳ್ಳುಳ್ಳಿ, ಈರುಳ್ಳಿ, ಗೋಧಿ, ಉದ್ದು ಹೀಗೆ ಮುಂತಾದವು ಸರಕುಗಳಾಗಿದ್ದವು.

ಇತರೇ ಅಳತೆ ಪದ್ಧತಿಗಳು

ಅಳತೆ : ಜೀರಿಗೆ, ಸಾಸವಿ, ಮೆಣಸು, ಶುಂಠಿ ಅರಿಷಿಣ ಮೊದಲಾದ ಸಂಬಾರ ವಸ್ತು ಹಾಗೂ ಭತ್ತ, ಅಕ್ಕಿ, ಕಡಲೆ, ಗೋಧಿ, ಉದ್ದು, ತೊಗರಿ, ಎಳ್ಳು ಇತ್ಯಾದಿ ದವಸ ದಾನ್ಯಗಳನ್ನು ಅಳೆಯಲು ಕೊಳಗ, ಬಳ್ಳ, ಮಾನ, ಅದನ, ಗಿದ್ದನ, ದಳ, ಹಾನೆ ಮುಂತಾದವು ಉಪಯೋಗಿಸಿ ಅಳೆಯುತ್ತಿದ್ದರು. ಇವುಗಳಲ್ಲಿ ಅತಿ ದೊಡ್ಡ ಮಾಪು ಕೊಳಗ ಅತಿ ಸಣ್ಣದು ಹಾನೆ ದಳ ಆಗಿರುತ್ತದೆ.

ರಾಜಾದಿತ್ಯನ ವ್ಯವಹಾರಗಣಿತದಲ್ಲಿ ಕರ್ನಾಟಕದ ಅಳತೆಗಳನ್ನು ಹೀಗೆ ವಿವರಿಸಿದ್ದಾನೆ.

೪ ಗಿದ್ದ = ೧ ಸೊಲ್ಲಗೆ

೪ ಸೊಲ್ಲಗೆ = ೧ ಮಾನ

೪ ಮಾನ = ೧ ಬಳ್ಳ

೪ ಬಳ್ಳ = ೧ ಕೊಳಗ

೨೦ ಕೊಳಗ = ೧ ಖಂಡುಗ

ತೂಕ : ಇಂಗು ಹಾಗೂ ಹತ್ತಿಗಳನ್ನು ತೂಗಿ ಮಾರುತ್ತಿದ್ದರು. ಭಾರ, ಮಳವೆ, ಪಲ, ಬಿಸಿಗೆ, ಕೊಡಿಗೆ, ಬೆಲ್ಲಳಿಗೆ ಮುಂತಾದವುಗಳು ತೂಕ ವಿಶೇಷಗಳಾಗಿವೆ. ವ್ಯವಹಾರ ಗಣಿತದಲ್ಲಿ ತೂಕಗಳನ್ನು ಹೀಗೆ ವಿವರಿಸಲಾಗಿದೆ.

೪ ಸುವರ್ಣ = ೧ ಕರ್ಷೆ

೪ ಕರ್ಷೆ = ೧ ಪಲ

೨೦ ಪಲ = ೧ ಬಿಸಿಗೆ

೫ ಬಿಸಿಗೆ = ೧ ತೊಲಿ

೨೦ ತೊಲಿ = ೧ ಭಾರ

ನಾಣ್ಯ : ವ್ಯಾಪಾರದಲ್ಲಿ ಚಲಾವಣೆಯಾಗುತ್ತಿದ್ದ ನಾಣ್ಯಗಳಲ್ಲಿ ಹೊನ್ನ(ಗದ್ಯಾಣ) ಹಾಗ, ಪಣ, ವೀಸ, ಬೇಳೆ, ಅಡ್ಡ, ಕಾಣಿ, ಕಾಗಿಣಿ, ತಾರ, ದ್ರಮ್ಮ ಪ್ರಮುಖವಾದವು. ವ್ಯವಹಾರ ಗಣಿತದಲ್ಲಿ ಬರುವ ನಾಣ್ಯದ ಕೋಷ್ಟಕ ಇಂತಿದೆ.

೪ ಕಾಣಿ = ೧ ವೀಸ

೫ ವೀಸ = ೧ ಹಾಗ

೪ ಹಾಗ = ೧ ಪಣ

೧೦ ಪಣ = ೧ ಗದ್ಯಾಣ

ಬಂಗಾರ, ಬೆಳ್ಳಿ ಹಾಗೂ ಇತರ ಲೋಹಗಳಿಂದ ಇವುಗಳನ್ನು ಟಂಕಿಸಲಾಗುತ್ತಿತ್ತು. ಈ ನಾಣ್ಯಗಳ ತೂಕವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಮತ್ತು ಒಬ್ಬ ಅರಸರಿಂದ ಮತ್ತೊಬ್ಬ ಅರಸರ ಕಾಲದಲ್ಲಿ ವ್ಯತ್ಯಾಸವನ್ನು ಕಾಣಬಹುದು. ದಾನವನ್ನು ಕೊಡುವಾಗ ಅನೇಕ ರೀತಿಯ ವೀಸ ಅಥವಾ ಹಣದ ಲೆಕ್ಕದಲ್ಲಿ ನೀಡಿರುತ್ತಾರೆ.

ಗಬ್ಬೂರಿನ ಕ್ರಿ.ಶ.೧೦೮೫ರ ಶಾಸನದಲ್ಲಿ ಮೇಳ್ಯಾಸಾರ್ಬ್ಬರು ಮತ್ತು ಇತರ ಹಳ್ಳಿಗಳ ಜನರು

ಸೇರಿ ಉತ್ತು, ಬಿತ್ತಿ ಬೆಳೆದ ಬೆಳೆಯಲ್ಲಿ ಸೂಡು ಜೋಳವನ್ನು ಹಾಗೂ ವರುಷ ಪ್ರತಿ ಬಳಸುವ ಒಂದೊಂದು ಕುಂಟಿಗೆ ಒಂದು ಹಣದ ಲೆಕ್ಕದಲ್ಲಿ ದಾನ ನೀಡಬೇಕೆಂದು ತೀರ್ಮಾನಿಸುತ್ತಾರೆ(ಕವಿಶಾಸಂ ೭, ಪು.೪೭). ಅದೇ ಗ್ರಾಮದ ಕ್ರಿ.ಶ.೧೧೯೦ರ ಶಾಸನದಲ್ಲಿ ಕಮ್ಮಟಕಾರರು ಬ್ರಹ್ಮಜಿನಾಲಯಕ್ಕೆ ವೀಸ-೧, ವೀಸ-೨, ಕಾಣೆ-೨, ದಾನ ನೀಡುತ್ತಾರೆ(ಕವಿಶಾಸಂ ೭, ಪು.೭೪). ಅದೇ ಗ್ರಾಮದ ಕ್ರಿ.ಶ.೧೧೪೮ರ ಶಾಸನದಲ್ಲಿ ಸಕಲ ಜೇಡ ಗೊತ್ತಳಿಗಳು ಸೇರಿ ತಮ್ಮ ಕುಲದೈವವಾದ ಗೋಜ್ಜೇಶ್ವರ ದೇವರ ಪೂಜೆ ಪುನಸ್ಕಾರ, ನೈವೇದ್ಯಕ್ಕೆ ೧ ಹಾಗ ಮತ್ತು ಮಲ್ಲಿಕಾರ್ಜುನ ದೇವರಿಗೆ ೧-ವೀಸ ಆರು ವೀಸವನ್ನು ಬಿಡುತ್ತಾರೆ. ಸೂಳೆ ಹೆಮವ್ವ ಜೇಡೇಶ್ವರ ದೇವರಿಗೆ ಒಂದು ಹಣವನ್ನು ನೀಡುತ್ತಾಳೆ(ಕವಿಶಾಸಂ ೭, ಪು.೮೧). ಚಂದನಕೇರಿಯ ೧೨ನೇ ಶತಮಾನದ ಶಾಸನದಲ್ಲಿ ಹೆಮ್ಮಡಿ ದೇವರಸರನು ತಾನು ಪ್ರತಿಷ್ಠೆ ಮಾಡಿದ ಹೆಮ್ಮೇಶ್ವರ ದೇವರಿಗೆ ಭೂಮಿ ಹಾಗೂ ಭತ್ತ ಮಾರಿದಲ್ಲಿ, ಕೊಂಡಲ್ಲಿ ೨ ಕಾಣೆ ಹೆರಿಗೆ ೫೦ ಎಲೆ ದಾನ ನೀಡುತ್ತಾನೆ(ಕವಿಶಾಸಂ ೭, ಪು.೧೦೮). ಅಲ್ಲದೆ ಹಣ್ಣು-ಹಂಪಲು, ಕಾಯಿಪಲ್ಲೆ, ಈರುಳ್ಳಿ, ಹುಲ್ಲುಗಳನ್ನು ಹಿಡಿ ಇಲ್ಲದೆ ಸೂಡುಗಳಾಗಿ ಮಾರುತ್ತಿದ್ದರು ಎಂದು ತಿಳಿದುಬರುತ್ತದೆ.

ವರ್ತಕರ ಅಧಿಕಾರ ಮತ್ತು ನ್ಯಾಯ ಸ್ವರೂಪ

ಸಂತೆ, ಪೇಟೆ, ಪಟ್ಟಣಗಳ ನಿರ್ಮಾಣ ಯೋಜನೆ ಹಾಗೂ ಅದರ ಅಧಿಕಾರ, ನ್ಯಾಯ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರವನ್ನು ಪಡೆದುಕೊಂಡಿರುವ ನಾಯಕರು, ಗೌಡರು, ಸಾಮಂತ ಅರಸರು ಹಾಗೂ ಪಟ್ಟಣಸ್ವಾಮಿ, ಮಂಡಲಸ್ವಾಮಿ, ನಾಡ ಸ್ವಾಮಿಯರದಾಗಿರುತ್ತಿತ್ತು. ಇವರು ತಮ್ಮ ಕಾರ್ಯಗಳನ್ನು ಮಾಡುವುದರ ಮೂಲಕ ಆರ್ಥಿಕ ರಂಗದಲ್ಲಿ ಏರುಪೇರು ಆಗದಂತೆ ನೋಡಿಕೊಳ್ಳುವುದು ಮತ್ತು ಆರ್ಥಿಕ ರಂಗದಲ್ಲಿ ಅಭಿವೃದ್ಧಿಪಡಿಸುವುದು ಇವರ ಮುಖ್ಯ ಕರ್ತವ್ಯವಾಗಿತ್ತು.

ಪಟ್ಟಣಸ್ವಾಮಿ : ಯಾವುದೇ ವಿನಿಮಯ, ವರ್ತಕ ಪ್ರಕಾರದವನು ಈ ಪಟ್ಟಣಸ್ವಾಮಿ ಸ್ಥಾನವನ್ನು ಅಲಂಕರಿಸಬಹುದಾಗಿತ್ತು. ಪಟ್ಟಣಸ್ವಾಮಿ ಎನ್ನುವುದು ಒಂದು ಸ್ಥಾನ ಅಥವಾ ಹುದ್ದೆ. ಸಂತೆಯ ನಿರ್ಮಾಣ ಮತ್ತು ಸಂತೆಯ ಸಂಯೋಜನ ಕಾರ್ಯಗಳನ್ನು ಮಾಡುವುದು ಇವನ ಕರ್ತವ್ಯಗಳಾಗಿದ್ದವು. ಕೆಲವು ಬಾರಿ ಶೆಟ್ಟಿಗಳು ಪಟ್ಟಣ ಸ್ವಾಮಿಗಳಾಗಿದ್ದ ಉಲ್ಲೇಖ ಕಂಡುಬರುತ್ತದೆ. ಶ್ರವಣಬೆಳ್ಗೊಳ ಶಾಸನದಲ್ಲಿ ನಾಗದೇವನು, ಮಲ್ಲಸೆಟ್ಟಿ ಪಟ್ಟಣ ಸ್ವಾಮಿಯಾದ ಉಲ್ಲೇಖಗಳಿವೆ.

ಮಂಡಲಸ್ವಾಮಿ : ಮಂಡಲಸ್ವಾಮಿ ಸ್ಥಾನ ಪಟ್ಟಣಸ್ವಾಮಿಗಿಂತ ಉನ್ನತವಾಗಿದ್ದಿತು. ನಾಡಿನ ಒಂದು ಭಾಗವಾದ ಮಂಡಲದಲ್ಲಿ ಇವರು ಸಂತೆ ಮಾಡಿಸುವ, ಪಟ್ಟಣ ಕಟ್ಟಿಸುವ ಕರ್ತವ್ಯ ಇವರದಾಗಿತ್ತು. ಉದಾ : ನಾಡನಾಲಗೆಯ ಮುದ್ದಿನಸೆಟ್ಟಿಯ ಮಗ ಮಂಡಳಸ್ವಾಮಿ ಪಟ್ಟಣ ಕಟ್ಟಿಸಿ, ಸಂತೆ ಕೂಡಿಸಿದ ಉಲ್ಲೇಖವಿದೆ. ಇವರ ಕಾರ್ಯಕ್ಷೇತ್ರ ಮಂಡಳ ಅಥವಾ ಪಟ್ಟಣಕ್ಕೆ ವ್ಯಾಪಿಸಿತ್ತೆಂದು ಹೇಳಬಹುದು.

ನಾಡಸ್ವಾಮಿ : ಇವನು ಪಟ್ಟಣಸ್ವಾಮಿ, ಮಂಡಲ ಸ್ವಾಮಿಗಿಂತ ಉನ್ನತ ಸ್ಥಾನ ನಾಡಸ್ವಾಮಿಯದಾಗಿತ್ತು. ಇಡೀ ನಾಡಿನ ಪಟ್ಟಣಗಳ, ಸಂತೆಗಳ ಕೆಲಸ ಇವನದಾಗಿತ್ತು.

ದೇವದುರ್ಗದ ಗಲಗ್ ಗ್ರಾಮದ ೧೭೨೮ರ ಶಾಸನದಲ್ಲಿ ಗಲಗು ಮತ್ತು ರಾಯದುರ್ಗದ ಸೀಮೆಯಲ್ಲಿ ಯಾರು ದಂಡವನ್ನು ತೆಗೆದುಕೊಳ್ಳಬಾರದೆಂದು, ನ್ಯಾಯದಿಂದ ಕೊಡಬೇಕೆಂದೂ ಕಟ್ಟಳೆ ವಿಧಿಸಿದೆ(ಕವಿಶಾಸಂ ೭, ಪು.೧೦೩). ಅಂದರೆ ಇದರಿಂದ ಆಗಿನ ಕಾಲದಲ್ಲಿ ಅಧಿಕಾರ ಮತ್ತು ನ್ಯಾಯದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಇದು ಅಲ್ಲಿಯ ಸಾಮಾಜಿಕ ವ್ಯವಸ್ಥೆಗೆ ಸಾಕ್ಷಿಯಾಗಿದೆ.

ಅಧ್ಯಾಯ ೬

ದೇವದುರ್ಗ ತಾಲ್ಲೂಕಿನ ಅವಶೇಷಗಳು

೬

ದೇವದುರ್ಗ ತಾಲ್ಲೂಕಿನ ಅವಶೇಷಗಳು

೬.೧. ದೇವಾಲಯಗಳು

ಚಾಲುಕ್ಯ ಯುಗ

ಉತ್ತರ ಭಾರತದಲ್ಲಿ ಗುಪ್ತರ ಪೋಷಣೆಯಲ್ಲಿ ದೇವಾಲಯಗಳ ನಿರ್ಮಾಣ ನಡೆಯುತ್ತಿರುವ ಕಾಲದಲ್ಲಿಯೇ ದಕ್ಷಿಣದಲ್ಲಿ ಚಾಲುಕ್ಯರ ನೇತೃತ್ವದಲ್ಲಿ ದೇವಾಲಯಗಳ ರಚನೆ ಮುಂದುವರಿಯಿತು. ಈ ರಚನೆಗಳನ್ನು ಗರ್ಭಗೃಹದಿಂದ ಹಿಡಿದು ಹಲವು ಹಂತಗಳಲ್ಲಿ ಕಾಣಬಹುದು.

ಡಾ.ತಿಪ್ಪೇರುದ್ರಸ್ವಾಮಿಯವರು ಈ ಬಗ್ಗೆ ಬರೆಯುತ್ತಾ ಮಟ್ಟಸವಾದ ಮೇಲ್ಛಾವಣಿ (Flat roof) ಪ್ರಾಚೀನ ಕಾಲದಲ್ಲಿ ಪ್ರದಕ್ಷಿಣ ಪಥಕ್ಕೆ ಅಪಕಾಶವಿರಲಿಲ್ಲ. ದೂರದಿಂದ ನೋಡಿದರೆ ದೇವಾಲಯಗಳೆಂದು ಗುರುತಿಸುವುದಕ್ಕೆ ಆಗದಂತಹ ಸಾಮಾನ್ಯ ರಚನೆ ಅವುಗಳದು. ನಂತರ ಗರ್ಭಗೃಹ ಬೇರೆಯಾಯಿತು. ಅವುಗಳ ಮೇಲೆ ಶಿಖರಗಳ ಗರ್ಭಗೃಹದ ಮುಂದಿನ ಕಂಬಗಳಿಂದ ಕೂಡಿದ ರಂಗ ಮಂಟಪ. ಕೆಲವು ವೇಳೆ ಗರ್ಭಗೃಹಕ್ಕೆ ಮಧ್ಯೆ ಅವೆರಡನ್ನು ಸೇರಿಸುವಂತೆ ಇನ್ನೊಂದು ಚಿಕ್ಕಮಂಟಪ ಏರ್ಪಟ್ಟು ಸುಕನಾಸಿ ಎನಿಸಿಕೊಂಡಿತು.

ಹೊರಭಾಗದಲ್ಲಿ ಸುತ್ತು ಗೋಡೆಗಳಿಂದ ಆವೃತವಲ್ಲದ, ಆದರೆ ಕಂಬಗಳಿಂದ ಕೂಡಿದ ಅರ್ಧಮಂಟಪ ನಿರ್ಮಿತವಾಗತೊಡಗಿತು. ಇದನ್ನು ಮುಖಮಂಟಪ ಎಂದು ಕರೆದರು ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಕ್ರಿ.ಶ.೬ನೇ ಶತಮಾನದಲ್ಲಿ ವಾಸ್ತುಶಿಲ್ಪದಲ್ಲಿ ನಾಗರ, ದ್ರಾವಿಡ, ವೇಸರ ಎಂಬ ಶೈಲಿಗಳು ಕಂಡುಬಂದವು. ನಾಗರ-ದ್ರಾವಿಡ ಶೈಲಿಗಳೆರಡಲ್ಲೂ ದೇವಾಲಯಗಳ ಮೇಲೆ ಶಿಖರಗಳಿರುತ್ತವೆ. ವೇಸರ ದೇವಾಲಯಗಳಲ್ಲಿ ಶಿಖರವಿಲ್ಲದೆ ಮೇಲ್ಛಾವಣೆ ಮಾತ್ರ ಇರುತ್ತದೆ. ನಾಗರಶೈಲಿಯಲ್ಲಿ ಎದ್ದುಕಾಣುವ ಮುಖ್ಯ ಅಂಶವೆಂದರೆ ಬಾಗಿದ ರೇಖೆಯ ಆಕಾರದ ಶಿಖರ ಮತ್ತು ಅದರ ಮೇಲೆ ಶೃಂಗದ ಸಂಕೇತಗಳನ್ನುಳ್ಳ ಕಳಶ(ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ.ತಿಪ್ಪೇರುದ್ರಸ್ವಾಮಿ, ಪು.೨೯, ೩೦, ೫೨೮).

ಈ ನನ್ನ ಅಧ್ಯಯನ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ಬಾದಾಮಿ ಚಾಲುಕ್ಯರ ದೇವಾಲಯಗಳಾಗಲೀ ಅಥವಾ ದೇವಾಲಯದ ಅವಶೇಷಗಳಾಗಲಿ ದೊರತಿಲ್ಲ. ಬಾದಾಮಿ ಚಾಲುಕ್ಯರ ನಂತರ ರಾಷ್ಟ್ರಕೂಟರು

ಆಳ್ವಿಕೆಗೆ ಬಂದರು. ರಾಷ್ಟ್ರಕೂಟರ ಒಂದನೇ ಕೃಷ್ಣ ಬಾದಾಮಿ ಚಾಲುಕ್ಯ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟರ ಆಳ್ವಿಕೆಯನ್ನು ಆರಂಭಿಸುತ್ತಾನೆ.

ರಾಷ್ಟ್ರಕೂಟರ ದೇವಾಲಯಗಳು

೧. ನಾಗೋಲಿ ಬಸವಣ್ಣ ದೇವಾಲಯ

ರಾಷ್ಟ್ರಕೂಟರ ಕಾಲಕ್ಕೆ ಸೇರಿಸಬಹುದಾದ ದೇವಾಲಯವೊಂದು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ನಾಗೋಲಿ ಎಂಬ ಸ್ಥಳದಲ್ಲಿ ಕಂಡುಬಂದಿದೆ. ಈ ದೇವಾಲಯದ ಬಳಿಯಿದ್ದ ಶಾಸನ ಮುಚ್ಚಿ ಹೋಗಿರುವುದರಿಂದ ಅದರ ನಿರ್ದಿಷ್ಟ ಕಾಲವನ್ನು ನಿರ್ಧರಿಸಲು ಅಸಾಧ್ಯವಾಗಿದೆ. ಆದರೂ ದೇವಾಲಯದಲ್ಲಿನ ಕಂಬಗಳು, ಬಾಗಿಲವಾಡ ಇವುಗಳ ರಚನಾ ರೀತಿಯನ್ನು ಇತರೆಡೆಯ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ದೇವಾಲಗಳಿಗೆ ಹೋಲಿಸಿ ಇದನ್ನು ರಾಷ್ಟ್ರಕೂಟರ ದೇವಾಲಯವೆಂದು ಖಚಿತಪಡಿಸಿಕೊಳ್ಳಬಹುದಾಗಿದೆ. ಈ ದೇವಾಲಯವು ಮೂಲತಃ ಈಶ್ವರ ದೇವಾಲಯವಾಗಿದೆ. ಆದರೆ ಇಲ್ಲಿಯ ಜನತೆ ಇದನ್ನು ಬಸವಣ್ಣ ದೇವಾಲಯವೆಂದು ಕರೆಯುತ್ತಾರೆ. ಈ ಬಸವಣ್ಣ ದೇವಾಲಯವು ಪೂರ್ವಾಭಿಮುಖವಾಗಿದ್ದು, ಸಮಾನಾಂತರವಾಗಿ ಗರ್ಭಗೃಹ, ತೆರೆದ ಅಂತರಾಳ, ನವರಂಗ ಮಂಟಪವನ್ನು ಹೊಂದಿದೆ.

ಗರ್ಭಗೃಹ : ಗರ್ಭಗೃಹ ದೇವಾಲಯದ ಒಂದು ಪವಿತ್ರ ಭಾಗ. ನಾಗೋಲಿ ಗ್ರಾಮದ ಈ ಈಶ್ವರ ದೇವಾಲಯದ ಗರ್ಭಗೃಹವು ಪೂರ್ವಾಭಿಮುಖವಾಗಿ ಚೌಕಾಕಾರದಲ್ಲಿದೆ. ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಲಿಂಗವನ್ನು ಇರಿಸಲಾಗಿದೆ. ಈ ದೇವಾಲಯದ ಬಾಗಿಲವಾಡದಲ್ಲಿ ಗಜಲಕ್ಷ್ಮಿ ಶಿಲ್ಪ, ಅರ್ಧಕಂಬಗಳು, ದ್ವಾರಪಾಲಕರು ಮತ್ತು ಚೌರಿಧಾರಿಗಳ ಶಿಲ್ಪ ಮುಂತಾದವುಗಳನ್ನು ಕೆತ್ತಲಾಗಿದೆ.

ಅಂತರಾಳ : ಗರ್ಭಗೃಹದ ನಂತರ ಬರುವ ಸ್ಥಳವೇ ಅಂತರಾಳವಾಗಿದೆ. ನಾಗೋಲಿಯ ಈಶ್ವರ ದೇವಾಲಯದ ಅಂತರಾಳವು ತೆರೆದ ಅಂತರಾಳವಾಗಿದೆ. ಈ ಅಂತರಾಳದಲ್ಲಿ ಎರಡು ಕಂಬಗಳಿದ್ದು, ಅವನ್ನು ಚೌಕಾಕಾರದ ಪೀಠದ ಮೇಲೆ ಇರಿಸಲಾಗಿದೆ. ಈ ಕಂಬಗಳು ಆರಂಭದಲ್ಲಿ ಚೌಕಾಕಾರದ ಬಂಡಿಯನ್ನು ಹೊಂದಿದ್ದು, ಮೇಲೆ ೧೬ ಮೂಲೆಗಳನ್ನು ಪಡೆದು, ಮತ್ತೆ ಚೌಕಾಕಾರ ಪಿಂಡಿಯಾಗಿ ಮೇಲೆ ಕುಂಭ, ಕಂಠ, ಮುಚ್ಚಳ ಹೊಂದಿದೆ. ಇದರ ಬೋದುಗೆಯು ಸರಳ ಬೋದುಗೆಯಾಗಿದೆ.

ನವರಂಗ ಮಂಟಪ : ಚಾಲುಕ್ಯರ ದೇವಾಲಯಗಳಲ್ಲಿ ಸಭಾಮಂಟಪದ ಮಾಳಿಗೆಯು ನೆಲಕ್ಕೆ ಸಮಾನಾಂತರವಾಗಿ ಮತ್ತು ಇಕ್ಕೆಲಗಳ ಮಂಟಪಗಳ ಮಾಳಿಗೆ ಇಳಿಜಾರಾಗಿರುವುದನ್ನು ಕಂಡಿದ್ದೇವೆ. ರಾಷ್ಟ್ರಕೂಟರ ದೇವಾಲಯಗಳಲ್ಲಿ ಈ ವ್ಯವಸ್ಥೆಗೆ ಬದಲಾಗಿ ಇಕ್ಕೆಲಗಳಲ್ಲಿ ಮಂಟಪಗಳ ಮಾಳಿಗೆಗಳು ನೆಲಕ್ಕೆ ಸಮಾಂತರವಾಗಿದೆ. ಈ ಮಾಳಿಗೆಯ ಮೇಲೆ ಸುಮಾರು ಅರ್ಧ ಮೀಟರ್ ಎತ್ತರದ

ಗೋಡೆಯನ್ನು ನಿರ್ಮಿಸಲಾಗಿದೆ. ಹಾಗೂ ಅದರ ಮೇಲೆ ಶಿಲ್ಪಗಳ ಕೆತ್ತನೆ ಇರುತ್ತದೆ(ಬಾದಾಮಿ ಸಾಂ.ಅ.ಡಾ. ಶಿಲಾಕಾಂತ ಪತ್ತಾರ, ಪು.೨೬೨-೨೬೩). ನವರಂಗ ಮಂಟಪದ ಕಂಬಗಳು ಸೂಕ್ಷ್ಮ ಕೆತ್ತನೆಯನ್ನು ಹೊಂದಿರುವುದು ಇವರ ಇನ್ನೊಂದು ವಿಶೇಷ. ನಾಗೋಲಿಯ ಗ್ರಾಮದ ಈಶ್ವರ ದೇವಾಲಯದ ನವರಂಗ ಮಂಟಪದ ಕಂಬಗಳು ತುಂಬಾ ಸುಂದರ ಕೆತ್ತನೆಯನ್ನು ಹೊಂದಿವೆ. ಮತ್ತು ಈ ಮಂಟಪದ ಮಧ್ಯದಲ್ಲಿ ಎರಡು ನಂದಿ ವಿಗ್ರಹಗಳಿವೆ. ಅದರಲ್ಲಿ ಒಂದು ನಂದಿಯು ತುಂಬಾ ದೊಡ್ಡದಾಗಿದೆ. ಈ ನಂದಿಯ ಕೊರಳಲ್ಲಿ ಗಂಟೆಗಳ ಸರವನ್ನು ಕೆತ್ತಲಾಗಿದೆ. ನವರಂಗ ಮಂಟಪದ (ಉತ್ತರಭಾಗ) ಎಡಭಾಗದಲ್ಲಿ ಒಂದು ಈಶ್ವರಲಿಂಗವಿದೆ. ಹಾಗೂ ಇದರ ಪಕ್ಕದಲ್ಲಿ ಒಂದು ಭೈರವ ಶಿಲ್ಪವಿದ್ದು, ಅದರ ನಾಲ್ಕು ಕೈಗಳಲ್ಲಿ ಡಮರು, ತ್ರಿಶೂಲ, ಖಡ್ಗ ಇದೆ. ಒಂದು ಕೈ ಅಭಯ ಹಸ್ತದ ಸಂಕೇತದಲ್ಲಿದೆ.

ಈ ದೇವಾಲಯದ ನವರಂಗ ಮಂಟಪದ ಹೊರಗಿನ ಬಾಗಿಲವಾಡವು ೩ ಭಾಗಗಳನ್ನು ಹೊಂದಿದ್ದು, ಬಾಗಿಲವಾಡದ ತಳಭಾಗದಲ್ಲಿ ಪುರುಷ ಮತ್ತು ಸ್ತ್ರೀ ದ್ವಾರಪಾಲಕರನ್ನು ಬಿಡಿಸಿದೆ. ಪುರುಷನು ಆಲೀಡ ಭಂಗಿಯಲ್ಲಿ ನಿಂತು ಬಲಗೈಯನ್ನು ಸೊಂಟದ ಮೇಲೆ ಇರಿಸಿಕೊಂಡಂತಿದೆ. ತ್ರಿಶೂಲ, ಗದೆಯನ್ನು ಬಿಡಿಸಿದೆ. ಸ್ತ್ರೀಯು ಚಾಮರದಾರಿಯಾಗಿರುವಂತೆ ಬಿಡಿಸಿದೆ. ಬಿಂಬದ ಮೇಲಿನ ಭಾಗದಲ್ಲಿ ಬಳ್ಳಿ, ಮಾಲೆ(ಹಾರ), ಕುಬ್ಜರು, ಉಬ್ಬು ಕಂಬಗಳು, ಮುನಿಗಳು ವಿವಿಧ ಭಂಗಿಗಳಲ್ಲಿ ನಿಂತಿರುವಂತೆ, ಆಡುವಂತೆ, ಕುಣಿಯುವಂತೆ ಬಿಡಿಸಿದೆ. ಉಬ್ಬು ಕಂಬವು ತಳಭಾಗದಲ್ಲಿ ಸ್ತ್ರೀ ಪುರುಷ ದ್ವಾರಪಾಲಕರನ್ನು ಪ್ರತ್ಯೇಕಿಸಿದ್ದು, ಚೌಕ ಅಷ್ಟ ಚೌಕಾಕಾರವಾಗಿ ಮೇಲೆ ಹೋಗಿದೆ. ಮೇಲೆ ಕಳಸದ ನಂತರ ಮುಚ್ಚಳ ಮತ್ತು ಫಲಕ ಭಾಗವನ್ನು ಹೊಂದಿದೆ. ಫಲಕದ ಮೇಲೆ ಬೋದುಗೆ ಬಂದಿದೆ. ಮುನಿಗಳ ಚಿಕ್ಕ ಶಿಲ್ಪದಲ್ಲಿ ಎರಡು ಕೈಯಲ್ಲಿ ೪ ಮುನಿಗಳನ್ನು ತೋರಿಸಲಾಗಿದೆ. ಸುರಳಿ ಸುರಳಿಯಾಗಿ ಮೇಲೆ ಬಂದಿರುವ ಬಳ್ಳಿಯು ಕಂಬದ ಮೇಲೆ ಹೋಗಿ ಲಲಾಟ ಮಧ್ಯ ಭಾಗದಲ್ಲಿ ಇನ್ನೊಂದು ಕಡೆ ಬಂದಿರುವ ಬಳ್ಳಿಗೆ ಸೇರಿಕೊಂಡಿದೆ. ವೃತ್ತಾಕಾರದ ಸುರಳಿಯೊಳಗೆ ಹೂವಿನ ಮೊಗ್ಗುಗಳನ್ನು ಬಿಡಿಸಲಾಗಿದೆ. ಮೂಲೆ ಲಲಾಟ ಬಿಂಬದಲ್ಲಿ ಹೂಬಳ್ಳಿಯ ಭಾಗದ ಮೇಲೆ ಗಜಲಕ್ಷ್ಮೀ ಶಿಲ್ಪವಿದೆ. ಎರಡು ಕಡೆ ಹಾರುತ್ತಿರುವ ಗಂಧರ್ವರನ್ನು ಬಿಡಿಸಲಾಗಿದೆ. ಗಜಲಕ್ಷ್ಮಿಯ ಶಿಲ್ಪವು ಬೋದುಗೆಗೆ ಸಮನಾಂತರವಾಗಿದ್ದು, ಬೋದುಗೆ ಮೇಲೆ ಕಪೋತ ಬಂಧ ಬಂದಿದೆ. ಆ ಕಪೋತ ಅಲಂಕಾರದಲ್ಲಿ ಮುಂಚಾಚಿರುವ ನಾಶಿಯಗಳನ್ನು ಬಿಡಿಸಿದೆ. ಹಾಗೂ ೪ ಗಣೇಶ ವಿಗ್ರಹಗಳನ್ನು ಕೆತ್ತಲಾಗಿದೆ.

ಚಂದ್ರಶಿಲೆ : ನಾಗೋಲಿಯ ದೇವಾಲಯದಲ್ಲಿ ನೆಲಕ್ಕೆ ಹಾಸಿರುವ ಅರ್ಧ ವೃತ್ತಾಕಾರವಾಗಿದ್ದ ಚಂದ್ರಶಿಲೆಯು ಬಹು ಸುಂದರವಾಗಿದ್ದು, ಎರಡು ಕಡೆಗಳಲ್ಲಿ ಸುಂದರವಾದ ಕಮಲದ ಮೊಗ್ಗುಗಳನ್ನು ಬಿಡಿಸಿದ ಹಾಗೂ ಎರಡೂ ಕಡೆ ಶಂಕನಿಧಿ, ಪದ್ಮನಿಧಿಗಳನ್ನು ಬಿಡಿಸಲಾಗಿದೆ.

ಕಂಬಗಳು : ರಾಷ್ಟ್ರಕೂಟರ ದೇವಾಲಯಗಳಲ್ಲಿ ಮುಖ್ಯವಾಗಿ ಎರಡು ಬಗೆಯ ಕಂಬಗಳನ್ನು ಕಾಣುತ್ತೇವೆ. ಒಂದು ಪ್ರಕಾರದ ಕಂಬಗಳು ಚೌಕಾಕಾರವಾಗಿದ್ದು, ಅವುಗಳ ಕಾಂಡ ಭಾಗದಲ್ಲಿ ಅಡ್ಡಪಟ್ಟಿಕೆಗಳಿರುತ್ತವೆ. ಅಡ್ಡ ಪಟ್ಟಿಕೆಗೆ ಹೊಂದಿಕೊಂಡು ಮೇಲ್ಭಾಗದಲ್ಲಿ ತ್ರಿಕೋನಾಕಾರದ ಅಲಂಕಾರವಿರುತ್ತದೆ. ಎರಡನೆಯ ವಿಧದ ಕಂಬಗಳ ಕೆಳಭಾಗದಲ್ಲಿ ಚೌಕಾಕಾರವಾಗಿದ್ದು, ಮೇಲ್ಭಾಗದಲ್ಲಿ ದುಂಡಾಗಿರುತ್ತದೆ.

ನಾಗೋಲಿಯ ದೇವಾಲಯದ ನವರಂಗ ಮಂಟಪದಲ್ಲಿ ನಾಲ್ಕು ಕಂಬಗಳಿದ್ದು, ಅವು ಚೌಕಾಕಾರದ ಎತ್ತರವಾದ ಪೀಠವನ್ನು ಹೊಂದಿದೆ. ಪೀಠದಲ್ಲಿ ಅನೇಕ ಭಾಗಗಳಿದ್ದು, ಅದರ ಮೇಲ್ಭಾಗವು ಕಪೋತದ ರೀತಿಯಲ್ಲಿದ್ದು, ನಾಶಿಗಳನ್ನು ಹೊಂದಿದೆ. ಕಂಬದ ತಳಭಾಗವು ಚೌಕಾಕಾರದಲ್ಲಿದ್ದು, ಅದರ ಮೇಲಿನ ಬಾಗವು ೧೬-೮ ಮುಖಗಳುಳ್ಳ ಪಟ್ಟಿಗಳನ್ನು ಹೊಂದಿದೆ. ಅದರ ಮೇಲ್ಭಾಗದಲ್ಲಿ ಮತ್ತೆ ಚೌಕಾಕಾರದ ಪಿಂಡಿ ಬಂದಿದ್ದ ಅದರಲ್ಲಿ ಮೂಲಾಲಂಕಾರ ಬಂದಿದೆ. ಮಾಲಾಲಂಕಾರ ಭಾಗದಲ್ಲಿ ಉಬ್ಬು ಶಿಲ್ಪಗಳನ್ನು ಬಿಡಿಸಿದೆ. ಅದರ ಮೇಲ್ಭಾಗದಲ್ಲಿ ಕುಂಭವಿದ್ದು, ಆ ಕುಂಭದ ತಳಭಾಗದ ಸುತ್ತಲು ನಾಶಿ ಅಲಂಕಾರಗಳಿವೆ. ಕುಂಭವು ೧೨ ಮುಖಗಳನ್ನು ಹೊಂದಿದ್ದು, ಅದರ ಮೇಲೆ ಕಂಠವಿದ್ದು, ಕಂಠದ ಮೇಲೆ ಮುಚ್ಚಳವಿದೆ. ಮುಚ್ಚಳದ ಮೇಲೆ ೪ ಮೂಲೆಗಳ ಬೋದುಗೆ ಬಂದಿದೆ. ಈ ಕಂಬಗಳಲ್ಲದೆ ಬಾಗಿಲವಾಡದಲ್ಲಿ, ಭಿತ್ತಿಯಲ್ಲಿ ಅರ್ಧಕಂಬಗಳನ್ನು ಸಹ ಕಾಣಬಹುದಾಗಿದೆ. ಈ ದೇವಾಲಯದ ಬಿತ್ತಿಯಲ್ಲಿ ಒಟ್ಟು ೧೦ ಭಿತ್ತಿಕಂಬಗಳಿವೆ.

ಭಿತ್ತಿ : ರಾಷ್ಟ್ರಕೂಟದ ದೇವಾಲಯಗಳು ಸಮತಲ ಮೇಲ್ಮೈಯ ಗೋಡೆಗಳನ್ನು ಹೊಂದಿರುವುದೇ ಹೆಚ್ಚು. ಈ ದೇವಾಲಯದ ಹೊರ ಗೋಡೆಯಲ್ಲಿ ದೇವಕೋಷ್ಠಗಳಿರುತ್ತವೆ. ಇವು ಆಳವಾಗಿದ್ದು, ಇದರಲ್ಲಿ ಅನೇಕ ಶಿಲ್ಪಗಳಿರುತ್ತವೆ. ನಾಗೋಲಿಯ ದೇವಾಲಯದ ಭಿತ್ತಿಯನ್ನು ಚಿಕ್ಕ ಚಿಕ್ಕ ಗಟ್ಟಿ ಕಲ್ಲುಗಳಿಂದ ಕಟ್ಟಲಾಗಿದೆ. ಇದರ ಗರ್ಭಗೃಹದ ಗೋಡೆಯು ಹಾಸು ಬಂಡೆಗಳಿಂದ ನಿರ್ಮಿಸಿದೆ. ಈ ಭಿತ್ತಿಯಲ್ಲಿ ಅನೇಕ ಅರ್ಧಕಂಬಗಳಿವೆ. ಈ ದೇವಾಲಯದ ಗೋಡೆಯಲ್ಲಿ ಒಂದು ವೀರಗಲ್ಲು ಇದೆ. ಅದರಲ್ಲಿ ವೀರನು ಕೈಯಲ್ಲಿ ಗುರಾಣಿ, ಖಡ್ಗ ಹಿಡಿದು ಹೋರಾಡುವ ದೃಶ್ಯವನ್ನು ಬಿಡಿಸಿದೆ. ಭಿತ್ತಿಯ ಮೇಲಿನ ಭಾಗದ ಮೂಲೆಗಳಲ್ಲಿ ಗಾರೆಯಿಂದ ಮಾಡಿದ ೬ ನಂದಿ ವಿಗ್ರಹಗಳಿವೆ.


ಶಿಖರ : ರಾಷ್ಟ್ರಕೂಟರ ಕಾಲದ ಈ ದೇವಾಲಯದಲ್ಲಿದ್ದ ಮೂಲ ಶಿಖರ ಈಗ ಇಲ್ಲ. ನಂತರ ಕಾಲದಲ್ಲಿ ರಚಿತವಾಗಿರುವ ಶಿಖರವಿದೆ. ಈ ದೇವಾಲಯದಲ್ಲಿ ಶಿಖರವಿದ್ದು, ಶಿಖರದ ಮೇಲೆ ಒಂದು ಕಳಶವನ್ನು ಇರಿಸಲಾಗಿದೆ.

ಇತರೆ : ನಾಗೋಲಿಯ ಈ ಬಸವಣ್ಣ ದೇವಾಲಯದ ಮುಂದೆ ಪ್ರಾಕಾರದ ಗೋಡೆಯಿದ್ದು, ಅಲ್ಲಿ ಅನೇಕ ನಾಗರ ಕಲ್ಲುಗಳನ್ನು ನಿಲ್ಲಿಸಲಾಗಿದೆ. ದೇವಾಲಯದ ಬಲಭಾಗದಲ್ಲಿ ಶಾಸನವಿದ್ದು, ಅದು ಮಣ್ಣಿನಲ್ಲಿ ಮುಚ್ಚಿಹೋಗಿದೆ.

ಚಂದನಕೇರಿಯ ಶಾಲೆಯ ಮುಂದಿನ ಭಾಗದಲ್ಲಿ ರಾಷ್ಟ್ರಕೂಟರ ಬಾಗಿಲವಾಡದ ಲಲಾಟದ ಭಾಗ ಉಳಿದಿದೆ. ಇದರ ಮಧ್ಯ ಗಜಲಕ್ಷ್ಮಿ ಶಿಲ್ಪವಿದ್ದು, ಅದರ ಎರಡು ಕಡೆ ಕಳಶ ಮತ್ತು ಶಂಕನಿಧಿ, ಪದ್ಮನಿಧಿ ಮುಂತಾದ ಶಿಲ್ಪಗಳನ್ನು ಹೊಂದಿದೆ. ಈ ಗಜಲಕ್ಷ್ಮಿಯ ಶಿಲ್ಪದ ಕೆಳಗೆ ಕಪೋತ ಬಂದಿದ್ದು ಇದರ ಎರಡೂ ಕಡೆ ನಾಶಿಯಾಲಂಕಾರವಿದೆ. ಕಪೋತದ ಕೆಳಗೆ ಹಂಸಮಾಲಾ ಇದೆ. ಅದರ ಕೆಳಗಿನ ಶಾಖೆಯಲ್ಲಿ ಪುಷ್ಪಗಳೂ, ಅದರ ಕೆಳಗೆ(ವಲ್ಲಿ) ವಲ್ಲೀಶಾಖೆ ಬಂದಿದೆ. ಲಲಾಟ ಫಲಕದ ಎರಡೂ ಕಡೆ ಕಂಬ ಬಂದಿದ್ದು, ಅದರ ಮೇಲಿನ ಫಲಕ ಮತ್ತು ಬೋದುಗೆ ಮಾತ್ರ ಉಳಿದಿದೆ. ಶಿಲ್ಪಗಳ ಅಲಂಕಾರ, ಬಳಸಿರುವ ಕಲ್ಲಿನ ಜಾತಿ ಹಾಗೂ ಹಂಸಮಾಲಾ ಉದಾಹರಣೆಗಳಿಂದ ಇದರ ಕಾಲವನ್ನು ಕ್ರಿ.ಶ.೮-೯ನೆಯ ಶತಮಾನವೆಂದು ನಿರ್ಧರಿಸಬಹುದು.

ಈ ಅವಶೇಷಗಳಿಂದ ಚಂದನಕೇರಿಯಲ್ಲೂ ಒಂದು ರಾಷ್ಟ್ರಕೂಟರ ದೇವಾಲಯ ಇದ್ದಿರಬಹುದೆಂದು ಊಹಿಸಬಹುದು. ಇದೇ ರೀತಿ ಅಣೆಮಲ್ಲೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಅನೇಕ ಶಿಲ್ಪಗಳಿವೆ. ಈ ಶಿಲ್ಪಗಳು ಸಹ ರಾಷ್ಟ್ರಕೂಟರ ಕಾಲಕ್ಕೆ ಸೇರಿದವುಗಳಾಗಿವೆ. ಆದರೆ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ನಾಗೋಲಿಯ ಗ್ರಾಮದಲ್ಲಿದ್ದ ಗಣೇಶನ ವಿಗ್ರಹ ಅಲ್ ಕೋಡ್‌ನಲ್ಲಿರುವ ಮಹಿಷಮರ್ಧಿನಿ ಶಿಲ್ಪವು ಇವರ ಕಾಲದ್ದಾಗಿದೆ. ಆದ್ದರಿಂದ ನಾಗೋಲಿ, ಚಂದನಕೇರಿ, ಆಲ್‌ಕೋಡ್, ಅಣೆಮಲೇಶ್ವರ ಮುಂತಾದ ಸ್ಥಳಗಳಲ್ಲಿ ಇವರ ಕುರುಹುಗಳು ಸಿಗುವುದರಿಂದ ಇಲ್ಲಿಯೂ ಸಹ ರಾಷ್ಟ್ರಕೂಟರ ಕಾಲದ ದೇವಾಲಯ ಇದ್ದಿರಬಹುದೆಂದು ಊಹಿಸಬಹುದಾಗಿದೆ.

ನಾಗೋಲಿ ಬಸವಣ್ಣ ದೇವಾಲಯದ ತಳವಿನ್ಯಾಸ



೧. ದ್ವಾರ
೨. ನವರಂಗಮಂಟಪ
೩. ಸುಖನಾಸಿ
೪. ಗರ್ಭಗೃಹ
O, □ ಕಂಬಗಳು

ಕಲ್ಯಾಣ ಚಾಲುಕ್ಯರ ಕಾಲ

ದೇವಾಲಯದ ಪ್ರಮುಖ ಲಕ್ಷಣಗಳು

ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ, ಕರ್ನಾಟಕ ಕಲಾಶೈಲಿಯಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಯಿತೆಂದು ಹೇಳಬಹುದು. ಕರ್ನಾಟಕದ ವಾಸ್ತುಕಲಾ ಇತಿಹಾಸದಲ್ಲಿ ಕಲ್ಯಾಣಿ ಚಾಲುಕ್ಯರ ಕೊಡುಗೆ ಅತ್ಯಂತ ವಿಶಿಷ್ಟವಾದುದು. ಇತಿಹಾಸಕಾರರು ಆ ಕಾಲದ ದೇವಾಲಯಗಳನ್ನು ಚಾಳುಕ್ಯ ಶೈಲಿಯೆಂದು ಕರೆದಿದ್ದಾರೆ. ಬಾದಾಮಿ ಚಾಲುಕ್ಯರ ಕಟ್ಟಡ ಶೈಲಿಯನ್ನು ಮುಂದುವರೆಸಿದ ಇವರು ವೇಸರ ಶೈಲಿಯನ್ನು ಬೆಳೆಸಿದರಲ್ಲದೇ ತಮ್ಮದೇ ಆದ ಅನೇಕ ಹೊಸ ಅಂಶಗಳನ್ನು ಅಳವಡಿಸಿಕೊಂಡರು. ಈ ಶೈಲಿಯಲ್ಲಿ ನಾಗರ ಮತ್ತು ದ್ರಾವಿಡ ಶೈಲಿಯ ಸಮ್ಮಿಲನವಾಗಿದ್ದರೂ ಆಗಿನ ಶಿಲ್ಪಗಳು ಹಲವಾರು ಹೊಸ ಅಂಶಗಳನ್ನು ಬಳಸಿಕೊಂಡು ತಮ್ಮ ನಿರ್ಮಾಣಗಳು ವೈಶಿಷ್ಟ್ಯಪೂರ್ಣವಾಗಿರುವಂತೆ ನೋಡಿಕೊಂಡರು.

ಈ ದೇವಾಲಯಗಳಲ್ಲಿ ಸಾಧಾರಣವಾಗಿ ಗರ್ಭಗೃಹ, ಅದರ ಮುಂದಿನ ಅಂತರಾಳ ಅಥವಾ ಸುಕನಾಸಿ, ಕಂಬಗಳ ಮೇಲೆ ಆಧಾರಿತವಾದ ನವರಂಗ ಮತ್ತು ಕಡೆಯದಾಗಿ ವಿಶಾಲವಾದ ಕಂಬಗಳಿಂದ ಕೂಡಿದ ಮುಖಮಂಟಪಗಳಿರುತ್ತಿದ್ದವು. ಮುಖಮಂಟಪಕ್ಕೆ ಸೇರಿದಂತೆ ಮುಖ್ಯ ಪ್ರವೇಶ ದ್ವಾರವಿರುತ್ತಿತ್ತು. ಸಾಮಾನ್ಯವಾಗಿ ಪ್ರತಿಯೊಂದು ಭಾಗವು ಆಯಾಕಾರವಾಗಿದ್ದರೂ ಕೆಲವೊಮ್ಮೆ ಹೊರಗೋಡೆಗಳು ಹಿಂದು-ಮುಂದಕ್ಕೆ ಸರಿದಂತಿದ್ದು, ಗೋಡೆಗಳ ಹೊರಮೈಯಲ್ಲಿ ಕೋನಾಗಳನ್ನು ನಿರ್ಮಿಸುತ್ತಿದ್ದರು. ಹಾಗಾಗಿ ಅವುಗಳ ಮೇಲೆ ನೆರಳು-ಬೆಳಕಿನಾಟ ಎದ್ದು ಕಾಣುವಂತಿತ್ತು. ಒಂದಕ್ಕೊಂದು ಎದಿರು-ಬದಿರಾದ ಎರಡು ಗರ್ಭಗುಡಿಗಳಿದ್ದು ಮಂದಿರಗಳಲ್ಲಿ ಪ್ರವೇಶದ್ವಾರಗಳು ಪಾರ್ಶ್ವದ ಗೋಡೆಗಳಲ್ಲಿದ್ದುದುಂಟು.

ತಲವಿನ್ಯಾಸ : ಇವರ ಕಾಲದಲ್ಲಿ ಸಾಮಾನ್ಯವಾಗಿ ನಿರಂಧಾರ ದೇವಾಲಯಗಳೇ ನಿರ್ಮಾಣಗೊಂಡವು. ಸಾಮಾನ್ಯವಾಗಿ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪಗಳು ಕಂಡುಬರುತ್ತವೆ. ಮತ್ತು ಏಕಕೂಟ, ದ್ವಿಕೂಟ, ತ್ರಿಕೂಟ, ಚತುರ್ಥಕೂಟ, ಪಂಚಕೂಟ ದೇವಾಲಯಗಳಿವೆ. ದೇವದುರ್ಗ ತಾಲ್ಲೂಕಿನ ಚಂದನಕೇರಿಯ ಹನುಮಾನ ದೇವಾಲಯ, ಹಿರೇರಾಯಕುಂಪಿಯ, ಈಶ್ವರ ದೇವಾಲಯ, ಗಬ್ಬೂರಿನ ಮೇಲಶಂಕರ, ಈಶ್ವರ ಭೂಗನಾಥ, ಕೇಶವ, ರಾಚೂಟಿಯ್ಯ, ಹಂಪಣ ದೇವಾಲಯ ಮುಂತಾದವು ಏಕಕೂಟ ದೇವಾಲಯಗಳಾಗಿವೆ. ಚಿಂಚೂಳ್ಳಿ ಬಸವಣ್ಣ ದ್ವಿಕೂಟ ದೇವಾಲಯವಾಗಿದೆ. ಏಳು ಬಾವಿ ಬಸವಣ್ಣ ಹರಿಹರ ದೇವಾಲಯಗಳು ತ್ರಿಕೂಟ ದೇವಾಲಯಗಳಾಗಿವೆ. ಗಬ್ಬೂರಿನ ಚೌಡಮ್ಮ ದೇವಾಲಯ ಪಂಚಕೂಟ ದೇವಾಲಯಗಳಾಗಿವೆ.

ಅಧಿಷ್ಠಾನ : ಎತ್ತರವಾದ ಅಧಿಷ್ಠಾನವು ಚಾಲುಕ್ಯರ ವಾಸ್ತು ವಿಶೇಷವಾಗಿದೆ. ಕಲ್ಯಾಣ ಚಾಲುಕ್ಯರ ದೇವಾಲಯಗಳ ಎತ್ತರವು ದೇವಾಲಯದಿಂದ ದೇವಾಲಯಕ್ಕೆ ಭಿನ್ನವಾಗಿರುತ್ತದೆ. ಇವುಗಳಲ್ಲಿ ಉಪಾನ,

ಜಗತಿ, ಕಂಪ, ಕಂಠ ಪಟ್ಟಿಕೆಗಳು ಎದ್ದು ಕಾಣುತ್ತವೆ. ತ್ರಿಪಟ್ಟ, ಕುಮುದ, ಕಪೋತಗಳು ಮಹತ್ವದ ಭಾಗಗಳು. ಗಬ್ಬೂರಿನ ಹನುಮಾನ ದೇವಾಲಯ, ಚಂದನಕೇರಿಯ ಹನುಮಾನ ದೇವಾಲಯ ಸುಮಾರು ೨-೩ ಅಡಿ ಎತ್ತರದ ಅಧಿಷ್ಠಾನ ಹೊಂದಿವೆ. ಗಬ್ಬೂರಿನ ಮೇಲಶಂಕರ ದೇವಾಲಯಕ್ಕೆ ೭ ಅಡಿ ಎತ್ತರದ ಅಧಿಷ್ಠಾನವಿದೆ. ಅದೇ ಗ್ರಾಮದ ನೀಲಕಂಠೇಶ್ವರ, ಕೇಶವ ದೇವಾಲಯಗಳು ೮ ಅಡಿ ಎತ್ತರದ ಅಧಿಷ್ಠಾನ ಹೊಂದಿವೆ. ಇನ್ನು ಕೆಲವು ದೇವಾಲಯಗಳಾದ ಬಂಗಾರ ಬಸವಣ್ಣ ದೇವಾಲಯ, ವೀರಭದ್ರ ದೇವಾಲಯ, ಈಶ್ವರ ದೇವಾಲಯ ಯಾವುದೇ ರೀತಿಯ ಅಧಿಷ್ಠಾನವಿಲ್ಲದೆ ಸರಳ ರೀತಿಯ ದೇವಾಲಯಗಳಾಗಿವೆ. ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳ ಅಧಿಷ್ಠಾನ ಹೆಚ್ಚು ಕಡಿಮೆ ಇರುವುದನ್ನು ನಾವು ಕಾಣುತ್ತೇವೆ.

ಭಿತ್ತಿ : ಅಧಿಷ್ಠಾನದ ನಂತರ ಅದರ ಮೇಲೆ ಬರುವ ಭಾಗವೇ ಭಿತ್ತಿ ಅಥವಾ ಗೋಡೆ. ಕಲ್ಯಾಣಿ ಚಾಲುಕ್ಯ ದೇವಾಲಯಗಳ ಗೋಡೆಗಳು ಸಾಮಾನ್ಯವಾಗಿ ಹಿಂಬಣಿ ಮುಂಬಣಿ ಮತ್ತು ಕಲಾತ್ಮಕ ದೇವಕೋಷ್ಠಗಳಿಂದ ಹೆಚ್ಚು ಅಲಂಕೃತವಾಗಿರುತ್ತವೆ. ಇವುಗಳಿಂದ ಗೋಡೆಗಳು ಹೆಚ್ಚು ಭದ್ರವಾಗುತ್ತವೆ ಎಂಬುದು ಗಮನಾರ್ಹ ಅಂಶ. ಹೊರಗೋಡೆಗಳ ಮೇಲ್ಭಾಗದಲ್ಲಿ ಅರೆಗಂಬಗಳ ನಡುವಣ ಅಂಕಣಗಳಲ್ಲಿ ಹಲವಾರು ಸುಂದರ ಕಲಾತ್ಮಕ ಉಬ್ಬುಶಿಲ್ಪಗಳನ್ನು ಕೊರೆಯಲಾಗಿರುತ್ತದೆ. ಇಡೀ ಹೊರಗೋಡೆಗಳನ್ನು ಸುಂದರ ಶಿಲ್ಪ ಕೆತ್ತನೆಗಳಿಂದ ಅಲಂಕರಿಸಿ ಅದರ ಸೌಂದರ್ಯವನ್ನು ಹೆಚ್ಚಿಸಿರುವ ಶಿಲ್ಪಗಳ ಕಲಾವಂತಿಕೆ ಅದರ ಸೌಂದರ್ಯಪ್ರಿಯತೆಯನ್ನು ನಿರೂಪಿಸುತ್ತದೆ. ಈ ದೇವಾಲಯದ ಭಿತ್ತಿಗಳನ್ನು ಕಟ್ಟಲು ಕಲ್ಯಾಣಿ ಚಾಲುಕ್ಯರು ಗಟ್ಟಿಯಾದ ಕಲ್ಲನ್ನು ಉಪಯೋಗಿಸಿದ್ದಾರೆ. ಕೆಲವು ಸಂದರ್ಭದಲ್ಲಿ ಕಾಲಾಂತರದಲ್ಲಿ ಭಿತ್ತಿ ನಾಶವಾದಾಗ ಇಟ್ಟಿಗೆ, ಗಾರೆಯಿಂದ ನಿರ್ಮಿಸಿದ್ದನ್ನು ನಾವು ಕಾಣುತ್ತೇವೆ. ಅವುಗಳ ಮೂಲರೂಪ ಹೀಗೆ ಇತ್ತೆಂದು ಈಗ ಹೇಳಲು ಬರುವಂತಿಲ್ಲ. ಗಬ್ಬೂರಿನ ಮೂಲಶಂಕರ, ನೀಲಕಂಠೇಶ್ವರ, ವೀರಭದ್ರ ದೇವಾಲಯ, ಆಂಜನೇಯ ದೇವಾಲಯ, ಭೋಗೇಶ್ವರ ದೇವಾಲಯ ಜಾಲಹಳ್ಳಿಯ ದೇವಾಲಯಗಳು, ಚಂದನಕೇರಿಯ ಹನುಮಾನ ದೇವಾಲಯ ಮುಂತಾದವುಗಳನ್ನು ಸಣ್ಣ-ದೊಡ್ಡ ಕಲ್ಲುಗಳಿಂದ ನಿರ್ಮಿಸಿದ್ದನ್ನು ನಾವು ಕಾಣಬಹುದಾಗಿದೆ. ಭಿತ್ತಿಗಳಲ್ಲಿ ಅನೇಕ ಕಂಬಗಳಿವೆ. ಹಾಗು ಮೇಲಶಂಕರ ಏಳುಬಾವಿ ಬಸವಣ್ಣ ಮುಂತಾದವುಗಳಲ್ಲಿ ದೇವಕೋಷ್ಠಗಳನ್ನು ನಿರ್ಮಿಸಿದ್ದಾರೆ.

ಗರ್ಭಗೃಹದ ಭಿತ್ತಿಯಲ್ಲಿ ದೇವರ ವಸ್ತುಗಳನ್ನು ಇಡುವುದಕ್ಕಾಗಿ ಬಂಡೆಯನ್ನು ಬಿಟ್ಟಿರುವುದು, ತೀರ್ಥನಾಳವನ್ನು ಇರಿಸಿರುವುದನ್ನು ಕಾಣಬಹುದು. ಇದರ ಬಾಗಿಲವಾಡದಲ್ಲಿ ಅನೇಕ ಉಬ್ಬುಕಂಬಗಳು, ಶಿಲ್ಪಗಳ ಕೆತ್ತನೆಯನ್ನು ಸಹ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕಾಣುತ್ತೇವೆ. ಭಿತ್ತಿಯ ಕೆಳಭಾಗದಲ್ಲಿ ಅನೇಕ ಪುಷ್ಪಗಳನ್ನು ಇತರೆ ಶಿಲ್ಪಗಳನ್ನು ಬಿಡಿಸಲಾಗಿರುತ್ತದೆ. ಗಬ್ಬೂರಿನ ಮೇಲಶಂಕರ ದೇವಾಲಯದ ಭಿತ್ತಿಯಲ್ಲಿ, ಬಸವಣ್ಣ ದೇವಾಲಯದ ಭಿತ್ತಿಯಲ್ಲಿ ಪುಷ್ಪಗಳನ್ನು ಬಿಡಿಸಲಾಗಿದೆ.

ಜಾಲಂಧ್ರಗಳು : ದೇವಾಲಯಗಳ ಒಳಭಾಗದಲ್ಲಿ ಬೆಳಕು ಹಾಗೂ ಗಾಳಿಗಾಗಿ ಈ ಜಾಲಂಧ್ರಗಳನ್ನು ನಿರ್ಮಿಸಿರುತ್ತಾರೆ. ದೇವಾಲಯದ ಚೆಲುವನ್ನು ಇವು ಹೆಚ್ಚಿಸುತ್ತವೆ. ಕಲಾತ್ಮಕ ಜಾಲಂಧ್ರಗಳು ಕಲ್ಯಾಣಿ ಚಾಲುಕ್ಯರ ದೇವಾಲಯಗಳಲ್ಲಿ ಕಂಡುಬರುವ ವಾಸ್ತುವೈಶಿಷ್ಟ್ಯ. ಈ ಜಾಲಂಧ್ರಗಳು ಸಾಮಾನ್ಯವಾಗಿ ದ್ವಾರಗಳ ಎರಡು ಬದಿಗೆ ಅಂದರೆ ದ್ವಾರಶಾಖೆ ಮತ್ತು ಅರ್ಧ ಕಂಬಗಳ ನಡುವೆ ಇರುತ್ತವೆ. ಚಾಲುಕ್ಯರ ದೇವಾಲಯಗಳಲ್ಲಿ ಇವು ಪ್ರದಕ್ಷಿಣಾಪಥ, ಸಭಾಮಂಟಪಗಳಲ್ಲಿ ಇದ್ದುದ್ದನ್ನು ಸ್ಮರಿಸಬಹುದು.

ಗಬ್ಬೂರಿನ ಹಂಪಣ್ಣ ದೇವಾಲಯದ ದ್ವಾರಶಾಖೆಯ ಎರಡು ಬದಿಯಲ್ಲಿ ಅನೇಕ ಕಲಾತ್ಮಕ ಜಾಲಂಧ್ರಗಳನ್ನು ಕೆತ್ತಲಾಗಿದೆ. ಹಾಗೂ ಏಳುಬಾವಿ ಬಸವಣ್ಣ ದೇವಾಲಯದ ಗರ್ಭಗೃಹದಲ್ಲಿ ಇಂತಹ ಜಾಲಂಧ್ರಗಳನ್ನು ಕಾಣಬಹುದು. ಕೆಲವು ಸಂದರ್ಭದಲ್ಲಿ ಜಾಲಂಧ್ರಗಳ ಬದಲಾಗಿ ಸಣ್ಣ ಸಣ್ಣ ಕಿಟಿಕಿಗಳನ್ನು ಮಾಡಿರುವುದನ್ನು ಸಹ ಕಾಣುತ್ತೇವೆ. ಗಬ್ಬೂರಿನ ಈಶ್ವರ ದೇವಾಲಯ ವೀರಭದ್ರ ದೇವಾಲಯಗಳಲ್ಲಿ ಸಣ್ಣ ಕಿಟಕಿಗಳಿವೆ. ಇವುಗಳ ಉದ್ದೇಶ ಸಹ ಗಾಳಿ ಮತ್ತು ಬೆಳಕಿಗಾಗಿ ಮಾಡಿರುತ್ತಾರೆ.

ದೇವಕೋಷ್ಠಗಳು : ಪರಿವಾರ ದೇವತೆಗಳಿಗಾಗಿ ಪ್ರತ್ಯೇಕ ಮಂಟಪಗಳನ್ನು ರಚಿಸಿರುತ್ತಾರೆ. ಇವು ಎಲ್ಲಾ ದೆವಾಲಯಗಳಲ್ಲಿ ಕಾಣುವುದಿಲ್ಲ. ಈ ಕೆಲವು ದೇವಾಲಯಗಳನ್ನು ಬಿಟ್ಟರೆ ಉಳಿದಂತೆ ಪರಿವಾರ ದೇವತೆಗಳನ್ನು ನವರಂಗದಲ್ಲಿಯೇ ಇಟ್ಟಿರುತ್ತಾರೆ. ದೇವಾಲಯದ ಭಿತ್ತಿಯಲ್ಲಿ ಈ ಗೂಡುಗಳನ್ನು ಮಾಡಿರುತ್ತಾರೆ. ಈ ಗೂಡುಗಳಲ್ಲಿ ಹೂಬಳ್ಳಿಗಳನ್ನು ಪುಷ್ಪಗಳ ಸಾಲುಗಳನ್ನು ಕಮಲಗಳನ್ನು ಇತರ ಶಿಲ್ಪಗಳನ್ನು ಬಿಡಿಸಿರುತ್ತಾರೆ. ಕೆಲವು ಗೂಡುಗಳಲ್ಲಿ ಯಾವುದೇ ಶಿಲ್ಪಗಳಿಲ್ಲದೆ ಸರಳ ರೀತಿಯಲ್ಲಿರುತ್ತವೆ. ಗಬ್ಬೂರಿನ ಮೇಲಶಂಕರ ದೇವಾಲಯದಲ್ಲಿ ಎರಡು ದೊಡ್ಡದಾದ ದೇವಕೋಷ್ಠಗಳಿವೆ. ಆದರೆ ಇವು ಯಾವುದೇ ಕೆತ್ತನೆಯನ್ನು ಹೊಂದಿರುವುದಿಲ್ಲ. ಅದರಂತೆ ಕೇಶವ ದೇವಾಲಯದಲ್ಲಿ ಬಸವಣ್ಣ ದೇವಾಲಯದಲ್ಲಿ ಸಹ ದೇವಕೋಷ್ಠಗಳಿವೆ.

ಗರ್ಭಗೃಹ : ಗರ್ಭಗೃಹವು ದೇವಾಲಯದ ಪ್ರಮುಖ ಅಂಗ ಹಾಗೂ ಪವಿತ್ರ ಭಾಗ. ಈ ಗರ್ಭಗೃಹವು ತನ್ನ ಮೇಲಿನ ರಚನೆಯನ್ನು ಅನುಸರಿಸಿ ಅಂದರೆ ಶಿಖರ ಇತ್ಯಾದಿಗಳನ್ನು ಲಕ್ಷ್ಯದಲ್ಲಿಟ್ಟು ಅದರ ಎತ್ತರಕ್ಕೆ ತಕ್ಕಂತೆ ಅನೇಕ ಭಾಗಗಳನ್ನು ಹೊಂದಿರುತ್ತದೆ. ಗರ್ಭಗೃಹವು ಅಧಿಷ್ಠಾನದಿಂದ ಹಿಡಿದು ಶಿಖರದವರೆಗೆ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ ಶಿಖರ, ಕಳಶ ಭಾಗಗಳನ್ನು ಹೊಂದಿರುತ್ತದೆ. ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳ ಗರ್ಭಗೃಹವು ಸಾಮಾನ್ಯವಾಗಿ ಚೌಕಾಕಾರದಲ್ಲಿರುತ್ತವೆ. ಈ ಗರ್ಭಗೃಹದಲ್ಲಿ ಶೈವ, ವೈಷ್ಣವ ಮುಂತಾದ ದೇವತಾ ಮೂರ್ತಿಗಳನ್ನು ಸ್ಥಾಪಿಸಿರುತ್ತಾರೆ. ಮತ್ತು ಗರ್ಭಗೃಹದಲ್ಲಿ ದೇವರ ವಸ್ತುಗಳನ್ನು ಇಡುವುದಕ್ಕಾಗಿ ಚಾಚುಬಂಡೆಯನ್ನು ಬಿಡಿಸಿರುತ್ತಾರೆ. ಹಿರೇರಾಯಕುಂಪಿಯ ಈಶ್ವರ, ಗಬ್ಬೂರಿನ ಈಶ್ವರ, ಬೀರಲಿಂಗೇಶ್ವರ, ಮೇಲಶಂಕರ, ಹರಿಹರ, ಬೋಗೇಶ್ವರ, ನೀಲಕಂಠೇಶ್ವರ, ಆಂಜನೇಯ ಮುಂತಾದ ದೇವಾಲಯಗಳಲ್ಲಿ ಚೌಕಾಕಾರದ ಗರ್ಭಗೃಹ ಕಾಣುತ್ತವೆ.

ಅಂತರಾಳ : ಗರ್ಭಗೃಹದ ನಂತರ ಭಾಗವೇ ಅಂತರಾಳ ಅಥವಾ ಸುಕನಾಸಿ. ಕೆಲವು ದೇವಾಲಯಗಳಲ್ಲಿ ಈ ಅಂತರಾಳ ಕಾಣುವುದಿಲ್ಲ. ಇನ್ನು ಅಂತರಾಳ ಇರುವ ದೇವಾಲಯಗಳಲ್ಲಿ ಇದು ಅಗಲ ಮತ್ತು ಉದ್ದದಲ್ಲಿ ಕಡಿಮೆಯಿದ್ದು, ಬಾಗಿಲು ಇರದೇ ತೆರೆದ ಅಂತರಾಳವಾಗಿರುತ್ತವೆ. ಕೆಲವು ದೇವಾಲಯಗಳಲ್ಲಿ ಬಾಗಿಲನ್ನು ಸಹ ಮಾಡಿರುತ್ತಾರೆ. ಶಿವ ದೇವಾಲಯಗಳ ಅಂತರಾಳದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ರಂಗನಾಥ ಸ್ವಾಮಿ ದೇವಾಲಯ, ಈಶ್ವರ, ಜೋಡ ಬಸವಣ್ಣ, ವೀರಭದ್ರ, ಗಬ್ಬೂರಿನ ಮೇಲಶಂಕರ, ಕೇಶವ, ವೀರಭದ್ರ ಭೂಗೇಶ್ವರ, ಹಂಪಣ ಮುಂತಾದ ದೇವಾಲಯಗಳು ಅಂತರಾಳವನ್ನು ಹೊಂದಿವೆ. ಇನ್ನು ಕೆಲವು ದೇವಾಲಯಗಳಾದ ರಾಚೂಟಯ್ಯ, ಹಂಪಣ್ಣಗುಡಿ ನಾಗಭೂಷಣ ಮುಂತಾದವುಗಳಲ್ಲಿ ಈ ಅಂತರಾಳ ಇರುವುದಿಲ್ಲ.

ನವರಂಗ ಮಂಟಪ : ಈ ನವರಂಗ ಮಂಟಪ ಒಟ್ಟು ಒಂಬತ್ತು ಅಂಕಣವಿಲ್ಲದೆ ಚಿಕ್ಕದಾಗಿರುತ್ತದೆ. ನವರಂಗವು ವಿಶಾಲವಾಗಿದ್ದು, ಮಧ್ಯ ವೇದಿಕೆ ಮತ್ತು ಕಂಬಗಳಿಂದ ಕೂಡಿರುತ್ತದೆ.

ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಸಭಾಮಂಟಪದ ವಿನ್ಯಾಸವು ವಿಭಿನ್ನವಾದುದು. ಸಭಾಮಂಟಪದ ಗೋಡೆಗಳಲ್ಲಿ ದೇವಕೋಷ್ಠಗಳಿರುವುದು. ಈ ದೇವಾಲಯಗಳ ವಾಸ್ತು ವಿಶೇಷ ಸಣ್ಣ ದೇವಾಲಯಗಳಲ್ಲಿ ಕೇವಲ ಎರಡು ದೇವಕೋಷ್ಠಗಳಿರಬಹುದು. ಕೆಲವು ದೇವಾಲಯಗಳಲ್ಲಿ ಇಲ್ಲದೆ ಇರಬಹುದು. ಈ ಕೋಷ್ಠಗಳ ಬಾಗಿಲವಾಡಗಳೂ ಕೂಡ ಶಾಖೆಗಳಿಂದ ಅಲಂಕೃತವಾಗಿರುತ್ತವೆ. ನವರಂಗ ಮಂಟಪದ ಮೇಲಿನ ಭಾಗದಲ್ಲಿ ಕಮಲವನ್ನು ಬಿಡಿಸಿರುತ್ತಾರೆ. ಇವು ಕಮಲ, ನಕ್ಷತ್ರ, ಪುಷ್ಪಬಳ್ಳಿಯ ಆಕಾರಗಳನ್ನು ಕೆತ್ತಿರುತ್ತಾರೆ. ಇವುಗಳನ್ನು ಮುಚ್ಚಿಗೆಯೆಂದು ಕರೆಯುತ್ತಾರೆ. "ಎ.ಎಂ.ಅಣ್ಣಿಗೇರಿಯವರು ಈ ಭಾಗವನ್ನು ಛತ್ತು ಎಂದು ಕರೆದಿರುತ್ತಾರೆ"(ತಲಕಾಡಿನ ಗಂಗರ ದೆ.ಬ.ಅ., ಡಾ.ದೇವರಕೊಂಡಾರೆಡ್ಡಿ, ಪು.೬೦).

ನವರಂಗ ಮಂಟಪವು ದ್ವಾರಬಾಗಿಲನ್ನು ಒಳಗೊಂಡಿರುತ್ತವೆ. ಮತ್ತು ಕೆಲವು ಬಾರಿ ಮೂರು ಕಡೆ ಬಾಗಿಲುಗಳನ್ನು ಹೊಂದಿದ ವಿಶಾಲ ಮಂಟಪವನ್ನು ಸಹ ಕಾಣುತ್ತೇವೆ. ಗಬ್ಬೂರಿನ ಮೇಲಶಂಕರ ದೇವಾಲಯವು ಮೂರು ಕಡೆ ಬಾಗಿಲುಗಳನ್ನು ಹೊಂದಿದ್ದು, ನವರಂಗ ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಇವುಗಳ ಪೀಠ ಚಚ್ಚೌಕಾಗಿದ್ದು, ಮಧ್ಯದಲ್ಲಿ ೧೬-೮-೧೬ ಮುಖಪಟ್ಟಿಕೆಗಳನ್ನು ಹೊಂದಿದ್ದು, ಇದರ ಮೇಲೆ ಚೌಕ ವೃತ್ತಾಕಾರದ ಮುಚ್ಚಳದ ಮೇಲೆ ಫಲಕವು ಚೌಕಾಗಿದ್ದು, ಅದರ ಮೇಲೆ ಸಾದಾ ಬೋದುಗೆಗಳನ್ನು ರಚಿಸಲಾಗಿದೆ. ಈ ಮಂಟಪದಲ್ಲಿ ಎರಡು ದೊಡ್ಡ ದೇವಕೋಷ್ಠಗಳಿವೆ. ಏಳುಬಾವಿ ಬಸವಣ್ಣ ದೇವಾಲಯ, ಹರಿಹರ, ಚಿಂಚೊಳ್ಳಿ ಬಸವಣ್ಣ, ಈಶ್ವರ, ವೀರಭದ್ರೇಶ್ವರ, ಚಂದನಕೇರಿಯ ಹನುಮಾನ, ಹಿರೇರಾಯ ಕುಂಪಿಯ ಈಶ್ವರ ಮುಂತಾದ ದೇವಾಲಯಗಳಲ್ಲಿ ಕಂಬಗಳಿಂದ ಕೂಡಿದ

ನವರಂಗ ಮಂಟಪವನ್ನು ಕಾಣುತ್ತೇವೆ. ಇವು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ದೇವಾಲಯಗಳಾಗಿವೆ.

ಕಂಬಗಳು : ಕಂಬಗಳು ದೇವಾಲಯದ ರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕಲ್ಯಾಣ ಚಾಲುಕ್ಯರ ಕಂಬಗಳಲ್ಲಿ ಪ್ರಧಾನವಾಗಿ ಎರಡು ಪ್ರಕಾರಗಳನ್ನು ಗುರುತಿಸಬಹುದು. ಒಂದನೆಯ ಪ್ರಕಾರದ ಕಂಬಗಳು ಚೌಕಾಕಾರದ ಕಂಬಗಳು. ಇವು ಪೀಠ, ಚಾಕು, ಕಂಠ, ಗೋಲಾಕಾರ, ಬೋದುಗೆ ಹೊಂದಿರುತ್ತವೆ. ಕೆಲವು ಕಂಬಗಳಲ್ಲಿ ಕಂಬಕ್ಕೆ ಎಂಟು ಬದಿಗಳಿರುತ್ತವೆ. ಕಂಬದ ಮಧ್ಯ ಭಾಗದಲ್ಲಿ ಹದಿನಾರು ಬದಿಗಳು, ಎರಡು ಪಟ್ಟಿಕೆಗಳ ನಡುವೆ ಎಂಟು ಬದಿಯ ಪಟ್ಟಿಕೆಗಳಿರುತ್ತವೆ. ಮೇಲ್ಭಾಗದಲ್ಲಿ ದುಂಡಗಿನ ಮುಚ್ಚಳವಿರುತ್ತವೆ. ಇದರಿಂದ ಕಂಬಗಳು ಚಿತ್ತಾಕರ್ಷಕವಾಗಿರುತ್ತವೆ. ಮತ್ತು ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ಅರೆಕಂಬಗಳು (ಅಂದರೆ ಗೋಡೆಯ ಒಳಗಿನ ಕಂಬಗಳು ಎಂದರ್ಥ) ಹಾಗೂ ಪೂರ್ಣಕಂಬಗಳು (ಅಂದರೆ ಗೋಡೆಯ ಹೊರಗಿನ ಕಂಬಗಳು ಎಂದರ್ಥ) ಎರಡು ರೀತಿಯಲ್ಲಿ ವಿಭಾಗಿಸಬಹುದು. ಗೋಡೆಯ ಒಳಗಿನ ಕಂಬಗಳು ಸಂಪೂರ್ಣವಾಗಿ ಗೋಡೆಯಿಂದ ಆವೃತವಾಗಿದ್ದಲ್ಲಿ ಅವುಗಳಿಗೆ ಯಾವ ಅಲಂಕಾರವೂ ಇಲ್ಲದೇ ಕೇವಲ ಭಾರ ಹೊರುವ ಉದ್ದೇಶವನ್ನು ಮಾತ್ರ ಹೊಂದಿರುತ್ತವೆ. ಕೆಲವೊಮ್ಮೆ ಗೋಡೆಯಲ್ಲಿನ ಕಂಬಗಳು ದೇವಾಲಯದ ಒಳಭಾಗದಲ್ಲಿ ಅರ್ಧ ಮಾತ್ರ ಕಾಣುವಂತೆ ಇರುತ್ತದೆ. ಇಂತಹ ಸನ್ನಿವೇಶಗಳಲ್ಲಿ ಹೊರಕ್ಕೆ ಕಾಣುವ ಅರ್ಧಕಂಬ ಭಾಗವನ್ನು ನವರಂಗದಲ್ಲಿದ್ದಿರಬಹುದಾದ ಕಂಬಗಳಂತೆ ಬಿಡಿಸಿರುತ್ತಾರೆ. ಇದರ ಮೇಲೆ ಬರುವ ಬೋದುಗೆಯು ನವರಂಗದ ಬೋದುಗೆಯ ಅನುಕರಣವಾಗಿರುತ್ತದೆ. ಗೋಡೆಯನ್ನು ಬಿಟ್ಟು ನವರಂಗ, ಅಂತರಾಳ ಮುಖ ಮಂಟಪಗಳಲ್ಲಿ ಕಂಬಗಳು ಸ್ವತಂತ್ರವಾಗಿ ಕಾಣಬರುತ್ತವೆ. ಇವುಗಳ ಕೆತ್ತನೆ ನಾಲ್ಕು ಮುಖಗಳಲ್ಲೂ ಪೂರ್ಣವಾಗಿರುತ್ತದೆ. ಒಂದೇ ದೇವಾಲಯದಲ್ಲಿ ಬೇರೆ ಬೇರೆ ರೀತಿಯ ಕಂಬಗಳನ್ನು ಬಳಸಿರುವುದುಂಟು. ಕೆಲವು ದೇವಾಲಯಗಳ ಅಂತರಾಳ ಮಂಟಪಗಳಲ್ಲಿ ಮೇಲಿನ ಭಾರವನ್ನು ಹೊರಲು ಅನುಕೂಲವಾಗುವಂತೆ ಎರಡು ಕಂಬಗಳನ್ನು ಬಳಸಿರುತ್ತಾರೆ.

ಗಬ್ಬೂರಿನ ಮೇಲಶಂಕರ ದೇವಾಲಯದಲ್ಲಿ ಒಟ್ಟು ೨೨ ಕಂಬಗಳಿವೆ. ಇವುಗಳಲ್ಲಿ ಮೊದಲನೆಯ ಪ್ರಕಾರದ ಕಂಬಗಳು ಚಚ್ಚೌಕವಾಗಿದ್ದು, ಕಂಠ ಭಾಗದಲ್ಲಿಯು ಚೌಕಾಗಿದ್ದು, ಸಾದಾ ಬೋದುಗೆಗಳನ್ನು ಹೊಂದಿವೆ. ಇನ್ನೊಂದು ರೀತಿಯ ಕಂಬಗಳು ಕೆಳಗಿನಿಂದ ಕಂಠಭಾಗದವರೆಗೆ ವೃತ್ತಾಕಾರವಾಗಿದ್ದು, ಹಲವು ಪಟ್ಟಿಕೆಗಳು ಮಧ್ಯದಲ್ಲಿ ಬರುತ್ತಿದ್ದು, ಕಂಠ ಭಾಗದಲ್ಲಿ ಗೋಲಾಕಾರದ ಮುಚ್ಚಳವಿದೆ. ಅದರ ಮೇಲೆ ಚೌಕಾಕಾರದ ಹಲಗೆ ಮತ್ತು ಸಾದಾ ಬೋದುಗೆಯನ್ನು ಹೊಂದಿವೆ. ಬಾಲ ಹನುಮಾನ ದೇವಾಲಯದ ಕಂಬಗಳು ಗೋಲಾಕಾರ ಹಾಗೂ ಚೌಕಾಕಾರವಾಗಿದ್ದು, ಪೀಠ, ಚೌಕ, ಪಟ್ಟಿಕೆಗಳ, ಸಾದಾ ಬೋದುಗೆಗಳನ್ನು ಹೊಂದಿವೆ. ಸೊಗೂರೇಶ್ವರ ದೇವಾಲಯದ ಕಂಬಗಳ ಪೀಠ ಚಚ್ಚೌಕಾಗಿದ್ದು, ಮಧ್ಯದಲ್ಲಿ ೧೬-೮-

೧೬ ಮುಖಪಟ್ಟಿಕೆಗಳನ್ನು ಹೊಂದಿದೆ. ಕಾಂಡಭಾಗದಲ್ಲಿ ಸಣ್ಣ ಕೋಷ್ಠಕಗಳಿವೆ. ಇವು ಮಣಿಸರಗಳಿಂದ ಕೂಡಿದ್ದಾಗಿದೆ. ಕಂಠ ಭಾಗದಲ್ಲಿ ವೃತ್ತಾಕಾರದ ಮುಚ್ಚಳ ಹೊಂದಿ ಅದರ ಮೇಲೆ ಚೌಕಾಕಾರದ ಹಲಗೆ ಮೇಲೆ ಸಾದಾ ಬೋದುಗೆಗಳಿವೆ. ಈ ರೀತಿಯ ಲಕ್ಷಣಗಳನ್ನು ದೇವದುರ್ಗದ ಅನೇಕ ದೇವಾಲಯಗಳಲ್ಲಿ ಕಾಣುತ್ತೇವೆ. ಗಬ್ಬೂರಿನ ಆಂಜನೇಯ ದೇವಾಲಯದ ಕಂಬಗಳು ಚೌಕಾಕಾರದ ಪೀಠ, ಕಂಠ, ಚೌಕಾಕಾರದ ಮೇಲಿನ ಭಾಗದಲ್ಲಿ ಗೋಲಾಕಾರದ ಮುಚ್ಚಳ, ಸದಾ ಬೋದುಗೆಗಳನ್ನು ಹೊಂದಿದೆ. ಚೌಡಮ್ಮ ದೇವಾಲಯದ ಕಂಬಗಳು ಕೆಲವು ಗೋಲಾಕಾರದಲ್ಲಿವೆ. ಇನ್ನು ಕೆಲವು ಚೌಕಾಕಾರದಲ್ಲಿವೆ. ಗೋಲಾಕಾರದ ಕಂಬಗಳು ಚೌಕಾಕಾರದ ಪೀಠವನ್ನು ಹೊಂದಿವೆ. ಉಳಿದ ಭಾಗಗಳು ಗೋಲಾಕಾರದಲ್ಲಿವೆ. ಮತ್ತು ಸಾದಾ ಬೋದುಗೆಗಳನ್ನು ಹೊಂದಿವೆ. ಇನ್ನು ಕೆಲವು ಕಂಬಗಳು ಚೌಕಾಕಾರದಲ್ಲಿದ್ದು, ಪೀಠ, ಚೌಕಾಕಾರ, ಸಾದಾ ಬೋದುಗೆಗಳನ್ನು ಹೊಂದಿವೆ. ಸೂಗೂರೇಶ್ವರ ದೇವಾಲಯದ ಕಂಬಗಳು ಗೋಲಾಕಾರದಲ್ಲಿವೆ. ಇವು ಎತ್ತರ ಪೀಠವನ್ನು ಹೊಂದಿದ್ದು, ಗೋಲಾಕಾರ ಮುಚ್ಚಳ ಸಾದಾ ಬೋದುಗೆಗಳನ್ನು ಹೊಂದಿವೆ. ಇದೇ ತರಹದ ಕಂಬಗಳು ನಾಗಭೂಷಣ ದೇವಾಲಯದಲ್ಲಿವೆ. ಹಿರೇರಾಯಕುಂಪಿಯ ಈಶ್ವರ ದೇವಾಲಯದ ಕಂಬಗಳು ಚೌಕಾಕಾರದಲ್ಲಿವೆ. ಅವು ಪೀಠ, ಕಂಠ, ಮುಚ್ಚಳ, ಸಾದಾ ಬೋದುಗೆಗಳನ್ನು ಹೊಂದಿವೆ. ಚಂದನ ಕೇರಿಯ ಕಂಬಗಳು ಚೌಕಾಕಾರದ ಪೀಠವನ್ನು ಹೊಂದಿವೆ. ನಂತರ ಗೋಲಾಕಾರ, ಮುಚ್ಚಳ, ಸಾದಾ ಬೋದಿಗೆಗಳನ್ನು ಹೊಂದಿವೆ. ಜಾಲಹಳ್ಳಿ ಜೋಡ ಬಸವಣ್ಣ ದೇವಾಲಯ ಕಂಬಗಳು ಚೌಕಾಕಾರದ ಪೀಠ, ಪಟ್ಟಿಕೆಗಳು, ಗೋಲಾಕಾರದ ಮುಚ್ಚಳ ಮತ್ತು ಸಾದಾ ಬೋದುಗೆಗಳನ್ನು ಹೊಂದಿವೆ. ಭಿತ್ತಿ ಕಂಬಗಳಲ್ಲಿ ಉದ್ದವಾದ ನಾಗಶಿಲ್ಪಗಳನ್ನು ಬಿಡಿಸಲಾಗಿದೆ.

ಬಾಗಿಲವಾಡಗಳು : ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಬಾಗಿಲವಾಡಗಳು ಕಲ್ಯಾಣ ಚಾಲುಕ್ಯರ ದೇವಾಲಯಗಳ ಇನ್ನೊಂದು ವಾಸ್ತು ವಿಶೇಷತೆ. ಬಾಗಿಲವಾಡಗಳು ಸಾಮಾನ್ಯವಾಗಿ ಐದು(೫) ಶಾಖೆಗಳಿಂದ ಅಲಂಕೃತವಾಗಿರುತ್ತವೆ. ಒಮ್ಮೊಮ್ಮೆ ಹೆಚ್ಚು ಶಾಖೆಗಳಿರಬಹುದು. ಈ ಬಾಗಿಲವಾಡಗಳ ಲಲಾಟ ಬಿಂಬಗಳಲ್ಲಿ ಗಜಲಕ್ಷ್ಮಿ ಶಿಲ್ಪಗಳಿವೆ. ಕಲ್ಯಾಣ ಚಾಲುಕ್ಯರ ದೇವಾಲಯಗಳ ಬಾಗಿಲವಾಡಗಳ ಮೇಲೆ ಮಕರ ತೋರಣಗಳಿರುತ್ತವೆ. ಹೂ ಬಳ್ಳಿಗಳ, ದೇವತಾ ಶಿಲ್ಪಗಳ ಅಲಂಕರಣ ಕಾರ್ಯ ಕೂಡಾ ಮಾಡಲಾಗಿರುತ್ತದೆ. ಗಬ್ಬೂರಿನ ಏಳು ಬಾವಿ ಬಸವಣ್ಣ ದೇವಾಲಯದ ಅಂತರಾಳದ ಬಾಗಿಲವಾಡವು ತುಂಬಾ ಆಕರ್ಷಕವಾಗಿದೆ. ಅದು ಹೋಲಿಕೆಯಲ್ಲಿ ಕುಕನೂರಿನ ನವಲಿಂಗೇಶ್ವರ ಗುಡಿಯಲ್ಲಿರುವಂತೆ ಇದೆ. ಇಲ್ಲಿ ಒಂದು ಚಿಕ್ಕ ಮಂಟಪವಿದೆ. ಅದರಲ್ಲಿ ಶಿವ ಪಾರ್ವತಿಯರು ಕುಳಿತಿದ್ದಾರೆ. ಶಿವನ ಪಕ್ಕದಲ್ಲಿ ನಂದಿ ಇದೆ. ಈ ತೋರಣದ ಬಲತುದಿಯಲ್ಲಿ ಬ್ರಹ್ಮ ಸರಸ್ವತಿಯರಿದ್ದಾರೆ. ಎಡ ತುದಿಯಲ್ಲಿ ಅರೆನಗ್ನ ಸ್ಥಿತಿಯಲ್ಲಿರುವ ಸ್ತ್ರೀಯು ಓಲೆಯನ್ನು ಬರೆಯುತ್ತಿದ್ದಾಳೆ. ಅವಳ ಬಲಕ್ಕೆ ವಿಷ್ಣು ಲಕ್ಷ್ಮಿಯರಿದ್ದಾರೆ. ಈ ಎಲ್ಲ ಶಿಲ್ಪಗಳ ಮೇಲುಭಾಗದಲ್ಲಿ ನಾಲ್ಕು ಜನ ದಂಪತಿಗಳು ತಮ್ಮ ವಾಹನಗಳ ಮೇಲೆ ಕುಳಿತು

ಸಂಗೀತ ಮೇಳದೊಂದಿಗೆ ಹೋಗುವ ಶಿಲ್ಪಗಳಿವೆ. ಅದರಲ್ಲಿ ಜಿಂಕೆ, ಕುದುರೆ, ನಂದಿಗಳಿವೆ. ಮೇಲಶಂಕರ ದೇವಾಲಯದ ಗರ್ಭಗೃಹ ಬಾಗಿಲವಾಡವು ದೊಡ್ಡದಾಗಿದ್ದು, ಇದರಲ್ಲಿ ೫ ದ್ವಾರಶಾಖೆಗಳಿವೆ. ಚೌಕು, ಸುರುಳಿ, ಅರ್ಧಕಂಬ, ಸಿಂಹ ಮತ್ತು ಹೂದಳಗಳ ಕೆತ್ತನೆಯನ್ನು ಹೊಂದಿದೆ. ಮಕರ ತೋರಣವು ದೊಡ್ಡದಾಗಿದ್ದು, ಅದರ ಕೊನೆಯ ಭಾಗದಲ್ಲಿ ಕೀರ್ತಿಮುಖಗಳನ್ನು ಮತ್ತು ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ.

ಚಂದನಕೇರಿಯ ಗರ್ಭಗೃಹದ ಬಾಗಿಲವಾಡವು ತುಂಬಾ ಸರಳವಾಗಿದೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪ ಬಿಟ್ಟರೆ ಬೇರೆ ಯಾವ ಶಿಲ್ಪಗಳಾಗಲಿ, ಅರ್ಧಕಂಬ, ಪೂರ್ಣಕಂಬಗಳಾಗಲಿ ಇಲ್ಲ. ದೊಡ್ಡ ಕಲ್ಲುಗಳಿಂದ ಅದು ಪಟ್ಟಿಕೆಗಳನ್ನು ಹೊಂದಿದೆ. ಇದರ ಅಂತರಾಳದ ಬಾಗಿಲವಾಡವು ಸ್ವಲ್ಪರ ಮಟ್ಟಿಗೆ ಶಿಲ್ಪಗಳನ್ನು ಹೊಂದಿದೆ. ಇದರ ಲಲಾಟ ಬಿಂಬದಲ್ಲಿ ಗಣೇಶನ ವಿಗ್ರಹವಿದೆ. ಕೆಳಗೆ ಅಕ್ಕ ಪಕ್ಕದಲ್ಲಿ ದ್ವಾರಪಾಲಕರಿದ್ದಾರೆ. ಬಂಡೆಕಲ್ಲಿನಿಂದ ನಿರ್ಮಿಸಿದ್ದು ಇದು ಮೂರು ಪಟ್ಟಿಕೆಗಳನ್ನು ಹೊಂದಿದೆ. ಗಬ್ಬೂರಿನ ಕೇಶವ ದೇವಾಲಯದ ಗರ್ಭಗೃಹ ಬಾಗಿಲವಾಡವು ಅರ್ಧಕಂಬಗಳು, ಪೂರ್ಣಕಂಬಗಳು ಗಜಲಕ್ಷ್ಮಿಯ ಶಿಲ್ಪ, ಗೋಪುರಗಳನ್ನು ಹೊಂದಿದ್ದು, ಅದು ಗಬ್ಬೂರಿನ ಮೇಲಶಂಕರ ದೇವಾಲಯದ ಗರ್ಭಗೃಹ ಬಾಗಿಲವಾಡದಂತಿದೆ. ಇದೇ ಗ್ರಾಮದ ಬೀರಲಿಂಗೇಶ್ವರ ದೇವಾಲಯ ಬಾಗಿಲವಾಡವು ಗಜಲಕ್ಷ್ಮಿ ಶಿಲ್ಪ, ಅರ್ಧಕಂಬಗಳು ಮತ್ತು ದ್ವಾರಪಾಲಕರನ್ನು ಬಿಡಿಸಿದೆ. ಚೌಡಮ್ಮ ದೇವಾಲಯದ ಬಾಗಿಲವಾಡವು ಗಜಲಕ್ಷ್ಮಿ ಶಿಲ್ಪ, ಪೂರ್ಣಕುಂಭಗಳನ್ನು ಹೊಂದಿದೆ. ಗಬ್ಬೂರಿನ ಹಂಪಣ ದೇವಾಲಯ ಅಂತರಾಳ, ಬಾಗಿಲವಾಡವು ಅತ್ಯಂತ ಸುಂದರವಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪ, ಗೋಲಾಕಾರದ ಕಂಬಗಳು, ಸ್ತ್ರೀ ಚಾರಿದಾರಿಗಳು, ಪುಷ್ಪಬಳ್ಳಿ ಹಾಗೂ ಜಾಲಂಧ್ರಗಳನ್ನು ಬಿಡಿಸಿದೆ. ಇದೇ ತರಹ ಲಕ್ಷಣಗಳನ್ನು ಹೊಂದಿದ ದೇವಾಲಯ ಗಬ್ಬೂರಿನ ಬಾಲಂಜನೇಯ.

ಚಂದ್ರಶಿಲೆ : ಈ ಕಾಲದ ದೇವಾಲಯಗಳ ಹೊಸ್ತಿಲುಗಳೂ ಸಹ ಕೆತ್ತನೆಗಳಿಂದ ಕೂಡಿರುತ್ತದೆ. ಗರ್ಭಗೃಹದ ಹೊಸ್ತಿಲಿಗೆ ಚಂದ್ರಶಿಲೆಗಳ ಜೋಡಣೆ ಇರುತ್ತದೆ. ಇವುಗಳ ವಿನ್ಯಾಸ ಒಂದೇ ತೆರೆನಾದದ್ದು. ಇವು ಹೊಸ್ತಿಲುದ್ದಕ್ಕೂ ಚಾಚಿವೆ. ಗಬ್ಬೂರಿನ ಸೂಗೂರೇಶ್ವರ ದೇವಾಲಯದ ಅಂತರಾಳ ಹೊಸ್ತಿಲಿನ ಮುಂದೆ ಈ ತೆರೆನಾದ ಚಂದ್ರಶಿಲೆಯನ್ನು ಕಾಣಬಹುದು.

ಶಿಖರಗಳು : ಕಲ್ಯಾಣ ಚಾಲುಕ್ಯರ ದೇವಾಲಯದ ವಿಶೇಷತೆಗಳಲ್ಲಿ ಶಿಖರವೂ ಒಂದು. ಸುಮಾರು ೧೦-೧೫ ಮೀಟರ್ ಎತ್ತರದ ಶಿಖರವು ದೇವಾಲಯಕ್ಕೆ ವಾಸ್ತು ಚೆಲುವನ್ನು ನೀಡುತ್ತದೆ. ಶಿಖರವನ್ನು ಗಾರೆಯಿಂದ ಅಥವಾ ಕೆಲವು ಸಾರಿ ಕಲ್ಲುಗಳಿಂದ ಕಟ್ಟಲಾಗಿದೆ. ಈ ಶಿಖರಗಳ ಮೇಲೆ ಸ್ತೂಪಿ ಮತ್ತು ಕಲಶಗಳಿವೆ. ಕೆಲವು ಶಿಖರಗಳಲ್ಲಿ ಅನೇಕ ದೇವತಾ ಮೂರ್ತಿಗಳನ್ನು ಮಾಡಿದ್ದಾರೆ. ಈ ತರಹದ

ಶಿಖರಗಳು ಈ ಕ್ಷೇತ್ರದಲ್ಲಿ ಕಾಣುವುದಿಲ್ಲ. ನಂತರದಲ್ಲಿ ಗಾರೆಯಿಂದ ಮಾಡಿದ ಶಿಖರವನ್ನು ಗಬ್ಬೂರಿನ ಮೇಲಶಂಕರ ದೇವಾಲಯ, ಜಾಲಹಳ್ಳಿ, ಚಂದನಕೇರಿಯಲ್ಲಿ ಕಾಣಬಹುದು.

ಕಳಶ : ಇದು ದೇವಾಲಯದ ಕೊನೆಯ ಭಾಗ. ಈ ಭಾಗವನ್ನು ಸ್ತೂಪಿಯೆಂದು ಕರೆಯುತ್ತಾರೆ. ಇದು ಶಾಸ್ತ್ರ ರೀತ್ಯಾ ಬಹುಮುಖ್ಯ ಭಾಗವಾಗಿದೆ. ದೇವಾಲಯದ ಎಲ್ಲಾ ಭಾಗಗಳೂ ರಚಿತವಾದ ಮೇಲೆ ಕಳಸ ಸ್ಥಾಪನೆಯನ್ನವುದು ಬಹುಮುಖ್ಯ ಕಾರ್ಯ. ಇದನ್ನು ಗಬ್ಬೂರಿನ ಮೇಲಶಂಕರ ದೇವಾಲಯ, ಮಹಾನಂದೀಶ್ವರ ದೇವಾಲಯ, ವೀರಭದ್ರ ದೇವಾಲಯ, ನೀಲಕಂಠೇಶ್ವರ ದೇವಾಲಯ, ಜಾಲಹಳ್ಳಿ ಬಸವಣ್ಣ ದೇವಾಲಯ, ಈಶ್ವರ ದೇವಾಲಯ, ಚಂದನಕೇರಿಯ ಹನುಮಾನ ದೇವಾಲಯ ಮುಂತಾದವುಗಳಲ್ಲಿ ಕಾಣುತ್ತೇವೆ.

ಗಬ್ಬೂರು ಬೀರಲಿಂಗೇಶ್ವರ ದೇವಾಲಯ

ಸ್ಥಳ : ಸೊಗೂರಪ್ಪಗೌಡರ ಹೊಲದಲ್ಲಿ ಪೂರ್ವಾಭಿಮುಖವಾಗಿದೆ. ಈ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದ ಏಕಕೂಟ ದೇವಾಲಯವಾಗಿದೆ.

ಗರ್ಭಗೃಹ : ಗರ್ಭಗೃಹವು ಚಿಕ್ಕದಾಗಿದ್ದು, ಇದರ ಒಳಗೆ ಕುರಿಯ ಮೇಲೆ ಕುಳಿತಿರುವ ಬೀರಲಿಂಗೇಶ್ವರನ ಶಿಲ್ಪವಿದೆ. ಬಲಭಾಗದಲ್ಲಿ ಮತ್ತೊಂದು ಕುರಿಯ ಶಿಲ್ಪವಿದೆ. ಮೇಲಿನ ಭಾಗದ ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರದ ಮಧ್ಯೆ ಕಮಲದ ಶಿಲ್ಪವಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ ಹಾಗೂ ಅರ್ಧಕಂಬಗಳು ಇವೆ. ಈ ಕಂಬಗಳಲ್ಲಿ ಚಿಕ್ಕವಾದ ಬೋದುಗೆಗಳಿವೆ. ಕೆಳಗಿನ ಭಾಗದಲ್ಲಿ ದ್ವಾರಪಾಲಕರಿದ್ದು, ಇವರ ಕೈಯಲ್ಲಿ ಗದೆ, ಖಡ್ಗ, ಡಮರುಗಳನ್ನು ಹಿಡಿದ್ದಾರೆ. ಇದರ ಮುಖಮಂಟಪವು ಚೌಕಾಕಾರದಲ್ಲಿದೆ. ಇದು ನಾಲ್ಕು ಕಂಬಗಳನ್ನು ಹೊಂದಿದ್ದು, ಚೌಕಾಕಾರದಲ್ಲಿದೆ. ಪೀಠ, ಚೌಕು ಹಾಗೂ ಸಾದಾ ಬೋದಿಗೆಗಳನ್ನು ಹೊಂದಿವೆ. ಈ ದೇವಾಲಯದ ಭಿತ್ತಿಯು ಸರಳವಾಗಿದೆ. ಇದರಲ್ಲಿ ಗಾರೆಯಿಂದ ಮಾಡಿದ ಗೋಪುರವಿದ್ದು, ಒಂದು ಕಳಶವನ್ನು ಇರಿಸಲಾಗಿದೆ. ಈ ದೇವಾಲಯದ ಮುಂದೆ ಗೋಲಾಕಾರದ ಒಂದು ದೀಪಸ್ತಂಭವಿದೆ. ಇದರ ಮುಂದೆ ಒಂದು ಗಣೇಶನ ಶಿಲ್ಪ ಹಾಗೂ ಕಮಲದಳಗಳ ಮಧ್ಯೆ ಪಾದುಕೆಗಳನ್ನು ಬಿಡಿಸಿರುವ ಶಿಲ್ಪವಿದೆ.

ಹಿರೇರಾಯಕುಂಪಿ ಈಶ್ವರ(ರಾಮಲಿಂಗೇಶ್ವರ) ದೇವಾಲಯ

ಈ ದೇವಾಲಯವು ಊರ ಒಳಗೆ ದಕ್ಷಿಣಾಭಿಮುಖವಾಗಿದೆ. ಕಾಲ - ಕ್ರಿ.ಶ.೧೧೩೦.

ಕ್ರಿ.ಶ.೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ವೀರಪೆರ್ಮಾಡಿ ದೇವನಿರುತ್ತಾನೆ. ಶಾಸನದಲ್ಲಿ ಅಹಿಹಯ ವಂಶದವನಾದ ಮೂಲಪರೆ

ಘೋಪಣ, ಅತ್ತುಗ ನರಶಿರೋ ದರ್ಪಣ, ಧ್ವಜ ವಿರಾಜಮಾನ, ಅಣ್ಣಲದೇವನ ಸೇವಕನಾದ ಪೆರ್ಮಾಡಿ ದೇವನು ಅಯ್ಯಣವಾಡಿ ನಾಡನ್ನು ಆಳುತ್ತಿದ್ದಾಗ ಮುದ್ದನೂರಿನ ಬಳಿಯ ರಾಯಕುಂಪಿಯಲ್ಲಿ ಜಯರಾಮ ಎಂಬುವನು ಮಾಡಿಸಿದ ದೇವಾಲಯದ ಅಂಗಭೋಗ ಖಂಡಸ್ಫುಟಿತ ಜೀರ್ಣೋದ್ಧಾರ ಮುಂತಾದ ಕಾರ್ಯಗಳಿಗಾಗಿ, ದೇವಾಲಯದ ಸ್ಥಾನಪತಿಗಳ ಕಾಲನ್ನು ತೊಳೆದು ಧರಣಿದೇವನ ಕೊಲಿನಲ್ಲಿ ೪೦ ಮತ್ತರ ಹೊಲ, ತೋಟ ದಾನ ನೀಡಿದ ಉಲ್ಲೇಖವಿದೆ(ಕವಿಶಾಸಂ ೭, ಪು.೯೧).

ಈ ದೇವಾಲಯದ ತಲವಿನ್ಯಾಸವು ರಾಮಲಿಂಗೇಶ್ವರ ದೇವಾಲಯವು ನವರಂಗ ಗರ್ಭಗೃಹಗಳನ್ನು ಹೊಂದಿದ ಏಕಕೂಟ ದೇವಾಲಯವಾಗಿದೆ. ದೇವದುರ್ಗ ತಾಲ್ಲೂಕಿನ ಪ್ರಾಚೀನ ದೇವಾಲಯಗಳಲ್ಲಿ ಇದು ಒಂದು. ದಕ್ಷಿಣಾಭಿಮುವಾಗಿರುವ ಗರ್ಭಗೃಹದಲ್ಲಿ ಈಶ್ವರಲಿಂಗವಿದೆ. ಇದರ ಗರ್ಭಗೃಹ ತೆರೆದ ಗರ್ಭಗೃಹವಾಗಿದೆ. ಇಲ್ಲಿ ಎರಡು ಗೋಲಾಕಾರದ ಕಂಬಗಳಿವೆ. ಇದರ ನವರಂಗ ಮಂಟಪವು ಅಷ್ಟೇನೂ ದೊಡ್ಡದಲ್ಲದಿದ್ದರೂ ವಿಶೇಷವಾಗಿ ಎರಡು ಈಶ್ವರ ಲಿಂಗಗಳನ್ನು ಹೊಂದಿದೆ. ನವರಂಗ ಮಂಟಪದ ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರದ ಮಧ್ಯೆ ಇರುವ ಕಮಲದ ಎರಡು ಭುವನೇಶ್ವರಿ ಶಿಲ್ಪವನ್ನು ಕಾಣಬಹುದಾಗಿದೆ. ಇದರಲ್ಲಿ ನಾಲ್ಕು ಕಂಬಗಳಿದ್ದು, ಅವು ಚೌಕಾಕಾರದ ಪೀಠ ಮತ್ತು ಕಂಠಗೋಲಾಕಾರ ಹಾಗೂ ಸಾದಾ ಬೋದುಗೆಗಳನ್ನು ಹೊಂದಿವೆ. ಮುಂದೆ ಕಲ್ಲಿನ ಬಾಗಿಲವಾಡವಿದ್ದು, ಅದರ ಮೇಲೆ ಅನೇಕ ಪ್ರಾಣಿಗಳಾದ ನಂದಿ, ನವಿಲು, ಆನೆ, ನಾಯಿ ಮುಂತಾದ ಮೂರ್ತಿಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಬಿತ್ತಿಯು ಸಣ್ಣ ಸಣ್ಣ ಕಲ್ಲುಗಳಿಂದ ಕಟ್ಟಲಾಗಿದ್ದು, ಬಿತ್ತಿಯ ಮಧ್ಯದಲ್ಲಿ ಭಾರವನ್ನು ಹೊರುವುದಕ್ಕಾಗಿ ಬಿಟ್ಟ ೧೨ ಕಂಬಗಳನ್ನು ಇರಿಸಲಾಗಿದೆ. ಅವು ಚೌಕಾಕಾರ ಮತ್ತು ಗೋಲಾಕಾರದಲ್ಲಿವೆ. ದಕ್ಷಿಣಾಭಿಮುಖವಾಗಿರುವ ರಾಮಲಿಂಗೇಶ್ವರ ದೇವಾಲಯದ ಬಿತ್ತಿಯು ಮೂರು ಅಡಿ ಎತ್ತರದ ಅಧಿಷ್ಠಾನವನ್ನು ಹೊಂದಿದೆ. ಈ ದೇವಾಲಯಕ್ಕೆ ಇಂದಿಗೂ ಪೂಜಾರಿಗಳಿದ್ದು, ದೇವಸ್ಥಾನದ ಪೂಜಾಕಾರ್ಯವನ್ನು ಮಾಡುತ್ತಾರೆ. ಈ ದೇವಾಲಯದ ಎಡಭಾಗದಲ್ಲಿ ಕೆಂಚಮ್ಮ ಎಂದು ಕರೆಯುವ ವೀರಗಲ್ಲು ಇದೆ. ದೇವಾಲಯದ ಮುಂದಿನ ಭಾಗದಲ್ಲಿ ಶಾಸನ ಕಲ್ಲನ್ನು ನಿಲ್ಲಿಸಲಾಗಿದೆ.

ಚಂದನಕೇರಿ ಹುನಮಾನ ದೇವಾಲಯ

ದೇವದುರ್ಗ ದಾರಿಯ ಮಧ್ಯದಲ್ಲಿ ದಕ್ಷಿಣಾಭಿಮುಖವಾಗಿದೆ. ಇದು ಏಕಕೂಟ ದೇವಾಲಯ. ಇದು ಗರ್ಭಗುಡಿ, ಮುಖಮಂಟಪಗಳನ್ನು ಒಳಗೊಂಡ ಸರಳ ದೇವಾಲಯವಾಗಿದೆ. ಈ ದೇವಾಲಯದ ಕಂಬಗಳನ್ನು ನೋಡಿದಾಗ ಇದು ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯವೆಂದು ತಿಳಿದುಬರುತ್ತದೆ.

ಗರ್ಭಗೃಹವು ಸರಳ ಹಾಗೂ ಚೌಕಾಕಾರವಾಗಿದ್ದು, ಒಳಗೆ ಆಂಜನೇಯಮೂರ್ತಿಯನ್ನು ಇರಿಸಲಾಗಿದೆ. ಇದರ ದ್ವಾರದ ಬಾಗಿಲವಾಡದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಎರಡು ಅರ್ಧಕಂಬಗಳು

ಚೌಕಾಕಾರದಲ್ಲಿವೆ. ಮೊದಲ ಗರ್ಭಗುಡಿಗೆ ಪ್ರದಕ್ಷಿಣಾ ಪಥವಿದ್ದು ಈಗ ಇದನ್ನು ಮುಚ್ಚಲಾಗಿದೆ. ಆದರೆ ಈಗ ಸದ್ಯದಲ್ಲಿ ಅದು ದೇವಕೋಷ್ಠದ ಆಕಾರದಲ್ಲಿ ಸ್ವಲ್ಪ ಮಾತ್ರ ಕಾಣುತ್ತದೆ. ಹನುಮಾನ ದೇವಾಲಯವು ಚಂದನಕೆರೆಯ ದೇವಾಲಯಗಳಲ್ಲಿ ಸುಂದರವಾಗಿದ್ದು, ಇದರ ಮುಖಮಂಟಪವು ನಾಲ್ಕು ಕಂಬಗಳಿಂದ ಕೂಡಿದೆ. ಈ ಕಂಬಗಳು ಚಚ್ಚೌಕಾರವಾಗಿದ್ದು, ಪೀಠ ಮೇಲಿನ ಕಂಠ ಭಾಗದಲ್ಲಿ ಗೋಲಾಕಾರ ಹಾಗು ಸಾದಾ ಬೋದಿಗೆಗಳನ್ನು ಹೊಂದಿವೆ.

ಈ ದೇವಾಲಯದ ಭಿತ್ತಿಯು ಸಾದಾ ರೀತಿಯಿಂದ ಕೂಡಿದ್ದು, ಈ ಭಿತ್ತಿಯಲ್ಲಿ ನಾಲ್ಕು ಅರ್ಧಕಂಬಗಳಿವೆ. ಭಿತ್ತಿಯ ಮೇಲಿನ ಭಾಗದಲ್ಲಿ ಗಾರೆಯಿಂದ ವಿವಿಧ ಆಕಾರದ ತೆನೆಗಳನ್ನು ಮಾಡಲಾಗಿದೆ. ಇದರ ಗೋಪುರವನ್ನು ಗಾರೆಯಿಂದ ಇತ್ತೀಚಿಗೆ ಮಾಡಲಾಗಿದೆ. ಇದರ ಅಧಿಷ್ಠಾನವು ೨-೩ ಅಡಿ ಎತ್ತರವನ್ನು ಹೊಂದಿದೆ. ಈ ದೇವಾಲಯದ ಸುತ್ತು ಪ್ರಾಕಾರದ ಗೋಡೆಯಿದೆ.

ಮೇಲಶಂಕರ ದೇವಾಲಯ

ಸ್ಥಳ : ಊರ ಒಳಗೆ ಉತ್ತರಾಭಿಮುಖವಾಗಿದೆ ಕಾಲ : ಕ್ರಿ.ಶ.೧೧೦೮೩

ಮೇಲಶಂಕರ ದೇವಾಸ್ಥಾನವು ಈ ಊರಿನ ಭವ್ಯ ಕಟ್ಟಡವಾಗಿದ್ದು ಈ ದೇವಾಲಯವನ್ನು (ಒಕ್ಕಲುಗಳು) ಮೇಳಿಸಾಸಿರ್ವರು ಕಟ್ಟಿಸಿರುತ್ತಾರೆ.

೧. ಕ್ರಿ.ಶ.೧೧೧೦೮೪ರ ಶಾಸನದಲ್ಲಿ ಆರಂಭದ ಭಾಗದಲ್ಲಿ ಗೂಬ್ಬೂರಿನ ವರ್ಣನೆಯಿದೆ. ಈ ವರ್ಣನೆಯಲ್ಲಿ ಗಬ್ಬೂರನ್ನು ಗೋಪುರ ಗ್ರಾಮ ಎಂದು ಕರೆದಿದೆ. ಈ ಊರಿನಲ್ಲಿ ಮೇಳೇಶ್ವರ ದೇವರು ನೆಲೆಸಿ ಗ್ರಾಮದ ಜನಗಳನ್ನು ತನ್ನ ಅನುಗ್ರಹಕ್ಕೆ ಪಾತ್ರರನ್ನಾಗಿಸಿಕೊಂಡಿದ್ದ ಈ ದೇವರ ಒಕ್ಕಲುಗಳನ್ನು ಮೇಳಿಸಾಸಿರ್ವರು ಅಥವಾ ಮೇಳಾಸಾಸಿರ್ಬ್ಬರು ಎಂದು ಕರೆಯುತ್ತಿದ್ದರು. ಇವರನ್ನು ಶಾಸನದಲ್ಲಿ ಸಕಳ ಜೀವರಕ್ಷಕ ಪರೋಪಕಾರಾರ್ಥ ಶರೀರ ಮೇಳೇಶ್ವರ ದೇವರ ಪಾದಪಂಕಜ ಭ್ರಮರರು, ಚಕ್ರವರ್ತಿಯ ರಾಜ್ಯವನ್ನು ಉದ್ಧರಿಸುವವರು. ಶ್ರೀಮಂತರು, ವಿನಯರು, ಸತ್ಯವಂತರು, ನುಡಿದಂತೆ ನಡೆದವರು ದಾನಿಗಳು, ಧರ್ಮಕಾರ್ಯಧುರಂದರು ಮುಂತಾಗಿ ಅತಿಶಯವಾಗಿ ವರ್ಣಿಸಿದೆ. ಇವರು ಹಿರಿಯ ಗೂಬ್ಬೂರಿನಲ್ಲಿ ಮೇಳೇಶ್ವರ ದೇವಾಲಯವನ್ನು ಕಟ್ಟಿಸಿ ಆ ದೇವರ ಪೂಜೆ ಪುನಸ್ಕಾರ, ನೈವೇದ್ಯ, ಅಂಗಭೋಗ, ರಂಗಭೋಗ ದೇವಾಲಯದ ಪರಿಪಾಲನೆ ಮುಂತಾದ ಕೆಲಸಗಳಿಗಾಗಿ ಗೊಬ್ಬರು ಮತ್ತು ಅದಕ್ಕೆ ಸೇರಿದ ಇತರ ಹಳ್ಳಿಗಳ ಜನರು ನೊಗಕಟ್ಟಿ ಉತ್ತುಬಿತ್ತು ಬೆಳೆದ ಬೆಳೆಯಲ್ಲಿ ಸೂಡುಜೋಳವನ್ನು ಹಾಗೂ ವರುಷಪ್ರತಿ ಬಳಸುವ ಒಂದೊಂದು ಕುಂಟಿಗೆ ಒಂದು ಹಣವಿನ ಲೆಕ್ಕದಲ್ಲಿ ನೀಡಬೇಕೆಂದು ತೀರ್ಮಾನಿಸುತ್ತಾರೆ(ಕವಿಶಾಸಂ ೭, ಪು.೪೫).

೨. ಕ್ರಿ.ಶ.೧೧೮೮ರ ಶಾಸನದಲ್ಲಿ ಹಿರಿಯ ಗಬ್ಬೂರಿನ ಮುಂಮುರಿದಂಡ ಸಾಸಿರ್ವರು ಅಯ್ಯಾವೊಳೆ ಐನೂರವರು ಮುಂತಾದ ವ್ಯಾಪಾರಿಗಳು ಮಹಾಲಿಂಗ ಮೇಳೇಶ್ವರ ದೇವರಿಗೆ ಭತ್ತವನ್ನು ದಾನ ಮಾಡಿದ ವರ್ಣನೆಯಿದೆ.

ತಲವಿನ್ಯಾಸ : ಮೇಲಶಂಕರ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಒಳಗೊಂಡ ಸರಳವಾದ ಏಕಕೂಟ ದೇವಾಲಯವಾಗಿದೆ. ಹನ್ನೊಂದರಿಂದ ಹದಿಮೂರನೆ ಶತಮಾನದವರೆಗೆ ಇದ್ದಂತಹ ಗುಡಿಗಳಲ್ಲಿ ಇದು ಬೃಹತ್ತಾದ ದೇವಾಲಯವಾಗಿದೆ (Temples of Raichur and Bellary District, C.S.Patil).

ಗರ್ಭಗೃಹ : ಉತ್ತರಕ್ಕೆ ಮುಖ ಮಾಡಿದ ಗರ್ಭಗೃಹವು ಚೌಕವಾಗಿದ್ದು ಒಳಗೆ ಈಶ್ವರಲಿಂಗವಿದೆ. ಇದರ ಪೀಠವು ಇತ್ತೀಚೆಗೆ ನಿರ್ಮಿತವಾಗಿದೆ. ಗರ್ಭಗೃಹದ ದ್ವಾರವು ದೊಡ್ಡದಾಗಿದ್ದು, ಇದರಲ್ಲಿ ೫ ದ್ವಾರಶಾಖೆಗಳಿದ್ದು ಚೌಕು, ಸುರುಳಿ, ಅರ್ಧಕಂಬ, ಸಿಂಹ ಮತ್ತು ದಳಗಳ ಕೆತ್ತನೆಯನ್ನು ಹೊಂದಿದೆ. ಮಕರ ತೋರಣವು ದೊಡ್ಡದಾಗಿದ್ದು, ಅದರ ಕೊನೆಯ ಭಾಗದಲ್ಲಿ ಕೀರ್ತಿಮುಖಗಳನ್ನು ಕೆತ್ತಲಾಗಿದೆ. ಇವುಗಳ ಕೆಳಭಾಗದಲ್ಲಿ ಶೈವದ್ವಾರಪಾಲಕರಿದ್ದು, ಅವರಿಗೆ ಸಹಾಯಕರಾಗಿ ಇಬ್ಬಿಬ್ಬರು ಸ್ತ್ರೀಯರು ಚೌರಿದಾರಿಗಳಿದ್ದಾರೆ. ದ್ವಾರಪಾಲಕರು ಕೈಯಲ್ಲಿ ಗದೆ, ಡಮರು, ಹಾವನ್ನು ಹಿಡಿದಿದ್ದಾರೆ. ದ್ವಾರದ ಮೇಲ್ಭಾಗದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಮೇಲ್ಛಾವಣಿ ಇದೆ ಮತ್ತು ಈ ಲಿಂಗ ಪೂಜೆಯ ನೀರು ಹೊರಗೆ ಹೋಗಲು ಒಂದು ಪ್ರಣಾಳವಿದ್ದು, ಗರ್ಭಗುಡಿಯ ಗೋಪುರದಲ್ಲಿ ವಿವಿಧ ಮೂರ್ತಿಗಳು ಹಾಗೂ ಒಂದು ಕಳಶವನ್ನು ಇರಿಸಲಾಗಿದೆ.

ಅಂತರಾಳ : ಗರ್ಭಗೃಹದ ನಂತರದ ಅಂತರಾಳದಲ್ಲಿ ನಂದಿಯ ವಿಗ್ರಹವನ್ನಿಡಲಾಗಿದೆ. ಇದರ ಮೇಲ್ಛಾವಣಿಯು ಚೌಕು ಆಕಾರದಲ್ಲಿದೆ. ಅಂತರಾಳದ ಪ್ರವೇಶದಲ್ಲಿ ಎರಡು ಕಂಬಗಳಿದ್ದು, ಇವು ನವರಂಗದ ಕಂಬಗಳಷ್ಟು ದೊಡ್ಡವಾಗಿಲ್ಲ. ಇವುಗಳ ಮಧ್ಯಭಾಗವು ಅಷ್ಟಕೋನಾಕೃತಿ ಮತ್ತು ವೃತ್ತಾಕಾರದ ಪಟ್ಟಿಕೆಗಳನ್ನು ಹೊಂದಿದ್ದು. ಕೆಳಭಾಗವು ಚೌಕಾಗಿದ್ದು ಹೂವುಗಳಿಂದ ಆಲಂಕೃತವಾಗಿದೆ. ಅಂತರಾಳದ ಎರಡು ಅಕ್ಕಪಕ್ಕದಲ್ಲಿ ದೊಡ್ಡ ದೇವ ಕೋಷ್ಟಕಗಳಿವೆ. ಹಿಂದೆ ಅವುಗಳಲ್ಲಿ ಮೂರ್ತಿಗಳನ್ನಿಡುತ್ತಿದ್ದರು. ಆದರೆ ಈಗ ಅಂಥ ಮೂರ್ತಿಗಳಾವುವು ಇಲ್ಲ. ಬದಲಾಗಿ ಬಲಗಡೆಯ ಕೋಷ್ಟಕದ ಕೆಳಗೆ ಬಳಪದ ಜಾತಿಗೆ ಸೇರಿದ ಕಲ್ಲಿನಲ್ಲಿ ಕೆತ್ತಿದ ಗಣೇಶ ವಿಗ್ರಹವಿದೆ. ಅದು ೪೨" ಎತ್ತರ ೪೨" ಅಗಲವಾಗಿದೆ. ಕೆಳಗೆ ಇಲಿಯನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ. ಇದರ ಎಡಭಾಗದಲ್ಲಿ ಒಂದು ಸಣ್ಣ ಆಂಜನೇಯ ವಿಗ್ರಹವಿದೆ.

ಸಭಾಮಂಟಪ : ಮೇಲಶಂಕರ ದೇವಾಲಯದ ಸಭಾಮಂಟಪವು ಗಬ್ಬೂರಿನಲ್ಲಿರುವ ಎಲ್ಲಾ ದೇವಾಲಯಗಳಿಗಿಂತಲೂ ವಿಶಾಲವಾಗಿದ್ದು, ಈ ನವರಂಗ ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ.

ಇವುಗಳ ಪೀಠ ಚಚ್ಚೌಕಾಗಿದ್ದು, ಮಧ್ಯದಲ್ಲಿ ೧೬-೮-೧೬ ಮುಖಪಟ್ಟಿಕೆಗಳಿವೆ. ಇದರ ಮೇಲೆ ಚೌಕ ವೃತ್ತಾಕಾರದ ಮುಚ್ಚಳದ ಮೇಲೆ ಫಲಕವು ಚೌಕಾಗಿದ್ದು, ಅದರ ಮೇಲೆ ಸಾದಾ ಬೋದುಗೆಗಳನ್ನು ರಚಿಸಲಾಗಿದೆ.

ಈ ನವರಂಗ ಮಂಟಪಕ್ಕೆ ಪೂರ್ವ, ಪಶ್ಚಿಮ, ಉತ್ತರದ ಕಡೆಗೆ ಪ್ರವೇಶವಿದ್ದು ಹೊಂದಿದ್ದು, ಪ್ರತಿಯೊಂದರ ಮುಂದೆ ಸೋಪಾನಗಳಿವೆ. ಪಶ್ಚಿಮದ ಪ್ರವೇಶದ ಕಡೆಗೆ ದೇವಾಲಯದ ಮೇಲೆ ಹೋಗಲು ಸುಮಾರು ೨೪ ಸೋಪಾನಗಳಿದ್ದು, ಚಿಕ್ಕದಾದ ಒಂದು ಬಾಗಿಲನ್ನು ಮಾಡಲಾಗಿದೆ. ನವರಂಗವು ಒಟ್ಟು ೯ ಅಂಕಣಗಳನ್ನು ಹೊಂದಿದೆ.

ಮುಖಮಂಟಪ : ಈ ದೇವಾಲಯದ ಮುಖಮಂಟಪದ ಎರಡು ಪಾರ್ಶ್ವಗಳಲ್ಲಿ ದ್ವಾರಪಾಲಕರಿದ್ದಾರೆ. ೮೦ ಅಡಿ ಎತ್ತರ ಮತ್ತು ೨೯ ಅಡಿ ಅಗಲವಿರುವ ಈ ಬೃಹದಾಕಾರದ ಉಬ್ಬುಶಿಲ್ಪಗಳು ಆಕರ್ಷಕವಾಗಿವೆ. ತಮ್ಮ ಎಡಭಾಗದ ಮೇಲಿನ ಕೈಯಲ್ಲಿ ಡಮರು ಕೆಳಗಿನ ಕೈಯಲ್ಲಿ ಗದೆಯನ್ನು ಹಿಡಿದಿದ್ದರೆ, ಬಲಗಡೆಯ ಮೇಲಿನ ಕೈಯಲ್ಲಿ ಹಾವನ್ನು ಹಿಡಿದಿದ್ದಾರೆ. ಕೆಳಗಿನ ಕೈ ಮಂಗಲಹಸ್ತವಾಗಿದೆ. ಈ ಶಿಲ್ಪಗಳು ಕಂಠಾಭರಣ, ಕಾಲ್ಗಡಗ ಮುಂಗೈಯಲ್ಲಿ ರುದ್ರಾಕ್ಷಿಯನ್ನು ಧರಿಸಿವೆ.(ತಿರುಳ್ಗನ್ನಡ, ಪು.೧೭). ಇದರ ಮೇಲೆ ತೋರಣವಿದ್ದು, ಕೊನೆಗೆ ಕೀರ್ತಿಮುಖವಿದೆ. ದ್ವಾರದ ಲಲಾಟಬಿಂಬದ ಸ್ಥಳದಲ್ಲಿ ದೊಡ್ಡ ಕಪೋತವಿದೆ. ಮುಖಮಂಟಪದಲ್ಲಿರುವ ಎರಡು ಕಂಬಗಳು ವೃತ್ತಾಕಾರವಾಗಿವೆ. ಇದರ ಅಕ್ಕಪಕ್ಕದ ಕಕ್ಷಾಸನ ಮೇಲೆ ಹತ್ತು ಕಂಬಗಳನ್ನು ನಿಲ್ಲಿಸಲಾಗಿದೆ. ಪೂರ್ವದ್ವಾರಗಳಲ್ಲಿ ಅರ್ಧಕಂಬಗಳು ಮತ್ತು ಸಮಪಾತಳಿಯ ಲಲಾಟ, ಕಪೋತ ಮುಂದೆ ಬಂದ, ಹಿಂದೆ ಸರಿದ ಭಾಗಗಳಿರುವುದು ಕಂಡುಬರುತ್ತದೆ. ಇದರ ಮೇಲಿನ ಭಾಗದಲ್ಲಿ ಒಂದು ಮೇಲ್ಛಾವಣಿಯಿದೆ. ಮುಖಮಂಟಪದ ದ್ವಾರಬಾಗಿಲ ಮೇಲೆ ನಂತರ ಕಾಲದಲ್ಲಿ ಮಾಡಿದ ಮಂಟಪದ ಆಕಾರದಲ್ಲಿರುವ ಗೋಪುರವಿದ್ದು, ಅದರಲ್ಲಿ ಶಿವಪಾರ್ವತಿ ಹಾಗೂ ಋಷಿಮುನಿಗಳ ವಿಗ್ರಹಗಳಿವೆ. ಇದರ ಮೇಲೆ ಒಟ್ಟು ಸಣ್ಣ ಸಣ್ಣ ಐದು ಕಳಶಗಳಿವೆ.

ಅಧಿಷ್ಠಾನ : ಉತ್ತರಾಭಿಮುಖವಾಗಿರುವ ಮೇಲಶಂಕರ ದೇವಾಲಯವು ಸುಮಾರು ಏಳು ಅಡಿ ಎತ್ತರದ ಅಧಿಷ್ಠಾನದ ಮೇಲೆ ರಚನೆಗೊಂಡಿದೆ. ಈ ಅಧಿಷ್ಠಾನಕ್ಕೆ ಪುಷ್ಪದಳಗಳ ಶಿಲ್ಪವನ್ನು ಕೆತ್ತಲಾಗಿದೆ.


ಭಿತ್ತಿ : ಇದರ ಭಿತ್ತಿಯ ಸಮಪಾತಳಿಯಲ್ಲಿದೆ. ಭಿತ್ತಿಯ ಎಲ್ಲಾ ಭಾಗದಲ್ಲಿ ಹೆಚ್ಚಿನ ಭಾರವನ್ನು ಹೊರಲು ಮಧ್ಯದಲ್ಲಿ ಚಿಕ್ಕ ಉಬ್ಬು ಕಂಬಗಳಿವೆ. ಭಿತ್ತಿಯ ಮೇಲ್ಭಾಗದಲ್ಲಿ ಅಂದರೆ ಕುಂಬೆಯಲ್ಲಿ ಬಸವ ಮತ್ತು ಇತರ ಮೂರ್ತಿಗಳನ್ನಿಡಲಾಗಿದೆ.

ಮಂಜೂರು : ಈ ದೇವಾಲಯದ ಮಂಜೂರು ಇಳಿಬಿದ್ದಂತೆ ಕಾಣುತ್ತದೆ. ಇದು ಒಂದೇ ಹಾಸುಗಲ್ಲಿನಿಂದ ಮಾಡಲಾಗಿದೆ.

ಕಂಬಗಳು : ಮೇಲಶಂಕರ ದೇವಾಲಯದ ಸ್ತಂಭಗಳು ಒಟ್ಟು ಇಪ್ಪತ್ತೆರಡು. ಇವುಗಳಲ್ಲಿ ಮೊದಲನೆಯ ಪ್ರಕಾರದ ಕಂಬಗಳು ಚಚ್ಚೌಕಾಗಿವೆ. ಕಂಠಭಾಗದಲ್ಲಿ ಚೌಕಾಗಿದ್ದು, ಸಾದಾ ಬೋದುಗೆಗಳನ್ನು ಹೊಂದಿವೆ. ಮೂರನೆಯ ಪ್ರಕಾರದ ಕಂಬಗಳು ಕೆಳಗಿನಿಂದ ಕಂಠಭಾಗದವರಿಗೆ ವೃತ್ತಾಕಾರವಾಗಿದ್ದು, ಹಲವು ಪಟ್ಟಿಕೆಗಳು ಮಧ್ಯದಲ್ಲಿ ಬರುತ್ತಿದ್ದು ಕಂಠಭಾಗದಲ್ಲಿ ಗೋಲಾಕಾರದ ಮುಚ್ಚಳ, ಅದರ ಮೇಲೆ ಚೌಕಾಕಾರದ ಹಲಗೆ ಇದ್ದು ಸಾದಾ ಬೋದುಗೆಯನ್ನು ಹೊಂದಿವೆ.

ಇತರೆ : ಇದು ಗಬ್ಬೂರಿನಲ್ಲಿರುವ ಶೈವ ದೇವಾಲಯವಾಗಿದ್ದು, ಇಂದಿಗೂ ಇದರಲ್ಲಿ ಶ್ರಾವಣ ಮಾಸದಲ್ಲಿ ವಿಶೇಷವಾದ ಪೂಜೆಪುನಸ್ಕಾರ ಮತ್ತು ಒಂದು ತಿಂಗಳ ಭಜನೆ ಮಾಡುವರು. ಅಲ್ಲದೆ ಮಳೆ ಬಾರದಿದ್ದರೆ ಇಲ್ಲಿ ಸಪ್ತಭಜನೆ ಮಾಡುವರು ಮತ್ತು ಈ ದೇವಾಲಯದ ಮುಂದೆ ಮೂರು ನಾಗ ಮೂರ್ತಿಗಳು ನಾಲ್ಕು ವೀರಗಲ್ಲು ಶಿಲ್ಪಗಳಿವೆ. ಅಲ್ಲದೆ ಬೃಹತ್ತಾದ ಕಲ್ಯಾಣಿ ಚಾಲುಕ್ಯರ ಕಾಲದ ಒಂದು ಪುಷ್ಕರಣಿ ಇದೆ.

ಮೇಲುಶಂಕರ ದೇವಾಲಯದ ತಳವಿನ್ಯಾಸ



೧. ಮುಖಮಂಟಪ

೨. ನವರಂಗಮಂಟಪ

೩. ಅಂತರಾಳ

೪. ಗರ್ಭಗೃಹ

೫. ದ್ವಾರಗಳು

೬. ಸೋಪಾನಗಳು

೭. ದೇವಾ ಕೋಷ್ಠಗಳು

□ ಕಂಬಗಳು

ಏಳುಬಾವಿ ಬಸವಣ್ಣ ದೇವಾಲಯ

ಸ್ಥಳ : ಈ ದೇವಾಲಯವು ವೆಂಕಟೇಶ್ವರ ದೇವಾಲಯದ ಪೂರ್ವಭಾಗದಲ್ಲಿ ಉತ್ತರಾಭಿಮುಖವಾಗಿದೆ. ಗಬ್ಬೂರಿನ ಚಂಡಿದರ್ವಾಜಿಗೆ ಸೇರಿಸಿರುವ ಶಾಸನದಲ್ಲಿ ಗಬ್ಬೂರಿನಲ್ಲಿ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ ಪುನಸ್ಕಾರಕ್ಕೆ ಗಬ್ಬೂರಿನ ಮಾಲೆಗಾರ ಅರವತ್ತೊಕ್ಕಲು ಮತ್ತು ಬಿಲ್ಲ ಮುನ್ನೂರು ಬಾಡುಬಾಯಿ ಮಾರಿದ ಹೆಡಗೆಗೆ ಅರವಾನ ಭತ್ತ ನೀಡಬೇಕೆಂದಿದೆ. ಇದನ್ನು ಹೊರಗೆ ಮಾರಿದಲ್ಲಿ ಬಿಲ್ಲಕಾಯಿ ಹೆಡಗೆಗೆ ಒಮ್ಮಾನ ಉಪ್ಪಿನ ಹಡಗಗೆ ಅರವಾನ ಭತ್ತ ಕೊಡಬೇಕೆಂದು ತೀರ್ಮಾನಿಸುತ್ತಾರೆ. ಮಹಾಜನಗಳು ನಾಗಭೂಷಣ ದೇವರಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ. ಈ ನಾಗಭೂಷಣ ಲಿಂಗ ಏಳುಬಾವಿ ಬಸವಣ್ಣ ದೇವಾಲಯದ ಪಶ್ಚಿಮದ ಗರ್ಭಗೃಹದಲ್ಲಿರುವುದನ್ನು ಕಾಣಬಹುದು(ಕವಿಶಾಸಂ ೭ ಪು.೭೧).

ತಲವಿನ್ಯಾಸ : ಇದು ಉತ್ತರಾಭಿಮುಖವಾಗಿರುವ ಒಂದು ತ್ರಿಕೂಟ ದೇವಾಲಯ ದಕ್ಷಿಣದಲ್ಲಿ ಏಳು ಬಾವಿಗಳ ದಂಡೆಯ ಮೇಲಿದೆ. ಅಷ್ಟೇನೂ ಎತ್ತರದ ತಲವಿನ್ಯಾಸವನ್ನು ಹೊಂದಿರದ ಈ ಗುಡಿಯು ಮೂರು ಗರ್ಭಗೃಹ, ಸುಕನಾಸಿ ಒಂದು ನವರಂಗವನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ದಕ್ಷಿಣದ ಗರ್ಭಗುಡಿಯಲ್ಲಿ ಶಿವನ ನಿಂತ ಭಂಗಿಯ ಸುಂದರ ಶಿಲ್ಪವಿದೆ. ೫೨ ಅಡಿ ಅಗಲ ೧೫ ಅಡಿ ಎತ್ತರ, ೨೩ ಅಡಿ ಉದ್ದ ಪೀಠದ ಮೇಲೆ ನಿಂತಿರುವ ಈ ಶಿಲ್ಪವು ೪೮" ಎತ್ತರ ೨೫" ಅಗಲವಾಗಿದೆ. ಕರಿಶಿಲೆಯಲ್ಲಿರುವ ಈ ವಿಗ್ರಹಕ್ಕೆ ನಾಲ್ಕು ಕೈಗಳಿದ್ದು, ಈಗ ಕೈಗಳು ಮತ್ತು ಬಲ ಕಿವಿ ಭಗ್ನಗೊಂಡಿವೆ. ಶಿವನ ಎಡ ಕಿವಿಯಲ್ಲಿ ಚಕ್ರ ಕುಂಡಲ ಧರಿಸಿದ್ದು ಬಲಗಡೆ ನಂದಿಯ ಶಿಲ್ಪವಿದೆ. ಈ ಶಿವನ ಮೂರ್ತಿಯು ಕಂಠಾಭರಣ, ಕಾಲ್ಗಡಗ, ಸೊಂಟಪಟ್ಟಿಕೆಗಳನ್ನು ಧರಿಸಿದ್ದಾನೆ. ಇದಕ್ಕೆ ಮೇಲ್ಛಾವಣಿ ಇದ್ದು ಇದರ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಅಂತರಾಳದಲ್ಲಿ ಗಣೇಶನ ವಿಗ್ರಹ ಹಾಗೂ ಛತ್ತಿನಲ್ಲಿ ಮೇಲ್ಛಾವಣಿ ಕೂಡ ಈ ಅಂತರಾಳದಲ್ಲಿ ಕಾಣಬಹುದು.

ಪೂರ್ವದ ಗರ್ಭಗೃಹ : ಪಶ್ಚಿಮ ಮುಖವಾಗಿರುವ ಈ ಗರ್ಭಗುಡಿಯಲ್ಲಿ ದೊಡ್ಡ ನಂದಿ ಇದೆ. ಅದು ೬೧" ಎತ್ತರ, ೮೭" ಉದ್ದ ಮತ್ತು ೩೪ ಅಡಿ ಅಗಲವಾಗಿದೆ. ದೊಡ್ಡ ಗಂಟೆಗಳ ಸರವನ್ನು ಕೊರಳಿನಲ್ಲಿ ಧರಿಸಿದೆ. ಅದರ ಹಣೆಪಟ್ಟಿ ಸುಂದರವಾಗಿದೆ. ನಂದಿಯ ಮೇಲೆ ನೇರವಾಗಿ ಸೂರ್ಯಕಿರಣಗಳು ಬೀಳುವಂತೆ ಪೂರ್ವದ ಗೋಡೆಯಲ್ಲಿ ಸಣ್ಣದಾದ ಜಾಲಂಧ್ರ ಮಾಡಲಾಗಿದೆ. ಒಟ್ಟು ಇಲ್ಲಿ ೬ ಭಿತ್ತಿ ಕಂಬಗಳಿದ್ದು ೨ ಕಂಬಗಳು ನಂದಿಯ ಹಿಂದಿನ ಭಾಗದಲ್ಲಿ ಇರಿಸಲಾಗಿದೆ. ಈಗ ನಂದಿಯ ಬಾಲವು ಸ್ವಲ್ಪ ಭಿನ್ನವಾಗಿದೆ. ಇದರಲ್ಲಿ ೨ ಭುವನೇಶ್ವರಿಗಳಿವೆ.

ಪಶ್ಚಿಮದ ಗರ್ಭಗೃಹ : ಪೂರ್ವಾಭಿಮುಖವಾಗಿರುವ ಈ ಗರ್ಭಗುಡಿಯಲ್ಲಿ ಚೌಕಾಕಾರದ ಪೀಠದ ಮೇಲೆ ನಾಗಭೂಷಣ ಲಿಂಗವಿದ್ದು, ಇದರ ಬಾಗಿಲಿನಲ್ಲಿ ಇಬ್ಬರು ಚೌರಿದಾರಿಗಳಿದ್ದಾರೆ. ಮೇಲುಗಡೆ ಗಜಲಕ್ಷ್ಮಿಯ ಶಿಲ್ಪವಿದೆ. ಇದರಲ್ಲಿ ಮೇಲಿನ ಭಾಗದಲ್ಲಿ ಶಿಲ್ಪವನ್ನು ಕಾಣಬಹುದು.

ಅಂತರಾಳ : ಸುಖನಾಸಿಯ ತೋರಣವು ತುಂಬ ಆಕರ್ಷಕವಾಗಿದೆ. ಅದು ಹೋಲಿಕೆಯಲ್ಲಿ ಕುಕನೂರಿನ ನವಲಿಂಗೇಶ್ವರ ಗುಡಿಯಲ್ಲಿರುವಂತೆ ಇದೆ. ಈ ಸುಖನಾಸಿಯ ತೋರಣದಲ್ಲಿ ಚಿಕ್ಕ ಮಂಟಪವಿದೆ. ಅದರಲ್ಲಿ ಶಿವಪಾರ್ವತಿಯರು ಕುಳಿತಿದ್ದಾರೆ. ಅವರ ಎಡ ಬಲಕ್ಕಿರುವ ಮಕರಗಳು ಕಲಾತ್ಮಕತೆಯಿಂದ ಕೂಡಿದೆ. ಶಿವನ ಪಕ್ಕದಲ್ಲಿ ನಂದಿ ಇದೆ. ಈ ತೋರಣದ ಬಲತುದಿಯಲ್ಲಿ ಬ್ರಹ್ಮ ಸರಸ್ವತಿಯರಿದ್ದಾರೆ. ಎಡ ತುದಿಯಲ್ಲಿ ಅರೆನಗ್ನ ಸ್ಥಿತಿಯಲ್ಲಿರುವ ಸ್ತ್ರೀಯು ಓಲೆಯನ್ನು ಬರೆಯುತ್ತಿದ್ದಾಳೆ. ಅವಳ ಬಲಕ್ಕೆ ವಿಷ್ಣು ಲಕ್ಷ್ಮಿಯರಿದ್ದಾರೆ. ಈ ಎಲ್ಲ ಶಿಲ್ಪಗಳ ಮೇಲ್ಭಾವಣಿಯಲ್ಲಿ ನಾಲ್ಕು ಜನ ದಂಪತಿಗಳು ತಮ್ಮ ವಾಹನಗಳ ಮೇಲೆ ಕುಳಿತು ಸಂಗೀತ ಮೇಳದೊಂದಿಗೆ ಹೋಗುವ ಶಿಲ್ಪಗಳಿವೆ. ಅದರಲ್ಲಿ ಜಿಂಕೆ, ಕುದುರೆ ಮತ್ತು ನಂದಿಗಳಿವೆ. ಅಷ್ಟೇ ಅಲ್ಲದೆ ಸುಕನಾಸಿಯಲ್ಲಿ ಒಂದು ಭುವನೇಶ್ವರಿ ಇದ್ದು ಬಾಗಿಲಿನಲ್ಲಿ ದ್ವಾರಪಾಲಕರು ನಿಂತಿದ್ದಾರೆ.

ನವರಂಗ : ಇದು ನಾಲ್ಕು ಕಂಬಗಳಿಂದ ಕೂಡಿದ್ದು, ಪೀಠ ಚಚ್ಚೌಕ, ಕಂಠ ಭಾಗವಲ್ಲಿ ವರ್ತುಲಾಕಾರದ ಮುಚ್ಚಳವಿದ್ದು ಇದರಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಸಭಾಮಂಟಪದ ಪೂರ್ವದ ಕಡೆಯ ಗೋಡೆಯಲ್ಲಿ ಗಣೇಶ ಮಹಿಷಾಸುರ ಮರ್ದಿನಿಯರ ವಿಗ್ರಹಗಳನ್ನು ಕಾಣಬಹುದು. ಈ ದೇವಾಲಯದ ಅಧಿಷ್ಠಾನವು ಹೂತುಹೋಗಿದೆ. ಏಳುಬಾವಿ ಬಸವಣ್ಣ ದೇವಾಲಯದ ಮುಖಮಂಟಪ ಉತ್ತರಕ್ಕಿದ್ದು ಇದ್ದು ಇದರ ಬಾಗಿಲು ಸರಳವಾಗಿದೆ. ಇತ್ತೀಚೆಗೆ ಈ ಬಾಗಿಲಿಗೆ ಕಟಾಂಜನವನ್ನು ಮಾಡಿ ಬಾಗಿಲು ಮುಚ್ಚುವ ವ್ಯವಸ್ಥೆ ಮಾಡಿದ್ದಾರೆ. ನವರಂಗದ ಛತ್ತಿನ ಮೇಲೆ ಒಂದು ಭುವನೇಶ್ವರಿ ಇದ್ದು, ಗೋಡೆಯಲ್ಲಿ ಆನೆಗಳ ಸಾಲು ಇದೆ. ಬೆಳಕಿಗಾಗಿ ಎರಡು ದೊಡ್ಡ ಕಿಟಕಿಗಳನ್ನು ಮಾಡಲಾಗಿದೆ.

ಮುಖಮಂಟಪ : ಮುಖಮಂಟಪವು ಭಿತ್ತಿಸ್ತಂಭಗಳನ್ನು ಹೊಂದಿದ್ದು, ಇದರ ಬಾಗಿಲಿನಲ್ಲಿ ಮಂಜೂರವು ಇಳಿಜಾರು ರೂಪದಲ್ಲಿದೆ. ಬಾಗಿಲಿನ ಮೇಲೆ ಗಜಲಕ್ಷ್ಮಿಯ ಚಿತ್ರವಿದ್ದು ಅರ್ಧಕಂಬಗಳ ಕೆಳಗಡೆ ಪೂರ್ಣಕುಂಬಗಳ ಚಿತ್ರವನ್ನು ಕಾಣಬಹುದು. ಮುಖಮಂಟಪದ ಬಲಗಡೆಯ ಸ್ಥಳದಲ್ಲಿ ಶಾಸನ ಕಲ್ಲನ್ನು ನಿಲ್ಲಿಸಲಾಗಿದೆ. ಅದರ ಮುಂದೆ ಎರಡು ನಾಗಮೂರ್ತಿಗಳಿವೆ.


ಸ್ತಂಭಗಳು : ನವರಂಗ ಮಂಟಪದಲ್ಲಿ ನಾಲ್ಕು ಕಂಬಗಳಿದ್ದು ಪೀಠ ಚಚ್ಚೌಕದ ಕಂಠಭಾಗದಲ್ಲಿ ವರ್ತುಲಕಾರದ ಮುಚ್ಚಳ ಇದ್ದು. ಇದರ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ನಂದಿಮಂಟಪದ ಕಂಬಗಳು ಹೊಸದಾಗಿ ನಿರ್ಮಿತವಾಗಿದ್ದು ಇವು ಪೀಠ ಚಚ್ಚೌಕದ ಮೇಲೆ ಸಾದಾ ಬೋದುಗೆಗಳನ್ನು

ಹೊಂದಿವೆ ಮತ್ತು ಕಕ್ಷಾಸನವೂ ಕಂಬಗಳನ್ನು ಹೊಂದಿದ್ದು, ಅದಕ್ಕೆ ಚೌಕ, ಮಧ್ಯ, ಅಷ್ಟಕೃತಿ ಮತ್ತು ವೃತ್ತದಂತಹ ಮುಚ್ಚಳಗಳಿವೆ. ಮಣಿಕಟ್ಟು ಅಲಂಕೃತವಾಗಿದೆ. ಇದು ಡಬ್ಬದ ರೂಪದಲ್ಲಿವೆ. ಎಲ್ಲವನ್ನೂ ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿದೆ. ಭಿತ್ತಿಯಲ್ಲೂ ಕುಡ್ಯಸ್ತಂಭಗಳಿವೆ.

ಭಿತ್ತಿ : ಭಿತ್ತಿಯಲ್ಲಿ ಆನೆಗಳ ಸಾಲು ಇದ್ದು ಅದರಲ್ಲಿ ಒಂದು ಆನೆಯು ಮರಿ ಹಾಕುವ ಚಿತ್ರ ಗಮನಾರ್ಹವಾಗಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳು ಹಾಗೂ ಎಡಗೋಡೆಯಲ್ಲಿ ಬಳ್ಳಿಯ ಚಿತ್ರವಿದ್ದು ಹಿಂದಿನ ಗೋಡೆಯಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಮೂರ್ತಿಯ ಶಿಲ್ಪವಿದೆ. ಭಿತ್ತಿಯ ಬಾಗಿಲಿನಲ್ಲಿ ದ್ವಾರಪಾಲಕರು, ಗಜಲಕ್ಷ್ಮಿಯ ಶಿಲ್ಪ, ಪೂರ್ಣಕುಂಭಗಳು, ತೋರಣದ ಶಿಲ್ಪಗಳಿರುವುದನ್ನು ಕಾಣಬಹುದು.

ಇತರೆ : ಈ ದೇವಾಲಯಕ್ಕೆ ಇಂದಿಗೂ ಚಿಕ್ಕಮಠದವರು ಪೂಜಾರಿಗಳಾಗಿದ್ದು ಈ ನಂದಿಯ ದೇವರಿಗೆ ಕಾರ್ತೀಕಮಾಸದಲ್ಲಿ ವಿಶೇಷ ಪೂಜೆ ಮತ್ತು ಎಲೆಪೂಜೆಯನ್ನು ಮಾಡುತ್ತಾರೆ.

ಏಳು ಬಾವಿ ಬಸವಣ್ಣ ದೇವಾಲಯದ ತಳವಿನ್ಯಾಸ



೧. ನವರಂಗಮಂಟಪ

೨. ಸುಖನಾಸಿ

೩. ಗರ್ಭಗೃಹಗಳು

೪. ಕಿಟಕಿಗಳು

೫. ದ್ವಾರ

□ ಕಂಬಗಳು

ಈಶ್ವರ ದೇವಾಲಯ

ಸ್ಥಳ : ವೆಂಕಟೇಶ್ವರ ದೇವಾಲಯದ ಪೂರ್ವದ ಕಡೆಗೆ

ತಲವಿನ್ಯಾಸ : ಈ ದೇವಾಲಯವು ಗಬ್ಬೂರಿನ ಪ್ರಸಿದ್ಧ ದೇವಾಲಯವಾದ ವೆಂಕಟೇಶ್ವರ ದೇವಾಲಯದ ಪೂರ್ವ ಭಾಗದಲ್ಲಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದ್ದು ಏಕಕೂಟ ದೇವಾಲಯವಾಗಿದೆ. ಈ ದೇವಾಲಯವು ಪೂರ್ವಕ್ಕೆ ಮುಖಮಾಡಿ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮುಖಮಂಟಪಗಳನ್ನು ಹೊಂದಿದೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದ್ದು ಗರ್ಭಗೃಹ ಮಧ್ಯದಲ್ಲಿ ವೃತ್ತಾಕಾರದ ಪೀಠದ ಮೇಲೆ ಲಿಂಗವನ್ನು ಇಡಲಾಗಿದೆ. ಇದರ ಜೊತೆಗೆ ಐದು ಮುಖದ ಕಾರ್ತಿಕೇಯನ ಶಿಲ್ಪವಿದ್ದು, ಕಾರ್ತಿಕೇಯನು ನವಿಲಿನ ಮೇಲೆ ಕುಳಿತಿದ್ದಾನೆ. ಈ ಗರ್ಭಗೃಹದ ಬಾಗಿಲು ಪಟ್ಟಿಕೆಗಳು ಶಾಖೆಗಳನ್ನು ಹೊಂದಿದ್ದು, ತಳಭಾಗದಲ್ಲಿ ಕುಂಬಾಲತಾಗಳನ್ನು ಕಾಣಬಹುದು. ಬಾಗಿಲಿಗೆ ಅರ್ಧಕಂಬಗಳು ಹಾಗೂ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ.

ಅಂತರಾಳ : ಇದರ ಅಂತರಾಳವು ತೆರೆದುಕೊಂಡಿದ್ದು ಇಲ್ಲಿ ನಾಲ್ಕು ಕಂಬಗಳಿವೆ. ಇದರ ಛತ್ತಿನಲ್ಲಿ ಚೌಕಾಕಾರದ ಕಮಲವನ್ನು ಕಾಣಬಹುದು.

ನವರಂಗ : ನವರಂಗದಲ್ಲಿ ನಾಲ್ಕು ಕಂಬಗಳಿದ್ದು. ಅವು ಪೀಠ ಚೌಕವೃತ್ತಾಕಾರದ ಪಟ್ಟಿಕೆಗಳ ಜೊತೆಗೆ ಪುಷ್ಪದಳಗಳನ್ನು ಹೊಂದಿ ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳವನ್ನು ಹೊಂದಿದೆ. ಅದರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳಿರುವುದನ್ನು ಕಾಣಬಹುದು. ಉತ್ತರಕ್ಕೆ ಕಂಬಗಳಿವೆ. ಮಧ್ಯಭಾಗದಲ್ಲಿ ಕಮಲದ ಹೂ ಚಿತ್ರಿಸಲಾಗಿದೆ. ಉಳಿದವು ಆಯತಾಕಾರದ ಮತ್ತು ಚೌಕಾಕಾರ ಇದ್ದು ಸಮಪಾಟಾಗಿದೆ. ನಡುವಿನ ಅಂಕಣವು ದೊಡ್ಡದಾಗಿ ಇಕ್ಕಟ್ಟಾಗಿದೆ. ಪ್ರವೇಶದ ಬಾಗಿಲಿನಲ್ಲಿ ಎರಡು ಕಂಬಗಳಿವೆ. ಸಭಾಮಂಟಪದ ಕಂಬಗಳು ಅದನ್ನು ಹೋಲುತ್ತವೆ. ಆದರೆ ಅವುಗಳನ್ನು ತಿರುವು ಮಾಡಿ ಕವಚ ರೂಪದಲ್ಲಿ ಇಡಲಾಗಿದೆ.

ಭಿತ್ತಿ ಮತ್ತು ಸ್ತಂಭಗಳು : ಗೋಡೆಗಳು ಆಳದಲ್ಲಿ ಹೂತುಕೊಂಡಿದೆ. ಹೊರಗೋಡೆಗಳಲ್ಲಿ ಅಂತಹ ಸುಂದರವಾದ ಕೆತ್ತನೆ ಕಾಣುವುದಿಲ್ಲ. ಆದರೆ ದೇವಾಲಯದ ಒಳಭಾಗದಲ್ಲಿ ಸ್ವಲ್ಪ ಅಲಂಕೃತವಾದ ಕೆಲವೊಂದು ಚಿತ್ರಗಳನ್ನು ಕಂಬಗಳಲ್ಲಿ ಕಾಣಬಹುದು. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಅವುಗಳನ್ನು ನೋಡಿದರೆ ಚೌಕಾಕಾರದ ಮಧ್ಯಮಾಕಾರದ, ಅಷ್ಟಾಕಾರದ, ಗೋಲಾಕಾರದ ಮತ್ತು ಬೋರಲು ಮಾಡಿದ ಮಣಿಕಟ್ಟುಗಳು ಕಾಣುತ್ತವೆ. ದೇವಾಲಯವು ಸಣ್ಣದಿರುವುದರಿಂದ ಸಣ್ಣ ಕಂಬಗಳನ್ನು ಹಾಕಲಾಗಿದೆ.

ಇತರೆ : ಈಶ್ವರ ಗುಡಿಯ ಪೂಜೆಯನ್ನು ಬಸವಣ್ಣ ದೇವಾಲಯದ ಪೂಜಾರಿಗಳು ಮಾಡುತ್ತಾರೆ. ಈ ದೇವಾಲಯದ ಎದುರು ಕಟ್ಟೆಯ ಮೇಲೆ ದೀಪಸ್ತಂಭವಿದೆ. ಇದರ ಎಡಭಾಗದಲ್ಲಿ ಸೋಪಾನಗಳಿದ್ದು, ಜೊತೆಯಲ್ಲಿ ಎರಡು ಗಜಗಳಿವೆ.

ಹರಿಹರ ದೇವಾಲಯ

ಸ್ಥಳ : ವೆಂಕಟೇಶ್ವರ ದೇವಾಲಯದ ಪಶ್ಚಿಮ ಭಾಗದಲ್ಲಿ ಪೂರ್ವಭಿಮುಖವಾಗಿದೆ **ಕಾಲ :** ಕ್ರಿ.ಶ.೧೧೭೧

ಕ್ರಿ.ಶ.೧೧೭೧ರ ಶಾಸನದಲ್ಲಿ ರಾಯಿಕೊಡ ಹರಿಹರ ದಾಸರಾದ ಸೋಮೇಶ್ವರ ಭಟ್ಟರ ಮಗಳು ಲಕ್ಷುಮಕ್ಕ ಸರ್ವನಮಸ್ಯದ ಅಗ್ರಹಾರವಾದ ಹಿರಿಯ ಗಬ್ಬೂರಿನ ಮೊಸಂಗಿಯ ಭಾಗದಲ್ಲಿ ರಾಯಿಕೊಡವರ ಭಾಗದಲ್ಲಿ ತನ್ನ ತಂದೆಯ ಕಡೆಯಿಂದ ತನ್ನ ಭಾಗವಾಗಿ ಬಂದ ಬೆಳೆಯ ಭಾಗವನ್ನು ಕೋಟಿ ಹೋಮಕ್ಕೆ ಮತ್ತು ತನ್ನ ತಂದೆ ಗೊಬ್ಬೂರಿನಲ್ಲಿ ಪ್ರತಿಷ್ಠೆ ಮಾಡಿಸಿದ ಹರಿಹರ ದೇವರಿಗೆ ಮತ್ತು ಸಿದ್ಧ ಸೋಮನಾಥದೇವರಿಗೆ ಪೂಜೆ ಪುನಸ್ಕಾರ, ಧೂಪದೀಪ ನೈವೇದ್ಯ, ವಸ್ತ್ರಾಲಂಕಾರ ಧರ್ಮದ ಛತ್ರಕ್ಕೆ ಸಲ್ಲುವಂತೆ ತನ್ನ ತಂದೆ ಮತ್ತು ತನ್ನ ಗಂಡನ ಶ್ರೇಯೋಭಿವೃದ್ಧಿಗೆಂದು ಬಿಡುತ್ತಾಳೆ(ಕವಿಶಾಸಂ ೭, ಪು.೫೭).

ತಲವಿನ್ಯಾಸ : ಹರಿಹರ ದೇವಾಲಯವು ತ್ರಿಕೂಟ ಮಾದರಿಯ ದೇವಾಲಯವಾಗಿದ್ದು ಇದರ ಗರ್ಭಗೃಹಗಳು ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕಿನ ಕಡೆಗಿವೆ. ಪೂರ್ವದ ಕಡೆಗೆ ಮುಖ ಮಾಡಿದ ಒಂದು ಸಭಾಮಂಟಪವಿದೆ.

ಗರ್ಭಗೃಹ : ಹರಿಹರ ದೇವಾಲಯದ ಗರ್ಭಗೃಹಗಳ ಬಾಗಿಲುಗಳು ಸಮತಟ್ಟಾದ ಪಟ್ಟಿಯನ್ನು ಹೊಂದಿವೆ. ಇಲ್ಲಿ ಪೂರ್ಣಕುಂಭವನ್ನು ಕೆತ್ತಲಾಗಿದೆ. ಇದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಇದರಲ್ಲಿ ಅರ್ಧಕಂಬಗಳಿದ್ದು ಇವುಗಳಲ್ಲಿ ಮಣಿಸರ ಆಕಾರದ ಚಿತ್ರವನ್ನು ಕೆತ್ತಲಾಗಿದೆ. ಉತ್ತರ ಗರ್ಭಗೃಹದ ಎಡಭಾಗದಲ್ಲಿ ಮತ್ತೊಂದು ಚಿಕ್ಕ ಗರ್ಭಗುಡಿ ಮಾಡಲಾಗಿದೆ. ಈ ಎಲ್ಲಾ ಗರ್ಭಗೃಹಗಳಿಗೆ ಮೇಲ್ಹಾವಣಿಗಳಿದ್ದು ಇವುಗಳಲ್ಲಿ ಯಾವ ಮೂರ್ತಿ ಇಲ್ಲದೆ ಖಾಲಿಯಾದ ಗರ್ಭಗೃಹಗಳಾಗಿವೆ.

ಅಂತರಾಳ : ಗರ್ಭಗೃಹ ಆದ ನಂತರ ಬರುವ ಮಂಟಪವೇ ಅಂತರಾಳ ಮಂಟಪ. ಈ ಮಂಟಪಗಳು ಚೌಕಾಕಾರದಲ್ಲಿವೆ. ಇದರ ಅಂತರಾಳದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಬಾಗಿಲಿನಲ್ಲಿ ಪೂರ್ಣಕುಂಭಗಳಿದ್ದು, ಈ ಅಂತರಾಳದ ಛತ್ತಿನಲ್ಲಿ ಭುವನೇಶ್ವರಿಯ ಶಿಲ್ಪಗಳಿವೆ.

ಸಭಾಮಂಟಪ : ಸಭಾಮಂಟಪದ ಅಂಗಳವು ಬಯಲಾಗಿದೆ. ಪೂರ್ವದಲ್ಲಿ ನಾಲ್ಕು ಕಂಬಗಳು ಹಾಗು ನಡುವಿನಲ್ಲಿ ನಾಲ್ಕು ಕಂಬಗಳಿವೆ. ಅದರಲ್ಲಿ ತರಹತರಹದ ಚಿತ್ರಗಳನ್ನು ತೆಗೆಯಲಾಗಿದೆ. ಮೂಲೆಯಲ್ಲಿರುವ

ಕಂಬಗಳು ಚೌಕಾಕಾರವಾಗಿವೆ. ಕಂಬಗಳು ಅಷ್ಟಾಕೃತಿ, ಪಂಚಾಕೃತಿಗಳಿಂದ ಕೂಡಿದ್ದು ಗಂಟೆಗಳನ್ನು ಹೊಂದಿವೆ. ಅದಕ್ಕೆ ತಳಿರು ತೋರಣ ಕಟ್ಟಿದಂತಿದೆ. ಉಳಿದೆಡೆಗಳಲ್ಲಿಯೂ ಕೂಡ ತಳಿರು ತೋರಣ ಕಟ್ಟಿದಂತಿದೆ. ನಡುಭಾಗದಲ್ಲಿ ಕಮಲದ ಹೂವಿನ ಮೇಲ್ಛಾವಣಿ ಇದೆ.

ಭಿತ್ತಿ ಮತ್ತು ಸ್ತಂಭಗಳು : ಪಶ್ಚಿಮದ ಗೋಡೆಯು ಮತ್ತು ದಕ್ಷಿಣದ ಗೋಡೆಯು ಕೆಳಗಿಳಿದಂತೆ ತೋರುತ್ತದೆ. ಅಂದರೆ ಸುಮಾರು ೩ ಅಡಿ ಆಳದಲ್ಲಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳು ಇವೆ. ಹರಿಹರ ದೇವಾಲಯದ ಭಿತ್ತಿಯು ಯಾವುದೇ ಅಲಂಕೃತವಿಲ್ಲದೆ ಸಾದಾರೂಪವಾಗಿವೆ. ಪ್ರವೇಶ ಭಾಗದಲ್ಲಿ ನಾಲ್ಕು ಕಂಬಗಳಿದ್ದು ಈ ಕಂಬಗಳ ನಡುವೆ ಒಂದು ತರಹದ ಕವಚವಿದೆ ಮತ್ತು ಕಂಬವು ಪರದೆ ಹೊಂದಿದಂತಿದೆ.

ಇತರೆ : ಗುಡಿಯ ಎಲ್ಲಾ ಬಾಗಿಲುಗಳು ಪೂರ್ವಕುಂಭಗಳಿಂದ ಕೂಡಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಕಪೋತವಿಲ್ಲ. ತ್ರಿಕೋನ ಆಕಾರದ ಐದು ಬುರುಜುಗಳಿವೆ. ಮತ್ತು ಹರಿಹರ ದೇವಾಲಯದ ಆವರಣದಲ್ಲಿ ಶಾಸನವನ್ನು ಇರಿಸಲಾಗಿದೆ. ಇದರ ಮುಂದೆ ಒಂದು ಸಣ್ಣ ಬಾವಿ ಇದ್ದು ಇದನ್ನು ಈಗ ಮುಚ್ಚಲಾಗಿದೆ. ಅದರ ಪಕ್ಕದಲ್ಲಿ ಆನೆಯನ್ನು ಕಟ್ಟಿ ಹಾಕಲು ಕಲ್ಲಿನಿಂದ ಮಾಡಿದ ಒಂದು ಗಜಕಂಬವಿದೆ. ಈ ದೇವಾಲಯವನ್ನು ಇತ್ತೀಚೆಗೆ ಸ್ಥಳೀಯರು ಬಿಚ್ಚಾಲಿಮಠವೆಂದು ಕರೆಯುತ್ತಾರೆ.

ಚಿಕ್ಕಮಠ(ಈಶ್ವರ ಗುಡಿ)

ಸ್ಥಳ : ವೆಂಕಟೇಶ್ವರ ದೇವಾಲಯದ ಮುಂದಿನ ಭಾಗದಲ್ಲಿ ಉತ್ತರಾಭಿಮುಖವಾಗಿದೆ.

ತಲವಿನ್ಯಾಸ : ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು. ಇದು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ-ಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಗರ್ಭಗೃಹದಲ್ಲಿ ಈಶ್ವರ ಲಿಂಗವಿದ್ದು, ಮೇಲಿನ ಛತ್ತಿನಲ್ಲಿ ಕಮಲದ ಭುವನೇಶ್ವರಿಯ ಶಿಲ್ಪವಿದೆ. ಗರ್ಭದ ಬಾಗಿಲಿನಲ್ಲಿ ಅರ್ಧಕಂಬಗಳು ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ ಹಾಗೂ ಈ ಅರ್ಧಕಂಬಗಳ ಕೆಳಭಾಗದಲ್ಲಿ ಪೂರ್ಣಕುಂಭಗಳಿದ್ದು ಗರ್ಭಗೃಹದಲ್ಲಿ ಪೂಜಾವಸ್ತುಗಳನ್ನು ಇಡಲು ಪ್ರತ್ಯೇಕ ಜಾಗವನ್ನು ಮಾಡಲಾಗಿದೆ. ಇದರ ಸುಕನಾಸಿಯು ನಾಲ್ಕು ಕಂಬಗಳಿದ್ದು ಅವು ಪೀಠ, ಪಟ್ಟಿಕೆ ಹಾಗೂ ಬೋದುಗೆಗಳನ್ನು ಹೊಂದಿವೆ. ಈ ಸುಕನಾಸಿಯ ಮೇಲಿನ ಭಾಗದಲ್ಲಿ ಒಂದು ಮೇಲ್ಛಾವಣಿಯಿದೆ.

ನವರಂಗ : ನವರಂಗವು ಮುಖ್ಯವಾದ ನಾಲ್ಕುಕಂಬಗಳಿಂದ ಕೂಡಿದ್ದು ನವರಂಗ ಮಂಟಪದಲ್ಲಿ ಗಣೇಶ ಮೂರ್ತಿಯನ್ನು ಇಡಲಾಗಿದೆ. ನವರಂಗದ ಪಶ್ಚಿಮ ಭಾಗದಲ್ಲಿ ಕೆಲವು ಒಡೆದಿರುವ ದೇವಮೂರ್ತಿಗಳಿವೆ. ಇದರ ಛತ್ತಿನ ಮೇಲೆ ಸುಂದರವಾದ ಒಂದು ಶಿಲ್ಪ ಇದೆ. ಮುಖ ಮಂಟಪವು ಯಾವುದೇ ರೀತಿಯಿಂದ

ಅಲಂಕೃತವಾಗಿಲ್ಲ ಹಾಗು ಸದ್ಯದಲ್ಲಿ ಉತ್ತರ ದಿಕ್ಕಿನ ಭಿತ್ತಿ ಮತ್ತು ಪೂರ್ವದಿಕ್ಕಿನ ಭಿತ್ತಿಯು ಶಿಥಿಲಗೊಂಡಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಅವು ಪೀಠ ಚೌಕವೃತ್ತಾಕಾರದ ಪಟ್ಟಿಕೆಗಳ ಜೊತೆಗೆ ಪುಷ್ಪದಳಗಳನ್ನು ಹೊಂದಿದೆ. ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳವನ್ನು ಹೊಂದಿದೆ ಹಾಗೂ ಸಾದಾ ಬೋದುಗೆಗಳನ್ನು ಕಾಣಬಹುದು.

ಚಿಂಚೋಳಿ ಬಸವಣ್ಣ ಗುಡಿ

ಸ್ಥಳ : ಊರಿನ ಪಶ್ಚಿಮ ಭಾಗದಲ್ಲಿ ಪೂರ್ವದ ಕಡೆಗೆ **ಕಾಲ :** ಕ್ರಿ.ಶ.೧೧೪೧

ಕ್ರಿ.ಶ.೧೧೪೨ರ ಶಾಸನದಲ್ಲಿ ಗಬ್ಬೂರಿನ ಪರಮ ಭಾಗವತನಾದ ವೈಷ್ಣವ ಮಂಚೈಪ್ಪಣನು ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ನಿಟ್ಟೂರಿಯ ವೈಷ್ಣವ ಕಂದರ್ಪಭಟ್ಟನಿಂದ ಪ್ರಥಮ ಮತ್ತು ದ್ವಿತಿಯ ನಿವೇಶಗಳನ್ನು ಹೊಲದ ಬೆಳೆಯನ್ನು ಕ್ರಯಕ್ಕೆ ಪಡೆದು ತಾನು ಪ್ರತಿಷ್ಠೆ ಮಾಡಿದ ಪ್ರಸನ್ನಕೇಶವ ದೇವರ ಪೂಜೆಗಾಗಿ ನೀಡುತ್ತಾನೆ.

ತಲವಿನ್ಯಾಸ : ದೇವಾಲಯವು ಊರ ಹೊರಗಿನ ಪಶ್ಚಿಮ ಭಾಗಕ್ಕಿದೆ. ಇದು ಪೂರ್ವಕ್ಕೆ ಮುಖ ಹೊಂದಿದ್ದು ದ್ವಿಕೂಟ ದೇವಾಲಯವಾಗಿದೆ. ತಲವಿನ್ಯಾಸದಲ್ಲಿ ಎರಡು ಗರ್ಭಗೃಹಗಳು, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ(Temples of Richur & Bellary Districts, Dr.C.S.Patil).

ಗರ್ಭಗೃಹ : ಉತ್ತರ ಭಾಗದ ಗರ್ಭಗೃಹವು ಯಾವುದೇ ಮೂರ್ತಿಯಿಲ್ಲದೆ ಖಾಲಿಯಾಗಿದೆ. ಇದರ ಗರ್ಭಗೃಹದ ಬಾಗಿಲುವಾಡವು ಚೌಕಾಕಾರದ ಹೂವಿನ ಶಾಖೆಗಳಿಂದ ಕೂಡಿದೆ. ತಳಭಾಗವು ಪೂರ್ಣಕುಂಭಗಳಿಂದ ಕೂಡಿದ್ದು ಇದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕಾಣಬಹುದು. ಇದರ ಅಂತರಾಳದ ಭಾಗವು ತೆರದುಕೊಂಡಿದ್ದು, ಇದರ ಛತ್ತಿನ ಮೇಲ್ಭಾಗದಲ್ಲಿ ಕಮಲದ ಚಿತ್ರದ ಶಿಲ್ಪವನ್ನು ಕೆತ್ತಲಾಗಿದೆ. ದಕ್ಷಿಣ ಭಾಗದ ಗರ್ಭಗೃಹದಲ್ಲಿ ಯಾವುದೇ ದೇವರಮೂರ್ತಿ ಇರುವುದಿಲ್ಲ. ಗುಡಿಯ ಅಂತರಾಳದಲ್ಲಿ ಅಂದರೆ ದಾರಿಯ ಎರಡು ಬದಿಯಲ್ಲಿ ಎರಡು ಕಂಬಗಳಿವೆ. ಅವು ಕಕ್ಷಾಸನಗಳಂತಿವೆ. ಮಣಿಯ ಚೌಕಟ್ಟು ಇದರಲಿಲ್ಲ. ಅಂತರಾಳದ ಛಾವಣಿ ಆಯತಾಕಾರವಾಗಿದ್ದು ಕಮಲದ ಹೂವನ್ನು ಹೋಲುತ್ತದೆ. ಗರ್ಭಗುಡಿಯ ಎದುರಿನಲ್ಲಿರುವ ನೆಲದ ಮೇಲೆ ಚಂದ್ರಶಿಲೆಯಿದೆ.

ಸಭಾಮಂಟಪ : ಇದರ ಸಭಾಮಂಟಪವು ಪೂರ್ವಕ್ಕೆ ತೆರೆದುಕೊಂಡಿದ್ದು ಮಧ್ಯದಲ್ಲಿ ನಾಲ್ಕು ಕಂಬಗಳನ್ನು ಹೊಂದಿವೆ. ಎರಡು ಕಂಬಗಳನ್ನು ಕಕ್ಷಾಸನದಲ್ಲಿ ಕೂಡಿಸಲಾಗಿದೆ. ನಡುವಿನ ಕಂಬಗಳು ಮಡಿಚಿದ ಗಳಿಗೆಗಳು, ಸಪಾಟಾದ ನಾಲ್ಕು ಚೌಕುಗಳು, ಮಧ್ಯಭಾಗದಲ್ಲಿ ಅಷ್ಟಮುಖಿ ಆಕಾರ ಹೊಂದಿದೆ. ಗಂಟೆಯು ಅದರ ಒಳಭಾಗದಲ್ಲಿ ಹೊಂದಿಸಲಾಗಿದೆ. ಬೋರಲು ಕೊಡದ ರೂಪದಲ್ಲಿ ಕೀರ್ತಿ ಮುಖಿಗಳು, ರಕ್ಷಾಕವಚ ನಾಲ್ಕು ಮೂಲೆಗಳಿಂದ ಕೂಡಿದ ಆಕರ್ಷಕ ಚಿತ್ರವಿದೆ. ನಡುವಿನಲ್ಲಿ

ಸುಂದರವಾದ ಸಲಕರಣಿಗಳಿಂದ ಅಲಂಕೃತವಾಗಿದೆ. ಇತ್ತೀಚೆಗೆ ಒಂದು ನಂದಿಯನ್ನು ಇದರಲ್ಲಿ ಇಡಲಾಗಿದೆ.

ಭಿತ್ತಿ : ಮೂರು ಕಡೆಯ ಗೋಡೆ ಭಾಗಗಳ ಕಕ್ಷಾಸನವು ಕಾಂತಿಯಿಂದ ಬೆಳಗುತ್ತಿದೆ. ದಕ್ಷಿಣದಲ್ಲಿ ಮತ್ತು ಪೂರ್ವದಲ್ಲಿರುವ ಗೋಡೆಗಳನ್ನು ಈಗ ಬದಲಾವಣೆ ಮಾಡಲಾಗಿದೆ. ಈ ದೇವಾಲಯದ ಎಡಭಾಗದಲ್ಲಿ ಶಾಸನದ ಕಲ್ಲನ್ನು ಇರಿಸಲಾಗಿದೆ. ಎಲ್ಲಾ ಗೋಡೆಗಳಲ್ಲಿ ಕುಡ್ಯಸ್ತಂಭಗಳನ್ನು ಹೊಂದಿವೆ. ಈ ದೇವಾಲಯದ ಅಧಿಷ್ಠಾನ ಮಣ್ಣಿನಲ್ಲಿ ಹೂತು ಹೋಗಿದೆ. ಕಕ್ಷಾಸನ ಗೋಡೆಯಲ್ಲಿ ಆನೆಗಳ ಸಾಲು, ಲತಾಬಳ್ಳಿಯಿಂದ ಅಲಂಕೃತಗೊಂಡಿದೆ.

ಇತರೆ : ಈ ದೇವಾಲಯದ ಸುತ್ತ ಅನೇಕ ಮನೆಗಳಾಗಿದ್ದು, ಇಲ್ಲಿ ಯಾವುದೇ ತರಹದ ಹೆಚ್ಚಿನ ಪೂಜೆಗಳಿಲ್ಲ.

ಬಂಗಾರ ಬಸವಣ್ಣ ದೇವಾಲಯ

ಸ್ಥಳ : ಊರಿನ ಮಧ್ಯಭಾಗದಲ್ಲಿ ದಕ್ಷಿಣ ಕಡೆಗೆ

ತಲಾವಿನ್ಯಾಸ : ಬಂಗಾರ ಬಸವಣ್ಣ ದೇವಾಲಯವು ದಕ್ಷಿಣ ದಿಕ್ಕಿನ ಕಡೆಗೆ ಇದ್ದು ಇದು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳಿದ್ದು ತ್ರಿಕೂಟ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹ ಸಂಪೂರ್ಣ ಶಿಥಿಲವಾಗಿದ್ದು ನವರಂಗ ಮಂಟಪದಲ್ಲಿ ನಂದಿಯನ್ನು ಇರಿಸಲಾಗಿದೆ. ಈ ದೇವಾಲಯದ ಎರಡು ಗರ್ಭಗೃಹಗಳು ಮುಚ್ಚಿಕೊಂಡಿವೆ. ಈ ಬೃಹತ್ತಾದ ನಂದಿಯ ಕೊರಳಿನಲ್ಲಿ ಗಂಟೆಗಳ ಸರವು ತುಂಬಾ ಆಕರ್ಷಿತವಾಗಿದೆ.

ನವರಂಗ : ಬಂಗಾರದ ಬಸವಣ್ಣ ದೇವಾಲಯದ ನವರಂಗ ಮಂಟಪದಲ್ಲಿ ನಾಲ್ಕು ಕಂಬಗಳಿವೆ. ಅವುಗಳ ಪೀಠ ೧೬-೮-೧೬ ಪಟ್ಟಿಕೆಗಳು ಮೇಲ್ಭಾಗದಲ್ಲಿ ಚಚ್ಚೌಕಾದ ಜೊತೆಗೆ ಗೋಲಾಕಾರದ ಮುಚ್ಚಳದ ಮೇಲೆ ಸಾದಾ ಬೋದುಗೆಗಳನ್ನು ಹೊಂದಿದೆ. ನವರಂಗ ಮಂಟಪದಲ್ಲಿ ಎರಡು ನಂದಿಗಳಿವೆ. ಅದರಲ್ಲಿ ಒಂದು ದೊಡ್ಡ ನಂದಿ ಮತ್ತು ಸಣ್ಣ ನಂದಿ ಇವೆ. ಈಗ ಸಣ್ಣ ನಂದಿಯು ಸ್ವಲ್ಪ ಒಡೆದು ಹೋಗಿದೆ. ದೊಡ್ಡ ನಂದಿಯ ಕೊರಳಿನಲ್ಲಿ ಗಂಟೆಯ ಸರ ಇದೆ.

ಮುಖಮಂಟಪ : ಈ ಭಾಗ ತೆರೆದುಕೊಂಡಿದ್ದು ಇಲ್ಲಿ ಎರಡು ಕಂಬಗಳು ಬರುತ್ತವೆ. ಇದರ ಪಶ್ಚಿಮದಲ್ಲಿ ಗಣೇಶನ ವಿಗ್ರಹವಿದೆ. ಪೂರ್ವದಲ್ಲಿ ವಿಷ್ಣು ವಿಗ್ರಹ ಇಡಲಾಗಿದೆ. ಇನ್ನುಳಿದ ಕಂಬಗಳು ಈಗ ಇಲ್ಲವಾದ್ದರಿಂದ ಅದು ಬಯಲಾಗಿ ಕಾಣುತ್ತದೆ. ಮುಖಮಂಟಪದ ಕಂಬಗಳು ಗೋಲಾಕಾರದಲ್ಲಿ ಮತ್ತು ಚೌಕಾಕಾರದಲ್ಲಿವೆ.

ಭಿತ್ತಿ ಮತ್ತು ಸ್ತಂಬಗಳು : ಈ ದೇವಾಲಯದ ಬಹುತೇಕ ಭಾಗದ ಗೋಡೆ ಶಿಥಿಲಗೊಂಡಿದೆ. ಈಗ ಕೇವಲ ಒಂದೇ ಮಂಟಪವಿದೆ. ಭಿತ್ತಿಯಲ್ಲಿ ಒಟ್ಟು ಹತ್ತು ಕುಡ್ಯಸ್ತಂಭಗಳು ಬರುತ್ತವೆ. ಪಶ್ಚಿಮದಲ್ಲಿ ಐದು ಕುಡ್ಯಸ್ತಂಭಗಳು ಪೂರ್ವದಲ್ಲಿ ಐದು ಕುಡ್ಯಸ್ತಂಭಗಳು, ಉತ್ತರದಲ್ಲಿ ಮತ್ತೆ ಎರಡು ಕುಡ್ಯಸ್ತಂಭಗಳಿವೆ. ಒಟ್ಟು ಈ ದೇವಾಲಯದಲ್ಲಿ ೨೪ ಕಂಬಗಳಿದ್ದು ೧೨ ಭಿತ್ತಿಕಂಬಗಳಾದರೆ ಇನ್ನುಳಿದ ಮಂಟಪದ ೧೨ ಕಂಬಗಳು, ನವರಂಗ ಮಂಟಪದ ಕಂಬಗಳ ಕೆಳಗಡೆ ಭಾಗದಲ್ಲಿ ಗಣೇಶ ಮತ್ತು ವಿಷ್ಣುವಿನ ಮೂರ್ತಿಗಳ ಶಿಲ್ಪವನ್ನು ಬಿಡಿಸಲಾಗಿದೆ.

ಅಧಿಷ್ಠಾನ : ಬಂಗಾರ ಬಸವಣ್ಣ ದೇವಾಲಯದ ಅಧಿಷ್ಠಾನವು ಹೂತು ಹೋಗಿದ್ದು ಇದರ ಸುತ್ತಲೂ ಮನೆಗಳಿರುವುದರಿಂದ ಮತ್ತು ಈ ದೇವಾಲಯದ ಹೆಚ್ಚಿನ ಭಾಗ ಶಿಥಿಲವಾಗಿದ್ದ ಕಾರಣ ಅಧಿಷ್ಠಾನ ಕಂಡುಬರುವುದಿಲ್ಲ.

ಮಂಜೂರು : ಈ ದೇವಾಲಯದ ಮಂಜೂರು ಇಳಿ ಬಿದ್ದಂತೆ ಕಾಣುತ್ತಿದ್ದು ಇದರ ಭಾಗವು ಶಿಥಿಲವಾಗುವ ಹಂತದಲ್ಲಿದೆ. ಇದು ದಕ್ಷಿಣದ ಕಡೆಗಿದೆ.

ಇತರ : ಈ ದೇವಾಲಯದಲ್ಲಿ ಯಾವುದೇ ರೀತಿಯ ಅಲಂಕಾರಗಳಿಲ್ಲದೆ ಸಾದಾ ರೀತಿಯಲ್ಲಿದೆ. ಆದರೆ ಇತ್ತೀಚೆಗೆ ಈ ದೇವಾಲಯವು ಪಶುಗಳ ವಾಸಸ್ಥಾನವಾಗಿದ್ದು ಜನರು ಕೂಡ ಇಲ್ಲಿ ವಾಸ ಮಾಡುತ್ತಿದ್ದು ಇಲ್ಲಿಯ ಕಂಬಗಳು ಮಾಸಿ ಹೋಗಿದ್ದು ಅವು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿವೆ.

ಮಹಾಬಲೇಶ್ವರ ದೇವಾಲಯ

ಸ್ಥಳ : ಊರಿನ ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿದೆ.

ತಲವಿನ್ಯಾಸ : ಈ ದೇವಾಲಯವು ಊರಿನ ಮಧ್ಯಭಾಗದಲ್ಲಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು, ಹೆಚ್ಚಿನ ಭಾಗ ಶಿಥಿಲವಾಗಿದ್ದು, ಅದರ ಅವಶೇಷಗಳು ನಾಶವಾಗಿವೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಒಳಗೊಂಡಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಆಯತಾಕಾರವಾಗಿದ್ದು, ಗರ್ಭಗೃಹದಲ್ಲಿ ನಂದಿ ಮತ್ತು ಈಶ್ವರ ಲಿಂಗಗಳಿವೆ. ಗರ್ಭಗೃಹದ ಬಾಗಿಲುವಾಡವು ಪುಷ್ಪದಳಗಳಿಂದ ಅಲಂಕಾರವಾಗಿದ್ದು, ಇದರ ಲಲಾಟಪಟ್ಟಿಯಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಇದರ ಅಂತರಾಳವು ತೆರೆದುಕೊಂಡಿದ್ದು ಎರಡು ಕಂಬಗಳಿಂದ ಕೂಡಿದೆ. ಇವುಗಳು ಪೀಠ, ಚೌಕ, ಪಟ್ಟಿಕೆ, ಚೌಕಕಂಠ ಭಾಗದಲ್ಲಿ ಗೋಲಾಕಾರದ ಮುಚ್ಚಳದ ಮೇಲೆ ಚೌಕಾಕಾರದ ಹಲಗೆಯ ಸಾದಾ ಬೋದುಗೆಗಳನ್ನು ಹೊಂದಿವೆ.

ಸಭಾಮಂಟಪ : ಸಭಾಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು ಎರಡು ಕಂಬಗಳು ಗೋಲಾಕಾರದಲ್ಲಿ, ಎರಡು ಚೌಕಾಕಾರದಲ್ಲಿವೆ. ಕಂಬದ ಕೆಳಗಿನ ಭಾಗದಲ್ಲಿ ಚೌಕಾಕಾರವಾಗಿದ್ದು, ಗೋಲಾಕಾರವಾಗಿಯೂ ಮತ್ತು ಅಷ್ಟಾಕಾರವಾಗಿಯೂ ಗುಂಪುಗಟ್ಟಿ ಮಧ್ಯ, ಮೇಲ್ಭಾಗದಲ್ಲಿ ಬೋರಲುಕೊಡದಂತೆ ಮಣಿಕಟ್ಟು ಕವಚವಿದೆ. ಈ ಮಂಟಪದ ಛತ್ತು ಸಪಾಟಾಗಿದೆ. ಈ ದೇವಾಲಯದ ಅದಿಷ್ಠಾನ ಹೂತು ಹೋಗಿದೆ. ಇದರ ಗೋಡೆಗಳು ಹೊಸದಾಗಿ ನಿರ್ಮಿಸಲ್ಪಟ್ಟಿದ್ದು, ಮೇಲಿನ ಭಾಗ ಐದು ದ್ರಾವಿಡ ಗೋಪುರಗಳಿಂದ ಅಲಂಕೃತಗೊಂಡಿದೆ.

ನೀಲಕಂಠೇಶ್ವರ ದೇವಾಲಯ

ಸ್ಥಳ : ಊರಮಧ್ಯದಲ್ಲಿರುವ ಚಂಡಿದರ್ವಾಜ ಪಕ್ಕದಲ್ಲಿ ಉತ್ತರಾಭಿಮುಖವಾಗಿದೆ.

ತಲವಿನ್ಯಾಸ : ಇದು ಉತ್ತರಕ್ಕೆ ಮುಖ ಮಾಡಿದ್ದು ಏಕಕೂಟ ದೇವಾಲಯವಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳಿವೆ. ಇದರ ಪಶ್ಚಿಮಕ್ಕೆ ಚಂಡಿದರ್ವಾಜ ಕೇಶವ ದೇವಾಲಯಗಳಿದ್ದು ಉತ್ತರಕ್ಕೆ ಬಾಲ ಹನುಮಾನ ದೇವಾಲಯವಿದೆ.

ಗರ್ಭಗೃಹ : ನೀಲಕಂಠೇಶ್ವರ ದೇವಾಲಯದ ಗರ್ಭಗೃಹ ಚೌಕಾಕಾರವಾಗಿದ್ದು, ಇದರ ಮಧ್ಯದಲ್ಲಿ ಈಶ್ವರ ಲಿಂಗವಿದೆ. ಇದರ ಬಾಗಿಲುವಾಡವು ಹೂಬಳ್ಳಿ, ಪುಷ್ಪದಳಗಳಿಂದ ಕೆತ್ತಿದ್ದಾರೆ. ಇದರ ಮೇಲ್ಗಡೆ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಗರ್ಭಗೃಹದ ಬಾಗಿಲಿನಲ್ಲಿ ಪೂರ್ಣಕುಂಭಗಳು ಮತ್ತು ಅರ್ಧಕಂಬಗಳು ಹಾಗೂ ಗರ್ಭಗೃಹದ ಒಳಗಡೆ ಒಂದು ಮೇಲ್ಛಾವಣಿಯೂ ಇದೆ. ಇದರ ಅಂತರಾಳವು ಒಟ್ಟು ನಾಲ್ಕು ಕಂಬಗಳನ್ನು ಹೊಂದಿದ್ದು, ಎರಡು ಕಂಬಗಳು ಗೋಲಾಕಾರದಲ್ಲಿದ್ದರೆ ಇನ್ನೆರಡು ಕಂಬಗಳು ಚೌಕಾಕಾರದಲ್ಲಿವೆ. ಇದರಲ್ಲಿ ಒಂದು ಮೇಲ್ಛಾವಣಿ ಇದೆ.

ನವರಂಗ : ಈ ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಇವು ಪೀಠ, ಚೌಕಾಕಾರದ ಪಟ್ಟಿಕೆಗಳನ್ನು ಹೊಂದಿವೆ. ಮೇಲಿನ ಭಾಗ ಗೋಲಾಕಾರದ ಮುಚ್ಚಳದ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಹಾಗೆಯೇ ನವರಂಗದ ಗೋಡೆಯಲ್ಲಿ ಅರ್ಧಕಂಬಗಳನ್ನು ಹೊಂದಿರುವುದನ್ನು ಕಾಣಬಹುದು.

ಮುಖಮಂಟಪ : ನೀಲಕಂಠೇಶ್ವರ ದೇವಾಲಯದ ಮುಖಮಂಟಪ ಉತ್ತರ ದಿಕ್ಕಿನ ಕಡೆಗಿದ್ದು ಇಲ್ಲಿ ಪೂರ್ವಕ್ಕೆ ಎರಡು ಕಂಬಗಳು, ಪಶ್ಚಿಮಕ್ಕೆ ಎರಡು ಕಂಬಗಳಿವೆ. ಇವುಗಳನ್ನು ಕಕ್ಷಾಸನದ ಮೇಲೆ ನಿಲ್ಲಿಸಲಾಗಿದೆ. ಇವು ಕೆಳಭಾಗದಲ್ಲಿ ಚೌಕವಾಗಿದ್ದು, ವೃತ್ತಾಕಾರದ ಮುಚ್ಚಳದ ಮೇಲೆ ಸಾದಾ ರೀತಿಯ ಬೋದುಗೆಗಳನ್ನು ನಿರ್ಮಾಣ ಮಾಡಿದ್ದಾರೆ. ಈ ಕಂಬಗಳಿಗೆ ಬಣ್ಣ ಬಳಿದ ಕಾರಣ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ.

ಸೋಪಾನಗಳು : ಈ ದೇವಾಲಯದ ಒಳಗೆ ಹೋಗಲು ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಇವು ದೇವಾಲಯ ಮುಂದೆ ಇದ್ದು ಇವುಗಳ ಎರಡು ಬದಿಯಲ್ಲಿ ಕಟ್ಟೆಗೆಗಳಿವೆ. ಮೆಟ್ಟಿಲು ಹತ್ತುವಾಗ ಎರಡು ಸುಂದರವಾದ ಆನೆಗಳ ಮೂರ್ತಿಗಳನ್ನು ಎರಡು ಕಡೆ ನಿಲ್ಲಿಸಿದ್ದಾರೆ. ಈ ಆನೆಗಳನ್ನು ದೇವಾಲಯವನ್ನು ಎಳೆಯುವ ರೀತಿಯಲ್ಲಿ ಕೆತ್ತಿದ್ದಾರೆ. ಆದುದರಿಂದ ಈ ದೇವಾಲಯಕ್ಕೆ ಇಲ್ಲಿನ ಸ್ಥಳೀಯರು ಆನೆಗುಡಿ ಎಂಬುದಾಗಿ ಕರೆಯುವುದುಂಟು.

ಅಧಿಷ್ಠಾನ : ನೀಲಕಂಠೇಶ್ವರ ದೇವಾಲಯದ ಅಧಿಷ್ಠಾನವು ಬಹಳ ಎತ್ತರವಾಗಿದ್ದು ಸರಳ ರೀತಿಯಲ್ಲಿದೆ. ಯಾವುದೇ ರೀತಿಯ ಶಿಲ್ಪಗಳು ಪುಷ್ಪದಳಗಳ ಚಿತ್ರಗಳು ಇಲ್ಲಿಲ್ಲ. ಇದು ಗಬ್ಬೂರಿನಲ್ಲಿರುವ ಎಲ್ಲಾ ಕಲ್ಯಾಣ ಚಾಲುಕ್ಯರ ದೇವಾಲಯಗಳಿಗಿಂತಲೂ ಎತ್ತರದ ಅಧಿಷ್ಠಾನ ಹೊಂದಿದ ದೇವಾಲಯವಾಗಿದೆ.

ಮಂಜೂರು : ಇದರ ಮಂಜೂರು ಉತ್ತರ ದಿಕ್ಕಿನ ಕಡೆ ಇಳಿಬಿದ್ದಂತೆ ಕಾಣುತ್ತದೆ. ಇದರ ಮೇಲೆ ಇತ್ತೀಚೆಗೆ ಎತ್ತರದ ಕುಂಬಿಯನ್ನು ನಿರ್ಮಿಸಿರುವರು. ಇದರ ಮೇಲೆ ಎರಡು ಕಡೆ ಎತ್ತರದ ಸಾದಾ ರೀತಿಯ ಕಂಬಗಳನ್ನು ನಿರ್ಮಿಸಿದ್ದಾರೆ. ಒಟ್ಟಿನಲ್ಲಿ ಈ ದೇವಾಲಯದ ಮೂಲ ಸ್ವರೂಪವನ್ನು ಉಳಿಸಿಕೊಳ್ಳದೆ ಇತ್ತೀಚೆಗೆ ಗೋಡೆಯ ಕೆಲವು ಭಾಗಗಳ ನಿರ್ಮಾಣದ ಜೊತೆಗೆ ಇದಕ್ಕೆ ಬಣ್ಣವನ್ನು ಬಳಿದಿದ್ದಾರೆ.

ಇತರೆ : ಈ ದೇವಾಲಯಕ್ಕೆ ಇಂದಿಗೂ ಪೂಜೆಯ ವಿಧಿ ವಿಧಾನಗಳಿವೆ. ಜಾಡರು ಎಂಬ ಕುಲಬಾಂಧವರು ಈ ದೇವಾಲಯದ ಕಾರ್ಯಭಾರವನ್ನು ಹೊತ್ತಿದ್ದಾರೆ. ಈ ದೇವಾಲಯದ ಒಂದು ಕೋಣೆಯಲ್ಲಿ ಇತ್ತೀಚಿಗೆ ಬೂದಪ್ಪನಾಗಲೀಕರ್ ಇವರ ಕೈಯಲ್ಲಿ ಒಂದು ಶರಣರ ಆಶ್ರಮವನ್ನು ಮಾಡಿದ್ದಾರೆ.

ಕೇಶವ ದೇವಾಲಯ

ಸ್ಥಳ : ಚಂಡಿ ದರ್ವಾಜ ಪಶ್ಚಿಮ ಭಾಗದಲ್ಲಿ ಉತ್ತರಾಭಿಮುಖವಾಗಿದೆ. ಕ್ರಿ.ಶ.೧೧೯೬ರ ಶಾಸನ ಪ್ರಕಾರ "ಗೋಬ್ಬರ ಪಟ್ಟಣ ಕೇಶವದೇವರಿಗೆ ಬೇತಾಳಿಯ ಸೋಮೇಶ್ವರ ಭಟ್ಟನ ಮಗ ಮಲ್ಲಿದೇವನ ಭಟ್ಟನು" ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೧೫೮ರ ಶಾಸನದಲ್ಲಿ "ಅಯ್ಯಣವಾಡಿ ಅದರಲ್ಲಿ ಹಿರಿಯ ಗೋಬ್ಬೂರು" ಅದರಲ್ಲಿನ ೨೦೦ ಮಹಾಜನರ ಬಗ್ಗೆ ವಿವರಗಳಿವೆ. ಗಬ್ಬೂರಿನಲ್ಲಿ ತ್ರಿಪುರಾಂತಕ ದೇವರ ಪ್ರತಿಷ್ಠೆ ಮಾಡಿ ಅದರ ಪೂಜೆ ಪುನಸ್ಕಾರಕ್ಕೆಂದು ಕೆಲವು ಶೆಟ್ಟರು ದಾನ ನೀಡಿರುವ ವಿವರಗಳಿವೆ. ದೇವಾಲಯದ ತ್ರಿಪುರಾಂತಕ ಮುಂದೆ ಇದ್ದ ಕೇಶವ ದೇವರಿಗೆ ಇದರ ಜೊತೆಯಲ್ಲಿಯೇ ದಾನ ನೀಡುತ್ತಾರೆ. ಮಾಲೆಗಾರರು ಎರಡು ದೇವರ ಹೂದೋಟಕ್ಕೆ ದಾನ ನೀಡುತ್ತಾರೆ. ಭಾಗ ಸಂವತ್ಸರದಲ್ಲಿ ಅಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗೊಬ್ಬೂರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವ ದೇವರ ಪೂಜೆ ಇತ್ಯಾದಿಗಳಿಗೆ ಭಾಗ ಕೊಡಬೇಕೆಂದು ನಿರ್ಣಯಿಸಿದರು.

ತಲವಿನ್ಯಾಸ : ಈ ದೇವಾಲಯವು ಊರ ಮಧ್ಯದಲ್ಲಿ ಚಂಡಿ ದರ್ವಾಜ ಪಶ್ಚಿಮ ಭಾಗದಲ್ಲಿದ್ದು ಇದು ತಲ ವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ಗರ್ಭಗೃಹದ ಮಧ್ಯಭಾಗದ ಪಾಣಿವಾಟದ ಮೇಲೆ ಕೇಶವನ ಮೂರ್ತಿಯು ನಾಲ್ಕೂ ಕೈಗಳನ್ನು ಹೊಂದಿದ್ದು ಮೂರ್ತಿಯ ಕೈಯಲ್ಲಿ ಚಕ್ರ, ಶಂಖ, ಗದೆಗಳನ್ನು ಹಿಡಿದುಕೊಂಡಿದ್ದಾನೆ. ಈ ಕೇಶವ ಮೂರ್ತಿಯ ಎಡ ಭಾಗಕ್ಕೆ ಪದ್ಮಾಸನದಲ್ಲಿ ಧನಲಕ್ಷ್ಮಿಯ ಚಿತ್ರವಿದೆ. ಗರ್ಭಗೃಹದ ಮೇಲೆ ಒಂದು ಭುವನೇಶ್ವರಿಯ ಚಿತ್ರವಿದೆ. ಪಶ್ಚಿಮ ಭಾಗದಲ್ಲಿ ಒಂದು ಕಿಟಕಿಯನ್ನು ಮಾಡಲಾಗಿದೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ಲತೆಗಳಿಂದ ಕೂಡಿದೆ. ಇದರಲ್ಲಿ ಒಂದು ದೇವಕೋಷ್ಟವಿದೆ.

ಅಂತರಾಳ : ಇದರ ಅಂತರಾಳವು ತೆರೆದುಕೊಂಡಿದ್ದು ಇದು ನಾಲ್ಕು ಕಂಬಗಳನ್ನು ಹೊಂದಿದೆ. ಇದರಲ್ಲಿ ಎರಡು ಚೌಕಾಕಾರದ ಕಂಬಗಳಿವೆ. ಬಾಗಿಲಿನಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅರ್ಧಕಂಬ ಹಾಗೂ ಪೂರ್ಣಕುಂಭಗಳನ್ನು ಹೊಂದಿದೆ. ಅಂತರಾಳದಲ್ಲಿ ಒಂದು ಮೇಲ್ಛಾವಣಿ ಇದ್ದು ಅದು ದೊಡ್ಡ ಪ್ರಮಾಣದಲ್ಲಿರುವ ಎರಡು ದೇವ ಕೋಷ್ಟಗಳನ್ನು ಹೊಂದಿದೆ.

ನವರಂಗ : ನವರಂಗ ಮಂಟಪವು ನಾಲ್ಕು ಕಂಬಗಳನ್ನು ಹೊಂದಿದೆ. ಈ ಕಂಬಗಳು ಪೀಠ, ಚೌಕ, ಪಟ್ಟಿಕೆಗಳು ಕಾಂಡಭಾಗದಲ್ಲಿ ಚೌಕವಾಗಿದ್ದು ಕಂಠಬಾಗದಲ್ಲಿ ವೃತ್ತಾಕಾರದ ಮುಚ್ಚಳ ಇದ್ದು ಇದರ ಮೇಲೆ ಚೌಕಾಕಾರದ ಹಲಗೆಯ ಸಾದಾ ಬೋದುಗೆಗಳನ್ನು ಹೊಂದಿದೆ. ನವರಂಗ ಮಂಟಪದಲ್ಲಿ ಒಂದು ಮೇಲ್ಛಾವಣಿವಿದೆ. ಮುಖಮಂಟಪವು ತೆರೆದುಕೊಂಡಿದ್ದು, ಇಲ್ಲಿಯ ಕಂಬಗಳು ನವರಂಗ ಕಂಬಗಳ ರೀತಿಯಲ್ಲಿವೆ. ಇದರ ಮುಂದೆ ಎರಡು ಕಟ್ಟೆಗಳಿವೆ. ಇದರ ಅಧಿಷ್ಠಾನವು ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾಗಿದ್ದು, ಈ ದೇವಾಲಯವನ್ನು ಏರಲು ಸೋಪಾನಗಳಿವೆ.

ಇತರ : ಈ ದೇವಾಲಯದಲ್ಲಿ ಈಗ ಗೋಪುರವಿಲ್ಲ ಮತ್ತು ಪೂರ್ವದ ಗೋಡೆ ಶಿಥಿಲವಾಗಿದೆ.

ಬಾಲ ಹನುಮಾನ್ ದೇವಾಲಯ

ಸ್ಥಳ : ಊರ ಮಧ್ಯದ ಭಾಗದಲ್ಲಿ ದಕ್ಷಿಣಾಭಿಮುಖವಾಗಿದೆ. ಈ ದೇವಾಲಯವು ತಳಹದಿಯಲ್ಲಿ ಶಾಸನವು ಮೂರು ಭಾಗಗಳಲ್ಲಿವೆ. ಇದು ಈಗ ಬಹಳಷ್ಟು ನಷ್ಟವಾಗಿದೆ. ಆದಿಲ್ ಶಾಹಿಗಳ ಅಂತಿಮ ಕಾಲದ್ದಿರಬೇಕು. ಕನ್ನಡ ಭಾಷೆಯು ಹೆಚ್ಚು ಉರ್ದುಮಯವಾಗಿದೆ. ಗೊಬ್ಬರ ಹೊಲದ ಬೆಳೆಯಲ್ಲಿನ ಪಾಲನ್ನು ವಿನಾಯತಿ ನೀಡಿದಂತೆ ತಿಳಿಯುತ್ತದೆ. ಆದರೆ ಈ ಶಾಸನದಲ್ಲಿ ದೇವಾಲಯದ ಬಗ್ಗೆ ಉಲ್ಲೇಖವಿರುವುದಿಲ್ಲ.

ತಲವಿನ್ಯಾಸ : ಈ ದೇವಾಲಯವು ಊರ ಮಧ್ಯದ ಭಾಗದಲ್ಲಿದ್ದು, ಇದರ ಮುಂದೆ ನೀಲಕಂಠೇಶ್ವರ ದೇವಾಲಯ ಮತ್ತು ಚಂಡಿ ದರ್ವಾಜ ಬರುತ್ತದೆ. ಇದು ಏಕಕೂಟ ದೇವಾಲಯವಾಗಿದೆ. ಈ ಗುಡಿಯ ದಕ್ಷಿಣಕ್ಕೆ ಮುಖಮಾಡಿದ್ದ ತಲ ವಿನ್ಯಾಸದಲ್ಲಿ ಗರ್ಭಗೃಹ, ನವರಂಗ, ಮುಖ ಮಂಟಪಗಳಿಂದ ಕೂಡಿದ ದೇವಾಲಯಗಳಿವೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹ ಚೌಕವಾಗಿದ್ದು, ಮಧ್ಯದಲ್ಲಿ ಪಾಣಿಪೀಠದ ಮೇಲೆ ಆಂಜನೇಯ ಮೂರ್ತಿಯನ್ನು ನಿರ್ಮಿಸಲಾಗಿದೆ. ಈ ಗರ್ಭಗೃಹದ ಬಾಗಿಲು ಮೊದಲು ನಾಲ್ಕು ಕಡೆ ಇದ್ದು ಈಗ ಮೂರು ಕಡೆ ಮುಚ್ಚಿದ್ದು, ದಕ್ಷಿಣದ ಕಡೆ ಮಾತ್ರ ತೆರೆಯಲಾಗಿದೆ. ಗರ್ಭಗೃಹದ ನಾಲ್ಕು ಕಡೆಯು ಅಂದರೆ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗೃಹದ ಬಾಗಿಲಿನಲ್ಲಿ ದ್ವಾರಪಾಲಕರು ಜಾಲಾಂಧ್ರ ಮತ್ತು ಬಳ್ಳಿಯ ಶಿಲ್ಪ ಹಾಗು ಒಂದು ಮೇಲ್ಛಾವಣಿ ಇದ್ದು, ಈ ಗರ್ಭಗೃಹಕ್ಕೆ ಸುತ್ತಲು ಪ್ರದಕ್ಷಿಣೆ ಪಥವಿದೆ. ಗರ್ಭಗೃಹದಲ್ಲಿ ಚಿಕ್ಕ ದೇವಕೋಷ್ಠಗಳು ಮತ್ತು ಪೂರ್ಣಕುಂಭ ಹಾಗೂ ಅರ್ಧಕಂಬಗಳನ್ನು ಕಾಣಬಹುದು.

ನವರಂಗ : ಇದರ ನವರಂಗವು ನಾಲ್ಕು ಕಂಬಗಳಿಂದ ಕೂಡಿದೆ. ಈ ಕಂಬಗಳ ಪೀಠ ಚೌಕಪಟ್ಟಿಕೆಗಳು, ವರ್ತುಲಾಕಾರಾದ ಮುಚ್ಚಳದ ಮೇಲೆ ಚಚ್ಚೌಕದ ಹಲಗೆಯು ಸಾದಾ ಬೋದುಗೆಗಳನ್ನು ಹೊಂದಿದೆ. ಇವುಗಳಲ್ಲದೆ ನವರಂಗದ ಗೋಡೆಯಲ್ಲಿರುವ ಕಂಬಗಳು ಸರಳವಾಗಿದ್ದು, ಕೆಳಗಿನಿಂದ ಮೇಲ್ಭಾಗದವರೆಗೆ ಚಚ್ಚೌಕಾದ ಕಂಠಭಾಗದಲ್ಲಿ ಚಚ್ಚೌಕದ ಹಲಗೆಯ ಮೇಲೆ ಸಾದಾ ಬೋದುಗೆಗಳನ್ನು ಹೊಂದಿದೆ. ಈ ದೇವಾಲಯದ ಎರಡು ಕಡೆಯ ಒಳಗೋಡೆಯಲ್ಲಿ ದೇವಕೋಷ್ಠಕಗಳಿದ್ದು ಬಲಗಡೆ ಪಶ್ಚಿಮದಲ್ಲಿ ಎರಡು ಕೋಷ್ಟಗಳಿದ್ದು. ಒಂದು ದೇವಕೋಷ್ಠದಲ್ಲಿ ಗಣೇಶನ ಮೂರ್ತಿಯಿದ್ದು ಇದರ ಮೇಲೆ ಸುಂದರವಾದ ನಂದಿ ಹಾಗೂ ಈಶ್ವರ ಲಿಂಗವಿದೆ. ಇದರ ಪಕ್ಕದಲ್ಲಿ ಇಬ್ಬರು ಸೇವಕಿಯರು ಕೈಮುಗಿಯುತ್ತಿರುವುದು ಕಂಡುಬರುತ್ತದೆ. ಎಡಗಡೆ(ಪೂರ್ವ)ಯಲ್ಲಿ ದೇವಕೋಷ್ಟಕದಲ್ಲಿ ಒಂದು ಚಿಕ್ಕ ಲಿಂಗವಿದೆ. ಇಲ್ಲಿ ಕೇಶವ ಪಂಡಿತರ ಮೂರ್ತಿಯಿದ್ದು ಇದರ ಮೇಲಿನ ಭಾಗದಲ್ಲಿ ಸಂಕರ ದಾಸರಲಿಂಗ ಸನ್ಯಾಸಿ ಕೇಶವ ಪಂಡಿತನೆಂದಿದೆ. ಈ ದೇವಾಲಯದ ಮುಖಮಂಟಪವು ತೆರೆದುಕೊಂಡಿದ್ದು ಎರಡು ಕಡೆಯ ಗೋಡೆಯಲ್ಲಿ ಎರಡು ಕಂಬಗಳಿವೆ.

ಭಿತ್ತಿ ಮತ್ತು ಸ್ತಂಭಗಳು : ಈ ದೇವಾಲಯದ ಭಿತ್ತಿಯು ಗಟ್ಟಿಕಲ್ಲುಗಳಿಂದ ನಿರ್ಮಾಣ ಮಾಡಿದ್ದು, ಪ್ರತಿಗೋಡೆಯಲ್ಲಿ ಸುಂದರವಾದ ವಿಗ್ರಹಗಳಿವೆ. ಅದರಲ್ಲಿ ಕೇಶವ ಪಂಡಿತರ ವಿಗ್ರಹ, ನಂದಿಯ ಮೇಲೆ ಈಶ್ವರ ಹಾಗು ಸೇವಕೀಯರು ದೇವಕೋಷ್ಟಗಳಲ್ಲಿ ಲಿಂಗ ಗಣೇಶನ ಮೂರ್ತಿಗಳಿವೆ. ಇವುಗಳಲ್ಲದೆ ಇತ್ತೀಚೆಗೆ ತಂದು ಜೋಡಿಸಿರುವ ಅತ್ಯಂತ ಸುಂದರವಾದ ಒಂದು ವೀರಗಲ್ಲು ಇದೆ. ಈ ದೇವಾಲಯದ

ಸ್ತಂಭಗಳು ಗೋಲಾಕಾರ ಹಾಗು ಚೌಕಾಕಾರವಾಗಿದ್ದು, ಪೀಠ ಚೌಕಪಟ್ಟಿಕೆಗಳು ಸಾದಾ ಬೋದುಗೆಗಳನ್ನು ಹೊಂದಿವೆ.

ಆಧಿಷ್ಠಾನ : ಇದರ ಅಧಿಷ್ಠಾನವು ಸಾಮಾನ್ಯವಾಗಿ ೨ ಅಡಿ ಎತ್ತರವಾಗಿದ್ದು ಈ ಅಧಿಷ್ಠಾನದ ಬಂಡೆಗಲ್ಲಿನಲ್ಲಿ ಆದಿಲ್‌ಶಾಹಿಗಳ ಶಾಸನವು ಮೂರು ಭಾಗಗಳಲ್ಲಿದೆ. ಈಗ ಅಕ್ಷರ ಕಾಣದಂತೆ ಮಾಸಿಹೋಗಿವೆ.

ಮಂಜೂರು : ಈ ಭಾಗವು ಇಳಿಬಿದ್ದಂತೆ ಕಾಣುತ್ತದೆ. ಇದರ ಮೇಲೆ ಇತ್ತೀಚೆಗೆ ಕುಂಬಿಯನ್ನು ನಿರ್ಮಿಸಿದ್ದಾರೆ.

ಪ್ರಾಕಾರ : ಈ ದೇವಾಲಯದ ಕೆಳಗಡೆಯ ಭಿತ್ತಿಯಲ್ಲಿ ಲತಾಬಳ್ಳಿ ಹಾಗೂ ಮುಂದೆ ಆವರಣದಲ್ಲಿ ಮಾರುತಿ ದೇವಾಲಯಕ್ಕೆ ಸಂಬಂಧಿಸಿದ ದೀಪಸ್ತಂಭವಿದೆ. ಇದರ ಎರಡು ಕಡೆ ಕಟ್ಟೆ ಇದೆ.

ಇತರ : ಸದ್ಯದಲ್ಲಿ ಈ ದೇವಾಲಯಕ್ಕೆ ಕಾರ್ಯಕರ್ತರಿದ್ದು, ಈಗ ಈ ದೇವಾಲಯದ ಸುಧಾರಣೆ ನಡೆದಿದೆ.

ವೀರಭದ್ರೇಶ್ವರ ದೇವಾಲಯ

ಸ್ಥಳ : ಊರ ಪಶ್ಚಿಮ ಭಾಗದಲ್ಲಿ ಉತ್ತರಾಭಿಮುಖವಾಗಿದೆ

ತಲವಿನ್ಯಾಸ : ಈ ದೇವಾಲಯ ಊರ ಮಧ್ಯದಲ್ಲಿದ್ದು ಏಕಕೂಟ ದೇವಾಲಯವಾಗಿದೆ. ಇದು ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ.

ಗರ್ಭಗೃಹ : ಇದರ ಗರ್ಭಗೃಹವು ಚೌಕಾಕಾರವಾಗಿದ್ದು ಗರ್ಭಗೃಹದಲ್ಲಿ ದೊಡ್ಡ ಪಾಣಿಪೀಠದ ಮೇಲೆ ಬೃಹತ್ತಾದ ವೀರಭದ್ರ ಮೂರ್ತಿಯನ್ನು ನಿಲ್ಲಿಸಲಾಗಿದೆ. ಈ ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು, ಖಡ್ಗ, ಬಿಲ್ಲು, ಗದೆ ಹಾಗೂ ಒಂದು ಕೈ ಅಭಯಹಸ್ತದ ಸಂಕೇತವಾಗಿದೆ. ಈ ವೀರಭದ್ರ ಮೂರ್ತಿಯ ಕೊರಳಿನಲ್ಲಿ ಸರ ಇದೆ. ಗರ್ಭಗೃಹದ ಮೇಲೆ ಭುವನೇಶ್ವರಿ ಇದ್ದು, ಗರ್ಭಗೃಹದ ಬಾಗಿಲಿನಲ್ಲಿ ದ್ವಾರಪಾಲಕರು ಮತ್ತು ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ.

ಅಂತರಾಳ : ಈ ದೇವಾಲಯದ ಅಂತರಾಳದಲ್ಲಿ ನಾಲ್ಕು ಕಂಬಗಳಿವೆ. ಇದರಲ್ಲಿ ಎರಡು ಕಂಬಗಳು ಗೋಲಾಕಾರದಲ್ಲಿದ್ದರೆ ಎರಡು ಕಂಬಗಳು ಚೌಕಾಕಾರದಲ್ಲಿವೆ. ಈ ಕಂಬಗಳು ಪೀಠ, ಪಟ್ಟಿಕೆಗಳು ಗೋಲಾಕಾರದ ಮುಚ್ಚಳ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಅಂತರಾಳದಲ್ಲಿ ಒಂದು ಮೇಲ್ಛಾವಣಿ ಇದೆ.

ನವರಂಗ : ನವರಂಗವು ನಾಲ್ಕು ಕಂಬಗಳನ್ನು ಹೊಂದಿದ್ದು ಮೇಲೆ ಒಂದು ಭುವನೇಶ್ವರಿ ಶಿಲ್ಪವಿದೆ. ಇತ್ತೀಚೆಗೆ ಎಡಗಡೆಯ ಕಟ್ಟೆಯ ಮೇಲೆ ನಂದಿ ಹಾಗು ಗಣೇಶನ ವಿಗ್ರಹಗಳಿವೆ. ಇದರ ಭಿತ್ತಿಯು

ಹೊಸದಾಗಿ ಮಾಡಲಾಗಿದೆ. ಸಭಾಮಂಟಪದ ಎರಡು ದಿಕ್ಕಿನಲ್ಲಿ ಬಾಗಿಲುಗಳಿವೆ. ಪೂರ್ವದಲ್ಲಿ ಇರುವ ಬಾಗಿಲು ಸರಳವಾಗಿದ್ದು, ಲತೆಗಳಿಂದ ಮಕರ ತೋರಣ, ಅರ್ಧಕಂಬಗಳು, ನಾಲ್ಕು ಸ್ತ್ರೀ ಸೇವಕರು, ಜಾಲಾಂಧ್ರದಿಂದ ಕೂಡಿದೆ. ಉತ್ತರಕ್ಕೆ ಇರುವ ಗರ್ಭಗೃಹದ ಬಾಗಿಲಿನ ಎರಡು ಕಡೆ ಪೂರ್ಣ ಕುಂಭಗಳು ಅರ್ಧಕಂಬಗಳಿವೆ. ಇಲ್ಲಿ ಎರಡು ಕಡೆ ದ್ವಾರಪಾಲಕರಿದ್ದು, ಬಲಗೈಯಲ್ಲಿ ರುದ್ರಾಕ್ಷಿ ಸರ ತ್ರಿಶೂಲವಿದ್ದರೆ ಎಡಗೈಯಲ್ಲಿ ಗದೆ ಮತ್ತು ಡಮರುಗವಿದೆ.

ಇತರೆ : ಇಂದಿಗೂ ಈ ದೇವಾಲಯಕ್ಕೆ ಪೂಜಾರಿಗಳಿದ್ದು ಪೂಜೆ ನಡೆಯುತ್ತದೆ. ಈ ದೇವಾಲಯದ ಪೂರ್ವ ದಿಕ್ಕಿನಲ್ಲಿ ವೀರಭದ್ರೇಶ್ವರ ಅಗಸಿ ಇದೆ. ಇದು ಉತ್ತರ ದಿಕ್ಕಿಗೆ ಮುಖ ಮಾಡಿದ್ದು, ಇದರ ಮೇಲೆ ಲಲಾಟ ಪಟ್ಟಿಯಲ್ಲಿ ಪುಷ್ಪದಳಗಳ ಶಿಲ್ಪವನ್ನು ಕೆತ್ತಿದ್ದು, ಇದರ ಮೇಲೆ ಕೀರ್ತಿಮುಖದ ಶಿಲ್ಪವನ್ನು ನಿರ್ಮಿಸಿದ್ದಾರೆ. ಈ ದೇವಾಲಯದ ಆರಾಧನಾ ನಿಮಿತ್ಯವಾಗಿ ಪ್ರತಿವರ್ಷ ಭಜನೆ, ಉತ್ಸವಗಳು, ನಂತರ ಊರಿನ ಜನತೆಗೆ ಅನ್ನಸಂತರ್ಪಣೆಯನ್ನು ಮಾಡಲಾಗುತ್ತದೆ.

ಚೌಡೇಶ್ವರಿ ದೇವಾಲಯ

ಸ್ಥಳ : ಊರಿನ ಮಧ್ಯಭಾಗದಲ್ಲಿ ಪೂರ್ವದ ಕಡೆಗಿದೆ.

ತಲವಿನ್ಯಾಸ : ಈ ದೇವಾಲಯವು ಊರ ಮಧ್ಯದಲ್ಲಿದ್ದು ಪೂರ್ವಕ್ಕೆ ಮುಖಮಾಡಿದ ಪಂಚಕೂಟ ದೇವಾಲಯವಾಗಿದೆ. ಐದು ಗರ್ಭಗೃಹಗಳು ಹಾಗೂ ಸಭಾಮಂಟಪಗಳನ್ನೊಳಗೊಂಡ ಸುಂದರ ದೇವಾಲಯವಾಗಿದೆ.


ಗರ್ಭಗೃಹ : ಈ ದೇವಾಲಯವು ಹೊರಗಡೆಯಿಂದ ನೋಡಿದರೆ ಒಂದು ಮನೆಯ ರೀತಿಯಲ್ಲಿ ಕಂಡರೂ ಒಳಗೆ ಹೋಗಿ ನೋಡಿದರೆ ಇದು ಐದು ಗರ್ಭಗೃಹಗಳನ್ನು ಹೊಂದಿದ ದೇವಾಲಯವಾಗಿದೆ. ಒಂದನೇ ಗರ್ಭಗೃಹದಲ್ಲಿ ಲಿಂಗವಿದ್ದು ಈಗ ಈ ಲಿಂಗವನ್ನು ಹೊರಗಡೆ ಇಡಲಾಗಿದೆ. ಗರ್ಭಗೃಹವನ್ನು ಈಗ ಮುಚ್ಚಲಾಗಿದೆ. ಎರಡನೆಯ ಗರ್ಭಗೃಹದಲ್ಲಿ ಪಾಣಿಪಾಠದಲ್ಲಿ ಈಶ್ವರ ಲಿಂಗವಿದೆ. ಇದರ ಗರ್ಭಗೃಹದಲ್ಲಿ ಒಂದು ಭುವನೇಶ್ವರಿ ಇದೆ. ಇದರ ಮೇಲ್ಛಾವಣಿ ಶಿಲ್ಪ ಇದ್ದು ಅಂತರಾಳದಲ್ಲಿ ಗಣೇಶ, ನಾಗಮೂರ್ತಿ ಗಳಿದ್ದು, ಅರ್ಧಕಂಬಗಳು ಮತ್ತು ಪುರ್ಣಕುಂಬಗಳು ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಮೂರನೆಯ ಗರ್ಭಗೃಹವು ಒಂದು ಮೇಲ್ಛಾವಣಿ ಹೊಂದಿದ್ದು ಗರ್ಭಗೃಹದಲ್ಲಿ ಚೌಡೇಶ್ವರಿ ಮೂರ್ತಿ ಇದೆ. ಇದರ ತಲೆಯ ಮೇಲೆ ಕಿರೀಟವಿದೆ. ಗರ್ಭಗೃಹದ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದ್ದು, ಪೂರ್ಣಕುಂಬ ಹಾಗೂ ಅರ್ಧಕಂಬಗಳಿವೆ. ನಾಲ್ಕನೆಯ ಗರ್ಭಗೃಹವು ಮಧ್ಯದಲ್ಲಿ ಈಶ್ವರ ಲಿಂಗವಿದ್ದು ಮೇಲ್ಛಾವಣಿಯಲ್ಲಿ ಶಿಲ್ಪ ಇದೆ. ಬಾಗಿಲಿನಲ್ಲಿ ದ್ವಾರಪಾಲಕರಿದ್ದಾರೆ. ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಇದರ ಅಂತರಾಳದಲ್ಲಿ ನಂದಿಯನ್ನು ಇಡಲಾಗಿದೆ. ಐದನೆಯ ಗರ್ಭಗೃಹವು ಈಶ್ವರ ಲಿಂಗವನ್ನು ಹೊಂದಿದ್ದು,

ಒಂದು ಭುವನೇಶ್ವರಿಯ ಚಿತ್ರ ಹಾಗೂ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಅಂತರಾಳದಲ್ಲಿ ಭುವನೇಶ್ವರಿ ಶಿಲ್ಪವಿದ್ದು, ಉತ್ತರ ಗೋಡೆಯಲ್ಲಿ ಕಿಟಕಿಯ ಕೆಳಗಡೆ ಮೊದಲ ಗರ್ಭಗೃಹದಲ್ಲಿದ್ದ ಈಶ್ವರ ಲಿಂಗವನ್ನು ಇಡಲಾಗಿದೆ. ಈ ಮೇಲಿನ ನಾಲ್ಕು ಈಶ್ವರ ಲಿಂಗಗಳು ಒಂದರಂತೆ ಇನ್ನೊಂದು ಇರುವುದಿಲ್ಲ.

ನವರಂಗ : ಈ ದೇವಾಲಯದ ನವರಂಗ ಮಂಟಪವು ಪೂರ್ವದ ಕಡೆಗೆ ದ್ವಾರವನ್ನು ಹೊಂದಿದ್ದು, ಸಭಾಮಂಟಪವು ಮೂರು ಕಂಬಗಳಂತೆ ನಾಲ್ಕು ಸಾಲುಗಳಿವೆ. ಒಟ್ಟು ೧೨ ಕಂಬಗಳಿದ್ದು, ಅವು ಪೀಠ, ಚೌಕಾಕಾರ, ಕಂಠ ಭಾಗದಲ್ಲಿ ಚಚ್ಚೌಕದ ಹಲಗೆಯ ಮೇಲೆ ಸಾದಾ ಬೋದುಗೆಗಳಿರುತ್ತವೆ. ಇದರಲ್ಲಿ ಚೌಡೇಶ್ವರಿಯ ಪಾದಗಳು, ನಂದಿ, ಗಣೇಶನ ಮೂರ್ತಿಗಳಿವೆ. ಈಗ ಇವುಗಳಿಗೆ ದಪ್ಪವಾಗಿ ಬಣ್ಣ ಬಳಿದ ಕಾರಣ ಮೂರ್ತಿಗಳು ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ನಾಲ್ಕು ದಿಕ್ಕಿನ ಭಿತ್ತಿಯಲ್ಲಿ ಐದರಂತೆ ಕುಡ್ಯಸ್ತಂಭಗಳಿವೆ.

ಇತರೆ : ಈ ದೇವಾಲಯವು ಎತ್ತರದ ಅಧಿಷ್ಠಾನದಲ್ಲಿದ್ದು, ಇಂದಿಗೂ ಪೂಜೆಪುನಸ್ಕಾರಗಳು ನಡೆಯುತ್ತಿವೆ.

ಚೌಡೇಶ್ವರಿ ದೇವಾಲಯದ ತಳವಿನ್ಯಾಸ



೧. ನವರಂಗ

೨. ಅಂತರಾಳ

೩. ಗರ್ಭಗೃಹ

□ ಕಂಬಗಳು

ಭೋಗೇಶ್ವರ ದೇವಾಲಯ

ಸ್ಥಳ : ಊರಿನ ಪಶ್ಚಿಮ ಭಾಗದಲ್ಲಿ ಪೂರ್ವದ ಕಡೆ ಮುಖವಾಗಿದೆ.

ತಲವಿನ್ಯಾಸ : ಈ ದೇವಾಲಯವು ಪೂರ್ವದ ಕಡೆಗೆ ಇದ್ದು, ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಉತ್ತರಾಭಿಮುಖವಾಗಿದ್ದು, ಇದರಲ್ಲಿ ಈಶ್ವರ ಲಿಂಗವಿದೆ. ಗರ್ಭಗೃಹದ ಛತ್ತಿನಲ್ಲಿ ಮೇಲ್ಛಾವಣಿಯಿದ್ದು, ಬಾಗಿಲಿನಲ್ಲಿ ಪೂರ್ಣಕುಂಭಗಳು, ಅರ್ಧಕಂಬ, ಪುಷ್ಪ ತೋರಣವಿದ್ದು, ಸಿಂಹಗಳಿಂದ ಕೂಡಿದ ಸಾಲು ಇದೆ. ಮೇಲೆ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ಅಂತರಾಳ : ಈ ದೇವಾಲಯದ ಅಂತರಾಳವು ನಾಲ್ಕು ಕಂಬಗಳಿಂದ ಕೂಡಿದ್ದು, ಎರಡು ಗೋಲಾಕಾರದ ಕಂಬಗಳು ಮತ್ತು ಎರಡು ಚೌಕಾಕಾರದ ಕಂಬಗಳಿದ್ದು, ಇದರ ಎರಡು ಕೋಷ್ಟಕಗಳಲ್ಲಿ ಗಣೇಶ ಮತ್ತು ಇತರ ಮೂರ್ತಿಗಳಿವೆ.

ನವರಂಗ : ನವರಂಗ ಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು, ಈ ನಾಲ್ಕು ಕಂಬಗಳು ಪೀಠ, ಪಟ್ಟಿಕೆಗಳು ಸಾದಾ ಬೋದುಗೆಗಳನ್ನು ಹೊಂದಿವೆ. ನವರಂಗ ಮಂಟಪದಲ್ಲಿ ನಂದಿಯ ವಿಗ್ರಹವಿದ್ದು, ಇದರ ಪಕ್ಕದಲ್ಲಿ ಇತ್ತೀಚೆಗೆ ಇನ್ನೊಂದು ಲಿಂಗವನ್ನು ತಂದು ಇಡಲಾಗಿದೆ. ಛತ್ತಿನಲ್ಲಿ ಒಂದು ಮೇಲ್ಛಾವಣಿಯಿದೆ. ಕಕ್ಷಾಸನದಲ್ಲಿ ಒಟ್ಟು ಆರು ಕಂಬಗಳಿವೆ. ಇದರಲ್ಲಿ ಎರಡು ಕಂಬಗಳು ಸಾದಾ ರೀತಿಯ ಕಂಬಗಳಾದರೆ ಇನ್ನೂ ನಾಲ್ಕು ಕಂಬಗಳು ಗೋಲಾಕಾರದಲ್ಲಿವೆ. ಬಾಗಿಲಿನಲ್ಲಿ ಅರ್ಧಕಂಬಗಳು ತೋರಣವಿದ್ದು ಲಲಾಟದಲ್ಲಿ ನಂದಿಯ ಶಿಲ್ಪವಿದೆ. ಈ ದೇವಾಲಯಕ್ಕೆ ಏರಿ ಹೋಗಲು ಸೋಪಾನಗಳಿದ್ದು ಕೆಳಗಡೆ ಒಂದು ದ್ವಾರವಿದೆ. ಪೂರ್ವದ ಗೋಡೆಯಲ್ಲಿ ಕ್ರಿ.ಶ. ೧೧೨೩ರ ಶಾಸನ ಫಲಕವಿದೆ.

ಬಜಾರ ವೀರಭದ್ರೇಶ್ವರ ದೇವಾಲಯ

ಸ್ಥಳ : ಊರ ಪಶ್ಚಿಮ ಭಾಗದಲ್ಲಿ ಉತ್ತರಾಭಿಮುಖವಾಗಿದೆ.

ತಲವಿನ್ಯಾಸ : ಈ ದೇವಾಲಯವು ಉತ್ತರ ದಿಕ್ಕಿನ ಕಡೆಗಿದ್ದು, ಇದು ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯವು ಮೂರು ಗರ್ಭಗೃಹಗಳನ್ನು ಹೊಂದಿದ್ದು, ಪೂರ್ವದಿಂದ ಮೊದಲನೆಯ ಗರ್ಭಗೃಹದಲ್ಲಿ ಲಿಂಗವಿದೆ. ಇದಕ್ಕೆ ಮೇಲ್ಛಾವಣಿಯಿದ್ದು, ಬಾಗಿಲಿನಲ್ಲಿ ಪೂರ್ಣಕುಂಭಗಳು, ಅರ್ಧಕಂಬ, ಮೇಲಿನ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಎರಡನೆಯ ಗರ್ಭಗೃಹದಲ್ಲಿ ವೀರಭದ್ರಮೂರ್ತಿ

ಯಿದ್ದು, ಛತ್ತಿನಲ್ಲಿ ಒಂದು ಭುವನೇಶ್ವರಿಯಿದೆ. ಈ ವೀರಭದ್ರಮೂರ್ತಿಗೆ ನಾಲ್ಕು ಕೈಗಳಿದ್ದು, ಬಲಕೈಯಲ್ಲಿ ಗದೆ, ಖಡ್ಗವಿದ್ದರೆ ಎಡಕೈಯಲ್ಲಿ ಜಂಬೆ ಮತ್ತು ಅಭಯಹಸ್ತವಾದ ಕೈಯಿದೆ. ಇದರ ಬಾಗಿಲಿನಲ್ಲಿ ಅರ್ಧಕಂಬಗಳು ಹಾಗೂ ದ್ವಾರಪಾಲಕರು ನಿಂತಿದ್ದಾರೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದಲ್ಲದೆ ಎತ್ತು, ಸಿಂಹ, ಕೋಳಿ ಮುಂತಾದ ಪ್ರಾಣಿಗಳು ಹಾಗೂ ಅಲಂಕಾರವಾದ ತೋರಣವಿದೆ. ಮೂರನೆಯ ಗರ್ಭಗೃಹದಲ್ಲಿ ಎರಡು ನಂದಿಗಳಿವೆ. ಇದರಲ್ಲಿ ಒಂದು ಚಿಕ್ಕನಂದಿ ಮತ್ತು ಸ್ವಲ್ಪ ದೊಡ್ಡದಾದ ನಂದಿ ಇವೆ. ಈ ಗರ್ಭಗೃಹದ ಬಾಗಿಲಿನಲ್ಲಿ ಅರ್ಧಕಂಬಗಳು, ಗಜಲಕ್ಷ್ಮಿ ಚಿತ್ರ, ಗಂಟೆ ಆಕಾರದಲ್ಲಿರುವ ತೋರಣ ಹಾಗೂ ಲಲಾಟಬಿಂಬದಲ್ಲಿ ಗೋಪುರ ಆಕಾರದ ಶಿಲ್ಪವಿದೆ.

ಅಂತರಾಳ : ಇದರ ಅಂತರಾಳದಲ್ಲಿ ಮೂರು ಭುವನೇಶ್ವರಿಗಳ ಶಿಲ್ಪವಿದ್ದು, ಇದರ ಭಿತ್ತಿಯು ಜಾಲಾಂಧ್ರದಿಂದ ಕೂಡಿದೆ. ಇದರಲ್ಲಿ ಒಟ್ಟು ನಾಲ್ಕು ಕಂಬಗಳಿದ್ದು, ಇವು ಯಾವುದೇ ರೀತಿಯ ಅಲಂಕಾರವನ್ನು ಹೊಂದಿಲ್ಲ.

ಸಭಾಮಂಟಪ : ಈ ದೇವಾಲಯದ ಸಭಾಮಂಟಪವು ಇತ್ತೀಚೆಗೆ ಹೊಸಗೋಡೆಗಳಿಂದ ನಿರ್ಮಾಣವಾಗಿದ್ದು, ಯಾವುದೇ ರೀತಿಯಿಂದ ಅಲಂಕೃತವಾಗಿಲ್ಲ. ಈ ಸಭಾಮಂಟಪದ ಉತ್ತರದ ಕಡೆಗೆ ಒಂದು ಬಾಗಿಲು ಮತ್ತು ಪೂರ್ವದಿಕ್ಕಿನ ಕಡೆ ಒಂದು ಬಾಗಿಲು ಇದೆ. ಈ ದೇವಾಲಯದ ವೈಶಿಷ್ಟ್ಯತೆಯೆಂದರೆ ಮೂರು ಗರ್ಭಗೃಹದಲ್ಲಿ ಬೇರೆ ಬೇರೆ ಈಶ್ವರ, ವೀರಭದ್ರ ಮತ್ತು ನಂದಿ ಮೂರ್ತಿಗಳಿರುವುದನ್ನು ಕಾಣುತ್ತೇವೆ.

ಇತರೆ : ಇಂದಿಗೂ ಈ ದೇವಾಲಯದಲ್ಲಿ ಶ್ರಾವಣ ಮಾಸದಲ್ಲಿ ಭಜನೆ, ಆರಾಧನೆ ಮುಂತಾದ ಆಚರಣೆಗಳು ನಡೆಯುತ್ತವೆ.

ಹಂಪಣ್ಣನವರ ದೇವಾಲಯ

ಸ್ಥಳ : ಊರ ಹೊರಗೆ.

ತಲವಿನ್ಯಾಸ : ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಮುಖಮಂಟಪಗಳಿಂದ ಕೂಡಿದ ಏಕಕೂಟ ದೇವಾಲಯವಾಗಿದೆ. ಇದು ಪೂರ್ವಾಭಿಮುಖವಾಗಿದ್ದು, ಇದನ್ನು ನಿರ್ಮಿಸಲು ಬಿಳಿಬಣ್ಣದ ಕಲ್ಲನ್ನು ಬಳಸಲಾಗಿದೆ.

ಗರ್ಭಗೃಹ : ಗರ್ಭಗೃಹವು ಪೂರ್ವಕ್ಕೆ ಮುಖ ಮಾಡಿದೆ. ಚೌಕಾಕಾರದ ಈ ಗರ್ಭಗೃಹವು ನಾಲ್ಕು ಅಡಿ ಆಳದಲ್ಲಿದೆ. ಇದರ ಮಧ್ಯದಲ್ಲಿ ಈಶ್ವರಲಿಂಗ ಮತ್ತು ಅದರ ಎದುರಿಗೆ ನಂದಿ ಮೂರ್ತಿಯು ಇದೆ. ಛತ್ತಿನಲ್ಲಿ ಭುವನೇಶ್ವರಿಯ ಚಿತ್ರವಿದ್ದು, ಈ ಗರ್ಭಗೃಹದ ಬಾಗಿಲುಗಳ ಕೆತ್ತನೆ ಸುಂದರವಾಗಿದ್ದು, ಬಾಗಿಲಿನ ಎರಡು ಕಡೆಗೆ ದ್ವಾರಪಾಲಕರನ್ನು ಕೆತ್ತಲಾಗಿದೆ. ಈ ದ್ವಾರಪಾಲಕರಿಗೆ ನಾಲ್ಕು ಕೈಗಳಿದ್ದು,

ಬಲಗೈಯಲ್ಲಿ ತ್ರಿಶೂಲ, ಗದೆ ಇದ್ದರೆ, ಎಡಕೈಯಲ್ಲಿ ಡಮರು ಮತ್ತು ಅಭಯಹಸ್ತ ಇದೆ. ಇವರ ಎಡಬಲಕ್ಕೆ ಇಬ್ಬರು ಚೌರಿದಾರಿಗಳಿದ್ದಾರೆ. ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವಿದ್ದು, ಅರ್ಧಕಂಬಗಳು ಮತ್ತು ಸರಪಳಿಯ ಆಕಾರದ ಸಿಂಹಗಳ ತೋರಣವಿದೆ.

ಅಂತರಾಳ : ಈ ಗರ್ಭಗುಡಿಗೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದು ಚೌಕಾಕಾರವಾಗಿದೆ. ಇದರ ಸುತ್ತಲೂ ಗೋಡೆ ಇದೆ. ಅಂತರಾಳಕ್ಕೆ ದ್ವಾರವಿದ್ದು ಇದರ ಛತ್ತಿನಲ್ಲಿ ಕಮಲದ ಭುವನೇಶ್ವರಿಯನ್ನು ಕೆತ್ತಲಾಗಿದೆ. ಅಂತರಾಳದ ಗೋಡೆಯು ಜಾಲಾಂಧ್ರದಿಂದ ಕೂಡಿದ್ದು ಲತೆಯ ಬಳ್ಳಿ ಹಾಗೂ ಸ್ತ್ರೀಮೂರ್ತಿಗಳನ್ನು ಕಾಣಬಹುದು.

ಮುಖಮಂಟಪ : ಮುಖಮಂಟಪವು ಪೂರ್ವದಿಕ್ಕಿಗೆ ಇದ್ದು ಇದರ ದ್ವಾರಬಾಗಿಲಿಗೆ ಎರಡು ಕಡೆ ಚಾಲುಕ್ಯರ ಕಾಲದ ಬಾಗಿಲವಾಡದ ಪ್ರಾರಂಭಿಕ ಹಂತವನ್ನು ಕಾಣಬಹುದು. ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಇಂತಹ ನೂರಾರು ದೇವಾಲಯಗಳಲ್ಲಿ ಹೆಚ್ಚಿನ ಅಲಂಕಾರ ಇಲ್ಲದ ಬಾಗಿಲುವಾಡಗಳನ್ನು ಕಾಣಬಹುದು. ಈ ದೇವಾಲಯದ ಎರಡು ಬದಿಯ ಬಾಗಿಲುಗಳು ಮತ್ತು ಲಲಾಟಬಿಂಬದ ಮೇಲೆ ಚಿಕ್ಕ ಚಿಕ್ಕ ರಂಧ್ರಗಳನ್ನು ಹೊಂದಿವೆ. ಈ ದ್ವಾರಬಾಗಿಲು ಸರಳ ಶೈಲಿಯಲ್ಲಿದ್ದು, ಇದರ ಎರಡು ಬದಿಗೆ ಇಬ್ಬಿಬ್ಬರ ಚೌರಿದಾರಿಗಳ ಶಿಲ್ಪಗಳಿವೆ. ದ್ವಾರಬಾಗಿಲಿನ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕಾಣಬಹುದು. ಇಲ್ಲಿಯೇ ಎರಡು ಅರ್ಧಕಂಬಗಳನ್ನು ಗೋಡೆಯಲ್ಲಿ ನಿರ್ಮಿಸಿದ್ದಾರೆ.

ಇತರೆ : ಈ ದೇವಾಲಯದ ಮುಂದೆ ಎರಡು ಪಾದಗಳಿದ್ದು ದೇವಾಲಯದ ಬಲ (ದಕ್ಷಿಣ) ಬದಿಯಲ್ಲಿ ಎರಡು ಆನೆಗಳನ್ನು ನಿಲ್ಲಿಸಿದ್ದಾರೆ. ಇದರ ಎಡ(ಉತ್ತರ) ಬದಿಯಲ್ಲಿ ಬೃಹತ್ತಾಕಾರದ ಬಾವಿಯಿದೆ. ದೇವಾಲಯದ ಮುಂದೆ ಮತ್ತೊಂದು ಲಿಂಗವಿದ್ದು, ಇದರ ಮುಂದೆ ಆರು ವೀರಗಲ್ಲುಗಳು ಮತ್ತು ನಾಗ ನಾಗಿಣಿಯರ ಶಿಲ್ಪಗಳಿವೆ ಮತ್ತು ಕ್ರಿ.ಶ.೧೦೮೫ರ ಶಾಸನವಿದೆ. ಈಗ ಈ ಗುಡಿಯಲ್ಲಿ ಒಬ್ಬ ಸಾಧು ಇದ್ದು ಈ ಗುಡಿಯ ಪೂಜೆ ಪುನಸ್ಕಾರ ಮತ್ತು ಸಣ್ಣ ಹುಡುಗರಿಗೆ ಜ್ವರ, ಬೇನೆ, ಕಾಯಿಲೆ ಬಂದರೆ ಅಂತಹವರಿಗೆ ಈ ಸಾಧು ಅಂತ್ರಮಂತ್ರ ಮತ್ತು ಲೋಭಾನ ಕೊಡುತ್ತಾನೆ.

ಸೂಗುರೇಶ್ವರ ದೇವಾಲಯ

ಸ್ಥಳ : ಊರಿನ ಪಶ್ಚಿಮ ದಿಕ್ಕಿನಲ್ಲಿರುವ ಬೆಟ್ಟದ ಮೇಲಿದೆ. ಈ ದೇವಾಲಯದ ಉತ್ತರ ದಿಕ್ಕಿನ ಕಡೆಗೆ ಇರುವ ಕಂಬದಲ್ಲಿ ಶಾಸನವಿದ್ದು, ಜನರು ದುರುಪಯೋಗ ಪಡಿಸಿಕೊಂಡ ಕಾರಣ ಅಕ್ಷರಗಳು ಅಳಿಸಿಹೋಗಿವೆ. ಆದರೆ ಚಾಲುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿರುವಾಗ ರಚನೆಯಾದ ಕ್ರಿ.ಶ. ೧೦೮೫ರ ಶಾಸನವು ಈ ಬೆಟ್ಟದ ದಾರಿಯಲ್ಲಿದೆ.

ತಲವಿನ್ಯಾಸ : ಸೂಗೂರೇಶ್ವರ ದೇವಾಲಯವು ಗಬ್ಬೂರಿಗೆ ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿನಲ್ಲಿರುವ ಬೂದಿಬಸವೇಶ್ವರ ಬೆಟ್ಟದಲ್ಲಿದೆ. ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದು

ಇದನ್ನು ನಿರ್ಮಾಣ ಮಾಡಲು ಕೆಂಪು ಬಿಳುಪು ಶಿಲೆಯ ಗ್ರಾನೈಟ್‌ದಿಂದ ನಾಜೂಕಾಗಿ ಕೆತ್ತಲಾಗಿದೆ. ನೋಡಲು ಬಹಳ ಸುಂದರವಾದ ಈ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದ ತ್ರಿಕೂಟ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗುಡಿಯ ಪೂರ್ವಕ್ಕೆ ಮುಖ ಮಾಡಿದ್ದು, ಚೌಕಾಕಾರವಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಗರ್ಭಗೃಹದ ಮಧ್ಯ ಶಿವಲಿಂಗವಿದ್ದು, ನಂತರದ ಕಾಲದಲ್ಲಿ ಖಾಲಿ ಗರ್ಭಗುಡಿ ಇರುವುದನ್ನು ಕಾಣಬಹುದು. ಇಲ್ಲಿಯ ಗರ್ಭಗೃಹದ ಬಾಗಿಲುಗಳನ್ನು ಸುಂದರವಾಗಿ ಕೆತ್ತಿದ್ದಾರೆ. ದ್ವಾರಬಾಗಿಲಿನ ಎರಡು ಬದಿಯಲ್ಲಿ ದ್ವಾರಪಾಲಕರು ನಿಂತಿದ್ದಾರೆ. ಇದು ಹೂಬಳ್ಳಿ, ಪುಷ್ಪದಳಗಳು, ಅರ್ಧಕಂಬಗಳನ್ನು ಹೊಂದಿದ್ದು, ದ್ವಾರದ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕಾಣಬಹುದು. ಈ ದ್ವಾರಬಾಗಿಲಿಗೆ ಇತ್ತೀಚೆಗೆ ಕಬ್ಬಿಣದ ಬಾಗಿಲನ್ನು ಮಾಡಿ ಗರ್ಭಗೃಹವನ್ನು ಮುಚ್ಚುವ ವ್ಯವಸ್ಥೆ ಮಾಡಿದ್ದಾರೆ. ಇದರ ಅಂತರಾಳ ಶಿಥಿಲವಾಗಿದ್ದು ಎರಡು ಕಂಬಗಳನ್ನು ಒಳಗೊಂಡಿದೆ. ದಕ್ಷಿಣದಲ್ಲಿರುವ ಗರ್ಭಗೃಹವು ಈಗ ಕಾಲಿ ಇದ್ದು ಅದರಲ್ಲಿ ಯಾವ ಮೂರ್ತಿಯೂ ಇಲ್ಲ. ಇದರ ಅಂತರಾಳದಲ್ಲಿ ನಾಲ್ಕು ಕಂಬಗಳಿವೆ. ಪಶ್ಚಿಮದಲ್ಲಿರುವ ಅಂತರಾಳದಲ್ಲಿ ಎರಡು ದೇವಕೋಷ್ಟಗಳಿವೆ. ಆದರೆ ಯಾವ ಮೂರ್ತಿಯೂ ಇಲ್ಲ. ಈ ಅಂತರಾಳದಲ್ಲಿ ಎರಡು ಪ್ರತ್ಯೇಕ ಕಂಬಗಳನ್ನು ಹೊಂದಿದ್ದು ಕಂಬಗಳು ಪೀಠ, ಚೌಕಾಕಾರ ಮುಚ್ಚಳವನ್ನು ಹೊಂದಿದ್ದು ಸರಳವಾಗಿವೆ. ಇವುಗಳ ಮಧ್ಯ ಎರಡು ಕಡೆಗೆ ಗೋಡೆಗಳನ್ನು ನಿರ್ಮಿಸಿದ್ದಾರೆ.

ನವರಂಗ : ಕಲ್ಯಾಣಿ ಚಾಲುಕ್ಯರ ದೇವಾಲಯಗಳಲ್ಲಿ ಒಂದಾದ ಈ ಸೂಗೂರೇಶ್ವರ ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಮೂರು ದಿಕ್ಕಿನ ಕಡೆಗೆ ತೆರೆದುಕೊಂಡಿದೆ. ನವರಂಗದ ಕಂಬಗಳು ಪೀಠ, ಚೌಕಾಕಾರ ಪಟ್ಟಿಕೆಗಳನ್ನು ಹೊಂದಿದೆ. ಇಲ್ಲಿ ಮೂರ್ತಿಶಿಲ್ಪಗಳಿದ್ದು ಅವು ಮಾಸಿವೆ. ಮೇಲಿನ ಕಂಠಭಾಗದಲ್ಲಿ ಗೋಲಾಕಾರದ ಮುಚ್ಚಳ, ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳಿಂದ ಕೂಡಿದವುಗಳಾಗಿವೆ. ಇಲ್ಲಿಯ ಛತ್ತಿನಲ್ಲಿ ಭುವನೇಶ್ವರಿ ಇರುವುದನ್ನು ಕಾಣುತ್ತೇವೆ. ಇದರ ಸುತ್ತ ಮಂಟಪದಲ್ಲಿ ಇನ್ನು ಎಂಟು ಭುವನೇಶ್ವರಿಗಳಿವೆ.

ಮುಖಮಂಟಪ : ಈ ದೇವಾಲಯದ ಮುಖಮಂಟಪ ಪೂರ್ವ ದಿಕ್ಕಿಗೆ ಇದ್ದು, ದಕ್ಷಿಣ, ಉತ್ತರ ದಿಕ್ಕಿನ ಕಡೆಗೂ ತೆರೆದುಕೊಂಡಿದ್ದು, ಸುಂದರವಾದ ಕಂಬಗಳಿಂದ ಕೂಡಿದೆ. ಇಲ್ಲಿಯ ಕಂಬಗಳ ಪೀಠ ೧೬-೮-೧೬ ಪಟ್ಟಿಕೆಗಳು ಇದ್ದು ಕಾಂಡಭಾಗದಲ್ಲಿ ಸಣ್ಣ ಕೋಷ್ಟಕಗಳಿವೆ. ಇವು ಮಣಿಸರಗಳಿಂದ ಕೂಡಿದ್ದಾಗಿದೆ. ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳ ಹೊಂದಿ ಅದರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಈ ನಾಲ್ಕು ಕಂಬಗಳಲ್ಲಿ ಎರಡು ಕಂಬಗಳು ಚೌಕಾಕಾರದಲ್ಲಿದ್ದರೆ ಇನ್ನೆರಡು ಕಂಬಗಳು ಗೋಲಾಕಾರದಲ್ಲಿವೆ. ಆದರೆ ಇದರಲ್ಲಿ ಒಂದು ಕಂಬ ಈಗ ನಶಿಸಿ ಹೋಗಿದೆ.

ಇದರ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದ್ದು, ಅರ್ಧಕಂಬಗಳು ಹಾಗೂ ಪೂರ್ಣಕಂಬಗಳಿಂದ ಕೂಡಿದೆ.

ಭಿತ್ತಿ : ಈ ದೇವಾಲಯದ ಗೋಡೆಗಳು ಸರಳವಾಗಿದ್ದು, ದೇವಾಲಯದ ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕಿನಲ್ಲಿ ಅನೇಕ ಶಿಲ್ಪಗಳನ್ನು ಕೆತ್ತಲಾಗಿದ್ದು, ಪಶ್ಚಿಮ ದಿಕ್ಕಿನ ಗರ್ಭಗೃಹದ ಗೋಡೆ ಶಿಥಿಲವಾಗಿದ್ದರಿಂದ ಇತ್ತೀಚೆಗೆ ಅದನ್ನು ನಿರ್ಮಾಣ ಮಾಡಿ ಇದರ ಮೇಲೆ ಸಾದಾ ರೀತಿಯಲ್ಲಿ ಶಿಖರವನ್ನು ನಿರ್ಮಾಣ ಮಾಡುತ್ತಲಿದ್ದಾರೆ.

ಅಧಿಷ್ಠಾನ : ಈ ದೇವಾಲಯದ ಅಧಿಷ್ಠಾನವು ಸುಮಾರು ಮೂರರಿಂದ ಐದು ಅಡಿ ಎತ್ತರವಾಗಿದ್ದು, ಪುಷ್ಪದಳಗಳ ಶಿಲ್ಪಗಳನ್ನು ಹೊಂದಿವೆ.

ಸೋಪಾನ : ಸೂಗೂರೇಶ್ವರ ದೇವಾಲಯವು ಬೂದಿ ಬಸವೇಶ್ವರ ಬೆಟ್ಟದಲ್ಲಿದ್ದು ಇದನ್ನು ಏರಿ ಹೋಗಲು ಮೆಟ್ಟಿಲುಗಳ ವ್ಯವಸ್ಥೆ ಮಾಡಿದ್ದಾರೆ. ಇವು ಉತ್ತರ ದಿಕ್ಕಿನಲ್ಲಿವೆ.

ಇತರೆ : ಈ ದೇವಾಲಯದ ಹಿಂದೆ ಕೆಳಗಡೆ ಭಾಗದಲ್ಲಿ ಒಂದು ಸುಂದರವಾದ ಸಿಡಿಲು ಬಾವಿ ಇದೆ. ಈ ದೇವಾಲಯದ ಪೂಜೆಗಾಗಿ ಈ ಭಾವಿಯ ನೀರನ್ನು ಉಪಯೋಗಿಸಲಾಗುತ್ತಿತ್ತು. ಇತ್ತೀಚೆಗೆ ಸ್ಥಳೀಯರು ಒಂದು ಸೂಗೂರೇಶ್ವರ ಮೂರ್ತಿಯನ್ನು ಮಾಡಿಸಿದ್ದು, ಅದನ್ನು ಇನ್ನೂ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿಲ್ಲ.

ನಾಗಭೂಷಣ ದೇವಾಲಯ

ಸ್ಥಳ : ಊರಿನ ಉತ್ತರ ಭಾಗದಲ್ಲಿ ಪಶ್ಚಿಮಾಭಿಮುಖವಾಗಿದೆ. ನೀಲಕಂಠೇಶ್ವರ ದೇವಾಲಯದ ಅಗಸಿಗೆ ಸೇರಿಸಿರುವ ಕ್ರಿ.ಶ.೧೧೪೫ರ ಶಾಸನದ ಪ್ರಕಾರ "ಗೂಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ ಪುನಸ್ಕಾರಕ್ಕೆ ಗೂಬ್ಬೂರಿನ ಮಾಲೆಗಾರ ಅರವತ್ತೊಕ್ಕಲು ಮತ್ತು ಬಿಲ್ಲಿ ಮುನ್ನೂರುವರು ಬಾಡುಕಾಯಿ ಮಾರಿದ ಹಡಗೆಗೆ ಅರವಾನ ಭತ್ತ" ನೀಡಬೇಕೆಂದಿದೆ. "ಇದನ್ನು ಹೊರೆಗೆ ಮಾರಿದಲ್ಲಿ ಬಿಲ್ಲಿಕಾಯಿ ಹೆಡಗೆಗೆ ಒಮ್ಮಾನ ಉಪ್ಪಿನ ಹೆಡೆಗೆಗೆ ಅರವಾನ ಭತ್ತ ಕೊಡಬೇಕೆಂದು" ತೀರ್ಮಾನಿಸುತ್ತಾರೆ. ಮಹಾಜನಗಳು ನಾಗಭೂಷಣ ದೇವರ ಸತ್ರಕ್ಕೆ ಜೋಳವನ್ನು ಬಿಡುತ್ತಾರೆ(ಕವಿಶಾಸಂ. ೭, ಪು.೭೧).

ತಲವಿನ್ಯಾಸ : ನಾಗಭೂಷಣ ದೇವಾಲಯವು ಗಬ್ಬೂರಿನ ಉತ್ತರ ದಿಕ್ಕಿಗೆ ಇದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದು, ತಲವಿನ್ಯಾಸದಲ್ಲಿ ಗರ್ಭಗೃಹದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಬಾಗಿಲಲ್ಲಿ ಅರ್ಧಕಂಬಗಳು ಹಾಗೂ ಪೂರ್ಣ ಕುಂಬಗಳಿದ್ದು, ಛತ್ತಿನಲ್ಲಿ ಒಂದು ಶಿಲ್ಪ ಇದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಪಶ್ಚಿಮಕ್ಕೆ ಮುಖ ಮಾಡಿದ್ದು, ಚೌಕಾಕಾರವಾಗಿದೆ. ಗರ್ಭಗೃಹದ ಮಧ್ಯದಲ್ಲಿ ಪಾಣಿವಾಟದ ಮೇಲೆ ಲಿಂಗವಿದ್ದು, ಈಗ ಕೇವಲ ಪಾಣಿವಾಟ ಮಾತ್ರವೇ ಇದೆ. ಗರ್ಭಗೃಹದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಮತ್ತು ಬಾಗಿಲಿನಲ್ಲಿ ಅರ್ಧಕಂಬಗಳು ಹಾಗೂ ಪೂರ್ಣಕಂಬಗಳಿದ್ದು, ಛತ್ತಿನಲ್ಲಿ ಒಂದು ಮೇಲ್ಛಾವಣಿ ಇದೆ.

ಅಂತರಾಳ : ಈ ದೇವಾಲಯದ ಅಂತರಾಳವು ಲತಾಜಾಲಾಂಧ್ರದಿಂದ ಕೂಡಿದ್ದು, ಅಂತರಾಳದ ಛತ್ತಿನಲ್ಲಿ ಒಂದು ಭುವನೇಶ್ವರಿಯ ಶಿಲ್ಪವಿದೆ. ಇದರ ಬಾಗಿಲಿನಲ್ಲಿ ಎಡಬದಿಯಲ್ಲಿ ಚೌರಿದಾರಿಗಳಿದ್ದಾರೆ. ಎರಡು ಬದಿಯಲ್ಲಿ ಎರಡು ದೇವಕೋಷ್ಠಗಳಿದ್ದು, ಇವು ಮೊದಲು ದೇವರ ಮೂರ್ತಿಗಳನ್ನಿಡಲು ಮಾಡಲಾಗಿತ್ತು. ಆದರೆ ಈಗ ಯಾವ ಮೂರ್ತಿಗಳಿಲ್ಲ.

ನವರಂಗ : ನವರಂಗ ಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು ಇವು ಪೀಠ, ಪಟ್ಟಿಕೆಗಳು, ಸಾದಾ ರೀತಿಯ ಬೋದುಗೆಗಳನ್ನೊಳಗೊಂಡಿದೆ. ಇದರ ಛತ್ತಿನಲ್ಲಿ ನಕ್ಷತ್ರಾಕಾರದ ಒಂದು ಮೇಲ್ಛಾವಣಿಯು ಕೂಡ ಇದೆ. ಇದರ ಭಿತ್ತಿಯಲ್ಲಿ ನಾಲ್ಕರಂತೆ ಎರಡು ಕಡೆ ಎಂಟು ಕಂಬಗಳಿವೆ. ಇತ್ತೀಚೆಗೆ ದಕ್ಷಿಣ ಮತ್ತು ಉತ್ತರದ ಭಿತ್ತಿಯು ಶಿಥಿಲಗೊಂಡಿದೆ. ಮುಖಮಂಟಪದ ಮುಂದೆ ಎಲ್ಲವು ಶಿಥಿಲಗೊಂಡಿದ್ದು, ಈಗ ಕೇವಲ ಎರಡು ಕಂಬಗಳಿಂದ ಮಾತ್ರ ಕೂಡಿದ್ದಾಗಿದೆ.

ಅಧಿಷ್ಠಾನ : ಇದರ ಅಧಿಷ್ಠಾನವು ಈಗ ನೆಲದಲ್ಲಿ ಹೂತುಹೋಗಿದೆ. ಇದರ ಸುತ್ತಲೂ ಈಗ ಬೇಲಿಯ ಮರಗಳು ಬೆಳೆದುಬಿಟ್ಟಿವೆ. ಇದರ ಸ್ವಲ್ಪ ದೂರದಲ್ಲಿಯೇ ಒಂದು ಸುಂದರವಾದ ನಾಗರ ಪುಷ್ಕರಣಿ ಇದೆ. ಇವತ್ತಿಗೆ ಈ ಪುಷ್ಕರಣಿಗೆ ನೀರಿನ ಬುಗ್ಗೆಯಿದ್ದು ಮೂರು ಕಾಲಕ್ಕೆ ಇದರಲ್ಲಿ ನೀರು ತುಂಬಿರುತ್ತವೆ. ಇದರ ನೀರನ್ನು ಇತ್ತೀಚೆಗೆ ತೋಟಕ್ಕೆ ಉಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಪೇಟೆ ಬಸಪ್ಪನ ದೇವಾಲಯ

ಸ್ಥಳ : ಊರಿನ ಉತ್ತರ ಭಾಗದಲ್ಲಿದೆ.

ತಲವಿನ್ಯಾಸ : ಈ ದೇವಾಲಯವು ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದ್ದು, ತಲವಿನ್ಯಾಸದಲ್ಲಿ ಏಕಕೂಟ ದೇವಾಲಯವಾಗಿದೆ.

ಗರ್ಭಗೃಹ : ಇದರ ಗರ್ಭಗೃಹವು ಪೂರ್ವದ ದಿಕ್ಕಿಗೆ ಮುಖಮಾಡಿದ್ದು, ಇದು ಬೀದಿಯ ಮಧ್ಯದಲ್ಲಿರುವುದರಿಂದ ಇದಕ್ಕೆ ಪೇಟೆ ಬಸಪ್ಪ ಎಂದು ಹೆಸರು ಬಂದಿದೆ. ಇದರ ಗರ್ಭಗೃಹದಲ್ಲಿ ನಂದಿ ವಿಗ್ರಹವಿದ್ದು, ಈ ದೇವಾಲಯವು ಗೋಪುರವನ್ನು ಹೊಂದಿದೆ. ಇದರ ಗೋಪುರದಲ್ಲಿ ಕಳಶ ಇದೆ. ಈ ದೇವಾಲಯದ ಮುಂದಿನ ಕಟ್ಟೆಯ ಮೇಲೆ ವಿಷ್ಣುಮೂರ್ತಿ, ನಾಗ, ಗಣೇಶ ಮೂರ್ತಿಗಳಿವೆ. ಈ ದೇವಾಲಯದ ಮೇಲೆ ನಾಲ್ಕು ದಿಕ್ಕಿನ ಮೂಲೆಯಲ್ಲಿ ಒಂದರಂತೆ ನಾಲ್ಕು ನಂದಿ ವಿಗ್ರಹಗಳಿವೆ.

ಭಿತ್ತಿ : ಈ ದೇವಾಲಯದ ಭಿತ್ತಿಯು ಸಾದಾ ರೀತಿಯಿಂದ ಕೂಡಿದ್ದು, ಯಾವುದೇ ರೀತಿಯ ಕುಡ್ಯಸ್ತಂಭಗಳಾಗಲಿ ಅಥವಾ ಅಲಂಕೃತವಾದ ಶಿಲ್ಪಗಳಾಗಲಿ ಇದರ ಭಿತ್ತಿಯಲ್ಲಿ ಕಾಣುವುದಿಲ್ಲ. ಈ ದೇವಾಲಯಕ್ಕೆ ಇಂದಿಗೂ ಇಲ್ಲಿನ ಜನ ನಡೆದುಕೊಳ್ಳುತ್ತಾರೆ ಮತ್ತು ಪೂಜೆ ಇದೆ. ಈ ದೇವಾಲಯಕ್ಕೆ ಒಟ್ಟಿನಲ್ಲಿ ಅಷ್ಟೇನು ಸುಂದರವಲ್ಲದ ಎತ್ತರದ ಜಗತಿಯ ಮೇಲೆ ನಿರ್ಮಾಣವಾದ ದೇವಾಲಯವಾಗಿದೆ (ಗ.ಶಾ.ದೇ. ಎಂ.ಫಿಲ್.ನಿಬಂಧ, ಮಹೇಶ, ಪು.೨೭-೩೦)

ಯಾದವಕಾಲದ ದೇವಾಲಯ

ಗಬ್ಬೂರು ವೆಂಕಟೇಶ್ವರ ದೇವಾಲಯ

ದೇವದುರ್ಗ ತಾಲೂಕಿನಲ್ಲಿ ಯಾದವರ ಕಾಲದ ಯಾವುದೇ ಸ್ಮಾರಕಗಳು ಹೆಚ್ಚಿಗೆ ಸಿಗುವುದಿಲ್ಲ. ಆದರೂ ಇವರ ಕಾಲದ ದೇವಾಲಯವೊಂದು ಗಬ್ಬೂರು ಗ್ರಾಮದಲ್ಲಿ ಇದೆ. ಅದು ವಿಶೇಷ ಕೆತ್ತನೆಯನ್ನು ಹೊಂದಿದೆ. ಯಾದವರಿಂದ ರಚಿತವಾದ ಈ ದೇವಾಲಯವು ನಕ್ಷತ್ರಾಕಾರವಲ್ಲದ, ಚೌಕಾಕಾರವಲ್ಲದ ರೀತಿಯಲ್ಲಿ ಇದು ರಚಿತವಾಗಿದೆ. ಈ ದೇವಾಲಯದಲ್ಲಿ ಶಿವ ಮತ್ತು ವಿಷ್ಣುವಿನ ಅಭೇದ ಕಲ್ಪನೆಯ ಫಲವೆಂಬಂತೆ ಎರಡು ಗರ್ಭಗೃಹಗಳಿವೆ.

"ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ನಾಗರಲಿಪಿ ಹಾಗೂ ಸಂಸ್ಕೃತ ಭಾಷೆಯಲ್ಲಿರುವ ಕ್ರಿ.ಶ.೧೨೧೪ರ ಶಾಸನದಲ್ಲಿ ಯಾದವ ಸಿಂಹಣನು ಗೋಪುರ ಗ್ರಾಮದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿದ ವಿಷಯ ತಿಳಿದುಬರುತ್ತದೆ. ಇದರೊಂದಿಗೆ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದ. ಗೋಪುರವನ್ನು ಇವನ ದಂಡನಾಯಕ ಲಕ್ಷ್ಮೀದೇವನು ಆಳುತ್ತಿದ್ದು, ಅವನು ಅನೇಕ ಬ್ರಾಹ್ಮಣರಿಗೆ ಮನೆಯ ವೃತ್ತಿಗಳನ್ನು ಹಂಚಿದ. ನೇರುಡಿಗೆ ಗ್ರಾಮವನ್ನು ದತ್ತಿ ನೀಡಿದ ಉಲ್ಲೇಖವಿದೆ."

ದ್ವಿಕೂಟದಲ್ಲಿ ನಿರ್ಮಾಣವಾದ ಈ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಪ್ರದಕ್ಷಿಣೆ ಪಥ ಮತ್ತು ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಒಳಗೊಂಡಿದೆ. ಇದರ ಉತ್ತರಾಭಿಮುಖವಾಗಿರುವ ಗರ್ಭಗೃಹವು ವೆಂಕಟೇಶ ಮೂರ್ತಿಯನ್ನು ಹೊಂದಿದ್ದು, ಈ ಗರ್ಭಗೃಹವು ಚೌಕಾಕಾರದಲ್ಲಿದೆ. ಗರ್ಭಗೃಹದ ಬಾಗಿಲಿನಲ್ಲಿ ವೈಷ್ಣವ ದ್ವಾರಪಾಲಕರನ್ನು ನಿಂತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ಇನ್ನೊಂದು ಗರ್ಭಗೃಹವು ಪಶ್ಚಿಮಾಭಿಮುಖವಾಗಿದ್ದು, ಇದರಲ್ಲಿರುವ ಈಶ್ವರ ಲಿಂಗವನ್ನು ಇರಿಸಲಾಗಿದೆ. ಅದನ್ನು ಕಾಶೀಶ್ವರ ಎಂದು ಕರೆಯುತ್ತಾರೆ. ಇದರ ಮೇಲಿನ ಮುಚ್ಚಿಗೆಯಲ್ಲಿ ಕಮಲವನ್ನು ಕಾಣುತ್ತೇವೆ.

ವೆಂಕಟೇಶ್ವರ ದೇವಾಲಯದ ಅಂತರಾಳವು ಜಾಲಾಂಧ್ರದಿಂದ ಕೂಡಿದ್ದು, ಪಶ್ಚಿಮ ದೇವಕೋಷ್ಠದಲ್ಲಿ ವಿಷ್ಣುಲಕ್ಷ್ಮಿಯರಿದ್ದು, ಇದರ ಕೆಳಗೆ ಹಾರುತ್ತಿರುವ ಗರುಡ ಶಿಲ್ಪವು ಇದೆ. ಪೂರ್ವದ ದೇವಕೋಷ್ಠದಲ್ಲಿ ಆಂಜನೇಯ ಮೂರ್ತಿ ಇದೆ. ಈ ಅಂತರಾಳದ ಮೇಲ್ಛಾವಣಿಯಲ್ಲಿ ಕಮಲವನ್ನು ಬಿಡಿಸಿದ್ದು, ಇದರ ಬಾಗಿಲಿನಲ್ಲಿ ಇಬ್ಬರು ದ್ವಾರಪಾಲಕರ ಶಿಲ್ಪಗಳಿವೆ.

ಪೂರ್ವದ ಅಂತರಾಳದಲ್ಲಿ ಎತ್ತರವಾದ ನಂದಿ ವಿಗ್ರಹವಿದೆ. ಅಂತರಾಳದ ಬಾಗಿಲಿನ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅಂತರಾಳದ ಎರಡು ಬದಿಯಲ್ಲಿ ದೇವಕೋಷ್ಠಗಳಿವೆ. ಇದರಲ್ಲಿ ಈಗ ಯಾವ ಮೂರ್ತಿಗಳಿಲ್ಲ. ಇದರ ಸಭಾಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು, ಈ ಕಂಬಗಳು,

ಪೀಠವು, ಚಚ್ಚೌಕವಾಗಿದ್ದು, ಪಟ್ಟಿಕೆ, ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳವನ್ನು ಹೊಂದಿದೆ. ಇದರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದಿಗೆಗಳನ್ನು ಹೊಂದಿದೆ. ಇದರ ಛತ್ತಿನಲ್ಲಿ ಸಭಾಮಂಟಪದ ಮಧ್ಯದಲ್ಲಿ ಬೃಹತ್ತಾದ ಅರಳಿದ ಕಮಲದ ಆಕಾರದಲ್ಲಿರುವ ಮೇಲ್ಛಾವಣಿ ಇದೆ. ಇದು ೬೪ ಚಿಕ್ಕಮೂರ್ತಿಗಳಿಂದ ಕೂಡಿದ್ದು, ಈಗ ಬಣ್ಣದಲ್ಲಿ ಮುಳುಗಿರುವುದರಿಂದ ವಿವರಗಳು ಅಸ್ಪಷ್ಟವಾಗಿದೆ. ಇದರ ಸುತ್ತಲೂ ಒಟ್ಟು ಒಂಬತ್ತು ವಿವಿಧ ಆಕಾರದಲ್ಲಿರುವ ಕಮಲಗಳಿವೆ. ಇದರ ಕಂಬಗಳಲ್ಲಿ ವಿವಿಧ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ.


ಮುಖಮಂಟಪದ ಕಕ್ಷಾಸನದಲ್ಲಿ ಒಟ್ಟು ನಾಲ್ಕು ಕಂಬಗಳಿದ್ದು, ಅವು ಮಣಿಸರ, ಕಪೋತ, ಚೌಕಾಕಾರದ ಬೋದಿಗೆಗಳನ್ನು ಹೊಂದಿದೆ. ಇದರ ಭಿತ್ತಿಯ ಭಾಗದಲ್ಲಿ ಲತಾಬಳ್ಳಿಯನ್ನು ಕಾಣಬಹುದು. ನವರಂಗ ಮಂಟಪದಲ್ಲಿ ಒಟ್ಟು ನಾಲ್ಕು ಕಂಬಗಳಿವೆ. ಉತ್ತರ ಪೂರ್ವದ ಕಂಬಗಳಲ್ಲಿ ಸರಸ್ವತಿ, ಸೂರ್ಯ, ವೇಣುಗೋಪಾಲ ಮತ್ತು ಕೀರ್ತಿಮುಖವು ಕಾಣುತ್ತವೆ. ಉತ್ತರ ಪಶ್ಚಿಮದ ಕಂಬದಲ್ಲಿ ಕೀರ್ತಿಮುಖ ಮತ್ತು ಉಗ್ರನರಸಿಂಹನು ಹಿರಣ್ಯ ಕಶ್ಯಪನನ್ನು ಕೊಲ್ಲುತ್ತಿರುವುದು ಕಾಣುತ್ತದೆ. ಇನ್ನುಳಿದ ಕಕ್ಷಾಸನದ ನಾಲ್ಕು ಕಂಬಗಳಲ್ಲಿ ಚೌಕಾಕಾರದ ಬೋದಿಗೆ ಮಣಿಸರ, ಕಪೋತ ಕಾಣುತ್ತವೆ.

ಗರ್ಭಗುಡಿ, ಅಂತರಾಳ ಭಿತ್ತಿಯಲ್ಲಿ ಅರ್ಧಕಂಬಗಳು ಕಾಣುತ್ತವೆ. ಗರ್ಭಗುಡಿಯ ಪ್ರದಕ್ಷಿಣ ಪಥದ ಸುತ್ತಲೂ ಪ್ರತಿ ಮೂರರಂತೆ ಒಟ್ಟು ಒಂಬತ್ತು ಕಂಬಗಳಿವೆ. ವೆಂಕಟೇಶ್ವರ ದೇವಾಲಯದ ಭಿತ್ತಿಯನ್ನು ಬಹು ಸೂಕ್ಷ್ಮವಾಗಿ ಕೆತ್ತಿದ್ದಾರೆ. ಈ ಭಿತ್ತಿಯಲ್ಲಿ ಅರ್ಧಕಂಬಗಳು, ಕೋಷ್ಠಗಳು, ಶಿಖರಗಳು, ಕೆಳಭಾಗದಲ್ಲಿ ಆನೆಗಳ ಸಾಲು ಇದೆ. ಈ ಕೋಷ್ಠಗಳ ಒಳಗಡೆ ಈಗ ಯಾವ ಮೂರ್ತಿಯೂ ಇರುವುದಿಲ್ಲ. ಪ್ರವೇಶದ್ವಾರದ ಭಿತ್ತಿಯಲ್ಲಿ ಜಾಲಾಂಧ್ರ, ಗಜಲಕ್ಷ್ಮಿ ಶಿಲ್ಪ, ಅರ್ಧಕಂಭಗಳಿವೆ. ಮಣಿಸರದಂತಿರುವ ತೋರಣ, ಸ್ತ್ರೀಯ ಸೇವಕಿಯ ಶಿಲ್ಪಗಳು ಇಲ್ಲಿವೆ.

ಪೂರ್ವದ ಭಿತ್ತಿಯಲ್ಲಿ ಅರ್ಧಕಂಬಳಿವೆ. ಇದು ಗೋಪುರದ ಆಕಾರವಿದೆ. ಕೆಳಗಡೆ ಲತಾಬಳ್ಳಿ, ಜಾಲಾಂಧ್ರ, ಮಣಿಸರಗಳು, ಹೂಗಳ ಸರದಂತೆ ಇರುವ ವಿವಿಧ ತೋರಣಗಳು, ಮೂರ್ತಿಶಿಲ್ಪಗಳು ಮತ್ತು ಮೂರು ದೇವಕೋಷ್ಠಗಳಿವೆ. ಪಶ್ಚಿಮದ ಭಿತ್ತಿಯಲ್ಲಿ ದೇವಕೋಷ್ಠಗಳಿವೆ. ಇದರಲ್ಲಿ ಸಹ ಯಾವ ಮೂರ್ತಿಯೂ ಇರುವುದಿಲ್ಲ. ಅನೇಕ ಮಂಟಪಗಳಲ್ಲಿ ಮೂರ್ತಿ ಶಿಲ್ಪಗಳನ್ನು ಕಾಣಬಹುದು. ಇದರ ಕೆಳಭಾಗದಲ್ಲಿ ದೊಡ್ಡ ದೊಡ್ಡ ಆನೆಗಳ ಸಾಲಿದೆ. ಉತ್ತರ ದಿಕ್ಕಿನ ಭಿತ್ತಿಯಲ್ಲಿ ಒಂದು ತೀರ್ಥನಾಳವಿದೆ. ಇದರಲ್ಲಿ ಉಬ್ಬುಶಿಲ್ಪಗಳನ್ನು ಬಿಡಿಸಿದೆ.

ಈ ದೇವಾಲಯದ ಅಧಿಷ್ಠಾನವು ಮೂರು ಅಡಿ ಎತ್ತರ ಅಧಿಷ್ಠಾನವನ್ನು ಹೊಂದಿದೆ. ಇದು ಉಪಾನ, ಜಗತಿ, ಕಂಪ, ಕಂಠ ಮತ್ತು ಪಟ್ಟಿಕೆಗಳನ್ನು ಹೊಂದಿದೆ ಮತ್ತು ಇದು ಸಿಂಹ, ಯಕ್ಷ ಸ್ತ್ರೀ ಮುಂತಾದ ಚಿಕ್ಕ ಚಿಕ್ಕ ಶಿಲ್ಪಗಳನ್ನು ಹೊಂದಿದೆ.

ವೆಂಕಟೇಶ್ವರ ದೇವಾಲಯದ ತಳವಿನ್ಯಾಸ



೧. ಮುಖಮಂಟಪ
೨. ನವರಂಗಮಂಟಪ
೩. ಸುಖನಾಸಿ
೪. ಗರ್ಭಗೃಹಗಳು
೫. ಪ್ರದಕ್ಷಣಪಥ
೬. ದ್ವಾರಗಳು
☐ ಕಂಬಗಳು

ಬಹುಮನಿ ಕಾಲದ ದೇವಾಲಯಗಳು

ಒಂದು ಕಡೆಯಲ್ಲಿ ವಿಜಯನಗರ ಸಾಮ್ರಾಜ್ಯ ಹಿಂದೂ ಸಂಸ್ಕೃತಿಯನ್ನು ಪೋಷಿಸುತ್ತಾ ಹಿಂದು ವಾಸ್ತುಶಿಲ್ಪವನ್ನು ಬೆಳೆಸುತ್ತಿದ್ದರೆ, ಅದೇ ಕಾಲದಲ್ಲಿ ಕರ್ನಾಟಕದ ಕೆಲವು ಭಾಗಗಳಲ್ಲಿ ಬಹುಮನಿ ಸುಲ್ತಾನರ ಆಳ್ವಿಕೆ ಕಾಲದಲ್ಲಿ ಮುಸ್ಲಿಂ ವಾಸ್ತುಶಿಲ್ಪ ತನ್ನದೇ ಆದ ರೀತಿಯಲ್ಲಿ ಬೆಳೆಯತೊಡಗಿತು. ಇದು ಮುಸ್ಲಿಂ ವಾಸ್ತುಶಿಲ್ಪದ ಒಂದು ಪ್ರಮುಖ ಶಾಖೆಯಾದ ಡೆಕ್ಕನ್ ಶೈಲಿ(Deecan style)ಯನ್ನು ಬೆಳಸಲು ಕಾರಣವಾಯಿತು.

ಇವರು ಕಮಾನಿನ ರೀತಿಯನ್ನು ಬೆಳೆಸಿಕೊಂಡು ಬಂದರು. ಇವರ ಪ್ರಮುಖ ಕಟ್ಟಡಗಳಲ್ಲಿ ಮಸೀದಿಗಳು ಮತ್ತು ಘೋರಿಗಳು(toumbs) ಮುಖ್ಯವಾದುವು. ಮಸೀದಿಗಳು ಅವರ ಪ್ರಾರ್ಥನಾ ಮಂದಿರಗಳು, ಇದರ ಮುಖ್ಯವಾದ ಭಾಗವೆಂದರೆ ಕಂಬಗಳಿಂದ ಕೂಡಿದ ಕೈಸಾಲೆಯಿಂದ ಸುತ್ತುವರಿಯಲ್ಪಟ್ಟ ವಿಸ್ತಾರವಾದ ಒಳ ಅಂಗಳ. ಅಂಗಳದ ಮುಂದೆ ಒಂದು ಕೊಳ. ಈ ಕಟ್ಟಡದಲ್ಲಿ ಒಂದು ಕೇಂದ್ರೀಕೃತ ಗುರಿಯನ್ನು ಸೂಚಿಸುವುದಕ್ಕಾಗಿ ಕಂಬಗಳಿಂದ ಕೂಡಿದ ಮಂಟಪವಿರುತ್ತದೆ. ಈ ಮಂಟಪದ ಮುಂಭಾಗದಲ್ಲಿ ಒಂದು ಅತಿ ಎತ್ತರವಾದ ವೇದಿಕೆ ಮತ್ತು ಆಕರ್ಷಕವಾದ ಮುಖದ್ವಾರ ಮತ್ತು ಬೃಹದಾಕಾರದ ಗೋಪುರಗಳು ಕಾಣಬಹುದು.

ರಾಮದುರ್ಗದ ರಾಮಲಿಂಗೇಶ್ವರ ದೇವಾಲಯ

ಕ್ರಿ.ಶ.೧೬೧೬ರ ಶಾಸನದಲ್ಲಿ ಮುಮ್ಮಡಿ ಪ್ರತಾಪ ರಾಯನೆಂಬುವವನು ಪರಗಣೆ ಬೆಳುಡೋಣೆಯ ರಾಮಲಿಂಗ ದೇವರಿಗೆ ಮೌಜೆ ಗೋಕುಲದಿನ ಗ್ರಾಮವನ್ನು ರಾಮಲಿಂಗದೇವರಿಗೆ ಏಖಭೋಗವಾಗಿ ದಾನ ಕೊಟ್ಟ ಉಲ್ಲೇಖವಿದೆ. ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಒಂದು ಗರ್ಭಗೃಹ ಹಾಗೂ ತೆರೆದ ಮಂಟಪವನ್ನು ಹೊಂದಿದೆ. ಇದು ಬಹುಮನಿ ಸುಲ್ತಾನರ ಕಾಲದಲ್ಲಿ ನಿರ್ಮಾಣವಾಗಿದ್ದು, ಇವರ ಪ್ರಭಾವ ಈ ದೇವಾಲಯದ ಮೇಲೆ ಬೀರಿದ್ದನ್ನು ಕಾಣಬಹುದು. ಚಿಕ್ಕದಾದ ಒಂದು ಗರ್ಭಗೃಹವನ್ನು ಹೊಂದಿದ್ದು, ಅದು ಚೌಕಾಕಾರದಲ್ಲಿದೆ. ಈ ಗರ್ಭಗೃಹದಲ್ಲಿ ರಾಮಲಿಂಗೇಶ್ವರ ಎಂದು ಕರೆಯುವ ಒಂದು ಲಿಂಗವನ್ನು ಕಾಣಬಹುದು. ರಾಮಲಿಂಗೇಶ್ವರ ದೇವಾಲಯದ ನವರಂಗವು ಹಿಂದೂ-ಮುಸ್ಲಿಂ ಶೈಲಿಯಲ್ಲಿ ನಿರ್ಮಿತವಾಗಿದೆ. ಮೂಲತಃ ಇದು ಹಿಂದೂ ದೇವಾಲಯವಾದರೂ, ಮುಸ್ಲಿಂ ಪ್ರಭಾವದಿಂದ ಕೆಲವು ಲಕ್ಷಣಗಳು ಬಹುಮನಿ ಸುಲ್ತಾನರ ಕಾಲದ್ದಾಗಿದೆ. ಈ ದೇವಾಲಯವು ಉದ್ದದಲ್ಲಿ ಕಮಾನು ಆಕಾರದಲ್ಲಿ ೩ ಅಂಕಣಗಳಿವೆ. ಅಗಲವಾಗಿ ೫ ಅಂಕಣಗಳು ಇವೆ. ಈ ಅಂಕಣಗಳನ್ನು ಗಾರೆಯಿಂದ ನಿರ್ಮಿಸಲಾಗಿದೆ. ಈ ಮಂಟಪದಲ್ಲಿ ಎರಡು ನಂದಿ ವಿಗ್ರಹಗಳಿವೆ. ಈ ದೇವಾಲಯದ ಭಿತ್ತಿಯು ಸರಳ ಹಾಗೂ ಚೌಕವಾಗಿದ್ದು, ಇದನ್ನು ಸಣ್ಣ ಸಣ್ಣ ಕಲ್ಲು ಮತ್ತು ಗಾರೆಗಳಿಂದ ಕಟ್ಟಲಾಗಿದೆ.

ಯಾವುದೇ ರೀತಿಯ ಕಂಬಗಳಾಗಲಿ, ವಿವಿಧ ಆಲಂಕಾರವಾಗಲಿ ಇಲ್ಲಿ ಇರುವುದಿಲ್ಲ. ದೇವಾಲಯದ ಎಡಭಾಗದಲ್ಲಿ ಕೆಲವು ಶಿಲ್ಪಗಳನ್ನು ಬಿಡಿಸಲಾಗಿದೆ. ಭಿತ್ತಿಯ ಮೇಲಿನ ಭಾಗದಲ್ಲಿ ತೆನೆಗಳಿವೆ. ಮೂಲೆಯಲ್ಲಿ ಕುಂಭದ ಆಕಾರದಲ್ಲಿ ಗುಮ್ಮಟಗಳಿವೆ. ಹಾಗು ನಂದಿಗಳನ್ನು ಮಾಡಲಾಗಿದೆ.

ಇತರೆ : ಈ ದೇವಲಯವು ಸಣ್ಣ ಗೋಪುರವನ್ನು ಹೊಂದಿದ್ದು, ಅದನ್ನು ಗಾರೆಯಿಂದ ನಿರ್ಮಿಸಲಾಗಿದೆ. ಮೇಲೆ ಒಂದು ಸಣ್ಣ ಕಳಶವನ್ನು ಇರಿಸಲಾಗಿದೆ. ಮುಂದೆ ಒಂದು ಸಿಡಿಲ ಬಾವಿಯೆಂದು ಕರೆಯುವ ಒಂದು ಪುಷ್ಕರಣಿ ಇದೆ. ಎಡಭಾಗದಲ್ಲಿ ಶಾಸನವನ್ನು ಕಲ್ಲಿನ ಮೇಲೆ ಬಿಡಿಸಲಾಗಿದೆ.

ದೇವದುರ್ಗದ ನಾಯಕರು

ಗೋಪಾಲಕೃಷ್ಣನ ದೇವಾಲಯ

ಕ್ರಿ.ಶ.೧೬೯೦ರಲ್ಲಿ ದೇವದುರ್ಗದ ನಾಯಕನಾದ ಕೇಸವ್ವೆಯಗವುಡನು ನಳನಾಮ ಸಂವತ್ಸರದಲ್ಲಿ ದೇವದುರ್ಗದ ಕೆರೆ ಕಟ್ಟಿಸಿ, ದೇವದುರ್ಗವನ್ನು ನಿರ್ಮಿಸಿದ. ಊರಿನ ಗೋವರ್ಧನ ಗೋಪಾಲಕೃಷ್ಣನ ಪ್ರತಿಷ್ಠೆ ಮಾಡಿಸಿ, ಪೇಟೆ ಕಟ್ಟಿಸಿ, ಸಂತೆ ಸೇರಿಸಿದ ಎಂದು ಶಾಸನದಲ್ಲಿ ಉಲ್ಲೇಖವಿದೆ(ಕವಿಶಾಸಂ ೭, ಪು.೧೧೪).

ಈ ಗೋಪಾಲಕೃಷ್ಣ ದೇವಾಲಯವು ದೇವದುರ್ಗದ ಊರಿನ ಮಧ್ಯವಿದೆ. ಇದು ದಕ್ಷಿಣಾಭಿಮುಖವಾಗಿದ್ದು, ದೊಡ್ಡ ಬಂಡೆಯ ಮೇಲೆ ನಿರ್ಮಿತವಾಗಿದೆ. ದೇವಾಲಯವು ಯಾವುದೇ ರೀತಿಯ ಕೆತ್ತನೆಗಳನ್ನು ಒಳಗೊಂಡಿಲ್ಲ. ಆದರೆ ಇದರ ಕೆಳಗಡೆ ಕಲ್ಲಿನ ಮೇಲೆ ಅನೇಕ ಉಬ್ಬು ಶಿಲ್ಪಗಳನ್ನು ಬಿಡಿಸಲಾಗಿದೆ. ದೇವಾಲಯದ ಬಾಗಿಲನ್ನು ಚಿಕ್ಕದಾಗಿ ಹಾಗೂ ಸರಳವಾಗಿ ನಿರ್ಮಿಸಲಾಗಿದೆ. ಇದರ ಭಿತ್ತಿಯನ್ನು ಸಣ್ಣ ಕಲ್ಲು ಹಾಗೂ ಗಾರೆಯಿಂದ ಕಟ್ಟಲಾಗಿದೆ. ದೇವಾಲಯದ ಮೇಲೆ ಎತ್ತರವಾಗಿ ಗೋಪುರದ ಆಕಾರದಲ್ಲಿ ನಿರ್ಮಿಸಿದ್ದು, ಸಣ್ಣ ಸಣ್ಣ ದೇವಕೋಷ್ಟ ಆಕಾರದಲ್ಲಿ ನಾಲ್ಕು ಗೂಡುಗಳಿವೆ. ಮೂಲೆಯಲ್ಲಿ ನಂದಿಯನ್ನು ಬಿಡಿಸಲಾಗಿದೆ.

ಅರಕೇರಿಯಲ್ಲಿ ಈರಣ್ಣ ಸಾಹುಕಾರ ಹೊಲದಲ್ಲಿ ಅನೇಕ ವೀರಗಲ್ಲು ಮತ್ತು ಮಹಾಸತಿ ಕಲ್ಲುಗಳಿವೆ. ಇವುಗಳ ಪಕ್ಕದಲ್ಲಿ ಸಣ್ಣ ಸಣ್ಣ ದೇವಾಲಯಗಳನ್ನು ಕಾಣುತ್ತೇವೆ. ಇವು ಬಹುಶಃ ಹಿಂದೂ ವೀರರ (ನಾಯಕರ) ಸಮಾಧಿಗಳಾಗಿರಬೇಕು. ಈಗ ಯಾವ ಮೂರ್ತಿಗಳಿಲ್ಲ. ಈ ದೇವಾಲಯಗಳನ್ನು ಸುಮಾರು ೩-೪ ಅಡಿ ಎತ್ತರದ ಜಗಲಿಯ ಮೇಲೆ ಕಟ್ಟಲಾಗಿದೆ. ಅವುಗಳ ಗೋಪುರವು ಮುಸ್ಲಿಂ ಶೈಲಿಯ ಗೋಲಾಕಾರವಾಗಿವೆ. ಗೋಪುರಗಳಲ್ಲಿ ತೆನೆಗಳನ್ನು ಬಿಡಿಸಲಾಗಿದೆ. ನಾಲ್ಕು ದೇವಾಲಯಗಳು ಗೋಲಾಕಾರದ ಗೋಪುರ ಹೊಂದಿದ್ದರೆ, ಇನ್ನೊಂದು ಮಾತ್ರ ಚೌಕಾಕಾರದ ಗೋಪುರ ಹೊಂದಿದೆ.

ರಾಮದೇವರ ಗುಡಿ

ಚಂದನಕೇರಿಯ ದಿಬ್ಬದ ಮುಂದಿನ ಭಾಗದಲ್ಲಿ ಪೂರ್ವಾಭಿಮುಖವಾಗಿದ್ದು, ಇದು ಕ್ರಿ.ಶ.೧೭ನೇ ಶತಮಾನದಲ್ಲಿ ನಾಯಕರ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ. ಇದರ ಗರ್ಭಗೃಹದಲ್ಲಿ ಈಗ ಯಾವುದೇ ಮೂರ್ತಿ ಇರುವುದಿಲ್ಲ. ಆದರೆ ಇಲ್ಲಿಯ ಜನತೆ ಇದನ್ನು ರಾಮದೇವರ ಗುಡಿಯೆಂದು ಕರೆಯುತ್ತಾರೆ. ಒಳಗಡೆ ಗಾರೆಯಿಂದ ಕಮಾನು ಆಕಾರದಲ್ಲಿ ನಿರ್ಮಿಸಿದ ಇದರ ಭಿತ್ತಿಯು ಸರಳ ರೀತಿಯಲ್ಲಿದ್ದು, ಸಣ್ಣ ಕಲ್ಲು ಗಾರೆಯಿಂದ ನಿರ್ಮಿಸಿದ್ದಾರೆ. ಗಾರೆಯಿಂದ ಮಾಡಿದ ಗುಮ್ಮಟ ಆಕಾರದ ಗೋಪುರವಿದೆ. ಇದು ಸುತ್ತಲೂ ತೆನೆಯನ್ನು ಹೊಂದಿದೆ. ಇದು ಸುಮಾರು ೪-೫ ಅಡಿ ಎತ್ತರದ ಅಧಿಷ್ಠಾನವನ್ನು ಹೊಂದಿದೆ.

ಮಾನಸಕಲ್ಲಿನ ರಂಗನಾಥ ಸ್ವಾಮಿದೇವಾಲಯ

ದೇವದುರ್ಗ ಹಾಗೂ ಅರಕೇರಿಯ ಮಾರ್ಗದ ಮಧ್ಯದಲ್ಲಿರುವ ಮಾನಸಗಲ್ಲಿನ ರಂಗನಾಥ ಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿದ್ದು, ಈ ದೇವಾಲಯವು ತಲವಿನ್ಯಾಸದಲ್ಲಿ ಎರಡು ಗರ್ಭಗೃಹ, ಸುಕನಾಸಿ, ನವರಂಗ ಮಂಟಪಗಳನ್ನು ಹೊಂದಿದ ದ್ವಿಕೂಟ ದೇವಾಲಯವಾಗಿದೆ.

ರಂಗನಾಥಸ್ವಾಮಿ ದೇವಾಲಯದ ಗರ್ಭಗೃಹವು ಚೌಕಾಕಾರದಲ್ಲಿದೆ. ಇದರ ಒಳಗೆ ಪಾಣಿಪೀಠದ ಮೇಲೆ ರಂಗನಾಥಸ್ವಾಮಿಯನ್ನು ಈಶ್ವರ ಲಿಂಗದ ರೂಪದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದರ ಬಾಗಿಲವಾಡವು ಪೂರ್ಣಕುಂಭಗಳನ್ನು ಹೊಂದಿದೆ. ಉಳಿದ ಭಾಗವು ಸರಳವಾಗಿದೆ. ಇದರ ಅಂತರಾಳವು ಸರಳವಾಗಿದ್ದು, ಚೌಕಾಕಾರದಲ್ಲಿದ್ದು, ಬಾಗಿಲಿನಲ್ಲಿ ದ್ವಾರಪಾಲಕರ ಶಿಲ್ಪಗಳನ್ನು ಬಿಡಿಸಲಾಗಿದೆ.

ಇನ್ನೊಂದು ಗರ್ಭಗೃಹ ರಂಗನಾಥಸ್ವಾಮಿಯ ಎಡಭಾಗದಲ್ಲಿದೆ. ಇದು ಲಕ್ಷ್ಮಿಯ ಗರ್ಭಗೃಹವಾಗಿದ್ದು, ಇದರಲ್ಲಿ ಲಕ್ಷ್ಮಿ ಮೂರ್ತಿಯನ್ನು ಇರಿಸಲಾಗಿದೆ. ಇದು ನಾಲ್ಕು ಕೈಗಳನ್ನು ಹೊಂದಿದೆ. ಎರಡು ಕೈಗಳಲ್ಲಿ ಕಮಲದ ಹೂಗಳಿವೆ ಮತ್ತು ಇನ್ನೆರಡು ಕೈಗಳಲ್ಲಿ ಒಂದು ವರದ ಮುದ್ರೆ ಹಾಗೂ ಅಭಯಹಸ್ತದ ಸಂಕೇತವಾಗಿದೆ. ಕೊರಳಹಾರ, ಬಳೆಗಳು ಮುಂತಾದವುಗಳನ್ನು ಬಿಡಿಸಿದೆ.

ನವರಂಗ ಮಂಟಪವು ತೆರೆದ ಮಂಟಪವಾಗಿದ್ದು, ಅದು ವಿಶಾಲವಾಗಿದೆ. ಇದರಲ್ಲಿ ಒಟ್ಟು ಆರು ಕಂಬಗಳಿವೆ. ಇವು ಪೀಠ, ಚೌಕ, ಗೋಲಾಕಾರ ಮತ್ತು ಬೋದಿಗೆಯನ್ನು ಹೊಂದಿವೆ. ಇದರ ಭಿತ್ತಿಯೂ ಸರಳವಾಗಿದೆ. ಇದನ್ನು ಸಣ್ಣ ಕಲ್ಲುಗಳಿಂದ ಕಟ್ಟಲಾಗಿದೆ. ಭಿತ್ತಿಯ ಎಡಭಾಗದಲ್ಲಿ ಗರ್ಭಗೃಹದ ತೀರ್ಥನಾಳವಿದೆ. ಭಿತ್ತಿಯ ಎಡಭಾಗದಲ್ಲಿ ಮೂರು ಶಿಖರಗಳನ್ನು ಮಾಡಲಾಗಿದೆ. ಮುಂದಿನ ಭಾಗದಲ್ಲಿ ಇತರೆ ವಿಗ್ರಹಗಳನ್ನು ನಿರ್ಮಿಸಲಾಗಿದೆ. ಇದರ ಗೋಪುರವು ಗಾರೆಯಿಂದ ಮಾಡಿದ್ದು, ಅಲ್ಲಿ ವಿವಿಧಮೂರ್ತಿಗಳನ್ನು ಮಾಡಲಾಗಿದೆ. ಇದರ ಅಧಿಷ್ಠಾನವು ಸುಮಾರು ೨-೩ ಅಡಿ ಎತ್ತರವಾಗಿದೆ.

ಪ್ರಕಾರದಲ್ಲಿ ಎರಡು ತುಳಸಿ ಕಟ್ಟೆಗಳಿವೆ. ಹಾಗೂ ಪಾದಬಂಧ ಶಿಲ್ಪ ಒಂದು ದೀಪಸ್ತಂಭವಿದೆ. ಎಡಭಾಗದಲ್ಲಿ ಬಲಭಾಗದಲ್ಲಿ ಕಂಬಗಳಿಂದ ಕೂಡಿದ ತೆರೆದ ಮಂಟಪಗಳಿವೆ. ಮುಂದೆ ಒಂದು ಸರಳವಾದ ದೊಡ್ಡದಾದ ದ್ವಾರವಿದೆ. ಇದರ ಮೇಲೆ ಗಾರೆಯಿಂದ ಮಾಡಿದ ಗೋಪುರವಿದೆ. ಹಾಗೂ ಒಂದು ಕಳಶವನ್ನು ಇರಿಸಲಾಗಿದೆ.

ಈ ದೇವಾಲಯದಲ್ಲಿ ಇಂದಿಗೂ ಪೂಜೆಯಿದ್ದು, ಇಲ್ಲಿಗೆ ಅನೇಕ ಸ್ಥಳಗಳಿಂದ ಭಕ್ತರು ಬರುತ್ತಾರೆ. ಇದರ ಪಕ್ಕದಲ್ಲಿ ಪುಷ್ಕರಣಿ ಹಾಗೂ ಎದುರಿನಲ್ಲಿ ಎರಡು ಪುಷ್ಕರಣಿಗಳಿವೆ. ಆಂಜನೇಯ ಮತ್ತು ದಾಸರ ಗುಡಿಯೆಂದು ಕರೆಯುವ ಸಣ್ಣ ಗುಡಿಗಳಿವೆ.

ಜಾಲಹಳ್ಳಿ ರಂಗನಾಥಸ್ವಾಮಿ ದೇವಾಲಯ

ಊರ ಒಳಗೆ ಪೂರ್ವಾಭಿಮುಖವಾಗಿದೆ. ಜಾಲಹಳ್ಳಿ ರಂಗನಾಥಸ್ವಾಮಿ ದೇವಾಲಯ ಏಕಕೂಟ ದೇವಾಲಯವಾಗಿದೆ. ಇದು ಗರ್ಭಗುಡಿ, ಅಂತರಾಳ, ನವರಂಗ ಮಂಟಪವನ್ನು ಒಳಗೊಂಡ ಸರಳವಾದ ದೇವಾಲಯವಾಗಿದೆ. ಪೂರ್ವಕ್ಕೆ ಮುಖ ಮಾಡಿದ ಗರ್ಭಗೃಹವು ಚೌಕಾಕಾರವಾಗಿದ್ದು, ಒಳಗಡೆ ರಂಗನಾಥಸ್ವಾಮಿ ಮೂರ್ತಿಯಿದೆ. ಈ ಮೂರ್ತಿಯ ಬಲಕೈಯಲ್ಲಿ ಚಕ್ರವಿದೆ. ಎಡಕೈಯಲ್ಲಿ ಶಂಖವಿದೆ. ಈ ಮೂರ್ತಿಯ ಪೂಜೆಯ ನೀರು ಹೊರಗೆ ಹೋಗುವುದಕ್ಕಾಗಿ ಮಾಡಿದ ಒಂದು ತೀರ್ಥನಾಳವಿದೆ. ಅಲ್ಲದೆ ಗರ್ಭಗುಡಿಯ ಮೇಲ್ಛಾವಣಿ ಭಾಗದಲ್ಲಿ ಗೋಲಾಕಾರದ ಒಂದು ಸುಂದರ ಕಮಲದ ಶಿಲ್ಪವನ್ನು ಕೆತ್ತಲಾಗಿದೆ ಮತ್ತು ಬಾಗಿಲವಾಡವು ಸರಳವಾಗಿದ್ದು ಎರಡು ಅರ್ಧಕಂಬಗಳಿವೆ.

ರಂಗನಾಥಸ್ವಾಮಿ ದೇವಾಲಯದ ಅಂತರಾಳವು ಸರಳವಾಗಿದ್ದು, ಯಾವುದೇ ರೀತಿಯ ಕಲಾತ್ಮಕ ವಾಗಿಲ್ಲ. ಇದರ ಬಾಗಿಲವಾಡದ ಎರಡು ಭಾಗದಲ್ಲಿ ದ್ವಾರಪಾಲಕರಿದ್ದು, ಈ ದ್ವಾರಪಾಲಕರ ಕೈಯಲ್ಲಿ ಗದೆ ಡಮರುಗಳಿವೆ. ಇವರು ಕಿವಿಯಲ್ಲಿ ಓಲೆ, ತಲೆಯಲ್ಲಿ ಕಿರೀಟ ಮತ್ತು ದೋತಿಯನ್ನು ಧರಿಸಿದ್ದಾರೆ. ಈ ಬಾಗಿಲವಾಡದಲ್ಲಿ ಎರಡು ಅರ್ಧಕಂಬಗಳಿವೆ.

ರಂಗನಾಥಸ್ವಾಮಿ ದೇವಾಲಯದ ನವರಂಗ ಮಂಟಪವು ವಿಶಾಲವಾಗಿದ್ದು, ಈ ನವರಂಗ ಮಂಟಪದಲ್ಲಿ ಆರು ಕಂಬಗಳಿವೆ. ಕಂಬಗಳ ಪೀಠ ಚಚ್ಚೌಕಾಕಾರವಾಗಿದ್ದು, ಮಧ್ಯದಲ್ಲಿ ಗೋಲಾಕಾರ ಹಾಗೂ ಬೋದಿಗೆಗಳನ್ನು ಹೊಂದಿವೆ. ಎಲ್ಲ ಕಂಬಗಳಿಗೆ ಬಣ್ಣವನ್ನು ಹಚ್ಚಿರುವುದರಿಂದ ನೈಜ ಸ್ವರೂಪ ಕಳೆದುಕೊಂಡಿವೆ. ಹಾಗೂ ನವರಂಗ ಮಂಟಪದ ಎಡಭಾಗದಲ್ಲಿ ಲಕ್ಷ್ಮಿ ರಂಗನಾಥರ ಚಿಕ್ಕ ಮೂರ್ತಿಗಳಿವೆ. ನವರಂಗ ಮಂಟಪದ ಮುಂದಿನ ಕೆಳಭಾಗದಲ್ಲಿ ನಾಲ್ಕು ಕಂಬಗಳಿವೆ. ಇವುಗಳ ಮುಂದೆ ದೀಪ ಸ್ತಂಭ ಮತ್ತು ತುಳಸಿ ಕಟ್ಟೆ ಇದೆ. ಹಾಗೂ ತೆರೆದ ವಿಶಾಲ ಜಾಗವಿದೆ. ನಂತರ ದೊಡ್ಡದಾದ ದ್ವಾರಬಾಗಿಲು ಇದ್ದು, ಅಕ್ಕಪಕ್ಕದಲ್ಲಿ ದ್ವಾರಪಾಲಕರಿದ್ದಾರೆ. ದ್ವಾರಬಾಗಿಲ ಪಕ್ಕದಲ್ಲಿ ಎರಡು ಕಡೆ ಕಟ್ಟೆಗಳಿವೆ.

ಜಾಲಹಳ್ಳಿಯ ರಂಗನಾಥಸ್ವಾಮಿ ದೇವಾಲಯದಲ್ಲಿ ಒಟ್ಟು ೧೦ ಕಂಬಗಳಿವೆ. ಇವುಗಳ ಪೀಠ ಚಚ್ಚೌಕವಾಗಿದ್ದು, ಮಧ್ಯಭಾಗದಲ್ಲಿ ವೃತ್ತಾಕಾರದಲ್ಲಿದೆ. ಮೇಲೆ ಬೋದುಗೆಗಳನ್ನು ಹೊಂದಿವೆ. ಇದರ ಭಿತ್ತಿಯು ಸಾದಾ ರೀತಿಯಲ್ಲಿದ್ದು, ಮಧ್ಯದಲ್ಲಿ ಅರ್ಧಕಂಬಗಳಿವೆ. ದೌದವನದ ಹುಣ್ಣಿಮೆಯಂದು ರಂಗನಾಥಸ್ವಾಮಿ ಜಾತ್ರೆ ಜರುಗುತ್ತದೆ. ರಂಗನಾಥಸ್ವಾಮಿಯು ಮುದುಗಲ್ಲಿನಿಂದ ಜಾಲಹಳ್ಳಿಗೆ ಬಂದಿದ್ದಾನೆ ಎಂದು ಐತಿಹ್ಯವಿದೆ.

ಕರಿಲಿಂಗೇಶ್ವರ

ಊರ ಹೊರಗಡೆಯ ಕೆರೆಯ ಪಕ್ಕದಲ್ಲಿ ಪೂರ್ವಾಭಿಮುಖವಾಗಿದೆ.

ಜಾಲಹಳ್ಳಿಯಲ್ಲಿರುವ ಕರಿಲಿಂಗೇಶ್ವರ ದೇವಾಲಯವು ಏಕಕೂಟ ದೇವಾಲಯ. ಇದು ಒಂದು ಗರ್ಭಗುಡಿ ಹಾಗೂ ನವರಂಗ ಮಂಟಪವನ್ನು ಹೊಂದಿದೆ. ಪೂರ್ವಕ್ಕೆ ಮುಖ ಮಾಡಿದ ಗರ್ಭಗೃಹವು ಚೌಕಾಕಾರದಲ್ಲಿದೆ. ಇದರ ಒಳಗೆ ಇತ್ತೀಚೆಗೆ ತಂದು ಸ್ಥಾಪಿಸಲಾದ ಒಂದು ಈಶ್ವರ ಲಿಂಗವಿದೆ. ಇದಕ್ಕೂ ಮೊದಲು ಇದ್ದ ಈಶ್ವರ ಲಿಂಗವನ್ನು ಕಾಶಿಯಿಂದ ತಂದು ಸ್ಥಾಪಿಸಲಾಗಿತ್ತು ಎಂದು ಇಲ್ಲಿಯ ಜನರ ಅಭಿಪ್ರಾಯವಾಗಿದೆ. ಆ ಈಶ್ವರ ಲಿಂಗವು ಭಗ್ನಗೊಂಡದ್ದರಿಂದ ಅದನ್ನು ದೇವಾಲಯದ ಮುಂದಿನ ಹೊರ ಭಾಗದಲ್ಲಿ ಇರಿಸಲಾಗಿದೆ. ಗರ್ಭಗೃಹದ ಮೇಲಿನ ಭಾಗದಲ್ಲಿ ಒಂದು ಭುವನೇಶ್ವರಿ ಶಿಲ್ಪವಿದೆ. ಒಂದು ತೀರ್ಥನಾಳವಿದೆ.

ಗರ್ಭಗೃಹದ ಬಾಗಿಲವಾಡದ ಮೇಲಿನ ಭಾಗದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅಕ್ಕಪಕ್ಕದಲ್ಲಿ ಎರಡು ಶೈವ ದ್ವಾರಪಾಲಕರಿದ್ದಾರೆ. ಇವರು ಕೈಯಲ್ಲಿ ಗದೆ, ಡಮರು, ತ್ರಿಶೂಲ ಹಿಡಿದಿದ್ದಾರೆ. ಪುಷ್ಪಬಳ್ಳಿ ಚಿತ್ರವನ್ನು ಕೆತ್ತಲಾಗಿದೆ.

ಕೆರೆಲಿಂಗೇಶ್ವರ ದೇವಾಲಯದ ಸಭಾಮಂಟಪವು ವಿಶಾಲವಾಗಿದೆ. ಇದರಲ್ಲಿ ಒಟ್ಟು ನಾಲ್ಕು ಕಂಬಗಳಿವೆ. ಈ ಕಂಬಗಳು ಸಾದಾರೀತಿಯಲ್ಲಿದ್ದು, ಮೇಲೆ ಬೋದಿಗೆಗಳನ್ನು ಹೊಂದಿವೆ. ಮೇಲ್ಛಾವಣಿಯಲ್ಲಿ ಭುವನೇಶ್ವರಿಯ ಶಿಲ್ಪವಿದೆ. ನವರಂಗ ಮಂಟಪದಲ್ಲಿ ಒಟ್ಟು ಎರಡು ದೇವಕೋಷ್ಠಗಳಿವೆ. ಬಲಭಾಗದ ದೇವಕೋಷ್ಠದಲ್ಲಿ ಗಣೇಶನ ವಿಗ್ರಹವಿದೆ. ಎಡಭಾಗದ ದೇವಕೋಷ್ಠದಲ್ಲಿ ದೇವಿಯ ಮೂರ್ತಿಯಿದೆ. ಈ ನವರಂಗ ಮಂಟಪಕ್ಕೆ ಎರಡು ಬಾಗಿಲುಗಳಿವೆ. ಒಂದು ಪೂರ್ವದಲ್ಲಿ ಇನ್ನೊಂದು ಉತ್ತರ ಭಾಗದಲ್ಲಿದೆ. ಇದರ ಭಿತ್ತಿಯು ಸರಳವಾದ ಸಣ್ಣ ಸಣ್ಣ ಕಲ್ಲುಗಳಿಂದ ನಿರ್ಮಿತವಾಗಿದೆ. ಭಿತ್ತಿಯು ಯಾವುದೇ ರೀತಿಯ ಉಬ್ಬುಶಿಲ್ಪಗಳನ್ನು ಹೊಂದಿಲ್ಲ. ಕಂಬಗಳು ಚೌಕಾಕಾರದಲ್ಲಿದ್ದು, ಅವು ಸಾದಾ ಬೋದಿಗೆಯನ್ನು ಹೊಂದಿವೆ.

ಈ ದೇವಾಲಯವು ಕೆರೆಯ ಪಕ್ಕದಲ್ಲಿರುವುದರಿಂದ ಇದಕ್ಕೆ ಕೆರೆಯ ಲಿಂಗೇಶ್ವರ ಎಂದು ಹೆಸರು ಬಂದಿದೆ ಎಂದು ಇಲ್ಲಿಯ ಜನರ ವಾಡಿಕೆಯಾಗಿದೆ. ಈ ದೇವಾಲಯಕ್ಕೆ ಗೋಪುರವಿದ್ದು, ಇದು ಸರಳವಾದ ರೀತಿಯಲ್ಲಿದೆ.

ಈಶ್ವರ ದೇವಾಲಯ

ಇದು ಊರ ಒಳಗೆ ಉತ್ತರಾಭಿಮುಖವಾಗಿದೆ. ಜಾಲಹಳ್ಳಿಯ ಈಶ್ವರ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳವನ್ನು ಹೊಂದಿದ ಏಕಕೂಟ ದೇವಾಲಯವಾಗಿದೆ. ಗರ್ಭಗೃಹದಲ್ಲಿ ಈಶ್ವರ ಲಿಂಗವಿದೆ. ಇದರ ಬಾಗಿಲವಾಡದ ಮೇಲೆ ಗಣೇಶನ ಶಿಲ್ಪವನ್ನು ಕೆತ್ತಲಾಗಿದೆ. ಎರಡು ಚಕ್ರಗಳಿವೆ. ಈಶ್ವರ ದೇವಾಲಯದ ಅಂತರಾಳದಲ್ಲಿ ನಂದಿಯ ವಿಗ್ರಹವಿದೆ. ಬಾಗಿಲವಾಡದ ಪಕ್ಕದಲ್ಲಿ ಅರ್ಧಕಂಬಗಳಿವೆ. ಗಿಳಿ ಚಿತ್ರ, ಲತಾಬಳ್ಳಿ, ದ್ವಾರಪಾಲಕರನ್ನು ಕೆತ್ತಲಾಗಿದೆ. ಅಂತರಾಳವನ್ನು ಒಳಗೊಂಡ ಗರ್ಭಗೃಹಕ್ಕೆ ಪ್ರದಕ್ಷಿಣೆ ಪಥವಿದೆ. ಮುಖಮಂಟಪದಲ್ಲಿ ೪ ಪೂರ್ಣ ಕಂಬಗಳಿವೆ. ೨ ಅರ್ಧಕಂಬಗಳಿವೆ. ದ್ವಾರ ಬಾಗಿಲಿನ ಎರಡು ಪಕ್ಕದಲ್ಲಿ ದ್ವಾರಪಾಲಕರನ್ನೊಳಗೊಂಡಿದೆ. ಇವರ ಕೆಳಗೆ ಆನೆಗಳ ಶಿಲ್ಪವಿದೆ. ಇದರ ಎದುರಿನಲ್ಲಿ ದೀಪ ಸ್ತಂಭವಿದ್ದು, ಇದರ ಕೆಳಗೆ ಒಂದು ಗಣೇಶನ ಮೂರ್ತಿ ಇದೆ.

ಜೋಡ ಬಸವೇಶ್ವರ

ಇದು ಜಾಲಹಳ್ಳಿಯ ಊರ ಹೊರಗೆ ಪೂರ್ವಾಭಿಮುಖವಾಗಿದೆ. ಜೋಡ ಬಸವೇಶ್ವರ ದೇವಾಲಯವು ಗರ್ಭಗೃಹ, ಸುಖನಾಸಿ ನವರಂಗ, ಮಂಟಪಗಳನ್ನು ಹೊಂದಿದ ಏಕಕೂಟ ದೇವಾಲಯವಾಗಿದೆ. ಪೂರ್ವಕ್ಕೆ ಮುಖ ಮಾಡಿದ ಗರ್ಭಗೃಹವು ಎರಡು ನಂದಿ ವಿಗ್ರಹಗಳನ್ನು ಹೊಂದಿದೆ. ಮೇಲ್ಛಾವಣಿಯಲ್ಲಿ ಕಮಲದ ಉಬ್ಬುಶಿಲ್ಪವನ್ನು ಹೊಂದಿದೆ. ಗರ್ಭಗೃಹದ ಬಾಗಿಲವಾಡದ ಮೇಲಿನ ಭಾಗದಲ್ಲಿ ಗಣೇಶನ ಶಿಲ್ಪವಿದೆ. ಬಾಗಿಲವಾಡವು ಸರಳವಾಗಿದ್ದು, ಅರ್ಧಕಂಬಗಳನ್ನು ಹೊಂದಿದೆ. ಅಂತರಾಳವು ಚೌಕಾಕಾರದಲ್ಲಿದ್ದು ಅರ್ಧಕಂಬಗಳಿವೆ. ಇಬ್ಬರು ದ್ವಾರಪಾಲಕರಿದ್ದು, ಅವರು ಡಮರು, ತ್ರಿಶೂಲ, ಗದೆಯನ್ನು ಹಿಡಿದ್ದಾರೆ. ದೊಡ್ಡದಾದ ಎರಡು ಅರ್ಧಕಂಬಗಳಲ್ಲಿ ಎರಡು ನಾಗಶಿಲ್ಪಗಳನ್ನು ಕೆತ್ತಲಾಗಿದೆ.

ಜೋಡ ಬಸವೇಶ್ವರದ ದೇವಾಲಯದ ನವರಂಗ ಮಂಟಪವು ವಿಶಾಲವಾಗಿದ್ದು, ಒಟ್ಟು ಆರು ಕಂಬಗಳಿವೆ. ಈ ಕಂಬಗಳ ಪೀಠವು ಚಚ್ಚೌಕವಾಗಿದ್ದು, ಗೋಲಾಕಾರ ಹಾಗೂ ಬೋದಿಗೆಗಳನ್ನು ಹೊಂದಿವೆ. ಭಿತ್ತಿಯಲ್ಲಿ ಆರು ಅರ್ಧಕಂಬಗಳಿವೆ. ಮೇಲ್ಛಾವಣಿಯಲ್ಲಿ ಭುವನೇಶ್ವರಿಯ ಶಿಲ್ಪವಿದೆ. ನವರಂಗ ಮಂಟಪದ ಎಡಭಾಗದಲ್ಲಿ ಚಿಕ್ಕ ಬಾಗಿಲಿದ್ದು, ಅದಕ್ಕೆ ಮೆಟ್ಟಿಲುಗಳಿವೆ.

ಪೂರ್ವಾಭಿಮುಖವಾಗಿರುವ ಜೋಡ ಬಸವೇಶ್ವರ ದೇವಾಲಯದ ಅಧಿಷ್ಠಾನವು ಸುಮಾರು ಮೂರು ಅಡಿ ಎತ್ತರವನ್ನು ಹೊಂದಿದೆ. ಇದರ ಭಿತ್ತಿಯು ಸರಳವಾಗಿದ್ದು, ದೇವಾಲಯದ ಒಳಗಿನ

ಭಾಗದಲ್ಲಿ ಭಿತ್ತಿಯ ಭಾರವನ್ನು ಹೊರಲು ಮಧ್ಯದಲ್ಲಿ ಚಿಕ್ಕ ಉಬ್ಬು ಕಂಬಗಳಿವೆ. ಭಿತ್ತಿಯ ಮೇಲಿನ ಭಾಗದಲ್ಲಿ ನಾಲ್ಕು ಮೂಲೆಯಲ್ಲಿ ೪ ನಂದಿ ವಿಗ್ರಹಗಳಿವೆ. ಭಿತ್ತಿಯ ಮೇಲಿನ ಭಾಗದಲ್ಲಿ ತೆನೆ ಆಕಾರದಲ್ಲಿ ರಚಿತವಾಗಿವೆ. ಒಟ್ಟು ೧೨ ಕಂಬಗಳಿವೆ. ಅವು ಪೀಠ, ಕಂಠ, ಬೋದಿಗೆಗಳನ್ನು ಹೊಂದಿವೆ.

ಇದು ಜಾಲಹಳ್ಳಿಯಲ್ಲಿರುವ ಎಲ್ಲ ದೇವಾಲಯಗಳಿಗಿಂತ ವಿಶೇಷವಾಗಿದೆ. ಗರ್ಭಗೃಹದಲ್ಲಿ ಎರಡು ನಂದಿ ವಿಗ್ರಹಗಳಿವೆ. ಕಂಬದಲ್ಲಿ ನಾಗರಶಿಲ್ಪ, ಬಾಗಿಲವಾಡದಲ್ಲಿ ಗಣೇಶನ ಶಿಲ್ಪ ವಿಶೇಷವಾಗಿದೆ. ದೇವಾಲಯದ ಎದುರಿಗೆ ಒಂದು ದೀಪಸ್ತಂಭವಿದೆ. ಈ ಸ್ತಂಭದಲ್ಲಿ ಗಣೇಶನ ಶಿಲ್ಪವಿದೆ.

ಪ್ಯಾಟೆ ಬಸವಣ್ಣ

ಇದು ಊರ ಮಧ್ಯದಲ್ಲಿ ದಕ್ಷಿಣಾಭಿಮುಖವಾಗಿದೆ. ಇದು ಗರ್ಭಗೃಹ, ಅಂತರಾಳ, ನವರಂಗ ಮಂಟಪವನ್ನು ಹೊಂದಿದ ಏಕಕೂಟ ದೇವಾಲಯ. ಈ ದೇವಾಲಯದ ಗರ್ಭಗೃಹದಲ್ಲಿ ಒಂದು ನಂದಿಯ ವಿಗ್ರಹವಿದೆ. ಬಾಗಿಲವಾಡದಲ್ಲಿ ಅರ್ಧಕಂಬ ಹಾಗೂ ಪೂರ್ಣ ಕುಂಭಗಳನ್ನು ಹೊಂದಿವೆ.

ಇದರ ಅಂತರಾಳವು ಚಿಕ್ಕದಾಗಿದ್ದು, ಬಾಗಿಲವಾಡದ ಮೇಲೆ ಗಣೇಶನ ಶಿಲ್ಪವಿದೆ. ಬಾಗಿಲ ಎರಡು ಭಾಗದಲ್ಲಿ ದ್ವಾರಪಾಲಕರಿದ್ದಾರೆ. ಇವರ ಕೈಯಲ್ಲಿ ಗದೆ, ಡಮರು, ತ್ರಿಶೂಲವಿದೆ. ತೆರೆದ ವಿಶಾಲವಾದ ನವರಂಗ ಮಂಟಪವಿದೆ. ಈ ನವರಂಗ ಮಂಟಪದಲ್ಲಿ ೬ ಕಂಬಗಳಿದ್ದು, ಪೀಠ ಚಚ್ಚೌಕವಾಗಿದ್ದು, ಕಂಠ ಭಾಗದಲ್ಲಿ ಚೌಕ ಹಾಗೂ ಸಾದಾ ಬೋದಿಗೆಗಳನ್ನು ಹೊಂದಿವೆ. ಇದಕ್ಕೆ ಜೋಡ ಬಸವಣ್ಣ ದೇವಾಲಯದಂತೆ ಎಡಭಾಗದಲ್ಲಿ ಚಿಕ್ಕ ಬಾಗಿಲು ಇದ್ದು, ಅದಕ್ಕೆ ಮೆಟ್ಟಿಲುಗಳನ್ನು ಮಾಡಲಾಗಿದೆ.

ಈ ದೇವಾಲಯದ ಅಧಿಷ್ಠಾನವು ಸುಮಾರು ಆರು ಅಡಿ ಎತ್ತರವನ್ನು ಹೊಂದಿದೆ. ಅಧಿಷ್ಠಾನಕ್ಕೆ ಅನೇಕ ಮೆಟ್ಟಿಲುಗಳನ್ನು ಕಟ್ಟಲಾಗಿದೆ. ಇದರ ಭಿತ್ತಿಯು ಸಾದಾ ರೀತಿಯಲ್ಲಿದ್ದು ಅರ್ಧಕಂಬಗಳಿವೆ. ಇದನ್ನು ಸಣ್ಣ ಸಣ್ಣ ಕಲ್ಲುಗಳಿಂದ ಕಟ್ಟಲಾಗಿದೆ. ಈ ದೇವಾಲಯದಲ್ಲಿ ಆರು ಕಂಬ ಹಾಗೂ ಭಿತ್ತಿಯಲ್ಲಿ ಅರ್ಧಕಂಬಗಳಿವೆ. ಅವು ಪೀಠ, ಕಂಠ, ಬೋದಿಗೆಗಳನ್ನು ಹೊಂದಿವೆ. ಈ ದೇವಾಲಯವು ಊರಿನ ಮಧ್ಯದಲ್ಲಿರುವುದರಿಂದ ಹಾಗೂ ಪೇಟೆಯ ಮಧ್ಯದಲ್ಲಿರುವುದರಿಂದ ಇದಕ್ಕೆ ಪ್ಯಾಟೆ ಬಸವಣ್ಣ ಎಂದು ಇಲ್ಲಿನ ಜನರು ಕರೆಯುತ್ತಾರೆ.

ಜಾಲಹಳ್ಳಿ ವೀರಭದ್ರ ದೇವಾಲಯ

ಊರ ಮಧ್ಯದಲ್ಲಿ ಉತ್ತರಾಭಿಮುಖವಾಗಿದೆ. ಇದು ಏಕಕೂಟ ದೇವಾಲಯವಾಗಿದೆ. ಇದು ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳನ್ನು ಒಳಗೊಂಡಿದೆ. ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಹೊಸದಾಗಿ ಮಾಡಿಸಿದ ವೀರಭದ್ರ ಮೂರ್ತಿಯಿದೆ. ಈ ಮೂರ್ತಿ ನಾಲ್ಕು ಕೈಗಳನ್ನು ಹೊಂದಿದ್ದು,

ಆ ಕೈಗಳಲ್ಲಿ ಖಡ್ಗ, ಬಿಲ್ಲು, ಗದೆ ಹಾಗೂ ಒಂದು ಕೈ ಅಭಯಹಸ್ತದ ಸಂಕೇತದಲ್ಲಿದೆ. ಗರ್ಭಗೃಹದ ಬಾಗಿಲವಾಡದ ಮೇಲೆ ಗಣೇಶನ ಶಿಲ್ಪವನ್ನು ಕೆತ್ತಲಾಗಿದೆ.

ಈ ದೇವಾಲಯದ ಅಂತರಾಳವು ಚಿಕ್ಕದಾಗಿದ್ದು, ಇದರಲ್ಲಿ ನಂದಿಯ ವಿಗ್ರಹವಿದೆ. ಒಂದು ನಾಗಮೂರ್ತಿ ಮತ್ತು ಭಗ್ನಗೊಂಡ ವೀರಭದ್ರ ಮೂರ್ತಿ ಇದೆ. ಇದು ಮೊದಲು ಗರ್ಭಗೃಹದಲ್ಲಿದ್ದು, ಭಗ್ನಗೊಂಡ ಮೇಲೆ ಇದನ್ನು ಅಂತರಾಳದಲ್ಲಿ ಇಡಲಾಗಿದೆ. ಹೊಸ ವೀರಭದ್ರ ಮೂರ್ತಿಯನ್ನು ಗರ್ಭಗೃಹದಲ್ಲಿಡಲಾಗಿದೆ. ಇದರ ಬಾಗಿಲವಾಡದಲ್ಲಿ ಗಣೇಶನ ಶಿಲ್ಪವನ್ನು ಕೆತ್ತಲಾಗಿದೆ. ತೆರೆದ ವಿಶಾಲವಾದ ನವರಂಗ ಮಂಟಪವು ಒಟ್ಟು ಆರು ಕಂಬಗಳನ್ನು ಹೊಂದಿದೆ. ಈ ಕಂಬಗಳು ಪೀಠ, ಪಟ್ಟಿಕೆಗಳು, ಗೋಲಾಕಾರ ಹಾಗೂ ಬೋದಿಗೆಗಳನ್ನು ಹೊಂದಿವೆ. ನವರಂಗ ಮಂಟಪದ ಸುತ್ತಲೂ ಕಟ್ಟೆಯನ್ನು ಕಟ್ಟಲಾಗಿದೆ.

ಈ ದೇವಾಲಯಕ್ಕೆ ಗಾರೆಯಿಂದ ಕಟ್ಟಲಾದ ಗೋಪುರವಿದೆ. ಮತ್ತು ದೇವಾಲಯದ ಮುಂದೆ ಒಂದು ದೀಪಸ್ತಂಭವಿದೆ. ಈ ದೇವಾಲಯದಲ್ಲಿ ನಿತ್ಯವೂ ಪೂಜೆ ನಡೆಯುತ್ತದೆ.

ಜಾಲಹಳ್ಳಿಯ ಶೈವ(ಈಶ್ವರ) ದೇವಾಲಯ

ಇದು ಪೊಲೀಸ್ ಠಾಣೆಯ ಪಕ್ಕದಲ್ಲಿ ಉತ್ತರಾಭಿಮುಖವಾಗಿದೆ. ಏಕಕೂಟ ದೇವಾಲಯವಾಗಿದ್ದು, ಯಾವುದೇ ರೀತಿಯ ಅಂತರಾಳ, ನವರಂಗ, ಮುಖಮಂಟಪಗಳನ್ನು ಹೊಂದಿರುವುದಿಲ್ಲ. ಉತ್ತರಾಭಿಮುಖವಾಗಿರುವ ಗರ್ಭಗೃಹದಲ್ಲಿ ಮೊದಲು ಈಶ್ವರ ಲಿಂಗವಿತ್ತೆಂದು ಹೇಳುತ್ತಾರೆ. ಆದರೆ ಈಗ ಯಾವುದೇ ಲಿಂಗವಿರುವುದಿಲ್ಲ. ಗರ್ಭಗೃಹದ ಕಲ್ಲಿನ ಗೋಡೆಯಲ್ಲಿ ಒಂದು ನಾಗಶಿಲ್ಪವನ್ನು ಕೆತ್ತಲಾಗಿದೆ. ಇದರ ಬಾಗಿಲವಾಡವು ವಿಶೇಷವಾಗಿ ಕರಿಯ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಈ ಬಾಗಿಲವಾಡವು ಎರಡು ಪೂರ್ಣ ಕಂಬಗಳನ್ನು ಹೊಂದಿದ್ದು, ಮೇಲೆ ಗಣೇಶ ಶಿಲ್ಪ, ಲತಾಬಳ್ಳಿ, ಕೆಳಗಿನ ಭಾಗದಲ್ಲಿ ಎರಡು ಸುಂದರವಾಗಿ ಕೆತ್ತಿದ ಆನೆಗಳಿವೆ ಮತ್ತು ಕಮಲದ ಆಕಾರದಲ್ಲಿರುವ ಒಂದು ಚಿತ್ರವಿದೆ.

ಈ ದೇವಾಲಯದ ಭಿತ್ತಿಯು ಗಟ್ಟಿಯಾದ ಚಪ್ಪಡಿ ಕಲ್ಲುಗಳಿಂದ ಕಟ್ಟಿದ್ದು, ಈ ಗಟ್ಟಿಯ ಕಲ್ಲಿನಲ್ಲಿ ಕೆತ್ತಿದ್ದ ಅರ್ಧಕಂಬಗಳನ್ನು, ಸುಂದರವಾದ ಬೋದಿಗೆಗಳನ್ನು ಹೊಂದಿವೆ. ಮೇಲಿನ ಭಾಗದಲ್ಲಿ ತೆನೆಗಳನ್ನು ಕೆತ್ತಲಾಗಿದೆ. ಬಾಗಿಲಿನ ಅಕ್ಕಪಕ್ಕದಲ್ಲಿ ಎರಡು ಚಿಕ್ಕ ದೀಪದ ಗೂಡುಗಳಿವೆ. ನಾಲ್ಕು ಅಡಿ ಎತ್ತರದ ಅಧಿಷ್ಠಾನವನ್ನು ಹೊಂದಿದೆ. ಅಧಿಷ್ಠಾನವು ಅನೇಕ ಸೋಪಾನಗಳನ್ನು ಹೊಂದಿದ್ದು, ಗಟ್ಟಿಕಲ್ಲುಗಳಿಂದ ಕಟ್ಟಲಾಗಿದೆ.

ಈ ದೇವಾಲಯವನ್ನು ಮೂರು ವಿಧದ ವಸ್ತುಗಳನ್ನು ಬಳಸಿ ಕಟ್ಟಲಾಗಿದೆ. ಮೊದಲನೆಯದು ಗ್ರಾನೈಟ್ ಬಿಳಿಯ ಕಲ್ಲು, ಕಪ್ಪು ಕಲ್ಲು, ಗಾರೆಯನ್ನು ಉಪಯೋಗಿಸಿ ಕಟ್ಟಲಾಗಿದೆ. ಅಧಿಷ್ಠಾನ

ದೇವಾಲಯದ ಭಿತ್ತಿ ಬಿಳಿಕಲ್ಲು ಬಾಗಿಲುವಾಡ ಕಪ್ಪುಕಲ್ಲು ಹಾಗೂ ಗೋಪುರವನ್ನು ಸಂಪೂರ್ಣವಾಗಿ ಗಾರೆಯಿಂದ ಕಟ್ಟಲಾಗಿದೆ. ಗೋಪುರದಲ್ಲಿ ಹನ್ನೆರಡು ಚಿಕ್ಕಪೂರ್ಣ ಕುಂಭಗಳಿದ್ದರೆ, ಒಂದು ದೊಡ್ಡದಾದ ಪೂರ್ಣಕುಂಭದ ಆಕಾರದಲ್ಲಿ ಗೋಪುರವನ್ನು ಕಟ್ಟಲಾಗಿದೆ. ಆದರೆ ಈ ದೇವಾಲಯಕ್ಕೆ ಯಾವುದೇ ರೀತಿಯ ಪೂಜೆ ಪುನಸ್ಕಾರ ಇರುವುದಿಲ್ಲ.

ಗಬ್ಬೂರಿನ ನಾಗರಬೆಟ್ಟದಲ್ಲಿ ೧೮-೧೯ನೇ ಶತಮಾನಕ್ಕೆ ಸೇರಿದ ಎರಡು ಗುಡಿಗಳಿವೆ. ಒಂದು ದೇವಾಲಯವನ್ನು ಬೃಹತ್ ಗುಹೆಯಲ್ಲಿ ನಿರ್ಮಿಸಲಾಗಿದೆ. ಇದರ ಬಾಗಿಲವಾಡ ಹಾಗೂ ಭಿತ್ತಿಯನು ಉದ್ದನೆಯ ಬಂಡೆಗಲ್ಲುಗಳಿಂದ ನಿರ್ಮಿಸಲಾಗಿದೆ. ಇದರ ಒಳಗೆ ಯಾವುದೇ ಮೂರ್ತಿ ಇರುವುದಿಲ್ಲ. ಈ ಮೊದಲು ಈಶ್ವರ ಮೂರ್ತಿಯಿತ್ತೆಂದು ಜನರು ಹೇಳುತ್ತಾರೆ.

ಇದೇ ರೀತಿಯಾದ ಒಂದು ಸಣ್ಣ ದೇವಾಲಯವನ್ನು ಇದೇ ಬೆಟ್ಟದಲ್ಲಿ ಕಾಣಬಹುದು. ಇದು ೧೮-೧೯ನೇ ಶತಮಾನಕ್ಕೆ ಸೇರಿದ ದೇವಾಲಯವಾಗಿದೆ. ಒಳಗಡೆ ಒಂದು ವೀರಗಲ್ಲನ್ನು ನಿಲ್ಲಿಸಲಾಗಿದೆ. ವೀರನು ಕುದುರೆ ಮೇಲೆ ಕುಳಿತು, ಎಡಗೈಯಲ್ಲಿ ಕುದುರೆಯ ಲಗಾಮು, ಬಲಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಸರಗಳನ್ನು ಧರಿಸಿದ್ದು, ತನ್ನ ಕೂದಲುಗಳನಲು ಬಲಗಡೆಯಲ್ಲಿ ಗಂಟುಹಾಕಿ ಕಟ್ಟಿದ್ದಾನೆ. ಕೆಳಗೆ ಕಾಡುಹಂದಿಯ ಜೊತೆ ಹೋರಾಡುವ ದೃಶ್ಯವನ್ನು ಬಿಡಿಸಲಾಗಿದೆ. ಇದರ ಬಾಗಿಲವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪ, ಅರ್ಧಕಂಬಗಳು, ಪೂರ್ಣಕುಂಭಗಳನ್ನು ಬಿಡಿಸಿದೆ.

ಮಸರಕಲ್ಲು ಉಳವೇಶ್ವರ ದೇವಾಲಯ

ಇದು ತಳವಿನ್ಯಾಸದಲ್ಲಿ ಗರ್ಭಗೃಹ, ಮುಖಮಂಟಪವನ್ನು ಹೊಂದಿದ ಏಕಕೂಟ ದೇವಾಲಯವಾಗಿದೆ. ಈ ದೇವಾಲಯದ ಗರ್ಭಗೃಹವು ಚೌಕಾಕಾರದಲ್ಲಿದೆ. ಗರ್ಭಗೃಹದ ಒಳಭಾಗದಲ್ಲಿ ಒಂದು ಲಿಂಗವಿದೆ. ಇದರ ಹಿಂದಿನ ಭಾಗದಲ್ಲಿ ಒಂದು ಕಾಳಿಕಾ ಮೂರ್ತಿ ಇದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಕಮಲವಿದೆ. ಹಾಗೂ ಗರ್ಭಗೃಹದ ಬಾಗಿಲವಾಡದಲ್ಲಿ ಗಣೇಶ ಶಿಲ್ಪವಿದೆ ಮತ್ತು ಬಳ್ಳಿಯ ಅಲಂಕಾರವಿದೆ. ಈ ದೇವಾಲಯದ ಮುಖಮಂಟಪವು ತೆರೆದ ಮುಖಮಂಟಪವಾಗಿದೆ. ಈ ಮುಖಮಂಟಪದಲ್ಲಿ ಒಂದು ನಂದಿಯ ವಿಗ್ರಹವಿದೆ. ಈ ದೇವಾಲಯದ ಭಿತ್ತಿಯು ಸರಳವಾಗಿದ್ದು ಯಾವುದೇ ಅಲಂಕಾರವಿಲ್ಲ. ಇದನ್ನು ಸಣ್ಣ ಸಣ್ಣ ಕಲ್ಲು ಹಾಗೂ ಗಾರೆಗಳಿಂದ ಕಟ್ಟಲಾಗಿದೆ. ಇದರ ಅಧಿಷ್ಠಾನವು ಸುಮಾರು ೯ ಅಡಿ ಎತ್ತರದಲ್ಲಿದೆ. ಈ ದೇವಾಲಯದ ಗೋಪುರವನ್ನು ಗಾರೆಯಿಂದ ನಿರ್ಮಿಸಿದ ಒಂದು ಕಳಶವನ್ನು ಇರಿಸಲಾಗಿದೆ.

ಮಾಸರಕಲ್ಲು ವೀರಭದ್ರ ದೇವಾಲಯ

ಇದು ಒಂದು ಚಿಕ್ಕ ಗರ್ಭಗೃಹವನ್ನು ಮಾತ್ರ ಹೊಂದಿದ ದೇವಾಲಯವಾಗಿದೆ. ಈ ಗರ್ಭಗೃಹವು ಚೌಕಾಕಾರದಲ್ಲಿದ್ದು, ಒಳಗಡೆ ಪಾಣಿಪೀಠದ ಮೇಲೆ ವೀರಭದ್ರ ಶಿಲ್ಪವಿದೆ. ಇದು ನಾಲ್ಕು ಕೈಗಳನ್ನು

ಹೊಂದಿದ್ದು, ಗದೆ, ಖಡ್ಗ, ಶಂಖ, ವರದ ಮುದ್ರೆಯ ಸಂಕೇತದಲ್ಲಿದೆ. ತಲೆಯಲ್ಲಿ ಕಿರೀಟವಿದೆ. ಸೊಂಟದಲ್ಲಿ ಪಟ್ಟಿ ಇದ್ದು, ಕೊರಳಹಾರವನ್ನು ಧರಿಸಿದೆ. ಇದರ ಎಡ ಬಲಭಾಗದಲ್ಲಿ ಎರಡು ಸರಳ ದೇವಕೋಷ್ಠಗಳಿವೆ. ಆದರೆ ಇದರಲ್ಲಿ ಯಾವುದೇ ಮೂರ್ತಿಗಳಿಲ್ಲ. ಇದರ ಬಾಗಿಲವಾಡದಲ್ಲಿ ಗಜಲಕ್ಷ್ಮಿ ಶಿಲ್ಪ ಹಾಗೂ ಆನೆ ಸಾಲುಗಳ ಶಿಲ್ಪಗಳನ್ನು ಕಾಣಬಹುದು. ಮತ್ತು ಇದರ ಬಾಗಿಲವಾಡವು ಅರ್ಧಕಂಬ, ಪೂರ್ಣಕುಂಭ, ಪುಷ್ಪಬಳ್ಳಿ ಹಾಗೂ ಎಡಭಾಗದಲ್ಲಿ ನಾಗಮೂರ್ತಿಗಳನ್ನು ಕಾಣಬಹುದು. ಇದರ ಗೋಪುರವನ್ನು ಸಹ ಉಳವೇಶ್ವರ ದೇವಾಲಯದಂತೆ ಗಾರೆಯಿಂದ ನಿರ್ಮಿಸಲಾಗಿದೆ.

ಮಲ್ಲಯ್ಯ ದೇವರು ಗುಡಿ

ಮೊಸರಕಲ್ಲು ಬೆಟ್ಟದಲ್ಲಿ ಪೂರ್ವಾಭಿಮುಖವಾಗಿದೆ. ಇದು ಗುಡ್ಡದ ಗವಿಯಲ್ಲಿ ಚಿಕ್ಕ ಗರ್ಭಗೃಹವಿದ್ದು. ಇದಕ್ಕೆ ಸಣ್ಣ ಬಾಗಿಲನ್ನು ಮಾಡಲಾಗಿದೆ. ಒಳಗಡೆ ಮಲ್ಲಯ್ಯ ದೇವರ ಮೂರ್ತಿಯಿದೆ. ಇದರ ಗೋಪುರವನ್ನು ದೊಡ್ಡ ಬಂಡೆಗಲ್ಲಿನ ಮೇಲೆ ಗಾರೆಯಿಂದ ನಿರ್ಮಿಸಲಾಗಿದೆ. ಇದರ ಮುಂದೆ 'ಒಂದು ಗವಿಯನ್ನು ಕಾಣಬಹುದು. ಇದರ ಮುಂದೆ ತೆರೆದ ವಿಶಾಲ ಮಂಟಪವಿದ್ದು, ಅದರಲ್ಲಿ ಚೌಕಾಕಾರದ ಕಂಬಗಳಿವೆ.

ಗವಿ ಸಿದ್ದೇಶ್ವರ

ಇದು ಸಹ ಮೇಲಿನ ದೇವಾಲಯದಂತೆ ಗವಿಯಲ್ಲಿದೆ. ಇದು ಸಣ್ಣ ದ್ವಾರವನ್ನು ಹೊಂದಿದ್ದು, ಇದರ ಒಳಗೆ ಹಾಸು ಬಂಡೆಯಿದೆ. ಇದನ್ನೇ ಇಲ್ಲಿಯ ಜನರು ಮಲ್ಲಯ್ಯ ದೇವರೆಂದು ಪೂಜಿಸುತ್ತಾರೆ. ಇದರ ಎದುರಿನಲ್ಲಿ ಇನ್ನೊಂದು ಚಿಕ್ಕ ಗವಿಯಿದೆ. ಈ ಗವಿಯಲ್ಲಿ ಒಂದು ನಂದಿ ವಿಗ್ರಹವಿದೆ.

ಕ್ಯಾದ್ಗಿಗೇರಾ ಈಶ್ವರಗುಡಿ(ಕಲ್ಲುಗುಡಿ)

ಇದು ಬೆಟ್ಟದ ಮೇಲೆ ಪೂರ್ವಾಭಿಮುಖವಾಗಿದೆ. ತಲವಿನ್ಯಾಸದಲ್ಲಿ ಇದು ಗರ್ಭಗೃಹ, ಮುಖಮಂಟಪವನ್ನು ಹೊಂದಿದ ದೇವಾಲಯವಾಗಿದೆ.

ಚಿಕ್ಕದಾದ ಗರ್ಭಗೃಹವಿದ್ದು ಈಗ ಯಾವ ಮೂರ್ತಿಯೂ ಇರುವುದಿಲ್ಲ. ಪೂಜಾವಸ್ತುಗಳನ್ನು ಇಡಲು ಒಂದು ಹಾಸುಬಂಡೆಯನ್ನು ಇರಿಸಲಾಗಿದೆ. ಇದರ ದ್ವಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರಲ್ಲಿ ಅರ್ಧಕಂಬ, ಪೂರ್ಣಕುಂಭಗಳು ಹಾಗೂ ಗೋಪುರಗಳನ್ನು ಕಾಣಬಹುದು.

ಮುಖಮಂಟಪವು ಸರಳವಾಗಿದ್ದು, ಇದರ ಮೇಲೆ ಒಂದು ಮೇಲ್ಹಾವಣಿಯಿದೆ. ಇದರಲ್ಲಿ ಸರಳವಾದ ಚೌಕಾಕಾರದ ಕಂಬಗಳಿದ್ದು ಅವುಗಳಲ್ಲಿ ಚಂದ್ರಶಿಲೆಯ ಶಿಲ್ಪವನ್ನು ಹೊಂದಿವೆ.

೨. ಬಸವಣ್ಣ ಗುಡಿ

ಇದು ಕ್ಯಾದ್ಗಿಗೇರಿಯ ಸಮುದಾಯ ಭವನದ ಹಿಂದೆ ಪೂರ್ವಾಭಿಮುಖವಾಗಿದೆ. ಇದರ ಗರ್ಭಗೃಹವು ಚಿಕ್ಕದಾಗಿದ್ದು, ಇದರ ಒಳಗೆ ಭಗ್ನಗೊಂಡ ಒಂದು ನಂದಿಯ ವಿಗ್ರಹವಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ಅರ್ಧಕಂಬಗಳು ಹಾಗೂ ದ್ವಾರಪಾಲಕರನ್ನು ಬಿಡಿಸಲಾಗಿದೆ. ದ್ವಾರಪಾಲಕರ ಕೈಯಲ್ಲಿ ಗದೆ, ಡಮರು, ತ್ರಿಶೂಲ ಹಾಗೂ ಅಭಯ ಹಸ್ತದ ಸಂಕೇತವಾಗಿದೆ. ಇದರ ಭಿತ್ತಿಯು ಬೆಟ್ಟದಲ್ಲಿರುವ ಗುಡಿಯಂತೆ ಇದರ ಭಿತ್ತಿಯು ಸರಳವಾಗಿದೆ. ಇದರ ಗೋಪುರವನ್ನು ಗಾರೆಯಿಂದ ಕಟ್ಟಲಾಗಿದೆ. ಈ ದೇವಾಲಯವು ೩-೪ ಅಡಿ ಎತ್ತರ ಅಧಿಷ್ಠಾನವನ್ನು ಹೊಂದಿದ್ದು, ಈ ದೇವಾಲಯದ ಮುಂದೆ ಪಾಣಿವಾಟದ ಮೇಲೆ ಭಗ್ನಗೊಂಡ ಈಶ್ವರ ಹಾಗೂ ಒಂದು ನಾಗಮೂರ್ತಿಯನ್ನು ಇರಿಸಲಾಗಿದೆ.

ಕ್ಯಾದ್ಗಿಗೇರಿಯ ವೀರಭದ್ರ ದೇವಾಲಯ

ಬೆಟ್ಟದ ಕೆಳಗೆ ಚಿಕ್ಕ ಗವಿಯಲ್ಲಿ ಉತ್ತರಾಭಿಮುಖವಾಗಿದೆ. ಇದು ೧೭-೧೮ನೇ ಶತಮಾನದ ದೇವಾಲಯ. ಗವಿಯ ಒಳಗೆ ಒಂದು ವೀರಭದ್ರ ಮೂರ್ತಿಯಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಖಡ್ಗ, ಗದೆ, ಬಿಲ್ಲು ಹಾಗೂ ಒಂದು ಕೈ ಅಭಯಹಸ್ತದ ಸಂಕೇತವಾಗಿದೆ. ಈ ಶಿಲ್ಪದಲ್ಲಿ ಕೊರಳಹಾರ ಇತರ ಆಭರಣಗಳನ್ನು ಬಿಡಿಸಿದೆ. ದೊಡ್ಡ ಗುಹೆಯನ್ನು ಹಾಗೂ ಗೋಡೆಗಳನ್ನು ನಿರ್ಮಿಸಿ ಇದನ್ನು ದೇವಾಲಯವಾಗಿ ಪರಿವರ್ತಿಸಲಾಗಿದೆ. ಮುಂದೆ ಸಣ್ಣ ಸಣ್ಣ ಕಲ್ಲುಗಳಿಂದ ಗೋಡೆಯನ್ನು ಕಟ್ಟಲಾಗಿದೆ.

ಮೊದಲ ವೀರಭದ್ರ ದೇವರಿಗೆ ಪೂಜೆ ಪುನಸ್ಕಾರ ಇದ್ದರೂ ಈಗ ಕೆಲವೇ ಮದುವೆ ಸಂದರ್ಭಗಳಲ್ಲಿ ಮಾತ್ರ ದೇವರ ಪೂಜೆ ನಡೆಯುತ್ತದೆ. ಕ್ಯಾದ್ಗಿಗೇರಿಯ ನಾಯಕ ದೊರೆಗಳು ಈ ವೀರಭದ್ರ ದೇವರ ಉಪಾಸಕರಾಗಿದ್ದುದು ತಿಳಿದುಬರುತ್ತದೆ.

ಹುನಗುಂದ ಬಾಡಾದ ಹನುಮಾನ ದೇವಾಲಯ

ಈ ದೇವಾಲಯವು ಗರ್ಭಗೃಹ ಹಾಗೂ ಮುಖ ಮಂಟಪ ಹೊಂದಿದ್ದು ದಕ್ಷಿಣಾಭಿಮುಖವಾಗಿದೆ. ಇದರ ಗರ್ಭಗೃಹವು ಚೌಕಾಕಾರದಲ್ಲಿದ್ದು ಒಳಗಡೆ ಒಂದು ವಿಗ್ರಹವಿದೆ. ಈ ದೇವಾಲಯದ ಮುಖ ಮಂಟಪವು ತೆರೆದ ವಿಶಾಲವಾದ ಮಂಟಪವಾಗಿದೆ. ಈ ಮಂಟಪದಲ್ಲಿ ನಾಲ್ಕು ಚೌಕಾಕಾರ ಕಂಬಗಳಿದ್ದು. ಅವು ಪೀಠ, ಚೌಕು, ಸಾದಾ ಬೋದಿಗೆಯನ್ನು ಹೊಂದಿವೆ. ಇದರ ಭಿತ್ತಿಯನ್ನು ಸಣ್ಣ ಸಣ್ಣ ಕಲ್ಲುಗಳಿಂದ ಕಟ್ಟಲಾಗಿದೆ. ಈ ದೇವಾಲಯದ ಅಧಿಷ್ಠಾನವು ಸುಮಾರು ೩-೪ ಅಡಿ ಎತ್ತರವನ್ನು ಹೊಂದಿದೆ. ಈ ದೇವಾಲಯದ ಗೋಪುರವನ್ನು ಗಾರೆಯಿಂದ ನಿರ್ಮಿಸಿದ್ದು, ಇದರ ಮೇಲೆ ಕಳಶವನ್ನು ಇರಿಸಲಾಗಿದೆ.

ಹಿರೇಬೂದೂರ ಆಂಜನೇಯ ದೇವಾಲಯ

ಇದು ಏಕಕೋಟ ದೇವಾಲಯವಾಗಿದೆ. ಇದರ ಗರ್ಭಗೃಹವು ಚೌಕಾಕಾರದಲ್ಲಿದೆ. ಇದರ ಒಳಗಡೆ ಆಂಜನೇಯ ಮೂರ್ತಿಯನ್ನು ಕಾಣಬಹುದು. ಈ ಗರ್ಭಗೃಹಕ್ಕೆ ಪ್ರದಕ್ಷಿಣಾ ಪಥವಿದೆ. ಇದರ

ಮುಂದೆ ವಿಶಾಲ ಮಂಟಪವಿದ್ದು, ಮೆಟ್ಟಿಲುಗಳನ್ನು ಹೊಂದಿದೆ. ಈ ದೇವಾಲಯದ ಭಿತ್ತಿಯು ಹುನುಗುಂದಬಾಡಾದ ಆಂಜನೇಯ ದೇವಾಲಯದಂತೆ ಸಣ್ಣಕಲ್ಲು ಹಾಗೂ ಗಾರೆಯಿಂದ ಕಟ್ಟಲಾಗಿದೆ. ಈ ದೇವಾಲಯದ ಪ್ರಾಕಾರದ ಗೋಡೆಯನ್ನು ಹೊಂದಿದ್ದು, ಇದರಲ್ಲಿ ಒಂದು ದೀಪಸ್ತಂಭವಿದೆ. ಇದರ ಗರ್ಭಗೃಹದ ಮೇಲೆ ಗಾರೆಯಿಂದ ನಿರ್ಮಿಸಿದ ಗೋಪುರವಿದೆ.

ಕೊಪ್ಪರ ನರಸಿಂಹ ದೇವಾಲಯ(೧೮೯೬-೧೯೭೯)

ಕೃಷ್ಣಾನದಿಯ ತೀರದಲ್ಲಿ ಪೂರ್ವಾಭಿಮುಖವಾಗಿದೆ. ಕೊಪ್ಪರದ ಲಕ್ಷ್ಮೀನರಸಿಂಹ ದೇವಸ್ಥಾನ ಅತ್ಯಂತ ಪುರಾತನವಲ್ಲವಾದರೂ, ಇಲ್ಲಿರುವ ಕಂಬಗಳು ಮಾತ್ರ ಕಲ್ಯಾಣಿ ಚಾಲುಕ್ಯ ಕಾಲದವಾಗಿವೆ. ಉಳಿದ ಭಾಗವೆಲ್ಲ ವಿಜಯನಗರ ನಂತರದವಾಗಿವೆ. ಅಂದರೆ ೧೭-೧೮ನೇ ಶತಮಾನದ್ದಾಗಿದೆ. ಚಿಕ್ಕದಾದ ಗರ್ಭಗೃಹದಲ್ಲಿ ಅಶ್ವತ್ಥ ವೃಕ್ಷದಲ್ಲಿ ಮೂಡಿದ ನರಸಿಂಹ ಮೂರ್ತಿಯಿದೆ. ಇದರ ಪಕ್ಕದಲ್ಲಿ ವೆಂಕಟೇಶ್ವರ ಮೂರ್ತಿಯಿದೆ. ಇದು ನಾಲ್ಕು ಕೈಗಳನ್ನು ಹೊಂದಿದೆ. ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ಚಕ್ರಗಳಿವೆ. ಅಕ್ಕಪಕ್ಕದಲ್ಲಿ ಪದ್ಮಾವತಿ ಲಕ್ಷ್ಮಿಯ ಶಿಲ್ಪಗಳಿವೆ. ಇದರ ಬಾಗಿಲವಾಡದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಈ ದೇವಾಲಯದ ಭಿತ್ತಿ ಸರಳವಾಗಿದ್ದು, ಕಪಿಗಳ ಶಿಲ್ಪ, ನಾಗ ಮೂರ್ತಿಗಳು, ಗಣೇಶನ ಶಿಲ್ಪಗಳಿವೆ. ಇದರ ಅಧಿಷ್ಠಾನವು ಸುಮಾರು ೨-೩ ಎತ್ತರದಲ್ಲಿದೆ. ಕೆಳಗಡೆ ಕಲ್ಯಾಣಿ ಚಾಲುಕ್ಯರ ಕಂಬಗಳಿಂದ ಕೂಡಿದ ಮಂಟಪವಿದೆ. ಈ ದೇವಾಲಯದ ಎದುರಿನಲ್ಲಿ ಚಿಕ್ಕ ಗುಡಿ ಇದೆ. ಇದರಲ್ಲಿ ಪುರಂದರದಾಸರ ಮೂರ್ತಿಯಿದೆ.

ಒಂದು ಬಾರಿ ಬಿಜಾಪುರದ ಆದಿಲ್‌ಶಾಹಿಯ ಸುಲ್ತಾನ ಸೈನ್ಯವು ತೊಂದರೆಗೆ ಸಿಲುಕಿದಾಗ ಆತಶ್ರೀ ನರಸಿಂಹ ಮೊರೆಹೊಕ್ಕಾಗ ನರಸಿಂಹನ ಕೃಪೆಯಿಂದ ಪರಿಹಾರ ಪಡೆದನೆಂದು ಮತ್ತು ಆತನಿಗೆ ಸಂತಾನ ಪ್ರಾಪ್ತಿಯೂ ಆಗಿ, ಆ ಸಂತೋಷದಲ್ಲಿ ದೇಗುಲದ ಕಟ್ಟದ ನಿರ್ಮಾಣ ಮಾಡಿದನೆಂದು ಇಲ್ಲಿಯ ಅರ್ಚಕರು ಹೇಳುತ್ತಾರೆ.

ಇನ್ನೊಂದು ಐತಿಹ್ಯದ ಪ್ರಕಾರ ಅರ್ಚಕರಿಗೆ ಒಮ್ಮೆ ಕನಸಿನಲ್ಲಿ ಕೃಷ್ಣಾ ನದಿಯಲ್ಲಿ ವೆಂಕಟೇಶ್ವರ ಮೂರ್ತಿಯಿದೆ ಅದನ್ನು ತಂದು ಈ ದೇವಾಲಯದಲ್ಲಿ ಸ್ಥಾಪಿಸಬೇಕೆಂದು ಹೇಳಿದಾಗ, ಆಗ ನದಿಯಲ್ಲಿದ್ದ ವೆಂಕಟೇಶ್ವರ ಮೂರ್ತಿಯನ್ನು ತಂದು ಸ್ಥಾಪಿಸಲಾಗಿದೆ ಎಂದು ಹೇಳುತ್ತಾರೆ.

ಮುಂಡರಗಿ ಶಿವರಾಯ ದೇವಾಲಯ

ಇದು ಊರಿನ ಬೆಟ್ಟದ ಪೂರ್ವಾಭಿಮುಖವಾಗಿದೆ. ಮುಂಡರಗಿ ಶಿವರಾಯ ದೇವಾಲಯವು ದೇವದುರ್ಗ ತಾಲ್ಲೂಕಿನ ಮುಂಡರಗಿ ಗ್ರಾಮದ ಎತ್ತರದ ಬೆಟ್ಟದಲ್ಲಿ ಕಟ್ಟಲಾಗಿದೆ. ಈ ಬೆಟ್ಟಕ್ಕೆ ಅನೇಕ ಮೆಟ್ಟಿಲುಗಳನ್ನು ಬಂಡೆಯಲ್ಲಿ ಕಡಿದು ಕಟ್ಟಲಾಗಿದೆ. ಇದು ಏಕಕೂಟ ದೇವಾಲಯವಾಗಿದೆ.

ಶಿವರಾಮ ಗರ್ಭಗೃಹದಲ್ಲಿ ಸಣ್ಣದಾದ ಒಂದು ಈಶ್ವರ ಲಿಂಗವಿದೆ. ಇದರ ಪಕ್ಕದಲ್ಲಿ ಒಂದು ಬಸವನ ಶಿಲ್ಪವಿದೆ. ಹೊರಗಡೆ ಎದುರಿನಲ್ಲಿ ಒಂದು ಚಿಕ್ಕ ಬಸವನ ಮೂರ್ತಿ ಇದೆ. ಗರ್ಭಗೃಹದ ಎದುರಿನಲ್ಲಿ ಅಂದರೆ ಹೊರಗಡೆ ಒಂದು ದೀಪಸ್ತಂಭವಿದೆ.

ಈ ದೇವಾಲಯದ ಎಡಭಾಗದಲ್ಲಿ ಎತ್ತರದ ಒಂದು ಬಂಡೆಗಲ್ಲಿನಲ್ಲಿ ಶಾಸನವಿದೆ ಹಾಗೂ ಅದರ ಮೇಲೆ ಚಿಕ್ಕಗುಡಿಯನ್ನು ಕಟ್ಟಲಾಗಿದ್ದು, ಅದಕ್ಕೆ ಒಂದು ಸಣ್ಣ ಕಳಶವಿದೆ.

ಶಿವರಾಯ ದೇವಾಲಯದ ಸುತ್ತಲೂ ವಿಶಾಲವಾದ ಸ್ಥಳವಿದೆ. ಸುತ್ತಲೂ ೩ ಅಡಿ ಎತ್ತರದ ಈ ಮಂಟಪವು ಅನೇಕ ಚೌಕಾಕಾರದ ಕಂಬಗಳನ್ನು ಹೊಂದಿವೆ. ದ್ವಾರಬಾಗಿಲು ಸರಳವಾದ ರೀತಿಯಲ್ಲಿದೆ.

ಗೂಗಲ್ಲು ಅಲ್ಲಮ ಪ್ರಭುಸ್ವಾಮಿ ದೇವಾಲಯ

ಇದು ಕೃಷ್ಣಾ ನದಿಯ ದಂಡೆಯ ಮೇಲಿದೆ. ಇದರ ರಚನೆಯ ಆಧಾರ ಮೇಲೆ ಈ ದೇವಾಲಯವನ್ನು ಸು. ಕ್ರಿ.ಶ.೧೭-೧೮ನೇ ಶತಮಾನ ನಿರ್ಮಿಸಿಲಾಗಿದೆ ಎಂದು ಹೇಳಬಹುದು. ಈ ದೇವಾಲಯವನ್ನು ಸುರಪುರದ ನಾಯಕರು ಕಟ್ಟಿಸಿದರೆಂದು ಇಲ್ಲಿಯ ಜನರ ಹೇಳಿಕೆಯಾಗಿದೆ. ಹನ್ನೆರಡನೆಯ ಶತಮಾನದ ಜ್ಞಾನಸಂಪನ್ನರು, ತಪೋನಿಧಿಯಾದ ಅಲ್ಲಮಪ್ರಭುಗಳು ಕಲ್ಯಾಣವನ್ನು ಬಿಟ್ಟು ಸಂಚಾರ ಕೈಗೊಂಡಾಗ ಗೂಗಲ್ಲ ಗ್ರಾಮದ ಕೃಷ್ಣಾ ನದಿಯ ಬಂಡೆಯ ಗವಿಯಲ್ಲಿ ವಾಸವಾದ ನೆನಪಿನ ಕುರುಹಾಗಿ ಈ ದೇವಾಲಯ ನಿರ್ಮಿಸಲಾಗಿದೆ.

ಈ ದೇವಾಲಯದ ಗವಿಯಲ್ಲಿ ಸಣ್ಣ ಈಶ್ವರ ಲಿಂಗವಿದೆ. ಇದನ್ನು ಇಳಿದು ಹೋಗಲು ಪಾವಟಿಗೆಗಳನ್ನು ನಿರ್ಮಿಸಲಾಗಿದೆ. ಇದರ ಮೇಲ್ಭಾಗದ ಸುತ್ತಲೂ ಪ್ರಾಕಾರದ ಗೋಡೆಯನ್ನು ನಿರ್ಮಿಸಿದ್ದು, ಇದರ ಮಧ್ಯದಲ್ಲಿ ಗಾರೆಯಿಂದ ಮಾಡಿದ ಚಿಕ್ಕ ಮಂಟಪದ ಕಾರದಲ್ಲಿರುವ ಗರ್ಭಗೃಹವಿದೆ. ಈ ಗರ್ಭಗೃಹದಲ್ಲಿ ಚಿಕ್ಕ ನಂದಿ ಮೂರ್ತಿ ಇದೆ. ಮಂಟಪದ ನಾಲ್ಕು ಮೂಲೆಯಲ್ಲಿ ಗಾರೆಯಿಂದ ನಿರ್ಮಿಸಿದ ನಂದಿ ಮೂರ್ತಿಗಳಿವೆ ಹಾಗೂ ಒಂದು ಕಳಶವಿದೆ. ಈ ನಂದಿ ಮಂಟಪದ ಸುತ್ತಲೂ ಗಾರೆಯಿಂದ ನಿರ್ಮಿಸಿದ ಏಳು ಅಂಕಣದ ಕಮಾನುಗಳಿವೆ. ಹೊರಗಿನ ಭಾಗದಲ್ಲಿ ಒಂಬತ್ತು ಕಮಾನುಗಳನ್ನು ಹೊಂದಿದ ಮಂಟಪವಿದೆ. ಹತ್ತು ಭಿತ್ತಿ ಕಂಬಗಳಿವೆ. ಇದನ್ನು ಗಾರೆಯಿಂದ ಹಿಂದೂ ಮುಸ್ಲಿಂ ಶೈಲಿಯಲ್ಲಿ ನಿರ್ಮಿಸಲಾಗಿದೆ. ಇದರ ಮುಂದೆ ಗರುಡಗಂಭದ ಕಟ್ಟೆ ಇದೆ. ಒಂದು ಇತ್ತೀಚೆಗೆ ನಿರ್ಮಿಸಿದ ದ್ವಾರವಿದ್ದು ಎರಡು ಬದಿಗೆ ದ್ವಾರಪಾಲಕರು ನಿಂತಿದ್ದಾರೆ. ಲಲಾಟಬಿಂಬದಲ್ಲಿ ಈಶ್ವರ ಲಿಂಗವಿದೆ.

ಇತರೆ : ದೇವಾಲಯದ ಮುಂದೆ ಒಂದು ದೊಡ್ಡ ಗಂಟೆಯ ಮೇಲೆ ಇರುವ ೧೯೨೫ರ ಶಾಸನದಲ್ಲಿ ದೇವಾಲಯದ ಗಂಟೆಯನ್ನು ಗೂಬೂರ ವೈಶ್ಯ ಕಂಚಗಾರ, ಅಮ್ಮ ಪ್ರಭುಸ್ವಾಮಿ ಮುಂತಾದವರು

ಮಾಡಿಸಿದಂತೆ ಉಲ್ಲೇಖವಿದೆ. ಈ ದೇವಾಲಯದ ಬಲಭಾಗದಲ್ಲಿ ಶರಣನಾದ ಗೂಗಲ್ಲಿ ಪರಪ್ಪಯ್ಯನ ಗದ್ದುಗೆ ಇದೆ. ಎಡಭಾಗದಲ್ಲಿ ಕೃಷ್ಣಾನದಿ ಇದೆ.

ಇತರ ದೇವಾಲಯಗಳು

ಮಹಾನಂದೀಶ್ವರ ದೇವಾಲಯ

ಹೆಸರು ಸೂಚಿಸುವಂತೆ ಈ ದೇವಾಲಯವು ಗಬ್ಬೂರು ಹಂಪಣ್ಣವರ ಗುರುವಾದ ದೊಡ್ಡಬಸಪ್ಪನ ಆರಾಧ್ಯದೈವ. ಈಶ್ವರನನ್ನು ಮತ್ತು ಅಂಕಿತನಾಮದ ಹೆಸರನ್ನು ಹೊಂದಿದ ದೇವಾಲಯವಾಗಿದೆ. ಇದರ ಪ್ರಕಾರ ಮಹಾನಂದೀಶ್ವರ ಮಹಾ ದೊಡ್ಡ, ನಂದಿ ಬಸಪ್ಪ ಆರಾಧ್ಯ ದೈವಈಶ್ವರ ಅಥವಾ ಅಂಕಿತನಾಮವಾದ ಘನ ವೃಷಭೇಶ, ಘನದೊಡ್ಡ, ವೃಶಭನಂದಿ, ಈಶ ಆರಾಧ್ಯದೈವಈಶ್ವರ. ಮಹಾನಂದೀಶ್ವರ, ಘನವೃಷಭೇಶ ಹಾಗೂ ಹಂಪಣ್ಣನವರ ಗುರು ಮತ್ತು ಆರಾಧ್ಯದೈವ ಈಶ್ವರ ಈ ಮೂರು ಒಂದೇ ಹೆಸರಿನ ಪರ್ಯಾಯ ಪದಗಳಾಗಿದ್ದು, ಹಂಪಣ್ಣನವರ ಅಂಕಿತನಾಮ ಗುರು ಆರಾಧ್ಯದೈವದ ಹೆಸರುಗಳನ್ನು ಹೊಂದಿದ ಒಂದು ಸುಂದರ ದೇವಾಲಯವಾಗಿದೆ. ಈ ದೇವಾಲಯವು ದಕ್ಷಿಣಕ್ಕೆ ತುಸು ದೂರದಲ್ಲಿ ಚಿಕ್ಕ ಬೆಟ್ಟದ ಮೇಲೆ ಈ ಮಹಾನಂದೀಶ್ವರ ದೇವಸ್ಥಾನವಿದೆ. ಎಪ್ಪತ್ತು ವರ್ಷಗಳ ಹಿಂದೆ ದೊಡ್ಡ ಬಂಡೆಕಲ್ಲುಗಳಿಂದ ಕೂಡಿದ ಈ ಬೆಟ್ಟವನ್ನು ಏರಿ ದೇವಸ್ಥಾನ ಮುಟ್ಟಲು ಬಹು ಪ್ರಯಾಸ ಮಾಡಬೇಕಾಗುತ್ತಿತ್ತು. ಈಗ ಇದು ಬಂಡೆಕಲ್ಲುಗಳನ್ನು ಕಳೆದುಕೊಂಡು ಪೂರ್ವ ಮತ್ತು ಪಶ್ಚಿಮಕ್ಕೆ ೫೦ ರಿಂದ ೬೦ ಪಾವಟಿಗೆಗಳನ್ನು ಹೊಂದಿದ ಸುಂದರ ತಾಣವಾಗಿದೆ. ಈ ಮಹಾನಂದೀಶ್ವರ ದೇವಸ್ಥಾನವು ತಲವಿನ್ಯಾಸದಲ್ಲಿ ಚಿಕ್ಕ ಗರ್ಭಗೃಹ ಹಾಗೂ ಒಂದು ಅಂತರಾಳವನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಉತ್ತರಕ್ಕೆ ಮುಖ ಮಾಡಿದ ಗರ್ಭಗೃಹವು ಚೌಕವಾಗಿದ್ದು, ಇದರ ಮಧ್ಯದಲ್ಲಿ ಪಾಣಿವಾಟದ ಮೇಲೆ ಬೃಹತ್ತಾದ ಲಿಂಗವಿದೆ. ಗರ್ಭಗೃಹದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಲತಾಬಳ್ಳಿಯ ಚಿತ್ರ ಮುಂತಾದವುಗಳಿಂದ ಕೂಡಿದ ಇದರ ಅಂತರಾಳವು ಚೌಕವಾಗಿದ್ದು, ಇದರ ಮೇಲಿನ ಭಾಗದಲ್ಲಿ ಗೋಲಾಕಾರದ ಒಂದು ಸುಂದರ ಭುವನೇಶ್ವರಿಯ ಶಿಲ್ಪವಿದೆ. ಈ ಗರ್ಭಗೃಹದ ಮೇಲೆ ಗೋಪುರ ಕಳಸವನ್ನು ಹೊಂದಿದ್ದು, ನಾಲ್ಕು ಮೂಲೆಯಲ್ಲಿ ನಂದಿಯ ವಿಗ್ರಹಗಳಿವೆ ಮತ್ತು ಎದುರು ಚಿಕ್ಕಮಂಟಪದಲ್ಲಿ ನಂದಿ ಮತ್ತು ವಿನಾಯಕನ ಮೂರ್ತಿಗಳನ್ನು, ಅದರ ಅಕ್ಕಪಕ್ಕದ ಕೆಳಭಾಗದಲ್ಲಿ ನಾಗಮೂರ್ತಿಗಳು, ಶಿವ, ನಂದಿಯ ಇತರ ಹೊಡೆದ ಮೂರ್ತಿಗಳನ್ನು ಕಾಣಬಹುದಾಗಿದೆ. ಅಲ್ಲದೆ ಈ ಮಹಾನಂದೀಶ್ವರನ ಮೇಲೆ ಕುರಿತು ಹಂಪಣ್ಣ ತನ್ನ ವಚನದಲ್ಲಿ ಈ ರೀತಿಯಾಗಿ ಆಡಿದ್ದಾನೆ.

ಪೊರೆಯೇ ಗುರು ನಂದಿಶ್ವರಯೇ ನಿನ್ನ
ಚರಣನು ತಿಪೆನು ಚಂಡೀಶ್ವರಿಯೆ
ಜರಮರಣ ವಿರಹಿತ ಸುರನಮಿತೆ
ಗುರುಮಹಾನಂದೀಶ್ವರನರ್ಧಾಗಿನಿಯ (ಗೊಬ್ಬೂರು ಹಂಪಣ್ಣ, ಪು.೩೧)

ಇತ್ತೀಚೆಗೆ ಮಹಾನಂದೀಶ್ವರ ದೇವಾಲಯದ ಮಹಾದ್ವಾರ ಹಾಗೂ ಗುಡಿಯ ಸುತ್ತ ಪಾಳಮಂಟಪಗಳು ನಿರ್ಮಾಣವಾಗಿವೆ. ಕಾಡುಬೆಟ್ಟವನ್ನು ಸುಂದರ ತಾಣವನ್ನಾಗಿ ಮಾಡಿದವರು ಗಬ್ಬೂರಿನ ಲಿಂ. ಎಲೆ ಬೂದೆಣ್ಣನವರು ಲಕ್ಷಗಟ್ಟಲೆ ಹಣ ವೆಚ್ಚ ಮಾಡಿ ಐವತ್ತು ವರ್ಷಗಳವರೆಗೆ ಈ ಬೆಟ್ಟವನ್ನು ಕೊರೆಸಿ ಮನೋಹರ ಸ್ಥಾನವಾಗಿಸಿದ್ದಕ್ಕೆ ಕಾರಣವಿದೆ. ಎಲೆ ಬೂದೆಣ್ಣನವರ ಗುರುಮುದುಕಪ್ಪ ಮತ್ತು ಮುದಕಪ್ಪನ ಗುರು ಹಂಪಣ್ಣನವರ ಗದ್ದುಗೆ ದೇವಾಲಯಗಳಿವೆ. ಈ ಮಹಾನಂದೀಶ್ವರ ದೇವಾಲಯದ ಮುಂದಿನ ಭಾಗದಲ್ಲಿ ಬಿಚ್ಚಾಲಿ ಮಠವಿದೆ ಮತ್ತು ದೇವಾಲಯದ ಉತ್ತರ ಭಾಗದಲ್ಲಿ ಒಂದು ಪುಷ್ಕರಣಿ ಮತ್ತು ಸೂಗೋರೇಶ್ವರ ಬೆಟ್ಟವಿದೆ.

ರಾಚೋಟಯ್ಯನ ಗುಡಿ

ಸ್ಥಳ : ಊರಿನ ಪೂರ್ವದ ಹೊರವಲಯದ ಪ್ರದೇಶದಲ್ಲಿದೆ

ಗರ್ಭಗೃಹ : ಉತ್ತರಕ್ಕೆ ಮುಖ ಮಾಡಿದ ಗರ್ಭಗುಡಿಯು ಚೌಕಾಗಿದ್ದು, ಇದರ ಮಧ್ಯದಲ್ಲಿ ಈಶ್ವರಲಿಂಗವಿದೆ. ಗರ್ಭಗೃಹದ ದ್ವಾರವು ಆಕರ್ಷಕವಾಗಿದ್ದು, ಗರ್ಭಗೃಹದ ಬಾಗಿಲಿನಲ್ಲಿ ದ್ವಾರಪಾಲಕರಿದ್ದಾರೆ. ಈ ದ್ವಾರಪಾಲಕರು ತಮ್ಮ ಕೈಗಳಲ್ಲಿ ಗದೆಗಳನ್ನು ಹಿಡಿದಿದ್ದಾರೆ. ದ್ವಾರದಲ್ಲಿ ಅರ್ಧಕಂಬಗಳು ಮತ್ತು ಬಾಗಿಲಿನ ಮೇಲೆ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಸುತ್ತಲೂ ಅಲಂಕಾರದ ತೋರಣ ಹಾಗೂ ಆನೆ, ಹೂಗಳ ಚಿತ್ರಗಳನ್ನು ಹೊಂದಿವೆ.

ಅಂತರಾಳ : ಗರ್ಭಗೃಹದ ನಂತರದ ಬಾಗವೇ ಅಂತರಾಳವಾಗಿದ್ದು ಈ ಅಂತರಾಳದಲ್ಲಿ ಬಸವಣ್ಣನ ಮೂರ್ತಿಯನ್ನಿಡಲಾಗಿದೆ. ಅಂತರಾಳದ ಭಿತ್ತಿಯು ಕಂಬಗಳಿಂದ ಕೂಡಿದ್ದು, ಅಂತಹ ಬೃಹತ್ತಾದ ಕಂಬಗಳಿಲ್ಲ.

ನವರಂಗ : ಈ ದೇವಾಲಯದ ಮುಖಮಂಟಪ, ನವರಂಗ ಈಗ ಕುಸಿದುಬಿಟ್ಟಿವೆ. ಇದು ಕೇವಲ ಗರ್ಭಗುಡಿ, ಅಂತರಾಳದಿಂದ ಕೂಡಿದ ದೇವಾಲಯವಾಗಿದೆ.

ಅಧಿಷ್ಠಾನ : ಉತ್ತರಾಭಿಮುಖವಾಗಿರುವ ಈ ಗುಡಿಯು ಸುಮಾರು ಐದು ಅಡಿ ಎತ್ತರದ ಅಧಿಷ್ಠಾನದ ಮೇಲೆ ರಚನೆಗೊಂಡಿದೆ. ಈ ಅಧಿಷ್ಠಾನವು ಸೋಪಾನಗಳಿಂದ ಕೂಡಿದ್ದು ಇದರಲ್ಲಿ ವಿವಿಧ ಭಂಗಿಯಲ್ಲಿರುವ ಆನೆಗಳ ಸಾಲಿದೆ.

ಭಿತ್ತಿ : ಇದರ ಭಿತ್ತಿಯು ಸಮಪಾತಳಿಯಲ್ಲಿದೆ. ಇದು ಸ್ತಂಭಗಳಿಂದ ಕೂಡಿದ್ದು, ಚಚ್ಚೌಕ ಸಾದಾ ಬೋದಿಗೆಯನ್ನು ಹೊಂದಿದೆ. ಈಗ ಪೂರ್ವದ ಗೋಡೆಯು ಕುಸಿದುಬಿದ್ದುದರಿಂದ ಅಂತಹ ಆಕರ್ಷಕವಾದ ಶಿಲ್ಪಗಳು ಈ ಭಿತ್ತಿಯಲ್ಲಿ ಕಾಣುವುದಿಲ್ಲ. ಈ ದೇವಾಲಯಕ್ಕೆ ಯಾವುದೇ ತೆರನಾದ ಶಿಖರ ಕಳಶಗಳಿರುವುದಿಲ್ಲ.

ಕಾಳಿಕಾದೇವಿ ಗುಡಿ

ಕಾಳಿಕಾದೇವಿಯ ಗುಡಿಯ ಪೂರ್ವದಿಕ್ಕಿಗೆ ಮುಖ ಮಾಡಿದ್ದು, ಇದರ ಗರ್ಭಗೃಹದಲ್ಲಿ ಪಾಣಿವಾಟದ ಮೇಲೆ ಕಾಳಿಕಾದೇವಿಯ ಮೂರ್ತಿಯಿದೆ. ಈ ದೇವಾಲಯದ ನವರಂಗ ಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು, ಈ ಕಂಬಗಳು ಪೀಠ, ಪಟ್ಟಿಕೆಗಳು ಮತ್ತು ಸಾದಾ ಬೋದಿಗೆಗಳನ್ನು ಹೊಂದಿದ ಕಂಬಗಳಾಗಿವೆ. ಮುಖಮಂಟಪದ ಬಾಗಿಲಿನಲ್ಲಿ ಅರ್ಧಕಂಬಗಳು ಗಜಲಕ್ಷ್ಮಿಯ ಶಿಲ್ಪವನ್ನು ಬಿಡಿಸಲಾಗಿದೆ. ಈ ದೇವಾಲಯದ ಭಿತ್ತಿಗಳು ಸಾಧಾರಣವಾಗಿದ್ದು, ಯಾವುದೇ ಅಲಂಕಾರಗಳಿಂದ ಕೂಡಿಲ್ಲ ಈ ದೇವಾಲಯದ ಮುಂದೆ ಒಂದು ವಿಗ್ರಹವಿದೆ.

ಪಿಡಮ್ಮ ಗುಡಿ : ಈ ದೇವಾಲಯವು ಉತ್ತರ ದಿಕ್ಕಿನ ಕಡೆಗೆ ಮುಖಮಾಡಿದ್ದು ಇತ್ತೀಚೆಗೆ ಈ ದೇವಾಲಯದಲ್ಲಿ ಒಂದು ಮಹಾಸತಿ ಕಲ್ಲನ್ನು ಇರಿಸಲಾಗಿದೆ. ಇದರ ಮುಂದೆ ಮೂರು ವೀರಗಲ್ಲುಗಳಿವೆ.

ಮಾರಮ್ಮ ಗುಡಿ : ಈ ದೇವಾಲಯವು ಸುಬ್ಬಣ್ಣ ಬಾವಿಯ ಹತ್ತಿರವಿದ್ದು, ಇದರ ಮುಖವು ಪೂರ್ವದ ಕಡೆಗಿದೆ. ಇದರ ಗರ್ಭಗೃಹದಲ್ಲಿ ಮಾರಮ್ಮನ ಮೂರ್ತಿಗಳಿವೆ. ಈ ದೇವಾಲಯಕ್ಕೆ ಪ್ರತಿವರ್ಷ ಬಲಿಕೊಡುವ ಪದ್ಧತಿ ಇಂದಿಗೂ ಇದೆ.

ಸಾವೆರಮ್ಮ ಗುಡಿ : ಈ ದೇವಾಲಯವು ಊರಿನ ಹೊರ ಹೊಲದಲ್ಲಿದ್ದು, ಪೂರ್ವದ ಕಡೆಗೆ ಮುಖ ಮಾಡಿದೆ. ಈ ದೇವಾಲಯದಲ್ಲಿ ಊರಿಗೆ ಮಳೆ ಬಾರದಿದ್ದರೆ ಹೆಚ್ಚಿನ ಪೂಜೆಗಳು ನಡೆಯುತ್ತವೆ.

೧. ಅಂಜನೇಯ ದೇವಾಲಯ : ಖಾನಾಪುರ ಅಗಸಿಯಲ್ಲಿರುವ ಈ ದೇವಾಲಯವು ಕಂಬಗಳು, ಲತಾಬಳ್ಳಿ, ನಾಗ, ಮಂಜೂರುಗಳನ್ನೊಳಗೊಂಡು ಗರ್ಭಗೃಹದಲ್ಲಿ ಅಂಜನೇಯ ವಿಗ್ರಹವಿದೆ. ಇದು ದಕ್ಷಿಣ ಕಡೆಗೆ ಮುಖ ಮಾಡಿದ ದೇವಾಲಯವಾಗಿದೆ.

೨. ಈಶ್ವರ ದೇವಾಲಯ : ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಈಶ್ವರ ಮತ್ತು ನಂದಿಗಳಿವೆ. ಇಲ್ಲಿ ಗೋಪುರವಿದ್ದು, ನಾಲ್ಕು ದಿಕ್ಕಿನ ಮೇಲೆ ನಾಲ್ಕು ನಂದಿ ವಿಗ್ರಹಗಳಿವೆ. ಇದರ ಬಾಗಿಲವಾಡದ ಕುಂಭತೋರಣದ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಗರ್ಭಗೃಹದ ಭಿತ್ತಿನಲ್ಲಿ ಒಂದು ಭುವನೇಶ್ವರಿಯ ಶಿಲ್ಪವಿದ್ದು, ಅಭಿಷೇಕದ ನೀರು ಹೊರಗೆ ಬರಲು ಒಂದು

ಪ್ರಣಾಳವನ್ನು ಮಾಡಲಾಗಿದೆ. ಈ ದೇವಾಲಯದ ಮುಂದೆ ಒಂದು ದೀಪಸ್ತಂಭವಿದೆ.

೩. ಮಾರ್ತಾಂಡೇಶ್ವರ ಗುಡಿ : ಈ ದೇವಾಲಯದ ಗರ್ಭಗೃಹದಲ್ಲಿ ಮಾರ್ತಾಂಡೇಪ್ಪನವರ ಮೂರ್ತಿ ಇದ್ದು, ಇದರ ಮೇಲೆ ಒಂದು ಭುವನೇಶ್ವರಿಯ ಚಿತ್ರವಿದೆ. ಈ ದೇವಾಲಯದಲ್ಲಿ ಒಬ್ಬ ಸಾಧು ವಾಸವಾಗಿದ್ದಾನೆ. ಇದರ ಪಕ್ಕದ ಪಶ್ಚಿಮ ಭಾಗದಲ್ಲಿ ದಾಸರ ಬಾವಿಯಿದ್ದು, ಉತ್ತರ ಭಾಗದಲ್ಲಿ ಖಾನಾಪುರ ದ್ವಾರಬಾಗಿಲು ಇದೆ.

೪. ಮಲ್ಲಿಕಾರ್ಜುನ ಗುಡಿ : ಈ ದೇವಾಲಯವು ೩ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದ್ದು, ಇದರ ಮುಖವು ಪೂರ್ವದ ಕಡೆಗಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಈಶ್ವರ ಮತ್ತು ನಂದಿ ವಿಗ್ರಹಗಳಿವೆ. ಇದರ ಬಾಗಿಲಿನಲ್ಲಿ ಅರ್ಧಕಂಬಗಳು ಹಾಗೂ ಪೂರ್ಣಕುಂಭಗಳಿವೆ. ಈ ದೇವಾಲಯವು ಗೋಪುರ ಮತ್ತು ಕಳಶಗಳನ್ನು ಒಳಗೊಂಡಿದ್ದು, ಇದರ ನಾಲ್ಕು ದಿಕ್ಕಿನಲ್ಲಿ ನಾಲ್ಕು ನಂದಿಗಳಿವೆ.

ಗಬ್ಬೂರಿನಲ್ಲಿ ಇನ್ನೂ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿರುವ ಅನೇಕ ದೇವಾಲಯಗಳಿವೆ. ಅವು ನೆಲದಲ್ಲಿ ಭೂಗತವಾಗಿದ್ದು, ಇನ್ನುಳಿದ ಕೆಲವು ದೇವಾಲಯಗಳು ವಾಸದ ಮನೆಗಳಾಗಿವೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿರುವ ಅಂದನೇಶ್ವರ ದೇವಾಲಯ ಪ್ರಮುಖವಾಗಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಈಶ್ವರ ಲಿಂಗ ಮತ್ತು ನಂದಿ ವಿಗ್ರಹಗಳಿವೆ. ಇದರ ಪಕ್ಕದಲ್ಲಿಯೇ ಒಂದು ಬೃಹತ್ತಾದ ಒಂದು ಪುಷ್ಕರಣಿಯಿದೆ.

ಇನ್ನು ಅನೇಕ ಶಿವಶರಣರ ಗದ್ದುಗೆಗಳಾದ ಸಿದ್ಧಯ್ಯ ತಾತ ಗದ್ದುಗೆ, ಕರಿಯಪ್ಪ ತಾತನ ಗದ್ದುಗೆ, ಭಗವಂತನ ಗದ್ದುಗೆ, ಸೂಗಣ್ಣ ತಾತನ ಗದ್ದುಗೆ ಮುಂತಾದವುಗಳನ್ನು ಗಬ್ಬೂರಿನಲ್ಲಿ ಕಾಣಬಹುದು (ಗ.ಶಾ.ದೇ., ಎಂ.ಫಿಲ್.ನಿಂಬಧ, ಮಹೇಶ, ಪು.೫೭-೬೧).

ಜೈನ ಬಸದಿ

ಜೈನಮತದ ಉಲ್ಲೇಖವಿರುವ ಶಾಸನಗಳು ದೇವದುರ್ಗ ತಾಲ್ಲೂಕಿನಲ್ಲಿ ತುಂಬಾ ವಿರಳ. ಕೆಲವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಉದಾಹರಣೆಗೆ ಸಿಗುತ್ತವೆ. ಜೈನ ಬಸದಿ ಮೊದಲು ಇದ್ದಂತೆ ಶಾಸನಗಳು ತಿಳಿಸಿದರೂ ಈಗ ಸದ್ಯದಲ್ಲಿ ಅದರ ಕಟ್ಟಡಗಳು ಯಾವುವೂ ಕಾಣುವುದಿಲ್ಲ. ಆದರೆ ದೇವದುರ್ಗ ತಾಲ್ಲೂಕಿನ ಗಬ್ಬೂರು ಹಾಗೂ ಚಂದನಕೇರಿಯಲ್ಲಿ ಮಾತ್ರ ಜಿನಶಿಲ್ಪ ಹಾಗೂ ಶಾಸನದ ಉಲ್ಲೇಖ ದೊರೆಯುತ್ತದೆ.


ಗಬ್ಬೂರಿನಲ್ಲಿ ಜೈನಬಸದಿ ಇದ್ದ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ. ಆದರೆ ಈಗ ಆ ಬಸದಿ ಕಾಣುವುದಿಲ್ಲ. ಕ್ರಿ.ಸ.೧೧೧೦ರ ಶಾಸನವು ತ್ರಿಭುವನ ಮಲ್ಲನು ಜಯಂತೀಪುರದ ನೆಲೆವೀಡಿನಲ್ಲಿದ್ದಾಗ

ಅಗ್ರಹಾರ ಹಿರಿಯ ಗೊಬ್ಬೂರ ನಖರಗಳು, ಕಮ್ಮಟದ ಅಧಿಕಾರಿಗಳು, ಕಮ್ಮಟಕಾರರು, ಬ್ರಹ್ಮಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲಿನ ತೆರಿಗೆ ಬಿಡುತ್ತಾರೆ. ಈ ಬಸದಿಯನ್ನು ನಗರ ಜಿನಾಲಯವೆಂದು ಕರೆದಿದೆ(ಕವಿಶಾಸಂ ೭, ಪು.೭೪).


ಅದೇ ಗ್ರಾಮದ ಹಂಪಯ್ಯ ಬಾವಿ ಬಳಿ ಇರುವ ಕ್ರಿ.ಶ.೧೦೮೪ರ ಶಾಸನದಲ್ಲಿ ಚಾಳುಕ್ಯ ತ್ರಿಭುವನ ಮಲ್ಲ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಚಂದ್ರರಸನಿರುತ್ತಾನೆ. ಇವನ ತಮ್ಮ ಅಣ್ಣಲದೇವ. ಈ ಅಣ್ಣತಮ್ಮಂದಿರು ಇಬ್ಬರು ಕೂಡಿ ಮಹಾ ಸಾಮಂತ ಬಸವದೇವನ ಬಿನ್ನಪದಂತೆ ಧರ್ಮಕಾರ್ಯ ತತ್ಪರರಾಗಿ ಜಿನ ದೇವರ ಅರ್ಚನೆಗಾಗಿ ಗಬ್ಬೂರ ಮಾಲಿಗರು ಮಹಾಜನರು ಮುದುಗುಂದೂರಿನ ಮೂಲಿಗದರೆ ೫ ಬೆಳೆದೆರೆಯನ್ನು ದಾನ ಬಿಟ್ಟ ಉಲ್ಲೇಖವಿದೆ. ಈ ಮೇಲಿನ ಶಾಸನಗಳನ್ನು ಗಮನಿಸಿದಾಗ ನಮಗೆ ಸ್ಪಷ್ಟವಾಗುವುದು ಗಬ್ಬೂರಿನಲ್ಲಿ ಜೈನ ಬಸದಿ ಇದ್ದು, ಹಾಗೂ ಗಬ್ಬೂರ ಒಂದು ಜೈನ ಕೇಂದ್ರವಾಗಿತೆಂದು ತಿಳಿದುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಗಬ್ಬೂರಿನ ಶಾಲೆಯ ಆವರಣದಲ್ಲಿ ಕಪ್ಪುಕಲ್ಲಿನಲ್ಲಿ ಕಡೆಯಲಾದ ಒಂದು ಭಗ್ನಗೊಂಡ ಜಿನ ಶಿಲ್ಪವಿದೆ. ಈ ಶಿಲ್ಪ ಆ ಬಸದಿಯಲ್ಲಿದ್ದಿರಬಹುದು. ಆದರೆ ಇತ್ತೀಚೆಗೆ ಇದನ್ನು ಶಾಲೆಯ ಆವರಣದಲ್ಲಿ ಇರಿಸಿರಬಹುದು. ಈಗಿನ ನೀಲಕಂಠೇಶ್ವರ ದೇವಾಲಯದ ಸಮೀಪ ಈ ಬಸದಿಯಿರಬಹುದೆಂದು ಊಹಿಸಬಹುದಾಗಿದೆ.

ಚಂದನಕೇರಿಯಲ್ಲಿ ಬಸದಿ ಇದ್ದಿರಬಹುದು. ಆದರೆ ಅದು ಇಂದು ಇಲ್ಲವಾಗಿದೆ. ಶಾಲಾ ಕಟ್ಟಡದ ಕಡೆ ಒಂದು ಸಣ್ಣ ಬಯಲು ಇದೆ. ಈ ಬಯಲಿನ ಸ್ಥಳದಲ್ಲಿ ಹಿಂದೆ ಒಂದು ಜೈನ ಬಸದಿ ಇರಬಹುದು. ಆದರೆ ಇದಕ್ಕೆ ಇಲ್ಲಿಯ ಜನತೆ ಮಠವಿತ್ತೆಂದು ಹೇಳುತ್ತಾರೆ. ಆ ಮಠ ಈ ಜೈನ ಬಸದಿಯಾಗಿರಬಹುದೆಂದು ಊಹಿಸಬಹುದು. ಆ ಸ್ಥಳದಲ್ಲಿ ಬಿದ್ದಿರುವ ಕಂಬ, ಎರಡು ನಿಂತ ಎತ್ತರದ ಕಂಬಗಳು ಮತ್ತು ತುಂಡಾಗಿರುವ ಶಿಲ್ಪ ಇದೇ ಬಸದಿ ಎಂದು ಸೂಚಿಸುತ್ತದೆ.

ದೇವದುರ್ಗ ತಾಲ್ಲೂಕಿನ ದೇವಾಲಯ ಸ್ಥಳಗಳು



ಗಬ್ಬೂರಿನ ನಕ್ಷೆಯಲ್ಲಿ ದಾರಿ ಮತ್ತು ದೇವಾಲಯಗಳು



೧. ರಾಚೋಟಯ್ಯ ದೇವಾಲಯ
೨. ಮೇಲಶಂಕರ ದೇವಾಲಯ
೩. ಹನುಮಂತ ದೇವಾಲಯ
೪. ಏಳು ಬಾವಿ ಬಸವಣ್ಣ ದೇವಾಲಯ
೫. ಈಶ್ವರ ದೇವಾಲಯ
೬. ವೆಂಕಟೇಶ್ವರ ದೇವಾಲಯ
೭. ಹರಿಹರ ದೇವಾಲಯ
೮. ಈಶ್ವರ ದೇವಾಲಯ
೯. ಬಾಲ ಹನುಮಾನ ದೇವಾಲಯ
೧೦. ನೀಲಕಂಠೇಶ್ವರ ದೇವಾಲಯ
೧೧. ಕೇಶವ ದೇವಾಲಯ
೧೨. ಭೋಗನಾಥ ದೇವಾಲಯ
೧೩. ಅಂಕ್ರಮಪಾಷ ಮಸೀದಿ
೧೪. ವೀರಭದ್ರೇಶ್ವರ ದೇವಾಲಯ
೧೫. ಕಾಳಿಕ ದೇವಾಲಯ
೧೬. ವೀರಭದ್ರೇಶ್ವರ ದೇವಾಲಯ
೧೭. ಮಹಾನಂದೇಶ್ವರ ದೇವಾಲಯ
೧೮. ಬಿಚ್ಚಾಲಿ ಮಠ
೧೯. ಸೂಗೋರೇಶ್ವರ ಬೆಟ್ಟ
೨೦. ಬೂದಿಬಸವೇಶ್ವರ ಮಠ
೨೧. ಹಂಪಣ್ಣ ಗುಡಿ
೨೨. ನಾಗರಗುಡಿ
೨೩. ನಾಗರಬೆಟ್ಟ
೨೪. ಹೊಸ ಬಸ್‌ನಿಲ್ದಾಣ
೨೫. ಹಳೇಬಸ್‌ನಿಲ್ದಾಣ
೨೬. ಚಿಂಚೋಳಿ ಬಸವಣ್ಣ ದೇವಾಲಯ
೨೭. ಬಿಬ್ಬಿಬಾಚ್ಚಯ್ಯನ ಗದ್ದಿಗೆ



ಬಸವಣ್ಣ ದೇವಾಲಯ ನಾಗೋಲಿ



ಅಣೇಮಲ್ಲೇಶ್ವರ ದೇವಾಲಯ



ಪಾರ್ಶ್ವ ನೋಟ ಮೇಲಶಂಕರ ದೇವಾಲಯ ಗಬ್ಬೂರು



ರಾಚೋಟಿಯ್ಯ ದೇವಾಲಯ ಗಬ್ಬೂರು



ಸೂಗೂರೇಶ್ವರ ದೇವಾಲಯ ಗಬ್ಬೂರು



ಬಾಲಾಂಜನೇಯ ದೇವಾಲಯ ಗಬ್ಬೂರು



ಬೋಗನಾಥ ದೇವಾಲಯ ಗಬ್ಬೂರು



ಹರಿಹರ ದೇವಾಲಯ ಗಬ್ಬೂರು



ಪಾರ್ಶ್ವನೋಟ ವೆಂಕಟೇಶ್ವರ ದೇವಾಲಯ ಗಬ್ಬೂರು



ವೆಂಕಟೇಶ್ವರ ದೇವಾಲಯ ಬಿತ್ತಿ



ವೆಂಕಟೇಶ್ವರ ದೇವಾಲಯ ಜಾಲಂದ್ರದ ಗೋಡೆ



ದೇವಕೋಷ್ಠ ವೆಂಕಟೇಶ್ವರ ದೇವಾಲಯ ಗಬ್ಬೂರು



ದೇವಕೋಷ್ಠ ಹಾಗೂ ಗೋಡೆ ವೆಂಕಟೇಶ್ವರ ದೇವಾಲಯ



ಜೋಡು ಬಸವಣ್ಣ ದೇವಾಲಯ ಜಾಲಹಳ್ಳಿ



ನರಹರಿ ದೇವಾಲಯ ಕೊಪ್ಪರ



ಆಂಜನೇಯ ದೇವಾಲಯ ಚಂದನಕೇರಿ



ರಂಗನಾಥ ದೇವಾಲಯ ಮಾನಸಗಲ್ಲ್



ಬಸವಣ್ಣ ದೇವಾಲಯ ಜಾಲಹಳ್ಳಿ



ರಾಮಲಿಂಗೇಶ್ವರ ದೇವಾಲಯ . ರಾಮದುರ್ಗ



ವೀರ ಸಮಾದಿ ದೇವಾಲಯಗಳು ಅರಕೇರಿ



ವೀರ ಸಮಾದಿ ದೇವಾಲಯ ಚಂದನಕೇರಿ



ವೀರ ಸಮಾದಿ ದೇವಾಲಯ ಅರಕೇರಿ



ವೀರ ಸಮಾದಿ ದೇವಾಲಯ ಅರಕೇರಿ



ಈಶ್ವರ ದೇವಾಲಯ ಜಾಲಹಳ್ಳಿ



ಗೋಪಾಲಸ್ವಾಮಿ ದೇವಾಲಯ ದೇವದುರ್ಗ



ರಂಗನಾಥ ಸ್ವಾಮಿ ದೇವಾಲಯದ ಮಾನಸಗಲ್



ಗುಹಾ ದೇವಾಲಯ ಗಬ್ಬೂರು



ಗುಹಾ ದೇವಾಲಯ ಮಸರಕಲ್



ಗುಹಾ ದೇವಾಲಯ ರಾಮದುರ್ಗ



ಬಸವಣ್ಣ ದೇವಾಲಯದ ಬಾಗಿಲವಾಡ ನಾಗೋಲಿ



ಬಾಗಿಲವಾಡ ಚಂದನಕೇರಿ



ಬಾಗಿಲವಾಡ ಈಶ್ವರ ದೇವಾಲಯ ಜಾಲಹಳ್ಳಿ



ಬಾಗಿಲವಾಡ ಬಸವಣ್ಣ ದೇವಾಲಯ ಗಬ್ಬೂರು



ಬಾಗಿಲವಾಡ ಕೇಶವ ದೇವಾಲಯ ಗಬ್ಬೂರು



ನವರಂಗ ಮಂಟಪದ ಕಂಬ ನಾಗೋಲಿ



ಅಂತರಾಳದ ಕಂಬಗಳು ನಾಗೋಲಿ



ಮೇಲ ಶಂಕರ ದೇವಾಲಯದ ಕಂಬಗಳು ಗಬ್ಬೂರು



ಹರಿಹರ ದೇವಾಲಯದ ಕಂಬ ಗಬ್ಬೂರು



ಹರಿಹರ ದೇವಾಲಯದ ಕಂಬಗಳು ಗಬ್ಬೂರು



ಬೀರ ಲಿಂಗೇಶ್ವರ ದೇವಾಲಯ ಕಂಬಗಳು ಗಬ್ಬೂರು



ಗೆಜ್ಜೆ ಬಾವಿ ಮಠದ ಕಂಬಗಳು



ಬೂದಿ ಬಸವೇಶ್ವರ ಮಠದ ಕಂಬಗಳು ಗಬ್ಬೂರು

೬.೨. ಮಠಗಳು ಮತ್ತು ಮುನಿಗಳು

ಭರತ ಖಂಡದಲ್ಲಿ ಧರ್ಮಕ್ಕೆ ಇರುವಷ್ಟು ಪ್ರಾಮುಖ್ಯತೆ ಬೇರೆ ಯಾವ ದೇಶದಲ್ಲಿಯೂ ಇರಲಿಕ್ಕಿಲ್ಲ. ಭಾರತದಲ್ಲಿ ಹಲವು ಧರ್ಮಗಳು ತಮ್ಮ ಅಸ್ತಿತ್ವವನ್ನು ಬೆಳೆಸಿಕೊಂಡಿವೆ. ಪುರಾತನ ಹಿಂದೂ ಧರ್ಮದಲ್ಲಿ ಅನೇಕ ಶಾಖೆಗಳು ಇದ್ದು, ಪ್ರತಿಯೊಂದು ಶಾಖೆಗೂ ಧರ್ಮಾಧಿಕಾರಿ ಅಥವಾ ಗುರುಗಳು ಇದ್ದಾರೆ. ಅದೇ ರೀತಿ ಬೌದ್ಧಧರ್ಮ, ಜೈನಧರ್ಮ, ವೀರಶೈವಧರ್ಮ, ಸಿಖ್ ಧರ್ಮಗಳು ಅಸ್ತಿತ್ವದಲ್ಲಿದ್ದು ತಮ್ಮದೇ ಆದ ತತ್ವಗಳೊಂದಿಗೆ ಹಿಂದೂ ಧರ್ಮದೊಂದಿಗೆ ಬೆಳೆದುಬಂದಿವೆ. ಈ ಎಲ್ಲಾ ಧರ್ಮಗಳು ಕೇಂದ್ರಗಳನ್ನು ಸ್ಥಾಪಿಸಿಕೊಂಡು ಧರ್ಮ ಪ್ರಚಾರವನ್ನು ಮಾಡುತ್ತಾ ಬಂದಿವೆ. ಧರ್ಮ ಪ್ರಚಾರಕರು ಅಥವಾ ಸಂನ್ಯಾಸಿಗಳು ನೆಲೆನಿಂತ ಕೇಂದ್ರಗಳೇ ಮಠಗಳಾಗಿ ಹೆಸರು ಪಡೆದಿವೆ.

ಮಠಗಳ ಅರ್ಥ ಮತ್ತು ವರ್ಗೀಕರಣ

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಮಠಗಳ ಅರ್ಥದ ಬಗ್ಗೆ ಈಗಾಗಲೇ ಅನೇಕ ವ್ಯಾಖ್ಯಾನಗಳು ಪ್ರಕಟಗೊಂಡಿದ್ದು, ಮಠ ಎಂದರೆ ಸಂನ್ಯಾಸಿಗಳು ವಾಸಿಸುವ ಸ್ಥಳವೆಂದೂ, ಅಮರಕೋಶದಲ್ಲಿ "ಛಾತ್ರಾದಿನಿಲಯವೆಂದೂ, ಅರ್ಥವಿದ್ದು, ಇಲ್ಲಿ ಗುರುಗಳು ವಾಸಿಸುವ ಸಂನ್ಯಾಸಿಗಳು ವಾಸಿಸುವ ಯೋಗ್ಯಸ್ಥಳವೆಂದು ಉಲ್ಲೇಖಿಸಲಾಗಿದೆ.

ಧಾರ್ಮಿಕ ಹಿನ್ನೆಲೆಯಲ್ಲಿ ಆತ್ಮೋದ್ಧಾರ ಮತ್ತು ಸಮಾಜೋದ್ಧಾರದ ಕೆಲಸವನ್ನೂ ನಡೆಸುವ ಕೇಂದ್ರಗಳೇ ಮಠಗಳಾಗಿವೆ. ಇಲ್ಲಿ ಕೇಂದ್ರವ್ಯಕ್ತಿ ಇಷ್ಟಲಿಂಗ ಪೂಜೆಯಿಂದ ಆತ್ಮೋದ್ಧಾರ ಹೊಂದಿ, ಆ ಮೂಲಕ ಧರ್ಮ, ದಾಸೋಹ ಹಾಗೂ ಕಾಯಕದ ಬಗ್ಗೆ ಬೋಧನೆ ನೀಡುತ್ತ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ನಿರತನಾಗಿರುತ್ತಾನೆ. ಈ ರೀತಿ ಆತ್ಮೋದ್ಧಾರ ಮತ್ತು ಸಮಾಜೋದ್ಧಾರದ ಅರ್ಥದೊಂದಿಗೆ ಬೆಳೆದ ಮಠಗಳು, ನಾಡಿನ ಅಭಿವೃದ್ಧಿಗೆ ಪೂರಕವಾಗಿ ಬೆಳೆದು ಬಂದಿವೆ. ಈ ಮಠಗಳ ವರ್ಗೀಕರಣವನ್ನು ಚಂದ್ರಶೇಖರ ನಾರಾಯಣಪುರ ಈ ಕೆಳಗಿನಂತೆ ವರ್ಗೀಕರಿಸಿದ್ದಾರೆ.

ಮಠಗಳ ವರ್ಗೀಕರಣ : ಮಠಗಳಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳನ್ನು ನಾವು ಕಾಣಬಹುದಾಗಿದೆ. ಅವುಗಳಲ್ಲಿ ಗುರು ವರ್ಗದ ಮಠಗಳು, ವಿರಕ್ತ ಮಠಗಳು, ಶರಣಸ್ಥಲ ಮಠಗಳು, ದಾಸೋಹ ಮಠಗಳೆಂಬ ನಾಲ್ಕು ವರ್ಗಗಳನ್ನು ಕಾಣುತ್ತೇವೆ. ಅವು ಈ ಕೆಳಗಿನಂತೆ ಇವೆ.

೧. ಗುರುವರ್ಗದ ಮಠಗಳು : ಈ ಗುರುವರ್ಗದ ಪರಂಪರೆಯ ಮಠಗಳಿಗೆ ಮೂಲಕೇಂದ್ರಗಳಾಗಿರುವ ಪಂಚಪೀಠಗಳು ಕರ್ನಾಟಕದ ಬಾಳೆಹೊನ್ನೂರು, ಉಜ್ಜಯಿನಿ, ಆಂಧ್ರಪ್ರದೇಶದ ಶ್ರೀಶೈಲ, ಉತ್ತಾರಾಂಚಲದಲ್ಲಿ ಕೇದಾರ ಹಾಗೂ ಉತ್ತರ ಪ್ರದೇಶದ ಕಾಶಿ ರಾಜ್ಯಗಳಲ್ಲಿ ಸ್ಥಾಪನೆಯಾಗಿವೆ. ಈ

ಐದು ಪೀಠಗಳಿಗೆ ಹಳ್ಳಿ, ಪಟ್ಟಣಗಳಲ್ಲಿ ಸಾವಿರಾರು ಶಾಖಾ ಮಠಗಳು ಅಸ್ತಿತ್ವದಲ್ಲಿದೆ. ಇವುಗಳಲ್ಲಿಯೂ ಶಿಷ್ಯವರ್ಗದ ಮಠ ಮತ್ತು ಪುತ್ರವರ್ಗದ ಮಠ ಎಂಬ ವಿಂಗಡಣೆಯನ್ನು ನಾವು ಕಾಣಬಹುದಾಗಿದೆ.

ಅ. ಶಿಷ್ಯವರ್ಗದ ಮಠಗಳು : ಗುರುವರ್ಗದ ಮಠಗಳಲ್ಲಿ ಪಂಚಪೀಠಗಳ ಕೆಲವು ಶಾಖಾಮಠಗಳು ಜಂಗಮ ವಂಶಸ್ಥರಲ್ಲಿ ಸಮರ್ಥವಾದ ವಟುವನ್ನು ಉತ್ತಾರಾಧಿಕಾರಿಯನ್ನಾಗಿ ನೇಮಿಸಿಕೊಂಡು ಪಟ್ಟಾಧಿಕಾರ ಮಾಡುವ ಸಂಪ್ರದಾಯವನ್ನು ಬೆಳೆಸಿಕೊಂಡಿವೆ.

ಆ. ಪುತ್ರವರ್ಗದ ಮಠಗಳು : ಗುರುವರ್ಗದ ಪರಂಪರೆಯ ಪಂಚಪೀಠಗಳ ಬಹುತೇಕ ಶಾಖಾ ಮಠಗಳಲ್ಲಿ ತಮ್ಮ ವಂಶಸ್ಥಗಲ್ಲೇ ವಡುವನ್ನು ಆಯ್ಕೆ ಮಾಡಿಕೊಂಡು ಪಟ್ಟಾಧಿಕಾರ ಮಾಡಲಾಗುತ್ತದೆ. ಇಂತಹ ಮಠಗಳನ್ನು ಪುತ್ರವರ್ಗದ ಮಠಗಳೆಂದು ಕರೆಯಲಾಗುತ್ತದೆ.

೨. ವಿರಕ್ತಮಠಗಳು : ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಅನುಭವ ಮಂಟಪದಲ್ಲಿ ಸ್ಥಾಪನೆಯಾದ ಶೂನ್ಯಪೀಠದ ಪರಂಪರೆಯಲ್ಲಿ ಬೆಳೆದು ಬಂದು ಮಠಗಳಿಗೆ ವಿರಕ್ತಮಠಗಳೆಂದು ಕರೆಯಲಾಗುತ್ತದೆ. ಈ ವಿರಕ್ತವರ್ಗದ ಮಠಗಳೂ ಸಹ ದೇಶದ ನಾನಾ ಭಾಗಗಳಲ್ಲಿ ಸ್ಥಾಪನೆಯಾಗಿವೆ.

೩. ಶರಣಸ್ಥಲ ಮಠಗಳು : ಶರಣಸ್ಥಲ ಮಠಗಳು ವ್ಯಕ್ತಿಯ ನೆಲೆಗಟ್ಟಿನಲ್ಲಿ ಬೆಳೆದು ಸಮಾಜದ ಅಭಿವೃದ್ಧಿಗೆ ಪೂರಕವಾಗಿ ನಿಂತಿರುವುದನ್ನು ಗಮನಿಸಬಹುದಾಗಿದೆ. ಉದಾಹರಣೆಗೆ ಗುಲ್ಬರ್ಗದ ಶರಣ ಬಸವೇಶ್ವರ ಸಂಸ್ಥಾನ ಮಠವು ಶರಣ ಬಸವೇಶ್ವರ ಕಾಯಕ ಯೋಗದಿಂದ ಸ್ಥಾಪನೆಗೊಂಡು ದಾಸೋಹವನ್ನು ಮೂಲೋದ್ದೇಶವಾಗಿಟ್ಟುಕೊಂಡು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಬೆಳೆದಿರುವುದನ್ನು ಕಾಣಬಹುದು.

ದಾಸೋಹಮಠ : ದಾಸೋಹ ಮಠಗಳು ಮೇಲಿನ ಮಠಗಳಂತೆ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ನಡೆಸುವ ಅಧಿಕಾರವನ್ನು ಹೊಂದಿವೆಯಾದರೂ ಕಂತೆ ಭಿಕ್ಷೆಯನ್ನು ಪ್ರಮುಖ ಕಾಯಕವಾಗಿ ಅಳವಡಿಸಿಕೊಂಡಿವೆ. ಬೆಳಿಗ್ಗೆ ಮತ್ತು ಸಂಜೆ ನಿಗದಿಯಾದ ವೇಳೆಗೆ ಮನೆಗಳಿಂದ ಕಂತೆ ಭಿಕ್ಷದ ಮೂಲಕ ಪ್ರಸಾದವನ್ನು ಪಡೆದು ಮಠಕ್ಕೆ ತಂದು ಪೂಜಾವಿಧಿಗಳು ಮುಗಿದ ಮೇಲೆ ಮಠದಲ್ಲಿ ಆಶ್ರಯ ಪಡೆದ ಅಸಹಾಯಕರಿಗೆ, ಅಶಕ್ತರಿಗೆ ಪ್ರಸಾದವನ್ನು ಬಡಿಸಲಾಗುತ್ತದೆ. ಇಂತಹ ಮಠಗಳಿಗೆ ದಾಸೋಹಮಠಗಳೆಂದು ಕರೆಯಲಾಗುತ್ತದೆ.

ಧರ್ಮದ ಸಂಕೇತವಾಗಿದ್ದ ಈ ಮಠಗಳಿಗೆ ಬಹುಸಂಖ್ಯೆಯ ಜನರು ನಡೆದುಕೊಳ್ಳುತ್ತಾರೆ. ಮಠದ ನಿರ್ವಹಣೆಗಾಗಿ ಆಸ್ತಿ ಇರುತ್ತದೆ. ಮುಖ್ಯವಾಗಿ ಭಕ್ತರಾಗಿ ನಡೆದುಕೊಳ್ಳುತ್ತಾರೆ. ಇಂಥ ಮಠಗಳು ದೇವದುರ್ಗ ತಾಲೂಕಿನ ಗಬ್ಬೂರು, ಜಾಲಹಳ್ಳಿ, ಮಸರಕಲ್ಲು, ನೀಲಗಲ್ಲು, ಗೆಜ್ಜೆಬಾವಿ, ದೇವದುರ್ಗಗಳಲ್ಲಿ ಕಾಣಬಹುದಾಗಿದೆ.

ಗಬ್ಬೂರು ಬೂದಿಬಸವೇಶ್ವರ ಮಠ

೧. ಹಿನ್ನೆಲೆ : ಬೂದಿಬಸವೇಶ್ವರ ಮಠವು ಶೈವ ಮಠವಾದ ಕಾಶಿ ಪೀಠದ ಉಪಪೀಠವಾಗಿದೆ. ಈ ಮಠಕ್ಕೆ ಸುಮಾರು ೮೦೦ ವರ್ಷದ ಇತಿಹಾಸವಿದೆ ಎಂದು ಹೇಳುತ್ತಾರೆ. ಆದರೂ ಸ್ಪಷ್ಟ ದಾಖಲಾತಿಗಳು ದೊರೆತಿಲ್ಲ. ಇಲ್ಲಿಯ ಸ್ವಾಮಿಗಳು ವಂಶಪರಂಪರೆಯಾಗಿ ಪೀಠಾಧಿಪತಿಗಳಾಗುತ್ತಾರೆ. ಈಗಿರುವ ಸ್ವಾಮಿಗಳು ೮ನೇ ಪೀಠಾಧಿಪತಿಗಳಾಗಿದ್ದಾರೆ. ಶ್ರೀಶಾಂತಮೂರ್ತಿ ಶಿವಾಚಾರ್ಯ, ಶ್ರೀ ಬೂದಿಬಸವೇಶ್ವರ ಶಿವಾಚಾರ್ಯ ಎಂಬ ಪರ್ಯಾಯ ನಾಮಗಳೊಂದಿಗೆ ಪೀಠಾಧಿಕಾರ ನಡೆದಿದೆ.

ಮೊದಲು ಬೂದಿಬಸವೇಶ್ವರ ಸ್ವಾಮಿಗಳು ಮಲೆನಾಡು ಪ್ರದೇಶದಿಂದ ಸಂಚಾರ ಮಾಡುತ್ತಾ ಶರಣರ ತತ್ವಗಳನ್ನು ಪ್ರಸಾರ ಮಾಡುತ್ತಾ ದೇವದುರ್ಗಕ್ಕೆ ಬಂದು ನೆಲೆಸಿದ್ದರು. ಇದಕ್ಕೆ ಸಾಕ್ಷಿಯಾಗಿ ದೇವದುರ್ಗದಲ್ಲಿ ಬೂದಿ ಬಸವೇಶ್ವರ ಮಠವಿದೆ. ಗೂಬ್ಬೂರಿನ ಉರಕಡ್ಲಿಯ ಮನೆತನದವರು ಗಬ್ಬೂರಿಗೆ ಸ್ವಾಮಿಗಳನ್ನು ಬರಮಾಡಿಕೊಂಡರು ಎಂದು ನಮಗೆ ಮೌಖಿಕ ಆಧಾರದಿಂದ ತಿಳಿದುಬರುತ್ತದೆ. ಒಟ್ಟಿನಲ್ಲಿ ಬೂದಿಬಸವೇಶ್ವರ ಸ್ವಾಮಿಗಳ ೨ ಗದ್ದುಗೆಗಳು ಇಂದು ಗಬ್ಬೂರಿನಲ್ಲಿ ಕಾಣಬಹುದು. ೫ನೇ ಪೀಠಾಧಿಪತಿಗಳಾದ ಶ್ರೀ ಶಾಂತಮೂರ್ತಿ ಶಿವಾಚಾರ್ಯಸ್ವಾಮಿಗಳ ಕೈ ಮೇಲೆ ಈಗಿನ ಮಠವು ನಿರ್ಮಾಣವಾಗಿದೆ ಎಂದು ತಿಳಿದುಬರುತ್ತದೆ.

೨. ಬೂದಿಬಸವನಾದ ಬಗೆ : ಒಂದು ದಿನ ಸಾಯಂಕಾಲ ವೃದ್ಧೆಯೋರ್ವಳ ರೋದನ ಕೇಳಿ ಬರುತ್ತಿತ್ತು. ಅದು ಚೆಲುವಾದಿ ಚೆನ್ನಮ್ಮನ ಮನೆಯೊಳಗಿಂದ. ಆಗ ಅಲ್ಲಿಗೆ ಬಂದ ಸ್ವಾಮಿಗಳು ತಾಯಿ ಎಂದು ಕರೆದರು. ಅಳುತ್ತಾ ಹೊರಬಂದಳು ಚೆನ್ನಮ್ಮ. ಆಗ ಸ್ವಾಮಿಗಳು ಯಾಕೆ ತಾಯಿ ಅಳುತ್ತೀ ಎಂದು ಕೇಳಿದಾಗ. "ಯಪ್ಪಾ ಏನು ಹೇಳಲಿ ನನ್ನ ಸಂಕಟ, ನನಗಾರು ದಿಕ್ಕಿಲ್ಲ. ಪರದೇಶಿ ಇದ್ದದೊಂದೆ ಹೋರಿ ಬಸವ ಮುದ್ದಾಗಿ ಸಾಕಿ ಬೆಳೆಸಿದ್ದೆ. ಇಂದು ಆ ಬಸವ ಸತ್ತು ಹೋಗಿದೆಯೆಂದು ಹೇಳಿದಳು. ಆಗ ಆ ಬಡವಿಯ ಚಿಕ್ಕ ಚೊಕ್ಕವಾದ ಹಳೆಯ ಮನೆ ಅಂಕಣದಲ್ಲಿ ಬಸವ ಹೊಟ್ಟೆಯುಬ್ಬಿ ಸತ್ತಿದ್ದ. ಅಚ್ಚ ಬಿಳಿಯ ಬಣ್ಣದ ಮುದ್ದು ಮುದ್ದಾದ ಬಸವ ಒದ್ದಾಡಿ ಸತ್ತಿದ್ದರಿಂದ ಅವನ ಮೈಯೆಲ್ಲ ಸಗಣಿ, ಉಚ್ಚಿಯ ಬಣ್ಣ ಮೆತ್ತಿಕೊಂಡಿತ್ತು. ಆಗ ಸತ್ತ ಬಸವನ ಮೇಲೆ ಸ್ವಾಮಿಗಳು ತುಂಬಿದ ಕೊಡ ನೀರನ್ನು ಮೈಮೇಲೆ ಚಿಮ್ಮಿಸಿ, ಜೋಳಿಗೆಯಿಂದ ಒಂದಿಷ್ಟು ಬೂದಿಯನ್ನು ತೆಗೆದು, ಅದರ ಮೈತುಂಬ ಸವರಿ 'ಏಳು ಬಸವಾ' ಎಂದು ಡುಬ್ಬ ಚಪ್ಪರಿಸಿದರು. ಮಲಗಿತ್ತೇನೋ ಎಂಬುವಂತೆ ಬಸವ ದಿಗ್ಗನೆ ಎದ್ದು ನಿಂತಿತು ಬಸವ.

ಸತ್ತ ಹೋರಿಯನ್ನು ಹೊತ್ತೊಯ್ಯಲು ಬಂದ ಮಾದರ ಮಂದಿ ಕೇಳಿದರು ಯವ್ವಾ ಎಲ್ಲಿದೆ ಹೋರಿ ತೋರಿಸು ಎಂದು ಕೇಳಿದಾಗ ಆ ಮುದುಕಿ ಚೆನ್ನಮ್ಮ ಬದುಕಿದ ಬಸವನನ್ನು ತೋರಿಸಿದಳು. ಆಗ ಆ ಮಾದರ ಮಂದಿ ಏನವ್ವ ನೀನು ಹೇಳೋದು, ಹೋರಿ ಸತ್ತಾದ ಅಂತ ಹೇಳಿ ಕಳಿಸಿದ್ದೀ.

ಒಯ್ಯಾಕ ಅಂತ ನಾವು ಬಂದ್ರೆ, ಬದುಕಿದ ಹೋರಿಯನ್ನು ತೋರಿಸ್ತಿ, ನಿನಗೇನು ಅರವೋ ಮರವೋ ಎಂದು ಕೇಳಿದರು. ಆ ಮುದುಕಿ ಹೇಳಿದಳು ಇಲ್ಲಪ್ಪ ಹೋರಿ ಸತ್ತಿತ್ತು ಖರೆ. ಆದರೆ ಆ ನಮ್ಮಪ್ಪ ಶರಣ ಬಂದು ಬದುಕಿಸಿದ ಎಂದು ಹೇಳಿದಳು ಮುದುಕಿ. ಇದನ್ನು ಕೇಳಿದ ಮಾದರ ಮಂದಿಗೆ ಆಶ್ಚರ್ಯವಾಯಿತು. ಆಗ ಈ ಜನರೆಲ್ಲಾ ಸೇರಿ ಆ ಶರಣರ ಹತ್ತಿರ ಹೋಗಿ ತಾತಾ ನಿಮ್ಮ ಹೆಸರು ಏನು, ಯಾವ ಊರು, ನಿಮ್ಮ ಗುರಿಯೇನು ಹೀಗೆ ಮುಂತಾದ ಪ್ರಶ್ನೆಗಳನ್ನು ಕೇಳಿದರು. ಆಗ ಸ್ವಾಮಿಗಳು ನನಗೆ ಹೆಸರಿಲ್ಲ. ನಾಮರೂಢಗಳು ದೇಹಕ್ಕಲ್ಲದೆ, ಆತ್ಮನಿಗಲ್ಲ. ನಾಮರೂಢ ರೂಪಗಳಿಗೆ ಒಳಗಾದವನಲ್ಲ ನಾನು. ಶಬ್ದ, ರೂಪ, ರಸ, ಗಂಧ, ಸ್ಪರ್ಶಗಳಿಲ್ಲದವನು. ಇದ್ದದೇ ಊರು, ಬರುವುದೊಂದು ಊರು, ಹೋಗುವುದೊಂದು ಊರು. ನಡು ಇರುವಷ್ಟು ಕಾಲದ ನಾಲ್ಕು ದಿನದ ಬಾಳುವೆಯೆ ಊರೊಂದು, ಇನ್ನೂ ಬ್ರಹ್ಮ ಸಾಕ್ಷಾತ್ಕಾರ, ಲೋಕೋದ್ಧಾರ ನನ್ನ ಗುರಿ ಎಂದು ನುಡಿದರು ಶರಣರು(ಬೂದಿಬಸವನ ಚರಿತಾಮೃತ, ಶ್ರೀಮುಕ್ಕಣ್ಣ ಕರಿಗಾರ, ಪು.೯-೧೦). ಇದನ್ನೆಲ್ಲ ಕೇಳಿದ ಆ ಜನರು ಹೆಸರಿಲ್ಲದೆ ಇವರನ್ನು ಏನೆಂದು ಕರೆಯುವುದೆಂದು ಚರ್ಚೆಯಲ್ಲಿ ಮಗ್ನರಾದರು. ಒಬ್ಬ ಒಂದು ಹೆಸರನ್ನು ಹೇಳಿದರೆ, ಮತ್ತೊಬ್ಬನು ಇನ್ನೊಂದು ಹೆಸರು ಹೇಳಿದನು. ಹೀಗೆ ತಮತಮಗೆ ತೋಚಿದ ಹೆಸರುಗಳನ್ನು ಸೂಚಿಸಲಾರಂಭಿಸಿದರು. ಆ ಸನ್ಯಾಸಿಯನ್ನು ಏನೆಂದು ಕರೆಯುವುದೆನ್ನುವ ವಿಷಯ ಒಮ್ಮತಕ್ಕೆ ಬರಲಿಲ್ಲ. ಕೊನೆಗೆ ಆ ಗುಂಪಿನಲ್ಲಿದ್ದ ಬೀರಪ್ಪ ಎಂಬುವನೂ ನನ್ನದೊಂದು ಸಲಹೆ ಎಂದು ಕೇಳಿದನು. ಜನರು ಏನು ಹೇಳಿ ಎಂದು ನುಡಿದರು. ಆಗ ಅವನು ತಾತನವರು ಬೂದಿ ಚೆಲ್ಲಿ ಸತ್ತು ಹೋಗಿರುವ ಬಸವನನ್ನು ಎಬ್ಬಿಸಾರ, ಅದಕ್ಕೆ ಬೂದಿ ಮತ್ತು ಬಸವ ಎಂದು ಕೂಡಹಾಂಗ ಬೂದಿಬಸವ ಅಂದರಾಯಿತು. ಇದು ಎಲ್ಲರಿಗೂ ಸರಿ ಎನಿಸಿತು. ಹೌದು ಹೌದು ಬೂದಿಬಸವ ಎಂದು ಕರೆಯೋಣ ಎಂದು ಆ ಜನರೆಲ್ಲ ನಿರ್ಧರಿಸಿದರು. ಶಿವ, ಶಿವಮಹಾದೇವ ಬೂದಿಬಸವ ಮಹಾಯೋಗಿಗೆ ಜಯವಾಗಲಿ ಎಂದು ಜಯಘೋಷ ಮಾಡಿದರು. ಅಂದಿನಿಂದ ಸ್ವಾಮಿಗಳಿಗೆ ಬೂದಿಬಸವ ಎಂಬ ನಾಮ ಬಂದಿತು. ಮತ್ತೆ ಗುಂಪಿನಲ್ಲಿದ್ದ ಭಕ್ತನೊಬ್ಬ ಕೇಳಿದ ತಾತಾ ಎಲ್ಲರಿಗೂ ಬೂದಿ ಕೊಡುತ್ತೀಯಲ್ಲಾ, ಅಂಥಾದ್ದು ಏನಾದ ಬೂದಿಯೊಳಗ ಎಂದು ಕೇಳಿದಾಗ ಸ್ವಾಮಿಗಳು ನಗು ನಗುತ್ತಾ ಹೇಳಿದರು. ತಮ್ಮ ಈ ಬೂದಿ ಸಣ್ಣದಲ್ಲೊ ಶಿವನಿರುವುದಾದರೂ ಎಲ್ಲಿ? ಶಿವನು ಬೂದಿಬಡಕನಲ್ಲವೇನು? ಊರ ಸುತ್ತ ಹೆಣಗಳನ್ನು ಸುಡುವ ಕಾಡು ಸುಡಾಗಾಡಿನಲ್ಲಪ್ಪಾ, ಶಿವನು ಬಳಿದುಕೊಳ್ಳುವ ಈ ಬೂದಿಗಿಂತ ಯಾವುದು ದೊಡ್ಡದಿದೆ. ಶಿವನಿರುವುದೇ ಬೂದಿಯೊಳಗೆ. ಜಗತ್ತಿನಲ್ಲಿ ಶಿವನಿಗೆ ಪ್ರಿಯವಾದ ಬೂದಿಯೇ ಶಿವಶರಣರ ಅಸ್ತ್ರ, ಆಸ್ತಿ. ಆಗದುದು ಆಗುವುದು ಬೂದಿಯಿಂದ

ಬೇಗ ಬೇಸರಿಕೆಗಳಿವುವು ಬೂದಿಯಿಂದ
ಬಾಗಿ ಬರುವುವು ಧನ-ಕನಕ ಸಿರಿ ಸಂಪತ್ತುಗಳೇ ಬೂದಿಯಿಂದ

ರೋಗ ಹೋಗುವವು ಯೋಗ ಫಲಿಸುವವು

ತ್ಯಾಗ ಬಲಿಯುವುದು, ಸಕಲವು ಸಿದ್ಧಗೊಂಡಿಹದೇ ಬೂದಿಯಲಿ

ರಾಗದಿಂದೊಲಿದು ಶಿವನಿತ್ತಹ ಕಾಣ್ಕೆಯೀ ಬೂದಿ ಜಗದಾದ ಬೂದಿ.

ಎಂದು ಮಹಿಮೆಯನ್ನು ಹಾಡಿದರು. ಆಗ ಈ ಭಕ್ತರು ಅಸಾಧ್ಯವಾದುದು ತಾತಾ ನಿನ್ನ ಬೂದಿಯ ಲೀಲೆ ಎಂದು ಪ್ರಣಾಮಗೈದರು (ಶ್ರೀ.ಬೂ.ಚ, ಮುಕ್ಕಣ್ಣ ಕರಿಗಾರ, ಪು.೧೭-೧೮).

೩. ಮಿಣಯಿಲ್ಲದೆ ಎಳೆದ ತೇರು

ಗಬ್ಬೂರು ಜಾತ್ರೆಗೆ ಸುತ್ತ ಹತ್ತಾರು ಕಡೆಯಿಂದ ಅಸಂಖ್ಯಾತ ಭಕ್ತರುಗಳಾಗಮಿಸಿ, ದರ್ಶನಾರ್ಶೀವಾದ ಪಡೆಯಲಾರಂಭಿಸಿದರು. ಬೂದಿಬಸವನ ಕೀರ್ತಿ ಹೆಚ್ಚಿದಂತೆ ಶಿವನ ಮಹಿಮೆ ಹರಡತೊಡಗಿತು. ದಿಕ್ಕು ದಿಕ್ಕುಗಳಿಗೆ ಜನ ನಿರ್ಭೀತಿಯಿಂದ ಶಿವಪೂಜೆ, ಅರ್ಚನೆಗಳನ್ನು ಮಾಡತೊಡಗಿದರು. ಗುಡಿಗುಂಡಾರಗಳು, ಸಿಂಗಾರಗೊಂಡವು. ಬಂಗಾರವರ್ಣದ ಕಲಶಗಳಿಂದ ಶೋಭಿತಗೊಂಡವು. ಮಂಗಳವಾದ್ಯಗಳು ಮೊಳಗಲಾರಂಭಿಸಿದವು. ಶಾಸ್ತ್ರ, ತರ್ಕ, ವಿಚಾರ, ಅನುಭವ ಗೋಷ್ಠಿಗಳು ನಿರಾಂತಕವಾಗಿ ನಡೆಯಲಾರಂಭಿಸಿದವು.

ಗಬ್ಬೂರಿನಲ್ಲೂ ಇನ್ನಿಲ್ಲದ ಸಡಗರ, ಶಿವರಾತ್ರಿಯ ಸಂಭ್ರಮ ಒಂದೆಡೆಯಾದರೆ ಆ ಊರ ಜಾತ್ರೆಯ ವೈಭವ ಮತ್ತೊಂದೆಡೆ. ಹತ್ತಾರು ದಿನಗಳ ಹಿಂದೆಯೇ ಅಲಂಕೃತಗೊಂಡಿತು ಊರು ಕೇರಿ. ತಳಿರು-ತೋರಣಗಳಿಂದ ಸಿಂಗಾರವಾದ ಮನೆಗಳು ಸುಣ್ಣ-ಬಣ್ಣಗಳಿಂದ ಕಂಗೊಳಿಸುವ ಗೋಡೆಗಳು ಸಾಲಂಕೃತ ದೀಪಗಳಿಂದ ಸ್ವಾಗತಿಸುವ ಬೀದಿಗಳು. ಆ ಊರಿನಲ್ಲೆಡೆ ಕಾಣುತ್ತಿದ್ದ ದೃಶ್ಯ ಮಠದಲ್ಲಿಯೂ ಅಂದು ವಿಶೇಷವಾದ ಪೂಜೆ, ತೇರನ್ನು ಎಣ್ಣೆ ಬಳಿದು ನಯಗೊಳಿಸಿ ಮಾವಿನ ತೋರಣಗಳಿಂದ ಅಲಂಕರಿಸಿ ಬಾಳೆಯ ದಿಂಡುಗಳನ್ನು ಕಟ್ಟಿ ಸಿಂಗರಿಸಲಾಗಿತ್ತು. ತುಟ್ಟ ತುದಿಗೆ ಕೆಳಗೆ ಸಾಯಂಕಾಲ ಆರುಘಂಟೆ, ರಥೋತ್ಸವದ ಸಿದ್ಧತೆ ನಡೆದಿದೆ. ಹತ್ತಾರು ಸಾವಿರ ಜನ ಬಂದಿದ್ದಾರೆ. ಮಠದ ಸುತ್ತ ಎಲ್ಲಿ ನೋಡಿದರೂ ಜನ ಕಾಣುವವರು. ಎತ್ತು ಬಂಡಿಗಳು, ಕಾಯಿ-ಹರಕೆಗಳಿಂದ, ಭಕ್ತಿ ಪರವಶರಾದ ಜನಸ್ತೋಮ ಇದ್ದಕ್ಕಿದಂತೆ ನಿಜಾಮನ ದಂಡಿನಾಗಮನ, ಕುದುರೆ, ಆನೆ, ಒಂಟೆಗಳನ್ನೇರಿ ಬಂದರು ಭಯ ಭೀತಿಯಾವರಿಸಿತು. ಏನೋ ಆಪತ್ತು ಕಾದಿದೆ ಎಂದುಕೊಂಡರು. ಸಾವಿರ ಸಂಖ್ಯೆಯ ನಿಜಾಮನ ಸೈನಿಕರು ಮಠದ ಪ್ರಾಂಗಣದಲ್ಲಿ ಬೀಡು ಬಿಟ್ಟರು. ನಿಜಾಮನ ಪ್ರತಿನಿಧಿ ನೇರವಾಗಿ ಮಠದೊಳಗೆ ನಡೆದ ತೇರನ್ನೆಳೆಯುವ ಸಿದ್ಧತೆಯಲ್ಲಿ ಕಾವಿ ಧರಿಸಿ ಕುಳಿತಿದ್ದರು. ಬೂದಿ ಬಸವನ ಸ್ವಾಮಿಗಳನ್ನು ನಿಜಾಮನ ಪ್ರತಿನಿಧಿಯು ನೀನೆನೋ ತೇರನೆಳೆಸುವ ಜಂಗಮ. "ತೇರನ್ನೆಳೆಯಕೂಡದು ಇದು ನಿಜಾಮರ ಆಜ್ಞೆ" ಎಂದು ಹೇಳಿದನು.

ಅದಾರಿಂದಲೂ ಸಾಧ್ಯವಿಲ್ಲ. ಶಿವಶರಣನಾರಿಗೂ ಅಂಜುವುದಿಲ್ಲ. ನಿಜಾಮನಾದರೇನು, ಚಕ್ರವರ್ತಿಯಾದರೇನು, ಶಿವಶರಣರನಿಗೆ ಯಾರ ಹಂಗು, ಅಳುಕುಗಳಿಲ್ಲ. ಶಿವನಿಗಲ್ಲದೆ ಮತ್ತಾರಿಗೂ ತಲೆ ಬಾಗರು ಶಿವಶರಣರು. ತೇರಿನ ಉತ್ಸವ ಯಾವ ಕಾಲಕ್ಕೂ ಯಾವ ಕಾರಣಕ್ಕೂ ನಿಲ್ಲದೆಂದು ಗುಡುಗಿದರು ಸ್ವಾಮಿಗಳು. ಅಗ್ನಿಯನ್ನು ಉಗುಳುವಂತಿದ್ದ ಕಣ್ಣುಗಳು, ಕೋಪದಿಂದ ಕುದಿಯುತ್ತಿರುವ ಸ್ವಾಮಿಯ ಮುಖವನ್ನು ಕಂಡು ನಿಜಾಮನ ಪ್ರತಿನಿಧಿಗೆ ಹೆದರಿಕೆಯಾಯಿತು. ಇಂದು ತೇರನ್ನು ಎಳೆಯಬೇಕು ಎಂದು ಮತ್ತೆ ಸ್ವಾಮಿಗಳು ಗುಡುಗಿದರು. ಆಗ ನಿಜಾಮನ ಪ್ರತಿನಿಧಿಗಳು ನಾವು ಎಳೆಯುತ್ತೇವೆಂದರು. ತೇರನ್ನು ಎಳೆಯತೊಡಗಿದರು. ಸಾವಿರ ಸಾವಿರ ಸೈನಿಕರು ಎಳೆದರು ಜಗ್ಗಲಿಲ್ಲ ಜಮ್ಮನ್ನಲಿಲ್ಲ ತೇರು. ಮತ್ತೆ ಕುದುರೆಗಳನ್ನು, ಅನೆ, ಒಂಟೆಗಳನ್ನು ಕಟ್ಟಿದರು. ಬಗ್ಗದೇ ನಿಶ್ಚಲವಾಗಿ ನಿಂತಿತ್ತು ತೇರು. ಬಳಿಯಿರುವ ಅಚಲ ಪರ್ವತದಂತೆ. ಗಂಟೆಗಟ್ಟಲೆ ಪ್ರಯತ್ನಿಸಿ ಸೋತು ನಿರಾಶೆಗೊಂಡಿತು ನಿಜಾಮನ ಸೇನೆ. ಉಪಾಯ ಕಾಣದೆ ಅಪಾಯವನ್ನರಿತ ನಿಜಾಮನ ಪ್ರತಿನಿಧಿ ಸ್ವಾಮಿಗಳು ತಾವೇ ಈ ತೇರನ್ನೆಳೆಸಬೇಕು ಎಂದು ನುಡಿದರು.

ಭಕ್ತರಿಗೆ ಭಯಗೊಳ್ಳದಿರುವಂತೆ ಸಂದೇಶ ಕಳುಹಿಸಿದ ಸ್ವಾಮಿ ತೇರಿಗೆ ಕಟ್ಟಿದ ಮಿಣಿಯನ್ನು ಬಿಚ್ಚುವಂತೆ ಆಜ್ಞಾಪಿಸಿದನು. ಜನರಿ ಆಶ್ಚರ್ಯ ಆದರೂ ಆಜ್ಞೆಯನ್ನು ಪಾಲಿಸಬೇಕಲ್ಲ. ಶಿಷ್ಯರೊಂದಿಗೆ ಹೊರಬಂದ ಬೂದಿಬಸವಸ್ವಾಮಿ ಆವೇಶದ ಮೂರ್ತಿಯಾಗಿದ್ದರು. ನೋಡಿರಿಂದು ಶಿವನಾಟ, ಶಿವಶರಣರ ಮಾಟ ಎನ್ನುತ್ತಾ ಶಿಷ್ಯ ಭೀರಪ್ಪನ ಕೈಯಲ್ಲಿಯಿದ್ದ ಕಾಯೊಂದನ್ನು ತೆಗೆದು ತೇರಿಗೆ ಹೊಡೆದರು. ಬಾ ಎಂದು ಕರೆದರು. ಸಾಗಿತು ತೇರು, ತೇರು ಸಾಗಿತು. ನಿಜಾಮ ಸೇನೆ ಬೆರಗಾಗಿ ನೋಡಿತು. ಈ ಅದ್ಭುತ ಕಂಡು ಭಕ್ತರು ಹರಸಿ ಹಾಡಿದರು. ನಿಶ್ಚಲವಾಗಿದ್ದ ತೇರು ಚಲಿಸತೊಡಗಿತು. ಜಡದಲ್ಲಿ ಜಂಗಮವು ಒಡ ಮೂಡಿತ್ತು. ಮಿಣಿ ಇಲ್ಲದೆ ತೇರು ಎಳೆದಿತ್ತು. ಸ್ವಾಮಿಯವರು ಮುಂದೆ ಮುಂದೆ ನಡೆದಂತೆ ಹಿಂದೆ ಹೋಗುತ್ತಿತ್ತು ತೇರು. ಗುರುವನ್ನು ಹಿಂಬಾಲಿಸುವ ಶಿಷ್ಯನಂತೆ ಬಂದಿತು. ಜಯಘೋಷ ಕೂಗುತ್ತಾ ಜನ ಹರ್ಷೋದ್ಗಾರ ಮಾಡುತ್ತಿದ್ದರು. ಎದುರು ಪಾದಕ್ಕೆ ಹೋಗಿ ಮರಳಿ ಬಂದಿತು. ಮಿಣಿಯಿಲ್ಲದೆ ಎಳೆದ ತೇರು ಗಣನೆಗೆಟುಕದ ಗಣನಾಯಕನ ತೇರು, ಭಕ್ತಿಯನ್ನಾದಲ್ಲಿ ನಮಿಸಿ ಜನ ಜಾತ್ರೆ ಮಾಡಿ ಹೊರಟಿತು. ನಿಜಾಮ ಸೇನೆ ಕತ್ತಲಲ್ಲಿ ಇರುಳೆಲ್ಲಾ ಹೊರಳಾಡಿತು. ನಂತರ ಅವರು ಸ್ವಾಮಿಯವರನ್ನು ಕಂಡು ಸಾಷ್ಟಾಂಗವೆರಗಿ ಅಪರಾಧವಾಯಿತೆನ್ನಿಂದ ಮನ್ನಿಸಿ ಎಂದು ಬೇಡಿ ಮಿಣಿಯಿಲ್ಲದ ತೇರು ಎಳೆಯಿಸಿದ ಅದ್ಭುತ ಲೀಲೆಗಾಗಿ ನಿಜಾಮ ಸರಕಾರವು ನಿಮಗೆ ಇನಾಮು ಕೊಡುತ್ತದೆ ಇಗೋ ಈ ಕುದುರೆ ಎಲ್ಲೆಯವರೆಗೆ ಓಡುವುದೋ ಅಲ್ಲಿಯವರೆಗಿನ ಭೂಮಿ ನಿಮ್ಮದು ಎಂದು ಹೇಳಿ ಒಂದು ಬಿಳಿಯ ಬಣ್ಣದ ಅಶ್ವವನ್ನು ಓಡಿಸಿದರು. ನಾಗಾಲೋಟದಿಂದ ಓಡಿದ ಕುದುರೆ ೨೪ ಕೊರಗಿನಷ್ಟು ಓಡಿಯಾದ ಮೇಲೆ ನಿಂತಿತ್ತು. ಅಷ್ಟು ಭೂಮಿಯನ್ನು ನಿಜಾಮನ ಪ್ರತಿನಿಧಿ ಮಠದ ಹೆಸರಿನಲ್ಲಿ

ಬರೆದುಕೊಟ್ಟನು. ಇಂದಿಗೂ ಗಬ್ಬೂರಿನಲ್ಲಿ ನಿಜಾಮ ಸರಕಾರ ಕೊಟ್ಟ ಭೂಮಿಯನ್ನು "ತೇರಿನ ಹೊಲ" ಎಂದೇ ಕರೆಯುತ್ತಾರೆ. ಈ ರೀತಿಯಾಗಿ ಬೂದಿಬಸವಸ್ವಾಮಿಯವರು ಮಿಣೆಯಿಲ್ಲದೆ ತೇರನ್ನು ಎಳೆದರು.

ಬೂದಿಯಿಂದ ಮಾಡಿದ ಲೀಲೆಗಳು

ಭಕ್ತರ ಸಮಸ್ಯೆಗಳನ್ನು ಬೂದಿಯಿಂದ ಪರಿಹಾರಗೊಳಿಸುತ್ತಿದ್ದರು. ಇವರ ಬೂದಿಶಕ್ತಿಯನ್ನು ಕಂಡು ಭಕ್ತರಿಗೆಲ್ಲ ಆಶ್ಚರ್ಯವಾಗುತ್ತಿತ್ತು. ಬೂದಿ ಬಡುಕ ಶಿವನನ್ನು ಇವರಲ್ಲಿ ಕಾಣುತ್ತಿದ್ದರು. ಒಂದು ದಿನ ಸಾಯಂಕಾಲ ಸ್ವಾಮೀಜಿಯವರು ನೆರೆದಿದ್ದ ಭಕ್ತರಿಗೆ ಶಿವನ ಕುರಿತು ಪ್ರವಚನ ಮಾಡುತ್ತಿದ್ದರು. ದೇವರು ಎಲ್ಲ ಕಡೆಗೂ ಇದ್ದಾನೆ. ಅಣುರೇಣು ತೃಣಕಾಷ್ಠದಲ್ಲಿಯೂ ದೇವರಿದ್ದಾನೆ. ಅಷ್ಟೇಕೆ ನಮ್ಮ ಆತ್ಮದಲ್ಲಿಯೂ ದೇವರಿರುವನು. ಯಾರ ಹೃದಯ ಪರಿಶುದ್ಧವಾಗಿರುತ್ತದೆಯೋ ಅವರ ಹೃದಯದಲ್ಲಿ ದೇವರು ನೆಲೆಸಿರುತ್ತಾನೆ. ಆತ್ಮಲಿಂಗದ ಪೂಜೆಯೇ ಶ್ರೇಷ್ಠವಾದದ್ದು. ಆದುದರಿಂದ ಎಲ್ಲರೂ ನಮ್ಮ ದೇಹದಲ್ಲಿರುವ ಆತ್ಮಲಿಂಗವನ್ನು ಪೂಜಿಸಬೇಕು. ಹೀಗೆಯೇ ಸ್ವಾಮೀಜಿಯವರ ಪ್ರವಚನ ಸಾಗಿತ್ತು. ಇದನ್ನೆಲ್ಲಾ ಆಲಿಸಿದ ಓರ್ವ ಭಕ್ತ ಮನೆಗೆ ಬಂದನು. ಮನೆಯಲ್ಲಿ ಹೆಂಡತಿ ಗಾಢ ನಿದ್ರೆಯಲ್ಲಿದ್ದಾಳೆ. ತಕ್ಷಣ ಅವನಿಗೆ ಸ್ವಾಮಿಗಳ ಮಾತು ನೆನಪಿಗೆ ಬಂದಿತು. ದೇವರು ನಮ್ಮ ದೇಹದಲ್ಲಿಯೇ ಇದ್ದಾನೆ ಎಂದು ಹೇಳಿದ್ದಾರೆ. ಹಾಗಾದರೆ ನನ್ನ ಹೆಂಡತಿಯ ದೇಹದಲ್ಲಿಯೂ ದೇವರಿರುತ್ತಾನೆ. ಈ ದಿನ ಏನಾದರಾಗಲಿ ಇದನ್ನು ಪರೀಕ್ಷಿಸಿಯೇ ಬಿಡೋಣ ಎಂದು ಹರಿತವಾದ ಕತ್ತಿಯೊಂದನ್ನು ತೆಗೆದುಕೊಂಡು ಮಲಗಿದ್ದ ಹೆಂಡತಿಯಲ್ಲಿಗೆ ಬಂದ. ಅತ್ಯಂತ ಸುಖನಿದ್ರೆಯಲ್ಲಿ ಹೆಂಡತಿ ಮಲಗಿದ್ದಾಳೆ. ಆದರೆ ಅವನಿಗೆ ದೇಹದಲ್ಲಿರುವ ದೇವರನ್ನು ನೋಡುವಾಸೆ. ತಡ ಮಾಡದೇ ಕತ್ತಿಯಿಂದ ಹೆಂಡತಿಯ ಹೊಟ್ಟೆಯನ್ನು ಸೀಳಿದ. ನೋಡುತ್ತಾನೆ ಅಲ್ಲಿ ಯಾವ ದೇವರೂ ಕಾಣಿಸುತ್ತಿಲ್ಲ. ಬರೀ ರಕ್ತ, ಮಾಂಸ, ನರ-ನಾಡಿಗಳೇ ಕಾಣಿಸುತ್ತಿವೆ. ದೇವರನ್ನು ಕಾಣದೇ ಕ್ರೋಧಗೊಂಡ. ಸ್ವಾಮಿಗಳು ಸುಳ್ಳು ಹೇಳಿದ್ದಾರೆ ಎಂದು ಹೆಂಡತಿಯ ಹೊಟ್ಟೆಯನ್ನು ಸೀಳಿದ ಕತ್ತಿಯನ್ನು ತೆಗೆದುಕೊಂಡು ಸಿಟ್ಟಿನಿಂದ ಆವೇಶದಲ್ಲಿ ಮಠಕ್ಕೆ ಧಾವಿಸಿದ.

ಅವನನ್ನು ಕಂಡ ಸ್ವಾಮಿ ಏನೋ ಅನಾಹುತವಾಗಿದೆ ಎಂದುಕೊಂಡರು. ಬಂದವನೇ "ನೀನು ಹೇಳುತ್ತಿರುವುದೆಲ್ಲಾ ಸುಳ್ಳು. ದೇವರು ದೇಹದಲ್ಲಿದ್ದಾನೆಯೆಂಬ ನಿನ್ನ ಮಾತು ಕೇಳಿ ನನ್ನ ಹೆಂಡತಿಯನ್ನು ಸೀಳಿಬಿಟ್ಟಿದ್ದೇನೆ. ಸತ್ತಿರುವ ನನ್ನ ಹೆಂಡತಿಯನ್ನು ಬದುಕಿಸು ಇಲ್ಲವಾದರೆ ನಿನ್ನನ್ನು ಕೊಲ್ಲುತ್ತೇನೆ" ಎಂದು ಆರ್ಭಟಿಸಿದ. ಶಾಂತವಾಗಿ ಎಲ್ಲವನ್ನು ಆಲಿಸಿದ ಸ್ವಾಮಿಗಳು ಆತನ ಜೊತೆಗೆ ಅವನ ಮನೆಗೆ ಧಾವಿಸಿದರು. ಅವನ ಹೆಂಡತಿ ರಕ್ತದ ಮಡುವಿನಲ್ಲಿ ಬಿದ್ದಿದ್ದಾಳೆ. ಕ್ಷಣ ಹೊತ್ತು ಶಿವ ಧ್ಯಾನ ಮಾಡಿದ ನಂತರ ಬೂದಿಯನ್ನು ತೆಗೆದುಕೊಂಡು ಸತ್ತವಳ ಮೈಮೇಲೆ ಪ್ರೋಕ್ಷಿಸಿದ. ನಿದ್ದೆಯಿಂದ ಎದ್ದವಳಂತೆ

ಎದ್ದು ಬಿಟ್ಟಳು. ನಂತರ ಸ್ವಾಮಿ "ಹುಚ್ಚಾ ದೇವರನ್ನು ಕಾಣುವ ರೀತಿ ಇದಲ್ಲ. ಶಿವನು ಹೊರಗಿನ ಕಣ್ಣಿಗೆ ಕಾಣಲಾರ. ನಮ್ಮ ಒಳಗಣ್ಣು ತೆಗೆದಿರಬೇಕು. ಒಳಗಣ್ಣಿನಿಂದ ನೋಡಿದಾಗ ಮಾತ್ರ ಶಿವನ ದರ್ಶನ ಸಾಧ್ಯ ಎಂದು ಅವನಿಗೆ ಹೇಳಿದರು. ಈ ರೀತಿಯಾಗಿ ಬೂದಿಯಿಂದ ತಮ್ಮ ಲೀಲೆಯನ್ನು ತೋರಿಸಿದರು.

ಬೂದಿಯ ಬಲದಿಂದ ಜನರ ರೋಗ, ಪಿಶಾಚಿಬಾಧೆಗಳನ್ನು, ಮಕ್ಕಳಿಲ್ಲದ ತಾಯಂದಿರಿಗೆ ಮಕ್ಕಳ ಭಾಗ್ಯವನ್ನು, ಸರ್ವ ರೋಗಗಳಿಗೆ, ಎಲ್ಲಾ ಇಷ್ಟಾರ್ಥಗಳಿಗೆ ಬೂದಿಯೇ ಕಲ್ಪವೃಕ್ಷವಾಗಿದೆ.

ಇಂದಿಗೂ ಗಬ್ಬೂರಿನಲ್ಲಿ ಪ್ರತಿ ವರ್ಷವೂ ಮಾಘಮಾಸದ ಶುದ್ಧ ದ್ವಾದಶಿ ದಿನದಂದು ಬಹುದೊಡ್ಡ ಜಾತ್ರೆಯಾಗುತ್ತದೆ. ಜಾತ್ರೆಯ ಮೊದಲು ಸಾಮೂಹಿಕ ವಿವಾಹಗಳು, ಅಯ್ಯಚಾರ, ಹುಚ್ಚಯ್ಯ, ಕಡುಬಿನ ಕಾಳಗ ಮನೋರಂಜನೆಗಾಗಿ ನಾಟಕಗಳ ಪ್ರದರ್ಶನ ಹೀಗೆ ಅನೇಕ ಕಾರ್ಯಕ್ರಮಗಳು ಜರುಗುತ್ತವೆ. ಅಲ್ಲದೆ ಪ್ರತಿ ಅಮಾವಾಸ್ಯೆ ಹುಣ್ಣಿಮೆಗೆ ಶಿವಾನುಭವ ಗೋಷ್ಠಿ ಜರುಗುತ್ತವೆ. ಈ ಮಠಕ್ಕೆ ಗಬ್ಬೂರಿನ ಸಕಲ ಸದ್ಭಕ್ತರು ನಡೆದುಕೊಳ್ಳುತ್ತಾರೆ.

ಗಬ್ಬೂರಿನ ಬಿಚ್ಚಾಲಿ ಮಠ

ಗಬ್ಬೂರಿನಲ್ಲಿರುವ ಮಠಗಳಲ್ಲಿ ಬೂದಿ ಬಸವೇಶ್ವರ ಮಠದಂತೆ ಬಿಚ್ಚಾಲಿ ಮಠವು ಒಂದಾಗಿದೆ. ಬಿಚ್ಚಾಲಿಯಲ್ಲಿ ಇದರ ಮೂಲ ಪೀಠವಿದ್ದು, ಇಲ್ಲಿನ ಮಠವು ಉಪಪೀಠ ಅಥವಾ ಶಾಖಾ ಮಠವಾಗಿದೆ. ಇದು ೧೦೦೮ ಸಂಸ್ಥಾನವಾಗಿದೆ. ರಾಯಚೂರು ಜಿಲ್ಲೆಯ ವಿವಿಧ ಭಾಗಗಳಾದ ಮಠಾಮಾರಿ, ಕಲ್ಲೂರು, ಕುರ್ಡಿ, ರಾಯಚೂರು, ಗಬ್ಬೂರು ಹೀಗೆ ಮುಂತಾದ ಕಡೆಗಳೆಲ್ಲ ಇದರ ಶಾಖಾ ಮಠಗಳಿವೆ. ಅದರಂತೆ ಗಬ್ಬೂರಿನಲ್ಲಿ ಕೂಡಾ ಒಂದು ಶಾಖಾ ಮಠವಿದೆ. ಈ ಶಾಖಾಮಠಕ್ಕೆ ಕೂಡಾ ಸ್ವಾಮಿಗಳಿದ್ದು, ಇದರ ಆಸ್ತಿ ಮತ್ತು ಕಾರ್ಯಗಳನ್ನು ನೋಡಿಕೊಂಡು ಹೋಗುವ ಕಾರ್ಯ ಇವರದಾಗಿದೆ. ಅಲ್ಲದೆ ಈ ಸ್ವಾಮಿಗಳು ಪ್ರವಚನ, ಪುರಾಣ, ಕೀರ್ತನೆ ಮುಂತಾದ ಕಾರ್ಯಕ್ರಮಗಳನ್ನು ಮಾಡುವ ಕಾರ್ಯ ಇವರದಾಗಿದೆ. ಈ ಮಠಕ್ಕೆ ಮೊದಲ ಗಬ್ಬೂರಿನ ಬಸಲಿಂಗಪ್ಪ ಎನ್ನುವರು ಚೆನ್ನವೀರ ಶಿವಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಈ ಮಠದ ಆಸ್ತಿಯನ್ನು ನೋಡಿಕೊಳ್ಳಲು ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಲು ಬಿಚ್ಚಾಲಿಯಲ್ಲಿ ಮುಖ್ಯ ಶಿವಾಚಾರ್ಯರು ಹಾಗೂ ಗಬ್ಬೂರಿನಲ್ಲಿ ಇವರ ಶಿಷ್ಯರು ಇದ್ದಾರೆ.

ಜನಕೋಟಿಯ ಒಳಿತಿಗಾಗಿ ಹಲವಾರು ರಚನಾತ್ಮಕ ಕಾರ್ಯಗಳನ್ನು ಅಳವಡಿಸಿಕೊಂಡು ಸಮಸ್ತ ಮಾನವ ಜನಾಂಗದ ನೈತಿಕ ಮಟ್ಟವನ್ನು ಮೇಲೆತ್ತಲು ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಮಠದ ಸ್ವಾಮಿಗಳು ತಮ್ಮ ತಮ್ಮ ಮಠಗಳ ಮೂಲಕ ಅಭೂತಪೂರ್ವವಾದ ನಾಡಸೇವೆಯನ್ನು ಗೈಯುತ್ತಲಿರುವರು. ಮಾಡಿದೆನೆಂಬುದು ಅವರ ಮನದಲ್ಲಿ ಹೊಳೆಯದೆ ವಿಶಿಷ್ಟವಾದ ವ್ಯಕ್ತಿತ್ವವನ್ನು ರೂಢಿಸಿಕೊಂಡು ಸಮಾಜ

ಜೀವಿಗಳನ್ನು ಸನ್ಮಾರ್ಗದಲ್ಲಿ ತರಲು ಅವರಿಗೆ ಉಪದೇಶ ಮಾಡುತ್ತಾ ಅವರು ತನು-ಮನ-ಧನಗಳನ್ನು ಸಮಾಜದ ಹಿತಕ್ಕಾಗಿ ನೀಡಲು ಪ್ರೇರೇಪಿಸುತ್ತಾ ಎಲ್ಲಾ ಕಾರ್ಯಗಳಿಗೆ ಚಾಲನೆ ನೀಡಿದ್ದಾರೆ. ಈ ಮಠವು ಗಬ್ಬೂರಿನ ಮಹಾನಂದೀಶ್ವರ ದೇವಾಲಯದ ಮುಂದಿನ ಭಾಗದಲ್ಲಿದೆ. ಇದಕ್ಕೆ ಗಬ್ಬೂರಿನ ಸಮಸ್ತ ಜನಾಂಗವು ನಡೆದುಕೊಳ್ಳುತ್ತದೆ.

ಜಾಗಟಕಲ್ ಬೆಟ್ಟದ ಬಸವೇಶ್ವರ

ದೇವದುರ್ಗ ತಾಲ್ಲೂಕಿನ ಹೆಸರುವಾಸಿಯಾದ ಮಠ ಈ ಜಾಗಟಕಲ್ ಬೆಟ್ಟದ ಬಸವೇಶ್ವರ. ಜಾಗಟಕಲ್ ಎಂದರೆ ಜಾಗಟೆಯ ಧ್ವನಿ ಅಥವಾ ಜಾಗೃತ ಮುಂತಾದ ಅರ್ಥವನ್ನು ಹೊಂದಿದೆ. ಕಲ್ಯಾಣದಲ್ಲಿ ಕ್ರಾಂತಿಯಾದಾಗ ಅನೇಕ ಶರಣರು ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ನೆಲೆಸಿದರು. ಅದರಲ್ಲಿ ಚನ್ನಬಸವಣ್ಣ ಶರಣ ಕೂಡಾ ಒಬ್ಬ. ಈತನು ಉಳುವಿ ಕ್ಷೇತ್ರಕ್ಕೆ ಪ್ರಯಾಣ ಬೆಳಸುವಾಗ ಬೆಟ್ಟದಲ್ಲಿ ಬಂದು ನೆಲೆಸಿದ. ಈತನೇ ಬೆಟ್ಟದ ಬಸವೇಶ್ವರ ಎಂದು ನಮಗೆ ಹೇಳಿಕೆಯ ಪ್ರಕಾರ ತಿಳಿದುಬಂದಿದೆ.

ಈ ಸ್ಥಳದಲ್ಲಿರುವ ಅನೇಕ ಗದ್ದುಗೆಗಳು ಇದಕ್ಕೆ ಸಂಬಂಧಿಸಿವೆ. ಅದರಲ್ಲಿ ಪ್ರಮುಖವಾಗಿರುವ ರಾಚಯ್ಯಪ್ಪನ ಗದ್ದುಗೆಯು ನಯನ ಮನೋಹರವಾಗಿದೆ. ಈ ರಾಚಯ್ಯಪ್ಪ ಯಾರು. ಎಲ್ಲಿಂದ ಬಂದು ನೆಲೆಸಿದ ಎಂಬುದಕ್ಕೆ ಅನೇಕ ಕಥೆಗಳಿವೆ.

ಈ ಗ್ರಾಮದ ಬಸವಣ್ಣನ ಭಕ್ತ, ಪೂಜಾರಿ ಗಡ್ಡಯ್ಯ. ಈತನಿಗೆ ಮಲ್ಲಮ್ಮ ಎಂಬುವಳು ಮಗಳು. ಮಹಾಸಾಧ್ವಿ ಮಲ್ಲಮ್ಮನನ್ನು ಯೋಗ್ಯ ವರನೊಂದಿಗೆ ವಿವಾಹ ಮಾಡಬೇಕೆಂಬ ಆಲೋಚನೆಯಲ್ಲಿ ಗಡ್ಡೆಯ್ಯಸ್ವಾಮಿ ಇರುವಾಗ ಸುಂದರ ತರುಣ ಭಸ್ಮಧಾರಣ ರುದ್ರಾಕ್ಷಿ ಮಾಲೆಯನ್ನು ಧರಿಸಿ ಈ ಜಾಗಟಕಲ್ ಗ್ರಾಮಕ್ಕೆ ದಯ ಮಾಡಿಸಿದವನೇ ಶಿವಶರಣ ರಾಚಯ್ಯಪ್ಪನ(ಚನ್ನಬಸವಣ್ಣನೇ ರಾಚಯ್ಯಪ್ಪ) ಕುಲ ಗೋತ್ರಗಳನ್ನು ವಿಚಾರಿಸಿದ. ಗ್ರಾಮದ ಹಿರಿಯರು ಗಡ್ಡೆಯ್ಯನಲ್ಲಿ ವಿಚಾರಿಸಿ ಈತನನ್ನು ಮನೆ ಅಳಿಯತನಕ್ಕೆಂದು ನಿರ್ಧರಿಸಿ ಮಹಾಸಾಧ್ವಿ ಮಲ್ಲಮ್ಮನನ್ನು ರಾಚಯ್ಯಪ್ಪನಿಗೆ ಧಾರೆಯೆರೆದು ಬಿಟ್ಟರು.

ಈಗ ರಾಚಯ್ಯಪ್ಪನ ಮನೆ ಅಳಿಯನಾಗಿ ಬೆಟ್ಟದ ಬಸವೇಶ್ವರನ ಕರುಣೆಯ ಕಂದನಾಗಿ ಪೂಜೆ ಪುನಸ್ಕಾರ ನಿಯಮ ನಿತ್ಯಗಳನ್ನು ಎಡೆಬಿಡದಂತೆ ಸಾಂಗೋಪಾಂಗವಾಗಿ ನಡೆಸಿಕೊಂಡು ಬರಹತ್ತಿದ್ದನು. ಕೃಷಿ ಕಾಯಕವೇ ಈತನ ಮೂಲ ಮಂತ್ರವಾಗಿತ್ತು. ಕಾಯಕವೇ ಕೈಲಾಸವೆಂಬ ಬಸವೇಶ್ವರರ ವಾಣಿಯಂತೆ ಈತನ ಕಾಯಕ ನಿಷ್ಠೆಯು ಬಲಿತಂತೆ ಬೆಟ್ಟದ ಮೇಲೆ ನೆಲೆಸಿರುವ ಬಸವೇಶ್ವರನ ಮೇಲೆ ನಂಬಿಕೆಯೂ ಏಕಾಗ್ರತೆಯ ನಿಷ್ಠೆಯೂ ಬಲಿತು ಬೆಳೆಯತೊಡಗಿತು.

ಇತ್ತ ಬಸವೇಶ್ವರನು ಭಕ್ತರ ಪರೀಕ್ಷೆಗಳನ್ನು ಮಾಡತೊಡಗಿದನು. ರಾಚಯ್ಯಪ್ಪನು ಹೊಲದಲ್ಲಿ ಗಳೇವು ಹೂಡಲು ಪ್ರಯತ್ನಿಸಿದಾಗ ಎತ್ತು ಒಂದು ಕಡೆ, ಕುಂಟೆ ಒಂದು ಕಡೆ ಹೀಗೆ ದಿಕ್ಕಿಗೊಂದು ಚದುರಿ ಹೋಗಹತ್ತಿದವು. ಇದನ್ನು ಕಂಡ ರಾಚಯ್ಯಪ್ಪ ಇದು ನನ್ನ ಗುರುವಿನ ಮಹಿಮೆಯೆಂದು ತಿಳಿದು ಸುಮ್ಮನಾದನು. ಕೊನೆಗೆ ಬಸವೇಶ್ವರನು ಇವನ ಭಕ್ತಿಯನ್ನು ಮೆಚ್ಚಿ ಶಿಷ್ಯನೇ ನಾನು ನಂಬಿದವರಿಗೆ ಶಂಭುವು. ಮರೆತು ನಿಂತವರಿಗೆ ನಾ ಕೊರಂಭುವು ಎಂದು ಹೇಳಿದನು.

ರಾಚಯ್ಯಪ್ಪನವರಿಗೆ ಬಸವೇಶ್ವರನ ವರವು ಸಿದ್ಧಿದಾಯಕವಾಗಿ ಸಹಸ್ರಾರು ಜನತೆಗೆ ದೀನ, ದರಿದ್ರ, ಕುರುಡ, ಕುಂಟ, ಬಂಜೆಯರ ಪಾಲಿಗೆ ಕಾಮಧೇನುವಾಗಿ ಕಲ್ಪವೃಕ್ಷವಾಗಿ ಹೀಗೆ ಅನೇಕ ಕಾರ್ಯಗಳನ್ನು ಮಾಡುವುದರ ಮೂಲಕ ಶರಣ ರಾಚಯ್ಯಪ್ಪ ಇಂದಿಗೂ ಹೆಸರುವಾಸಿಯಾಗಿ ಉಳಿದುಕೊಂಡಿದ್ದಾನೆ. ಈತನ ಗದ್ದುಗೆ ಜೊತೆಗೆ ಬೆಟ್ಟದಯ್ಯಪ್ಪ ತಾತಾ, ಸಾಂಬಯ್ಯ ತಾತಾ, ಶಂಕ್ರಯಪ್ಪ ತಾತಾ, ಬಸವಲಿಂಗಯ್ಯ ತಾತಾ ಗದ್ದುಗೆಗಳನ್ನು ಕಾಣಬಹುದಾಗಿದೆ. ಇಲ್ಲಿ ಅನ್ನದಾಸೋಹ, ಜ್ಞಾನ ದಾಸೋಹವನ್ನು ನೀಡುವುದರ ಜೊತೆಗೆ ಇದು ಧರ್ಮ ಕೇಂದ್ರವಾಗಿದೆ.

ದೇವದುರ್ಗ

ದೇವದುರ್ಗದಲ್ಲಿ ಪುರಾತನ ಕಾಲದಲ್ಲಿ ಒಟ್ಟು ಇಪ್ಪತ್ತೊಂದು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತದೆ. ಇವುಗಳೆಂದರೆ

ಶ್ರೀ ಶಿಖರ ಮಠ, ಶ್ರೀಘೋಷಿಮಠ, ಶ್ರೀ ಶಿವಶಂಕರ ಮಠ, ಶ್ರೀ ಕರಡಿಗುಡ್ಡ ಮಠ, ಶ್ರೀ ಕಂಬಳಿಯಪ್ಪನ ಮಠ, ಶ್ರೀಬಕ್ಕಯ್ಯನ ಮಠ, ಶ್ರೀ ಸಿರಿನಾಥಪ್ಪನಯ ಮಠ, ಶ್ರೀ ಫಲಹಾರಿ ಮಠ, ಶ್ರೀ ಶಿವಲಿಂಗಯ್ಯ ಮಠ, ಶ್ರೀ ಯಳಗಯ್ಯನ ಮಠ, ಶ್ರೀ ಭಿಕ್ಷುಕಯ್ಯನ ಮಠ, ಶ್ರೀ ಪೇಟೆ ಮಠ, ಶ್ರೀ ಪತ್ತೆ ಮಠ, ಶ್ರೀ ಮಟ್ಟಿ ಮಠ, ಶ್ರೀ ಗಣಾಚಾರಿ ಮಠ, ಶ್ರೀ ಸ್ಥಾವರ ಮಠ, ಶ್ರೀ ಮಹಾಂತಿನ ಮಠ, ಶ್ರೀ ಮಠಪತಿ ಮಠ, ಶ್ರೀ ದೊಡ್ಡಂಬಳಿ ಮಠ, ಶ್ರೀ ಜಾಗಟೆ ಮಠ, ಶ್ರೀ ಕಂಠಿ ಮಠ. ಈ ಎಲ್ಲಾ ಮಠಗಳಲ್ಲಿ ಈಗ ಶಿಖರಮಠದಲ್ಲಿ ಮಾತ್ರ ಮಠಾಧೀಶ್ವರರಿದ್ದು, ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಉಳಿದ ಮಠಗಳಲ್ಲಿ ಮಠಾಧೀಶರಿಲ್ಲದೆ, ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಸಿದ್ಧರಾಮೇಶ್ವರ ಶಿಖರಮಠ

ದೇವದುರ್ಗದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀಸಿದ್ಧರಾಮೇಶ್ವರ ಶಿಖರಮಠವು ಹನ್ನೆರಡನೆಯ ಶತಮಾನಕ್ಕೂ ಪೂರ್ವದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಉಜ್ಜಯಿನಿ ಪೀಠದ ಶಾಖಾಮಠವಾದ ಈ ಮಠವು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠವು ಪರಂಪರೆಯ ಐದನೆಯ ಗುರುಗಳಾದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳಿಂದ ಹೆಚ್ಚು ಹೆಸರು

ಪಡೆಯಿತು. ಇವರು ಶ್ರೀಶೈಲದ ಶಿಖರದಲ್ಲಿ ತಪಸ್ಸನ್ನು ಆಚರಿಸಿ ಶಿವಯೋಗ ಸಿದ್ಧಿಯನ್ನು ಗಳಿಸಿಕೊಂಡು ಬಂದವರಾಗಿದ್ದರು. ಇಂತಹ ಮಹಾನ್ ಯೋಗಿಗಳು ಬಂದು ನೆಲಸಿ, ಈ ಮಠದ ಅಧಿಕಾರವನ್ನು ವಹಿಸಿಕೊಂಡು ಹೆಚ್ಚು ಪ್ರಸಿದ್ಧಿಗೆ ತಂದ ಕಾರಣ ಈ ಮಠಕ್ಕೆ ಶ್ರೀ ಸಿದ್ಧರಾಮೇಶ್ವರ ಶಿಖರಮಠವೆಂದು ಹೆಸರು ಬಂದಿದೆ. ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀಶೈಲದಿಂದ ಬಂದು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಇಲ್ಲಿ ನೆಲೆಗೊಂಡ ಮೇಲೆ ಈ ಭಾಗದಲ್ಲಿ ಧಾರ್ಮಿಕ ಕಾರ್ಯಗಳು ಹೆಚ್ಚು ಚುರುಕುಗೊಂಡವಂತೆ. ಭಕ್ತರು ಸನ್ಮಾರ್ಗದಲ್ಲಿ ನಡೆಯತೊಡಗಿದರು. ಈ ಮಠದ ಕರ್ತೃ ಗುರುಗಳಾಗಿ ಶ್ರೀಮೂಕಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆ. ಇವರು ಗುಡ್ಡದ ಮೇಲೆ ಮಠವನ್ನು ಸ್ಥಾಪಿಸಿದ್ದ ಕಾರಣಕ್ಕೆ ಈ ಮಠಕ್ಕೆ ಶಿಖರಮಠ ಎಂಬ ಹೆಸರು ಬಂದಿದೆ. ಇವರು ಲಿಂಗೈಕ್ಯರಾದ ನಂತರ ಅಧಿಕಾರಕ್ಕೆ ಬಂದ ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು ಗುಡ್ಡದ ಮೇಲಿನಿಂದ ಈಗಿರುವ ಸ್ಥಳಕ್ಕೆ ಮಠವನ್ನು ಸ್ಥಳಾಂತರಿಸಿದ್ದಾರೆ. ಇವರ ನಂತರ ಶ್ರೀ ಮಹಾಂತಲಿಂಗ ಶಿವಾಚಾರ್ಯಸ್ವಾಮಿಗಳು ಗ್ರಾಮದ ಹೊರಭಾಗದಲ್ಲಿ ಚೌಕಿಮಠವನ್ನು ಸ್ಥಾಪಿಸಿ ಅಲ್ಲೇ ನೆಲಸಿ ಲಿಂಗೈಕ್ಯರಾದರು. ಇವರ ಸಮಕಾಲೀನರಾದ ಗಬ್ಬೂರಿನ ಶ್ರೀ ಬೂದಿ ಬಸವೇಶ್ವರರು ಈ ಚೌಕಿ ಮಠದಲ್ಲಿ ಶ್ರೀ ಮಹಾಂತಲಿಂಗ ಶಿವಾಚಾರ್ಯರ ಜೊತೆಯಲ್ಲಿದ್ದರೆಂದು ಹೇಳಲಾಗುತ್ತದೆ. ಶ್ರೀ ಗುರುಲಿಂಗ ಶಿವಾಚಾರ್ಯರ ನಂತರ ಅಧಿಕಾರಕ್ಕೆ ಬಂದ ಮಹಾತಪಸ್ವಿ ಶ್ರೀ ಸಿದ್ಧರಾಮೇಶ್ವರರು ಶ್ರೀಶೈಲದಿಂದ ಬಂದು ಮಠದ ಅಧಿಕಾರವನ್ನು ವಹಿಸಿಕೊಂಡು ಕೇವಲ ಅಲ್ಪಾವಧಿಯಲ್ಲಿಯೇ ಅಗಾಧವನ್ನು ಸಾಧಿಸಿ, ತಮ್ಮ ಮೂವತ್ತಾರನೆಯ ವಯಸ್ಸಿನಲ್ಲಿ ಜೀವಂತ ಸಮಾಧಿಯಾದರು. ಈ ಕಾರಣಕ್ಕಾಗಿ ಇವರು ಮಠದ ಪರಂಪರೆಯ ಇತಿಹಾಸದಲ್ಲಿ ಅವಿಸ್ಮರಣೀಯರಾಗಿದ್ದಾರೆ. ನಂತರ ಶ್ರೀ ಗುರು ಸಿದ್ಧರಾಮೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ನಾಗಭೂಷಣ ಶಿವಾಚಾರ್ಯಸ್ವಾಮಿಗಳು, ನಂತರ ಅಧಿಕಾರಕ್ಕೆ ಬಂದ ಶ್ರೀ ಅನ್ನದಾನಲಿಂಗ ಶಿವಾಚಾರ್ಯಸ್ವಾಮಿಗಳು ಕಾಶಿಯಿಂದ ಬಂದು, ನೂರ ಮೂವತ್ತಾರು ವರ್ಷಗಳ ಕಾಲ ದೀರ್ಘ ಬದುಕನ್ನು ಬದುಕಿ ಸಮಾಜವನ್ನು ಮತ್ತು ಮಠವನ್ನು ಬೆಳೆಸಿದರು. ಇವರ ನಂತರ ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು ಅಧಿಕಾರಕ್ಕೆ ಬಂದು ಈಗಿನ ಗುರುಗಳಾದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ. ಇವರ ಉತ್ತರಾಧಿಕಾರಿಯನ್ನಾಗಿ ಶ್ರೀ ಕಪಿಲ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳನ್ನು ಆಯ್ಕೆ ಮಾಡಿ ಪಟ್ಟಾಧಿಕಾರವನ್ನು ನೀಡಿದ್ದಾರೆ.

ಧಾರ್ಮಿಕ ಕಾರ್ಯಗಳು

ಮಠದ ಪರಂಪರೆಯಲ್ಲಿ ಹದಿಮೂರು ಜನ ಮಠಾಧೀಶರು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾದರೂ ಹನ್ನೊಂದು ಜನ ಗುರುಗಳ ಹೆಸರನ್ನು ಮಾತ್ರ ಗುರುತಿಸಲಾಗಿದೆ. ಮಠದ ಆವರಣದಲ್ಲಿ

ಪರಂಪರೆಯ ಲಿಂಗೈಕ್ಯ ಗುರುಗಳ ಒಂಬತ್ತು ಗದ್ದುಗೆಗಳು ನಿರ್ಮಾಣಗೊಂಡಿವೆ. ಇಬ್ಬರು ಗುರುಗಳ ಗದ್ದುಗೆಗಳು ಎಲ್ಲಿ ಸ್ಥಾಪನೆಯಾಗಿವೆ ಎಂಬುದು ತಿಳಿಯದಾಗಿದೆ. ಈಗ ಮಠದಲ್ಲಿ ಸ್ಥಾಪನೆಗೊಂಡ ಗದ್ದುಗೆಗಳಿಗೆ ನಿತ್ಯ ತ್ರಿಕಾಲ ಪೂಜೆ ನಡೆಯುತ್ತಿದೆ. ಕಾರ್ತಿಕ ಮಾಸದಲ್ಲಿ ಹನ್ನೊಂದು ದಿನ ಜಾತ್ರೆ ನಡೆಯಲಿದ್ದು, ಈ ಸಂದರ್ಭದಲ್ಲಿ ಗಾಯನ, ಉಪನ್ಯಾಸ ಮತ್ತು ಉಪದೇಶವನ್ನು ಏರ್ಪಡಿಸಿ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಮಾವಾಸ್ಯೆಯಲ್ಲಿ ರುದ್ರಾಭಿಷೇಕದ ಪೂಜೆಯನ್ನು ಮಾಡಲಾಗುತ್ತದೆ. ಪರಂಪರೆಯ ಗುರುಗಳು ಧರ್ಮ ಪ್ರಚಾರಕರಾಗಿ ಈ ಭಾಗದ ನಾನಾ ಕಡೆ ಸಂಚರಿಸಿ ಅನುಷ್ಠಾನಗೊಂಡು ಸುಮಾರು ೨೧ ಶಾಖಾ ಮಠಗಳನ್ನು ಸ್ಥಾಪನೆ ಮಾಡಿದ್ದಾರೆ ಎಂದು ತಿಳಿದುಬರುತ್ತದೆ. ಇತ್ತೀಚೆಗೆ ಮಠದ ವತಿಯಿಂದ ಚನ್ನಬಸವ ಲೀಲೆ, ಸಿದ್ಧರಾಮೇಶ್ವರ ಪುರಾಣವನ್ನು ಪ್ರಕಟಿಸಲಾಗಿದೆ. ಪುರಾತನ ಪರಂಪರೆಯನ್ನು ಹೊಂದಿರುವ ಈ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ತನ್ನ ಪಾಲಿನ ಕೊಡುಗೆಯನ್ನು ನೀಡಿ ವೀರಶೈವ ಧರ್ಮದ ಅಭಿವೃದ್ಧಿಗೆ ಶ್ರಮಿಸತೊಡಗಿದೆ.

ನೀಲಗಲ್ಲು ಬೃಹನ್ಮಠ

ನೀಲ್ಲಗಲ್ಲು ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಬೃಹನ್ಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಬೃಹನ್ಮಠವು ಈ ಭಾಗದ ಧಾರ್ಮಿಕ ಕೇಂದ್ರಬಿಂದುವಾಗಿದೆ. ಸುಮಾರು ಆರುನೂರು ವರ್ಷಗಳ ಇತಿಹಾಸವಿರುವ ಈ ಮಠವು ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದವರು ಧರ್ಮ ಪ್ರಸಾರವನ್ನು ಮಾಡುವ ಉದ್ದೇಶದಿಂದ ಇಲ್ಲಿ ಮಠವನ್ನು ಸ್ಥಾಪಿಸಿದರು. ಅಂದು ಸ್ಥಾಪಿತಗೊಂಡ ವೀರಶೈವ ಮಠವು ಇಲ್ಲಿ ತನಕ ಬೆಳೆದು ಬಂದಿದ್ದು, ವೀರಶೈವ ಧರ್ಮದ ತತ್ವಗಳಾದ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಬಗ್ಗೆ ಭಕ್ತರಲ್ಲಿ ಅರಿವು ಮೂಡಿಸಿ ಧಾರ್ಮಿಕ ಸಂಸ್ಕಾರವನ್ನು ನೀಡುತ್ತಾ ಬಂದಿದೆ.

ಕರ್ತೃ ಗುರುಗಳ ತರುವಾಯ ಶ್ರೀ ಚನ್ನಮಲ್ಲ ಶಿವಾಚಾರ್ಯ ಸ್ವಾಮಿಗಳು, ನಂತರ ಬಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಬಗ್ಗೆ ಹೆಚ್ಚು ವಿವರ ತಿಳಿದುಬರುವುದಿಲ್ಲ. ನಂತರ ಅಧಿಕಾರಕ್ಕೆ ಬಂದ ಶ್ರೀ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಮಹಾಸಿದ್ಧಿ ಪುರುಷರೆಂದು ಹೇಳಲಾಗುತ್ತದೆ. ಗುರುಗಳು ಆಯುರ್ವೇದ ಪಂಡಿತರಾಗಿದ್ದು, ಈ ಭಾಗದ ಜನ ಜಾನುವಾರುಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಇವರು ೧೯೬೪ರಲ್ಲಿ ಲಿಂಗೈಕ್ಯರಾಗಿದ್ದಾರೆ. ಮಠದ ಪರಂಪರೆಯ ಐದನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಸ್ವಾಮಿಗಳು ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು.

ಧಾರ್ಮಿಕ ಕಾರ್ಯಗಳು : ಹೈದರಾಬಾದ್ ನಿಜಾಂನ ಕಾಲದಲ್ಲಿ ಈ ಮಠಕ್ಕೆ ಇನಾಮು ಭೂಮಿ ದೊರೆತಿದ್ದು, ಧಾರ್ಮಿಕ ಆಚರಣೆಗೆ ಇದರ ಆದಾಯವನ್ನು ಬಳಸಿಕೊಳ್ಳಲಾಗುತ್ತಿತ್ತು. ಈ ಆಸ್ತಿ ಕೈಬಿಟ್ಟು ಹೋಗಿದೆ. ಮಠದ ಶಾಖಾಮಠವಾಗಿ ಗಣೆಕಲ್ಲು ಮಠ ಇದ್ದು, ಈ ಮಠದಲ್ಲಿ ಎರಡು ಗದ್ದುಗೆಗಳು, ಮೂಲಮಠವಾದ ನೀಲಗಲ್ಲು ಮಠದಲ್ಲಿ ಎರಡು ಗದ್ದುಗೆಗಳು ಸ್ಥಾಪಿತಗೊಂಡಿವೆ. ಇವುಗಳಿಗೆ ನಿತ್ಯಪೂಜೆ, ಮಾರ್ಗಶಿರ ಶುದ್ಧ ತದಿಗೆಯೆಂದು ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಅಂದು ವಿವಿಧ ಮಠಾಧೀಶರು, ವಿದ್ವಾಂಸರನ್ನು ಕರೆಸಿ ಉಪನ್ಯಾಸ, ಧರ್ಮೋಪದೇಶವನ್ನು ನಡೆಸಲಾಗುತ್ತಿದೆ. ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮಸರಕಲ್ಲು ಮುರುಘೇಂದ್ರಸ್ವಾಮಿ ಮಠ

ಮಸರಕಲ್ಲು ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಮುರುಘೇಂದ್ರ ಸ್ವಾಮಿ ಮಠವು ಗ್ರಾಮದ ಉತ್ತರದ ಹೊರಭಾಗದಲ್ಲಿ ಸ್ಥಾಪನೆಯಾಗಿದೆ. ಶ್ರೀ ಮುರುಘೇಂದ್ರ ಸ್ವಾಮಿಗಳೆಂಬ ವಿರಕ್ತರು ಲೋಕ ಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ನೆಲೆಸಿದ್ದರಂತೆ. ಗುರುಗಳು ಇಲ್ಲಿ ನೆಲೆ ನಿಂತ ಸಂದರ್ಭದಲ್ಲಿ ಭಕ್ತರನ್ನು ಜಾಗೃತರನ್ನಾಗಿ ಮಾಡಿ ಶರಣ ತತ್ತ್ವಗಳನ್ನು ಪ್ರಚಾರಪಡಿಸಿ, ವೀರಶೈವ ಧರ್ಮ ಬೆಳೆಯಲು ಸಹಾಯಕರಾದರಂತೆ. ಈ ಗ್ರಾಮದ ದಾರಿದ್ರ್ಯವನ್ನು ಹೋಗಲಾಡಿಸಿ ಮಠವನ್ನು ಸ್ಥಾಪಿಸಿ, ಪರಂಪರೆಯನ್ನು ಬೆಳೆಸಿದರೆಂದು ತಿಳಿದುಬರುತ್ತದೆ. ಕರ್ತೃ ಗುರುಗಳಾದ ಶ್ರೀ ಮುರುಘೇಂದ್ರ ಸ್ವಾಮಿಗಳ ನಂತರ ಶ್ರೀಮಹಾಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಮಹಾ ತಪಸ್ವಿಗಳಾದ ಇವರು ಲೌಕಿಕದ ಕಡೆಗೆ ಗಮನ ಹರಿಸದೆ ಸದಾ ಧ್ಯಾನದಲ್ಲಿದ್ದು, ಅಂತರ್ಮುಖಿಗಳಾಗಿರುತ್ತಿದ್ದರು. ಇವರ ಪ್ರಭಾವದಿಂದ ಭಕ್ತರು ಬೆಳಕು ಕಂಡರು. ನಂತರ ಬಂದ ಶ್ರೀ ಬಸವಯ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಗುರುಗಳ ವಾಸ್ತವ್ಯಕ್ಕೆ ಕೊಠಡಿ, ಕರ್ತೃ ಗುರುಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದರು. ಇವರು ೧೯೩೦ರ ಸುಮಾರಿನಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಖಾಲಿ ಉಳಿಯಿತು. ಗ್ರಾಮ ಭಕ್ತರು ಶ್ರೀರಾಜ ಶೇಖರ ಬಳೆ ಇವರ ಮುಂದಾಳತ್ವದಲ್ಲಿ ಚಿತ್ರದುರ್ಗ ಬೃಹನ್ಮಠದ ಗುರುಗಳ ಆಶೀರ್ವಾದ ಪಡೆದು ಶ್ರೀ ಮುರಘೇಂದ್ರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ. ಇವರು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಮುನ್ನಡೆಸಿದ್ದಾರೆ.

ಗೆಜ್ಜೆಬಾವಿ ಚನ್ನಬಸವೇಶ್ವರ ಮಠ

ಪುರಾತನ ಕಾಲದಲ್ಲಿ ಶ್ರೀಚನ್ನಬಸವೇಶ್ವರ ಸ್ವಾಮಿಗಳು ಶ್ರೀ ಗಂಗಪ್ಪ ಎಂಬ ಪರಮ ಭಕ್ತನಿಗೆ ಒಲಿದು ಇಲ್ಲಿಗೆ ಬಂದು ಅನುಷ್ಠಾನಗೊಳ್ಳುತ್ತಾರೆ. ಅಂದು ಗುರುಗಳು ಅನುಷ್ಠಾನಗೊಂಡ ಜಾಗವು ಜಾಗೃತಗೊಂಡು ಮಠವಾಗಿ ರೂಪುಗೊಂಡಿದೆ. ಶ್ರೀ ಚನ್ನಬಸವ ಸ್ವಾಮಿಗಳಿಂದ ಸ್ಥಾಪನೆಗೊಂಡ ಕಾರಣ ಈ ಮಠಕ್ಕೆ ಶ್ರೀ ಚನ್ನಬಸವೇಶ್ವರ ಸ್ವಾಮಿ ಮಠ ಎಂದು ಹೆಸರು ಬಂದಿದೆ.

ತಪೋನಿಷ್ಠರು ಹಾಗೂ ಮಹಾಮಹಿಮರಾಗಿದ್ದ ಶ್ರೀ ಚನ್ನಬಸವ ಸ್ವಾಮಿಗಳ ಅನುಗ್ರಹಕ್ಕೆ ಗಬ್ಬೂರು ಶ್ರೀ ಬೂದಿಬಸವೇಶ್ವರ ಸ್ವಾಮಿಗಳು ಒಳಗಾಗಿದ್ದರು ಎಂದು ಹೇಳಲಾಗುತ್ತದೆ. ಶ್ರೀ ಚನ್ನಬಸವ ಸ್ವಾಮಿಗಳು ಈ ಗ್ರಾಮಕ್ಕೆ ಬಂದು ಮೊದಲು ಸಿರವಾರ ಗುಡ್ಡದ ಗವಿಯಲ್ಲಿ ದೀರ್ಘ ಅನುಷ್ಠಾನವನ್ನು ಕೈಗೊಂಡು ಅಲ್ಲಿ ಅನೇಕ ಪವಾಡಗಳನ್ನು ಮಾಡಿ, ಭಕ್ತರನ್ನು ಉದ್ಧರಿಸಿ ಶಿವಪುರಕ್ಕೆ ಆಗಮಿಸಿ, ಅಲ್ಲಿನ ರೆಡ್ಡಿ ಗೌಡರ ಮನೆಯ ಬ್ರಹ್ಮರಾಕ್ಷಸನನ್ನು ಓಡಿಸಿದರಂತೆ. ಆಗ ಗೌಡರು ಗುರುಗಳಿಗೆ ಕಾಣಿಕೆಯನ್ನು ನೀಡಲು ಬಂದಾಗ ಅದನ್ನು ತಿರಸ್ಕರಿಸಿ ಗಂಗಪ್ಪನ ಭಕ್ತಿಗೆ ಒಲಿದು ಗೆಜ್ಜೆಬಾವಿಗೆ ಬಂದು ಮಠ ಸ್ಥಾಪಿಸುತ್ತಾರೆ. ಮುನ್ನೂರು ವರ್ಷಗಳ ದೀರ್ಘ ಮಹಿಮರು ಬದುಕುವ ಆಸೆ ಇನ್ನೇತಕ್ಕೆಂದು ಮುನ್ನೂರು ವರ್ಷಗಳ ತರುವಾಯ ಜೀವಂತ ಸಮಾಧಿಯಾದರಂತೆ. ಮಠದ ಪರಂಪರೆಯಲ್ಲಿ ಒಟ್ಟು ಇಪ್ಪತ್ಮೂರು ಜನ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಮುನ್ನಡೆಸಿದ್ದಾರೆ ಎಂದು ಹೇಳಲಾಗುತ್ತದೆ. ಮಠದ ಪರಂಪರೆಯಲ್ಲಿ ಶ್ರೀ ಚನ್ನಬಸವ ಸ್ವಾಮಿಗಳು ಹಾಗೂ ಶ್ರೀ ಕರಿಬಸವ ಸ್ವಾಮಿಗಳು ಪಟ್ಟಾಧಿಕಾರದ ಸಂದರ್ಭದಲ್ಲಿ ಪುನರಾವರ್ತನೆಯಾಗಿ ಅಭಿದಾನಗೊಳ್ಳುವ ಕಾಲಕ್ಕೆ ಮಠದ ಪರಂಪರೆಯಲ್ಲಿ ಈ ಹೆಸರುಗಳು ಕೇಳಿಬರುತ್ತವೆ.

ಕೃರ್ತ ಗುರುಗಳು ಲಿಂಗೈಕ್ಯರಾದ ಮೇಲೆ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ. ನಂತರ ಶ್ರೀ ಕರಿಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಮಹಾ ತಪಸ್ವಿಗಳಾದ ಇವರು ನೂರ ಹತ್ತು ವರ್ಷಗಳು ಬದುಕಿದ್ದರೆಂದು ಹೇಳಲಾಗುತ್ತದೆ. ಈ ಗುರುಗಳು ತಮ್ಮ ದೀರ್ಘಕಾಲದ ಬದುಕಿನಲ್ಲಿ ವೀರಶೈವ ಧರ್ಮವನ್ನು ಪ್ರಚಾರಗೊಳಿಸಿ ಬೆಳೆದ್ದಾರೆ. ಇವರ ತರುವಾಯ ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರವನ್ನು ನಡೆಸಿದ್ದಾರೆ. ನಂತರ ಬಂದ ಶ್ರೀ ಕರಿಬಸವ ಸ್ವಾಮಿಗಳು ೧೯೫೨ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಗೆ ತಂದಿದ್ದಾರೆ. ಈ ಮಠದ ಮೂಲಮಠವಾದ ನಿಡಸೇಸಿ ಮಠ ಮತ್ತು ಶಾಖಾಮಠವಾದ ಕುಷ್ಟಗಿ ಮಠಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಗಜ್ಜೆಬಾವಿ ಗ್ರಾಮದ ಹೊರಭಾಗದಲ್ಲಿ ಸ್ಥಾಪಿತವಾಗಿರುವ ಈ ಮಠವು ನಿರ್ಜನ ಪ್ರದೇಶದಲ್ಲಿ ರೂಪುಗೊಂಡು ಪ್ರಶಾಂತ ವಾತಾವರಣವನ್ನು ಉಳಿಸಿಕೊಂಡಿದೆ. ಇಂತಹ ಮಠದಲ್ಲಿ ತೊಂಬತ್ತು ವರ್ಷದ ಶ್ರೀ ಕರಿಬಸವ ಸ್ವಾಮಿಗಳು ಮಾಗಿದ ಜೀವನಾನುಭವ ಹಾಗೂ ಈವರೆಗೆ ಮಾಡಿದ ತಪಸ್ಸಿನ ಫಲದಿಂದ ವಾಕ್ ಸಿದ್ಧಿಗಳಾಗಿ ಹೆಸರು ಪಡೆದು ಎಲ್ಲರಿಂದಲೂ ಗೌರವಿಸಲ್ಪಟ್ಟು ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ. ಈಗ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ಚನ್ನಬಸವ ಸ್ವಾಮಿಗಳು ೨೦೦೦ರ ಫೆಬ್ರವರಿ ಇಪ್ಪತ್ನಾಲ್ಕರಂದು ಪಟ್ಟಾಧಿಕಾರವನ್ನು ಪಡೆದುಕೊಂಡಿದ್ದಾರೆ.

ನೂರು ವರ್ಷಗಳ ಹಿಂದೆ ರಚನೆಗೊಂಡಿರುವ ಈ ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಗೊಂಡಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತದೆ. ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ದಾಸೋಹ ನಡೆಸಲಾಗುತ್ತದೆ.

ಜಾಲಹಳ್ಳಿ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ಜಯಶಾಂತಲಿಂಗೇಶ್ವರ ಮಹಾಸಂಸ್ಥಾನ ಬೃಹನ್ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಪಂಚಪೀಠಗಳಲ್ಲಿ ಒಂದಾದ ಕಾಶಿ ಪೀಠದ ಶಾಖಾಮಠವಾಗಿರುವ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬಂದಿದೆ.

ಆರನೆಯ ಶತಮಾನದಲ್ಲಿ ಸ್ಥಾಪನೆಗೊಂಡ ಈ ಮಠವು ಶ್ರೀ ಜಗದಾರಾಧ್ಯ ವಿಶ್ವಮಾನ್ಯ ಪೂಜಾಭಿನವಮಲಯ ಜಯ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿದೆ ಎಂದು ಹೇಳಲಾಗುತ್ತದೆ. ಈ ಗ್ರಾಮದ ನೈರುತ್ಯ ಭಾಗಕ್ಕಿರುವ ಬಕುಲ ಪರ್ವತದಲ್ಲಿ ಈ ಮಠದ ಸ್ಥಾಪಕರಾದ ಶ್ರೀ ಜಯ ಶಾಂತಲಿಂಗೇಶ್ವರ ಶಿವಯೋಗಿಗಳು ಅನುಷ್ಠಾನ ಕೈಗೊಂಡಿದ್ದರು. ಹಠಯೋಗ ಮತ್ತು ಶಿವಯೋಗವನ್ನು ಸಾಧಿಸಿಕೊಂಡ ಶಿವಯೋಗಿಗಳು ಈ ಕ್ಷೇತ್ರದ ಗವಿಯಲ್ಲಿ ಅನುಷ್ಠಾನಕ್ಕೆ ಕುಳಿತಿದ್ದು ಯಾರಿಗೂ ಗೋಚರವಾಗಿರಲಿಲ್ಲ.

ಈ ಪ್ರಾಂತ್ಯದ ಅರಸನಾದ ದೇವವರ್ಮನ ಗೋವುಗಳು ಬಕುಲ ಪರ್ವತಕ್ಕೆ ಮೇಯಲು ಹೋಗುತ್ತಿದ್ದವು. ಇದರಲ್ಲಿ ಒಂದು ಹಸುವು ಪ್ರತಿದಿನ ಕರೆಯಬೇಕಾದ ಹಾಲನ್ನು ಕರೆಯುತ್ತಿರಲಿಲ್ಲವಂತೆ, ನಿತ್ಯ ಎಷ್ಟು ಹಾಲು ಕರೆದು ಬರುತ್ತಿತ್ತೋ, ಅಷ್ಟು ಮೌಲ್ಯದ ಹಣವನ್ನು ಹಸುವಿನ ಕೊರಳಿಗೆ ಕಟ್ಟಲಾಗಿರುತಿತ್ತಂತೆ. ಈ ವಿಚಾರ ಗೋವುಗಳ ಪರಿಚಾರಕರ ಗಮನಕ್ಕೆ ಬಂದಿತು. ಆಗ ಪರಿಚಾರಕರು ಆ ಹಸುವಿನ ಚಲನ ವಲನಗಳನ್ನು ಗಮನಿಸುವಂತೆ ಗೋಗಾಹಿ ಶಂಕರನಿಗೆ ಹೇಳಿದರು. ಶಂಕರನು ಹಸುಗಳನ್ನು ಪರ್ವತಕ್ಕೆ ತಂದು ಬಿಟ್ಟವನು ಹಾಲು ಕರೆಯದ ಹಸುವನ್ನು ಗಮನಿಸತೊಡಗಿದ. ಹಸುವು ತನ್ನ ಹಿಂಡನ್ನು ಬಿಟ್ಟು ನೇರವಾಗಿ ಗವಿಯ ಕಡೆಗೆ ಹೊರಟಾಗ ಶಂಕರನು ಹಸುವನ್ನು ಹಿಂಬಾಲಿಸಿಕೊಂಡು ಹೋದ. ಹಸುವು ಗವಿಯ ಮುಂದೆ ನಿಂತೊಡನೆ ಗವಿಯ ಒಳಗಿನಿಂದ ಒಂದು ಹುಲಿಯು ಬಂದು ಭಯಂಕರವಾಗಿ ಗರ್ಜಿಸಿತಂತೆ. ಈ ಗರ್ಜನೆಗೆ ಮರೆಯಲ್ಲಿದ್ದ ಶಂಕರ ಹೆದರಿ ನಿಸ್ತೇಜಗೊಂಡ. ನಂತರ ಘಟಸರ್ಪವೊಂದು ಬಂದು ಹಸುವಿನ ಕೆಚ್ಚಲಿನಿಂದ ಹಾಲನ್ನು ಕುಡಿಯತೊಡಗಿತಂತೆ. ಈ ದೃಶ್ಯವನ್ನು ನೋಡಿದ ಶಂಕರನು ಓಡಿ ಹೋಗಬೇಕೆಂದು ಅಂದುಕೊಂಡನಾದರೂ ನಂತರ ಹಸುವು ಇನ್ನೇನು ಮಾಡುತ್ತದೆ ಎಂದು ನೋಡುವ ಕಾತುರದಿಂದ ನೋಡುತ್ತಿದ್ದವನಿಗೆ, ಗವಿಯ ಒಳಗಿನಿಂದ ಮಹಾ ತೇಜೋಮೂರ್ತಿಗಳಾದ ಶಿವಯೋಗಿಗಳ ಆಗಮನ ಗೋಚರಿಸಿತು. ಮತ್ತೊಮ್ಮೆ ಪರಮಾಶ್ಚರ್ಯಗೊಂಡ ಶಂಕರನು ತದೇಕಚಿತ್ತನಾಗಿ ಈ ದೃಶ್ಯವನ್ನು ಗಮನಿಸತೊಡಗಿದನಂತೆ. ಶಿವಯೋಗಿಗಳು ಹಸುವಿನ ಕೆಚ್ಚಲಿನಿಂದ ಹಾಲನ್ನು ಕರೆದು ಕುಡಿದು ಹಸುವಿನ ಕೊರಳಿಗೆ ಹಾಲಿನ ವೆಚ್ಚವನ್ನು ಕಟ್ಟಿ ನಮಸ್ಕರಿಸಿ ಕಳುಹಿಸಿಕೊಟ್ಟರಂತೆ.

ಹಸುವು ನೆಮ್ಮದಿಯಿಂದ ತನ್ನ ಹಿಂಡಿನ ಕಡೆಗೆ ಹಿಂದಿರುಗಿತಂತೆ. ಶಂಕರನು ಸಹ ಹಿಂದಿರುವಾಗ ಶಿವಯೋಗಿಗಳ ದೃಷ್ಟಿಗೆ ಬಿದ್ದು ಅವರ ಆಶೀರ್ವಾದ ಪಡೆದು ಹೊರಡುವಾಗ ಅವರು ಎರಡು ವಿಭೂತಿ ಘಟ್ಟಿಗಳನ್ನು ನೀಡಿ ಇದನ್ನು ಮನೆಗೆ ಹೋದ ಮೇಲೆ ಭಕ್ತಿಯಿಂದ ಪೂಜಿಸಿ ನಂತರ ತೆರೆದು ನೋಡು. ಅಲ್ಲಿಯ ತನಕ ನೋಡದಿರು ಎಂದು ಎಚ್ಚರಿಕೆ ಕೊಟ್ಟು ಕಳಿಸಿದರಂತೆ. ಅಲ್ಲದೆ ಶಂಕರನು ಹೊರಡುವ ಮೊದಲು ಈ ವಿಷಯವನ್ನು ಹೆಮ್ಮೆಗಾಗಿಯೋ, ಹಮ್ಮಿಗಾಗಿಯೋ ಯಾರ ಮುಂದಾದರೂ ಹೇಳಿದೆಯಾದರೆ ನಿನಗೆ ಕೇಡು ಎಂದು ಮತ್ತೊಮ್ಮೆ ಎಚ್ಚರಿಕೆ ನೀಡಿ ಕಳಿಸಿಕೊಟ್ಟರಂತೆ. ಶಂಕರ ಕುತೂಹಲ ತಡೆಯಲಾರದೆ ದಾರಿ ಮಧ್ಯದಲ್ಲಿ ಶಿವಯೋಗಿಗಳು ಕೊಟ್ಟ ಕಟ್ಟನ್ನು ಬಿಚ್ಚಿ ನೋಡಿ ಕಣ್ಣನ್ನು ಕಳೆದುಕೊಳ್ಳುತ್ತಾನಂತೆ. ಕಾಡಿನಲ್ಲಿ ಕಣ್ಣನ್ನು ಕಳೆದುಕೊಂಡ ಶಂಕರ ಅನಾಥನಾಗಿ ಅಲೆಯುತ್ತಿರುತ್ತಾನೆ.

ಇತ್ತ ಹಸುಗಳು ಬಂದರೂ ಗೋಗಾಹಿ ಶಂಕರನು ಬರದೇ ಇದ್ದುದನ್ನು ಗಮನಿಸಿದ ಗೋವುಗಳ ಪರಿಚಾರಕರು ಕಳವಳ ಪಡುತ್ತಾರೆ. ಈ ವಿಷಯ ದೊರೆಗಳ ತನಕ ಹೋಗಿ ದೊರೆಯ ಆಜ್ಞೆಯಂತೆ ಅರಮನೆಯಿಂದ ಶಂಕರನನ್ನು ಹುಡುಕಲು ಸೇವಕರು ಬಕುಲ ಗುಡ್ಡಕ್ಕೆ ಬರುತ್ತಾರೆ. ಆಗ ಕಾಡಿನಲ್ಲಿ ಕಣ್ಣುಗಳನ್ನು ಕಳೆದುಕೊಂಡು ನೋವನ್ನು ಅನುಭವಿಸುತ್ತಿದ್ದ ಶಂಕರನು ಗೋಚರವಾಗಿ ಸೇವಕರು ಅರಮನೆಗೆ ಕರೆತರುತ್ತಾರಂತೆ. ಶಂಕರನಿಂದ ದೇಶವರ್ಮನು ಸವಿವರವಾಗಿ ಶಿವಯೋಗಿಗಳ ಬಗ್ಗೆ ವಿಚಾರವನ್ನು ತಿಳಿದುಕೊಂಡು, ಶಿವಯೋಗಿಗಳು ಈ ನಾಡಿನಲ್ಲಿ ನೆಲೆಸಿದ್ದರೂ ಅವರ ದರ್ಶನವನ್ನು ಪಡೆಯಲಾಗದಿದ್ದಕ್ಕೆ ದೇಶವರ್ಮನು ಚಿಂತಿಸಿದನಂತೆ. ಮರುದಿನ ಪರಿವಾರ ಸಮೇತ ಗುರುಗಳ ದರ್ಶನಕ್ಕೆಂದು ತನ್ನ ಮಡದಿ ಮಂದಾಕಿನಿಯ ಸಮೇತ ಗವಿಯ ಬಳಿ ಬಂದು ದಿನವಿಡೀ ಕಾದರು ಗುರುಗಳ ದರ್ಶನವಾಗದಿದ್ದಕ್ಕೆ ದೇಶವರ್ಮನು ಅನ್ನ ನೀರನ್ನು ಸ್ವೀಕರಿಸದೆ, ಧ್ಯಾನದಲ್ಲಿ ಕುಳಿತುಕೊಳ್ಳುತ್ತಾನೆ. ಆಗ ಶಿವಯೋಗಿಗಳು ದರ್ಶನವಿತ್ತು ನಾಡಿಗೆ ಬರಲು ಒಪ್ಪಿದರಂತೆ.

ಮಠ ಸ್ಥಾಪನೆಗೆ ನಿರ್ಣಯ : ಪ್ರಥಮವಾಗಿ ಹುಲಿ ಮತ್ತು ಘಟಸರ್ಪವನ್ನು ಕರೆದುಕೊಂಡು ಹೋಗಿ, ನಂತರ ಮಠ ಸ್ಥಾಪನೆಗೆ ಸ್ಥಳ ನಿರ್ಣಯಗೊಂಡ ಮೇಲೆ ನಾವು ಬರುವುದಾಗಿ ಶಿವಯೋಗಿಗಳು ಅಪ್ಪಣೆ ಮಾಡಿ ರಾಜಪರಿವಾರವನ್ನು ಕಳಿಸಿಕೊಟ್ಟರಂತೆ. ಶಿವಯೋಗಿಗಳ ಅಪ್ಪಣೆಯ ಪ್ರಕಾರ ಘಟಸರ್ಪ ಮತ್ತು ಹುಲಿಯನ್ನು ನಾಡಿಗೆ ಕರೆತಂದರಂತೆ. ಹುಲಿಯು ಮೊದಲು ಇಟ್ಟ ಹೆಜ್ಜೆಯ ಬಕುಲ ಗುಡ್ಡದಿಂದ ನಾಡಿಗೆ ಪ್ರವೇಶಿಸುವ ದ್ವಾರವಾಗಿ ಎರಡನೆಯ ಹೆಜ್ಜೆ ಇಟ್ಟ ಜಾಗವೇ ಮಠವಾಗಿ ಮೂರನೆಯ ಹೆಜ್ಜೆ ಇಟ್ಟ ಜಾಗವೇ ಮಠದ ವ್ಯಾಪ್ತಿಯ ಗಡಿಯಾಗಿ ರೂಪುಗೊಂಡಿತಂತೆ. ನಂತರ ಶಿವಯೋಗಿಗಳು ಕಾರ್ತಿಕ ಶುದ್ಧ ಪಂಚಮಿಯಂದು ನಾಡಿಗೆ ಬಂದು ಮಠ ಸ್ಥಾಪನೆಯನ್ನು ವಿಧಿವತ್ತಾಗಿ ಮಾಡಿ, ಮಠದ ವ್ಯಾಪ್ತಿಯ ಗಡಿಯಲ್ಲಿ ಕಟ್ಟೆಯನ್ನು ನಿರ್ಮಿಸಿ ಇದು ಕಾಯಕದ ಕಟ್ಟೆಯಾಗಬೇಕೇ ವಿನಾ ಸೋಮಾರಿಗಳ ಕಟ್ಟೆಯಾಗಬಾರದು ಎಂದು ಈ ಕಟ್ಟೆಗೆ 'ಕಸುಬಿನ ಕಟ್ಟೆ' ಎಂದು ನಾಮಕರಣ ಮಾಡಿದರಂತೆ. ಆರನೆಯ

ಶತಮಾನದಲ್ಲಿ ನಾಮಕರಣಗೊಂಡ 'ಕಸುಬಿನ ಕಟ್ಟೆ' ಇಂದು ರೂಪಾಂತರ ಪಡೆದು 'ಕಸಬಾಕಟ್ಟೆ' ಎಂದು ಕರೆಯಲ್ಪಡುತ್ತಿದೆ. ಈ ರೀತಿ ಎಂಟು ಹಳ್ಳಿಗಳ ಮಧ್ಯ ಸ್ಥಾಪನೆಗೊಂಡ ಮಠವು ಜಾಲಹಳ್ಳಿಯು ಉದಯವಾಗಲು ಕಾರಣವಾಯಿತಂತೆ. ಶಿವಯೋಗಿಗಳು ಜಾಲಹಳ್ಳಿಯಲ್ಲಿ ಮಠವನ್ನು ಸ್ಥಾಪಿಸಿ ಮೊದಲು ದರ್ಶನ ಕೊಟ್ಟ ದಿನಗಳ ಕಾಲ ಇಲ್ಲಿ ನೆಲೆಸಿದ ಗುರುಗಳು ಪುನಃ ಶ್ರೀ ಶಂಕರ ಮತ್ತು ಚಂದ್ರಶರ್ಮನೆಂಬ ಶಿಷ್ಯರ ಜೊತೆಗೆ ಲೋಕಸಂಚಾರ ಕೈಗೊಂಡು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಅನೇಕ ಪವಾಡಗಳನ್ನು ಮಾಡಿ ಲೋಕೋದ್ಧಾರವನ್ನು ಮಾಡಿ ಪುನಃ ಜಾಲಹಳ್ಳಿಯ ಮಠಕ್ಕೆ ಆಗಮಿಸಿ, ಮಠದ ಪರಂಪರೆಯು ನಿರಂತರವಾಗಿ ನಡೆಯಲು ಆಶೀರ್ವದಿಸಿ ಜೀವಂತ ಸಮಾಧಿಯಾಗುತ್ತಾರೆ. ನಂತರ ಶ್ರೀ ಶಂಕರ ಮತ್ತು ಶ್ರೀ ಚಂದ್ರಶರ್ಮರ ಗುರುಗಳ ಜತೆಯಲ್ಲಿಯೇ ಲಿಂಗೈಕ್ಯರಾಗುತ್ತಾರೆ.

ಪರಂಪರೆ : ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಜಾಲಹಳ್ಳಿಯ ಜಗದಾರಾಧ್ಯ ಶ್ರೀ ಜಯಶಾಂತಲಿಂಗೇಶ್ವರ ಮಹಾ ಸಂಸ್ಥಾನ ಬೃಹನ್ಮಠಕ್ಕೆ ಕಲಕೇರಿಯ ಜಾಲಹಳ್ಳಿ ಮಠದ ವಂಶಸ್ಥರನ್ನೇ ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡುವ ಪರಿಪಾಠ ಬೆಳೆದುಬಂದಿದೆ. ಜಾಲಹಳ್ಳಿ ಮಠದಲ್ಲಿ ಈವರೆಗೆ ಒಟ್ಟು ಇಪ್ಪತ್ತಾರು ಜನ ಗುರುಗಳು ಆಡಳಿತ ನಡೆಸಿ ಮಠವನ್ನು ಅಭಿವೃದ್ಧಿಗೊಳಿಸಿದ್ದಾರೆ. ಮಠದ ಪರಂಪರೆಯ ಪ್ರಕಾರ ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡ ನಂತರ ಪಟ್ಟಾಧಿಕಾರದ ಸಂದರ್ಭದಲ್ಲಿ ತಮ್ಮ ಪೂರ್ವಾಶ್ರಮದ ಹೆಸರನ್ನು ತ್ಯಜಿಸಿ ಪರಂಪರೆಯ ಅನುಗುಣವಾಗಿ ಅನುಕ್ರಮಣಿಕೆಯಲ್ಲಿ 'ದೇವಮಾನ್ಯಯೋಗಾಭಿನವ' 'ವಿದ್ಯಾಮಾನ್ಯ ಶಿವಾಭಿನವ', 'ವಿಶ್ವಮಾನ್ಯ ಪೂಜಾಭಿನವ' ಬಿರುದಾವಳಿಯ ಜೊತೆಗೆ ಮೂಲ ಗುರುಗಳಾದ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಅಭಿದಾನ ಪಡೆದು ಪಟ್ಟಾಧಿಕಾರಕ್ಕೆ ಬರಲಾಗುತ್ತಿದೆ.

ಮಠದ ಪರಂಪರೆಯ ೩೫ನೇ ಗುರುಗಳಾಗಿ ಶ್ರೀ ಬಸವಲಿಂಗರು ದೇವಮಾನ್ಯ ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನ ಪಡೆದು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದ್ದಾರೆ. ಇವರು ೧೯೯೮ರ ಮಾರ್ಚ್ ೩೦ರಂದು ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀವಿದ್ಯಾನಂದರು ವಿದ್ಯಾಮಾನ್ಯ ಶಿವಾಭಿನವ ಶ್ರೀ ಜಯಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಈಗ ಅಧಿಕಾರಕ್ಕೆ ಬಂದಿದ್ದಾರೆ. ಇವರ ಕರ್ತೃತ್ವದ ಶಕ್ತಿಯ ಫಲವಾಗಿ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿ ಹೊಂದಿದೆ. ಈ ತಾಲ್ಲೂಕಿನಲ್ಲಿ ಪವಿತ್ರ ಸ್ಥಳವಾಗಿರುವ 'ಅಣಿಮಲ್ಲೇಶ್ವರ' ಎಂಬ ಕ್ಷೇತ್ರವಿದ್ದು ಈ ಸ್ಥಳಕ್ಕೆ ಸಾವಿರಾರು ಭಕ್ತರು ಆಗಮಿಸುತ್ತಾರೆ. ಮಠದ ವತಿಯಿಂದ ಇಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು 'ಜಯಶಾಂತ ತೀರ್ಥ' ಎಂದು ನಾಮಕರಣ ಮಾಡಿದ್ದಾರೆ. ಪ್ರತಿ ವರ್ಷ ಜನವರಿಯಲ್ಲಿ ಮೂರು ದಿನಗಳ ಕಾಲ ಧರ್ಮ ಜಾಗೃತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಈ ರೀತಿ ಧರ್ಮ ಮತ್ತು ಸಮಾಜವನ್ನು ಬೆಸೆಯುವಂತಹ

ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಜನ ಸಾಮಾನ್ಯರಿಗೆ ತಲುಪುವಂತೆ ಗುರುಗಳು ಶ್ರಮ ವಹಿಸಿದ್ದಾರೆ. ಧಾರ್ಮಿಕ ಮತ್ತು ಸಾಮಾಜಿಕ ಪ್ರಗತಿಯ ಜೊತೆಗೆ ಅನಕ್ಷರತೆಯನ್ನು ಹೋಗಲಾಡಿಸಿ, ಜ್ಞಾನದ ಜ್ಯೋತಿಯನ್ನು ಬೆಳಗಿಸಬೇಕು ಎಂಬ ಉದ್ದೇಶವನ್ನು ಹೊಂದಿರುವ ಗುರುಗಳು, ಶ್ರೀ ಜಯಶಾಂತಲಿಂಗೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಅನೇಕ ಕಡೆ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿದ್ದಾರೆ. ಈ ರೀತಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಗುರುಗಳು ಮಠವನ್ನು ಪರಂಪರೆಗೆ ಅನುಗುಣವಾಗಿ ಮುನ್ನಡೆಸುತ್ತಾ ಅಭಿವೃದ್ಧಿಯ ಹರಿಕಾರರಾಗಿ ಹೆಸರು ಪಡೆದಿದ್ದಾರೆ.

ಧಾರ್ಮಿಕ ಕಾರ್ಯಗಳು : ಮಠದ ಪರಂಪರೆಯ ಕರ್ತೃ ಗದ್ದುಗೆ ಹಾಗೂ ಉಳಿದ ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕ ಪೂಜೆ, ಶ್ರಾವಣಮಾಸದಲ್ಲಿ ಒಂದು ತಿಂಗಳು ಶಿವಪುರಾಣ, ಸರ್ವಧರ್ಮ ಚಿಂತನ ಮಂಥನ ಗೋಷ್ಠಿಗಳು, ಶರಣರ ತತ್ವೋಪದೇಶ ನಡೆಯುತ್ತದೆ. ಭಾದ್ರಪದ ಶುದ್ಧ ಪ್ರತಿಪದೆಯೆಂದು ಕರ್ತೃ ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸಾವಿರಾರು ಜನ ಭಕ್ತರು ಪಾಲ್ಗೊಳ್ಳುತ್ತಾರೆ. ರಥೋತ್ಸವದ ನಂತರ ಗಣಾರಾಧನೆ ಮತ್ತು ಅನ್ನ ಸಂತರ್ಪಣೆ ಕಾರ್ಯವು ನಡೆಯುತ್ತದೆ. ಪ್ರತಿ ತಿಂಗಳು ಹುಣ್ಣಿಮೆ, ಶಿವರಾತ್ರಿ ಸಂದರ್ಭಗಳಲ್ಲಿ ಸಹಸ್ರ ಬಿಲ್ವಾರ್ಚನೆ, ಮಂಗಳಾರತಿ ಕಾರ್ಯಕ್ರಮ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ವ್ಯವಸ್ಥೆಗೊಳಿಸಲಾಗುತ್ತದೆ.

ಮಠದಲ್ಲಿ ನಿತ್ಯ ಅನ್ನದಾಸೋಹ ನಡೆಯುತ್ತದೆ. ಧರ್ಮ ಪ್ರಚಾರದ ಹಿನ್ನೆಲೆಯಲ್ಲಿ ಮಠದ ವತಿಯಿಂದ ಶ್ರೀ ಜಗದಾರಾಧ್ಯ ಜಯ ಶಾಂತಲಿಂಗೇಶ್ವರ ಪ್ರಕಾಶನ ಸಂಸ್ಥೆಯಿಂದ "ಶ್ರೀ ಜಯ ಶಾಂತವಿಜಯ ಪುರಾಣ" ಎಂಬ ಅರ್ಥವನ್ನು ಹಾಗೂ ಇತರೆ ಧಾರ್ಮಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ವಿಚಾರಗಳಿಗೆ ಸ್ಪಂದಿಸಿ ಗುರುಗಳು ಮಠವನ್ನು ಮುನ್ನಡೆಸಿದ್ದಾರೆ (ಕ.ವಿ.ಮ., ಚಂದ್ರಶೇಖರ ನಾರಾಣಾಪುರ, ಪು.೧೧೨೭, ೧೧೩೩, ೧೧೩೫).

ರಾಮದುರ್ಗದ ವರುವಿನ ಮಠ (ಸಂಗಯ್ಯ ತಾತನ ಮಠ)

ದೇವದುರ್ಗ ತಾಲ್ಲೂಕಿನ ರಾಮದುರ್ಗದಲ್ಲಿ ಸಂಗಯ್ಯ ತಾತಾನ ಮಠವು ಒಂದಾಗಿದೆ. ಇದಕ್ಕೆ ವರುವಿನ ಮಠ ಎಂದು ಕೂಡಾ ಕರೆಯುತ್ತಾರೆ. ಇದು ಬಹುಶಃ ಹೊರಗಿನ ಮಠ ಎಂದು ಇರಬಹುದೆಂದು ಅಲ್ಲಿಯ ಜನರು ಹೇಳುತ್ತಾರೆ.

ಈ ಮಠವು ಬಸವ ತತ್ವ ಮಠವಾಗಿದ್ದು, ಇಲ್ಲಿ ಅನೇಕ ಶರಣರು ಅಥವಾ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾರೆ. ಇಲ್ಲಿ ಒಟ್ಟು ೩೧ ಗದ್ದುಗೆಗಳು ಇವೆ. (ಹಂಪಿ) ಅಗದ ಹುಣ್ಣಿಮೆಯ ೫ನೇ ದಿನ ಪ್ರತಿ ವರ್ಷ ಜಾತ್ರೆಯಾಗುತ್ತದೆ. ಜಾತ್ರೆಯ ಸಮಯದಲ್ಲಿ ಪ್ರವಚನ, ಕೀರ್ತನೆಗಳು ಜರುಗುತ್ತವೆ. ೧೦೧ ಒಂದು ಕಳಶ, ಕುಂಭ, ನಂದಿಕೋಲುಗಳೊಂದಿಗೆ ಬಂದು ಅನೇಕ ಆಚರಣೆಗಳನ್ನು

ನೇರವೇರಿಸುವುದರ ಜೊತೆಗೆ ಜಾತ್ರೆಯು ಜರುಗುತ್ತದೆ. ಈ ಮಠಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಆರು ಮಠಗಳಿವೆ.

ಮುನಿಗಳು, ಪಂಡಿತರು

ಮುನಿಗಳು ಅಥವಾ ಪಂಡಿತರು ಸಾಮಾಜಿಕ ಜೀವನದಲ್ಲಿ ಮಹತ್ತರ ಪಾತ್ರ ವಹಿಸಿದವರು. ಅನೇಕ ವೇಳೆ ಇವರು ರಾಜನ ಮೇಲೆಯೂ ಪ್ರಭಾವ ಬೀರಿರುವುದುಂಟು. ಅಧಿಕಾರಿಗಳು ಕಟ್ಟಿಸಿದ ದೇವಾಲಯದ ದಿನನಿತ್ಯದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ದೇವಾಲಯದ ಆಸ್ತಿರಕ್ಷಣೆ ಹಾಗೂ ಸಂಗ್ರಹಣೆ ಇವರ ಮೇಲಿತ್ತು. ದೇವದುರ್ಗ ಶಾಸನಗಳಲ್ಲಿ ಇವರ ಉಲ್ಲೇಖವಿದೆ.

ದೇವದುರ್ಗ ತಾಲ್ಲೂಕಿನ ನಿಲವಂಜಿ ಗ್ರಾಮದ ಕ್ರಿ.ಶ.೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮನು ಕಲ್ಯಾಣ ಪುರದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಮಹಾಮಂಡಳೇಶ್ವರನಾದ ಹಿರಿಯ ಮಲ್ಲರಸನಿರುತ್ತಾನೆ. ಇವನು ನಿಲ್ಲಜಿಗೆಯ ಮಲ್ಲಿಕಾರ್ಜುನದೇವರ ಅಂಗ ಭೋಗ ನೈವೇದ್ಯ ತಪೋಧನರದಾನ ಮುಂತಾದುವಕ್ಕೆ ಅಲ್ಲಿಯ ಸ್ಥಾನಾಧಿಪತಿ ಚಂದ್ರಶೇಖರ ಪಂಡಿತನ ಕಾಲನ್ನು ತೊಳೆದು ಕುರುಕುಂದೆ ಗಡಿಂಬದಲ್ಲಿ ೧೮ ಮತ್ತರು ಭೂಮಿ ನೀಡುತ್ತಾನೆ. ಇದೇ ಶಾಸನದಲ್ಲಿ ಮಹಾಮಂಡಳೇಶ್ವರ ಅಯ್ಯರಸನು ಸೂರ್ಯಗ್ರಹಣದ ದಿನ ಕರೆ ಕಂಠಪಂಡಿತನಿಗೆ ಕುರುಕುಂದೆ ಗಡಿಂಬದ ಕೋಲಲ್ಲಿ ೧೨ ಮತ್ತರು ಭೂಮಿ ನೀಡುತ್ತಾನೆ(ಕವಿಶಾಸಂ ೭, ಪು.೯೩). ಗಬ್ಬೂರು ಗ್ರಾಮದ ಅಂಜನೇಯ ದೇವಾಲಯದ ಮುನಿಯ ವಿಗ್ರಹದ ಮೇಲೆ ಸಂಕರದಾಸಲಿಂಗ ಸನ್ಯಾಸಿ ಕೇಸವ ಪಂಡಿತನೆಂದಿದೆ. ಅದೇ ಗ್ರಾಮದ ಕ್ರಿ.ಶ.೧೧೦೩ರಲ್ಲಿ ಮೇಳೇಶ್ವರ ದೇವರ ಸ್ಥಾನಪತಿ ಸದ್ಯೋಜಾತ ಪಂಡಿತರಾಗಿದ್ದರೆಂದು ತಿಳಿಯುತ್ತದೆ (ಕವಿಶಾಸಂ ೭, ಪು.೭೩).

೬.೩. ಮೂರ್ತಿಶಿಲ್ಪ

ಆರಂಭದಲ್ಲಿ ಹಲವಾರು ದೇವತೆಗಳನ್ನು ಪೂಜಿಸುವ ಪದ್ಧತಿ ಇತ್ತು. ಬರುಬರುತ್ತ ಒಂದೇ ದೇವತೆಯ ಹಲವಾರು ರೂಪಗಳು, ಶಕ್ತಿಗಳು ಇವೆಂದು ತಿಳುವಳಿಕೆ ಬಂತು ಎಂದು ಎಸ್.ಕೆ.ರಾಮಚಂದ್ರರಾವ್ ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ. ವೇದಕಾಲದ ತ್ರಿದೇವರುಗಳಾದ ಅಗ್ನಿ, ವಾಯು, ಸೂರ್ಯ ಮತ್ತು ಪೌರಾಣಿಕ ಯುಗದ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಶಿವ, ಕಾಲಕ್ರಮದಲ್ಲಿ ಸ್ಮಾರ್ತ ಸಂಪ್ರದಾಯದವರು ಐದು ದೇವತೆಗಳಾದ ಸೂರ್ಯ, ಗಣೇಶ, ಶಿವ, ವಿಷ್ಣು, ದೇವಿಯ ಪೂಜೆಯನ್ನು ಮಾಡತೊಡಗಿದರು ಎಂದು ಹೇಳುತ್ತಾರೆ.

ಬಹುಶಃ "ವಾಸ್ತುಶಿಲ್ಪಕ್ಕಿಂತ ಪ್ರಾಚೀನವಾದ ಇತಿಹಾಸ ಮೂರ್ತಿಶಿಲ್ಪಕ್ಕೆ ಲಭಿಸುತ್ತದೆ. ಕ್ರಿ.ಪೂ.೩೦೦೦ಕ್ಕೆ ಮುನ್ನ ಅನೇಕ ಸುಂದರವಾದ ಮೂರ್ತಿಗಳು ಸಿಕ್ಕಿವೆ. ಲಿಂಗ, ಪಾಣಿವಾಠ, ವೃಷಭ

ಮತ್ತು ಇತರ ಅನೇಕ ವಿಗ್ರಹಗಳು ಸಿಂಧು ಸಂಸ್ಕೃತಿಯಲ್ಲಿ ಕಂಡುಬರುತ್ತವೆ. ಇಲ್ಲಿ ದೊರೆತಿರುವ ಸ್ತ್ರೀ ವಿಗ್ರಹಗಳೇ ಇದುವರೆಗೆ ಸಿಕ್ಕ ಅತ್ಯಂತ ಪ್ರಾಚೀನ ಮೂರ್ತಿಗಳು"(ಕ.ಸ.ಎ.ಪು.೬೨೮). ಇನ್ನು ಚಾರಿತ್ರಿಕ ಯುಗಕ್ಕೆ ಬಂದರೆ ಅತ್ಯಂತ ಪ್ರಾಚೀನವಾದ ಶಿಲ್ಪಾಕೃತಿಗಳು ಮೌರ್ಯರ ಕಾಲದ ಸ್ತಂಭಗಳು, ಸ್ತೂಪಗಳು ಇವರ ನಂತರ ಕುಶಾನರು, ಕಳಿಂಗರು ನಂತರ ಗುಪ್ತರು. ಗುಪ್ತರ ಕಾಲದಲ್ಲಿ ಮೂರ್ತಿಗಳ ನಿರ್ಮಾಣಕ್ಕೆ ವಿಶೇಷ ಪ್ರೋತ್ಸಾಹ ಸಿಕ್ಕಿತು. ಶಾತವಾಹನರು, ವಾಕಾಟರು, ಪಲ್ಲವರ ಕಾಲದಲ್ಲಿಯೂ ಸಹ ಶಿಲ್ಪಕಲೆ ವಿಶೇಷವಾಗಿ ಬೆಳೆಯಿತು. ನಂತರ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು ಶಿಲ್ಪಕಲೆಗೆ ಕೊಟ್ಟ ಕಾಣಿಕೆ ವಿಶಿಷ್ಟ ಹಾಗೂ ಅದ್ಭುತವಾದದ್ದು.

೬.೩.೧. ಮೂರ್ತಿಯ ಲಕ್ಷಣಗಳು

ವಿಗ್ರಹಗಳ ಕೆತ್ತನೆಗೆ ಬಳಸಿರುವ ಕಲ್ಲು

ದೇವದುರ್ಗ ತಾಲ್ಲೂಕಿನಲ್ಲಿ ದೊರತಿರುವ ಮೂರ್ತಿಗಳನ್ನು ಗಮನಿಸಿದಾಗ ನಮಗೆ ಅನೇಕ ಲಕ್ಷಣಗಳು ಕಂಡುಬರುತ್ತವೆ. ಅದರಲ್ಲಿ ಮುಖ್ಯವಾಗಿ ಇವರು ಬಳಸಿದ ಕಲ್ಲನ್ನು ತೆಗೆದುಕೊಂಡಾಗ ಎರಡು ರೀತಿಯದ್ದಾಗಿವೆ. ಒಂದು ಗಟ್ಟಿಯಾದ ಬಿಳಿ ಕಲ್ಲು ಇನ್ನೊಂದು ಗಟ್ಟಿಯಾದ ಅಥವಾ ಸ್ವಲ್ಪ ಮೃದುವಾದ ಕಪ್ಪು ಕಲ್ಲನ್ನು ಬಳಸಿದ್ದಾರೆ. ಸಾಮಾನ್ಯವಾಗಿ ದೇವಾಲಯವನ್ನು ಹಾಗೂ ದೇವಾಲಯದ ಭಿತ್ತಿಯಲ್ಲಿ ಕೆತ್ತಿದ ಉಬ್ಬುಶಿಲ್ಪಗಳನ್ನು ಇಲ್ಲಿ ಸ್ಥಳೀಯವಾಗಿ ದೊರೆಯುವ ಬಿಳಿ ಕಲ್ಲನ್ನು ಉಪಯೋಗಿಸಿ ಶಿಲ್ಪಗಳನ್ನು ಬಿಡಿಸಿದ್ದಾರೆ. ದೇವಾಲಯದ ಒಳಗೆ ಸ್ಥಾವರ ಮೂರ್ತಿಗಳನ್ನು ಮತ್ತು ಹೊರ ಸ್ಥಳದಲ್ಲಿ ದೊರೆತಿರುವ ಮೂರ್ತಿಗಳನ್ನು ಕಪ್ಪು ಕಲ್ಲಿನಿಂದ ನಿರ್ಮಿಸಿದ್ದಾರೆ. ಈ ಕಪ್ಪು ಕಲ್ಲು ಇಲ್ಲಿ ದೊರೆಯದ್ದಿದ್ದರೂ ಬೇರೆ ಸ್ಥಳಗಳಿಂದ ತಂದು ನಿರ್ಮಿಸಿದ್ದಾರೆ. ಇದನ್ನು ಗಮನಿಸಿದಾಗ ನಮಗೆ ಬಹುತೇಕ ಗೋಚರವಾಗುವ ಒಂದು ಬಹುಮುಖ್ಯ ಅಂಶವೆಂದರೆ ಆಗಿನ ಸಾರಿಗೆ-ಸಂಪರ್ಕದ ವ್ಯವಸ್ಥೆಯ ಬಗ್ಗೆ ತಿಳಿದುಬರುತ್ತದೆ. ಅಲ್ಲದೆ ಇಲ್ಲಿ ದೊರೆತಿರುವ ಶಾಸನ ಕಲ್ಲುಗಳು ಈ ಕಪ್ಪು ಕಲ್ಲಿನಿಂದ ನಿರ್ಮಿಸಿದವುಗಳಾಗಿವೆ.

ಶಿಲ್ಪಗಳನ್ನು ಕಡೆದಿರುವ ರೀತಿ

ದೇವದುರ್ಗ ತಾಲ್ಲೂಕಿನಲ್ಲಿರುವ ಶಿಲ್ಪಗಳು ಕೆಲವೊಮ್ಮೆ ಅಳತೆಗೆ ತಕ್ಕಂತೆ ಕೆತ್ತಿದಿದ್ದಾರೆ. ಕೆಲವು ಸಾರಿ ಕಲ್ಲು ಮುಕ್ಕಾಗಿದ್ದರೆ ಅಥವಾ ಆ ಕಲ್ಲು ಕಡಿಮೆಯಾಗಿದ್ದರೆ ಅದನ್ನು ಅಷ್ಟಕ್ಕೆ ಅಲ್ಲಿ ಆ ಶಿಲ್ಪವನ್ನು ಬಿಡಿಸಿದ್ದಾರೆ. ಕಲ್ಲು ದೊಡ್ಡದಾಗಿದ್ದಾಗ ಮತ್ತು ವಿಶಾಲವಾಗಿದ್ದಾಗ ಮೂರ್ತಿಯನ್ನು ಪಾದದಿಂದ ಶಿರೋಭಾಗದವರೆಗೆ ವಿವರವಾಗಿ ಭಾವಾತ್ಮಕವಾಗಿ ಬಿಡಿಸುತ್ತಿದ್ದರು. ಆಗ ಮೂರ್ತಿಯ ಕೈಗಳು, ಕಾಲು ಮತ್ತು ಇತರ ಆಯುಧ ಮತ್ತು ಆಭರಣಗಳನ್ನು ಸುಂದರವಾಗಿ ಬಿಡಿಸುತ್ತಿದ್ದರು. ಒಂದು ವೇಳೆ ಕಲ್ಲು ಚಿಕ್ಕದ್ದಾಗಿದ್ದಾಗ ಮೂರ್ತಿಯ ಆಯುಧಗಳು, ಆಭರಣಗಳು, ಅಂಕುಡೊಂಕಾಗಿ ಅಥವಾ ಭಾಗಿದ ರೀತಿಯಲ್ಲಿ ಬಿಡಿಸಿದ ರೀತಿಯನ್ನು ಕಾಣಬಹುದು.

ಭಾವ : ಈ ಸ್ಥಳದಲ್ಲಿ ದೊರೆತಿರುವ ಮೂರ್ತಿಗಳು ಹೆಚ್ಚಾಗಿ ಉಬ್ಬುಶಿಲ್ಪಗಳಾಗಿವೆ. ಬಿಡಿಬಿಡಿಯಾದ ಶಿಲ್ಪಗಳು ಕಡಿಮೆ. ಆದರೂ ಅಂಗಾಂಗಗಳನ್ನು ಮತ್ತು ಆಯುಧ, ಆಭರಣಗಳನ್ನು ಕಲಾತ್ಮಕವಾಗಿ ಬಿಡಿಸಿದ್ದಾರೆ. ಆದರೂ ವೀರಗಲ್ಲು ಶಿಲ್ಪಗಳಲ್ಲಿ ಕೆಲವು ಬಾರಿ ಪ್ರಾಣಿಗಳ ಹಾಗೂ ಆಯುಧಗಳನ್ನು ಸ್ಥಳದ ಅಭಾವ ಕಂಡುಬಂದಲ್ಲಿ ಮೂಲೆಯಲ್ಲಿ ಅಥವಾ ಕೆಳಭಾಗದಲ್ಲಿ ಬಿಡಿಸಿದ್ದಾರೆ. ಸ್ತ್ರೀ ದೇವತೆಗಳಾದ ಮಹಿಷಾಸುರ ಮರ್ದಿನಿ, ಕಾಳಿ ಮತ್ತು ವೀರಭದ್ರ ಮುಂತಾದ ಮೂರ್ತಿಗಳ ಮುಖಭಾವದಲ್ಲಿ ಉಗ್ರರೂಪವನ್ನು ಬಿಂಬಿಸುವಂತೆ ಬಿಡಿಸಿದ್ದಾರೆ. ಕೆಲವು ಧ್ಯಾನ ಶಿಲ್ಪಗಳು ಶಾಂತರೂಪದಲ್ಲಿರುವಂತೆ ಚಿತ್ರಿಸಿರುವುದನ್ನು ಈ ತಾಲ್ಲೂಕಿನಲ್ಲಿ ಕಾಣುತ್ತೇವೆ. ಒಟ್ಟಿನಲ್ಲಿ ಮೂರ್ತಿಗಳ ಮುಖಭಾವ ಮತ್ತು ಸಂದರ್ಭಕ್ಕೆ ತಕ್ಕಂತೆ ಕ್ರಿಯಾತ್ಮಕವಾಗಿ ಬಿಡಿಸಿರುವುದನ್ನು ವಿಶೇಷವಾಗಿ ನೋಡಬಹುದು.

ಇಲ್ಲಿ ಇನ್ನೊಂದು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ದೇವದುರ್ಗ ತಾಲ್ಲೂಕು ಅನೇಕ ಬೆಟ್ಟಗಳಿಂದ ಕೂಡಿರುವುದರಿಂದ ಅನೇಕ ಮೂರ್ತಿಗಳನ್ನು ಬೆಟ್ಟದ ಹಾಸುಬಂಡೆಯೊಂದರಲ್ಲಿ ಬಿಡಿಸಿರುವುದನ್ನು ಕಾಣುತ್ತೇವೆ. ಗಬ್ಬೂರು, ದೇವದುರ್ಗ, ರಾಮದುರ್ಗ ಮುಂತಾದ ಕಡೆ ಉಬ್ಬು ಶಿಲ್ಪಗಳಾದ ಉಮಾಮಹೇಶ್ವರ, ಗರುಡ, ವಿಷ್ಣು, ಬ್ರಹ್ಮ, ಆಂಜನೇಯ, ಗಣೇಶ, ನಾಗಮೂರ್ತಿಗಳ ಮುಂತಾದವುಗಳನ್ನು ಕಾಣುತ್ತೇವೆ.

ಇತರೆ ಲಕ್ಷಣಗಳು

ಮೂರ್ತಿಗಳ ವೇಷ ಭೂಷಣಗಳು ಹಾಗೂ ಉಡುಪುಗಳು

ಪ್ರಾಗೈತಿಹಾಸಿಕ ಕಾಲದ ಮಾನವನಿಗೆ ಮೂಲ ವಸ್ತ್ರಗಳಾಗಿದ್ದ ಎಲೆಗಳು ಮತ್ತು ಮರದ ತೊಗಟೆಗಳು ಹಾಗೂ ಪ್ರಾಣಿಗಳ ಚರ್ಮ ಪ್ರಮುಖ ವಸ್ತ್ರಗಳಾಗಿದ್ದವು. ನಂತರ ನಾಗರಿಕತೆ ಬೆಳೆದಂತೆ ಅವನ ಜೀವನ ಶೈಲಿ ಅವನ ರೀತಿ ನೀತಿಗಳು ಬದಲಾದವು. ಅಷ್ಟೇ ಅಲ್ಲ, ಹೊಸ ಹೊಸ ಅವಿಷ್ಕಾರಗೊಂಡಂತೆ ಅವನು ಬಳಸುವ ಸಾಮಗ್ರಿಗಳು, ವಸ್ತುಗಳಲ್ಲಿ ಬದಲಾವಣೆಯಾಯಿತು. ಈ ವೇಷಭೂಷಣ, ಉಡುಪು, ಧರಿಸುವಿಕೆ ಮುಂದೆ ಒಂದು ಕಲೆಯಾಗಿ ಬೆಳೆಯಿತು. ಇಂತಹ ಉಡುಪುಗಳನ್ನು ಆಭರಣಗಳನ್ನು ಅನೇಕ ಮೂರ್ತಿಶಿಲ್ಪಗಳಲ್ಲಿ ಕಾಣುತ್ತೇವೆ. ಮೂರ್ತಿಶಿಲ್ಪಗಳಲ್ಲದೆ, ಸ್ತ್ರೀ-ಪುರುಷರ ಚಿತ್ರಗಳಿಂದ ಆಯಾ ಕಾಲದಲ್ಲಿ ಪ್ರಚಲಿತವಿದ್ದ ಉಡುಪುಗಳ ಮಾದರಿಗಳನ್ನೂ ನಾವು ಗಮನಿಸಬಹುದಾಗಿದೆ.

ಪುರುಷರ ಉಡುಪು

ಶಿಲ್ಪಗಳಲ್ಲಿ ಪುರುಷರ ದೇವತೆಗಳ ಶಿಲ್ಪಗಳು ಅಧಿಕವಾಗಿ ದೊರೆಯುತ್ತವೆ. ದೇವತೆಗಳು, ಮುನಿಗಳು, ವೀರರು, ಸೈನಿಕರು ಮುಂತಾದವರ ಚಿತ್ರಣ ಕಂಡುಕೊಳ್ಳಬಹುದಾಗಿದೆ. ರಾಮದುರ್ಗದ ಮಹಾಸತಿ ಕಲ್ಲಿನಲ್ಲಿ ವೀರನು ವೀರಗಚ್ಚೆ ಹಾಕಿದ್ದು, ನಿರಿಗೆಯನ್ನು ಉದ್ದವಾಗಿ ಕೆಳಗೆ ಬಿಟ್ಟಿದಾನೆ. ಇದು

೧೭ನೇ ಶತಮಾನದ ವೀರಗಲ್ಲು ಆಗಿದೆ. ರಾಯಕುಂಪಿಯ ವೀರಗಲ್ಲಿನಲ್ಲಿ ಸರಳವಾದ ದೋತ್ರವನ್ನ ಹಾಕಿಕೊಂಡಿದ್ದಾನೆ. ಯಾವುದೇ ನಿರಿಗೆ ಇರುವುದಿಲ್ಲ. ಮಸರಕಲ್ಲು ವೀರಗಲ್ಲಿನಲ್ಲಿ ಚಡ್ಡಿಯ ಆಕಾರದಲ್ಲಿ ಸರಳವಾದ ವೀರಗಚ್ಚೆ ಇದ್ದು, ಕಚ್ಚೆಯನ್ನು ಎಡಭಾಗದಲ್ಲಿ ಬಿಟ್ಟಿದ್ದಾನೆ. ದೇವದುರ್ಗದ ೧೬-೧೭ನೇ ಶತಮಾನದ ವೀರಗಲ್ಲಿನಲ್ಲಿ ವೀರಗಚ್ಚೆಗಳು ತೊಟ್ಟಿದ್ದು, ಸೊಂಟದಲ್ಲಿ ಒಂದು ಪಟ್ಟಿಯನ್ನು ಧರಿಸಿದ್ದಾನೆ. ಹಾಗೂ ವೀರಗಚ್ಚೆ ನಿರಿಗೆಯನ್ನು ಕೆಳಗೆ ಬಿಟ್ಟು, ಅದು ತುದಿಯಲ್ಲಿ ವಿವಿಧ ಆಕಾರದಲ್ಲಿ ಬಿಡಿಸಲಾಗಿದೆ. ಅವು ಹೂಗಳ ಆಕಾರ ಮತ್ತು ಮಣಿಗಳಿಂದ ಅಲಂಕೃತವಾಗಿರುವಂತೆ ಬಿಡಿಸಲಾಗಿದೆ. ಗಬ್ಬೂರಿನಲ್ಲಿ ಅಗಲವಾದ ಹಾಗೂ ವೀರಗಚ್ಚೆ ಇದ್ದು, ಅದರ ಮೇಲೆ ಸುರುಳಿ ಆಕಾರದಲ್ಲಿ ಕಡಿಮೆ ಉದ್ದದ ನಿರಿಗೆ ಇದೆ. ಇನ್ನು ಕೆಲವು ವೀರಗಲ್ಲುಗಳಲ್ಲಿ ಪೀರಗಚ್ಚೆಯ ಮೇಲೆ ಪಟ್ಟಿಯ ಆಕಾರದಲ್ಲಿ ಬಿಡಿಸಲಾಗಿದೆ. ಚಂದನಕೇರಿಯ ವೀರಭದ್ರ ಶಿಲ್ಪದಲ್ಲಿ ದೋತ್ರವಿದ್ದು, ಅದರ ಮಣಿಗಳ ಸರವನ್ನು ಬಿಡಿಸಲಾಗಿದೆ. ವೀರನು ಸಹ ತನ್ನ ಶೌರ್ಯಕ್ಕೆ ತಕ್ಕಂತೆ ಉಡುಪುಗಳನ್ನು ಅನೇಕ ಮಣಿಗಳಿಂದ ಅಲಂಕೃತವಾಗಿ ಆಭರಣಗಳನ್ನು ಧರಿಸಿರುತ್ತಾನೆ.

ಸ್ತ್ರೀಯರ ಉಡುಪುಗಳು

ವೇಷಭೂಷಣಗಳು ವಿಶೇಷವಾಗಿ ನಾವು ಸ್ತ್ರೀಯರಲ್ಲಿ ಕಾಣಬಹುದು. ಪ್ರಾಚೀನ ಕಾಲದಿಂದ ಇಂದಿಗೂ ಉಡುಪುಗಳ ವಿನ್ಯಾಸದ ಬಗ್ಗೆ ಸ್ತ್ರೀಯರು ಹೆಚ್ಚಿನ ಮಹತ್ವ ಕೊಟ್ಟಿರುತ್ತಾರೆ. ಮಹಾಸತಿಯ ಉಡುಪಿನ ಬಗ್ಗೆ ನಾವು ನೋಡಿದಾಗ ಸೀರೆಯ ಬಳಕೆ ಹೆಚ್ಚಿಗೆ ಚಿತ್ರಿತವಾಗಿರುವುದು ಗಮನಕ್ಕೆ ಬರುತ್ತದೆ. ಸೀರೆಯನ್ನು ಹಿಂದಗಡೆಗೆ ಸೆರಗು ಬಿಡುವುದು, ನೆರಿಗೆಗಳನ್ನು ಹಾಕುವುದು ಮತ್ತು ಸೀರೆಯನ್ನು ಕಚ್ಚೆಯಂತೆ ಕಟ್ಟಿಕೊಂಡಿರುತ್ತಾರೆ. ಸೊಂಟಕ್ಕೆ ಅಲಂಕೃತ ವಸ್ತ್ರಗಳನ್ನು ಬಿಗಿದುಕೊಂಡಿರುತ್ತಾರೆ. ಕೆಲವೊಮ್ಮೆ ಸೀರೆಯ ಕುಚ್ಚು ಹೊಕ್ಕಳಿನಿಂದ ಪಾದದವರೆಗೂ ಬಿಟ್ಟಿರುತ್ತಾರೆ. ದೇವತೆಗಳ, ರಾಣಿಯ ಶಿಲ್ಪಗಳಲ್ಲಿ ಸುಂದರವಾದ ವಿವಿಧ ವಸ್ತ್ರಗಳನ್ನು ಧರಿಸಿರುವುದು ಕಾಣಬಹುದು. ಅರಕೇರಿಯ ಸತಿ ಶಿಲ್ಪದಲ್ಲಿ ಸೀರೆಯನ್ನು ಕೆಳಗಿನವರೆಗೂ ಬಿಟ್ಟಿದ್ದಾಳೆ. ಇದರೊಂದಿಗೆ ನಿರಿಗೆಯು ಸಹ ಕೆಳಗಿನವರೆಗೆ ಇದೆ. ಇದು ಅಷ್ಟೇನೂ ವಿಶೇಷವಾಗಿ ಇಲ್ಲವಾದರೂ, ಮೇಲೆ ಆಭರಣಗಳನ್ನು ಧರಿಸಿದ್ದಾಳೆ. ಇದೇ ತರಹ ಇತರೆ ವೀರಗಲ್ಲುಗಳಲ್ಲಿ ಕಾಣಬಹುದು.

ಆಭರಣಗಳು : ಭಾರತದ ಇತಿಹಾಸವನ್ನು ನಾವು ಮೆಲುಕು ಹಾಕಿದಾಗ ಈ ಆಭರಣಗಳ ಚರಿತ್ರೆ ಕ್ರಿ.ಪೂ. ೩೦೦೦ ವರ್ಷಗಳ ಹಿಂದಿನಿಂದಲೇ ಪ್ರಾರಂಭವಾಗುತ್ತದೆ. ಪ್ರಾಚೀನ ನಗರಗಳಾದ ಹರಪ್ಪ ಮತ್ತು ಮೆಹೆಂಜೋದಾರೋವಿನಲ್ಲಿ ನಡೆದ ಸಂಶೋಧನೆಯಲ್ಲಿ ದೊರೆತ ಮಾತೃದೇವತೆಯ ಶಿಲ್ಪಗಳಲ್ಲಿ ಈ ಆಭರಣಗಳನ್ನು ಕಾಣುತ್ತೇವೆ. ಅದರಲ್ಲಿ ಕರ್ನಾಟಕವನ್ನು ಆಳಿದ ರಾಜಮನೆತನಗಳಾದ ಚಾಳುಕ್ಯ, ಹೊಯ್ಸಳ ವಿಜಯನಗರದ ಕಾಲದಲ್ಲಿ ಈ ಕಲೆ ಉನ್ನತ ಹಂತವನ್ನೇ ಮುಟ್ಟಿತೆನ್ನಬಹುದು. ಅದರಲ್ಲಿ

ಪ್ರಮುಖವಾಗಿ ನಮ್ಮ ಅಧ್ಯಯನ ಪ್ರದೇಶದಲ್ಲಿ ದೊರೆತ ಕೆಲವು ಆಭರಣಗಳ ವಿವರಣೆ ಈ ಕೆಳಗಿನಂತೆ ಇದೆ.

ಹಣೆಸರ : ಪ್ರಧಾನವಾಗಿ ಈ ಹಣೆಸರವನ್ನು ಹಣೆಯಿಂದ ಸ್ವಲ್ಪ ಮೇಲಕ್ಕೆ ಸಣ್ಣ ಸಣ್ಣ ಮಣಿಗಳಿಂದ ಮಾಡಿದ ಹಣೆಸರವನ್ನು ತಲೆಭಾಗದಲ್ಲಿ ಕಟ್ಟಿಕೊಂಡಿರುತ್ತಾರೆ. ಇದು ಎರಡು ಅಥವಾ ಮೂರು ಸಾಲಿನ ಮಣಿಗಳಿಂದ ಕೂಡಿರುತ್ತದೆ. ಈ ಹಣೆಸರವನ್ನು ದೇವದುರ್ಗ ಪ್ರದೇಶದಲ್ಲಿ ಬರುವ ಕ್ಯಾದ್ಗಿಗೇರಾ ಸತಿಯ ಶಿಲ್ಪದಲ್ಲಿ ದಾರದ ಆಕಾರದಲ್ಲಿರುವ ಒಂದು ಹಣೆಸರವಿದೆ. ಅರೆಕೇರಿಯ ಒಂದು ಸತಿಕಲ್ಲಿನಲ್ಲಿ ಹಣೆಸರವಿದೆ. ಗಬ್ಬೂರಿನ ಬೆಟ್ಟದಲ್ಲಿ ಉಮಾಮಹೇಶ್ವರ ಶಿಲ್ಪದಲ್ಲಿ ಹಣೆಯಿಂದ ತಲೆ ಮೇಲೆ ಮಣಿಗಳಿಂದ ಅಲಂಕೃತವಾದ ಕಿರೀಟದ ಆಕಾರದಲ್ಲಿ ಬಿಡಿಸಲಾಗಿದೆ.

ಕೊರಳಹಾರ : ಕೊರಳಹಾರಗಳು ಬೇರೆ ಬೇರೆ ರೀತಿಯ ಆಕಾರದಲ್ಲಿರುವುದನ್ನು ಕಾಣಬಹುದು. ಎರಡು ಹಂತದಲ್ಲಿರುವ ಸರ, ಮೂರು-ನಾಲ್ಕು ಹಂತದಲ್ಲಿರುವ ಕೊರಳಹಾರ, ಮಣಿಗಳಿಂದ ಮಾಡಿದ ಹಾರ, ಕಮಲದ ದಳಗಳ ಆಕಾರಗಳಲ್ಲಿ ಹೀಗೆ ವಿವಿಧ ರೀತಿಯಲ್ಲಿ ಕಾಣಬಹುದು. ಅದು ಕುತ್ತಿಗೆಯಿಂದ ಸ್ತನಗಳ ಮುಂತುದಿಯವರೆಗೂ ಅಥವಾ ಹೊಕ್ಕುಳವರೆಗೂ ಇನ್ನೂ ಕೆಲವು ಬಾರಿ ಕೇವಲ ಕುತ್ತಿಗೆಯಲ್ಲಿರಬಹುದಾದ ಕೊರಳಹಾರಗಳನ್ನು ಕಾಣುತ್ತೇವೆ. ಕೆಲವು ಕೊರಳಹಾರಗಳಲ್ಲಿ ಮಧ್ಯದಲ್ಲಿ ದೊಡ್ಡದಾದ ಪದಕ ಅಥವಾ ಗುಂಡುಗಳ ಆಕಾರದಲ್ಲಿ ಬಿಡಿಸಿರುತ್ತಾರೆ. ಗಬ್ಬೂರಿನ ವೀರಗಲ್ಲುಗಳಲ್ಲಿ ಎರಡು ಹಂತದ ಸರವಿದ್ದು, ಅದರಲ್ಲಿ ಒಂದು ಪದಕವಿದೆ. ಇನ್ನು ಕೆಲವು ವೀರಗಲ್ಲುಗಳಲ್ಲಿ ದೊಡ್ಡದಾದ ಸರವಿದೆ. ಅದರಲ್ಲಿ ಪದಕವಿದೆ. ಇನ್ನೊಂದು ವೀರಗಲ್ಲಿನಲ್ಲಿ ಮೂರು ಹಂತದ ಸರಳವಾದ ಕೊರಳ ಸರವಿದೆ. ಕ್ಯಾದ್ಗಿಗೇರೆಯ, ಅರಕೇರಿಯ ವೀರಗಲ್ಲು ಹಾಗೂ ಮಹಾಸತಿಯರ ಶಿಲ್ಪಗಳಲ್ಲಿ ಎರಡು ಅಥವಾ ಮೂರು ನಾಲ್ಕು ಹಂತದ ಮಣಿಸರ ಹಾಗೂ ಕೆಲವು ಸರಳವಾದ ಸರಗಳನ್ನು ಬಿಡಿಸಿದ್ದು, ಅವು ಸ್ತನಗಳ ತುದಿಗೂ ಅಥವಾ ಹೊಕ್ಕುಳದವರೆಗೂ ಬಿಡಿಸಲಾಗಿದೆ. ಇವುಗಳಿಗೆ ತ್ರಿಕೋನ ಆಕಾರ, ಕಮಲದ ದಳಗಳ ಆಕಾರ, ಗೋಲಾಕಾರದ ಪದಕಗಳನ್ನು ಸಹ ಬಿಡಿಸಲಾಗಿದೆ. ಗಬ್ಬೂರಿನ ಬ್ರಹ್ಮನ ಕೊರಳಹಾರವು ಐದು ಹಂತದ್ದಾಗಿದೆ. ಉಮಾಮಹೇಶ್ವರ ಶಿಲ್ಪಗಳಲ್ಲಿ ೩-೪ ಹಂತದ ಕೊರಳಹಾರವಿದ್ದು, ಅದನ್ನು ಬೇರೆ ಬೇರೆ ಆಕಾರಗಳಲ್ಲಿ ಬಿಡಿಸಲಾಗಿದೆ. ದೇವದುರ್ಗ, ಹುನಗುಂದಬಾಡ, ಚಂದನಕೇರಿ ಬೇರೆ ಬೇರೆ ಗ್ರಾಮಗಳಲ್ಲಿರುವ ಶಿಲ್ಪಗಳಲ್ಲಿ ಈ ಕೊರಳಹಾರವನ್ನು ಕಾಣುತ್ತೇವೆ.

ಬಳೆಗಳು : ಬಳೆಗಳು ಸ್ತ್ರೀಯರ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಇವು ಮುತ್ತೈದೆಯ ಸಂಕೇತ. ಇವು ಸರಳವಾಗಿರುವುದು ಸಾಮಾನ್ಯ. ಇಂತಹ ಬಳೆಗಳನ್ನು ಅನೇಕ ಮಹಾಸತಿಯರ ಶಿಲ್ಪಗಳಲ್ಲಿ ಕಾಣುತ್ತೇವೆ. ಕ್ಯಾದಿಗೆರೆಯ ಸತಿಶಿಲ್ಪದಲ್ಲಿ ಅರಕೇರಿಯ ಸತಿ ಶಿಲ್ಪದಲ್ಲಿ, ಹುನುಗುಂದ ಬಾಡಾ, ಮಸರಕಲ್ಲು ವೀರ ಮಹಾಸತಿಯರ ಶಿಲ್ಪಗಳಲ್ಲಿ ಈ ತರಹ ಬಳೆಗಳನ್ನು ಬಿಡಿಸಲಾಗಿದೆ.

ಕೈಕಡಗ : ಹೆಚ್ಚಾಗಿ ಪುರುಷರು ಬಲಗೈಯಲ್ಲಿ ಧರಿಸುತ್ತಾರೆ. ಕೆಲವು ಶಿಲ್ಪಗಳಲ್ಲಿ ಎರಡು ಕೈಯಲ್ಲಿವೆ. ಇನ್ನು ಸ್ತ್ರೀ ಶಿಲ್ಪಗಳಲ್ಲಿ ಹಾಗೂ ದೇವತೆಗಳ ಶಿಲ್ಪದಲ್ಲಿ ಕೈಕಡಗಗಳನ್ನು ಕಾಣುತ್ತೇವೆ. ಇವು ದಪ್ಪವಾಗಿದ್ದು, ಗೋಲಾಕಾರದಲ್ಲಿ ಮತ್ತು ಮಣಿಗಳಿಂದ ಅಲಂಕೃತವಾದದ್ದನ್ನು ಸಹ ಕಾಣಬಹುದು. ಮಸರಕಲ್ಲು, ಚಂದನಕೇರಿ, ಅರಕೇರಾ, ಕ್ಯಾದ್ಗಿಗೇರೆ, ದೇವದುರ್ಗ, ಗಬ್ಬೂರು ಹುನುಗುಂದಾಬಾಡ ಮಸರಕಲ್ಲು ರಾಮದುರ್ಗ ಮುಂತಾದ ಸ್ಥಳಗಳಲ್ಲಿ ದೊರೆತ ವೀರಗಲ್ಲುಗಳಲ್ಲಿ, ಸತಿಕಲ್ಲುಗಳಲ್ಲಿ ಹಾಗೂ ವೀರಭದ್ರ, ಭೈರವಿ, ಸೂರ್ಯ, ಉಮಾಮಹೇಶ್ವರ, ಬ್ರಹ್ಮ, ಆಂಜನೇಯ, ಗಣೇಶ, ದ್ವಾರಪಾಲಕ ಮುಂತಾದವರ ಕೈಯಲ್ಲಿ ಈ ಕಡಗಳನ್ನು ಬಿಡಿಸಿದ್ದನ್ನು ಇಲ್ಲಿ ದೊರೆತ ಸ್ಮಾರಕಗಳಲ್ಲಿ ಕಾಣುತ್ತೇವೆ.

ಕಾಲ್ಕಡಗ : ಇದು ಕೈಕಡಗಗಳಿಗಿಂತ ದಪ್ಪವಾಗಿದ್ದು, ಬಳೆಯಾಕಾರದಲ್ಲಿ ಮಾಡಿದ ಆಭರಣವಾಗಿದೆ. ಇದನ್ನು ಕಾಲಿಗೆ ಧರಿಸುವುದರಿಂದ ಇದನ್ನು ಕಾಲ್ಕಡಗ ಎಂದು ಕರೆಯಲಾಗಿದೆ. ದೇವದುರ್ಗ ತಾಲ್ಲೂಕಿನ ಗ್ರಾಮಗಳಾದ ಗಬ್ಬೂರು. ಅರೇಕೇರಾ, ಚಂದನಕೇರಿ, ಕ್ಯಾದ್ಗಿಗೇರಾ, ಅಲ್‌ಕೋಡ್, ಬೆನಕಲ್, ಮಸರಕಲ್ಲು ಮುಂತಾದ ಗ್ರಾಮಗಳಲ್ಲಿ ದೊರೆತ ವೀರಗಲ್ಲು, ಸತಿಯರ ಶಿಲ್ಪ, ವೀರಭದ್ರ ಶಿಲ್ಪ, ಗಣೇಶನ ಶಿಲ್ಪ ಬೇರೆ ಬೇರೆ ಶಿಲ್ಪಗಳಲ್ಲಿ ಹಾಗೂ ಪ್ರಾಣಿಗಳ ಕಾಲಿನಲ್ಲಿ ಸಹ ಕಡಗಗಳನ್ನು ಕಾಣುತ್ತೇವೆ.

ತೋಳುಬಂದಿ : ಇದು ಹೆಸರು ಸೂಚಿಸುವಂತೆ ತೋಳಿನಲ್ಲಿ ಹಾಕಿಕೊಳ್ಳುವ ಒಂದು ಆಭರಣವಾಗಿದೆ. ಇದು ಬಳೆಗಳಿಗಿಂತಲೂ ದಪ್ಪವಾಗಿದ್ದು, ಪುರುಷರಾದರೆ ಬರೀ ತೋಳಿನ ಮೇಲೆ, ಸ್ತ್ರೀಯರಾದರೆ ರವಿಕೆಯ ತೋಳಿನ ಮೇಲೆ ಇದನ್ನು ಧರಿಸುವರು. ಇದನ್ನು ಲೋಹಗಳಿಂದ ತಯಾರಿಸಿದ್ದು, ಇದನ್ನು ಅನೇಕ ರೀತಿಯಲ್ಲಿ ಚಿತ್ರ ಚಿತ್ರವಾಗಿ ಬಿಡಿಸಿರುತ್ತಾರೆ. ಬೆನಕಲ್ಲು, ಅಲಕೋಡ್, ಅರೆಕೇರಿ, ಚಂದನಕೇರಿ, ಕ್ಯಾದ್ಗಿಗೇರಿ, ಗಬ್ಬೂರು, ಹುನುಗುಂದಾ ಬಾಡಾ, ದೇವದುರ್ಗ, ಕಾಕರಕಲ್, ಅಣೆಮಲ್ಲೇಶ್ವರ ಮುಂತಾದ ಸ್ಥಳಗಳಲ್ಲಿ ದೊರೆತ ಗಣೇಶನ ಶಿಲ್ಪ, ಆಂಜನೇಯ, ವೀರಭದ್ರ, ಭದ್ರಕಾಳಿ, ಭೈರವಿ, ಸೂರ್ಯ, ಉಮಾಮಹೇಶ್ವರ ಮುಂತಾದ ಶಿಲ್ಪಗಳಲ್ಲಿ ತೋಳುಬಂದಿಯನ್ನು ಬಿಡಿಸಲಾಗಿದೆ. ಅದರಲ್ಲೂ ವೀರಗಲ್ಲಿನ ಶಿಲ್ಪಗಳಲ್ಲಿ ತೋಳಬಂದಿಯನ್ನು ವಿವಿಧ ಆಕಾರಗಳಲ್ಲಿ ಬಿಡಿಸಲಾಗಿದೆ. ಮಾಸರಕಲ್ಲಿನ ವೀರಗಲ್ಲಿನ ಶಿಲ್ಪದಲ್ಲಿ ವೀರನು ಎರಡು ಹಂತದ ತೋಳುಬಂದಿ ಧರಿಸಿದ್ದಾನೆ. ಚಂದನಕೇರಿಯ ವೀರಭದ್ರ ಶಿಲ್ಪ ಮತ್ತು ಭೈರವಿಯ ಶಿಲ್ಪದಲ್ಲಿ ಮಣಿ ಆಕಾರದಲ್ಲಿರುವ ತೋಳುಬಂದಿ ಇದೆ. ಕ್ಯಾದ್ಗಿಗೇರಿ ವೀರಗಲ್ಲಿನಲ್ಲಿ ದಪ್ಪವಾದ ತೋಳಬಂದಿ ಮತ್ತು ಮಹಾಸತಿಯರ ಎರಡು ಹಂತದ ಹಾಗೂ ಮಣಿ ಆಕಾರದ ತೋಳಬಂಧಿ ಧರಿಸಿದ್ದಾರೆ. ಅರಕೇರಿಯ ವೀರನು ಎರಡು ಹಂತದ ತೋಳುಬಂದಿ ಧರಿಸಿದ್ದಾನೆ. ಮತ್ತು ಅರಕೇರಿಯ ಮಹಾಸತಿಯ ಶಿಲ್ಪ ಮೂರು ಹಂತದ ತೋಳುಬಂದಿ ಹಾಕಿದ್ದಾಳೆ. ರಾಮದುರ್ಗದ ವೀರಗಲ್ಲಿನಲ್ಲಿ ಬಲಗೈಯಲ್ಲಿ ಮಣಿಕಾರದ ಎರಡು ಹಂತದಲ್ಲಿದೆ, ಎಡಗೈಯಲ್ಲಿ ಮೂರು ಹಂತದ ತೋಳುಬಂದಿ ಇದೆ. ಇಲ್ಲಿ ದೊರೆತಿರುವ ಶಿಲ್ಪಗಳಲ್ಲಿ ಬೇರೆ ಬೇರೆ ರೀತಿಯ ತೋಳುಬಂದಿಗಳನ್ನು ಬಿಡಿಸಲಾಗಿದೆ.

ಸೊಂಟಾಭರಣ : ಸೊಂಟದಲ್ಲಿ ಸಹ ಅನೇಕ ರೀತಿಯ ಆಭರಣಗಳನ್ನು ಹಾಕಿರುವುದನ್ನು ಸ್ತ್ರೀ-ಪುರುಷ ಶಿಲ್ಪಗಳಲ್ಲಿ ಕಾಣಬಹುದು. ಕ್ಯಾದ್ಗಿಗೇರಿಯ ವೀರಗಲ್ಲು ಹಾಗೂ ಮಹಾಸತಿಯರ ಶಿಲ್ಪಗಳಲ್ಲಿ ಸೊಂಟಾಭರಣವನ್ನು ಬಿಡಿಸಲಾಗಿದೆ. ಸೊಂಟಾದಲ್ಲಿ ಮೂರು ಹಂತದ ಮಣಿಗಳಿಂದ ಕೂಡಿದ ಸೊಂಟ ಆಭರಣವಿದೆ. ಅದೇ ಕಲ್ಲಿನಲ್ಲಿ ಮಹಾಸತಿಯ ಅಗಲವಾದ ಮಣಿಗಳಿಂದ ಅಲಂಕೃತವಾದ ಸೊಂಟಾಭರಣವಿದೆ. ಅದೇ ಗ್ರಾಮದ ಅನೇಕ ವೀರಗಲ್ಲುಗಳಲ್ಲಿ ಎರಡು ಮೂರು ಹಂತದಲ್ಲಿರುವ ಸೊಂಟಾಭರಣವನ್ನು ಕಾಣಬಹುದು.

ಅರಕೇರಿಯ ಸತಿಶಿಲ್ಪದಲ್ಲಿ ಅಗಲವಾದ ಆಭರಣವಿದೆ. ವೀರಶಿಲ್ಪದಲ್ಲಿ ಎರಡು ಹಂತದ ಆಭರಣವಿದೆ. ರಾಮದುರ್ಗ ಸತಿಶಿಲ್ಪದಲ್ಲಿ ವೀರನು ಸೊಂಟಾಭರಣ ಧರಿಸಿದ್ದು, ಅದು ೩ ಹಂತದಲ್ಲಿದೆ. ಮಧ್ಯದಲ್ಲಿ ಚಕ್ರ ಆಕಾರದಲ್ಲಿದೆ. ಗಬ್ಬೂರಿನ ಸೇವುಣರ ಸೂರ್ಯ ಶಿಲ್ಪದಲ್ಲಿ ಅತ್ಯಂತ ಸುಂದರವಾದ ಹಾಗೂ ಮಣಿಗಳಿಂದ ಅಲಂಕೃತವಾದ ಸೊಂಟಾಭರಣವಿದೆ. ಅದು ಮುತ್ತು ರತ್ನಗಳಿಂದ ತಯಾರಿಸಲಾಗಿದೆ. ಇದೇ ಗ್ರಾಮದ ಬೆಟ್ಟದಲ್ಲಿರುವ ಬ್ರಹ್ಮನ ಶಿಲ್ಪದಲ್ಲಿ ಉಮಾಮಹೇಶ್ವರ ಶಿಲ್ಪದಲ್ಲಿ ಈ ಸೊಂಟಾಭರಣವಿದೆ. ಇದೇ ತರಹ ಸೊಂಟಾಭರಣವನ್ನು ರಾಯಚೂರಿನ ವಸ್ತು ಸಂಗ್ರಹಾಲದಲ್ಲಿರುವ ಗಬ್ಬೂರಿನ ಭಗ್ನಗೊಂಡ ಶಿಲ್ಪಗಳಲ್ಲಿ ಕಾಣಬಹುದು. ಚಂದನಕೇರಿಯ ಭೈರವಿ ಶಿಲ್ಪವು ಸೊಂಟಾಭರಣ ಮಣಿ ಹಾಗೂ ಗೋಲಾಕಾರದ ರತ್ನಗಳಿಂದ ಅಲಂಕೃತಗೊಂಡಿದೆ. ಸೂರ್ಯನ ಶಿಲ್ಪವು ಸುಂದರವಾದ ಸೊಂಟಾಭರಣವಿದೆ. ಅಲ್ಲಿಯ ವೀರಭದ್ರಶಿಲ್ಪದಲ್ಲಿ ಸೊಂಟಾಭರಣವಿದೆ. ಅಲ್‌ಕೋಡ್ ಭದ್ರಕಾಳಿಯ ಶಿಲ್ಪವು ಮಣಿಗಳಿಂದ ಅಲಂಕಾರವಾದ ಸೊಂಟಾಭರಣವನ್ನು ಹೊಂದಿದೆ.

ಕಿವಿಯ ಆಭರಣಗಳು : ಕಿವಿಯಲ್ಲಿ ವಿವಿಧ ರೀತಿಯ ಆಭರಣಗಳನ್ನು ಸ್ತ್ರೀ-ಪುರುಷ ಶಿಲ್ಪಗಳಲ್ಲಿ ಕಾಣುತ್ತೇವೆ. ಸ್ತ್ರೀಯರಿಗೆ ಇದು ವಿಶಿಷ್ಟವಾದದ್ದು. ಅವು ರಿಂಗ್ ನ ಆಕಾರದಲ್ಲಿ ಓಲೆಯ ಆಕಾರದಲ್ಲಿ ಇವುಗಳನ್ನು ಜುಮಕಿ, ಲೋಲಾಕು ಮುಂತಾದ ಹೆಸರಿನಿಂದಲೂ ಸಹ ಕರೆಯುತ್ತಾರೆ.

ಕ್ಯಾದ್ಗಿಕೇರಿಯ ಅನೇಕ ವೀರಗಲ್ಲುಗಳಲ್ಲಿ ಮತ್ತು ಸತಿಕಲ್ಲುಗಳಲ್ಲಿ ಹೆಚ್ಚು ಕಡಿಮೆ ಒಂದೇ ತರಹದ ಕಿವಿಯ ಆಭರಣಗಳನ್ನು ಕಾಣಬಹುದು. ಅವು ಲೋಲಾಕು ಆಕಾರದಲ್ಲಿವೆ. ಕಿವಿಯಿಂದ ಕೆಳಗೆ ಸರಪಳಿಯನ್ನು ಇಳಿಬಿಟ್ಟು, ಅವುಗಳ ತುದಿಗೆ ಸಣ್ಣ ಸಣ್ಣ ಗುಂಡುಗಳನ್ನು ಹಾಕಲಾಗಿದೆ. ಅರಕೇರಿಯ ವೀರಗಲ್ಲು, ಸತಿಯರ ಶಿಲ್ಪದಲ್ಲಿ ಗುಂಡು ಆಕಾರದಲ್ಲಿವೆ. ದೇವದುರ್ಗದ ವೀರಗಲ್ಲುಗಳಲ್ಲಿ ನಾಲ್ಕು ಗುಂಡುಗಳನ್ನು ಹೊಂದಿದ ಕಿವಿಯೋಲೆ ಇದೆ. ಆಲ್‌ಕೋಡ್ ಭದ್ರಕಾಳಿ ಶಿಲ್ಪದಲ್ಲಿ ದಪ್ಪವಾದ ಸರಳ ಆಭರಣವಿದೆ. ಗಬ್ಬೂರಿನ ಬ್ರಹ್ಮನ ಶಿಲ್ಪದಲ್ಲಿ ಚಕ್ರದ ಆಕಾರದ ಓಲೆಗಳಿವೆ. ಉಮಾಮಹೇಶ್ವರನ ಶಿಲ್ಪದಲ್ಲಿ ಕೆಳಗೆ ಇಳಿಬಿದ್ದ ಓಲೆಗಳಿವೆ. ಸೂರ್ಯನ ಕಿವಿಯಲ್ಲಿ ಚಕ್ರದ ಅಕಾರದ ಓಲೆಗಳಿವೆ. ಚಂದನಕೇರಿಯ ಭೈರವಿಯ ಶಿಲ್ಪ ಹಾಗೂ ಸೂರ್ಯನ ಶಿಲ್ಪದಲ್ಲಿ ದೊಡ್ಡದಾದ ರಿಂಗ್‌ಗಳಿದ್ದು, ಅವುಗಳ

ಮಧ್ಯ ರಂಧ್ರವಿದೆ. ರಾಯಚೂರಿನಲ್ಲಿರುವ ಗಬ್ಬೂರಿನ ದಂಪತಿಗಳ ಶಿಲ್ಪದಲ್ಲಿ ರಿಂಗ್‌ಗಳ ಆಕಾರದ ಓಲೆಗಳಿವೆ. ಇವುಗಳಲ್ಲದೆ, ವೀರಭದ್ರಶಿಲ್ಪ, ದ್ವಾರಪಾಲಕರು, ವಿಷ್ಣು ಇತರ ಶಿಲ್ಪಗಳಲ್ಲಿ ಸಹ ವಿವಿಧ ರೀತಿಯ ಕಿವಿ ಆಭರಣಗಳನ್ನು ಕಾಣುತ್ತೇವೆ.

ಕಿರೀಟಗಳು : ಕಿರೀಟ ಹೆಚ್ಚಾಗಿ ರಾಜವಂಶಸ್ಥರಲ್ಲಿ ಮುಖ್ಯವಾಗಿ ಕಾಣುತ್ತವೆ. ಇನ್ನು ಸೂರ್ಯ, ವಿಷ್ಣು ದುರ್ಗಾ, ನಾರಾಯಣ ಮುಂತಾದ ದೇವತೆಗಳಲ್ಲಿ ಸಹ ಕಿರೀಟವಿರುವುದನ್ನು ನಾವು ನೋಡಬಹುದು. ಇದು ವಿವಿಧ ಮುತ್ತು ರತ್ನಗಳಿಂದ ಶೃಂಗರಿಸಲ್ಪಟ್ಟಿರುತ್ತದೆ. ಗಬ್ಬೂರಿನ ವೆಂಕಟೇಶ್ವರ ದೇವಾಲಯದಲ್ಲಿರುವ ಸೂರ್ಯ ಶಿಲ್ಪದಲ್ಲಿ ಕಿರೀಟವಿದ್ದು ಅದು ಅತ್ಯಂತ ಸುಂದರವಾಗಿ ಮಾಡಲಾಗಿದೆ. ಮುತ್ತು ರತ್ನಗಳಿಂದ ಅದನ್ನು ಶೃಂಗರಿಸಲಾಗಿದೆ. ಈ ಶಿಲ್ಪವು ದೇವಗಿರಿ ಯಾದವರ ಕಾಲದ್ದಾಗಿದೆ. ಚಂದನಕೇರಿಯ ೧೦-೧೧ನೇ ಶತಮಾನದ ಸೂರ್ಯ ಶಿಲ್ಪದಲ್ಲಿ ಕಿರೀಟವಿದ್ದು, ಅದು ಸುರುಳಿ ಆಕಾರದಲ್ಲಿದೆ. ಕೆಳಗೆ ಮಣಿಗಳಿಂದ, ಮುತ್ತುಗಳಿಂದ ಅಲಂಕಾರ ಮಾಡಲಾಗಿದೆ. ಮಧ್ಯದಲ್ಲಿ ಮಣಿಗಳಿಂದ ಮಾಡಿದ ಪದಕ ಆಕಾರದಲ್ಲಿದೆ.

ಕ್ರಿ.ಶ.೧೧-೧೨ನೇ ಶತಮಾನದ ಸೂರ್ಯನ ಶಿಲ್ಪವಿದ್ದು ಅದು ಕಿರೀಟವನ್ನು ಹೊಂದಿದೆ. ಈ ಕಿರೀಟ ಮೂರು ಹಂತದಲ್ಲಿದ್ದು ಸರಳವಾಗಿದೆ. ಗಬ್ಬೂರಿನ ಶಾಲೆಯಲ್ಲಿರುವ ಅನಂತಶಯನ ಮೂರ್ತಿ ಕಿರೀಟವನ್ನು ಧರಿಸಿದ್ದಾನೆ. ಇದು ಸರಳವಾಗಿದ್ದು, ಕೆಳಗೆ ಒಂದು ಪಟ್ಟಿಯ ಆಕಾರದಲ್ಲಿ ಬಂದಿದೆ. ದೇವದುರ್ಗದ ಬೆಟ್ಟದಲ್ಲಿ ವಿಷ್ಣುವಿನ ಮೂರ್ತಿಯಿದ್ದು, ಅದಕ್ಕೆ ಸಹ ಕಿರೀಟವನ್ನು ಕೆತ್ತಲಾಗಿದೆ. ಅಲ್ ಕೋಡ್‌ನಲ್ಲಿ ಭದ್ರಕಾಳಿ ಶಿಲ್ಪವಿದ್ದು, ಇದು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿದೆ. ಈ ಶಿಲ್ಪವು ಸಹ ಕಿರೀಟವನ್ನು ಧರಿಸಿದ್ದು, ಅದು ಎತ್ತರವಾಗಿದೆ. ಚಂದನಕೇರಿಯ ಭದ್ರಕಾಳಿಯ ಶಿಲ್ಪದಲ್ಲಿ ಸರಳವಾದ ಕಿರೀಟವಿದೆ. ಅರಕೇರಿಯ ವೀರಗಲ್ಲಿನಲ್ಲಿ ಸರಳವಾದ ಕಿರೀಟವಿದೆ. ಇದು ಟೋಪಿಯ ಆಕಾರದಲ್ಲಿದೆ. ಹುನುಗುಂದಾಬಾಡಾದ ವೀರಗಲ್ಲಿನಲ್ಲಿ ಐದು ಹಂತದ ಕಿರೀಟವಿದೆ. ಇಲ್ಲಿ ದೊರೆತ ಕಿರೀಟಗಳಲ್ಲಿ ವೀರಗಲ್ಲು ಹಾಗೂ ದೇವತಾ ಶಿಲ್ಪಗಳಲ್ಲಿ ಈ ಕಿರೀಟಗಳನ್ನು ಕಾಣುತ್ತೇವೆ.

ಕೇಶ ವಿನ್ಯಾಸ : ಪ್ರಾಚೀನ ಕಾಲದಿಂದ ಇಂದಿಗೂ ಕೇಶವನ್ನು ಅಲಂಕರಿಸಿಕೊಳ್ಳುವುದು ಒಂದು ಕಲೆಯಾಗಿದೆ. ಸ್ತ್ರೀಯರು ಮತ್ತು ಪುರುಷರು ಉದ್ದವಾಗಿ ಕೂದಲುಗಳನ್ನು ಬಿಟ್ಟು ಹಲವು ವಿಧಗಳಲ್ಲಿ ಕಟ್ಟಿಕೊಳ್ಳುತ್ತಾರೆ. ಅರಕೇರಿ ದೇವದುರ್ಗ ವೀರಗಲ್ಲುಗಳಲ್ಲಿ ಕೂದಲುಗಳನ್ನು ಗಂಟು ಹಾಕಿ ಬಲಗಡೆ ಬಿಟ್ಟಿದ್ದಾರೆ. ಆ ಕೂದಲುಗಳ ಗಂಟು ತಲೆಯ ಮೇಲಿದೆ. ಕ್ಯಾದ್ಗಿಗೇರಿಯ ವೀರಗಲ್ಲು ಮಹಾಸತಿ ಕಲ್ಲುಗಳಲ್ಲಿ ಕೂದಲುಗಳ ಗಂಟು ಹಾಕಿ ಗುಂಡು ಆಕಾರದಲ್ಲಿ ಅವುಗಳನ್ನು ಬಿಡಿಸಲಾಗಿದೆ. ಒಂದು ಮಹಾಸತಿಯ ಶಿಲ್ಪದಲ್ಲಿ ಕೆಳಗೆ ಬಂದಿರುವುದನ್ನು ಕಾಣಬಹುದು. ಗಬ್ಬೂರು, ಹಿರೇರಾಯ ಕುಂಪಿ

ವೀರಗಲ್ಲುಗಳಲ್ಲಿ ಹಿಂದಕ್ಕೆ ಕಟ್ಟಲಾಗಿದೆ. ಗಬ್ಬೂರಿನ ಕೆಲವು ವೀರಶಿಲ್ಪಗಳಲ್ಲಿ ಕೂದಲುಗಳನ್ನು ಜಡೆ ಅಥವಾ ಸುರಳಿ ಆಕಾರದಲ್ಲಿ ಬಿಡಿಸಲಾಗಿದೆ.


ಮಾಸರಕಲ್ಲಿನ ವೀರಗಲ್ಲು ಹಾಗೂ ರಾಮದುರ್ಗದ ವೀರಗಲ್ಲುಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣುತ್ತೇವೆ. ಇಲ್ಲಿ ಕೂದಲುಗಳನ್ನು ಉದ್ದವಾಗಿ ಬಿಟ್ಟು, ನಂತರ ಗಂಟು ಹಾಕಿರುವ ರೀತಿಯಲ್ಲಿ ಬಿಡಿಸಲಾಗಿದೆ.

ಮೀಸೆಗಳು : ಗಬ್ಬೂರು, ರಾಮದುರ್ಗ, ಮಸರಕಲ್ಲು, ಹಿರೇರಾಯಕುಂಪಿ ಮುಂತಾದ ವೀರಗಲ್ಲುಗಳಲ್ಲಿ ಮೀಸೆಗಳನ್ನು ತೆಳ್ಳಗೆ ಸರಳವಾಗಿ ಬಿಡಿಸಲಾಗಿದೆ. ಕ್ಯಾದ್ಗಿಗೇರಿ, ಅರಕೇರಿ, ವೀರಗಲ್ಲುಗಳಲ್ಲಿ ಮೀಸೆಗಳನ್ನು ಉದ್ದವಾಗಿ ಮತ್ತು ಲಕ್ಷಣವಾಗಿ ಬಿಡಿಸಲಾಗಿದೆ. ಕ್ಯಾದ್ಗಿಗೇರಿಯ ಒಂದು ಶಿಲ್ಪದಲ್ಲಿ ಮೀಸೆಯನ್ನು ಉದ್ದವಾಗಿ ಕಣ್ಣಿನ ಭಾಗದವರೆಗೂ ಬಿಡಿಸಲಾಗಿದೆ. ಅರಕೇರಿಯ ಒಂದು ವೀರಗಲ್ಲಿನಲ್ಲಿ ದಪ್ಪವಾಗಿ ಉರಿಮೀಸೆಯನ್ನು ಬಿಡಿಸಲಾಗಿದೆ. ಅರಕೇರಿ ಮತ್ತು ಕ್ಯಾದ್ಗಿಗೇರಿಯ ಶಿಲ್ಪಗಳಲ್ಲಿರುವ ಮೀಸೆಗಳನ್ನು ಶೌರ್ಯತನಕ್ಕೆ ಸಾಕ್ಷಿಯಾಗಿ ಎದ್ದು ಕಾಣುವಂತೆ ಬಿಡಿಸಿದ್ದಾರೆ.

ಶಿವಲಿಂಗ : ಶಿವನ ಇನ್ನೊಂದು ರೂಪ ಲಿಂಗ. ಇದನ್ನು ಪೂಜಿಸುವ ರೂಢಿ ನಮ್ಮ ಭಾರತದಲ್ಲಿ ಹೆಚ್ಚಾಗಿದೆ. ಇದು ಬೇರೆ ಮೂರ್ತಿಗಳಂತೆ ಬೇರೆ ಕಾಲದಲ್ಲಿ ಬದಲಾವಣೆಯಾಗಲಿಲ್ಲ. ಆದರೂ ಮೂಲ ರೂಪದಿಂದ ಸ್ವಲ್ಪ ಮಟ್ಟಿಗೆ ವ್ಯತ್ಯಾಸವನ್ನು ಕಾಣಬಹುದು.

ದೇವದುರ್ಗ ಪ್ರದೇಶವನ್ನಾಳಿದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರದ ಅರಸರು ಇನ್ನು ಕೆಲವು ಸಾಮಂತರ ಅರಸರು ಹಾಗೂ ಪಾಳೆಗಾರರ ಕಾಲದಲ್ಲಿ ಕೆಲವು ಶೈವ ದೇವಾಲಯಗಳನ್ನು ರಚಿಸಿದ್ದಾರೆ. ಸಾಮಾನ್ಯವಾಗಿ ಚೌಕಾಕಾರದ ಪಾಣಿಪೀಠವನ್ನು ಹೊಂದಿರುತ್ತವೆ. ಕೆಲವುಬಾರಿ ಗೋಲಾಕಾರ ಪೀಠವನ್ನು ಹೊಂದಿವೆ. ಚೌಕಾಕಾರದ ಪಾಣಿಪೀಠದ ಮಧ್ಯದಲ್ಲಿ ರಂಧ್ರ ಮಾಡಿ ಲಿಂಗದ ರುದ್ರಭಾಗವನ್ನಿರಿಸಿರುತ್ತಾರೆ. ಇನ್ನು ಕೆಲವು ಬಾರಿ ಏಕಕಲ್ಲಿನಲ್ಲಿ ನಿರ್ಮಿಸಿದ ಲಿಂಗಗಳಿವೆ. ಲಿಂಗಗಳಲ್ಲಿ ಬ್ರಹ್ಮ, ವಿಷ್ಣು, ರುದ್ರ ಭಾಗಗಳು ಇರುವುವು ಇವೆ. ಮತ್ತು ಕೆಲವು ಲಿಂಗಗಳಲ್ಲಿ ಬ್ರಹ್ಮ ಸೂತ್ರವು ಎರಡು ಊರ್ಧ್ವಗೆರೆಗಳನ್ನು ಹೊಂದಿದ್ದು, ಅವುಗಳಿಂದ ಹೊರಗೆರೆಯು ಹಿಂಬದಿಯಲ್ಲಿ ಗಂಟುಬಿದ್ದಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಗಬ್ಬೂರಿನ ಚೌಡೇಶ್ವರ ದೇವಾಲಯದಲ್ಲಿರುವ ಕಲ್ಯಾಣಿ ಚಾಲುಕ್ಯರ ಲಿಂಗವು ಒಂದಾಗಿದೆ. ಈ ದೇವಾಲಯದಲ್ಲಿ ಒಟ್ಟು ನಾಲ್ಕು ಲಿಂಗಗಳಿದ್ದು, ಮೂರು ಲಿಂಗಗಳು ಗೋಲಾಕಾರದಲ್ಲಿ ೪೮ ಉದ್ದ, ೪೫ ಅಗಲ ಮತ್ತು ೪೧ ಉದ್ದ ೪೫ ಅಗಲಗಳನ್ನು ಹೊಂದಿವೆ. ಚೌಕಾಕಾರದಲ್ಲಿರುವ ಒಂದು ಲಿಂಗವು ೨೪ ಅಗಲ, ೩೫ ಉದ್ದವನ್ನು ಹೊಂದಿದೆ. ನಾಗೋಲಿ ಗ್ರಾಮದ ರಾಷ್ಟ್ರಕೂಟರ ಕಾಲದಲ್ಲಿರುವ ಲಿಂಗವು ಚೌಕಾಕಾರದ ಪಾಣಿಪೀಠದಲ್ಲಿ ಲಿಂಗವನ್ನು

ಮೂರ್ತಿಶಿಲ್ಪದ ಆಭರಣಗಳ ಆಲಂಕಾರ



ಮೂರ್ತಿಶಿಲ್ಪದಲ್ಲಿರುವ ಪಲ್ಲಕ್ಕಿ, ಛತ್ರಿ, ಧ್ವಜಗಳು



ಕಾಣಬಹುದು. ಗಬ್ಬೂರಿನ ವೆಂಕಟೇಶ್ವರ ದೇವಾಲಯದಲ್ಲಿ ಅತ್ಯಂತ ಎತ್ತರವಾದ ಚೌಕಾಕಾರದ ಪಾಣಿಪೀಠದಲ್ಲಿ ಒಂದು ಲಿಂಗವಿದೆ. ಇದನ್ನು ಕಾಶೇಶ್ವರ ಲಿಂಗವೆಂದು ಕರೆಯುತ್ತಾರೆ. ಅಂದರೆ ಕಾಶಿಯಿಂದ ತಂದ ಲಿಂಗವೆಂದು ಇಲ್ಲಿನ ಸ್ಥಳೀಯರ ಹೇಳಿಕೆಯಾಗಿದೆ. ಇದರ ಪಕ್ಕದಲ್ಲಿರುವ ಏಳು ಬಾವಿ ಬಸವಣ್ಣ ದೇವಾಲಯದಲ್ಲಿ ಒಂದು ಸಣ್ಣ ಕಲ್ಲಿನಲ್ಲಿ ಬಿಡಿಸಿದ ಲಿಂಗವಿದ್ದು, ಅದು ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದಾಗಿದೆ(ಆದರೆ ಇತ್ತೀಚಿಗೆ ಅಂದರೆ ೨೦೦೬ರಲ್ಲಿ ಕೆಲವು ನಿಧಿ ಕಳ್ಳರು ಅದನ್ನು ತೆಗೆದುಕೊಂಡು ಹೋಗಿದ್ದಾರೆ) .ಅಲ್ಲದೆ, ೧೭-೧೮ನೇ ಶತಮಾನದಲ್ಲಿ ನಿರ್ಮಾಣದ ಕೆಲವು ಲಿಂಗಗಳನ್ನು ದೇವದುರ್ಗ ತಾಲೂಕಿನಲ್ಲಿ ಕಾಣಬಹುದಾಗಿದೆ.

ವಿಷ್ಣುಶಿಲ್ಪ

ಈ ಪ್ರದೇಶದಲ್ಲಿ ದೊರೆತಿರುವ ವಿಷ್ಣುಶಿಲ್ಪಗಳಲ್ಲಿ ಕೆಲವು ಸಾಮಾನ್ಯ ಲಕ್ಷಣಗಳನ್ನು ಕಾಣುತ್ತೇವೆ. ವಿಷ್ಣು ಮೂರ್ತಿಗಳನ್ನು ಲಕ್ಷ್ಮೀದೇವಿಯೊಂದಿಗೆ ಇರಿಸುವುದೇ ವಾಡಿಕೆಯಾಗಿದೆ. ಎಡಭಾಗದಲ್ಲಿ ಲಕ್ಷ್ಮಿ, ಬಲಭಾಗದಲ್ಲಿ ಭೂಮಿ(ನೀಲಾ) ಇವರನ್ನು ಪದ್ಮಕಟಕ ಮುದ್ರೆಯಲ್ಲಿ ನಿಲ್ಲಿಸುತ್ತಾರೆ. "ಆಸೀನ ಮೂರ್ತಿಯಾದರೆ ಎಡತೊಡೆಯ ಮೇಲೆ ಲಕ್ಷ್ಮಿ ಕೂತಿರುತ್ತಾಳೆ. ಇಂಥ ಮೂರ್ತಿಗಳಿಗೆ ಲಕ್ಷ್ಮೀನಾರಾಯಣ ಮೂರ್ತಿಗಳೆಂದು ಹೆಸರು"(ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ, ಪು.೧೫೫, ಎಸ್.ಕೆ.ರಾಮಚಂದ್ರರಾವ್). ಇದು ವರಾಹ ನರಸಿಂಹದಂಥ ಅವತಾರ ಮೂರ್ತಿಗಳಲ್ಲಿಯೂ ಕಾಣಬರುತ್ತದೆ. ಈ ವಿಷ್ಣುಮೂರ್ತಿಗಳಲ್ಲಿ ಶಯನ ಭಂಗಿಯವು ಅಪರೂಪವೇ. ಇದನ್ನು ಯೋಗನಿದ್ರೆಯೆಂದು ಕರೆಯುತ್ತಾರೆ. ವಿಷ್ಣುವಿನ ನಾಲ್ಕು ಕೈಗಳಲ್ಲಿ ಪದ್ಮ, ಶಂಕ, ಚಕ್ರ ಗದೆಗಳನ್ನು ಕಾಣುತ್ತವೆ. ಕೆಲವು ಸಮಭಂಗದಲ್ಲಿ ನಿಂತಿದ್ದು, ಶಂಖ ಚಕ್ರಧಾರಿಯಾಗಿರುವುದು, ಬಲಮುಂಗೈ ಅಭಯ ಎಡ ಮುಂಗೈ ಕಟಿಹಸ್ತಧಾರಿಯಾಗಿರುವುದು ಅಭಯ ಹಸ್ತದ ಪಕ್ಕದಲ್ಲಿ ಕೆಳಗೆ ಗದೆಯನ್ನು ಬಿಡಿಸಿರುತ್ತಾರೆ. ಎಲ್ಲಾ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಕಿರೀಟ ಮುಕುಟ, ಪಾದಗಳವರೆಗೆ ಇಳಿಬಿದ್ದಿರುವಂತೆ ಕಚ್ಚೆ ಉಟ್ಟಿರುವುದು, ಯಜ್ಞೋಪವೀತವನ್ನು ಧರಿಸಿರುವುದು, ಕೆಲವು ಅಭರಣಗಳನ್ನು ಬಿಡಿಸಿರುವುದು ಸಹ ಕಾಣುತ್ತೇವೆ. ಇಲ್ಲಿ ವೆಂಕಟೇಶ-ವಿಷ್ಣುಮೂರ್ತಿಗಳ ಹೆಚ್ಚಾಗಿ ಕಾಣುತ್ತೇವೆ.

ಗಬ್ಬೂರಿನ ವೆಂಕಟೇಶ್ವರ ದೇವಾಲಯದಲ್ಲಿ ವೆಂಕಟೇಶ್ವರ ಮೂರ್ತಿಯಿದೆ. ಇದು ದೇವಗಿರಿ ಯಾದವರ ಕಾಲಕ್ಕೆ ಸೇರಿದ್ದಾಗಿದೆ. ಈ ದೇವಾಲಯದ ದಕ್ಷಿಣಕ್ಕಿರುವ ಗರ್ಭಗೃಹದಲ್ಲಿ ಪಾಣಿಪಾಠದ ಮೇಲೆ ವೆಂಕಟೇಶ್ವರ ಮೂರ್ತಿಯಿದ್ದು, ಇದು ನಿಂತ ಭಂಗಿಯಲ್ಲಿದೆ. ಇದಕ್ಕೆ ನಾಲ್ಕು ಕೈಗಳಿವೆ. ಬಲಗೈಯಲ್ಲಿ ಚಕ್ರ ಮತ್ತು ಅಭಯ ಹಸ್ತವಿದೆ. ಎಡಗೈಯಲ್ಲಿ ಶಂಖ ವರದ ಮುದ್ರೆಯಲ್ಲಿದೆ. ತಲೆಯ ಮೇಲೆ ಕಿರೀಟವಿದೆ. ಈ ಮೂರ್ತಿಯು ಕೆಳಗಿನ ಎಡ, ಬಲ, ಪಾರ್ಶ್ವದಲ್ಲಿ ಕೈಮುಗಿದುಕೊಂಡು ಇರುವ

ಪದ್ಮಾವತಿ ಲಕ್ಷ್ಮಿಯ ಶಿಲ್ಪಗಳಿವೆ. ಇದರ ಬಾಗಿಲವಾಡ ಭಾಗದಲ್ಲಿ ವೈಷ್ಣವ ಧ್ವಾರಪಾಲಕರನ್ನು ಸಹ ಕೆತ್ತಲಾಗಿದೆ.

ಗಬ್ಬೂರಿನ ಸರ್ಕಾರಿ ಶಾಲೆಯಲ್ಲಿರುವ ಅನಂತಶಯನ ಮೂರ್ತಿಯು ವಿಶೇಷವಾದದ್ದಾಗಿದೆ. ಈ ಮೂರ್ತಿ ಆದಿಶೇಷನ ಮೇಲೆ ಮಲಗಿರುವಂತೆ ಬಿಡಿಸಿದೆ. ಲಕ್ಷ್ಮೀ ಕಾಲನ್ನೊತ್ತುತ್ತ ಹಾಗೂ ನಾಭಿ(ಹೊಕ್ಕುಳ)ದಿಂದ ಬ್ರಹ್ಮ ಹುಟ್ಟಿಕೊಂಡಂತೆ ಕೆತ್ತಲಾಗಿದೆ. ಬಲಗೈಯಲ್ಲಿ ಒಂದು ತಲೆಯನ್ನು ಹಿಡಿದುಕೊಂಡಿರುವಂತೆ, ಇನ್ನೊಂದು ಅಭಯಹಸ್ತ, ಎಡಗೈಯಲ್ಲಿ ಗದೆ, ಶಂಖಗಳನ್ನು ಹಿಡಿದಿದ್ದಾನೆ. ಕಿರೀಟವಿದೆ. ಕಚ್ಚೆ ಉಟ್ಟಿದ್ದಾನೆ. ಕಾಲ ಮತ್ತು ಕೈಗಳಲ್ಲಿ ಕಡಗಗಳು ಕಿವಿಯಲ್ಲಿ ಓಲೆಗಳು ಕಾಣುತ್ತವೆ. ದೇವದುರ್ಗ ಬೆಟ್ಟದಲ್ಲಿ ಆದಿಶೇಷನ ವಿಷ್ಣುವಿನ ಶಿಲ್ಪವನ್ನು ಬಿಡಿಸಲಾಗಿದೆ. ಈ ಆದಿಶೇಷನ ಶಿಲ್ಪ ಅತ್ಯಂತ ದೊಡ್ಡದಾಗಿದ್ದು, ಅದರ ಮಧ್ಯದಲ್ಲಿ ಯೋಗ ಭಂಗಿಯಲ್ಲಿ ವಿಷ್ಣುಶಿಲ್ಪವಿದೆ. ಇದು ಸರಳವಾಗಿದ್ದು ಕಿರೀಟವಿದೆ. ಗಬ್ಬೂರಿನ ವೈಷ್ಣವಮೂರ್ತಿಯು ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿದೆ. "ಇದು ೮೨x೫೨ ಸೆ.ಮೀ ಇದ್ದು, ಕ್ರಿ.ಶ.೧೪ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಇದನ್ನು ನಿಂತಿರುವ ಆಕೃತಿಯಲ್ಲಿರುವಂತೆ ಕೆತ್ತಲಾಗಿದೆ. ಅದಕ್ಕೆ ನಾಲ್ಕು ಕೈಗಳಿದ್ದು, ಮೇಲಿನ ಬಲಗೈ ಚಕ್ರ ಹಿಡಿದಂತೆ ತೋರುತ್ತದೆ. ಕೆಳಗೆ ಬಲಗೈಯಲ್ಲಿ ಗದೆ ಇದೆ. ಕುತ್ತಿಗೆ ಭಾಗ, ಎಡಗೈ ಮುರಿದಿದೆ. ಖಡ್ಗ, ಕಂಠಹಾರ, ಉದ್ದನೆಯ ಮಾಲೆ ಮುಂತಾದ ಆಭರಣಗಳನ್ನು ಸ್ಪಷ್ಟವಾಗಿ ಚಿತ್ರಸಲಾಗಿದೆ" Sculptures in the Govt Museum Raichur-K.G.Bhatsoori, P.No.39).

ಸೂರ್ಯ : ಕರ್ನಾಟಕದಲ್ಲಿ ಸೂರ್ಯಾರಾಧಕರು ಹೆಚ್ಚಾಗಿ ಇರಲಿಲ್ಲವಾದರೂ ಸೂರ್ಯದೇವಾಲಯಗಳು ಇಲ್ಲವಾದರೂ, ಕೆಲವು ಕಡೆ ಸೂರ್ಯ ಮೂರ್ತಿಗಳು ದೊರೆತಿವೆ. ಶಾಸನಗಳಲ್ಲಿ ವೃತ್ತಾಕಾರವಾಗಿ ಸೂರ್ಯ ಚಂದ್ರ ಶಿಲ್ಪಗಳು ಕಂಡುಬಂದಿವೆ. ದೇವದುರ್ಗ ಪ್ರದೇಶದಲ್ಲಿ ಸೂರ್ಯನ ಪ್ರತ್ಯೇಕವಾದ ದೇವಾಲಯಗಳು ಇಲ್ಲದಿದ್ದರೂ ಸೂರ್ಯ ಮತ್ತು ನಾರಾಯಣ ಮೂರ್ತಿಗಳು ಲಭ್ಯವಾಗಿದೆ. ಶೈವ ದೇವಾಲಯಗಳಲ್ಲಿ ಸೂರ್ಯನ ಮೂರ್ತಿಗಳನ್ನು ಕಾಣಬಹುದು. ಇದರಿಂದ ಸೂರ್ಯನ ಆರಾಧನೆ ಇತ್ತು ಎಂಬ ಅಂಶವು ತಿಳಿದುಬರುತ್ತದೆ. "ಗಬ್ಬೂರಿನ ಸೂರ್ಯ ಮೂರ್ತಿಯೊಂದು ರಾಯಚೂರಿನ ವಸ್ತುಸಂಗ್ರಾಹಲಯದಲ್ಲಿದ್ದು, ಕ್ರಿ.ಶ.೧೫ನೇ ಶತಮಾನಕ್ಕೆ ಸೇರಿದ್ದಾಗಿದೆ. ಈ ಮೂರ್ತಿಯನ್ನು ನಿಂತ ಭಂಗಿಯಲ್ಲಿ ಕೊರೆಯಲಾಗಿದೆ. ಎರಡು ಕೈಗಳಿದ್ದು, ಎರಡು ಕೈಗಳಲ್ಲಿ ಕಮಲವನ್ನು ಹಿಡಿದುಕೊಂಡಿವೆ. ಸೂರ್ಯನನ್ನು ಕಿರೀಟ, ಕಂಠಹಾರ, ವೃತ್ತಾಕಾರದ ಕಿವಿಯೋಲೆ, ಭುಜಬಂಧ ಬಳೆಗಳು, ಕಾಲ್ಗಡಗ ಮುಂತಾದವುಗಳಿಂದ ಅಲಂಕೃತಗೊಳಿಸಲಾಗಿದೆ. ಶಿಲ್ಪದ ಕೆಳಭಾಗ ಮುರಿದು ಹೋಗಿದೆ (S.R.M., P.41). ಚಂದನಕೇರಿಯ ಕ್ರಿ.ಶ.೧೦-೧ನೇ ಶತಮಾನಕ್ಕೆ ಸೇರಿದ ಇನ್ನೊಂದು ಸೂರ್ಯ ಮೂರ್ತಿ ಇದೆ. ಇದು ಚಂದನಕೇರಿಯ ದಿಬ್ಬದಲ್ಲಿದ್ದು, ಇದರ ಎರಡು ಕೈಗಳು ಭಗ್ನಗೊಂಡಿವೆ. ತಲೆ ಮೇಲಿನ ಭಾಗವು

ಸ್ವಲ್ಪ ಮುರಿದು ಹೋಗಿದೆ. ಇನ್ನುಳಿದ ಭಾಗವು ನೈಜತೆಯಿಂದ ಸುಂದರವಾಗಿದೆ. ಕಿರೀಟವಿದ್ದು, ಕಿರೀಟವು ಮಣಿಸರ ಮತ್ತು ರತ್ನಗಳಿಂದ ಅಲಂಕೃತಗೊಂಡಿದೆ. ಕಿವಿಯಲ್ಲಿ ಬಳೆಯಾಕಾರದಲ್ಲಿ ಓಲೆಗಳಿವೆ. ಕೊರಳಲ್ಲಿ ಸರ, ಸೊಂಟದಲ್ಲಿ ಸೊಂಟಾಭರಣವಿದೆ. ಚಿಂಚೂಡಿ ಗ್ರಾಮದ ಹೊಲದಲ್ಲಿಯೂ ಒಂದು ಸೂರ್ಯ(ನಾರಾಯಣ) ಮೂರ್ತಿಯಿದೆ. ಇದು ಕ್ರಿ.ಶ.೧೧-೧೨ನೇ ಶತಮಾನಕ್ಕೆ ಸೇರಿದ್ದಾಗಿದೆ. ಎರಡು ಕೈಗಳಿದ್ದು, ಆ ಕೈಗಳಲ್ಲಿ ಕಮಲದ ಹೂಗಳನ್ನು ಹಿಡಿದಿದ್ದಾನೆ. ಕಿರೀಟ, ಕಿವಿಯೋಲೆ, ಕೊರಳಲ್ಲಿ ಮೂರು ರೀತಿಯ ಸರಗಳು, ಕಾಲ್ಗಡಗ ಮುಂತಾದವುಗಳನ್ನು ಬಿಡಿಸಲಾಗಿದೆ.

"ಸಾಮಾನ್ಯವಾಗಿ ಶಿವನಿಗೆ ಎದುರಾಗಿ ಇರಬೇಕಾದ್ದರಿಂದ ಮತ್ತು ಪೂರ್ವ ದಿಕ್ಕಿನಲ್ಲಿ ಬಿಡಿಸುವ ನಂಬಿಕೆಯಿಂದ ಈ ವಿಗ್ರಹಗಳು ಪಶ್ಚಿಮಕ್ಕೆ ಮುಖಮಾಡಿ ನಿಂತಿರುತ್ತವೆ. ನಂತರದ ಕಾಲದಲ್ಲಿ ಸೂರ್ಯನ ಕಿರಣಗಳು ಲಿಂಗದ ಮೇಲೆ ಬೀಳುವಂತೆ ವ್ಯವಸ್ಥೆ ಮಾಡಿರುತ್ತಾರೆ. ಹೀಗೆ ಕಾಲಸೂಚಕವಾಗಿ ಸೂರ್ಯ ಶೈವ ದೇವಾಲಯಗಳಲ್ಲಿ ನಿಂತರೆ, ವೈಷ್ಣವ ದೇವಾಲಯಗಳಲ್ಲಿ ಸೂರ್ಯ ನಾರಾಯಣನಾಗಿ ಕಮಲಗಳ ಜೊತೆಗೆ ಶಂಖ ಚಕ್ರದಾರಿಯಾಗಿರುವುದು ಕಂಡುಬರುತ್ತದೆ."(ಪು.೧೩, ಗಂಗರ ಶಿಲ್ಪಕಲೆ, ಡಾ.ದೇವರ ಕೊಂಡಾರೆಡ್ಡಿ, ಕ.ಲ.ಅ. ಬೆಂಗಳೂರು).

ಕೇಶವ

ಅನೇಕ ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಕೇಶವ ದೇವರ ಮೂರ್ತಿಯನ್ನು ಕಾಣುತ್ತೇವೆ. ಈ ವಿಗ್ರಹಗಳು ಬೇರೆ ಬೇರೆ ಪ್ರತ್ಯೇಕ ದೇವಾಲಯಗಳಲ್ಲೂ ಇವೆ. ಈ ಮೂರ್ತಿಗಳು ಶಂಖ, ಚಕ್ರ, ಗದಾ, ಪದ್ಮಗಳನ್ನು ಹೊಂದಿರುತ್ತವೆ. ಗಬ್ಬೂರಿನ ವೆಂಕಟೇಶ್ವರ ದೇವಾಲಯದ ಸಭಾಮಂಟಪದ ಪಶ್ಚಿಮ ಭಾಗದಲ್ಲಿ ಕೇಶವನ ಶಿಲ್ಪವಿದೆ. ಕರಿಶಿಲೆಯಲ್ಲಿರುವ ಈ ಶಿಲ್ಪವು ೫.೨ ಅಡಿ ಎತ್ತರ ೧.೬ ಅಡಿ ಅಗಲವಿದೆ. ಗಬ್ಬೂರಿನ ಕ್ರಿ.ಶ.೧೯೬ರ ಕೇಶವ ದೇವಾಲಯವಿದ್ದು, ಇದರ ಗರ್ಭಗೃಹದಲ್ಲಿ ಪಾಣಿವಾಠದ ಮೇಲೆ ಕೇಶವನ ಮೂರ್ತಿಯಿದೆ ಇದು ನಾಲ್ಕು ಕೈಗಳನ್ನು ಹೊಂದಿದ್ದು, ಆ ಕೈಗಳಲ್ಲಿ ಚಕ್ರ, ಶಂಖ, ಗದೆಗಳನ್ನು ಹಿಡಿದುಕೊಂಡಿದ್ದಾನೆ. ಎಡಭಾಗದಲ್ಲಿ ಪದ್ಮಾಸನದಲ್ಲಿರುವ ಸ್ತ್ರೀಶಿಲ್ಪವಿದೆ.

ವೀರಭದ್ರ

ಗಬ್ಬೂರಿನಲ್ಲಿ ವೀರಭದ್ರ ದೇವಾಲಯಗಳಲ್ಲಿ ವೀರಭದ್ರಮೂರ್ತಿಯನ್ನು ಇರಿಸಲಾಗಿದೆ. ಊರಿನ ಪಶ್ಚಿಮ ಭಾಗದಲ್ಲಿ ಉತ್ತಾರಾಭಿಮುಖವಾದ ದೇವಾಲಯದಲ್ಲಿ ವೀರಭದ್ರ ಮೂರ್ತಿಯಿದ್ದು, ಇದನ್ನು ಪಾಣಿವಾಠದ ಮೇಲೆ ಇರಿಸಲಾಗಿದೆ. ಇದು ನಾಲ್ಕು ಕೈಗಳನ್ನು ಹೊಂದಿದ್ದು, ಖಡ್ಗ, ಗದೆ, ಬಿಲ್ಲು ಹಾಗೂ ಒಂದು ಕೈ ಅಭಯಹಸ್ತದ ಸಂಕೇತವಾಗಿದೆ. ಈ ವೀರ ಭದ್ರ ಮೂರ್ತಿಯ ಕೊರಳಿನಲ್ಲಿ ಸರ, ಹಾಗೂ ಇತರ ಆಭರಣಗಳನ್ನು ಬಿಡಿಸಲಾಗಿದೆ. ಚಂದನಕೇರಿಯ ದಿಬ್ಬದ ಮೇಲೆ ೧೪-೧೫ನೆಯ ಶತಮಾನದಲ್ಲಿದ್ದ

ಒಂದು ಸುಂದರವಾದ ವೀರಭದ್ರ ಶಿಲ್ಪವಿದೆ. ಇದು ಎರಡು ಭಾಗಗಳಾಗಿ ಹೊಡೆದು ಹೋಗಿದೆ. ಇದಕ್ಕೆ ನಾಲ್ಕು ಕೈಗಳಿದ್ದು, ತ್ರಿಶೂಲ, ಡಮರು, ಬಿಲ್ಲು, ಖಡ್ಗವಿದೆ. ತಲೆಯ ಮೇಲಿನ ಭಾಗದಲ್ಲಿ ಕೀರ್ತಿಮುಖನ ಶಿಲ್ಪವಿದೆ. ಎರಡು ಕೈಗಳಲ್ಲಿ ಸಣ್ಣ ಸರಗಳನ್ನು ಕೆತ್ತಲಾಗಿದೆ. ಕಿವಿಯೋಲೆ, ಕೊರಳಸರ ಮುಂತಾದವುಗಳನ್ನು ಬಿಡಿಸಲಾಗಿದೆ. ಇದೇ ರೀತಿಯ ವೀರಭದ್ರ ಶಿಲ್ಪಗಳು ದೇವದುರ್ಗ ತಾಲ್ಲೂಕಿನ ರಾಮದುರ್ಗ, ಜಾಲಹಳ್ಳಿ, ಗಬ್ಬೂರು, ಅರಕೇರಾ ಮುಂತಾದ ಸ್ಥಳಗಳಲ್ಲಿ ಕಾಣುತ್ತೇವೆ.

ನಂದಿ

ದೇವಾಲಯಗಳಲ್ಲಿ ನಂದಿಯನ್ನು ಲಿಂಗದ ಮುಂದೆ ಅಂತರಾಳ ಅಥವಾ ನವರಂಗದಲ್ಲಿ ಪ್ರತಿಷ್ಠಾಪಿಸಿರುತ್ತಾರೆ. ಕೆಲವೆಡೆ ಪ್ರತ್ಯೇಕ ನಂದಿಯ ಗುಡಿಗಳಿವೆ. ದೇವದುರ್ಗ ತಾಲ್ಲೂಕಿನ ಹೆಚ್ಚು ಕಡಿಮೆ ಎಲ್ಲಾ ಗ್ರಾಮಗಳಲ್ಲಿ ನಂದಿಯನ್ನು ಕಾಣುತ್ತೇವೆ. ಸಾಮಾನ್ಯವಾಗಿ ನಂದಿಯನ್ನು ಕಪ್ಪು ಅಥವಾ ಕರಿ ಕಲ್ಲಿನಲ್ಲಿ ಕೆತ್ತಿಸಲಾಗಿರುತ್ತದೆ. ನಂದಿಗಳು ತಲೆಯನ್ನು ತಗ್ಗಿಸಿದಂತೆ ಕುಳಿತಿದ್ದು, ಬಲ ಮುಂಗಾಲನ್ನು ಮುಂದಕ್ಕೆ ಚಾಚಿ ಸಹಜವಾಗಿ ಮಲಗಿರುವಂತೆ ಬಿಡಿಸಿದ್ದು, ಕೊರಳಲ್ಲಿ ಗಂಟೆ ಸರಗಳನ್ನು ಧರಿಸಿದ್ದನ್ನು ಕಾಣುತ್ತೇವೆ. ಇಲ್ಲಿ ದೊರಕಿರುವ ನಂದಿಗಳು ಕಲ್ಯಾಣ ಚಾಲ್ಯುಕರ, ರಾಷ್ಟ್ರಕೂಟರ ವಿಜಯನಗರ ಹಾಗೂ ವಿಜಯನಗರೋತ್ತರದ ಕಾಲದವುಗಳಾಗಿವೆ. ಗಬ್ಬೂರಿನ ಏಳುಬಾವಿ ಬಸವಣ್ಣ ದೇವಾಲಯದ ಗರ್ಭಗುಡಿಯಲ್ಲಿರುವ ನಂದಿಯು ಬಾದಾಮಿ ಚಾಲುಕ್ಯರ ಕಾಲದ ಪಟ್ಟದಕಲ್ಲಿನಲ್ಲಿರುವಂತೆ ಇದೆ. ಕೊರಳಲ್ಲಿ ಗಂಟೆಗಳ ಸರವನ್ನು ಅದರ ಹಣೆಯಲ್ಲಿ ಹಣೆಪಟ್ಟಿಯನ್ನು ಬಿಡಿಸಲಾಗಿದೆ. ನಾಗೋಲಿಯಲ್ಲಿ ರಾಷ್ಟ್ರಕೂಟರ ಕಾಲದ ಬಸವಣ್ಣ ದೇವಾಲಯದಲ್ಲಿಯೂ ಸಹ ಇದೇ ತರಹದ ಕರಿಕಲ್ಲಿನಲ್ಲಿರುವ ಒಂದು ನಂದಿ ಇದೆ. ಅರಕೇರಿಯ ಭಾಗದಲ್ಲಿ ೧೭-೧೮ನೇ ಶತಮಾನದ ಒಂದು ನಂದಿ ಇದ್ದು, ಇಲ್ಲಿ ಬೆಟ್ಟದ ತುದಿಯಿಂದ ನೀರು ಬೀಳುತ್ತದೆ. ಇದನ್ನು ಇಲ್ಲಿನ ಜನರು ಊಟಿ ಬಸವಣ್ಣ ಎಂದು ಕರೆಯುತ್ತಾರೆ. ಇಲ್ಲಿ ದೇವಾಲಯಗಳ ಮೇಲೆ ಗಾರೆ ನಂದಿಗಳನ್ನು ಕಾಣುತ್ತೇವೆ.

ಜೈನ ಮೂರ್ತಿಶಿಲ್ಪ

ಭರತ ಖಂಡದ ಅನೇಕ ಧರ್ಮಗಳಲ್ಲಿ ಜೈನ ಧರ್ಮವು ಸಹ ಒಂದಾಗಿದೆ. ಜೈನ ಬಸದಿ ಹಾಗು ಜೈನ ಮೂರ್ತಿಗಳನ್ನು ಭಾರತದ ತುಂಬಾ ಕಾಣುತ್ತೇವೆ. ಜೈನ ಮೂರ್ತಿಗಳು ಪ್ರಾರಂಭದ ಹಂತದಿಂದ ಇಂದಿನ ಕಾಲದವರೆಗೂ ವ್ಯತ್ಯಾಸವನ್ನು ಕಾಣುವುದಿಲ್ಲ. ಜೈನ ಶಿಲ್ಪಗಳು ಸಾಮಾನ್ಯವಾಗಿ ಪದ್ಮಾಸನದಲ್ಲಿ ಕುಳಿತು ಧ್ಯಾನಿಸುತ್ತಿರುವ ಅಥವಾ ಕಾಯೋತ್ಸರ್ಗದಲ್ಲಿ ನಿರ್ವಾಣದಲ್ಲಿ ನಿಂತು ಧ್ಯಾನಿಸುತ್ತಿರುವ ಶಿಲ್ಪಗಳೇ ಹೆಚ್ಚು. ತೀರ್ಥಂಕರ ಅಥವಾ ಜಿನ ಬಿಂಬಗಳನ್ನು ನೋಡಿದಾಗ ಒಡವೆಗಳ ಅಲಂಕಾರವಾಗಲಿ, ಇನ್ಯಾವ ರೀತಿಯ ಅಲಂಕಾರವಾಗಲೀ ಕಾಣುವುದಿಲ್ಲ.

ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಗಬ್ಬೂರಿನ ಎರಡು ತೀರ್ಥಂಕರ ಮೂರ್ತಿಗಳನ್ನು ಕಾಣುತ್ತೇವೆ. ಒಂದು ೧೪-೫ X ೧೨ ಸೆಂ.ಮೀ ಇದ್ದು, ಕ್ರಿ.ಶ.೧೩ನೇ ಶತಮಾನದ ಮೂರ್ತಿಯು ಧ್ಯಾನ ಮುದ್ರೆಯಾಗಿ ಪದ್ಮಾಸನದಲ್ಲಿ ಕುಳಿತಿರುವುದು. ಚಿಕ್ಕ ಗುಂಗುರು ಕೂದಲು ಕುತ್ತಿಗೆಯ ಮಡಿಕೆ (ನಿರಿಗೆ)ಗಳು ತೆರೆದ ಅಕ್ಷಿಗಳು, ಉದ್ದನೆಯ ಕಿವಿ ಹಾಗೂ ಎರಡು ಅಂಗೈಗಳು ಒಂದರ ಮೇಲೊಂದು ಇದೆ. ಕಣ್ಣಿನ ದೃಷ್ಟಿ ಮೂಗಿನ ಕೇಂದ್ರಸ್ಥಾನದಲ್ಲಿದೆ. ಇನ್ನೊಂದು ಮೂರ್ತಿಯು ೨೨x೧೭ ಸೆಂ.ಮಿ. ಇದ್ದು, ಕ್ರಿ.ಶ.೧೭ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಇದು ಹಾಳಾಗಿದ್ದು, ಸರಿಯಾದ ಕೆತ್ತನೆಯಿಲ್ಲ, ಗುಂಗುರು ಕೂದಲು ಹಾಗು ಉದ್ದನೆಯ ಕಿವಿ, ತೆರೆದ ಕಣ್ಣುಗಳು ಇವು ಸಾಮಾನ್ಯ ಲಕ್ಷಣಗಳಾಗಿವೆ (S.R.M., K.G.Bhatsoori, P.No.54).

ಗಬ್ಬೂರಿನ ಶಾಲೆಯಲ್ಲಿ ಕ್ರಿ.ಶ.೧೧೯೦ರ ಕಾಲದ ಕರಿಯ ಕಲ್ಲಿನಲ್ಲಿರುವ ತೀರ್ಥಂಕರ ಮೂರ್ತಿಯು ಸರಳವಾಗಿದ್ದು, ಪದ್ಮಾಸನದಲ್ಲಿದೆ. ತಲೆಯಭಾಗ ಹಾಗೂ ಉಳಿದ ಭಾಗ ಇರುವುದಿಲ್ಲ.

ಸ್ತ್ರೀ ಶಿಲ್ಪಗಳು

ಭದ್ರಕಾಳಿ ಮತ್ತು ಭೈರವಿ ಅಥವಾ ದುರ್ಗಾ

ಕರ್ನಾಟಕದಲ್ಲಿ ಸ್ತ್ರೀ ದೇವತಾ ಉಪಾಸನಾ ಪದ್ಧತಿ ಇದ್ದರೂ ಭಾರತದ ಪೂರ್ವತೀರದಲ್ಲಿದ್ದ ಅತಿರೇಕದ ವಾಮಚಾರ ಪೂಜೆ ಬಳಕೆಯಲ್ಲಿರಲಿಲ್ಲ. ಇಲ್ಲಿ ಸ್ಥಳೀಯವಾಗಿರುವ ದುರ್ಗಾ ಮಹಿಷಮರ್ದಿನಿ, ಭದ್ರಕಾಳಿ ಮುಂತಾದ ಸ್ತ್ರೀ ದೇವತೆಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆದು ಪೂಜಿಸುವುದನ್ನು ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಕೆಲವು ಗ್ರಾಮದೇವತೆಗಳಾದ ಮಾರೆಮ್ಮ, ಯಲ್ಲಮ್ಮ ಮೊದಲಾದವುಗಳಿಗೆ ಪ್ರಾಣಿಬಲಿ ನಡೆಯುತ್ತದೆ. ಕೆಲವು ಗ್ರಾಮಗಳಲ್ಲಿ ಅವುಗಳ ಆರಾಧನ ಸಮಯದಲ್ಲಿ ಅಶ್ಲೀಲವಾದ ವರ್ತನೆಗಳು, ಅಶ್ಲೀಲವಾದ ಹಾಡು ಹಾಡುತ್ತ ದೇವಿಯ ಜಾತ್ರೆಯನ್ನು ಆಚರಿಸುವುದುಂಟು. ಈ ದೇವತೆಗಳಿಗೆ ದೇವಾಲಯಗಳು ನಿರ್ಮಾಣವಾಗಿವೆ. ಇನ್ನು ಕೆಲವು ಕಡೆ ದೇವಾಲಯ ಇಲ್ಲದೆ, ಬಯಲಲ್ಲಿ ಇರುವುದುಂಟು. ಇಂತಹ ದೇವತೆಗಳು ನಮ್ಮ ದೇವದುರ್ಗ ತಾಲ್ಲೂಕಿನಲ್ಲಿ ಸಹ ಇವೆ. ಚಂದನಕೇರಿಯಲ್ಲಿರುವ ಕೆರೆಯ ದಡದಲ್ಲಿ ಬಂಡೆಯ ಗವಿಯೊಂದರಲ್ಲಿ ಒಂದು ಭದ್ರಕಾಳಿಯ ಮೂರ್ತಿ ಇದೆ. ಇದು ೩೫" ಉದ್ದ ಮತ್ತು ೩೦" ಅಗಲವಾಗಿದೆ. ಅಷ್ಟೇನೂ ಸುಂದರವಿಲ್ಲದಿದ್ದರೂ ಕೆತ್ತನೆಯನ್ನು ಸರಳ ರೀತಿಯಲ್ಲಿ ಕಾಣಬಹುದು. ಈ ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು, ಬಲಗಡೆಯ ಕೈಯಲ್ಲಿ ಡಮರು ಖಡ್ಗವಿದ್ದರೆ, ಎಡಗೈಯಲ್ಲಿ ತ್ರಿಶೂಲ, ಕಪಾಲವಿದೆ. ತಲೆಯಲ್ಲಿ ಮುಕುಟ ಕಿವಿಯಲ್ಲಿ ಓಲೆಗಳು, ಕೊರಳಸರ ಮುಂತಾದವುಗಳಿವೆ. ಇದಕ್ಕೆ ಸ್ಥಳೀಯರು ಚೌಡಮ್ಮ ದೇವರೆಂದು ಕರೆಯುತ್ತಾರೆ. ಇದು ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದಾಗಿದೆ.

ಭೈರವಿ : ಇದೇ ಗ್ರಾಮದ ಚಂದನಕೇರಿಯ ದಿಬ್ಬದ ಮೇಲೆ ಭೈರವಿ ಮೂರ್ತಿಯಿದೆ. ಇದು ನಾಲ್ಕು ಅಡಿ ಎತ್ತರ, ಎರಡೂವರೆ ಅಡಿ ಅಗಲವಾಗಿದೆ. ಇದಕ್ಕೆ ನಾಲ್ಕು ಕೈಗಳಿದ್ದು, ಬಲಗಡೆಯ ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ರುಂಡವಿದೆ. ಎಡಗೈಯಲ್ಲಿ ತಂಬಿಕೆಯಾಕಾರದ ಶಿಲ್ಪವಿದೆ. ಇನ್ನೊಂದು ಎಡಗೈ ಭಗ್ನಗೊಂಡಿದೆ. ಮೇಲಿನ ಭಾಗದಲ್ಲಿ ಎರಡು ಕಡೆ ಹೂಗಳನ್ನು ಬಿಡಿಸಲಾಗಿದೆ. ಕಿವಿಯಲ್ಲಿ ದೊಡ್ಡದಾದ ಗೋಲಾಕಾರದ ಕಿವಿ ಆಭರಣಗಳಿವೆ. ಸೊಂಟಪಟ್ಟಿ, ಕಂಠಾಭರಣಗಳು, ಕಾಲ್ಗಡಗ, ಕೈಗಡಗ, ಕಿರೀಟ ಅಲ್ಲದೆ ಪಾದದ ಕೆಳಗೆ ಕೆಲವು ಶಿಲ್ಪಗಳಿವೆ. ಇದರ ನಿರಿಗಚ್ಚೆಯನ್ನು ತುಂಬಾ ಸುಂದರವಾಗಿ ಬಿಡಿಸಲಾಗಿದೆ. "ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಗಬ್ಬೂರಿನ ವೈಷ್ಣವಿಯ ಮೂರ್ತಿಯಿದ್ದು, ಅದು ೪೮x೩೩ ಸೆಂ.ಮೀ. ಇದ್ದು, ಇದು ಕ್ರಿ.ಶ.೧೪ನೆಯ ಶತಮಾನಕ್ಕೆ ಸೇರಿದ್ದಾಗಿದೆ. ವೈಷ್ಣವಿ ಮೂರ್ತಿಯನ್ನು ಸಮಭಾಗವಾಗಿ ನಿಂತಿರುವ ಆಕೃತಿಯಲ್ಲಿ ಕೆತ್ತಲಾಗಿದೆ. ನಾಲ್ಕು ಕೈಯಲ್ಲಿ ಮೂರು ಮುರಿದಿವೆ. ಮೇಲಿನ ಎಡಗೈಯಲ್ಲಿ ಚಕ್ರವಿದೆ. ಅಲಂಕೃತ ಕಿರೀಟ ಸ್ವಲ್ಪಭಾಗ ಮುರಿದಿದೆ, ವೃತ್ತಾಕಾರದ ಬಳೆಗಳು ಮತ್ತು ಮುತ್ತಿನ ಮಣಿ ಭುಜಬಂದ, ಬಳೆಗಳು ವಿಶಿಷ್ಟವಾಗಿವೆ. ಮತ್ತು ಎರಡು ಕಾಲುಗಳು ಮುರಿದಿವೆ"(S.R.M., K.G.Bhatsoori, P.No.38).

ಚಂದನಕೇರಿಯ ಗ್ರಾಮದಲ್ಲಿ ಒಂದು ವಿಶೇಷ ಮೂರ್ತಿಯಿದೆ. ಇದನ್ನು ಸ್ಥಳೀಯರು ಬಾಣಂತಿ ಸಂಗಮ್ಮ ಎಂದು ಕರೆಯುತ್ತಾರೆ. ಈ ಮೂರ್ತಿಯ ಕೊರಳಲ್ಲಿ ಸರವಿದೆ. ಕಿವಿ ಓಲೆ, ಬಳೆಗಳು ಹಾಗೂ ಕೂದಲುಗಳ ತುರುಬನ್ನು ಕಟ್ಟಲಾಗಿದೆ. ಇದರ ಬೆನ್ನಿನ ಹಿಂದಿನಿಂದ ಒಂದು ಪುರುಷನ ಮುಖವುಳ್ಳ ಶಿಲ್ಪವನ್ನು ಅಡ್ಡವಾಗಿ ಕೆತ್ತಲಾಗಿದೆ. ಬಹುಶಃ ಇದು ಸತಿಕಲ್ಲು ಆಗಿರಬಹುದೆಂದು ಹೇಳಬಹುದು. ಇದಕ್ಕೆ ಎಣ್ಣೆ ಹಚ್ಚಿದ ಕಾರಣ ವಿವರಣೆಗಳು ಸ್ಪಷ್ಟವಾಗಿ ಹೇಳುವುದು ಸಾಧ್ಯವಿಲ್ಲವಾಗಿದೆ. ಸುಮಾರು ಕ್ರಿ.ಶ.೧೪-೧೫ನೆಯ ಶತಮಾನಕ್ಕೆ ಸೇರಿರಬಹುದಾದ ಶಿಲ್ಪ ಇದಾಗಿದೆ.

೧. ಮಹಿಷಮರ್ದಿನಿ ಶಿಲ್ಪ

ದೇವದುರ್ಗ ತಾಲ್ಲೂಕಿನ ಅಲ್‌ಕೋಡ್ ಗ್ರಾಮದಲ್ಲಿ ಅನೇಕ ಮೂರ್ತಿಶಿಲ್ಪಗಳಿದ್ದು, ಅವುಗಳಲ್ಲಿ ಮಹಿಷಾಸುರಾ ಮರ್ದನಿಯ ಶಿಲ್ಪವು ಒಂದಾಗಿದೆ. ಇದು ತುಂಬಾ ಚಿತ್ತಾಕರ್ಷಕವಾಗಿದೆ. ಇದು ಕ್ರಿ.ಶ.ಸು.೯-೧೦ನೇಯ ಶತಮಾನಕ್ಕೆ ಸೇರಿಸಬಹುದಾದ ಶಿಲ್ಪವಾಗಿದೆ. ಮಹಿಷಾಸುರಾ ಮರ್ದಿನಿಯು ಒಟ್ಟು ಎಂಟು ಕೈಗಳನ್ನು ಹೊಂದಿದ್ದು, ಬಲಕೈಗಳಲ್ಲಿ ಖಡ್ಗ, ಬಾಣ, ತ್ರಿಶೂಲ, ಚಕ್ರಗಳನ್ನು ಹಾಗೂ ಎಡಕೈಗಳಲ್ಲಿ ಬಿಲ್ಲು, ರಾಕ್ಷಸನ ಜುಟ್ಟು, ಮತ್ತು ಉಳಿದ ಎರಡು ಕೈಗಳು ಸ್ಪಷ್ಟವಿಲ್ಲ. ಸೊಂಟದಲ್ಲಿ ನಡುಬಂಧ, ತೋಳಬಂಧ ಹಾಗೂ ಹಾಗೂ ವೀರಗಚ್ಚೆ ಮತ್ತು ಉಬ್ಬಿದ ಕುಚಗಳನ್ನು ತುಂಬಾ ಸೊಗಸಾಗಿ ಕೆತ್ತಲಾಗಿದೆ. ಇವಳ ವಾಹನವಾದ ಸಿಂಹವನ್ನು ಬಿಡಿಸಲಾಗಿದೆ. ಈ ಸಿಂಹವು ತುಂಬಾ ಗುಂಗುರು ಕೂದಲುಗಳನ್ನು ಹೊಂದಿದೆ. ಮಹಿಷಾಸುರ ಮರ್ದಿನಿಯು ಎಡಗೈಯಲ್ಲಿ ರಾಕ್ಷಸನ ಕೂದಲುಗಳನ್ನಿಡಿದು,

ಎಡಗಾಲಿನಿಂದ ಅವನನ್ನು ತುಳಿದು ಆಯುಧದಿಂದ ಕೊಲ್ಲುತ್ತಿರುವಳು. ರಾಕ್ಷಸನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಗುರಾಣಿ ಹಿಡಿದಿದ್ದು, ಕೊರಳಲ್ಲಿ ಸರ, ತೋಳುಬಂಧ, ಕೈಗಡಗ, ದೋತ್ರ ಮುಂತಾದವುಗಳನ್ನು ಧರಿಸಿದ್ದಾನೆ. ಈ ಮೂರ್ತಿಶಿಲ್ಪದ ಉಳಿದ ಭಾಗಗಳು ವಿಘ್ನಗೊಂಡಿವೆ. ಇಷ್ಟು ವಿವರವಾದ ಹಾಗೂ ಪ್ರಮಾಣಬದ್ಧವಾದ ಮಹಿಷಾಸುರಮರ್ದಿನಿ ಶಿಲ್ಪವು ನನ್ನ ಅಧ್ಯಯನ ಕ್ಷೇತ್ರದಲ್ಲಿ ಇದೊಂದೇ ದೊರೆತಿದೆ. ಇದರ ಭಂಗಿ, ವಸ್ತ್ರಧಾರಣೆ, ಮೊದಲಾದವುಗಳಿಂದ ಇದು ಕ್ರಿ.ಶ.ಸು.೯-೧೦ನೆಯ ಶತಮಾನಕ್ಕೆ ಸೇರಿರಬಹುದು. ಬಳಪದ ಕಲ್ಲಿನಿಂದ ಕೆತ್ತಲಾಗಿರುವ ಈ ಶಿಲ್ಪವು ಮನೋಹರವಾಗಿದೆ.

೧. **ಉಮಾಮಹೇಶ್ವರ :** ಗಬ್ಬೂರಿನ ನಾಗರ ಬೆಟ್ಟದಲ್ಲಿ ಕರಿ ಕಲ್ಲಿನಲ್ಲಿ ಕೆತ್ತಿದ ಉಮಾಮಹೇಶ್ವರ ಕ್ರಿ.ಶ.೧೧ನೇ ಶತಮಾನಕ್ಕೆ ಸೇರಿದ್ದಾಗಿದೆ. ಇದು ೩೧ ಇಂಚು ಉದ್ದ, ಹಾಗೂ ೨೧ ಇಂಚು ಅಗಲವಾಗಿದೆ. ಈ ಶಿಲ್ಪವು ಕುಳಿತ ಭಂಗಿಯಲ್ಲಿದ್ದು, ತುಂಬ ಸುಂದರವಾಗಿ ಕೆತ್ತಲ್ಪಟ್ಟಿದೆ. ಕೊರಳಲ್ಲಿ ೩ ರೀತಿಯ ಸರವಿದೆ. ಕಂಠಹಾರ, ಮುತ್ತಿನಸರ, ತೋಳುಬಂದಿ, ಸೊಂಟದಲ್ಲಿ ಡಾಬು, ಕಾಲ್ಗಡಗ, ಕಿವಿ ಓಲೆ ಮುಂತಾದವುಗಳನ್ನು ಬಿಡಿಸಲಾಗಿದೆ. ಮೇಲಿನ ಭಾಗದಲ್ಲಿ ಸಂಗೀತ ಮೇಳದೊಂದಿಗೆ ಇರುವ ಅನೇಕ ಸೇವಕರನ್ನು ಬಿಡಿಸಲಾಗಿದೆ. ಮಹೇಶ್ವರನ ಬಲಗೈ ಮತ್ತು ಮೊಣಕಾಲು ಮುರಿದಿದೆ.

೨. ದೇವದುರ್ಗದ ಬೆಟ್ಟದ ತುದಿಯಲ್ಲಿ ಬಂಡೆಗಲ್ಲಿನಲ್ಲಿ ಸಹ ಇನ್ನೊಂದು ಉಮಾಮಹೇಶ್ವರ ಶಿಲ್ಪವನ್ನು ಬಿಡಿಸಲಾಗಿದೆ. ಇದು ೧೭-೧೮ನೇ ಶತಮಾನದಲ್ಲಿ ಕೆತ್ತಿದ ಒಂದು ಶಿಲ್ಪವಾಗಿದೆ. ಈ ಶಿಲ್ಪದಲ್ಲಿ ಶಿವಪಾರ್ವತಿಯರು ತಮ್ಮ ವಾಹನವಾದ ನಂದಿಯ ಮೇಲೆ ಕುಳಿತಿದ್ದಾರೆ. ಮಹೇಶ್ವರನ ಬಲಗೈಯಲ್ಲಿ ತ್ರಿಶೂಲವಿದೆ, ತೋಳಲ್ಲಿ, ಕೈಯಲ್ಲಿ ಹಾಗೂ ತಲೆಯಲ್ಲಿ ರುದ್ರಾಕ್ಷಿಗಳನ್ನು ಕಟ್ಟಿದ್ದಾನೆ. ತಲೆಯಲ್ಲಿ ಗಂಗೆಯನ್ನು ಕೆತ್ತಲಾಗಿದೆ. ಉಮಾ ಶಿಲ್ಪದಲ್ಲಿ ಕೂದಲುಗಳ ತುರುಬನ್ನು, ಕುಚಗಳನ್ನು, ನಿರೆ ಗಚ್ಚೆಯನ್ನು ಬಿಡಿಸಲಾಗಿದೆ. ನಂದಿಯ ಕೊರಳ ಸರಗಳು, ಚಾವರ ಮುಂತಾದವುಗಳನ್ನು ಕೆತ್ತಲಾಗಿದೆ.

೩. ಬ್ರಹ್ಮ : ಗಬ್ಬೂರಿನ ಬೆಟ್ಟದಲ್ಲಿ ಕ್ರಿ.ಶ.೧೨ನೇ ಶತಮಾನದ ಬ್ರಹ್ಮನ ಮೂರ್ತಿಯಿದೆ. ಇದು ೨೩ ಅಡಿ ಉದ್ದ ಹಾಗೂ ೧೭ ಅಡಿ ಅಗಲವಾಗಿದೆ. ಈ ಶಿಲ್ಪವು ಪದ್ಮಾಸನದಲ್ಲಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಒಂದು ಕೈ ಅಭಯ ಹಸ್ತ ಇನ್ನೊಂದು ವರದ ಮುದ್ರೆಯಲ್ಲಿದೆ. ಇನ್ನೆರಡು ಕೈಗಳಲ್ಲಿ ಗದೆಗಳನ್ನು ಹಿಡಿದಿದ್ದಾನೆ. ಬ್ರಹ್ಮನಿಗೆ ನಾಲ್ಕು ಮುಖಗಳಿರುವುವು, ಆದರೆ ಈ ಶಿಲ್ಪದಲ್ಲಿ ಮೂರು ಮುಖಗಳನ್ನು ಮುಂದಿನ ಭಾಗದಲ್ಲಿ ಕಾಣುವ ರೀತಿಯಲ್ಲಿ ಬಿಡಿಸಿದ್ದಾರೆ. ಕಿವಿಯೋಲೆಗಳು, ಕೊರಳಲ್ಲಿ ಸರಗಳು, ಕಾಲ್ಕಡಗ, ಸೊಂಟಪಟ್ಟಿ ಮುಂತಾದವುಗಳನ್ನು ಬಿಡಿಸಲಾಗಿದೆ.

ಇನ್ನೊಂದು ಇದೇ ರೀತಿಯ ಶಿಲ್ಪವನ್ನು ದೇವದುರ್ಗದ ಬೆಟ್ಟದ ತುದಿಯ ಬಂಡಿಯಲ್ಲಿ ಬಿಡಿಸಲಾಗಿದೆ. ಇದು ೧೭-೧೮ನೇ ಶತಮಾನದ್ದಾಗಿದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು,

ಆ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಚಕ್ರ, ಶಂಖಗಳನ್ನು ಹಿಡಿದಿದ್ದಾನೆ. ವೀರಗಚ್ಚೆ, ತೋಳುಬಂದಿ, ಖಡ್ಗ, ಮುಂತಾದವುಗಳನ್ನು ಬಿಡಿಸಲಾಗಿದೆ.

೪. ಗರುಡಶಿಲ್ಪ : ದೇವದುರ್ಗ ಬೆಟ್ಟದ ತುದಿಯ ಬಂಡೆಯಲ್ಲಿ ೧೭-೧೮ನೇ ಶತಮಾನದ ಗರುಡ ಶಿಲ್ಪವನ್ನು ಬಿಡಿಸಲಾಗಿದೆ. ಈ ಗರುಡ ಶಿಲ್ಪವು ಸೊಂಟಪಟ್ಟಿ, ತೋಳುಬಂಧಿ, ಕಾಲ್ಕಡಗ, ಕೈಕಡಗ, ಕೊರಳ ಸರವನ್ನು ಬಿಡಿಸಲಾಗಿದೆ. ಎರಡು ರೆಕ್ಕೆಗಳನ್ನು ಸಹ ಬಿಡಿಸಲಾಗಿದೆ. ಇದೇ ರೀತಿಯ ಇನ್ನೊಂದು ಶಿಲ್ಪವನ್ನು ಗಬ್ಬೂರಿನ ಬೆಟ್ಟದ ಬಂಡೆಯಲ್ಲಿ ಬಿಡಿಸಲಾಗಿದೆ. ಇದು ವಿವಿಧ ಆಭರಣಗಳಿಂದ ಅಲಂಕೃತವಾಗಿದೆ. ಇದು ಎರಡು ಕೈ ಮುಗಿದುಕೊಂಡಿರುವ ಆಕಾರದಲ್ಲಿದೆ. ಕಾಲ್ಕಡಗ, ಕೈಗಡಗ, ನಿರಿಗಚ್ಚೆ, ಕೊರಳಹಾರ, ತೋಳುಬಂದಿ, ಆಭರಣ ರೆಕ್ಕೆಗಳನ್ನು ಸಹ ಬಿಡಿಸಲಾಗಿದೆ.

ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಗಬ್ಬೂರಿನ ಎರಡು ಗರುಡ ಶಿಲ್ಪಗಳಿವೆ. ಈ ಶಿಲ್ಪಗಳನ್ನು ಬೆಣಚುಕಲ್ಲಿನಲ್ಲಿ ನಿರ್ಮಿಸಲಾಗಿದೆ. ಒಂದು ಗರುಡ ಶಿಲ್ಪವು ೩೮X೨೩ ಅಳತೆಯಿದ್ದು ಕ್ರಿ.ಶ.೧೨ನೆಯ ಶತಮಾನದ್ದಾಗಿದೆ. ಗರುಡನು ತನ್ನ ಬಲ ಮೊಳಕಾಲೂರಿ ಕುಳಿತಿರುವನು. ಅವನ ಎರಡು ಕೈಗಳಲ್ಲಿ ಅಂಜಲಿ ಮುದ್ರೆ ತೋರಿಸುತ್ತಿರುವವನು. ಮುಖ ಹಾಳಾಗಿದೆ, ದಾಸಿಯನ್ನು ಬಲಭಾಗದಲ್ಲಿ ಚಿತ್ರಿಸಲಾಗಿದೆ. ಗರುಡನು ಕಿರೀಟ, ಕಂಠಹಾರ, ಕಿವಿಯೋಲೆ, ಬಳೆ, ಕಾಲ್ಗಡಗ ಧರಿಸಿರುವನು.

ಇದೇ ಸ್ಥಳದಲ್ಲಿ ಇನ್ನೊಂದು ಗರಡು ಶಿಲ್ಪವು ಇದ್ದು, ಅದು ೮೬X೫೭ ಸೆಂ.ಮೀ. ಅಳತೆಯನ್ನು ಹೊಂದಿದೆ. ಇದು ಸಹ ೧೨ನೇ ಶತಮಾನದ್ದಾಗಿದೆ. ಗರುಡ ಅಂಜಲಿ ಮುದ್ರೆಯೊಂದಿಗೆ ಕುಳಿತಿರುತ್ತಾನೆ. ಗರುಡನನ್ನು ವಿಷ್ಣುವಿನ ಬಲಭಾಗದಲ್ಲಿ ಚಿತ್ರಿಸಿರುತ್ತಾರೆ. ಗರುಡನ ಹಿಂದೆ ಚಾಮರಧಾರಿಯನ್ನು ಕಾಣಬಹುದು. ಈ ಮೂರ್ತಿಯ ಬಲಭಾಗದಲ್ಲಿ ಭುಜಬಂಧವನ್ನು ಹೊಂದಿದೆ.

೫. ನಾಗ-ನಾಗಿನಿ : ಕಪ್ಪು ಬೆಣಚುಕಲ್ಲಿನಲ್ಲಿ ಕೆತ್ತಿದ ಸು. ೭೩X೪೩ ಸೆಂ.ಮೀ ಉದ್ದದ ನಾಗಶಿಲ್ಪವು ಕ್ರಿ.ಶ.೧೭ನೇ ಶತಮಾನದ್ದಾಗಿದೆ. ಈ ಶಿಲ್ಪ ಹಾಳಾಗಿದೆ. ಇಲ್ಲಿ ನಾಗ ತನ್ನ ಬಲಗೈಯಲ್ಲಿ ಒಂದು ಖಡ್ಗವನ್ನು ಹಿಡಿದರೆ, ನಾಗಿನಿ ತನ್ನ ಎಡಗೈಯಲ್ಲಿ ಒಂದು ಸರ್ಪವನ್ನು ಹಿಡಿದಿರುತ್ತಾಳೆ. ಎರಡು ಬದಿಗೆ ಎರಡು ಸರ್ಪಗಳನ್ನು ಚಿತ್ರಿಸಲಾಗಿದೆ. ನಾಗ-ನಾಗಿನಿಯರು ಕಿರೀಟ, ವೃತ್ತಾಕಾರ ಕಿವಿಯೋಲೆಗಳನ್ನು, ಏಕಹಾರಗಳನ್ನು ಧರಿಸಿರುವುದು ಕಾಣಬಹುದು.

ಇನ್ನೊಂದು ಶಿಲ್ಪವು ೬೭X೩೭ ಸೆಂ.ಮೀ ಉದ್ದವಾಗಿದ್ದು, ೧೭ನೇ ಶತಮಾನದ್ದಾಗಿದೆ. ಇವು ಒಂದಕ್ಕೊಂದು ಹೆಣೆದುಕೊಂಡಿವೆ. ನಾಗನ ಬಲಗೈಯಲ್ಲಿ ಒಂದು ಖಡ್ಗವಿದ್ದರೆ, ನಾಗಿನಿಯ ಎಡಗೈಯಲ್ಲಿ ಒಂದು ಘಟಸರ್ಪವಿದೆ. ಕೆಲಭಾಗ ಸ್ವಲ್ಪ ಹಾಳಾಗಿದೆ. ಏಳು ಹೆಡೆಯ ಸರ್ಪವು ನಾಗ ನಾಗಿನಿಯರ ತಲೆಯ ಮೇಲೆ ಛತ್ರಿಯಂತೆ ತನ್ನ ತಲೆಯನ್ನು ಹಿಡಿದಿರುವುದು ಕಾಣಬಹುದು. ನಾಗ ಕಿರೀಟ, ಕಂಠಹಾರ,

ಓಲೆ ಧರಿಸಿರುವನು ಮತ್ತು ಕೇಶ ವಿನ್ಯಾಸದ ರೀತಿ ಆಸಕ್ತಿದಾಯಕವಾಗಿದೆ. ನಾಗಿನಿಯ ಎಡಭಾಗದಲ್ಲಿ ಪದ್ಮವನ್ನು ಚಿತ್ರಿಸಲಾಗಿದೆ. ಇದೇ ರೀತಿಯ ಇನ್ನೊಂದು ಶಿಲ್ಪವು ೮೨x೪೧ ಸೆಂ.ಮೀ ಉದ್ದವಾಗಿದೆ. ಇದು ೧೭ನೇ ಶತಮಾನಕ್ಕೆ ಸೇರಿದ್ದಾಗಿದೆ. ಇದೇ ಸ್ಥಳದಲ್ಲಿ ೭೨x೩೫ ಸೆಂ.ಮೀ ಉದ್ದದ ಒಂದು ನಾಗಶಿಲ್ಪವಿದೆ(S.R.M, K.G.Bhatsoori, P.N0.45-46).

೬. ಸಪ್ತಮಾತೃಕೆಯರು : ಕರ್ನಾಟಕದ ಇತರ ಭಾಗಗಳಲ್ಲಿನ ಜನಸಾಮಾನ್ಯರು ತಮಗೆ ಬಂದಿರಬಹುದಾದ ಕಷ್ಟಗಳನ್ನು ದೂರ ಮಾಡುವುದಕ್ಕಾಗಿ ಪೂಜಿಸುವ ದೇವತೆಗಳಲ್ಲಿ ಸಪ್ತಮಾತೃಕೆಯರೂ ಸೇರಿದ್ದಾರೆ. ಊರ ಹೆಸರನ್ನು ಪಡೆದ ದೇವತೆಗಳಾಗಿ ಎಲ್ಲ ವರ್ಗದ ಜನರಿಂದ ಪೂಜೆಗೊಳ್ಳುವ ಇವರು ಅನೇಕ ವೇಳೆ ಶಿವದೇವಾಲಯದ ಪರಿಹಾರ ದೇವತೆಗಳಾಗಿ, ಕೆಲವೊಮ್ಮೆ ಸ್ವತಂತ್ರವಾಗಿಯೂ ಪೂಜೆಗೊಳ್ಳುತ್ತಿದ್ದಾರೆ. ಇವರನ್ನು ಕನ್ಯೆಯರೆಂದು, ಅಮ್ಮನವರೆಂದೂ ಕರೆಯುವುದು ವಾಡಿಕೆ. ವರಾಹ ಪುರಾಣ, ಮಾರ್ಕಂಡೇಯ ಪುರಾಣಗಳು ಇವರ ಬಗ್ಗೆ ಹೆಚ್ಚಿನ ವಿವರವನ್ನು ನೀಡುತ್ತವೆ. ಇಂತಹ ಶಿಲ್ಪಗಳು ದೇವದುರ್ಗ, ರಾಮದುರ್ಗ, ಗಬ್ಬೂರು, ಜಾಳಹಳ್ಳಿ ಮುಂತಾದ ಗ್ರಾಮದ ದೇವಾಲಯಗಳಲ್ಲಿ ಮತ್ತು ಕೆಲವು ಹೊರಗಡೆಯ ಸ್ಥಳದಲ್ಲಿ ಕಾಣಿಸಿಕೊಂಡಿವೆ.

೭. ನಾಗಶಿಲ್ಪಗಳು : ನಾಗಶಿಲ್ಪಗಳು ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಾಣಿಸುತ್ತವೆ. ಇವುಗಳು ಬಗೆಬಗೆಯ ರೀತಿಯವೆ. ವಿಷ್ಣುವಿನ ಹಾಸಿಗೆಯಾಗಿ, ಮನುಷ್ಯನ ರೂಪದಲ್ಲಿ, ಗಣೇಶನ ಹೊಟ್ಟೆಯಲ್ಲಿ, ನಾಗ-ನಾಗಿಣಿ ರೂಪದಲ್ಲಿ ಹೀಗೆ ಅನೇಕ ರೀತಿಯಲ್ಲಿವೆ. ಇಂತಹ ಶಿಲ್ಪಗಳು ಕಾಲದಿಂದ ಕಾಲಕ್ಕೆ ಸ್ವಲ್ಪ ವ್ಯತ್ಯಾಸವಾಗಿರುವುದನ್ನು ಕಾಣಬಹುದಾಗಿದೆ. ಗಬ್ಬೂರಿನ ನಾಗರಬೆಟ್ಟದಲ್ಲಿ, ನಾಗೋಲಿ, ದೇವದುರ್ಗ, ರಾಮದುರ್ಗ, ಕ್ಯಾದ್ಗಿಗೇರಾ, ಚಂದನಕೇರಿ, ಅರೇಕೇರಾ ಮುಂತಾದ ಗ್ರಾಮಗಳಲ್ಲಿ ಇವನ್ನು ಕಾಣಬಹುದು.

೮. ದಂಪತಿ : ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿರುವ ಗಬ್ಬೂರಿನ ದಂಪತಿ ಶಿಲ್ಪವು ೪೨ x ೪೦ ಸೆಂ.ಮೀ ಉದ್ದವಿದೆ. ಇದು ೧೭ನೆಯ ಶತಮಾನದ್ದಾಗಿದೆ. ಇಲ್ಲಿ ದಂಪತಿಗಳನ್ನು ಹಾಸುಗಲ್ಲಿನ ಮೇಲೆ ಕೆತ್ತಲಾಗಿದೆ. ಗಂಡು ಅಂಜಲಿ ಮುದ್ರೆಯ ರೂಪದಲ್ಲಿದೆ. ಹೆಣ್ಣಿನ ಎರಡು ಕೈಗಳನ್ನು ಮೇಲೆ ಎತ್ತಿದಂತೆ ಬಿಡಿಸಲಾಗಿದೆ. ಎರಡು ಕೈಗಳಲ್ಲಿ ಹಣ್ಣುಗಳಿವೆ. ನಾಯಕ ಸಣ್ಣ ಕಿರೀಟ ಓಲೆ, ಬಳೆಗಳನ್ನು ಕಾಲ್ಗಡಗಳನ್ನು ಡಾಬನ್ನು ಧರಿಸಿರುವನು. ಖಡ್ಗವನ್ನು ಟೊಂಕದ ಬಲಗಡೆಯಲ್ಲಿ ಸಿಕ್ಕಿಸಿರುವುದನ್ನು ಕಾಣಬಹುದಾಗಿದೆ. ಹೆಣ್ಣಿನ ವೀರಗಚ್ಚೆ, ಕಿವಿಯೋಲೆ, ಕುಚಗಳು ಗಮನಾರ್ಹವಾಗಿದೆ. ಮೇಲೆ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ.

ಇತರೆ ಶಿಲ್ಪಗಳು

ಇದು ಅದೇ ಸ್ಥಳದಲ್ಲಿವೆ. ಈ ಶಿಲ್ಪವು ೫೦ x ೨೪ ಸೆಂ.ಮೀ. ಉದ್ದವಿದ್ದು, ಕ್ರಿ.ಶ.೧೩ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಇದು ದುಂಡಾದ ಕಲಾಕೃತಿಯಾಗಿದೆ. ಕಂಠಹಾರಗಳು, ಉದರ ಬಂಧಗಳು, ಉದ್ದನೆಯ ಹಾರ, ಟೊಂಕಪಟ್ಟಿಯಿಂದ ಅಲಂಕೃತಗೊಂಡು ಅದ್ವಿತೀಯವಾಗಿ ಕಾಣುತ್ತದೆ.

ಇನ್ನೊಂದು ಪುರುಷ ಶಿಲ್ಪವು ೫೨ x ೨೬ ಸೆಂ.ಮೀ ಉದ್ದವಿದ್ದು, ಕ್ರಿ.ಶ.೧೪ನೆಯ ಶತಮಾನದ್ದಾಗಿದೆ. ತಲೆ ಇಲ್ಲದ ಈ ಶಿಲ್ಪದಲ್ಲಿ ನಾಲ್ಕು ಕೈಗಳಿದ್ದಂತೆ ತೋರುತ್ತದೆ. ನಾಲ್ಕು ಕೈಗಳು, ಕಾಲುಗಳು, ಕುತ್ತಿಗೆ ಭಾಗ ಮುರಿದಿದೆ. ಕಂಠಹಾರ ಭುಜಬಂಧ, ಯಜ್ಞೋಪವಿತಾ ಉದ್ದನೆಯ ಹಾರ, ಟೊಂಕಪಟ್ಟಿ ಸ್ಥಳೀಯ ಶೈಲಿಯಂತೆ ಕೆತ್ತಲಾಗಿದೆ. ಇದೆ ಕಾಲಕ್ಕೆ ಸೇರಿದ ಇನ್ನೋಂದು ರುಂಡರಹಿತ ಪುರುಷ ಶಿಲ್ಪವಿದೆ. ಇದು ೫೨X೨೨ ಸೆಂ.ಮೀ. ಅಳತೆಯನ್ನು ಒಳಗೊಂಡಿದೆ. ಇದು ಅಗಲವಾದ ಕಂಠಹಾರ, ಉದ್ದನೆಯ ಹಾರ, ಟೊಂಕಪಟ್ಟಿ ಇವೆಲ್ಲವನ್ನು ಹೊಂದಿದ್ದು, ಸ್ಥಳೀಯ ವೈವಿಧ್ಯತೆಯನ್ನು ಎತ್ತಿ ತೋರಿಸುತ್ತದೆ(S.R.M., K.G.Bhatsoori, P.No.51-52).

ಶಾರ್ದೂಲ ಸ್ತಂಭ : ಚಂದನಕೇರಿಯ ಗ್ರಾಮದ ದಿಬ್ಬದ ಮೇಲೆ ನಂದಿ ವಿಗ್ರಹದ ತುಂಡುಗಳಿವೆ. ಇವುಗಳ ಪಕ್ಕದಲ್ಲಿ ಒಂದು ಶಾರ್ದೂಲ ಸ್ತಂಭವಿದೆ. ಇದು ೪೩ ಅಡಿ ಉದ್ದ, ೧೩ ಅಡಿ ಅಗಲವಿದ್ದು, ಚಾಳುಕ್ಯರ ಶೈಲಿಯಲ್ಲಿದೆ. “ಇದು ಪಾರ್ಶ್ವನಾಥ ಬಸದಿಯಲ್ಲಿ ಸ್ಥಾಪಿಸಲ್ಪಟ್ಟ ಸ್ತಂಭಗಳಲ್ಲಿ ಒಂದಾಗಿರಬಹುದು. ಪಾರ್ಶ್ವನಾಥ ಬಸದಿಗಳಲ್ಲಿ ಸಿಂಹ ಮುಖದ ಸ್ತಂಭಗಳ ಮೇಲೆ ಪೀಠವನ್ನು ಇಟ್ಟು, ಪೀಠದ ಮೇಲೆ ಪಾರ್ಶ್ವನಾಥ ಶಿಲ್ಪವನ್ನು ಸ್ಥಾಪಿಸುವ ಸಂಪ್ರದಾಯ ಆಗ ಇತ್ತೆಂದು ಇಲ್ಲಿ ಗಮನಿಸಬಹುದಾಗಿದೆ”(ಸಿರಿದುರ್ಗ ತಾ.ಸ್ಮರಣ ಸಂಚಿಕೆ ಪು.ಸಂ.೧೭). ಬಹುಶಃ ಪಲ್ಲವರ ಪ್ರಭಾವದಿಂದ ಇಂತಹ ಕಂಬ ಈ ಪ್ರದೇಶದಲ್ಲಿ ಕಾಣಿಸಿಕೊಂಡಿರಬಹುದು. ದೂರದ ಶಿರವಾಳದಲ್ಲಿ ಇಂತಹ ಕೆಲವು ಕಂಬಗಳು ದೇವಾಲಯದಲ್ಲಿ ಬಳಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಗಣೇಶ ಮೂರ್ತಿಗಳು

೧. ಬೆಣಕಲ್ ಬೆನಕಪ್ಪ : ದೇವದುರ್ಗ ತಾಲ್ಲೂಕಿನ ಬೆಣಕಲ್ ಗ್ರಾಮದ ಶಾಲೆಯ ಮುಂದೆ ೨ ಅಡಿ ಎತ್ತರದ ಜಗತಿಯ ಮೇಲೆ ಅನೇಕ ಮೂರ್ತಿಗಳಿವೆ. ಆ ಮೂರ್ತಿಗಳಲ್ಲಿ ವಿಶೇಷವಾದ ಗಣೇಶನ ಮೂರ್ತಿ ಇದ್ದು, ಇದು ಕ್ರಿ.ಶ.೧೧ ಅಥವಾ ೧೨ನೇ ಶತಮಾನಕ್ಕೆ ಸೇರಿದ್ದಾಗಿದೆ. ಇದನ್ನು ಕಪ್ಪು ಬಿಳಪು(ಕಟ್ಟು) ಕಠಿಣವಾದ ಕಲ್ಲಿನಲ್ಲಿ ಕೆತ್ತಲಾಗಿದೆ. ಇದು ೭೦ಸೆಂ.ಮೀ ಇಂಚು ಉದ್ದ ಹಾಗೂ ೪೬ಸೆಂ.ಮೀ ಇಂಚು ಅಗಲವಾಗಿದೆ. ಈ ಮೂರ್ತಿಯು ಕುಳಿತ ಭಂಗಿಯಲ್ಲಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಈ ಕೈಗಳಲ್ಲಿ ಪರಶುಗದೆ, ಮೋದಕಗಳನ್ನು ಹಿಡಿದ್ದಾನೆ. ಒಂದು ಕೈ ಮಾತ್ರ ಅಭಯ

ಹಸ್ತದ ಸಂಕೇತವಾಗಿದೆ. ಕಾಲುಗಳಲ್ಲಿ ಕಾಲ್ಬಡಗ, ಕೈಗಡಗ, ಕೊರಳಲ್ಲಿ ಪಟ್ಟಿಯಾಕಾರದಲ್ಲಿರುವ ಒಂದು ಸರವಿದೆ. ಹಣೆಪಟ್ಟಿಯನ್ನು ಅಗಲವಾದ ಕಿವಿಗಳನ್ನು ಸುಂದರವಾಗಿ ಕೆತ್ತಲಾಗಿದೆ.

೨. ಗಬ್ಬೂರು : ಗಬ್ಬೂರಿನ ಮೇಲಶಂಕರ ದೇವಾಲಯದ ನವರಂಗ ಮಂಟಪದ ಬಲಗಡೆಯ ಕೋಷ್ಠಕದ ಕೆಳಗೆ ಬಳಪದ ಜಾತಿಗೆ ಸೇರಿದ ಕಲ್ಲಿನಲ್ಲಿ ಕೆತ್ತಿದ ಗಣೇಶ ವಿಗ್ರಹವಿದೆ. ಅದು ೫೨ ಇಂಚು ಎತ್ತರ, ೪೨ ಇಂಚು ಅಗಲವಾಗಿದೆ. ಇದುನಾಲ್ಕು ಕೈಗಳನ್ನು ಹೊಂದಿದ್ದು, ಒಂದು ಅಭಯ ಹಸ್ತದ ಸಂಕೇತವಿದ್ದರೆ, ಇನ್ನುಳಿದ ಕೈಗಳಲ್ಲಿ ಪರಶು, ಮೋದಕ ಕೆತ್ತಲಾಗಿದೆ. ಕೆಳಗೆ ಇಲಿಯನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ. ತಲೆಯ ಭಾಗ ಸ್ವಲ್ಪ ಭಗ್ನಗೊಂಡಿದೆ.

೩. ಆಲ್‌ಕೋಡ : ಆಲ್‌ಕೋಡ ಗ್ರಾಮದ ಬೆಟ್ಟದಲ್ಲಿಯೂ ಒಂದು ಗಣೇಶನ ಮೂರ್ತಿ ಇದೆ. ಇದು ಕ್ರಿ.ಶ.೧೦-೧೧ನೇ ಶತಮಾನದಲ್ಲಿ ಕೆತ್ತಿದ ಮೂರ್ತಿಯಾಗಿದ್ದು, ಅತ್ಯಂತ ಸುಂದರವಾಗಿದೆ. ನಾಲ್ಕು ಕೈಗಳಲ್ಲಿ ಈಗ ಎರಡು ಕೈಗಳು ಭಗ್ನಗೊಂಡಿವೆ ಇನ್ನು ಎರಡು ಕೈಗಳಲ್ಲಿ ಖಡ್ಗ ರುದ್ರಾಕ್ಷಿ ಸರಗಳಿವೆ. ಕೈಯಲ್ಲಿ ತೋಳುಬಂದಿ ಪಟ್ಟಿಯಿದ್ದು, ಅದು ಸುಂದರವಾಗಿದೆ. ತಲೆಯಲ್ಲಿ ಕಿರೀಟವಿದೆ. ಅದು ಪುಷ್ಪವನ್ನು ಹೊಂದಿದೆ. ಕೊರಳಲ್ಲಿ ರುದ್ರಾಕ್ಷಿ ಸರವನ್ನು ಬಿಡಿಸಲಾಗಿದೆ.

೪. ನಾಗೋಲಿ : ನಾಗೋಲಿ ಗ್ರಾಮದ ಊರ ಹೊರವಲಯದಲ್ಲಿ ಒಂದು ಗಣೇಶ ವಿಗ್ರಹವಿದೆ. ಇದು ರಾಷ್ಟ್ರಕೂಟರ ಕಾಲಕ್ಕೆ ಸೇರಿರಬಹುದಾದ ಮೂರ್ತಿಯಾಗಿದೆ. ಕೆತ್ತನೆಯು ತುಂಬ ಸುಂದರವಾಗಿದ್ದು, ಕಪ್ಪು ಕಲ್ಲಿನಲ್ಲಿದೆ. ಬಲಗೈಯ ಎರಡು ಕೈಗಳು ಭಗ್ನಗೊಂಡಿವೆ. ಇನ್ನೆರಡು ಕೈಗಳಲ್ಲಿ ಒಂದು ಮೋದಕ, ಇನ್ನೊಂದು ಅಸ್ಪಷ್ಟವಾಗಿದೆ. ಕೊರಳಲ್ಲಿ ಸರವಿದೆ. ತಲೆಯಲ್ಲಿ ಪುಷ್ಪದ ಆಕಾರದ ಕೆತ್ತನೆಯನ್ನು ಬಿಡಿಸಲಾಗಿದೆ. ಶಿಲ್ಪದ ಹೆಚ್ಚಿನ ಭಾಗ ಭಗ್ನಗೊಂಡಿದೆ.

ಗಬ್ಬೂರಿನಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಹಾಗೂ ೧೩ ಮತ್ತು ೧೪ನೇ ಶತಮಾನದಲ್ಲಿ ನಿರ್ಮಿಸಿದ ಅನೇಕ ಗಣೇಶ ವಿಗ್ರಹಗಳಿವೆ. ಗಬ್ಬೂರಿನ ಬೆಟ್ಟದಲ್ಲಿರುವ ದೊಡ್ಡ ಬಂಡೆಗಳಲ್ಲಿ ಕೆತ್ತಿದ ಗಣೇಶನ ವಿಗ್ರಹಗಳಿವೆ.

ಹನುಮ ಶಿಲ್ಪ

ಕನ್ನಡ ನಾಡಿನಲ್ಲಿ ಮುಖ್ಯವಾದ ದೇವರುಗಳಲ್ಲಿ ಹನುಮಂತನೂ ಒಬ್ಬ. ನಾಡಿನ ಗುಡ್ಡ ಗಾಡುಗಳಲ್ಲಿ ಕಾಡು ಮೇಡುಗಳಲ್ಲಿ ಮೂಲೆ ಮೂಲೆಯ ಹಳ್ಳಿಗಳಲ್ಲಿ ಹನುಮಂತನ ಸಣ್ಣ ಸಣ್ಣ ಗುಡಿಗಳು ಕಂಡುಬರುತ್ತವೆ. ಗುಡಿಯಿಲ್ಲದೆ ಬಿಡಿಯಾಗಿ ನಿಂತ ಒರಟುಮೂರ್ತಿಗಳೂ ಕಾಣಸಿಗುತ್ತವೆ. ಹನುಮಂತನ ಮೂರ್ತಿ ಇಲ್ಲದ ಊರು ಇಲ್ಲವೆನ್ನಬಹುದು. "ಊರು ಬಾಗಿಲ ಹನುಮಂತ" ಎನ್ನುವುದು ಎಲ್ಲರೂ ಬಲ್ಲರು. ಊರ ಹೊರಗೆ ಅವನ ಗುಡಿಯಿರುವುದು ಇನ್ನೊಂದು ವಿಶೇಷ. "ಊರು ಸುಟ್ಟರೂ

ಹನುಮಪ್ಪ ಹೊರಗೆ'' ಎನ್ನುವ ಗಾದೆಯೂ ಇದೆ. ಆರ್ಯವೀರನಾದ ರಾಮನ ಪರಿವಾರದಲ್ಲಿ ಸೇರುವ ಮೊದಲೇ ಹನುಮಂತ ಸ್ವತಂತ್ರ ದೇವರಾಗಿ ಮೆರೆಯುತ್ತಿದ್ದುದುಂಟು. ಈ ದೇವರ ಪ್ರಾಚೀನತೆ ಸಹ ಇದೆ(ಮೂರ್ತಿಶಿಲ್ಪ ನೆಲೆ ಹಿನ್ನೆಲೆ ಪು.೩೨೩, ಎಸ್.ಕೆ.ರಾಮಚಂದ್ರರಾವ್). ಬೆಣಕಲ್ ಬಾಲಾಂಜನೇಯ ಮೂರ್ತಿಯನ್ನು ಒಂದು ದೊಡ್ಡದಾದ ಕಲ್ಲಿನಲ್ಲಿ ಕೆತ್ತಲಾಗಿದೆ. ಇದರ ಬಾಲವು ಉದ್ದವಾಗಿದೆ. ಇದು ೬೩ ಇಂಚು ಉದ್ದ ೪೧ ಇಂಚು ಅಗಲವನ್ನು ಹೊಂದಿದೆ. ಮೂರ್ತಿಯ ಕೊರಳಲ್ಲಿ ಮಣಿಸರ, ಸೊಂಟದಲ್ಲಿ ಸೊಂಟಪಟ್ಟಿ, ಕಾಲ್ಕಡಗ ಮುಂತಾದ ಆಭರಣಗಳನ್ನು ಕೆತ್ತಲಾಗಿದೆ. ಗಬ್ಬೂರಿನಲ್ಲಿ ಸಹ ಇದೇ ತರಹದ ಹನುಮ ಮೂರ್ತಿಗಳನ್ನು ಕಾಣುತ್ತೇವೆ. ಅಲ್ಲದೇ ದೇವದುರ್ಗ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಅನೇಕ ಆಂಜನೇಯ ಮೂರ್ತಿಗಳಿದ್ದು, ಅವುಗಳಿಗೆ ಸಣ್ಣ ಗುಡಿಯನ್ನು ನಿರ್ಮಿಸಲಾಗಿದೆ. ಕೆಲವು ಕಡೆ ಗುಡಿಯಿಲ್ಲದೆ ಹೊರಗಡೆ ಬಯಲಿನಲ್ಲಿ ಸಹ ಇಂತಹ ಮೂರ್ತಿಗಳಿವೆ.



ಗಣೇಶ ಶಿಲ್ಪ ಆಲ್‌ಕೋಡ್




ಗಣೇಶ ಶಿಲ್ಪ ನಾಗೋಲಿ



ಗಣೇಶ ಶಿಲ್ಪ ಗಬ್ಬೂರು



ಗಣೇಶ ಶಿಲ್ಪ ಬೆಣಕಲ್ಲ್



ಆಂಜನೇಯ ಮೂರ್ತಿ ಲಿಂಗದಳ್ಳಿ



ಆಂಜನೇಯಮೂರ್ತಿ ಬೆಣಕಲ್ಲ್



ಮಹಿಷ ಮರ್ದಿನಿ ಶಿಲ್ಪ ಅಲ್ಕೋಡ್



ಭದ್ರಕಾಳಿ ಶಿಲ್ಪ ಆಲ್ಕೋಡ್



ಭದ್ರಕಾಳಿ ಶಿಲ್ಪ ಅಲ್ಕೋಡ್



ಭದ್ರಕಾಳಿ ಶಿಲ್ಪ ಚಂದನಕೇರಿ



ಉಮಾ ಮಹೇಶ್ವರ ಶಿಲ್ಪ ಅಲ್ಕೋಡ್



ಉಮಾ ಮಹೇಶ್ವರ ಶಿಲ್ಪ ಗಬ್ಬೂರು ಬೆಟ್ಟ



ಉಮಾ ಮಹೇಶ್ವರ ಶಿಲ್ಪ ಗಬ್ಬೂರು


ಬೈರವಿ ಶಿಲ್ಪ ಚಂದನಕೇರಿ


ವೀರಭದ್ರ ಮೂರ್ತಿ ಚಂದನಕೇರಿ


ವೈಷ್ಣವ ಮೂರ್ತಿ ಗಬ್ಬೂರು



ಪುರುಷ ಮುಂಡ ಶಿಲ್ಪ ಗಬ್ಬೂರು(



ಪುರುಷ ಮುಂಡ ಶಿಲ್ಪ ಗಬ್ಬೂರು



ವಿಷ್ಣುವಿನ ಮೂರ್ತಿ ದೇವದುರ್ಗ ಬೆಟ್ಟ



ಸೂರ್ಯ ಶಿಲ್ಪ ಚಂದನಕೇರಿ



ಸೂರ್ಯ ಶಿಲ್ಪ ಚಿಂಚೊಡಿ



ನಾರಾಯಣ ಶಿಲ್ಪ ಅಣೇಮಲ್ಲೇಶ್ವರ



ನಾರಾಯಣ ಶಿಲ್ಪ ಚಂದನಕೇರಿ.



ಸೂರ್ಯ ಶಿಲ್ಪ ಗಬ್ಬೂರು.



ವಿಷ್ಣು ಶಿಲ್ಪ ಗಬ್ಬೂರು



ಜೈನ ಶಿಲ್ಪ ಗಬ್ಬೂರು



ಪಾದಬಂದ ಗಬ್ಬೂರು,



ಪಲ್ಲಕ್ಕಿ ದೇವದುರ್ಗ



ಪಲ್ಲಕ್ಕಿ ಮಸರಕಲ್.



ಶಾರ್ದೂಲ ಸ್ತಂಭ (ಸಿಂಹ ಮುಖ)



ಲಿಂಗ ಗೊಗಲ್ಲು ದೇವಾಲಯ



ವೃತ್ತಾಕಾರದ ಪಾಣಿವಾಟ ಲಿಂಗಚೌಡೇಶ್ವರಿ ದೇವಾಲಯ ಗಬ್ಬೂರು.



ವೃತ್ತಾಕಾರ ಪಾಣಿವಾಟಲಿಂಗ ಗಬ್ಬೂರು.



ಚೌಕಾಕಾರದ ಪಾಣಿವಾಟ ಲಿಂಗ ಗಬ್ಬೂರು



ವೃತ್ತಾಕಾರದ ಪಾಣಿವಾಟಲಿಂಗ ಗಬ್ಬೂರು



ನಾಗಶಿಲ್ಪಗಳು ಗಬ್ಬೂರು ಬೆಟ್ಟ



ದಂಪತ್ತಿ ಶಿಲ್ಪ ಗಬ್ಬೂರು



ನಾಗ ನಾಗಿಣಿ ಗಬ್ಬೂರು



ಬಂಡೆ ಶಾಸನ ರಾಮದುರ್ಗ

೬.೪. ವೀರಗಲ್ಲು ಹಾಗೂ ಮಹಾಸತಿಕಲ್ಲು

ಪ್ರಾಚೀನ ಭಾರತ ಹಾಗೂ ಕನ್ನಡನಾಡಿನ ಸಮಾಜದಲ್ಲಿ ದಾನ ಮಹೋನ್ನತವಾದ ಮೌಲ್ಯವಾಗಿದೆ. ದಾನದ ಗುಣದ ಜೊತೆಗೆ ವೀರನ ವೀರತ್ವ ಕೂಡ ಅಷ್ಟೇ ಮಹತ್ವದ್ದಾಗಿದೆ. ಇಂತಹ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕುವುದು ಅಂದಿನ ಜನರ ಕರ್ತವ್ಯವಾಗಿತ್ತು. ವೀರರ ಜೊತೆಗೆ ಕೆಲವು ವೀರ ರಮಣೀಯರು ತಮ್ಮ ಶೌರ್ಯ ಧೈರ್ಯಗಳನ್ನು ತೋರಿಸಿದ್ದನ್ನು ಇತಿಹಾಸದಲ್ಲಿ ನೋಡಬಹುದು.

ಕರ್ನಾಟಕದಲ್ಲಿ ದಾನ ಶಾಸನಗಳು ಸಂಖ್ಯೆಯ ದೃಷ್ಟಿಯಿಂದ ಪ್ರಥಮ ಸ್ಥಾನ ಪಡೆದರೆ, ವೀರ ಸ್ಮಾರಕಗಳು ದ್ವಿತೀಯ ಸ್ಥಾನ ಪಡೆದಿವೆ. ಏಕೆಂದರೆ ಕರ್ನಾಟಕದ ಎಲ್ಲ ಮೂಲೆ ಮೂಲೆಯಲ್ಲಿ ವೀರರ ಸ್ಮಾರಕಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಾಗಿವೆ. ಇವುಗಳನ್ನು ಶಾಸನಸಹಿತ ಮತ್ತು ಶಾಸನರಹಿತ ಶಿಲ್ಪವೆಂದು ಎರಡು ಭಾಗಗಳಲ್ಲಿ ಕಾಣಬಹುದು.

ಈ ವೀರಸ್ಮಾರಕಗಳು ಕನ್ನಡ ನಾಡಿನ ಶಾಸನಗಳ ಒಂದು ವೈಶಿಷ್ಟ್ಯ. ಊರಿನ ಹಿತಕ್ಕಾಗಿಯೂ, ದುಷ್ಟ ಶಿಕ್ಷಣಕ್ಕಾಗಿಯೂ ಅಥವಾ ಸ್ವಾಮಿ ನಿಷ್ಠೆಯಿಂದಲೂ ಹೋರಾಡಿ ಮಡಿದ ವೀರ ಪುರುಷರ ಸ್ಮಾರಕಕ್ಕಾಗಿ ರಚಿತವಾದ ಈ ವೀರಗಲ್ಲುಗಳು ಒಂದು ವಿಶಿಷ್ಟ ಬಗೆಯ ಸ್ಮಾರಕಗಳು. ಈ ವೀರಗಲ್ಲುಗಳನ್ನು ಗುರುತಿಸುವುದು ಸಾಮಾನ್ಯ ಮತ್ತು ಸುಲಭ.

ವೀರ ಶತ್ರುಗಳೊಡನೆ ಹೋರಾಡುವ ದೃಶ್ಯ. ಮಧ್ಯದಲ್ಲಿ ಸತ್ತ ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಕರೆದೊಯುವ ಚಿತ್ರ. ಮೂರನೇ ಹಂತದಲ್ಲಿ ವೀರನು ಭಗವಂತನ ಸಾನ್ನಿಧ್ಯದಲ್ಲಿರುವಂತೆ ಚಿತ್ರ ಬಿಡಿಸಲಾಗಿರುತ್ತದೆ. ಕೆಲವು ವೀರಗಲ್ಲುಗಳಲ್ಲಿ ಯುದ್ಧದ ದೃಶ್ಯ ಮತ್ತು ವೀರನು ಶತ್ರುವಿನ ತಲೆಯನ್ನು ಕತ್ತರಿಸುವ ಚಿತ್ರ. ವೀರನು ಖಡ್ಗ, ಬಿಲ್ಲುಧಾರಿಯಾಗಿರುವ ಶಿಲ್ಪ ಇತ್ಯಾದಿಗಳಿರುತ್ತವೆ. ಈ ಶಿಲ್ಪದ ಆಧಾರದ ಮೇಲೆ ಅವು ವೀರಸ್ಮಾರಕಗಳೆಂದು ಸ್ಪಷ್ಟಪಡಿಸಬಹುದು. ವೀರಗಲ್ಲನ್ನು ನೆಡಿಸಿ, ಅದರ ಪೂಜೆಗಾಗಿ ದಾನ ಕೊಡುವುದರ ಜೊತೆಗೆ, ಆ ವೀರಗಲ್ಲಿಗೆ ಗುಡಿಯನ್ನು ಕಟ್ಟಿಸುವ ಪದ್ಧತಿ ಇತ್ತು. ಇಂತಹ ಅನೇಕ ವೀರಸ್ಮಾರಕಗಳು ದೇವದುರ್ಗ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿವೆ.

ಆಯುಧಗಳು

ಪ್ರಾಚೀನ ಕಾಲದಲ್ಲಿ ಯುದ್ಧವು ಜೀವನದ ಒಂದು ಭಾಗವೇ ಆಗಿತ್ತು. ಜೀವನದ ಒಂದು ಭಾಗವೇ ಆಗಿತ್ತು. ಆ ಯುದ್ಧದಲ್ಲಿ ಬಳಸಿದ ಆಯುಧಗಳು ಮಹತ್ವದ ಪಾತ್ರ ವಹಿಸಿವೆ. ರಾಜರು, ಸೈನಿಕರು ಅನೇಕ ವೀರರು, ಬಳಸಿದ ಆಯುಧಗಳನ್ನು ದೇವದುರ್ಗ ತಾಲ್ಲೂಕಿನಲ್ಲಿ ದೊರೆತ ವೀರಗಲ್ಲು ಹಾಗೂ ಮಹಾಸತಿ ಕಲ್ಲುಗಳಲ್ಲಿ ಕಾಣಬಹುದು. ಅಲ್ಲದೆ ಕೆಲವು ದೇವತಾ ಶಿಲ್ಪಗಳಲ್ಲಿರುವ ಆಯುಧಗಳನ್ನು ಈ ಕೆಳಗಿನಂತೆ ಕಾಣಬಹುದು.

ಬಿಲ್ಲು ಮತ್ತು ಬಾಣ : ಈ ಬಿಲ್ಲುಗಳನ್ನು ಬಿದಿರಿನಿಂದ ಮಾಡಿದ್ದನ್ನು ಕಾಣಬಹುದು. ಈ ಬಿಲ್ಲುಗಳಲ್ಲಿ ಅನೇಕ ವಿವಿಧ ಬಿಲ್ಲುಗಳನ್ನು ಇಲ್ಲಿ ಕಾಣಬಹುದು. ಒಂದು ಮಣಿದ ಬಿಲ್ಲು, ಮೂರು ಮತ್ತು ಐದು ಮಣಿತದ ಬಿಲ್ಲುಗಳಿರುತ್ತವೆ. ಇವುಗಳನ್ನು ಕಲಾತ್ಮಕವಾಗಿ ಮಾಡಿರುತ್ತಾರೆ. ಗಬ್ಬೂರಿನ ವೀರಗಲ್ಲಿನಲ್ಲಿ ವೀರನು ಬಿಲ್ಲನ್ನಿಡಿದು ಹೊಡೆಯುತ್ತಿರುವ ಶಿಲ್ಪವಿದೆ. ಒಟ್ಟು ಮೂರು ವೀರ ಶಿಲ್ಪಗಳಿದ್ದು, ಅವುಗಳಲ್ಲಿ ಒಬ್ಬ ವೀರನು ಕೆಳಗೆ ಬಿಲ್ಲು ಹಿಡಿದುಕೊಂಡು ಬಿದ್ದಿದ್ದಾನೆ.

ಬಾಣ ಮತ್ತು ಬತ್ತಳಿಕೆ : ಬಿಲ್ಲಿನ ಜೊತೆಗೆ ಬಾಣ ಕೂಡ ಒಂದು ಆಯುಧ. ಬಾಣವು ಸಾಮಾನ್ಯವಾಗಿ ಎರಡು ಭಾಗಗಳನ್ನು ಒಳಗೊಂಡಿರುತ್ತದೆ. ಒಂದು ಲೋಹದ ಬಾಣ ಮತ್ತು ಕಟ್ಟಿಗೆಯಿಂದ ಮಾಡಿದ ಬಾಣವನ್ನು ಕಾಣಬಹುದು. ಇವುಗಳನ್ನು ಇಡುವುದಕ್ಕಾಗಿ ಬತ್ತಳಿಕೆಗಳನ್ನು ಬಿಡಿಸಿರುತ್ತಾರೆ. ಗಬ್ಬೂರಿನ ವೀರಗಲ್ಲಿನಲ್ಲಿ ಬತ್ತಳಿಕೆಯಿಂದ ಬಾಣ ತೆಗೆಯುತ್ತಿರುವ ಒಂದು ಶಿಲ್ಪವಿದೆ. ಇನ್ನೊಂದು ಬಾಣ ಹಿಡಿದುಕೊಂಡು ಕೆಳಗೆ ಬಿದ್ದಿರುವ ಶಿಲ್ಪ ಮತ್ತು ಇನ್ನೊಂದು ಶಿಲ್ಪದಲ್ಲಿ ಬತ್ತಳಿಕೆಯಿಂದ ಬಾಣ ತೆಗೆಯುತ್ತಿರುವುದನ್ನು ಬಿಡಿಸಲಾಗಿದೆ.

ಖಡ್ಗ : ಅರಕೇರಿ ಗಬ್ಬೂರಿನಲ್ಲಿರುವ ವೀರಗಲ್ಲುಗಳಲ್ಲಿ ಈ ಖಡ್ಗಗಳು ದಪ್ಪವಾಗಿದ್ದು, ಉದ್ದ ಕಡಿಮೆ ಇವೆ. ಕ್ಯಾದ್ಗಿಗೇರಿಯ ವೀರಗಲ್ಲುಗಳಲ್ಲಿ ತುಂಬಾ ಉದ್ದವಾಗಿ ಬಿಡಿಸಲಾಗಿದೆ. ಇವುಗಳನ್ನು ಮುಂದೆ ತುದಿಯಲ್ಲಿ ಸ್ವಲ್ಪ ತೆಳುವಾಗಿ ಬಿಡಿಸಲಾಗಿದೆ. ದೇವದುರ್ಗ ರಾಮದುರ್ಗ ವೀರಗಲ್ಲಿನಲ್ಲಿ ಖಡ್ಗಗಳು ಅಷ್ಟೇನೂ ಉದ್ದವಿಲ್ಲ ಹಾಗೂ ದಪ್ಪವಿಲ್ಲ. ಆದರೆ ಇಲ್ಲಿ ಸ್ವಲ್ಪ ವ್ಯತ್ಯಾಸವೆಂದರೆ ತುದಿಯಲ್ಲಿ ಬಾಗಿದ ಆಕಾರದಲ್ಲಿರುವುದನ್ನು ಕಾಣಬಹುದು. ಚಂದನಕೇರಿ ಹಾಗೂ ಆಲ್‌ಕೋಡನ ಭದ್ರಕಾಳಿಯ ಶಿಲ್ಪದಲ್ಲಿ ನೇರವಾದ ಖಡ್ಗಗಳನ್ನು ಬಿಡಿಸಲಾಗಿದೆ. ಗಬ್ಬೂರು ಮತ್ತು ಚಂದನಕೇರಿಯ ವೀರಭದ್ರ ಶಿಲ್ಪ, ಭೈರವಿ ಶಿಲ್ಪದಲ್ಲಿ ಸಹ ಖಡ್ಗಗಳನ್ನು ಬಿಡಿಸಲಾಗಿದೆ.

ಮಚ್ಚು : ಇದರ ಬುಡ ದಪ್ಪವಾಗಿದ್ದು ಮೇಲಕ್ಕೆ ಹೋದಂತೆ ಚೂಪಾಗಿ, ಅಗಲವಾಗಿರುತ್ತದೆ ಹಾಗೂ ಮೇಲ್ಭಾಗ ಬಾಗಿರುತ್ತದೆ. ಮುಂದೆ ಅಗಲವಾಗಿದ್ದು, ಹಿಂದೆ ವ್ಯತ್ಯಾಸವಾಗುವುದನ್ನು ಗಮನಿಸಬಹುದು. ರಾಮದುರ್ಗದ ವೀರಗಲ್ಲಿನಲ್ಲಿ ಈ ಮಚ್ಚನ್ನು ಮೇಲಿನ ಭಾಗದಲ್ಲಿ ಬಿಡಿಸಲಾಗಿದೆ. ಮಸರಕಲ್ಲು, ಕ್ಯಾದಿಗೇರಿಯ ಕೆಲವು ವೀರಗಲ್ಲಿನಲ್ಲಿ ಈ ಮಚ್ಚನ್ನು ಬಿಡಿಸಲಾಗಿದೆ.

ಚೂರಿ : ವೀರರ ಸೊಂಟದಲ್ಲಿ ಸಣ್ಣ ಗಾತ್ರದಲ್ಲಿ ಈ ಚಾಕು(ತಾತ್ಕಾಲಿಕ ರಕ್ಷಣಾತ್ಮಕ ಆಯುಧ) ಅಥವಾ ಚೂರಿಗಳನ್ನು ಕಾಣುತ್ತೇವೆ. ಇದನ್ನು ಎಸೆದು ದೂರದಲ್ಲಿರುವ ವ್ಯಕ್ತಿ ಅಥವಾ ಪ್ರಾಣಿಗಳನ್ನು ಕೊಲ್ಲುವುದಕ್ಕೆ ಬಳಸಲಾಗುತ್ತಿತ್ತು. ಮೊಸರಕಲ್ಲಿನ ವೀರಗಲ್ಲಿನಲ್ಲಿ ಚೂರಿಗಳನ್ನು ಬಿಡಿಸಿದ್ದು, ಇವು ತೆಳುವಾದ ಹಾಗೂ ಸಣ್ಣದಾದ ರೀತಿಯಲ್ಲಿವೆ. ರಾಮದುರ್ಗದ ವೀರಗಲ್ಲಿನಲ್ಲಿ ಕ್ಯಾದಿಗ್ಗೇರಿ ಹಾಗೂ

ಚಂದನಕೇರಿಯ ವೀರಗಲ್ಲುಗಳಲ್ಲಿ ಇವನ್ನು ವಿಶೇಷವಾಗಿ ಬಿಡಿಸಲಾಗಿದೆ. ಇವು ಬಾಗಿದ ರೀತಿಯಲ್ಲಿ ಅಥವಾ ಅಂಕು ಡೊಂಕಾಗಿದ್ದು, ಕೈಯಡಿಯಲ್ಲಿ ಗುಂಡಾಗಿ ಬಿಡಿಸಿದ್ದಾರೆ. ಈ ತರಹದ ಚೂರಿಗಳನ್ನು ದೇವದುರ್ಗದ ವೀರಗಲ್ಲುಗಳಲ್ಲಿ ಕಾಣಬಹುದಾಗಿದೆ. ಗಬ್ಬೂರಿನ ವೀರಗಲ್ಲುಗಳಲ್ಲಿ ನೇರವಾಗಿರುವಂತೆ ಬಿಡಿಸಲಾಗಿದೆ.

ಭಲ್ಲೆ : ಅನೇಕ ವೀರಗಲ್ಲುಗಳಲ್ಲಿ ಈ ಭಲ್ಲೆ ಅಥವಾ ಭರ್ಚಿಗಳನ್ನು ಕಾಣುತ್ತೇವೆ. ಇವು ಶತ್ರುವಿನ ಮೇಲೆ ದೂರದಿಂದ ಒಗೆದು ಕೊಲ್ಲುವುದಕ್ಕೆ ಸಾಧ್ಯವಾಗುವಂತೆ ಸಿದ್ಧಪಡಿಸುತ್ತಿದ್ದರು. ಇವುಗಳನ್ನು ಲೋಹ ಅಥವಾ ಕಟ್ಟಿಗೆಯಿಂದ ತಯಾರಿಸುತ್ತಿದ್ದರು. ದೇವದುರ್ಗದ ವೀರಗಲ್ಲಿನಲ್ಲಿ ಭಲ್ಲೆಯನ್ನು ಮಧ್ಯದಲ್ಲಿ ಬಿಡಿಸಲಾಗಿದೆ. ಕ್ಯಾದ್ಗಿಗೇರಿಯ ಮಹಾಸತಿ ಹಾಗೂ ವೀರಗಲ್ಲಿನಲ್ಲಿ ಈ ಭಲ್ಲೆಯನ್ನು ಬಿಡಿಸಲಾಗಿದೆ. ಇದೇ ಸ್ಥಳದ ಒಂದು ವೀರಗಲ್ಲಿನಲ್ಲಿ ಈ ಭಲ್ಲೆಯನ್ನು ಉದ್ದವಾಗಿ ಬಿಡಿಸಿದ್ದು, ಅದು ತುದಿಯಲ್ಲಿ ಚೂಪಾಗಿದ್ದು, ಹಿಡಿಯಲ್ಲಿ ಗುಂಡಾಗಿ ಬಿಡಿಸಲಾಗಿದೆ. ಇನ್ನೊಂದು ಶಿಲ್ಪದಲ್ಲಿ ಇದನ್ನು ಹಿಂದೆ ಮುಂದೆ ಚೂಪಾಗಿ ಬಿಡಿಸಲಾಗಿದೆ.

ಬಂದೂಕು : ವಿಜಯನಗರೋತ್ತರ ಹಾಗೂ ನಾಯಕರ ಕಾಲದ ವೀರಗಲ್ಲುಗಳಲ್ಲಿ ಬಂದೂಕುಗಳನ್ನು ಕಾಣುತ್ತೇವೆ. ದೇವದುರ್ಗ, ರಾಮದುರ್ಗ, ವೀರಗಲ್ಲುಗಳಲ್ಲಿ ಈ ಬಂದೂಕು ಶಿಲ್ಪವಿದೆ. ಗಬ್ಬೂರಿನ ಅನೇಕ ವೀರಗಲ್ಲುಗಳಲ್ಲಿ ಬಂದೂಕುಗಳನ್ನು ಬಿಡಿಸಿದ್ದು, ಅದರಲ್ಲಿ ಒಂದು ಶಿಲ್ಪದಲ್ಲಿ ಬಂದೂಕಿನ ಹಿಂದಿನ ಭಾಗದಲ್ಲಿ ಗೆರೆ ಹಾಗೂ ಗುಂಡುಗಳ ಆಕಾರದಲ್ಲಿ ಚಿತ್ರಿಸಲಾಗಿದೆ. ಅರಕೇರಿಯ ವೀರನ ಕೈಯಲ್ಲಿ ಬಂದೂಕು ಬಿಡಿಸಲಾಗಿದೆ. ಈ ಬಂದೂಕುಗಳಲ್ಲಿ ಸ್ವಲ್ಪ ಮಟ್ಟಿಗೆ ಕಾಲದಿಂದ ಕಾಲಕ್ಕೆ ಭಿನ್ನವಾಗಿರುವುದನ್ನು ಕಾಣಬಹುದು.

ಗುರಾಣಿ : ಗುರಾಣಿಗಳನ್ನು ಅನೇಕ ವೀರಗಲ್ಲುಗಳಲ್ಲಿ ಕಾಣಬಹುದು. ವೀರರ ಅನೇಕ ಆಯುಧಗಳಲ್ಲಿ ಈ ಗುರಾಣಿಯು ಒಂದು. ಈ ಗುರಾಣಿಯನ್ನು ಅಡ್ಡಣ, ಹಲಗೆ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಗಬ್ಬೂರಿನ ಅನೇಕ ವೀರಗಲ್ಲುಗಳಲ್ಲಿ ಈ ಗುರಾಣಿಯನ್ನೂ ಬಿಡಿಸಲಾಗಿದೆ. ಈ ಗುರಾಣಿಯು ಗೋಲಾಕಾರದಲ್ಲಿದ್ದು, ಅವುಗಳ ಹಿಂದಿನ ಭಾಗದಲ್ಲಿ ಹಿಡಿಯುವುದಕ್ಕೆ ಹಿಡಿಕೆಯನ್ನು ಮಾಡಲಾಗಿರುತ್ತದೆ. ಗಬ್ಬೂರಿನ ವೀರಗಲ್ಲುಗಳಲ್ಲಿ ಇದನ್ನು ವೀರರು ಎಡಗೈಯಲ್ಲಿ ಹಿಡಿದುಕೊಂಡಿರುವುದನ್ನು ಕಾಣಬಹುದು. ಹುನುಗುಂದಾಬಾಡಾದ ಮಹಾಸತಿಕಲ್ಲಿನಲ್ಲಿ ಗೋಲಾಕಾರದ ಹಲಗೆಯ ತರಹ ಬಿಡಿಸಲಾಗಿದೆ.

ಪಲ್ಲಕ್ಕಿ/ಮೇನೆ : ಪ್ರಮುಖ ವ್ಯಕ್ತಿ ಪ್ರಯಾಣಿಸುವಾಗ ಅನೇಕ ಸಾರಿ ಪಲ್ಲಕ್ಕಿಗಳಲ್ಲಿ ಕುಳಿತುಕೊಂಡು ಹೋಗುವ ಶಿಲ್ಪಗಳು ಒಂದೆರಡು ಕಡೆ ದೊರೆತಿವೆ.

ಅರಕೇರಿಯ ಈರಣ ಸಾಹುಕಾರನ ಹೊಲದಲ್ಲಿ ದೊರೆತ ಒಂದು ಪಲ್ಲಕ್ಕಿ ಶಿಲ್ಪದಲ್ಲಿ ರಾಜನು ಪಲ್ಲಕ್ಕಿಯಲ್ಲಿ ಕುಳಿತಿರುವನು. ಇಬ್ಬರು ಸೇವಕರು ಅದನ್ನು ಹೊತ್ತುಕೊಂಡು ಹೋಗುತ್ತಿರುವಂತೆ

ಬಿಡಿಸಲಾಗಿದೆ. ದೇವದುರ್ಗದ ಗೋಪಾಲಸ್ವಾಮಿ ದೇವಾಲಯದ ಬಂಡೆಯಲ್ಲಿ ಉದ್ದವಾದ ಪಲ್ಲಕ್ಕಿಯನ್ನು ಅನೇಕ ಸೇವಕಿಯರು ಹೊತ್ತುಕೊಂಡು ಹೋಗುತ್ತಿದ್ದಾರೆ. ಮಸರಕಲ್ಲು ಬೆಟ್ಟದಲ್ಲಿ ಪಲ್ಲಕ್ಕಿಯ ಶಿಲ್ಪವಿದೆ. ಅದರಲ್ಲಿ ರಾಜ ರಾಣಿಯರಿಬ್ಬರು ಕುಳಿತ್ತಿದ್ದಾರೆ. ಹಿಂದುಗಡೆ ಅನೇಕ ಸೇವಕರ ಶಿಲ್ಪಗಳನ್ನು ಬಿಡಿಸಲಾಗಿದೆ.

ಧ್ವಜ, ಛತ್ರಿ ಮತ್ತು ಚಾಮರ : ರಾಜರು ಹೋರಾಡುವ ಸಂದರ್ಭಗಳಲ್ಲಿ ಅವರ ಘನತೆಯ ಸಂಕೇತವಾಗಿ ಧ್ವಜ, ಛತ್ರಿ ಹಾಗೂ ಚಾಮರಗಳನ್ನು ಹಿಡಿಯುತ್ತಿದ್ದರು. ಅರಕೇರಿಯ ಒಂದು ಸ್ಮಾರಕದಲ್ಲಿ ಪಲ್ಲಕ್ಕಿಯಲ್ಲಿ ಅರಸ ಕುಳಿತಿದ್ದಾನೆ. ಹಿಂದೆ ಒಂದು ಸರಳವಾದ ರಾಜಛತ್ರಿ ಇದೆ. ಮುಂದೆ ಒಂದು ಧ್ವಜವನ್ನು ಬಿಡಿಸಿದ್ದಾರೆ. ಅದೇ ರೀತಿಯ ರಾಜಛತ್ರಿ ಹಾಗೂ ಸೇವಕನಲ್ಲಿ ಧ್ವಜವನ್ನು ಮಸರಕಲ್ಲಿನ ವೀರಗಲ್ಲಿನಲ್ಲಿ ಬಿಡಿಸಲಾಗಿದೆ. ಕ್ಯಾದ್ಗಿಗೇರಿಯ ಅನೇಕ ವೀರಗಲ್ಲು ಹಾಗೂ ಮಹಾಸತಿಯ ಕಲ್ಲುಗಳಲ್ಲಿ ಛತ್ರ, ಚಾಮರ, ಧ್ವಜವನ್ನು ಬಿಡಿಸಲಾಗಿದೆ. ಇವುಗಳಲ್ಲಿ ಒಂದಕ್ಕಿಂತ ಒಂದು ವಿಭಿನ್ನವಾಗಿವೆ. ಒಂದು ವೀರಶಿಲ್ಪದಲ್ಲಿ ಸೇವಕನ ಕೈಯಲ್ಲಿ ರಾಜಛತ್ರಿ ಇದ್ದು, ಇದು ಮೇಲಿನ ಭಾಗದಲ್ಲಿ ಕಲಶವನ್ನು ಬಿಡಿಸಲಾಗಿದೆ. ಕುದುರೆಯ ಮುಂದೆ ಸೇವಕನು ಧ್ವಜವನ್ನು ಹಿಡಿದ್ದಾನೆ. ಇನ್ನೊಂದು ಸತಿಶಿಲ್ಪದಲ್ಲಿ ಚಕ್ರ ಆಕಾರದ ಚಾಮರವಿದೆ. ಧ್ವಜ ಮತ್ತು ದೊಡ್ಡದಾದ ರಾಜ ಛತ್ರಿ ಇದ್ದು, ಕೆಳಗೆ ಪುಷ್ಪಗಳ ಆಕಾರದಲ್ಲಿ ಮತ್ತು ಮಧ್ಯದಲ್ಲಿ ಬಟ್ಟೆಯನ್ನು ಅಲಂಕೃತವಾಗಿ ಬಿಡಿಸಿದ್ದಾರೆ. ಅದೇ ಗ್ರಾಮದ ಇನ್ನೊಂದು ವೀರಮಹಾಸತಿಯ ಶಿಲ್ಪದಲ್ಲಿ ಗೋಲಾಕಾರದ ಚಾಮರ, ಛತ್ರಿ, ಧ್ವಜವಿದೆ. ಒಂದು ವೀರಗಲ್ಲಿನಲ್ಲಿ ತುಂಬಾ ಸರಳವಾದ ಛತ್ರಿಯನ್ನು ಬಿಡಿಸಿದ್ದಾರೆ. ಈ ರೀತಿಯ ಛತ್ರ, ಚಾಮರ, ಧ್ವಜಗಳು ಇರುವ ಶಿಲ್ಪಗಳು ಅರಸರ ಮತ್ತು ಅವರ ಕುಟುಂಬದವರಿಗೆ ಸಂಬಂಧಿಸಿದ್ದವೆಂದು ಸ್ಪಷ್ಟವಾಗುತ್ತದೆ.


ಕುದುರೆ ಅಲಂಕಾರ : ಅನೇಕ ಅರಸರು ಮತ್ತು ರಾಣಿಯರು ಹೋರಾಡುವ ಸಂದರ್ಭದಲ್ಲಿ ರಥಗಳು ಅಥವಾ ಕುದುರೆಗಳಲ್ಲಿ ಕುಳಿತು ಹೋರಾಡುವುದನ್ನು ನಾವು ಅನೇಕ ವೀರಶಿಲ್ಪಗಳಲ್ಲಿ ಕಾಣಬಹುದು. ಮಸರಕಲ್ಲಿನ ವೀರಶಿಲ್ಪದಲ್ಲಿ ರಾಜ ಮತ್ತು ರಾಣಿಯು ಕುದುರೆಯ ಮೇಲೆ ಕುಳಿತುಕೊಂಡು ಹೋರಾಡುವ ದೃಶ್ಯವನ್ನು ಬಿಡಿಸಿದ್ದಾರೆ. ಕುದುರೆಗಳ ಮೇಲೆ ರಾಜಾಸನ. ರಾಜನ ಕೈಯಲ್ಲಿ ಕುದುರೆ ಲಗಾಮು, ಕುದುರೆಯ ಕೊರಳಲ್ಲಿ ಸರವಿದೆ. ಕಾಲಲ್ಲಿ ಕಾಲ್ಗಡಗ. ಹಣೆಪಟ್ಟಿ ಮುಂತಾದವುಗಳನ್ನು ಬಿಡಿಸಿದ್ದಾರೆ. ಕಾದ್ಗಿಗೇರಿಯ ವೀರಗಲ್ಲುಗಳಲ್ಲಿ ಕುದುರೆಯ ಅಲಂಕಾರ ತುಂಬಾ ಸೊಗಸಾಗಿ ಬಿಡಿಸಲಾಗಿದೆ ಒಂದು ಕುದುರೆಯ ಜೀನು ಅಥವಾ ರಾಜಾಸನವನ್ನು ಅಲಂಕಾರಿಕವಾಗಿ ಬಿಡಿಸಲಾಗಿದೆ. ಕಾಲ್ಗಡಗ, ಕೊರಳಹಾರ, ಕುತ್ತಿಗೆಯ ಸರಪಳಿ, ಹಣೆಪಟ್ಟಿ, ಕುದುರೆಯ ಲಗಾಮು ಮುಂತಾದವುಗಳನ್ನು ಬಿಡಿಸಲಾಗಿದೆ. ಅದೇ ಗ್ರಾಮದಲ್ಲಿ ಇನ್ನೊಂದು ಕುದುರೆಯ ಮೇಲಿನ ಅಲಂಕಾರದಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು. ಕುದುರೆಗೆ ತೊಡಿಸಿರುವ ಜೀನು ರಾಜಾಸನದ ಆಕಾರದಲ್ಲಿ ಅಲಂಕಾರಗೊಂಡಿದೆ. ಇದಕ್ಕೂ ಪುಷ್ಪಬಳ್ಳಿಯ ಕೊರಳಹಾರ, ಹಣೆಪಟ್ಟಿ, ತಲೆಯ ಮೇಲೆ ತೆನೆ ಅಕಾರ, ಕುತ್ತಿಗೆಯಲ್ಲಿ ಸರಪಳಿ ಮುಂತಾದವುಗಳನ್ನು

ಬಿಡಿಸಲಾಗಿದೆ. ಇದೇ ರೀತಿಯಲ್ಲಿ ಇನ್ನೊಂದು ವೀರಗಲ್ಲಿನಲ್ಲಿ ಅಲಂಕಾರ ಮಾಡಲಾಗಿದೆ. ಗಬ್ಬೂರಿನ ವೀರಗಲ್ಲಿನಲ್ಲಿ ಕುದುರೆಯ ಮೇಲೆ ರಾಜಾಸನ ಕೊರಳಲ್ಲಿ ಗಂಟೆಗಳ ಸರ, ಹಣೆಪಟ್ಟಿಯನ್ನು ಬಿಡಿಸಲಾಗಿದೆ.


ಇತರೆ ಲಕ್ಷಣಗಳು

ಅನೇಕ ವೀರಗಲ್ಲುಗಳಲ್ಲಿ ಚಂದ್ರ, ಸೂರ್ಯ, ಈಶ್ವರ ಹಾಗೂ ಅನೇಕ ಪ್ರಾಣಿಗಳ ಶಿಲ್ಪಗಳನ್ನು ಕಾಣಬಹುದು. ಗಬ್ಬೂರಿನ ವೀರಗಲ್ಲುಗಳಲ್ಲಿ ನಾಯಿ, ಹಂದಿಯ ಬೇಟೆಯನ್ನು ಆಡುವ ಅಲಂಕಾರವನ್ನು ಬಿಡಿಸಿದೆ. ರಾಮದುರ್ಗದ ವೀರಗಲ್ಲು ಕುರಿ, ನಾಯಿಗಳನ್ನು ಬಿಡಿಸಲಾಗಿದೆ. ಕ್ಯಾದ್ಗೇರಿಯ ವೀರಸ್ಮಾರಕಗಳಲ್ಲಿ ಎತ್ತುಗಳು, ಗಿಳಿ, ಪಾರಿವಾಳ, ಆಕಳು, ಕರುಗಳನ್ನು ಬಿಡಿಸಲಾಗಿದೆ. ಚಕ್ರ, ಶಂಖ, ನಂದಿ, ಈಶ್ವರ ಶಿಲ್ಪಗಳನ್ನು ಬಿಡಿಸಲಾಗಿದೆ. ಅರಕೇರಿಯ ವೀರಗಲ್ಲುಗಳಲ್ಲಿ ಆಕಳು, ನಾಯಿ ಮುಂತಾದ ಪ್ರಾಣಿಗಳ ಶಿಲ್ಪವನ್ನು ಕಾಣಬಹುದು.

ವೀರಗಲ್ಲಿನಲ್ಲಿರುವ ಆಯುಧಗಳು



ವೀರಗಲ್ಲಿನಲ್ಲಿರುವ ಆಯುಧಗಳು



ವೀರಸ್ಮಾರಕಗಳು (೧೩-೧೪ನೇ ಶತಮಾನ)

ಗಬ್ಬೂರಿನ ವೀರಗಲ್ಲಿನಲ್ಲಿ ವೀರನು ಬಿಲ್ಲನ್ನು ಹಿಡಿದು ಹೊಡೆಯುತ್ತಿರುವನು. ಈತನು ಕಿವಿಯೋಲೆ ಧರಿಸಿದ್ದಾನೆ. ಮುಂದೆ ಒಬ್ಬ ವೀರನ ಬಲಗೈಯಲ್ಲಿ ಬಾಣವಿದೆ ಎಡಗೈಯಲ್ಲಿ ಬಿಲ್ಲು ಇದೆ. ಕೆಳಗೆ ಒಬ್ಬ ವೀರನು ಬಿಲ್ಲನ್ನು ಹಿಡಿದಿಕೊಂಡು ಕೆಳಗೆ ಬಿದ್ದಿದ್ದಾನೆ.

ಇದೇ ಗ್ರಾಮದ ಇನ್ನೊಂದು ವೀರಗಲ್ಲಿನಲ್ಲಿ ಒಬ್ಬ ವೀರನಿದ್ದಾನೆ. ಎಡಗೈಯಲ್ಲಿ ಸಣ್ಣ ಚೂರಿ ಇದೆ. ಬಲಗೈಯಲ್ಲಿ ಖಡ್ಗವಿದೆ. ಕೊರಳಹಾರ, ಕಿವಿಯೋಲೆ ಧರಿಸಿದ್ದಾನೆ. ಹಾಗೂ ತೋಳುಬಂದಿ, ಸೊಂಟಪಟ್ಟಿ ಮತ್ತು ಕೂದಲುಗಳನ್ನು ಬಲಭಾಗದಲ್ಲಿ ಗಂಟು ಹಾಕಿದ್ದಾನೆ. ಕಾಲ ಮುಂಬದಿಯಲ್ಲಿ ಶತ್ರು ಸೈನಿಕನೊಬ್ಬ ಬಿದ್ದಿದ್ದು, ಇನ್ನೊಬ್ಬ ಯೋಧನ ತಲೆಯನ್ನು ಕತ್ತರಿಸುವಂತೆ ಬಿಡಿಸಿದೆ. ಮೇಲಿನ ಭಾಗದಲ್ಲಿ ಮೂವರು ಅಪ್ಸರೆಯರನ್ನು ಬಿಡಿಸಲಾಗಿದೆ.

ಇನ್ನೊಂದು ವೀರಗಲ್ಲಿನಲ್ಲಿ ವೀರನನ್ನು ನಿಂತಿರುವಂತೆ ಬಿಡಿಸಿದೆ. ಈತನ ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಗುರಾಣಿಯಿದೆ. ಸೊಂಟದಲ್ಲಿ ಸೊಂಟಪಟ್ಟಿ ಒಂದು ಚೂರಿ ಇದೆ. ಕಿವಿಯೋಲೆ, ಕೊರಳ ಹಾರ, ಕಾಲ್ಗಡಗ ಕೈಗಡಗ, ತೋಳುಬಂದಿ ಧರಿಸಿದ್ದಾನೆ. ಕೂದಲುಗಳನ್ನು ಗಂಟು ಹಾಕಿದ್ದಾನೆ. ನಾಯಿ, ಭಲ್ಲೆ ಮುಂತಾದವುಗಳನ್ನು ಬಿಡಿಸಲಾಗಿದೆ. ಇದೇ ತರಹ ಇನ್ನೊಂದು ವೀರಗಲ್ಲನ್ನು ಗಬ್ಬೂರಿನಲ್ಲಿ ಕಾಣಬಹುದು.

"ರಾಯಚೂರಿನ ಮ್ಯೂಸಿಯಂನಲ್ಲಿ ಗಬ್ಬೂರಿನ ಒಂದು ವೀರಗಲ್ಲಿದೆ. ಇದು ಕ್ರಿ.ಶ.೧೪ನೆಯ ಶತಮಾನದ್ದಾಗಿದೆ. ಈ ವೀರಗಲ್ಲಿನಲ್ಲಿ ವೀರರನ್ನು ನಿಂತಂತೆ ಕೆತ್ತಲಾಗಿದೆ. ಬಲಗೈಯಲ್ಲಿ ಬಿಲ್ಲು, ಎಡಗೈಯಲ್ಲಿ ಬಾಣವಿದೆ. ಅವನು ಕಿರೀಟ, ಓಲೆ, ಕಂಠಹಾರ, ಬಳೆಗಳನ್ನು, ಕಾಲ್ಗಡಗಳನ್ನು ಧರಿಸಿರುವನು"(S.R.M., K.G.Bhatsoori).

೧೫-೧೬ನೆಯ ಶತಮಾನದ ವೀರಗಲ್ಲುಗಳು

ಅರಕೇರಿಯ ಹೆಚ್ಚಿನ ವೀರಗಲ್ಲುಗಳನ್ನು ಗಮನಿಸಿದಾಗ ಅವು ವಿಜಯನಗರ ಕಾಲದವುಗಳೆಂದು ತಿಳಿದುಬರುತ್ತದೆ. ಈ ವೀರಗಲ್ಲುಗಳನ್ನು ಕೆತ್ತಲು ಶಿಲ್ಪಿಯು ಸ್ಥಳೀಯವಾಗಿ ದೊರೆಯುವ ಕಂದು ಕೆಂಪು ಬಣ್ಣದ ಕಲ್ಲುಗಳನ್ನು ಬಳಸಿದ್ದಾನೆ. ಇವು ಅಳತೆಯ ದೃಷ್ಟಿಯಿಂದ ಈ ವೀರಗಲ್ಲುಗಳಲ್ಲಿ ತುಂಬಾ ವೈವಿಧ್ಯತೆ ಇದೆ. "ಈ ವೀರಗಲ್ಲುಗಳ ಉದ್ದಳತೆ ಸುಮಾರು ಇದ್ದರೆ ಎತ್ತರವು ೫೬ ಸೆಂ.ಮೀ.ನಿಂದ ೧೨೦ ಸೆಂ.ಮೀ ವರೆಗೆ ಇದೆ. ಯಾವ ವೀರಗಲ್ಲುಗಳೂ ಹೊಳಪನ್ನು ಹೊಂದಿಲ್ಲ. ನೈಸರ್ಗಿಕವಾಗಿ ಸಿಗುವ ಕಣಶಿಲೆಯ ಚಪ್ಪಡಿ ಕಲ್ಲುಗಳ ಮೇಲೆ ಶಿಲ್ಪಗಳ ತುಂಬಾ ಕಲಾತ್ಮಕವಾಗಿ ನೈಜವಾಗಿ ಚಿತ್ರಣವನ್ನು ನೀಡುವಂತೆ ಕೆತ್ತಿದ್ದಾರೆ(ಅ.ವಿ.ಡಾ.ಚಂದ್ರಶೇಖರ್, ರಾಯಚೂರುವಾಣಿ ದಿನಪತ್ರಿಕೆ).

ಈ ವಿಜಯನಗರ ಶೈಲಿಯ ವೀರಗಲ್ಲುಗಳನ್ನು ಗಮನಿಸಿದಾಗ ಈ ವೀರರು ಯುದ್ಧದಲ್ಲಿ ಮಡಿದ ಸ್ಮರಣಾರ್ಥವಾಗಿ ನಿಲ್ಲಿಸಲಾಗಿದೆ. "ಕೃಷ್ಣದೇವರಾಯನು ರಾಯಚೂರು ಕೋಟೆಯನ್ನು ಗೆಲ್ಲುವ ಪೂರ್ವದಲ್ಲಿ, ಗಬ್ಬೂರಿನಲ್ಲಿ ಇಸ್ಮಾಯಿಲ್ ಆದಿಲ್‌ಶಾಹನ ಸೈನಿಕರಿಗೂ ವಿಜಯನಗರ ಸೈನಿಕರಿಗೂ ಒಂದು ಯುದ್ಧ ನಡೆಯಿತು. ಶತ್ರುವಿಗೆ ಫಿರಂಗಿಗಳ ನೆರವು ಮತ್ತು ಗಬ್ಬೂರು ಕೋಟೆಯ ಸಂರಕ್ಷಣೆಯಿದ್ದುದ್ದರಿಂದ ಮೊದಲಿಗೆ ಸುಲ್ತಾನನ ಸೈನಿಕರಿಗೆ ಜಯವಾಗಿ ವಿಜಯನಗರದ ಸೈನಿಕರು ಹಿಮ್ಮೆಟ್ಟಿದರು. ಇದನ್ನು ಕಂಡ ಕೃಷ್ಣದೇವರಾಯನು ತಾನೇ ಯುದ್ಧದ ಮುಂದಾಳತ್ವವನ್ನು ವಹಿಸಿಕೊಂಡು ರಣರಂಗ ಪ್ರವೇಶಿಸಿದ. ಸೈನಿಕರನ್ನು ಹುರಿದುಂಬಿಸಿ ತನ್ನ ಜೀವದ ಹಂಗು ತೊರೆದು ಹೋರಾಡಿದನು. ಇದರ ಫಲವಾಗಿ ಕ್ರಿ.ಶ.೧೫೨೦ರ ಮೇ ತಿಂಗಳ ೧೯ರಂದು ಈ ಚಾರಿತ್ರಿಕ ಮಹಾಯುದ್ಧದಲ್ಲಿ ವಿಜಯನಗರದ ಪಡೆ ವಿಜಯಶಾಲಿಯಾಯಿತು. ಈ ಯುದ್ಧದಲ್ಲಿ ಅನೇಕರು ಕೃಷ್ಣದೇವರಾಯನ ಪರವಾಗಿ ಹೋರಾಡಿ ಮಡಿದವರ ಸ್ಮಾರಕವಾಗಿ ಈ ವೀರಗಲ್ಲುಗಳನ್ನು ನಿಲ್ಲಿಸಲಾಗಿದೆ ಇಂತಹ ಅನೇಕ ವೀರಗಲ್ಲುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಅರಕೇರಿಯ ಗ್ರಾಮದ ಒಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತು ಹೋರಾಡುತ್ತಿದ್ದಾನೆ. ಇವನ ಬಲಗೈಯಲ್ಲಿ ಖಡ್ಗವಿದೆ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮು, ಸೊಂಟದಲ್ಲಿ ಒಂದು ಚೂರಿ ಹಾಗೂ ಸೊಂಟಪಟ್ಟಿ ಇದೆ. ಉದ್ದನೆಯ ಮೀಸೆ ಬಿಡಿಸಲಾಗಿದೆ. ಕೂದಲುಗಳನ್ನು ಗಂಟು ಹಾಕಿ ಕಟ್ಟಿದ್ದಾನೆ. ಕೊರಳಹಾರ, ಕಾಲ್ಗಡಗ, ಕೈಗಡಗ ಬಿಡಿಸಲಾಗಿದೆ. ಇನ್ನೊಬ್ಬ ವೀರನ ಕೈಯಲ್ಲಿ ಬಂದೂಕಿದೆ. ಈತನು ಸಹ ಉದ್ದನೆಯ ಮೀಸೆ ಹೊಂದಿದ್ದಾನೆ. ಕೂದಲುಗಳನ್ನು ಕಟ್ಟಿದ್ದಾನೆ. ಈತನೂ ಕಾಲ್ಗಡಗ, ಕೈಗಡಗ, ಕೊರಳಹಾರ ಧರಿಸಿದ್ದಾನೆ. ಮುಂದಿನ ಭಾಗದಲ್ಲಿ ರಾಜಛತ್ರಿಯಿದೆ. ಒಬ್ಬ ಸೈನಿಕನು ಧ್ವಜವನ್ನು ಹಿಡಿದಿದ್ದಾನೆ. ಮೇಲಿನ ಭಾಗದಲ್ಲಿ ಸೂರ್ಯ, ಚಂದ್ರರ ಶಿಲ್ಪಗಳನ್ನು ಬಿಡಿಸಲಾಗಿದೆ. ಅರಕೇರಿಯ ಬೆಟ್ಟದಲ್ಲಿರುವ ವೀರಗಲ್ಲಿನಲ್ಲಿ, ವೀರನು ಕುದುರೆ ಮೇಲೆ ಕುಳಿತಿದ್ದಾನೆ. ಬಲಗೈಯ್ನಲಿ ಖಡ್ಗವಿದೆ. ಎಡಗೈಯಲ್ಲಿ ಕುದುರೆಯ ಲಗಾಮು, ಸೊಂಟಪಟ್ಟಿ, ತಲೆಯಲ್ಲಿ ಟೋಪಿಯಂತೆ ಇರುವ ಕವಚವಿದೆ. ಉದ್ದವಾದ ಮೀಸೆ, ಕಿವಿಯೋಲೆ, ಕಾಲ್ಗಡಗ, ಕೈಗಡಗ, ಕೊರಳಹಾರ ಬಿಡಿಸಲಾಗಿದೆ. ಮುಂದೆ ಸೇವಕನ ಶಿಲ್ಪವಿದ್ದು, ಆತನು ಧ್ವಜವನ್ನು ಹಿಡಿದಿದ್ದಾನೆ. ಕುದುರೆ ರಾಜಾಸನ, ಕಡಗ, ಸರ ಮುಂತಾದವನ್ನು ಹೊಂದಿದಂತೆ ಬಿಡಿಸಲಾಗಿದೆ. ಇನ್ನೊಂದು ವೀರಗಲ್ಲಿನಲ್ಲಿ ಇಬ್ಬರು ವೀರರು ಇದ್ದಾರೆ. ಒಬ್ಬ ವೀರನ ಕೈಯಲ್ಲಿ ಉದ್ದವಾದ ಭಲ್ಲೆ ಇದೆ. ಇನ್ನೊಬ್ಬ ವೀರನ ಕೈಯಲ್ಲಿ ಖಡ್ಗವಿದೆ. ಇವರು ಸಹ ರಕ್ಷಾಕವಚ, ಕಾಲ್ಗಡಗ, ಕೈಗಡಗ, ಕಿವಿಯೋಲೆ, ಕೊರಳಹಾರ ಮುಂತಾದವನ್ನು ಧರಿಸಿದ್ದಾರೆ. ಇನ್ನೊಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಇದ್ದಾನೆ. ಈತನ ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಲಗಾಮಿದೆ. ಈತನು ಕಾಲ್ಗಡ, ಕೈಗಡಗ, ಕೊರಳಹಾರ ಧರಿಸಿದ್ದಾನೆ. ಹಿಂದೆ ಒಬ್ಬ ಸೈವಕನು ರಾಜಛತ್ರಿ ಹಿಡಿದ್ದಾನೆ. ಮುಂದೆ ಒಬ್ಬ ಸೇವಕನು ಧ್ವಜವನ್ನು ಹಿಡಿದಿದ್ದಾನೆ.

ಪಾಳೆಯಗಾರರ ಕಾಲದ ಬಂದೂಕುದಾರಿ ವೀರಗಲ್ಲು ಶಿಲ್ಪಗಳು

ದೇವದುರ್ಗದ ಪೋಲಿಸ್ ಠಾಣೆಯ ಆವರಣದಲ್ಲಿ ಚಂದನಕೇರಿಯ ವೀರಗಲ್ಲುಗಳಿವೆ. ಒಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿರುವಂತೆ ಬಿಡಿಸಿದೆ. ವೀರನ ಎಡಗೈಯಲ್ಲಿ ಕುದುರೆ ಲಗಾಮು ಇದ್ದರೆ, ಬಲಗೈಯಲ್ಲಿ ಖಡ್ಗವನ್ನು ಹಿಡಿದ್ದಾನೆ. ಸೊಂಟದಲ್ಲಿ ಒಂದು ಸಣ್ಣ ಚೂರಿ ಇದೆ. ಕೂದಲುಗಳನ್ನು ಗಂಟು ಹಾಕಿ ಕಟ್ಟಿದ್ದಾನೆ. ಉದ್ದವಾದ ಮೀಸೆ, ಸೊಂಟದಲ್ಲಿ ಸೊಂಟಪಟ್ಟಿ ತೋಳು ಬಂದಿ ಕಾಲ್ಗಡಗ ಕೈಗಡಗ ಮುಂತಾದವುಗಳನ್ನು ಬಿಡಿಸಿದೆ. ಈತನ ಹಿಂದೆ ಒಬ್ಬ ಸೈನಿಕನಿದ್ದು, ಕೈಯಲ್ಲಿ ಬಂದೂಕನ್ನು ಹಿಡಿದ್ದಾನೆ. ಮುಂದೆ ಒಬ್ಬ ಸೈನಿಕನ ಕೈಯಲ್ಲಿ ಖಡ್ಗವಿದೆ. ಕುದುರೆಯನ್ನು ಅಲಂಕಾರದಿಂದ ಬಿಡಿಸಿದೆ. ಕುದುರೆ ಮೇಲೆ ರಾಜಾಸನ, ಕೊರಳಲ್ಲಿ ಚೈನು, ಕುತ್ತಿಗೆಯಲ್ಲಿ ಒಂದು ಸರಪಳಿ, ಮತ್ತು ಕಾಲುಗಳಲ್ಲಿ ಕಾಲ್ಗಡಗವನ್ನು ಬಿಡಿಸಿದೆ.

ಅದೇ ಸ್ಥಳದಲ್ಲಿ ಇನ್ನೊಂದು ವೀರಗಲ್ಲಿದ್ದು, ಇದರಲ್ಲಿ ಇಬ್ಬರು ವೀರರ ಶಿಲ್ಪವಿದೆ. ವೀರರ ಕೈಯಲ್ಲಿ ಬಂದೂಕು ಹಾಗೂ ಎಡಗೈಯಲ್ಲಿ ಖಡ್ಗ, ಸೊಂಟದಲ್ಲಿ ಸಣ್ಣ ಚೂರಿಗಳಿವೆ. ಕೂದಲುಗಳನ್ನು ಗಂಟು ಹಾಕಿ ಮೇಲಕ್ಕೆ ಕಟ್ಟಿದ್ದಾರೆ. ಕೈಗಡಗ, ಕೊರಳಹಾರ, ಸೊಂಟಪಟ್ಟಿ, ಕಿವಿಯೋಲೆ, ಉದ್ದವಾದ ಮೀಸೆಗಳನ್ನು ಕೊರೆಯಲಾಗಿದೆ. ಮೇಲಿನ ಭಾಗದಲ್ಲಿ ಒಂದು ಪಾರಿವಾಳ ಬಿಡಿಸಲಾಗಿದೆ.

ಅರಕೇರಿಯ ವೀರಗಲ್ಲಿನಲ್ಲಿ ಕುದುರೆಯ ಮೇಲೆ ಒಬ್ಬ ವೀರನಿದ್ದಾನೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಲಗಾಮು ಇದೆ. ಸೊಂಟದಲ್ಲಿ ಚೂರಿ, ಸೊಂಟಪಟ್ಟಿ, ಕೈಗಡಗ, ಕಾಲ್ಗಡಗ, ಕೊರಳಹಾರ, ಮೀಸೆ ಮತ್ತು ಕೂದಲುಗಳನ್ನು ಗಂಟು ಹಾಕಿ ಮೇಲಕ್ಕೆ ಕಟ್ಟಿದ್ದಾನೆ. ಇನ್ನೊಬ್ಬ ವೀರನ ಎಡಗೈಯಲ್ಲಿ ಬಂದೂಕು, ಬಲಗೈಯಲ್ಲಿ ಖಡ್ಗ, ಸೊಂಟದಲ್ಲಿ ಒಂದು ಚೂರಿ ಇದೆ. ಕೊರಳಹಾರ ಕೈಗಡಗ, ಕಾಲ್ಗಡಗ, ತೋಳುಬಂದಿ ಕಿವಿಯೋಲೆ ಮುಂತಾದವುಗಳನ್ನು ಬಿಡಿಸಿದೆ. ಕೂದಲುಗಳನ್ನು ಬಲಗಡೆ ಗಂಟು ಹಾಕಿ ಕಟ್ಟಿದ್ದಾನೆ. ಕುದುರೆಯು ಕಾಲ್ಗಡಗ ರಾಜಾಸನ(ಜೀನು) ಕೊರಳಹಾರ ಹಾಗೂ ಕುದುರೆಯ ಕೆಳಗೆ ಇಬ್ಬರು ಯೋಧರನ್ನು ಬಿಡಿಸಲಾಗಿದೆ. ಅಲ್ಲದೆ ರಾಜಛತ್ರ, ಧ್ವಜ, ಸೂರ್ಯ, ಚಂದ್ರ ಶಿಲ್ಪಗಳನ್ನು ಬಿಡಿಸಲಾಗಿದೆ.

ಇನ್ನೊಂದು ವೀರಗಲ್ಲು ಶಿಲ್ಪದಲ್ಲಿ ಒಬ್ಬ ವೀರನನ್ನು ಬಿಡಿಸಲಾಗಿದೆ. ಈತನ ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಬಂದೂಕು ಇದೆ. ಈತನು ಕಾಲ್ಗಡಗ, ಕೈಗಡಗ, ಕೊರಳಲ್ಲಿ ಹಾರವನ್ನು ಧರಿಸಿದ್ದಾನೆ. ಕೂದಲನ್ನು ಕಟ್ಟಿದ್ದಾನೆ. ಇನ್ನೊಂದು ವೀರಗಲ್ಲಿನಲ್ಲಿ ಇಬ್ಬರು ವೀರರು ಇದ್ದಾರೆ. ಒಬ್ಬ ವೀರನ ಕೈಯಲ್ಲಿ ಬಂದೂಕಿದೆ. ಇನ್ನೊಬ್ಬ ವೀರನ ಕೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ. ಇನ್ನೊಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಇದ್ದಾನೆ. ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಕುದುರೆಯ ಲಗಾಮಿದೆ. ಸೊಂಟದಲ್ಲಿ ಚೂರಿ ಇದೆ. ಕೊರಳ ಹಾರ,

ತೋಳುಬಂದಿ, ಕಾಲ್ಗಡಗ, ಕೈಗಡಗ, ಧರಿಸಿದ್ದಾನೆ. ಉದ್ದವಾದ ಮೀಸೆಯನ್ನು ಬಿಡಿಸಲಾಗಿದೆ. ಕೂದಲುಗಳನ್ನು ಗಂಟು ಹಾಕಿ ಕಟ್ಟಿದ್ದಾನೆ. ಕುದುರೆಯ ಹಿಂದೆ ಒಂದು ನಾಯಿಯನ್ನು(ಬೇಟೆನಾಯಿ) ಬಿಡಿಸಲಾಗಿದೆ. ಕುದುರೆಗೆ ಅಲಂಕಾರವನ್ನು ಮಾಡಲಾಗಿದೆ. ಕುದುರೆಯ ಮೇಲೆ ರಾಜಾಸನ, ಕುತ್ತಿಗೆಯಲ್ಲಿ ಸರಪಳಿ, ಕಾಲ್ಗಡಗ, ಇದರ ಮುಂದೆ ಒಬ್ಬ ಸೇವಕನನ್ನು ಬಿಡಿಸಲಾಗಿದೆ. ಮೇಲೆ ರಾಜಛತ್ರಿ ಇದೆ.

(ನಾಯಕರ ಕಾಲದ ವೀರಸ್ಮಾರಕಗಳು) ೧೭ನೆಯ ಶತಮಾನದ ನಂತರದ ವೀರಗಲ್ಲುಗಳು

ಕ್ರಿ.ಶ.೧೭೮೦-೮೪ರಲ್ಲಿ ನಡೆದ ನಾಯಕರ ಹೋರಾಟವು ಈ ಸ್ಮಾರಕಗಳನ್ನು ನಿಲ್ಲಿಸಲು ಪ್ರೇರಕವಾಗಿದೆ. ದೇವದುರ್ಗದ ರಂಗಪ್ಪನಾಯಕ ಹಾಗೂ ಸುರಪುರ ಇಮ್ಮಡಿ ವೆಂಕಟಪ್ಪನಾಯಕನ ಮಧ್ಯೆ ಹೋರಾಟ ಪ್ರಾರಂಭವಾಗುತ್ತದೆ. ಕಾರಣವೇನೆಂದರೆ ದೇವದುರ್ಗ-ಚಂದನಕೇರಿ ಪಾಳೆಯಗಳು ವಾಸ್ತವವಾಗಿ ದೇವದುರ್ಗದ ನಾಯಕರಿಗೆ ಸೇರಿದ್ದವು. ಇನ್ನೊಂದು ಕಾರಣ, ರಂಗಪ್ಪನಾಯಕನು ಇಮ್ಮಡಿ ವೆಂಕಟಪ್ಪನಾಯಕನ ಸೋದರಮಾವನಾಗಿದ್ದನು. ಈತನನ್ನು ಜವಳ ಕಾರ್ಯಕ್ಕೆ ಕರೆ ಕಳುಹಿಸಿದರೂ ಬರಲಿಲ್ಲ. ದೇವದುರ್ಗವನ್ನು ವೆಂಕಟಪ್ಪನಾಯಕನಿಗೆ ಕೊಟ್ಟಿದ್ದ ಕಾರಣ ಇವನ ವಿರುದ್ಧವಾಗಿ ರಂಗಪ್ಪನಾಯಕನು ಯುದ್ಧ ಆರಂಭಿಸಿದನು. ಕೊನೆಗೆ ಈ ಹೋರಾಟದ ಪ್ರಾರಂಭದಲ್ಲಿ ರಂಗಪ್ಪನಾಯಕನು ಜಯಗಳಿಸಿದರೂ, ಸುರಪುರದ ನಾಯಕರ ತೋಪುಗಳ ಹೊಡೆತ ಸಹಿಸಲಾಗದೆ, ರಂಗಪ್ಪನಾಯಕನು ತನ್ನ ಕೈಯಲ್ಲಿದ್ದ ಕೊಳ್ಳಿಯಿಂದ ಸಿಡಿಮದ್ದಿಗೆ ಬೆಂಕಿ ಹಚ್ಚಿದಾಗ ತಾನೂ, ತನ್ನ ಪರಿವಾರವು ಕೆಲವು ಸೈನಿಕರು ಸ್ಫೋಟಕ್ಕೊಳಗಾಗಿ ಗುರುತು ಕೂಡ ಸಿಗದೆ ಭಸ್ಮಗೊಂಡರು.

ನಂತರ ರಂಗಪ್ಪನಾಯಕನು ಕ್ರಿ.ಶ.೧೭೮೪-೮೫ರಲ್ಲಿ ದೇವದುರ್ಗದ ಕರಿಗುಡ್ಡದ ಮೇಲೆ ದಾಳಿ ಮಾಡಿದನು. ಅರಿಕೇರಿಯ ಚೊಕ್ಕಪ್ಪನ ತಲೆ ಕಡಿದು ಝುಂಡಕ್ಕೇರಿಸಿ ಅರಿಕೇರಿಯನ್ನು ವಶಪಡಿಸಿಕೊಂಡನು. ನಂತರ ಕೊದ್ದಡ್ಡಿ, ಕೇದ್ಗಿಗೇರಿಯನ್ನು ಸುಲಿದನು. ಗಲುಗಿನ ರಾಜನಿಂದ ೬ ಸಾವಿರ, ಮಾಸರಕಲ್ಲು ನಾಡಿನಿಂದ ೧೦ ಸಾವಿರ, ಜಾಲಹಳ್ಳಿ ದೊರೆಯಿಂದ ೨೦ ಸಾವಿರ, ವಸೂಲು ಮಾಡಿದನು. ಇದನ್ನು ಏಳು ಪಾಳ್ಯದ ಮೇಲೆ ಯುದ್ಧ ಎಂದು ಕರೆಯಲಾಗಿದೆ. ಈ ಒಂದು ಹೋರಾಟದಲ್ಲಿ ಮಡಿದವರ ಸ್ಮಾರಕವಾಗಿ ಕ್ಯಾದ್ಗಿಗೇರಾ, ದೇವದುರ್ಗ ಇತರ ಸ್ಥಳಗಳಲ್ಲಿ ಅನೇಕ ವೀರಗಲ್ಲುಗಳನ್ನು ಹಾಕಿಸಲಾಗಿದೆ. ಇವುಗಳಲ್ಲಿ ರಾಜಛತ್ರಿ, ಧ್ವಜವನ್ನು ಕಾಣುವುದರಿಂದ, ನಾಯಕರು ಹೋರಾಡಿದ್ದನ್ನು ಸ್ಪಷ್ಟಪಡಿಸುತ್ತವೆ (ಮರೆಯಲಾಗದ ಸುರಪುರ ರಾಜರ ಚರಿತ್ರೆ, ಬಿ.ಕೃಷ್ಣಮಾಚಾರ್ಯ, ಪು.೧೪೪-೧೪೬).

ಕ್ಯಾದ್ಗಿಗೇರಿಯ ಶಾಲೆಯ ಆವರಣದಲ್ಲಿರುವ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಎಡಗೈಯಲ್ಲಿ ಕುದುರೆಯ ಲಗಾಮಿದ್ದರೆ ಇದ್ದರೆ, ಬಲಗೈಯಲ್ಲಿ ಖಡ್ಗವಿದೆ. ಸೊಂಟದಲ್ಲಿ ಒಂದು ಚೂರಿ ಹಾಗೂ ಸೊಂಟಪಟ್ಟಿ ಧರಿಸಿದ್ದಾನೆ. ಕೊರಳಲ್ಲಿ ಹಾರ, ಕಾಲ್ಗಡಗ, ಕೈಗಡಗ, ಕಿರೀಟ,

ಕಿವಿಯೋಲೆ ಧರಿಸಿದ್ದಾನೆ. ಸುಂದರವಾದ ರಾಜಛತ್ರಿ ಹಾಗೂ ಸೇವಕನ ಕೈಯಲ್ಲಿ ಧ್ವಜವಿದೆ. ಹಿಂದೆ ಒಬ್ಬ ಸೇವಕನಿದ್ದಾನೆ. ಈತನ ಕೈಯಲ್ಲಿ ಉದ್ದವಾದ ಭಲ್ಲೆ ಇದೆ. ಮಧ್ಯದಲ್ಲಿ ಒಬ್ಬ ಸೇವಕನಿದ್ದಾನೆ. ಕುದುರೆಯ ಮೇಲೆ ರಾಜಾಸನ, ಕೊರಳಲ್ಲಿ ಲಗಾಮು, ಸರ ಮುಂತಾದವುಗಳನ್ನು ಬಿಡಿಸಲಾಗಿದೆ. ಇನ್ನೊಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಈತನ ಬಲಗೈಯಲ್ಲಿ ಉದ್ದವಾದ ಭಲ್ಲೆ ಇದೆ. ಎಡಗೈಯಲ್ಲಿ ಲಗಾಮು ಇದೆ. ಕಿವಿಯಲ್ಲಿ ಜುಮುಕಿ, ಕೊರಳಲ್ಲಿ ಸರವಿದೆ. ಸೊಂಟದಲ್ಲಿ ಒಂದು ಚೂರಿ ಇದೆ. ಕೂದಲುಗಳನ್ನು ಗಂಟುಹಾಕಿ ಬಲಭಾಗದಲ್ಲಿ ಕಟ್ಟಿದ್ದಾನೆ. ಹಾಗೂ ಕೈಯಲ್ಲಿ ತೋಳುಬಂದಿ, ಕೈಗಡಗ, ಕಾಲ್ಗಡಗ ಧರಿಸಿದ್ದಾನೆ. ಮುಂದೆ ಒಬ್ಬ ಸೇವಕನು ಕುದುರೆ ಲಗಾಮು ಹಿಡಿದ್ದಾನೆ. ಎಡಗೈಯಲ್ಲಿ ಒಂದು ಖಡ್ಗವಿದೆ. ವೀರನ ಹಿಂದೆ ಒಬ್ಬ ಸೇವಕನಿದ್ದಾನೆ. ಬಲಗೈಯಲ್ಲಿ ಒಂದು ಕೋಲಿದೆ. ಎಡಗೈಯಲ್ಲಿ ಗಿಳಿಯನ್ನು ಹಿಡಿದ್ದಾನೆ. ಕುದುರೆಯ ಮೇಲೆ ರಾಜಾಸನ, ಕೊರಳಹಾರ ಹಾಗೂ ಕುತ್ತಿಗೆಯಲ್ಲಿ ಸರ ಮುಂತಾದವುಗಳನ್ನು ಬಿಡಿಸಿದೆ. ಕುದುರೆಯ ಮೇಲೆ ಕುಳಿತ ಇನ್ನೊಂದು ವೀರಸ್ಮಾರಕವಿದೆ. ಅದರಲ್ಲಿ ವೀರನ ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಲಗಾಮಿದೆ. ಸೊಂಟದಲ್ಲಿ ಸೊಂಟಪಟ್ಟಿ ಹಾಗೂ ಚೂರಿ ಇದೆ. ಇತನು ಸಹ ಕೊರಳಹಾರ, ಕೈಗಡಗ, ಕಾಲಗಡಗ, ತೋಳುಬಂದಿ ಧರಿಸಿದ್ದಾನೆ. ಕೂದಲುಗಳನ್ನು ಬಲಕ್ಕೆ ಕಟ್ಟಿದ್ದಾನೆ. ಹಿಂದೆ ಒಬ್ಬ ಸೇವಕನು ಕೈಯಲ್ಲಿ ಉದ್ದನೆಯ ಭಲ್ಲೆ ಹಿಡಿದಿದ್ದಾನೆ. ಎಡಗೈಯಲ್ಲಿ ಒಂದು ಆಯುಧ ಇದೆ. ರಾಜಛತ್ರಿಯನ್ನು ಬಿಡಿಸಿದೆ. ಇನ್ನೊಂದು ವೀರಗಲ್ಲಿನಲ್ಲಿ ಇಬ್ಬರು ವೀರರು ಕುದುರೆಯ ಮೇಲೆ ಕುಳಿತಿದ್ದಾರೆ. ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಕುದುರೆಯ ಲಗಾಮಿದೆ. ಇವರು ಮೇಲಿನ ವೀರರಂತೆ ಕೈಗಡಗ, ಕಾಲ್ಗಡಗ, ಕೊರಳಹಾರ ಮುಂತಾದವುಗಳನ್ನು ಧರಿಸಿದ್ದಾರೆ. ಮುಂದೆ ಒಬ್ಬ ಸೇವಕ ರಾಜಛತ್ರಿ ಹಿಡಿದ್ದಾನೆ. ಮಧ್ಯದಲ್ಲಿ ಇಬ್ಬರು ಸೇವಕರು ಇದ್ದಾರೆ. ಇನ್ನೊಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಎಡಗೈಯಲ್ಲಿ ಗುರಾಣಿ ಇದೆ. ಬಲಗೈಯಲ್ಲಿ ಖಡ್ಗವಿದೆ. ಈತನು ಸಹ ಅನೇಕ ಆಭರಣಗಳನ್ನು ಧರಿಸಿರುವಂತೆ ಬಿಡಿಸಿದೆ.

ತುರುಗಳ ವೀರಸ್ಮಾರಕಗಳು

ಹಿಂದಿನ ಕಾಲದಲ್ಲಿ ತುರುಗಳು ಸಂಪತ್ತಾದ್ದರಿಂದ ಅವನ್ನು ವೈರಿಗಳಿಂದ ರಕ್ಷಿಸುವುದು ಹಾಗೂ ಸ್ತ್ರೀಯರ ಮಾನ ಕಾಪಾಡುವುದು, ಊರುಗಳನ್ನು ರಕ್ಷಿಸುವುದು ಶೌರ್ಯದ ಪ್ರತೀಕವಾಗಿತ್ತು. ಶತ್ರುಗಳು ದನಗಳನ್ನು ಅಪಹರಿಸಿದಾಗ ಆ ದನಗಳನ್ನು ರಕ್ಷಿಸುವುದು ಇವರ ಕರ್ತವ್ಯವಾಗಿತ್ತು. ಆ ಹೋರಾಟದಲ್ಲಿ ಕೆಲವರು ಗೆದ್ದು ಹಿಂತಿರುಗಿ ಬಂದರೆ ಮತ್ತೆ ಕೆಲವರು ಸಾವನ್ನಪ್ಪುತ್ತಿದ್ದರು. ಇಂತಹ ವೀರರ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲುಗಳನ್ನು ನಾವು ಸುಲಭವಾಗಿ ಗುರುತಿಸಬಹುದು. ವೀರನು ಹೋರಾಡುವ ದೃಶ್ಯ.

ಅವನ ಹಿಂಬದಿಯಲ್ಲಿ ಕೆಲವು ದನಗಳು ನಿಂತಿರುವಂತೆ ಬಿಡಿಸಿರುತ್ತಾರೆ. ಇಂತಹ ವೀರಗಲ್ಲುಗಳು ದೇವದುರ್ಗ ತಾಲ್ಲೂಕಿನಲ್ಲಿ ಅಲ್ಲಲ್ಲಿ ಕಾಣಬಹುದು.

ಅರಕೇರಿಯ ಈಶಣ್ಣನವರ ಹೊಲದಲ್ಲಿರುವ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಈತನ ಕೈಯಲ್ಲಿ ಖಡ್ಗ ಹಾಗೂ ಕುದುರೆಯ ಲಗಾಮಿದೆ. ಕೊರಳಲ್ಲಿ ಮಣಿಸರವಿದೆ. ಕೈಗಡಗ, ಕಾಲ್ಗಡಗ, ಕಿವಿಯೋಲೆ ಧರಿಸಿದ್ದಾನೆ. ಮುಂದೆ ಸೇವಕನ ಕೈಯಲ್ಲಿ ಧ್ವಜವಿದೆ. ತಾಯಿಯ ಹಿಂದಿನ ಭಾಗದಲ್ಲಿ ಒಂದು ಸಣ್ಣ ಕರು ತಾಯಿಯ ಹಾಲನ್ನು ಕುಡಿಯುವಂತೆ ಬಿಡಿಸಲಾಗಿದೆ. ಇನ್ನೊಂದು ವೀರಗಲ್ಲಿನಲ್ಲಿ ವೀರನು ಒಂದು ಕೈಯಲ್ಲಿ ಬಂದೂಕು ಹಿಡಿದಿರುವಂತೆಯೂ ಇನ್ನೊಂದು ಕೈಯಲ್ಲಿ ಖಡ್ಗವಿಡಿದಿರುವಂತೆ ಬಿಡಿಸಿದೆ. ಈತನ ಹಿಂದೆ ಆಕಳ ಕರುಗಳನ್ನು ಬಿಡಿಸಲಾಗಿದೆ. ಅದೇ ಸ್ಥಳದ ಇನ್ನೊಂದು ವೀರಗಲ್ಲಿನಲ್ಲಿ ವೀರನ ಕೈಯಲ್ಲಿ ಬಂದೂಕಿದೆ. ಆತನ ಮುಂದೆ ನಾಯಿ ಮತ್ತು ಹುಲಿಯ ಶಿಲ್ಪವನ್ನು ಬಿಡಿಸಲಾಗಿದೆ. ಗಬ್ಬೂರಿನ ಬೆಟ್ಟದಲ್ಲಿರುವ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಈತನ ಎಡಗೈಯಲ್ಲಿ ಕುದುರೆಯ ಲಗಾಮಿದೆ. ಬಲಗೈಯಲ್ಲಿ ಅಂಕುಡೊಂಕಾಗಿರುವ ರೀತಿಯಲ್ಲಿರುವ ಖಡ್ಗವಿದೆ. ಈತನು ಕೂದಲುಗಳನ್ನು ಗಂಟು ಹಾಕಿ ಕಟ್ಟಿದ್ದಾನೆ. ಕೊರಳ ಹಾರವಿದೆ. ತೋಳುಬಂದಿ, ಕೈಗಡಗ, ಕಾಲ್ಗಡಗ ಮುಂತಾದವುಗಳನ್ನು ಧರಿಸಿದ್ದಾನೆ. ಕುದುರೆಯ ಮೇಲೆ ರಾಜಾಸನ(ಜೀನು)ವಿದೆ. ಕೊರಳಲ್ಲಿ ಒಂದು ಸರವಿದೆ. ಕೆಳಗೆ ಅನೇಕ ನಾಯಿಗಳು ಹಂದಿಯನ್ನು ಸುತ್ತಿ ಬೇಟೆಯಾಡುತ್ತಿರುವಂತೆ ಶಿಲ್ಪವಿದೆ. ವೀರನು ಕೈಯಲ್ಲಿ ಉದ್ದವಾದ ಭಲ್ಲೆಯಿಂದ ಹೊಡೆಯುತ್ತಿರುವನು. ರಾಮದುರ್ಗದ ವೀರಗಲ್ಲಿನಲ್ಲಿ ವೀರನ ಎಡಗೈಯಲ್ಲಿ ಬಂದೂಕು ಬಲಗೈಯಲ್ಲಿ ಖಡ್ಗವಿದೆ. ಸೊಂಟದಲ್ಲಿ ಒಂದು ಚೂರಿಯಿದೆ. ಕೈಗಡಗ, ಕಾಲ್ಗಡಗ, ತೋಳುಬಂದಿ, ಕೊರಳಹಾರ ಧರಿಸಿದ್ದಾನೆ. ಕುರಿಗಳನ್ನು ರಕ್ಷಿಸುವ ಸಂಕೇತವಾಗಿ ಟಗರನ್ನು ತೋಳಗಳ ಶಿಲ್ಪವನ್ನು ಬಿಡಿಸಲಾಗಿದೆ. ಮಾಸರಕಲ್ಲು ಗ್ರಾಮದಲ್ಲಿ ಒಂದು ತುರುಗೋಳ ವೀರಗಲ್ಲಿದೆ. ಇದು ತುಂಬಾ ಸೊಗಸಾಗಿದೆ. ಇದರಲ್ಲಿ ವೀರನು ಬಲಗೈಯಲ್ಲಿ ಉದ್ದನೆಯ ಖಡ್ಗ ಎಡಗೈಯಲ್ಲಿ ಬಲ್ಲೆ ಹಿಡಿದಿದ್ದಾನೆ. ಸೊಂಟದಲ್ಲಿ ಒಂದು ಸಣ್ಣ ಚೂರಿ ಇದೆ ಹಾಗೂ ಸೊಂಟ ಪಟ್ಟಿಯಿದೆ. ಕೈಕಡಗ, ಕಾಲ್ಗಡಗ, ತೋಳುಬಂದಿ, ಕೊರಳಹಾರ ಮುಂತಾದವುಗಳನ್ನು ಬಿಡಿಸಲಾಗಿದೆ. ಸೊಂಟದಲ್ಲಿ ವಸ್ತ್ರದ ನಿರಿಗೆಯನ್ನು ಎಡಭಾಗದಲ್ಲಿ ಬಿಡಿಸಲಾಗಿದೆ. ಮೇಲೆ ಒಂದು ನಂದಿಯ ಶಿಲ್ಪವಿದೆ. ಕೆಳಗೆ ಅನೇಕ ಗೋವುಗಳಿವೆ. ಅದರಲ್ಲಿ ಒಂದು ಕರು ಹಾಲು ಕುಡಿಯುತ್ತಿದೆ. ಎಡಭಾಗದಲ್ಲಿ ಶಂಖ, ಚಕ್ರ, ನಾಗಶಿಲ್ಪಗಳಿವೆ. ಬಲಭಾಗದಲ್ಲಿ ಚಿಕ್ಕ ಗುಡಿಯ ಆಕಾರದಲ್ಲಿ ಈಶ್ವರನನ್ನು ಬಿಡಿಸಲಾಗಿದೆ. ಕ್ಯಾದ್ಗಿಗೇರಾ ಗ್ರಾಮದ ಶಾಲೆಯ ಆವರಣದಲ್ಲಿರುವ ವೀರಸತಿಯ ಸ್ಮಾರಕದಲ್ಲಿ ವೀರನು ಒಂದು ಕುದುರೆಯ ಮೇಲೆ ಕುಳಿತಿದ್ದಾನೆ. ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಲಗಾಮಿದೆ. ಸೊಂಟದಲ್ಲಿ ಒಂದು ಚೂರಿ ಇದೆ. ಸೊಂಟಪಟ್ಟಿ, ಕೈಗಡಗ, ಕಾಲ್ಗಡಗ, ಕೊರಳ ಸರ ಧರಿಸಿದ್ದಾನೆ.

ಕಿವಿಯೋಲೆ ಈತನ ಹಿಂದೆ ರಾಣಿಯು ಕುದುರೆಯ ಮೇಲೆ ಕುಳಿತ್ತಿದ್ದಾಳೆ. ಬಲಗೈಯಲ್ಲಿ ಸಣ್ಣ ಖಡ್ಗವಿದೆ. ಈತನ ಮೇಲೆ ನಿಂಬೆಹಣ್ಣನ್ನು ಚುಚ್ಚಿದಂತಿದೆ. ಎಡಗೈಯಲ್ಲಿ ಕನ್ನಡಿ ಇದೆ. ಇವಳ ಕುಚಗಳ ಮೇಲೆ ಸರವಿದೆ. ಬಳೆ ಕಾಲ್ಗಡಗಗಳನ್ನು ಬಿಡಿಸಲಾಗಿದೆ. ಕೂದಲನ್ನು ಬಲಭಾಗದಲ್ಲಿ ಜಡೆ ಆಕಾರದಲ್ಲಿ ಬಿಟ್ಟಿದ್ದಾಳೆ. ಕುದುರೆಗಳನ್ನು ಜೀನು, ಸರ ಮುಂತಾದವುಗಳಿಂದ ಅಲಂಕಾರಗೊಳಿಸಲಾಗಿದೆ. ಇವನು ಅರಸನೆಂಬುದನ್ನು ತಿಳಿಯಲು ಅವನ ಮುಂದೆ ಧ್ವಜವನ್ನು ಹಿಡಿದ ಸೇವಕ ಹಾಗೂ ಹಿಂದೆ ರಾಜಛತ್ರಿಯನ್ನು ಬಿಡಿಸಲಾಗಿದೆ. ಮಧ್ಯದಲ್ಲಿ ಗೋವುಗಳನ್ನು ಬಿಡಿಸಲಾಗಿದೆ. ಮೇಲಿನ ಭಾಗದಲ್ಲಿ ಒಬ್ಬ ಸೇವಕ ಪಾರಿವಾಳವನ್ನು ಹಿಡಿದಂತೆ ಬಿಡಿಸಿದೆ. ಇದೇ ತರಹದ ಇನ್ನೊಂದು ವೀರಗಲ್ಲಿದ್ದು, ಅದರಲ್ಲಿ ನಾಯಿ ತೋಳಗಳನ್ನು ಬಿಡಿಸಲಾಗಿದೆ.

೧೭ನೇ ಶತಮಾನದ ವೀರ ಮಹಾಸತಿಗಳು

ಕ್ಯಾದ್ಗಿಗೇರಾ ಗ್ರಾಮದ ಶಾಲೆ ಆವರಣದಲ್ಲಿ ಒಂದು ವೀರ ಮಹಾಸತಿಯಿದೆ. ಇದರಲ್ಲಿ ವೀರನು ಕುದುರೆ ಮೇಲೆ ಕುಳಿತುಕೊಂಡು ಎಡಗೈಯಲ್ಲಿ ಲಗಾಮು, ಬಲಗೈಯಲ್ಲಿ ಖಡ್ಗವನ್ನು ಹಿಡಿದ್ದಾನೆ. ಕಿವಿಯಲ್ಲಿ ಓಲೆ, ಕೊರಳಲ್ಲಿ ಮಣಿಸರ, ಕಂಠಿಹಾರ ಹಾಕಿಕೊಂಡಿದ್ದಾನೆ. ಕೈಯಲ್ಲಿ ತೋಳುಬಂದಿ, ಕೈಗಡಗ ಹಾಗೂ ಸೊಂಟದಲ್ಲಿ ಸೊಂಟಪಟ್ಟಿ ಮತ್ತು ಕತ್ತಿಯಿದೆ. ಕೂದಲುಗಳನ್ನು ಗಂಟು ಹಾಕಿ ಬಲಕ್ಕೆ ಕಟ್ಟಿಕೊಂಡಿದ್ದಾನೆ. ಮೀಸೆ ಉದ್ದವಾಗಿವೆ. ಈತನ ಹಿಂದೆ ಮಹಾಸತಿ ಇದ್ದು, ಈಕೆಯು ಕುದುರೆ ಲಗಾಮು ಹಿಡಿದಿದ್ದಾಳೆ. ಕಿವಿಯಲ್ಲಿ ರಿಂಗ್‌ಗಳನ್ನು, ಕೈಯಲ್ಲಿ ಕೈಗಡಗ ಹಾಗೂ ಕೈತುಂಬ ಬಳೆಗಳು, ಕಂಠಿಹಾರ, ಮುತ್ತಿನ ಸರಗಳು, ಈಕೆಯ ಕುಚಗಳು ಮತ್ತು ಸೀರೆಯನ್ನು ಸೊಗಸಾಗಿ ಕೆತ್ತಿದ್ದಾರೆ. ಸೊಂಟದಲ್ಲಿ ಸೊಂಟಪಟ್ಟಿಯಿದೆ. ಈಕೆಯ ಹಿಂದೆ ಒಬ್ಬ ಸೇವಕ ಇದ್ದಾನೆ. ಧ್ವಜ, ರಾಜಛತ್ರಿ, ಚಂದ್ರಚಾಮರ, ಸೂರ್ಯ, ಚಂದ್ರ ಶಿಲ್ಪಗಳಿವೆ. ಅದೇ ಗ್ರಾಮದ ಅದೇ ಸ್ಥಳದಲ್ಲಿ ಇನ್ನೊಂದು ವೀರ ಮಹಾಸತಿಯಿದೆ. ಇದರಲ್ಲಿ ವೀರನು ಬಲಗೈಯಲ್ಲಿ ಉದ್ದನೆಯ ಭರ್ಜಿ, ಎಡಗೈಯಲ್ಲಿ ಕುದುರೆ ಲಗಾಮು ಹಿಡಿದು ಕುಳಿತಿದ್ದಾನೆ. ಕೂದಲನ್ನು ಗಂಟುಕಟ್ಟಿ ಹಾಕಿದ್ದಾನೆ. ಕೊರಳಲ್ಲಿ ಸರಗಳು, ಕೈಯಲ್ಲಿ ಕೈಗಡಗ, ತೋಳುಬಂದಿ, ಸೊಂಟದಲ್ಲಿ ಸೊಂಟಪಟ್ಟಿ ಹಾಗೂ ಕತ್ತಿ ಇದೆ. ಈತನ ರಾಣಿಯು ಕುದುರೆ ಮೇಲೆ ಇದ್ದು, ಬಲಗೈಯಲ್ಲಿ ಚಾಕು ಅದರ ತುದಿಯಲ್ಲಿ ನಿಂಬೆ ಹಣ್ಣು ಇದೆ. ಎಡಗೈಯಲ್ಲಿ ಕನ್ನಡಿ, ಕುಚಗಳ ಮಧ್ಯ ಇರುವ ಮೂರು ಹಂತದ ಸರಗಳು, ಸೀರೆಯ ಸೆರಗೂ ಉದ್ದಕ್ಕೆ ಬಿಟ್ಟಿದ್ದಾಳೆ. ಕೂದಲುಗಳನ್ನು ಉದ್ದಕ್ಕೆ ಬಿಟ್ಟಿದ್ದಾಳೆ. ಕೈತುಂಬ ಬಳೆಗಳು, ತೋಳುಬಂದಿ, ಹಾಕಿದ್ದಾಳೆ ಮತ್ತು ಮುಂದೆ ರಾಜಛತ್ರಿ ಹಿಡಿದ ಸೇವಕ, ಕೆಳಗೆ ನಾಯಿಗಳ ಶಿಲ್ಪ ಇದೆ. ಕುದುರೆಯನ್ನು ಸೊಗಸಾಗಿ ಕೆತ್ತಿದ್ದಾರೆ.

ಅದೇ ಗ್ರಾಮದ ಅದೇ ಸ್ಥಳದಲ್ಲಿರುವ ವೀರ ಮಹಾಸತಿಯಲ್ಲಿ ಒಬ್ಬ ವೀರ ಹಾಗೂ ಇಬ್ಬರು ಸತಿಯರಿದ್ದಾರೆ. ವೀರನು ಕುದುರೆ ಮೇಲೆ ಕುಳಿತು ಖಡ್ಗ ಹಿಡಿದ್ದಾನೆ. ಉದ್ದನೆಯ ಮೀಸೆ ಬಿಟ್ಟು,

ಕೂದಲುಗಳನ್ನು ಗಂಟುಹಾಕಿದ್ದಾನೆ. ಕಿವಿಯಲ್ಲಿ ಜುಮುಕಿ, ಕೊರಳಲ್ಲಿ ಕಂಠಿಹಾರ, ಸರಗಳು, ಸೊಂಟದಲ್ಲಿ ಕತ್ತಿ ಇವೆ. ಇಬ್ಬರು ಸತಿಯರು ಕುದುರೆ ಮೇಲೆ ಇದ್ದಾರೆ. ಇವರು ಬಲಗೈಯಲ್ಲಿ ನೀರಿನ ತಂಬಿಗೆ ಎಡಗೈಯಲ್ಲಿ ಲಗಾಮು, ಕೈತುಂಬ ಬಳೆಗಳು, ಕೊರಳಲ್ಲಿ ಕಂಠಿಹಾರ, ಕುದಲ ತುರುಬು ಹಾಕಿದ್ದಾರೆ. ಕುಚಗಳ ಸೀರೆಯನ್ನು ಸೊಗಸಾಗಿ ಕೆತ್ತಿದ್ದಾರೆ. ರಾಜಛತ್ರಿ, ಚಂದ್ರಚಾಮರ, ಧ್ವಜ, ಸೂರ್ಯ ಚಂದ್ರ ಶಿಲ್ಪಗಳಿವೆ. ಮೇಲೆ ಇಬ್ಬರು ಸೇವಕರಿದ್ದಾರೆ. ಅದೇ ಸ್ಥಳದಲ್ಲಿ ವೀರ ಮಹಾಸತಿಯಲ್ಲಿ ಒಬ್ಬ ರಾಜ ಹಾಗೂ ಇಬ್ಬರು ರಾಣಿಯರು ಮತ್ತೊಬ್ಬ ಸೈನಿಕನಿದ್ದಾನೆ. ರಾಜನು ಉದ್ದನೆಯ ಮೀಸೆಯನ್ನು ಬಿಟ್ಟಿದ್ದಾನೆ. ಕೂದಲುಗಳನ್ನು ತುರುಬು ಹಾಕಿದ್ದಾನೆ. ಸೊಂಟದಲ್ಲಿ ಸೊಂಟಪಟ್ಟಿ, ಕತ್ತಿ ಇದೆ. ಕೊರಳಲ್ಲಿ ಸರ, ಕವಿಯಲ್ಲಿ ಓಲೆ, ಇನ್ನೊಬ್ಬ ವೀರನ ಕೈಯಲ್ಲಿ ಜಂಬೆ ಇದೆ. ಕೂದಲುಗಳ ತುರುಬು, ಸರಗಳು, ಸೊಂಟಪಟ್ಟಿ, ಕಿವಿ ಓಲೆ ಇವೆ. ಇಬ್ಬರು ರಾಣಿಯರು ಬಲಗೈಯಲ್ಲಿ ತಂಬಿಗೆ, ಎಡಗೈ ಮೇಲೆ ಎತ್ತಿದ್ದಾರೆ. ಸೊಂಟಪಟ್ಟಿ, ಸರಗಳು, ಕುಚಗಳು ಬಳೆಗಳು ಇದೆ. ಮೇಲೆ ದನ, ಚಾಮರ, ರಾಜಛತ್ರಿ, ಧ್ವಜ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಅದೇ ಸ್ಥಳದಲ್ಲಿ ವೀರನು ಕುದುರೆ ಮೇಲೆ ಇದ್ದಾನೆ. ಇವನ ಬಲಗೈಯಲ್ಲಿ ಖಡ್ಗವಿದೆ. ಸೊಂಟದಲ್ಲಿ ಸೊಂಟಪಟ್ಟಿ, ಕತ್ತಿ ಇದೆ. ಕೊರಳಲ್ಲಿ ಸರ, ಕಾಲ್ಗಡಗ, ಕೈಗಡಗ, ಹಾಕಿಕೊಂಡಿದ್ದಾನೆ. ಹಿಂದೆ ಸತಿಯು ಕುದುರೆ ಮೇಲೆ ಕುಳಿತಿದ್ದಾಳೆ. ಇವಳು ಸರಗಳು, ಓಲೆ, ಬಳೆಗಳು, ತೋಳುಬಂದಿ, ಸೀರೆ ಮುಂತಾದವುಗಳನ್ನು ಧರಿಸಿದ್ದಾಳೆ. ಇಬ್ಬರು ಸೇವಕರು ಇದ್ದಾರೆ. ಒಬ್ಬನ ಕೈಯಲ್ಲಿ ಖಡ್ಗ, ಕಪ್ಪ ಮತ್ತು ರಾಜ ಛತ್ರಿ, ಧ್ವಜ, ಸೂರ್ಯ, ಚಂದ್ರ ಶಿಲ್ಪಗಳಿವೆ.

ಮಹಾಸತಿ ಕಲ್ಲುಗಳು

ಹುನಗುಂದಬಾಡದಲ್ಲಿರುವ ಸತಿಕಲ್ಲು ೧೫-೧೬ನೇ ಶತಮಾನಕ್ಕೆ ಸೇರಿರುವುದು. ಇದರಲ್ಲಿ ವೀರನು ಕುದುರೆ ಮೇಲೆ ಕುಳಿತುಕೊಂಡಿದ್ದಾನೆ. ಎಡಗೈಯ್ಲಲಿ ಲಗಾಮು ಬಲಗೈಯಲ್ಲಿ ಸಣ್ಣ ಭರ್ಜಿ ಹಿಡಿದ್ದಾನೆ. ಸೊಂಟದಲ್ಲಿ ಚಾಕು, ಗುರಾಣಿ ಇವೆ. ಕೈಗಳಲ್ಲಿ ಕೈಗಡಗ, ಕೊರಳಲ್ಲಿ ಸರ, ತಲೆಯ ಮೇಲೆ ಕಿರೀಟ ಆಕಾರದಲ್ಲಿರುವ ಟೋಪಿ ಇದೆ. ಪಕ್ಕದಲ್ಲಿ ಸತಿಯು ನಿಂತಿರುವ ಶಿಲ್ಪವಿದೆ. ಈ ಸತಿಯ ಕೈಯಲ್ಲಿ ನಿಂಬೆ ಹಣ್ಣು ಇದೆ. ಈಕೆಯ ಕುಚಗಳನ್ನು ತುಂಬಾ ನಾಜೂಕಾಗಿ ಕೊರೆಯಲಾಗಿದೆ. ತೋಳಬಂದಿ, ಬಳೆಗಳನ್ನು ಸೊಗಸಾಗಿ ಕೆತ್ತಲಾಗಿದೆ.

೧೫-೧೬ನೇ ಶತಮಾನಕ್ಕೆ ಸಂಬಂಧಿಸಿದ ಅನೇಕ ಮಹಾಸತಿಗಳು ಇವೆ. ಬೆಟ್ಟದಲ್ಲಿರುವ ಮಹಾಸತಿಯು ಕಲ್ಲಿನಲ್ಲಿ ವೀರನು ಕುದುರೆ ಮೇಲೆ ಕುಳಿತು ಬಲಗೈಯಲ್ಲಿ ಖಡ್ಗ ಹಿಡಿದ್ದಾನೆ. ಎಡಗೈಯಲ್ಲಿ ಲಗಾಮು ಇದೆ. ಮೀಸೆಯನ್ನು ಉದ್ದವಾಗಿ ಕೆತ್ತಲಾಗಿದೆ. ಸೊಂಟದಲ್ಲಿ ಸೊಂಟಪಟ್ಟಿ, ಕತ್ತಿ, ಮುಂದೆ ಮಹಾಸತಿಯ ಶಿಲ್ಪವಿದೆ. ಬಲಗೈಯಲ್ಲಿ ತಂಬಿಗೆ ಹಿಡಿದಿದ್ದಾಳೆ. ಕುಚಗಳು, ವಸ್ತ್ರ, ಕಿವಿ ಓಲೆ ಮುಂತಾದವುಗಳಿವೆ. ಪರಿವಾರ ಇದ್ದಾರೆ.

ಇದೇ ಬೆಟ್ಟದಲ್ಲಿ ಒಂಟೆ ಮಹಾಸತಿ ಕಲ್ಲು ಇದೆ. ಈಕೆಯ ಕೈಯಲ್ಲಿ ಬಳೆಗಳು, ತೋಳುಬಂದಿ, ಸೊಂಟದ ಪಟ್ಟಿ, ಸೀರೆಯನ್ನು ತೊಟ್ಟಿದ್ದಾಳೆ. ನಿರಿಗೆ ಕೆಳಗೆ ಬಿಟ್ಟಿದ್ದಾಳೆ. ಕೊರಳ ಸರ ಕಿವಿ ಓಲೆ ಇವೆ.

ವೀರನು ಕುದುರೆ ಮೇಲೆ ಕುಳಿತಿದ್ದಾನೆ. ಎಡಗೈಯಲ್ಲಿ ಲಗಾಮು, ಬಲಗೈಯಲ್ಲಿ ಖಡ್ಗವಿದೆ. ಕೂದಲನ್ನು ಗಂಟುಹಾಕಿ ತುರುಬು ಕಟ್ಟಿದ್ದಾನೆ. ಕೊರಳಲ್ಲಿ ಸರ ಸೊಂಟದಲ್ಲಿ ಸೊಂಟಪಟ್ಟಿ, ಕಿವಿ ಓಲೆ ಹಾಕಿಕೊಂಡಿದ್ದಾನೆ. ಮೀಸೆಯನ್ನು ಉದ್ದವಾಗಿ ಬಿಟ್ಟಿದ್ದಾನೆ. ಪಕ್ಕದಲ್ಲಿ ಮೂರು ಸತಿಗಳ ಶಿಲ್ಪಗಳಿವೆ. ಮೂವರಲ್ಲಿ ಎಡಗೈಯನ್ನು ಮೇಲಕ್ಕೆ ಎತ್ತಿದ್ದಾಳೆ. ಬಲಗೈಯಲ್ಲಿ ನೀರಿನ ತಂಬಿಗೆ ಹಿಡಿದ್ದಾಳೆ. ಸೀರೆಯನ್ನು ತೊಟ್ಟು ನಿರಿಗೆ ಬಿಟ್ಟಿದ್ದಾಳೆ. ಕುಚಗಳ ಕೆತ್ತನೆ, ಬಳೆಗಳು ತುಂಬ ಸೊಗಸಾಗಿವೆ. ಇನ್ನೊಂದು ವೀರಗಲ್ಲು ಶಿಲ್ಪದಲ್ಲಿ ವೀರನು ಕುದುರೆ ಮೇಲೆ ಕುಳಿತಿದ್ದಾನೆ. ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಬಿಲ್ಲಿದೆ. ಸೊಂಟದಲ್ಲಿ ಕತ್ತಿ, ರಾಜಛತ್ರಿ, ಹಿಂಬದಿಯಲ್ಲಿ ಇಬ್ಬರು ಸತಿಯರು ಇದ್ದಾರೆ. ಸತಿಯರು ಬಳೆಗಳು, ಕುಚಗಳು ತೋಳುಬಂದಿಯನ್ನು ಸೊಗಸಾಗಿ ಕೆತ್ತಿದ್ದಾರೆ. ಇನ್ನೊಬ್ಬ ಸೇವಕನಿದ್ದು, ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ನೀರಿನ ತಾತ್ರಾಣಿ ಹಿಡಿದಿದ್ದಾನೆ. ರಾಮದುರ್ಗದ ಬೆಳದೂಣಿ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ವೀರ ಮಹಾಸತಿಯಿದೆ. ಇದರಲ್ಲಿ ವೀರನು ಎರಡು ಕೈಯಲ್ಲಿ ಡಮರುಗಳನ್ನು ಹಿಡಿದಿದ್ದಾನೆ. ಕೂದಲು ತುರುಬು ಕಟ್ಟಿದ್ದಾನೆ. ಕಿವಿಯಲ್ಲಿ ಜುಮುಕಿ. ಕೈಯಲ್ಲಿ ತೋಳುಬಂದಿ, ಕೈಗಡಗ, ಕೊರಳಲ್ಲಿ ಸರ, ಕಾಲಲ್ಲಿ ಕಾಲ್ಗಡಗ, ದೋತ್ರವನ್ನು ಮೇಲಕ್ಕೆ ಕಟ್ಟಿ ನಿರಿಗೆಯ್ನು ಕೆಳಗಿನವರೆಗೆ ಬಿಟ್ಟಿದ್ದಾನೆ. ಈತನ ಎಡಭಾಗದಲ್ಲಿ ಮಹಾಸತಿ ನಿಂತಿದ್ದಾಳೆ. ಇವಳ ಎರಡೂ ಕೈಯಲ್ಲಿ ನಿಂಬೆ ಹಣ್ಣುಗಳಿವೆ. ಸೀರೆಯನ್ನು ತೊಟ್ಟಿದ್ದಾಳೆ. ಕೈಯಲ್ಲಿ ಬಳೆಗಳು, ತೋಳುಬಂದಿ, ಕಿವಿಯಲ್ಲಿ ಜುಮುಕಿ, ಕೊರಳಲ್ಲಿ ಸರ, ಸೊಂಟದಲ್ಲಿ ಸೊಂಟಪಟ್ಟಿ ಇದೆ. ವೀರನ ಮುಂಬದಿಯಲ್ಲಿ ಕುರಿಗಳನ್ನು ಬಿಡಿಸಿರುವುದರಿಂದ ಇದು ಕುರಿಗಳ ಸಂರಕ್ಷಣೆಗಾಗಿ ಕುರುಬ ಹೋರಾಡಿ ಮಡಿದ ನಂತರ ಸತಿ ಸಹಗಮನ ಮಾಡಿರಬಹುದು. ಅಲ್ಲದೆ ಸೂರ್ಯ ಚಂದ್ರ ಶಿಲ್ಪಗಳನ್ನು ಕೆತ್ತಿದ್ದಾರೆ. ಮಸರಕಲ್ಲು ಗ್ರಾಮದ ಮಠದ ಆವರಣದಲ್ಲಿರುವ ವೀರ ಮಹಾಸತಿಯ ಶಿಲ್ಪವನ್ನು ಕಪ್ಪು ಕಲ್ಲಿನಲ್ಲಿ ಕೆತ್ತಲಾಗಿದೆ. ರಾಜ ಕುದುರೆ ಮೇಲೆ ಕುಳಿತುಕೊಂಡು ಬಲಗೈಯಲ್ಲಿ ಜಂಬೆ, ಎಡೆಗೈಯಲ್ಲಿ ಕುದುರೆಯ ಲಗಾಮು ಹಿಡಿದ್ದಾನೆ. ಸೊಂಟದಲ್ಲಿ ಒಂದು ಕತ್ತಿಯಿದೆ. ಕಿವಿಯಲ್ಲಿ ಲೋಲಾಕು, ಕಾಲ್ಗಡಗ, ಕೂದಲುಗಳನ್ನು ಗಂಟುಹಾಕಿ ತುರುಬನ್ನು ಕಟ್ಟಿದ್ದಾನೆ. ಮುಂದೆ ಸೇವಕನು ರಾಜಧ್ವಜ ಹಿಡಿದ್ದಾನೆ. ಹಿಂದೆ ರಾಜಛತ್ರಿ ಇದೆ. ರಾಜನ ರಾಣಿಯಾದ ಸತಿಯು ಕುದುರೆ ಮೇಲೆ ಕುಳಿತುಕೊಂಡು ಕೈಯಲ್ಲಿ ಸಣ್ಣ ಖಡ್ಗ ಅದಕ್ಕೆ ನಿಂಬೆಹಣ್ಣು, ಎಡಕೈಯಲ್ಲಿ ಕನ್ನಡಿ ಹಿಡಿದ್ದಾಳೆ. ಈಕೆಯು ಮುತ್ತಿನಸರ ಬಳೆಗಳನ್ನು, ಸೊಂಟದಲ್ಲಿ ಸೊಂಟದ ಪಟ್ಟಿ ಹಾಕಿದ್ದಾಳೆ. ಮೇಲೆ ಒಂದು ನಾಯಿ ಇದೆ. ಒಬ್ಬ ಸೇವಕ ಬಲಗೈಯಲ್ಲಿ ಪಾರಿವಾಳ, ಎಡಗೈಯಲ್ಲಿ ನೀರಿನ ತಂಬಿಗೆ ಹಿಡಿದ್ದಾನೆ. ಕೆಳಗಡೆ ಸೇವಕ ಮತ್ತೊಂದು ನಾಯಿ ಶಿಲ್ಪ ಹಾಗೂ ಸೂರ್ಯ ಚಂದ್ರ ಶಿಲ್ಪಗಳಿವೆ.



ವೀರ ಸ್ಮಾರಕ ಶಿಲ್ಪ ಗಬ್ಬೂರು



ವೀರ ಸ್ಮಾರಕ ಶಿಲ್ಪ ಹಿರೇರಾಯಕುಂಪಿ



ವೀರ ಸ್ಮಾರಕ ಶಿಲ್ಪ ಮಸರಕಲ್ಲ್



ವೀರ ಸ್ಮಾರಕ ಶಿಲ್ಪ ಗಬ್ಬೂರು



ವೀರ ಸ್ಮಾರಕ ಶಿಲ್ಪ ಕ್ಯಾದ್ಗಿಗೇರಿ.



ವೀರ ಮಹಾಸತಿ ಶಿಲ್ಪ ಕ್ಯಾದ್ಗಿಗೇರಿ



ವೀರ ಮಹಾಸತಿ ಶಿಲ್ಪ ಕ್ಯಾದ್ಗಿಗೇರಿ



ವೀರ ಮಹಾಸತಿ ಮಸರಕಲ್ಲ್



ವೀರ ಮಹಾಸತಿ ಕ್ಯಾದ್ಗಿಗೇರಿ



ಪಲ್ಲಕ್ಕಿ ಅರಕೇರಿ.



ತುರುಗೋಳ್ ವೀರಶಿಲ್ಪ ರಾಮದುರ್ಗ



ತುರುಗೋಳ್ ವೀರಶಿಲ್ಪ ರಾಮದುರ್ಗ



ಮಹಾಸತಿ ಶಿಲ್ಪ ಹುನುಗುಂದಾ ಬಾಡಾ



ಮಹಾಸತಿ ಶಿಲ್ಪ ಅರಕೇರಿ.

ಅಧ್ಯಾಯ ೭

ಕೋಟೆಗಳು ಮತ್ತು ಪುಷ್ಕರಣಿಗಳು

೭

ಕೋಟೆಗಳು ಮತ್ತು ಪುಷ್ಕರಣಿಗಳು

ದೇವದುರ್ಗ ತಾಲ್ಲೂಕಿನ ಕೋಟೆ ಕೊತ್ತಲಗಳು ಮತ್ತು ಪುಷ್ಕರಣಿಗಳು

ಕೋಟೆ ಕೊತ್ತಲಗಳಿಗೆ ಸಂಬಂಧಿಸಿದಂತೆ ನಾವು ನೋಡಿದಾಗ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಕೋಟೆಯ ಅವಶೇಷಗಳನ್ನು ನೋಡಬಹುದಾಗಿದೆ. ಪ್ರಾಚೀನ ಸಾಹಿತ್ಯಿಕ ಗ್ರಂಥಗಳಲ್ಲಿ ಕೋಟೆಗಳ ಉಲ್ಲೇಖವನ್ನು ನಾವು ಕಾಣಬಹುದು. ಮತ್ಸ್ಯ ಪುರಾಣ, ಮಾರ್ಕಂಡೇಯ ಪುರಾಣ ಹಾಗೂ ಇತರ ಗ್ರಂಥಗಳಲ್ಲಿ ಕೋಟೆಯ ಉಲ್ಲೇಖವನ್ನು ನೋಡಬಹುದು. ಮತ್ಸ್ಯ ಪುರಾಣದಲ್ಲಿ ಮಾತ್ರ ಕೋಟೆಗಳ ಬಗ್ಗೆ ವಿಸ್ತೃತವಾದ ವಿವರಗಳಿವೆ. ಅಂದರೆ ರಾಜ್ಯಗಳು, ಸಾಮ್ರಾಜ್ಯಗಳು ಹುಟ್ಟುವುದಕ್ಕಿಂತ ಪೂರ್ವದಲ್ಲಿ ಜನತೆ ಸಣ್ಣಪುಟ್ಟ ಗುಂಪುಗಳಾಗಿ ಮತ್ತು ಸಣ್ಣ ಸಣ್ಣ ಊರುಗಳನ್ನಾಗಿ ಮಾಡಿಕೊಂಡು ವಾಸ ಮಾಡುತ್ತಿದ್ದರು. ಅಂದಿನಿಂದಲೇ ಕೋಟೆಗಳ ನಿರ್ಮಾಣ ಪ್ರಾರಂಭವಾಯಿತು. ಜನರು ತಮ್ಮನ್ನು, ತಮ್ಮ ಪ್ರಾಣ ಹಾಗೂ ಸಂಪತ್ತನ್ನು ಕಳ್ಳರಿಂದ ವೈರಿಗಳಿಂದ ಮತ್ತು ಕಾಡುಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಅವರ ಊರುಗಳ ಸುತ್ತಲೂ ರಕ್ಷಣೆ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದರು. ನಂತರ ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳ ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ಸಾಮ್ರಾಜ್ಯವನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿ ಮತ್ತು ಗಡಿ ಪ್ರದೇಶಗಳಲ್ಲಿ ಸುಭದ್ರವಾದ ಕೋಟೆಯನ್ನು ಕಟ್ಟಿ ತೊಡಗಿದರು.

"ರಾಜನೀತಿಯ ಸಪ್ತಾಂಶಗಳಲ್ಲಿ ಒಂದಾದ ದುರ್ಗವು ರಾಜ್ಯದ ಅತ್ಯವಶ್ಯಕವಾದ ಅಂಶವಾಗಿದೆ. ಭದ್ರವಾದ ಕೋಟೆಯಿಲ್ಲದ ರಾಜನನ್ನು "ಬಿರುಗಾಳಿಗೆ ಸಿಕ್ಕ ಮೋಡಕ್ಕೆ ಸಮಾನ" ಎನ್ನಲಾಗಿದೆ. ಕೋಟೆಯಿಲ್ಲದ ರಾಜನನ್ನು ರಾಜನನ್ನು ವಿಷರಹಿತವಾದ ಹಾವಿನಂತೆ ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಒಬ್ಬ ಬಿಲ್ಲುಗಾರನು ಕೋಟೆ ಗೋಡೆಯ ಹಿಂದೆ ರಕ್ಷಣೆ ಪಡೆದು ವೈರಿ ಪಡೆಯ ನೂರಾರು ಸೈನಿಕರೊಂದಿಗೆ ಹೋರಾಡಬಹುದು. ಮತ್ತು ನೂರಾರು ಬಿಲ್ಲುಗಾರರು, ಸಾವಿರಾರು ವೈರಿಗಳೊಂದಿಗೆ ಹೋರಾಡಬಹುದು"(ಸಿ.ಎಸ್.ಪಾಟೀಲ್ ಕರ್ನಾಟಕ ಕೋಟೆಗಳು, ಪು.೧).

ಕೋಟೆಗಳ ಪ್ರಕಾರಗಳು : ಕೋಟೆಗಳನ್ನು ಕಟ್ಟುವಾಗ ಸ್ಥಳಗಳ ಆಯ್ಕೆಗೆ ಮಹತ್ವವನ್ನು ಕೊಡಲಾಗಿದೆ. ಸಾಮಾನ್ಯವಾಗಿ ಪ್ರದೇಶದ ದಿಬ್ಬ ಹಾಗೂ ಗುಡ್ಡಗಳ ಅಗ್ರಭಾಗಗಳಲ್ಲಿ ಕೋಟೆಗಳನ್ನು ಕಟ್ಟುವುದು

ರೂಢಿ. ಕೋಟೆಗಳು ಎತ್ತರ ಸ್ಥಳದಲ್ಲಿ ಇರುವುದರಿಂದ ಶತ್ರುವಿನ ವಿರುದ್ಧ ಸಹಜವಾಗಿ ಒದಗುವ ರಕ್ಷಣೆ, ಸುತ್ತಲೂ ವ್ಯಾಪಿಸಿರುವ ವಿಸ್ತಾರ, ತಗ್ಗು ಪ್ರದೇಶದ ಮೇಲೆ ಎರಗುವ ಅನುಕೂಲ ಈ ಮುಂತಾದ ಸೌಕರ್ಯಗಳು ಲಭಿಸುತ್ತವೆ. ಇಂತಹ ವಿವಿಧ ಪ್ರಕಾರಗಳ ಕೋಟೆಗಳ ವಿವರಗಳನ್ನು ಪ್ರಾಚೀನ ಗ್ರಂಥಗಳಲ್ಲಿ ಕಾಣಬಹುದು.

ಸಿ.ಎಸ್.ಪಾಟೀಲರು ಕರ್ನಾಟಕ ಕೋಟೆಗಳ ಸಂಪುಟದಲ್ಲಿ ಹೇಳಿರುವ ಕೋಟೆಯ ಪ್ರಕಾರಗಳು ಈ ಕೆಳಗಿನಂತಿವೆ.

ರಾಜ್ಯದ ನಾಲ್ಕು ದಿಕ್ಕುಗಳಲ್ಲೂ ವೈರಿ ಪಡೆಯನ್ನು ತಡೆಯಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಹೇಳುತ್ತಾನೆ.

೧. ಔದಕ - ಇದರಲ್ಲಿ ಎರಡು ಪ್ರಕಾರ. ನಡುಗಡ್ಡೆ ಮತ್ತು ನೀರಿನಿಂದ ಸುತ್ತುವರಿದಿರುವುದು.

೨. ಪರ್ವತ - ದೊಡ್ಡ ಬಂಡೆಗಳ ಮೇಲೆ ಮತ್ತು ಗವಿಗಳಲ್ಲಿ.

೩. ಧ್ಯಾನ್ವನ - ನೀರಿಲ್ಲದೆ ಮರಳು ಭೂಮಿಯಲ್ಲಿ ಕುರುಚಲ ಗಿಡಗಳ ಮಧ್ಯದಲ್ಲಿ.

೪. ವನ - ಅರಣ್ಯದಲ್ಲಿ ಜವುಗು ಭೂಮಿಯಲ್ಲಿ ಕೋಟೆಗಳ ತಳವಿನ್ಯಾಸ, ವೃತ್ತ, ಆಯತ, ಚೌಕಾಕಾರವಾಗಿರಬಹುದೆಂದು ಕೌಟಿಲ್ಯ ತಿಳಿಸುತ್ತಾನೆ.

ಕನ್ನಡದಲ್ಲಿ ಪಂಚತಂತ್ರವನ್ನು ಬರೆದ ದುರ್ಗಸಿಂಹನು ೧೧ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ಅರಸ ಜಗದೇಕಮಲ್ಲ ಜಯಸಿಂಹನ ಸಂಧಿವಿಗ್ರಹಿಯಾಗಿದ್ದ. ಈತನು ಕೋಟೆಗಳ ಪ್ರಕಾರಗಳನ್ನು ಈ ರೀತಿ ವಿಂಗಡಿಸಿದ್ದಾನೆ.

೧. ಜಲದುರ್ಗ

ಅ. ಅಂತರ್ದ್ವೀಪ : ಎರಡು ನದಿಗಳ ಸಂಗಮದ ಮಧ್ಯದ ಕೋಟೆ

ಆ. ಮಹಾಸ್ಥಳ : ದೊಡ್ಡ ಕೆರೆ, ಮುಳ್ಳುಗಳಿಂದ ತುಂಬಿದ ಸರೋವರಗಳಿಂದ ಸುತ್ತುವರಿದ ಕೋಟೆ.

೨. ಗಿರಿದುರ್ಗ

ಅ. ಗುಹ್ಯ : ಬಹಳ ಎತ್ತರವಾದ ಬೆಟ್ಟದ ತುದಿಗಳು ನಾಲ್ಕು ಕಡೆಯಿದ್ದು, ಒಂದೇ ಬಾಗಿಲುಳ್ಳ ಕೋಟೆ.

ಆ. ಪ್ರಸ್ಥರ : ಎಲ್ಲಿಯೂ ಒಳ್ಳೆಯ ದಾರಿಯಿಲ್ಲದೆ ಬೆಟ್ಟಗಳ ನಡುವೆ ನೀರು ಬೀಳುವ ಸ್ಥಳದಲ್ಲಿ ಮಾತ್ರ ಕಿರಿದಾದ ದಾರಿಯಿರುವುದು.

೩. ಸ್ಥಲದುರ್ಗ

ಅ. ಉದಕಸ್ತಂಭ : ಕೋಟೆಯ ಹೊರವಲಯದಲ್ಲಿ ನೀರು, ಗಿಡ, ಮರ, ಹುಲ್ಲು, ಬಳ್ಳಿಗಳಲ್ಲದೆ, ಒಳಗೆ ಮಾತ್ರ ಹುಲ್ಲುಕಡ್ಡಿ ನೀರಿನಿಂದ ಸಮೃದ್ಧವಾಗಿರುವುದು.

ಆ. ವೈರಿಣಿ : ದುರ್ಗದ ಹೊರಗೆ ಉಪ್ಪುನೀರು ಕುಡಿಯಲು ಬಾರದ ನೀರು/ಸ್ವಲ್ಪವೇ ನೀರಿರುವುದು.

೪. ವನದುರ್ಗ

ಅ. ಕರ್ದಮೋದಕ : ಸುತ್ತ ನೀರು ತುಂಬಿದ ಜಲಾಶಯವಿದ್ದು ಹೆದರಿಸುವಷ್ಟು ಅತಿಶೀತಲವಾದ ಕೆಸರುಳ್ಳದ್ದು.

ಆ. ಸ್ತಂಭಗಹನ : ಅನೇಕ ಮರಗಳಿಂದ ಪರಿವೃತ್ತವಾಗಿ ಸುತ್ತಮುತ್ತ ಹುಲ್ಲು ಯಥೇಚ್ಛವಾಗಿ ಬೆಳೆದಿರುವುದು.

ಮನುಸ್ಮೃತಿಯಲ್ಲಿ ಸ್ಥಳ ಕಟ್ಟಲು ಉಪಯೋಗಿಸುವ ಸಾಮಗ್ರಿ ಮತ್ತು ಸಂರಕ್ಷಣಾ ವಿಧಾನಗಳ ಆಧಾರದ ಮೇಲೆ ಕೋಟೆಗಳನ್ನು ಆರು(೬) ಪ್ರಕಾರಗಳಲ್ಲಿ ವಿಂಗಡಿಸಿದೆ. ಶುಕ್ರನೀತಿ ಸಾರವು ಒಂಬತ್ತು(೯) ಬಗೆಯ ಕೋಟೆಗಳ ವಿವರಗಳನ್ನು ತಿಳಿಸುತ್ತದೆ.

ಸೈನಿಕ ಮತ್ತು ವಾಸ್ತು ದೃಷ್ಟಿಯಿಂದ ಮಾನಸಾರದಲ್ಲಿ ಕೋಟೆಗಳನ್ನು ಏಳು(೭) ಭಾಗಗಳಲ್ಲಿ ವಿಂಗಡಿಸಿದೆ. ಕಲ್ಯಾಣ ಚಾಲುಕ್ಯ ಅರಸ ಮೂರನೇ ಸೋಮೇಶ್ವರನ 'ಅಭಿಲಾಷಿತಾರ್ಥ ಚಿಂತಾಮಣಿ/ ಮಾನಸೋಲ್ಲಾಸದಲ್ಲಿ ಕೋಟೆಗಳನ್ನು ಒಂಬತ್ತು(೯) ಪ್ರಕಾರಗಳಲ್ಲಿ ವಿಂಗಡಿಸಿದೆ. ಅಲ್ಲದೆ ಕರ್ನಾಟಕದಲ್ಲಿ ದೊರೆತ ಅನೇಕ ಶಾಸನಗಳಲ್ಲಿ ಕೋಟೆಗಳ ಉಲ್ಲೇಖವನ್ನು ಕಾಣಬಹುದಾಗಿದೆ. ಅದರಂತೆ ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಕೋಟೆಗಳ ಉಲ್ಲೇಖವನ್ನು ನಾವು ನೋಡಬಹುದಾಗಿದೆ. ಅವುಗಳಲ್ಲಿ

೧. ಏಳುಬಾವಿ ಬಸವಣ್ಣನ ಗುಡಿಯ ಬಲಪಕ್ಕದಲ್ಲಿರುವ ಕ್ರಿ.ಶ.೧೧೭೧ರ ಶಾಸನದಲ್ಲಿ ಗಬ್ಬೂರಿನ ನೀರ ಕೋಟೆಯಲ್ಲಿ ಪ್ರತಿಷ್ಠೆ ಮಾಡಿಸಿದ ಪ್ರಸನ್ನ ಕೇಶವ ದೇವರಿಗೆ ದಾನ ನೀಡಿದ ವಿಷಯವಿದೆ.

೨. ದೇವದುರ್ಗ ಈರಣ್ಣ ದೇವರ ಗುಡ್ಡದ ಬಂಡೆಯಲ್ಲಿರುವ ಕ್ರಿ.ಶ.೧೮೯೦ರ ಶಾಸನದಲ್ಲಿ ಚಿಕ್ಕಕಾಸಲೇಂದ್ರನು ಮಲ್ಲೇದೇವರ ದುರ್ಗವನ್ನು ರಚಿಸಿದ ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೪೯).

೩. ಗಲಗಿನ ಬಸವನ ಗುಡಿ ಕಟ್ಟೆಗೆ ಹಾಕಿರುವ ಕ್ರಿ.ಶ.೧೭೨೬ರ ಶಾಸನದಲ್ಲಿ ರಾಯದುರ್ಗ ಎಂದು ಉಲ್ಲೇಖವಿದೆ(ಕವಿಶಾಸಂ ೭, ಪು.೧೦೩).

ಹುನಗುಂದ ಬಾಡ : ದೇವದುರ್ಗ ತಾಲ್ಲೂಕಿನ ಗೆಜ್ಜೆಭಾವಿ ಹತ್ತಿರವಿರುವ ಹುನಗುಂದ ಬಾಡ ಎಂಬ ಸ್ಥಳದಲ್ಲಿ ಪುರಾತನವಾದ ಕೋಟೆಯಿದೆ. ಮತ್ತು ಇಲ್ಲಿ ಅಗಸಿಗಳನ್ನು ಕಾಣಬಹುದು. ಈಗ ಕೋಟೆಯು ಹಾಳಾಗಿ ಹೋಗಿರುವುದರಿಂದ ಕೋಟೆಯ ಅವಶೇಷವನ್ನು ಬೆಟ್ಟದ ಮೇಲೆ ಕಾಣಬಹುದು. ಅಂದರೆ ಹುನುಗುಂದ ಬಾಡಾದ ಕೋಟೆ ಬೆಟ್ಟದಿಂದ ಕೆಳಗೆ ಊರನ್ನು ಸುತ್ತುವರಿದಿದ್ದು, ಅದು ರಕ್ಷಣೆಯ ಸಂಕೇತವಾಗಿದೆ. ಇಂದಿಗೂ ಊರಿನ ಒಳಗೆ ಹೋಗುವಲ್ಲಿ ಕೋಟೆಯ ಬಾಗಿಲು ಅಗಸಿಯನ್ನು ನಾವು ಕಾಣುತ್ತೇವೆ. ಮತ್ತು ಬೆಟ್ಟದಲ್ಲಿ ಸಣ್ಣ ಸಣ್ಣ ಕರಿಕಲ್ಲುಗಳಿಂದ ನಿರ್ಮಿಸಿದ ಅವಶೇಷವನ್ನು ಇಂದಿಗೂ ನೋಡಬಹುದಾಗಿದೆ.

ಕ್ಯಾದಿಗ್ಗೇರಾ : ದೇವದುರ್ಗದಿಂದ ಸಿರವಾರಕ್ಕೆ ಹೋಗುವ ದಾರಿಯ ಮಧ್ಯದಲ್ಲಿ ೩ ಕಿ.ಮೀ. ಪಶ್ಚಿಮಕ್ಕೆ ಒಳಗಡೆ ಇರುವ ಗ್ರಾಮ. ಇಲ್ಲಿ ಪಾಳೆಗಾರ ಮತ್ತು ನಾಯಕರ ಕಾಲದಲ್ಲಿ ನಿರ್ಮಾಣವಾದ ಅನೇಕ ವೀರಕಲ್ಲುಗಳು, ಮಹಾಸತಿ ಕಲ್ಲುಗಳು, ದೇವಾಲಯಗಳನ್ನು, ಕೋಟೆಗಳ ಅವಶೇಷಗಳನ್ನು ಕಾಣಬಹುದಾಗಿದೆ.

ಕ್ಯಾದಿಗ್ಗೇರಾ ಗ್ರಾಮದಲ್ಲಿ ದೊಡ್ಡದಾದ ಬೆಟ್ಟವಿದ್ದು, ಬೆಟ್ಟದಲ್ಲಿ ಸುತ್ತುವರಿದ ಸಣ್ಣ ಸಣ್ಣ ಕಂದು ಮತ್ತು ಕರಿ ಕಲ್ಲುಗಳಿಂದ ನಿರ್ಮಾಣವಾದ ಕೋಟೆಯನ್ನು ಕಾಣಬಹುದು.


ಈ ಬೆಟ್ಟದಲ್ಲಿ ಮೊದಲು ಕ್ಯಾದಿಗ್ಗೇರಾ ಗ್ರಾಮವಿದ್ದು, ಮತ್ತು ಅನೇಕ ಮನೆಗಳನ್ನು ಇಲ್ಲಿಯೇ ನಿರ್ಮಿಸಿದ್ದರು ಎಂದು ತಿಳಿದುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಬೆಟ್ಟದಲ್ಲಿ ಕೋಟೆಯ ಅವಶೇಷ ಮತ್ತು ಮನೆಗಳನ್ನು ಕಾಣುತ್ತೇವೆ. ಅಲ್ಲದೇ ಕೆಲವು ದೇವಾಲಯಗಳನ್ನು ಬೆಟ್ಟದಲ್ಲಿ ನೋಡಬಹುದು.

ಕ್ಯಾದಿಗ್ಗೇರಾದಲ್ಲಿ ಇನ್ನೊಂದು ಬೆಟ್ಟವಿದ್ದು, ಇಲ್ಲಿಯೂ ಕೋಟೆಯ ಅವಶೇಷವಿದೆ. ಇಲ್ಲಿ ಮನೆಗಳ ಅವಶೇಷಗಳನ್ನು ಕಾಣಬಹುದು. ಇತ್ತೀಚಿಗೆ ಕ್ಯಾದಿಗ್ಗೇರಾ ಗ್ರಾಮವು ಬೆಟ್ಟದಿಂದ ಕೆಳಗೆ ನಿರ್ಮಿತವಾಗಿದೆ. ಕ್ಯಾದಿಗ್ಗೇರಾ ಶಾಲೆಯ ಮುಂದೆ ಹಾಗೂ ಇತರ ಸ್ಥಳಗಳಲ್ಲಿ ಅನೇಕ ಸ್ಮಾರಕಗಳನ್ನು ಕಾಣಬಹುದು.

ಚಂದನಕೇರಿ : ದೇವದುರ್ಗದ ಪಶ್ಚಿಮ ಭಾಗದಲ್ಲಿ ೨ ಕಿ.ಮೀ. ದೂರದಲ್ಲಿರುವ ಗ್ರಾಮ. ಇಲ್ಲಿ ಚಾಲುಕ್ಯರ ಕಾಲದ ಮತ್ತು ನಾಯಕರ ಕಾಲದಲ್ಲಿ ನಿರ್ಮಾಣವಾದ ಅನೇಕ ಮೂರ್ತಿ ಶಿಲ್ಪಗಳು ಮತ್ತು ದೇವಾಲಯಗಳು ಹಾಗೂ "ಚಂದನಕೆರೆ" ಎಂದು ಕರೆಯುವ ಸುಂದರ ಕೆರೆಯನ್ನು ಇಲ್ಲಿ ನೋಡಬಹುದು.

ಗ್ರಾಮದ ಮೂರು ಭಾಗದಲ್ಲಿ ಅಂದರೆ ಉತ್ತರ, ಪಶ್ಚಿಮ, ದಕ್ಷಿಣ ಭಾಗವು ಗುಡ್ಡಗಳಿಂದ ಸುತ್ತುವರಿದಿದ್ದು, ಈ ಗುಡ್ಡಗಳಲ್ಲಿ ಸಣ್ಣ ಸಣ್ಣ ಕೆಂಪು ಕಲ್ಲುಗಳಿಂದ ನಿರ್ಮಿತವಾದ ಕೋಟೆಯನ್ನು

ಹುನಗುಂದ ಬಾಡದ ಕೋಟೆ ಹಾಗೂ ಅಗಸಿ



೧. ಅಗಸಿ
೨. ಕೊತ್ತಲ
೩. ಕೊತ್ತಲ
೪. ಬೆಟ್ಟ
೫. ಅಗಸಿ
೬. ಕೋಟೆ


ನೋಡಬಹುದು. ಕೋಟೆ ಇದ್ದ ಅವಶೇಷವಾಗಿ ಇಂದಿಗೂ ಗುಡ್ಡದಲ್ಲಿ ಮೂರು ಕೊತ್ತಲಗಳಿವೆ. ಚಂದನಕೇರಿಯಲ್ಲಿ ಚಾಲುಕ್ಯರ ಸ್ಮಾರಕಗಳು ಇದ್ದರೂ, ಕೋಟೆಯ ಅವಶೇಷ ಮಾತ್ರ ನಾಯಕರ ಕಾಲದ್ದಾಗಿದೆ.

ದೇವದುರ್ಗ : ದೇವರು ನಿರ್ಮಿಸಿದ ಬೆಟ್ಟಗಳ ದುರ್ಗದ ಮಧ್ಯದಲ್ಲಿರುವುದರಿಂದ ಇದಕ್ಕೆ ದೇವದುರ್ಗ ಎಂದು ಹೆಸರುಬಂದಿದೆ ಎಂಬ ಪ್ರತೀತಿಯಿದೆ. ಆಯಕಟ್ಟಿನ ಈ ಸ್ಥಳದಲ್ಲಿ ಹದಿನಾರು, ಹದಿನೇಳನೇ ಶತಮಾನದಲ್ಲಿ ನಾಯಕರು ಆಳುತ್ತಿದ್ದರು. ಮೊದಲು ವಿಜಯನಗರ ಅರಸರಿಗೆ ಅಧೀನರಾಗಿದ್ದ ಇವರು ನಂತರ ಬಿಜಾಪುರದ ಆದಿಲ್‌ಶಾಹಿ ಅರಸರನ್ನು ಆಶ್ರಯಿಸಿದರು. ಅವರ ಕಾಲದ ಕೋಟೆಯ ಅವಶೇಷಗಳು ಇಂದಿಗೂ ಇವೆ.

"ಹೈದರಾಬಾದಿನ ಒಂದನೇ ಅಸಫಜಾ ದೇವದುರ್ಗದ ಕೋಟೆಯನ್ನು ಆಳುತ್ತಿದ್ದ. ಈತ ಬೇಡರ ದೊರೆಯ ಸಹಾಯವನ್ನು ಕೇಳಿದ್ದನೆಂದು ತಿಳಿದುಬರುತ್ತದೆ. ಈ ಕೋಟೆ ಕೆಲಕಾಲ ಅರಬ್ ದಳವಾಯಿ ಆಡಳಿತದಲ್ಲಿತ್ತು. ಆತ ನಿಜಾಮನ ಸೈನ್ಯದೊಂದಿಗೆ ಹೋರಾಡದೇ ಫ್ರೇಜರ್ ಎಂಬುವನಿಗೆ ಶರಣಾದ. ಅಲ್ಲಿಂದ ಮುಂದೆ ಸ್ವಾತಂತ್ರ್ಯ ದೊರೆಯುವವರಿಗೆ ಇದು ಹೈದರಾಬಾದಿನ ನಿಜಾಮನ ಅಧೀನದಲ್ಲಿದ್ದಿತು. ದೇವದುರ್ಗದ ಮೂಲಪುರುಷ ಭೂಮಿಪತಿ ರಂಗಪ್ಪನಾಯಕ ಆತನ ನಂತರ ಸುಮಾರು ನಲವತ್ತೈದಕ್ಕೂ ಹೆಚ್ಚು ದೊರೆಗಳು ಈ ಪ್ರದೇಶವನ್ನು ಆಳಿದರೆಂದು ತಿಳಿದುಬರುತ್ತದೆ. ಶಾಸನದ ಬಳಿ ದೇವತೆಗಳ ಶಿಲ್ಪವಿರುವುದರಿಂದ ಇದಕ್ಕೆ ದೇವದುರ್ಗ ಎಂದು ಹೆಸರು ಬಂದಿರಬೇಕು.

ಕೋಟೆ : ದೇವದುರ್ಗವು ಬೆಟ್ಟಗಳಿಂದ ಸುತ್ತವರಿದಿದೆ. ಮೂರು ಬೆಟ್ಟಗಳ ಮೇಲೆ ಅಲ್ಲಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಹತ್ತಲು ಸಾಧ್ಯವಾಗದ ಕಡಿದಾದ ಸ್ಥಳಗಳನ್ನು ಹಾಗೆಯೇ ಬಿಟ್ಟಿದೆ. ಊರ ಪೂರ್ವಕ್ಕಿರುವ ಈರಣ್ಣನ ಗುಡ್ಡದ ಮೇಲೆ ಎರಡು ಸುತ್ತಿನ ಕೋಟೆಯಿದೆ. ದಪ್ಪ ಕಲ್ಲುಗಳಿಂದ ಗಾರೆಯನ್ನು ಬಳಸದೆ, ಕಟ್ಟಿದ ಮೇಲಿನ ಸುತ್ತಿನ ಕೋಟೆಗೆ ಪೂರ್ವ ದಿಕ್ಕಿನಲ್ಲಿ ಬಾಗಿಲಿದೆ. ಬಾಗಿಲಿಗೆ ಪ್ರವೇಶ ಕಟ್ಟಡವಿಲ್ಲ. ಬಾಗಿಲಿನ ದಕ್ಷಿಣಕ್ಕೆ ಇರುವ ದೊಡ್ಡ ಬಂಡೆಯನ್ನು ಹತ್ತಲು ಕೊರೆದು ಮಾಡಿದ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಕೆಳಭಾಗದಲ್ಲಿ ಆಧಾರವಾಗಿದ್ದ, ಗೋಡೆ ಬಿದ್ದು ಹೋಗಿರುವುದರಿಂದ ಈಗ ಬಂಡೆಯ ಮೇಲೆ ಹತ್ತಲಾಗುವುದಿಲ್ಲ. ಈ ಬಂಡೆಯ ಮೇಲೆ ಆಯತಾಕಾರದ ಕಲ್ಲಿನ ಕಟ್ಟಡವಿದೆ. ದಕ್ಷಿಣ ಬದಿಗೆ ಎಡೆ ಬಿಚ್ಚಿದ ದೊಡ್ಡ ಸರ್ಪದ ಮೇಲೆ ವಿಷ್ಣು ಮಲಗಿದ್ದಾನೆ. ಅವನ ಪಕ್ಕದಲ್ಲಿ ಗದೆಯನ್ನು ಹಿಡಿದ ಇಬ್ಬರು ನಿಂತಿದ್ದಾರೆ. ಪೂರ್ವ ಬದಿಗೆ ಕೈಮುಗಿದು ನಿಂತ ಇಬ್ಬರು ಮನುಷ್ಯರ ಚಿಕ್ಕ ಶಿಲ್ಪಗಳಿವೆ. ಪಶ್ಚಿಮ ಬದಿಗೆ ಗರುಡ, ನಂದಿಯ ಮೇಲೆ ಕುಳಿತ ಶಿವ ಪಾರ್ವತಿ, ಹರಿಹರ ಹಂಸದ ಮೇಲೆ ಕುಳಿತ ಬ್ರಹ್ಮ, ಬಲಗೈಯಲ್ಲಿ ಗದೆಯನ್ನು ಹಿಡಿದ ಗಡ್ಡದಾರಿ ಮನುಷ್ಯನ ಶಿಲ್ಪಗಳಿವೆ. ಇಲ್ಲಿರುವ ಮರದ ಎಲೆಯ ಮೇಲೆ ಮಲಗಿರುವ ಕೃಷ್ಣ ಇದ್ದಾನೆ. ಬಂಡೆಯ ಉತ್ತರ ಬದಿಗೆ ಪಶ್ಚಿಮ ಮೇಲೆ

ಚಂದನಕೇರಿಯ ಬೆಟ್ಟ ಹಾಗೂ ಕೋಟೆ



೧. ಕೊತ್ತಲ
೨. ಕೊತ್ತಲ
೩. ಕೊತ್ತಲ
೪. ಬೆಟ್ಟ

ಕುಳಿತ ಜಟಾಧಾರಿ ಮನುಷ್ಯನಿದ್ದಾನೆ. ದಕ್ಷಿಣ ಬದಿಗೆ ಕೆಳಭಾಗದಲ್ಲಿ ಆನೆಗಳ ಯುದ್ಧ, ಚಿಕ್ಕ ಲಿಂಗಗಳ ಸಾಲುಗಳು, ಬೆಟ್ಟದ ಮೇಲೆ ನಿಂತಿರುವ ಆಂಜನೇಯ ಕೈ ಮುಗಿದು ಮತ್ಸ್ಯ ಮತ್ತು ನಾಗಕನ್ಯೆಯರು ಲಿಂಗವನ್ನು ಪೂಜಿಸುತ್ತಿರುವ ಪುರುಷಾಮೃಗ ಶಿಲ್ಪಗಳಿವೆ. ಬಂಡೆಯ ಪಶ್ಚಿಮಕ್ಕೆ ಒಂದು ಕೊಳವಿದೆ. ತಗ್ಗಾದ ಸ್ಥಳದಲ್ಲಿ ಅರ್ಧ ವೃತ್ತಾಕಾರದ ಗೋಡೆಯನ್ನು ಕಟ್ಟಿ ನಿರ್ಮಿಸಿದ ಈ ಕೊಳವನ್ನು 'ಸಿಡ್ಲ ಬಾವಿಯೆಂದು' ಕರೆಯುತ್ತಾರೆ. ಈ ಭಾಗದಲ್ಲಿ ಕೆಲವು ಕಟ್ಟಡಗಳ ಅವಶೇಷಗಳಿವೆ. ಈರಣ್ಣನ ಗುಡ್ಡದ ಎತ್ತರಕ್ಕಿರುವ ಅಮರಪ್ಪನ ಗುಡ್ಡದ ಮೇಲೆ ಒಂದು ದೇವಾಲಯ ಮತ್ತು ಗುಡ್ಡದ ತುದಿಯ ಮೇಲೆ ಒಂದು ಕಾವಲುಗೋಪುರ ಇವೆ. ಈ ಎಲ್ಲಾ ಕೋಟೆಗಳು ಹದಿನಾರು, ಹದಿನೇಳನೇ ಶತಮಾನದವು. ಕೋಟೆ ಕೆಳಗೆ ಊರಿನ ಆಗ್ನೇಯಕ್ಕೆ ದೊಡ್ಡ ಕೆರೆಯಿದೆ. ಕೆರೆಯ ಪಶ್ಚಿಮಕ್ಕಿರುವ ಏರಿಯನ್ನು ಎರಡು ಗುಡ್ಡಗಳ ಮಧ್ಯದಲ್ಲಿ ಕಟ್ಟಿದೆ. ಕೋಟೆ ಗೋಡೆಯಂತಿರುವ ದಪ್ಪವಾದ ಏರಿಯ ತುದಿಯಲ್ಲಿ ಮತ್ತು ಮಧ್ಯದಲ್ಲಿ ಎರಡು ವೃತ್ತಾಕಾರದ ಕೊತ್ತಲಗಳಂತಹ ರಚನೆಗಳಿವೆ. ಏರಿಯ ಪಕ್ಕದಲ್ಲಿ ನಾಯಕನ ಬಾವಿ ಮತ್ತು ಖಾಸಬಾವಿ ಹೆಸರಿನ ಎರಡು ಬಾವಿಗಳಿವೆ. ಒಂದು ಬಾವಿಯ ಪಕ್ಕದಲ್ಲಿ ವಿಶ್ರಾಂತಿಗಾಗಿ ಕಟ್ಟಿಸಿದ ಕಮಾನಿನ ಕಟ್ಟಡವಿದೆ(ರಾ.ಮತ್ತು ಕೊ.ಜಿ.ಕೋಟೆಗಳ ಒಂದು ಅಧ್ಯಯನ - ಸುಜಾತ ಮಲ್ಲನಾಗೌಡ).

ಊರೊಳಗೆ ಆಗ್ನೇಯ ಭಾಗದಲ್ಲಿ ಕೋಟೆಯಿಂದಾವೃತ್ತವಾದ ಅರಮನೆಯಿದೆ. ಇದನ್ನು "ದರ್ಬಾರ" ಎಂದು ಕರೆಯುತ್ತಾರೆ. ಕೋಟೆಯನ್ನು ಚಿಕ್ಕ ಅನಿಯಮಿತ ಆಕಾರದ ಕಲ್ಲು ಮತ್ತು ಗಾರೆಯಿಂದ ಕಟ್ಟಿದೆ. ಉತ್ತರ ಗೋಡೆಯ ಮಧ್ಯದಲ್ಲಿ ಬಾಗಿಲಿದೆ. ಈಶಾನ್ಯ ಮೂಲೆಯನ್ನು ಹೊರತುಪಡಿಸಿ ಉಳಿದ ಮೂಲೆಗಳಲ್ಲಿ ವೃತ್ತಾಕಾರದ ಬುರುಜುಗಳಿವೆ. ಇದಲ್ಲದೆ ಪೂರ್ವ, ಉತ್ತರ, ಪಶ್ಚಿಮ ಗೋಡೆಗಳಲ್ಲಿ ಒಂದೊಂದು ಮತ್ತು ದಕ್ಷಿಣ ಗೋಡೆಯಲ್ಲಿ ಎರಡು ಅರ್ಧ ವೃತ್ತಾಕಾರದ ಬುರುಜುಗಳಿವೆ. ಗೋಡೆಯ ಕೈಪಿಡಿ ಗೋಡೆಯಲ್ಲಿದ್ದ ತೆನೆಗಳ ಮಧ್ಯದ ಭಾಗವನ್ನು ಗೋಡೆ ಕಟ್ಟಿ ಮುಚ್ಚಿರುವುದರಿಂದ ಅದು ತೆನೆಗಳಿಲ್ಲದ ಕೈಪಿಡಿ ಗೋಡೆಯಂತೆ ಕಾಣುತ್ತದೆ. ಕೈಪಿಡಿ ಗೋಡೆಯಲ್ಲಿ ಬಂದೂಕು ಕಿಂಡಿಗಳಿವೆ. ಉತ್ತರ ದಿಕ್ಕಿನ ಗೋಡೆಯ ಮೇಲ್ಭಾಗದಲ್ಲಿ ಎರಡು ಮುಂಚಾಚುಗಳಿವೆ.(Balcony) ಪ್ರತಿಯೊಂದು ಮುಂಚಾಚು ನಾಲ್ಕು (೪) ಬೋದಿಗೆಗಳ ಮೇಲೆ ನಿಂತಿದೆ. ಮತ್ತು ಮುಂದೆ ಮೂರು ಕಮಾನುಗಳನ್ನು ಹೊಂದಿದೆ. ಉತ್ತರ ದಿಕ್ಕಿನ ಬಾಗಿಲಿಗೆ ಮರದ ಚೌಕಟ್ಟು ಮತ್ತು ಮರದ ಕದಗಳಿವೆ. ಚೌಕಟ್ಟಿನ ಮೇಲೆ ಕಮಾನಿದೆ. ಉತ್ತರ ದಿಕ್ಕಿನ ಬಾಗಿಲು ದಾಟಿದ ಕೂಡಲೇ ಪಶ್ಚಿಮಕ್ಕೆ ಮೂರು ಅಂಕಣಗಳ ಕಟ್ಟೆ ಮತ್ತು ಪೂರ್ವಕ್ಕೆ ಒಂದು ಅಂಕಣದ ಕಟ್ಟೆ ಇದೆ. ಪಶ್ಚಿಮ ಕಟ್ಟೆಯ ಹಿಂಭಾಗದಲ್ಲಿ ಒಂದು ಕೊಠಡಿ ಮತ್ತು ಕಟ್ಟಡದ ಮಾಳಿಗೆ ಮೇಲೆ ಹೋಗಲು ಮೆಟ್ಟಿಲುಗಳಿವೆ. ಪೂರ್ವ ಕಟ್ಟೆಯ ಪೂರ್ವಕ್ಕೆ ಉತ್ತರ ಕೋಟೆ ಗೋಡೆಗೆ ಸೇರಿದಂತೆ ಒಂದಂಕಣದ ಉದ್ದವಾದ ಕೈಸಾಲೆಯಿದೆ. ಕೈಸಾಲೆಯ ಮುಂಭಾಗದಲ್ಲಿ ಕಮಾನುಗಳಿವೆ. ಬಾಗಿಲಿನಿಂದ ಬಂದಾಗ ಆಯತಾಕಾರದ ದೊಡ್ಡ ಆವರಣವಿದೆ. ಪೂರ್ವಕ್ಕೆ ದೊಡ್ಡ ಸಭಾಂಗಣವಿದೆ.

ಇದರಲ್ಲಿ ೭x೫ ಕಮಾನಿನ ಅಂಕಣಗಳಿವೆ. ಕಟ್ಟಡದ ಮುಂಭಾಗದಲ್ಲಿ ಸಹ ಕಮಾನುಗಳಿವೆ. ಆವರಣದ ದಕ್ಷಿಣಕ್ಕೆ ದರ್ಬಾರ್ ಹಾಲಿನಂತಹ ಪ್ರಮುಖವಾದ ಚಿಕ್ಕದಾದ ಕಟ್ಟಡವಿದೆ. ಇದನ್ನು ಅಧಿಷ್ಠಾನದ ಮೇಲೆ ಕಟ್ಟಿದೆ. ಅದಿಷ್ಠಾನದಲ್ಲಿ ಪದ್ಮ, ಕಂಠ ಮತ್ತು ಪದ್ಮಪಟ್ಟಿಕೆಗಳಿವೆ. ಕಟ್ಟಡದ ಮಧ್ಯದಲ್ಲಿ ಹಜಾರವಿದ್ದು, ಅದರಲ್ಲಿ ಕಂಬಗಳ ಪೀಠಗಳು ಮಾತ್ರ ಉಳಿದಿವೆ. ಕಲ್ಲಿನಿಂದ ಮಾಡಿದ ಪೀಠಗಳು ಅಲಂಕಾರಮಯವಾಗಿವೆ. ಹಜಾರದ ಬದಿಗಳಲ್ಲಿ ಎರಡು ಕೊಠಡಿಗಳಿವೆ. ಈ ಕಟ್ಟಡದ ಮೇಲೆ ಮತ್ತೊಂದು ಮಹಡಿಯಿತ್ತು. ಈಗ ಅದು ಬಿದ್ದು ಹೋಗಿದೆ. ಕಟ್ಟಡದ ಮುಂಭಾಗದಲ್ಲಿ ಪಶ್ಚಿಮಕ್ಕೆ ನೀರಿನ ತೊಟ್ಟಿಯಿದೆ. ಚಿಕ್ಕಕಲ್ಲು ಮತ್ತು ಗಾರೆಯಿಂದ ಕಟ್ಟಿದ ತೊಟ್ಟಿಯ ಮೇಲ್ಭಾಗದಲ್ಲಿ ನಯಗೊಳಿಸಿದ ಅಲಂಕಾರಿಕ ದಿಂಡು ಇದೆ.


ತೊಟ್ಟಿಯ ಪಶ್ಚಿಮಕ್ಕೆ ಕಮಾನಿನ ಬಾಗಿಲಿದೆ. ಈ ಆವರಣದಿಂದ ಕೋಟೆಯ ದಕ್ಷಿಣ ಭಾಗಕ್ಕೆ ಈ ಬಾಗಿಲ ಮೂಲಕ ದಾರಿಯಿದೆ. ಬಾಗಿಲ ಪಕ್ಕದಲ್ಲಿ ವೃತ್ತಾಕಾರದ ಒಂದು ಕೊತ್ತಳವಿದೆ. ಕೋಟೆಯ ಒಳಗಿನ ದಕ್ಷಿಣದ ಅರ್ಧ ಭಾಗದಲ್ಲಿ ಕಟ್ಟಡಗಳ ಅವಶೇಷಗಳಿವೆ. ಕಟ್ಟಡಗಳು ಬಿದ್ದು ಹೋಗಿರುವುದರಿಂದ ವಿವರಗಳು ತಿಳಿಯುವುದಿಲ್ಲ. ಈ ಕೋಟೆ ಮತ್ತು ಒಳಗಿನ ಕಟ್ಟಡಗಳು ಹದಿನಾರು ಹದಿನೇಳನೇ ಶತಮಾನದವು.

ರಾಮದುರ್ಗ

ರಾಮದುರ್ಗ ದೇವದುರ್ಗ ತಾಲ್ಲೂಕಿನಲ್ಲಿ ದೇವದುರ್ಗದಿಂದ ಆಗ್ನೇಯಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಇದೊಂದು ಚಿಕ್ಕ ಗ್ರಾಮ. ಇಲ್ಲಿ ಕೋಟೆ, ಬಾವಿ, ಮಸೀದಿ, ದೇವಾಲಯ ಮುಂತಾದವುಗಳಿವೆ. ಈ ಗ್ರಾಮದಲ್ಲಿ ನೆಲಮಟ್ಟದಲ್ಲಿ ಮತ್ತು ಬೆಟ್ಟದ ಮೇಲೆ ಸ್ಥಳೀಯ ಪಾಳೆಗಾರರು ೧೬-೧೭ ಶತಮಾನಗಳಲ್ಲಿ ಕಟ್ಟಿಸಿದ ಕೋಟೆಯಿದೆ. ಅನಿಯಮಿತಾಕಾರದ ಮಧ್ಯಮ ಮತ್ತು ಚಿಕ್ಕ ಗ್ರಾಮದ ಕಲ್ಲುಗಳಿಂದ ಕಟ್ಟಿದ ಕೋಟೆಯಲ್ಲಿ ಎರಡು ಬಾಗಿಲುಗಳು ಮತ್ತು ವೃತ್ತಾಕಾರದ ಕೊತ್ತಲಗಳಿವೆ. ಬೆಟ್ಟದ ಮೇಲೆ ಎರಡು ಒಂಟಿ ಕೊತ್ತಲಗಳಿವೆ. ಈಗಿನ ಜನವಾಸ ಕೋಟೆಯ ಒಳಗಿದೆ. ಬೆಟ್ಟಗಳಿಂದ ಸುತ್ತುವರಿದ ಊರಿನ ಸುತ್ತಲೂ ಬೆಟ್ಟಗಳ ಮಧ್ಯದಲ್ಲಿ ಮತ್ತು ಬೆಟ್ಟಗಳ ಮೇಲೆ ಕೋಟೆಯನ್ನು ಕಟ್ಟಿದೆ. ದಕ್ಷಿಣ ದಿಕ್ಕಿಗೆ ಎರಡು ಬೆಟ್ಟಗಳ ಮಧ್ಯದಲ್ಲಿ ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಬೆಟ್ಟದ ಮೇಲೆ ಕಟ್ಟಿದ ಕೋಟೆಯನ್ನು ಈಗಲೂ ನೋಡಬಹುದು. ಪೂರ್ವಕ್ಕೆ ಎರಡು ಬೆಟ್ಟಗಳ ಮಧ್ಯದಲ್ಲಿ ಕಟ್ಟಿದ ಕೋಟೆ ಈಗ ಉಳಿದಿಲ್ಲ. ನೈರುತ್ಯ ದಿಕ್ಕಿನ ಬೆಟ್ಟದ ಮೇಲೆ ಎರಡು ಸುತ್ತಿನ ಕೋಟೆಯಿದೆ.

ಒಳಸುತ್ತಿನಲ್ಲಿ ಒಂದು ಬಾಗಿಲಿದೆ. ಊರೊಳಗೆ ಪ್ರವೇಶಿಸಲು ದಕ್ಷಿಣ ದಿಕ್ಕಿನ ಕೋಟೆಯಲ್ಲಿ ಗೊಂದದಲ್ಲಿ ಬಾಗಿಲಿದೆ. ಈ ಬಾಗಿಲು ಮತ್ತು ಬೆಟ್ಟದ ಮೇಲಿನ ಬಾಗಿಲು ಎರಡಕ್ಕೂ ಕಟ್ಟಡಗಳಿಲ್ಲದೆ

ದೇವದುರ್ಗದ ಕೋಟೆ



೧. ಬಾಗಿಲು
೨. ಕಾಮಾನಿನ ಕಟ್ಟಡ
೩. ತೊಟ್ಟಿ
೪. ಬಾಗಿಲು
೫. ಕೊತ್ತಳ
೬. ಕಟ್ಟಡ

ಕೃಪೆ ಸುಜಾತಮಲ್ಲನಗೌಡ

ಪ್ರವೇಶ ಮಾರ್ಗ ಮಾತ್ರ ಉಳಿದಿವೆ. ಉತ್ತರ ದಿಕ್ಕಿನ ಬೆಟ್ಟ ಮತ್ತು ಆಗ್ನೇಯ ದಿಕ್ಕಿನ ಬೆಟ್ಟಗಳ ಮೇಲೆ ಒಂದೊಂದು ವೃತ್ತಾಕಾರದ ಒಂಟಿ ಕೊತ್ತಲಗಳಿವೆ. ಇವುಗಳ ಗೋಡೆಯ ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳಿವೆ.

ಉತ್ತರ ದಿಕ್ಕಿನ ಬೆಟ್ಟದ ಮೇಲೆ ದಕ್ಷಿಣ ದಿಕ್ಕಿಗೆ ವೃತ್ತಾಕಾರದ ಚಿಕ್ಕ ಕೋಟೆ ಗೋಡೆಯನ್ನು ಕಟ್ಟಿ ಇಲ್ಲಿಯ ಎರಡು ಕೋಟೆಗಳ ಮಧ್ಯದ ಸಮತಟ್ಟಾದ ಪ್ರದೇಶದಲ್ಲಿ ರಾಮಲಿಂಗೇಶ್ವರ ದೇವಾಲಯವನ್ನು ಮತ್ತು ಒಂದು ಚಿಕ್ಕ ಬಾವಿಯನ್ನು ಕಟ್ಟಿದ್ದಾರೆ. ಪೂರ್ವಾಭಿಮುಖವಾಗಿರುವ ದೇವಾಲಯವನ್ನು ಹಿಂದೂ-ಮುಸ್ಲಿಂ ಶೈಲಿಯಲ್ಲಿ ಕಲ್ಲು ಮತ್ತು ಗಾರೆಯಿಂದ ಕಟ್ಟಲಾಗಿದೆ.

ದೇವಾಲಯದ ಮುಂಭಾಗ ಮತ್ತು ಒಳಗಿನ ಅಂಕಣಗಳು ಕಮಾನುಗಳಿಂದ ನಿರ್ಮಿತವಾಗಿದೆ. ಕೈಪಿಡಿ ಗೋಡೆಯಲ್ಲಿ ಎಲೆಯಾಕಾರದ ಮೂರು ವಲಯಗಳ ತೆನೆಗಳು ಮತ್ತು ಮೂಲೆಯಲ್ಲಿ ನಂದಿಗಳಿವೆ. ಬಾವಿಯನ್ನು ಸಿಡಿಲುಬಾಯಿ/ಬಾವಿ ಎನ್ನುತ್ತಾರೆ. ಆಗ್ನೇಯ ಬೆಟ್ಟದ ಮೇಲೆ ದುರ್ಗಾ ದೇವಾಲಯವಿದೆ. ಊರೊಳಗೆ ಉತ್ತಾರಾಭಿಮುಖವಾದ ವೀರಭದ್ರ ದೇವಾಲಯವಿದೆ. ಇದನ್ನು ಸಹ ಹಿಂದೂ-ಮುಸ್ಲಿಂ ಶೈಲಿಯಲ್ಲಿ ಕಟ್ಟಿದೆ. ಮುಂಭಾಗದಲ್ಲಿ ಮೂರು ಕಮಾನುಗಳಿವೆ. ದೇವಾಲಯದ ಒಳಭಾಗದಲ್ಲಿ ಗರ್ಭಗೃಹದ ಸುತ್ತಲೂ ಪ್ರದಕ್ಷಿಣೆ ಮಾಡಲು ಅವಕಾಶವಿದೆ. ಊರೊಳಗೆ ಎರಡು ಮಸೀದಿಗಳಿವೆ. ಕೋಟೆಯ ಹೊರಗೆ ಗೊಂದದಲ್ಲಿ ಬಾಗಿಲ ಹತ್ತಿರ ಒಂದು ವೀರಗಲ್ಲಿದೆ. ಕುದುರೆಯ ಮೇಲೆ ಕುಳಿತ ವೀರನು ಮೇಲೆತ್ತಿದ ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿದ್ದಾನೆ(ರಾ. ಮತ್ತು ಕೊ.ಜಿ.ಕೋ. ಒಂದು ಅಧ್ಯಯನ-ಸುಜಾತ ಮಲ್ಲನಗೌಡ).

ಕರ್ನಾಟಕದ ಇತಿಹಾಸದ ಮೇಲೆ ಬೆಳಕು ಚೆಲ್ಲುವುದರ ಮೂಲಕ ಕರ್ನಾಟಕ ಸಂಸ್ಕೃತಿ ಮತ್ತು ಪರಂಪರೆಯನ್ನು ಸೂಚಿಸುವ ರಾಜಕೀಯ ಹಿನ್ನೆಲೆಯಲ್ಲಿ ನಿರ್ಮಾಣವಾದ ಕೋಟೆಗಳು ಆರಂಭದ ಕಾಲದಿಂದ ೧೯ನೇ ಶತಮಾನದವರೆಗೆ ನಿರಂತರವಾಗಿ ಬೆಳೆದುಬಂದಿದೆ. ಆದರೆ ಈ ಎಲ್ಲಾ ಕೋಟೆಗಳು ಅನೇಕ ಕಾರಣದಿಂದಾಗಿ ನಾಶವಾಗಿವೆ. ಆದರೂ ಇಂದಿಗೂ ಕೆಲವು ಕೋಟೆಗಳು ಉಳಿದುಕೊಂಡು ಬಂದಿವೆ. ವಿಶಾಲವಾದ ಕೋಟೆಗಳನ್ನು ಹೊಸ ವಿನ್ಯಾಸದೊಂದಿಗೆ ಪದೇ ಪದೇ ದುರಸ್ತಿ ಮಾಡುವುದರೊಂದಿಗೆ ಮೊದಲಿದ್ದ ಕೋಟೆಗಳ ರೂಪುರೇಷೆಗಳು ಇಂದು ಕಾಣುವುದಿಲ್ಲ.

ರಕ್ಷಣೆ ದೃಷ್ಟಿಯಿಂದ ಆಯಕಟ್ಟಿನ ಸ್ಥಳಗಳನ್ನು ಆಯ್ಕೆ ಮಾಡಿ ಕೋಟೆಗಳನ್ನು ಕಟ್ಟಲಾಗಿದೆ. ಹೆಚ್ಚಿನ ಕೋಟೆಗಳನ್ನು ಬೆಟ್ಟಗಳ ಮೇಲೆ ಕಟ್ಟಿದೆ. ಇಂತಹ ಬೆಟ್ಟಗಳು ನೈಸರ್ಗಿಕವಾಗಿ ರಕ್ಷಿಸುತ್ತವೆ. ಕೆಲವು ಕೋಟೆಗಳನ್ನು ನದಿಯ ದಂಡೆಯ ಮೇಲೆ ಕಟ್ಟಲಾಗಿದೆ. ಕೆಲವು ಕೋಟೆಗಳು ನಿರ್ದಿಷ್ಟವಾಗಿ ಚೌಕ, ಆಯತ, ವೃತ್ತ, ಅಥವಾ ದೀರ್ಘ ವೃತ್ತಾಕಾರದಲ್ಲಿವೆ. ಸಾಮಾನ್ಯವಾಗಿ ಅನೇಕ ಸುತ್ತುಗಳನ್ನು ಹೊಂದಿವೆ. ಯುದ್ಧ ಸಂದರ್ಭದಲ್ಲಿ ರಕ್ಷಣೆಯನ್ನು ಒದಗಿಸಲು ತುಂಬಾ ಸಹಾಯಕವಾಗಿವೆ.

ರಾಮದುರ್ಗ ಕೋಟೆ



೧. ಬಾಗಿಲು
೨. ಹನುಮಂತ ದೇವಾಲಯ
೩. ಮಸೀದಿ
೪. ಮಸೀದಿ
೫. ಬಾಗಿಲು
೬. ಕೊತ್ತಲ
೭. ದುರ್ಗಿ ದೇವಾಲಯ
೮. ರಾಮಲಿಂಗೇಶ್ವರ ದೇವಾಲಯ
೯. ಬಾವಿ

ಕೃಪೆ ಸುಜಾತಮಲ್ಲನಗೌಡ


ಗಬ್ಬೂರಿನ ಕೋಟೆ

ಗಬ್ಬೂರಿನಲ್ಲಿ ಕೂಡ ಹನ್ನೊಂದು ಮತ್ತು ಹದಿಮೂರನೆ ಶತಮಾನದ ಅವಧಿಯಲ್ಲಿ ನಿರ್ಮಾಣವಾದ ಕೋಟೆಯಿದ್ದು, ಇದು ಅನೇಕ ತರಹದ ಗಟ್ಟಿಕಲ್ಲು ಹಾಗೂ ಬಿಳಿ ಮತ್ತು ಕಪ್ಪು ಬೂದುಬಣ್ಣದ ಗುಂಡುಗಳಿಂದ ನಿರ್ಮಾಣವಾದ ಕೋಟೆಯಿದೆ.

ಗಬ್ಬೂರಿನಲ್ಲಿ ಆಯಾತಾಕಾರದ ಶಿಥಿಲಾವಸ್ಥೆಯಲ್ಲಿರುವ ನೆಲಮಟ್ಟದ ಕೋಟೆಯಿದೆ. ದಕ್ಷಿಣ ಭಾಗದ ಗೋಡೆಯು ನೇರವಾಗಿಲ್ಲ. ಪೂರ್ವದಿಂದ ಪಶ್ಚಿಮಕ್ಕೆ ಸ್ವಲ್ಪ ದೂರ ಹೋಗಿ ಲಂಬಕೋನದಲ್ಲಿ ಉತ್ತರಕ್ಕೆ ತಿರುಗಿ ಸ್ವಲ್ಪ ಮುಂದೆ ಹೋಗಿ ಪುನಃ ಲಂಬಕೋನದಲ್ಲಿ ಪಶ್ಚಿಮಕ್ಕೆ ತಿರುಗಿ ಮುಂದೆ ಹೋಗುತ್ತದೆ. ದಕ್ಷಿಣ ಗೋಡೆಯಲ್ಲಿ ಮಾತ್ರ ಆಯತಾಕಾರದ ಕೊತ್ತಲಗಳಿವೆ. ಉಳಿದ ಗೋಡೆಗಳಲ್ಲಿ ಕೊತ್ತಳಗಳಿಲ್ಲ. ದಕ್ಷಿಣ ಗೋಡೆಯ ನಿರ್ಮಾಣ ವಿಶಿಷ್ಟವಾಗಿದೆ. ಗಟ್ಟಿಯಾದ ಕಪ್ಪುಗುಂಡು ಕಲ್ಲುಗಳನ್ನು ಬಿಳಿಯ ಕಲ್ಲುಗಳನ್ನು ವಿವಿಧ ರೀತಿಯಲ್ಲಿ ಇಲ್ಲಿ ಬಳಸಲಾಗಿದೆ. ಕೆಲವು ಗುಂಡುಕಲ್ಲುಗಳನ್ನು ಹಾಗೆಯೇ ಬಳಸಿದರೆ ಕೆಲವು ಕಲ್ಲುಗಳ ಒಂದು, ಎರಡು, ಮೂರು ಅಥವಾ ನಾಲ್ಕು ಬದಿಗಳನ್ನು ಅವಶ್ಯಕತೆಗನುಗುಣವಾಗಿ ಸಪಾಟಾಗಿ ಕೆತ್ತಿ ಬಳಸಿದೆ. ಕಲ್ಲುಗಳು ಅನಿಯಮಿತಾಕಾರದಲ್ಲಿರುವುದರಿಂದ ಕಲ್ಲುಗಳ ಮಧ್ಯದಲ್ಲಿ ದೊಡ್ಡ ಸಂದಿಗಳುಂಟಾಗಿವೆ. ಸಂದಿಗಳಲ್ಲಿ ಅವಶ್ಯಕತೆಗೆ ತಕ್ಕಂತಹ ದೊಡ್ಡ ಮತ್ತು ಚಿಕ್ಕ ಕಲ್ಲು ಹಾಗೂ ಚೆಕ್ಕೆಗಳನ್ನು ಬಳಸಿದೆ. ಇಲ್ಲಿ ಗಾರೆಯನ್ನು ಉಪಯೋಗಿಸಿಲ್ಲ. ಇಂತಹ ರಚನೆಯ ಕೋಟೆಯನ್ನು ಹೊಯ್ಸಳರ ರಾಜಧಾನಿಯಾಗಿದ್ದ ಹಳೇಬಿಡಿನಲ್ಲಿ ನೋಡಬಹುದು. ಆದುದರಿಂದ ಇದರ ಕಾಲವನ್ನು ಹನ್ನೆರಡು ಹದಿಮೂರನೇ ಶತಮಾನಗಳೆಂದು ನಿರ್ಧರಿಸಲಾಗಿದೆ. ಎರಡನೆಯ ಕೊತ್ತಳದ ಒಂದು ಕಲ್ಲಿನ ಮೇಲೆ ಉಬ್ಬುಶಿಲ್ಪವಿದೆ. ಶಿಲ್ಪದಲ್ಲಿ ಒಬ್ಬ ವೀರನು ಆನೆಯೊಂದಿಗೆ ಹೋರಾಡುತ್ತ ಆನೆಯನ್ನು ಸದೆ ಬಡಿದು ಅದರ ಎರಡು ಕಾಲುಗಳನ್ನು ಹಿಡಿದು ಮೇಲೆತ್ತಿದ್ದಾನೆ. ಉಳಿದ ಮೂರು ದಿಕ್ಕಿನ ಕೋಟೆ ಗೋಡೆಯನ್ನು ಚೌಕಾಕಾರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳನ್ನು ಸರಿಯಾಗಿ ಕೆತ್ತದೆ ಇರುವುದರಿಂದ ಮಧ್ಯದಲ್ಲಿ ದೊಡ್ಡ ಸಂದಿಗಳಾಗಿವೆ. ಇಲ್ಲಿ ಬೆಣಚುಕಲ್ಲನ್ನು(Granite) ಉಪಯೋಗಿಸಿದೆ. ಇದನ್ನು ಹದಿನಾರು ಹದಿನೇಳನೆಯ ಶತಮಾನದಲ್ಲಿ ಕಟ್ಟಿದೆ. ಕೋಟೆಯನ್ನು ಪ್ರವೇಶಿಸಲು ಐದು ಬಾಗಿಲುಗಳಿವೆ. ಪೂರ್ವದಿಕ್ಕಿನಲ್ಲಿರುವ ಮೂರು ಬಾಗಿಲುಗಳನ್ನು ತಿಮ್ಮಾಪುರ ಅಗಸಿ, ರಾಯಚೂರು ಅಗಸಿ, ಸಿರವಾರ ಅಗಸಿ, ಪಶ್ಚಿಮ ದಿಕ್ಕಿನಲ್ಲಿರುವ ಬಾಗಿಲನ್ನು ದೇವದುರ್ಗ ಅಗಸಿ ಮತ್ತು ಉತ್ತರ ದಿಕ್ಕಿನಲ್ಲಿರುವುದನ್ನು ಖಾನಾಪುರ ಆಗಸಿ ಎಂದು ಕರೆಯುವರು. ರಾಯಚೂರು ಅಗಸಿಗೆ ಬಾಗಿಲು ಚೌಕಟ್ಟಿಲ್ಲ. ಗೋಡೆಯ ಸಾಧಾರಣ ಕಲ್ಲುಗಳು ಮುಂದೆ ಚಾಚಿ ಬೋದುಗೆಗಳಾಗಿವೆ. ಉಳಿದ ಬಾಗಿಲುಗಳು ಶಿಥಿಲವಾಗಿವೆ. ಗ್ರಾಮದ ಒಳಗೆ ಎರಡು ಬಾಗಿಲುಗಳಿವೆ. ಇವುಗಳ ಪಕ್ಕದಲ್ಲಿ ಈಗ ಮನೆಗಳಿರುವುದರಿಂದ ಕೋಟೆಗೋಡೆ ಉಳಿದಿಲ್ಲ. ಒಂದು ಬಾಗಿಲು ದಕ್ಷಿಣ ಭಾಗದಲ್ಲಿ ಮತ್ತೊಂದು

ಮಧ್ಯಭಾಗದಲ್ಲಿ ಇದೆ. ದಕ್ಷಿಣ ಭಾಗದ ವೀರಭದ್ರ ಅಗಸಿಯನ್ನು ದೇವಾಲಯದಿಂದ ತಂದ ಕಲ್ಲುಗಳಿಂದ ಕಟ್ಟಿದೆ. ಕಂಬಗಳನ್ನು ತೋಳುಗಳನ್ನಾಗಿಟ್ಟು ಅವುಗಳ ಮೇಲೆ ಒಂದು ತೊಲೆಯನ್ನಿಟ್ಟು ಕಟ್ಟಿದೆ. ತೊಲೆಯ ಮೇಲೆ ಚೌಕಾಕಾರದ ಹೂಗಳಿರುವ ಪಟ್ಟಿಕೆಯಿದೆ. ಇದನ್ನು ಸಾಮಾನ್ಯವಾಗಿ ಅಧಿಷ್ಠಾನದಲ್ಲಿ ಕಾಣಬಹುದು. ಅದರೆ ಅದಕ್ಕಿಂತ ದೊಡ್ಡ ಕೀರ್ತಿಮುಖವಿದೆ. ತೋಳುಗಳ ಪಕ್ಕದಲ್ಲಿ ನಾಗರ ದೇವಾಲಯದ ಮಾದರಿಯನ್ನು ಹೊತ್ತ ಕಂಬವಿರುವ ಗೋಡೆಯ ಕಲ್ಲನ್ನು ಅಲಂಕಾರಕ್ಕಾಗಿ ಜೋಡಿಸಿದೆ. ಹನ್ನೊಂದನೇ ಶತಮಾನದ ದೇವಾಲಯದ ಕಲ್ಲುಗಳನ್ನು ಇಲ್ಲಿ ಪುನಃ ಬಳಸಲಾಗಿದೆ. ಊರ ಮಧ್ಯದಲ್ಲಿರುವ ಕಚೇರಿ ಅಗಸಿ ಕಮಾನಿನಾಕಾರದಲ್ಲಿದೆ. ಅಲ್ಲಲ್ಲಿ ಗಾರೆಯನ್ನು ಬಳಸಲಾಗಿದೆ. ಚೆನ್ನಾಗಿ ನಯಗೊಳಿಸಿದ ಕಲ್ಲುಗಳಿಂದ ಕಟ್ಟಿದ ಈ ಬಾಗಿಲು ಹದಿನೇಳು ಹದಿನೆಂಟನೇ ಶತಮಾನದ್ದು(ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳು ಒಂದು ಅಧ್ಯಯನ, ಸುಜಾತ ಮಲ್ಲನಗೌಡ). ಅಗಸಿಯ ಪೂರ್ವದ ಗೋಡೆಯಲ್ಲಿ ಜಗದೇಕಮಲ್ಲನು ಕ್ರಿ.ಶ.೧೧೪೫ರ ಶಾಸನದ ಕಲ್ಲನ್ನು ಜೋಡಿಸಲಾಗಿದೆ. ಈ ಅಗಸಿಯ ಅಕ್ಕಪಕ್ಕದಲ್ಲಿ ಕೇಶವ ದೇವಾಲಯ ಹಾಗೂ ನೀಲಕಂಠೇಶ್ವರ ದೇವಾಲಯಗಳಿವೆ.

ಗಬ್ಬೂರಿನ ಕೋಟೆ ಮತ್ತು ಅಗಸಿ ಹಾಗೂ ಬಾವಿಗಳು



೧. ಸಿರಿವಾರ ಅಗಸಿ	೮. ಸಕ್ರಿ ಬಾವಿ
೨. ರಾಯಚೂರ ಅಗಸಿ	೯. ಸುಬ್ಬಣ್ಣ ಬಾವಿ
೩. ತಿಮ್ಮಾಪುರ ಅಗಸಿ	೧೦. ಸಿಡಿಲು ಬಾವಿ
೪. ಖಾನಪುರ ಅಗಸಿ	೧೧. ಮಹಾನಂದೇಶ್ವರ ಬಾವಿ
೫. ದೇವದುರ್ಗ ಅಗಸಿ	೧೨. ಹಂಪಣ್ಣ ಬಾವಿ
೬. ಕಚೇರಿ ಅಗಸಿ	೧೩. ನಾಗರಬಾವಿ
೭. ವೀರಭದ್ರೇಶ್ವರ ಅಗಸಿ	೧೪. ಕೊರವರ ಬಾವಿ



ರಾಮದುರ್ಗ ಕೋಟೆಯ ಕೊತ್ತಲ



ಬೆಣಕಲ್ ಗ್ರಾಮದ ಕೊತ್ತಲ



ಹುನುಗುಂದಾಬಾಡಾದಕೊತ್ತಲ



ಚಂದನಕೇರಿಯ ದ್ವಾರ ಬಾಗಿಲು (ಹಿಂಬಾಗ)



ಚಂದನ ಕೇರಿಯ ದ್ವಾರ ಬಾಗಿಲು (ಮುಂಬಾಗ)



ಜಾಗಟಕಲ್ ಬಸವೇಶ್ವರ ದೇವಾಲಯದ ದ್ವಾರ ಬಾಗಿಲು



ಕಛೇರಿ ಅಗಸಿ ಗಬ್ಬೂರು



ಅರಮನೆಯ ಒಳಗಿನ ಭಾಗ ದೇವದುರ್ಗ (ದರ್ಬಾರ್)



ಅರಮನೆಯ ಕಂಬಗಳು ದೇವದುರ್ಗ



ಅರಮನೆಯ ಮುಂಬಾಗ ದೃಶ್ಯ ದೇವದುರ್ಗ

ಪುಷ್ಕರಣಿಗಳು

ದೇವದುರ್ಗ ತಾಲ್ಲೂಕಿನ ಐತಿಹಾಸಿಕ ಸ್ಮಾರಕಗಳಲ್ಲಿ ಪುಷ್ಕರಣಿಗಳು ಮುಖ್ಯವಾಗಿವೆ. ದೇವದುರ್ಗ ಪ್ರದೇಶದಲ್ಲಿ ಬರುವ ಅನೇಕ ಗ್ರಾಮಗಳಲ್ಲಿ ದೇವಾಲಯ ಹಾಗೂ ಅದಕ್ಕೆ ಸಂಬಂಧಿಸಿದಂತೆ ಇರುವ ಪುಷ್ಕರಣಿಯನ್ನು ನಾವು ನೋಡಬಹುದು.

ದೇವದುರ್ಗ ಪ್ರದೇಶದ ಅನೇಕ ಶಾಸನಗಳನ್ನು ನೋಡಿದಾಗ ಆ ಶಾಸನಗಳಲ್ಲಿ ದೇವರಿಗೆ ಮತ್ತು ದೇವಸ್ಥಾನಗಳಿಗೆ ದಾನ ಬಿಟ್ಟ ವಿಷಯ ತಿಳಿದುಬರುತ್ತದೆ. ಅಂದರೆ ಶಾಸನಗಳಲ್ಲಿರುವ ದೇವಾಲಯದ ಉಲ್ಲೇಖಗಳ ಜೊತೆಗೆ, ಕೆರೆಯ ಉಲ್ಲೇಖ, ಕೋಟೆಯ ಉಲ್ಲೇಖವಿದೆ. ಆದರೆ ಈ ಪುಷ್ಕರಣಿಗಳ ಉಲ್ಲೇಖವಿರುವುದಿಲ್ಲ. ಅಂದರೆ ಈ ಪುಷ್ಕರಣಿ ನಿರ್ಮಾಣ ಕಾಲದ ಹೆಸರು, ಇಲ್ಲದಿದ್ದರೂ ಆ ದೇವಾಲಯದ ನಿರ್ಮಾಣ ಕಾಲದ ಉಲ್ಲೇಖವಿದೆ. ಈ ಒಂದು ಆಧಾರದ ಮೇಲೆ ಈ ಪುಷ್ಕರಣಿಯ ಕಾಲ, ಅವಧಿಯನ್ನು ನಿಗದಿಪಡಿಸಬಹುದಾಗಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಕರ್ನಾಟಕವನ್ನು ಆಳ್ವಿಕೆ ಮಾಡಿದ ಅರಸರು ಮತ್ತು ಶರಣರು, ಸಂತರು, ಕರ್ನಾಟಕದಲ್ಲಿ ನೆಲೆಸಿದ್ದರಿಂದ ಇವರು ತಮ್ಮ ಆರಾಧ್ಯ ದೇವರ ಪೂಜೆಗಾಗಿ ಪುಷ್ಕರಣಿಯನ್ನು ನಿರ್ಮಿಸುವ ಪದ್ಧತಿ ಬೆಳಸಿಕೊಂಡು ಬಂದರು. ಪ್ರತಿಯೊಂದು ದೇವಾಲಯ ಹಾಗೂ ಮಠಮಂದಿರಗಳಲ್ಲಿ ಒಳಗೆ ಅಥವಾ ಹೊರಗಡೆಯಲ್ಲಿ ಇಂತಹ ಒಂದು ಪುಷ್ಕರಣಿಯನ್ನು ಕಾಣಬಹುದು.

ಕೇವಲ ಧರ್ಮದ ಕಾರ್ಯಗಳಿಗಾಗಿ ಅಲ್ಲದೆ, ಸಮಾಜದ ಜನರ ಜೀವನಕ್ಕಾಗಿ, ಊರುಗಳಲ್ಲಿ ಅನೇಕ ಭಾವಿಗಳನ್ನು ನಿರ್ಮಿಸಿದ್ದಾರೆ. ಕರ್ನಾಟಕವನ್ನು ಆಳಿದ ಅರಸರು ಈ ಪುಷ್ಕರಣಿಯನ್ನು ನಿರ್ಮಿಸಿದ್ದರು. ಈ ಪುಷ್ಕರಣಿಗಳು ಚೌಕಾಕಾರದಲ್ಲಿ ಅಥವಾ ಗೋಲಾಕಾರದಲ್ಲಿ ನಿರ್ಮಿಸಿದ್ದು, ಕಲ್ಲುಗಳಿಂದ ಕಟ್ಟಲಾಗುತ್ತಿತ್ತು. ಕೆಲವು ಪುಷ್ಕರಣಿಗಳು ನೈಸರ್ಗಿಕವಾಗಿ ಸಿಡಿಲಿನಿಂದ ನಿರ್ಮಿತವಾದ ಪುಷ್ಕರಣಿಗಳಿವೆ. ಸಾಧಾರಣವಾಗಿ ಪುಷ್ಕರಣಿಗಳಲ್ಲಿ ನೀರನ್ನು ತರಲು ಮೆಟ್ಟಿಲು ಮತ್ತು ಗಿರಿಕಿಗಳನ್ನು ಮಾಡಲಾಗಿದೆ. ಇವು ಸುಮಾರು ೨೦ ರಿಂದ ೯೦ ಅಡಿ ಆಳದವರೆಗೆ ಇರುತ್ತವೆ. ಇಂತಹ ಪುಷ್ಕರಣಿಗಳು ದೇವದುರ್ಗದ ಅನೇಕ ಗ್ರಾಮಗಳಲ್ಲಿವೆ.

೧. ರಾಮದುರ್ಗ ತಿಮ್ಮಜ್ಜನ ಬಾವಿ

ದೇವದುರ್ಗ ತಾಲ್ಲೂಕಿನ ಗಬ್ಬೂರ ಹೋಬಳಿಯಲ್ಲಿ ಬರುವ ರಾಮದುರ್ಗದಲ್ಲಿಯೂ ಅನೇಕ ಐತಿಹಾಸಿಕ ಸ್ಮಾರಕಗಳನ್ನು ನೋಡಬಹುದಾಗಿದೆ. ಅದರಲ್ಲಿ ಅನೇಕ ಪುಷ್ಕರಣಿಗಳು ಸಹ ಒಂದಾಗಿವೆ. ಇವು ಅಂದಿನ ದೇವಾಲಯಗಳ ತೀರ್ಥಗಳಾಗಿದ್ದವು.

ರಾಮದುರ್ಗ ಗ್ರಾಮ ಪೂರ್ವ ಭಾಗದಲ್ಲಿರುವ ತಿಮ್ಮಜ್ಜನ ಬಾವಿಯು ಅತಿ ಸುಂದರವಾಗಿದ್ದು, ಅನೇಕ ಕಲಾ ನೈಪುಣ್ಯತೆಯಿಂದ ಕೂಡಿದ ಪುಷ್ಕರಣಿಯಾಗಿದೆ. ಇದು ಚೌಕಾಕಾರದಲ್ಲಿದ್ದು, ಈ ಬಾವಿಯನ್ನು ಗಟ್ಟಿ ಬಿಳಿಯ ಕಲ್ಲಿನಿಂದ ಕಟ್ಟಿದ್ದು, ಉತ್ತರ ಭಾಗದಲ್ಲಿ ಸ್ವಲ್ಪ ಸಣ್ಣದಾದ ೮ ಪಾವಟಿಗೆಗಳು, ದಕ್ಷಿಣದಲ್ಲಿ ವಿಶಾಲವಾದ ೨೧ ಅನೇಕ ಪಾವಟಿಗೆಗಳು ಇವೆ. ಎರಡು ಸಾಲುಗಳಲ್ಲಿ ಒಟ್ಟು ೨೭ ದೊಡ್ಡ ಕಂಬಗಳನ್ನು ಹಾಗೂ ಭಿತ್ತಿ ಕಂಬಗಳನ್ನು ಹೊಂದಿರುವ ದೊಡ್ಡ ಮಂಟಪವಿದೆ. ಈ ಮಂಟಪವು ಎರಡು ದೊಡ್ಡದಾದ ದೇವಕೋಷ್ಠಗಳನ್ನು ಹೊಂದಿದೆ. ಇದರ ಕಂಬಗಳು ಮಂಟಪ ಮತ್ತು ಬಾವಿಯ ಕಲ್ಲುಗಳನ್ನು ನೋಡಿದಾಗ ಇದು ಚಾಲುಕ್ಯರ ಶೈಲಿಯನ್ನು ಹೊಂದಿದ್ದರಿಂದ ಇವರ ಕಾಲದಲ್ಲಿ ನಿರ್ಮಿತವಾದ ಒಂದು ಪುಷ್ಕರಣಿಯಾಗಿದೆ.

೨. ಸಿಡಿಲುಬಾವಿ

ರಾಮದುರ್ಗ ಬೆಟ್ಟದಲ್ಲಿ ರಾಮಲಿಂಗೇಶ್ವರ ದೇವಾಲಯದ ಎದುರಿನಲ್ಲಿ ದೊಡ್ಡದಾದ ಬಂಡೆಗಲ್ಲಿನಲ್ಲಿ, ಅತಿ ಸುಂದರವಾಗಿರುವ ಪುಷ್ಕರಣಿ ಇದೆ. ಇದನ್ನು "ಸಿಡಿಲು ಬಾವಿ" ಎಂದು ಕರೆಯುತ್ತಾರೆ. ಇದು ನೈಸರ್ಗಿಕವಾಗಿ ಮಾಡಿದ ಬಾವಿಯಾಗಿದ್ದು, ಇದು ರಾಮಲಿಂಗೇಶ್ವರ ದೇವಾಲಯದ ತೀರ್ಥವಾಗಿದೆ. ಇಲ್ಲಿ ಎಲ್ಲಾ ಕಾಲಕ್ಕೂ ನೀರು ತುಂಬಿರುತ್ತವೆ. ಅದರಲ್ಲಿ ಮಳೆಗಾಲದಲ್ಲಿ ಅತಿ ಹೆಚ್ಚು ನೀರು ಇರುತ್ತವೆ. ಈ ಬೆಟ್ಟದಲ್ಲಿ ಐತಿಹಾಸಿಕ ಸ್ಮಾರಕಗಳಾದ ಕೊತ್ತಲ ಮತ್ತು ರಾಮಲಿಂಗೇಶ್ವರ ದೇವಾಲಯ ಹಾಗೂ ಕ್ರಿ.ಶ.೧೬೧೬ ಕಾಲದ ಒಂದು ಶಾಸನವನ್ನು ಬಂಡೆಯಲ್ಲಿ ಬರೆಯಲಾಗಿದೆ.

೩. ಗೆಜ್ಜೆಬಾವಿ ಗ್ರಾಮದ ಅತ್ತಿರಮ್ಮ ಪುಷ್ಕರಣಿ

ದೇವದುರ್ಗದಿಂದ ೧೫ ಕಿ.ಮೀ. ದೂರದಲ್ಲಿರುವ ಗೆಜ್ಜೆಬಾವಿ ಒಂದು ಗ್ರಾಮವಾಗಿದೆ. ಇಲ್ಲಿಯ ಅನೇಕ ದೇವಾಲಯಗಳು ಹಾಗೂ ಪುಷ್ಕರಣಿಗಳು ಕಾಣಬಹುದು. ಗೆಜ್ಜೆಬಾವಿಯ ದಾರಿಯ (ಉತ್ತರ) ಎಡಭಾಗದಲ್ಲಿ "ಅತ್ತಿರಮ್ಮ" ಎಂಬ ಬಾವಿಯನ್ನು ಕಾಣಬಹುದು. ಇದು ಅನೇಕ ಕಲ್ಲುಗಳಿಂದ ಕೂಡಿದ್ದು ಚೌಕಾಕಾರದಲ್ಲಿದೆ. ಅನೇಕ ಮೆಟ್ಟಿಲುಗಳಿದ್ದು, 'ಮ್ಯಾಟೆಯು' ಇದಕ್ಕೆ ಇದೆ. ಅಂದರೆ ನೀರನ್ನು ಮೇಲೆ ಎಳೆಯಲು ಮಾಡಿರುವ ಒಂದು ವ್ಯವಸ್ಥೆ ಇದಕ್ಕೆ ನೀರಿನ ಬುಗ್ಗೆಯಿದ್ದು ಸದಾಕಾಲ ನೀರಿನಿಂದ ತುಂಬಿರುತ್ತವೆ.

೪. ಮಾನಸಗಲ್ಲು ರಂಗನಾಥ ಸ್ವಾಮಿಯ ಪುಷ್ಕರಣಿ

ದೇವದುರ್ಗ ತಾಲ್ಲೂಕಿನ ಐತಿಹಾಸಿಕ ಸ್ಥಳವಾದ "ಮಾನಸಗಲ್ಲು" ಒಂದಾಗಿದೆ. ಈ ಗ್ರಾಮದಲ್ಲಿ ಊರಿನ ಹೊರಗಡೆಯಲ್ಲಿ ಒಂದು ಪ್ರಮುಖ ದೇವಾಲಯದ "ಮಾನಸಗಲ್ ರಂಗನಾಥಸ್ವಾಮಿ" ಎಂದು ಕರೆಯುವ ಗುಡಿ ಇದೆ. ಈ ದೇವಾಲಯದ ತೀರ್ಥವಾಗಿರುವ ಒಂದು ಪುಷ್ಕರಣಿ ಇದೆ. ಇದು

ದೇವಾಲಯದ ಎಡಭಾಗದಲ್ಲಿದೆ. ಇದು ಚೌಕಾಕಾರದಲ್ಲಿದ್ದು, ಗಟ್ಟಿ ಕಲ್ಲುಗಳಿಂದ ನಿರ್ಮಿತವಾಗಿದೆ. ಕಲ್ಲಿನ ರಂಧ್ರಗಳಲ್ಲಿ ಗಾರೆಯಿಂದ ತುಂಬಲಾಗಿದೆ.

ಮಾನಸಗಲ್ಲಿನ ಸುಂದರ ಪುಷ್ಕರಣಿ ಆಗಿದ್ದು, ಇದಕ್ಕೆ ಕೆಳಗೆ ಇಳಿದು ಹೋಗಿ ನೀರು ತುಂಬಲು/ತರಲು ಅನೇಕ ಕಲ್ಲಿನ ಮೆಟ್ಟಿಲುಗಳನ್ನು ಮಾಡಲಾಗಿದೆ. ಈಗ ನೀರು ಮೇಲಿನಿಂದ ಎಳೆಯಲು ಒಂದು ಗಿರಿಕಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಎತ್ತರದಲ್ಲಿ ವಿಶಾಲವಾದ ಕಟ್ಟೆಯನ್ನು ಕಾಣಬಹುದು. ಇದರ ಸುತ್ತಲು ಕಲ್ಲು ಗಾರೆಯಿಂದ ಕಟ್ಟಿದ ಗೋಡೆಯನ್ನು ನಿರ್ಮಿಸಲಾಗಿದೆ.

ರಂಗನಾಥ ಸ್ವಾಮಿಯ ದೇವಾಲಯದ ಎದುರಿನಲ್ಲಿ ಒಂದು ಆಂಜನೇಯ ದೇವಾಲಯವಿದೆ. ಇದರ ಹಿಂದಿನ ಭಾಗದಲ್ಲಿ ಒಂದು ದೊಡ್ಡದಾದ ಪುಷ್ಕರಣಿ ಇದೆ. ಇದು ಚೌಕಾಕಾರದಲ್ಲಿದ್ದು, ಕೆಳಗೆ ಇಳಿದು ಹೋಗಲು ಮೆಟ್ಟಿಲುಗಳ ವ್ಯವಸ್ಥೆ ಇದ್ದು, ಈಗ ಆ ಮೆಟ್ಟಿಲುಗಳನ್ನು ಇಳಿದು ಹೋಗುವಲ್ಲಿ ಗೋಡೆ ನಿರ್ಮಿಸಿ ದಾರಿಯನ್ನು ಬಂದ್ ಮಾಡಲಾಗಿದೆ. ಅದರ ಬದಲಾಗಿ ಆರು ನೀರು ಎಳೆಯುವ ಗಿರಿಕಿ(ಚಕ್ರಗಳನ್ನು) ಮಾಡಲಾಗಿದೆ.

೫. ಸಕ್ರಿಬಾವಿ

ಗಬ್ಬೂರು ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಈ ಸಕ್ರಿಬಾವಿಯ ಮೇಲೆ ಶಂಕರ ದೇವಸ್ಥಾನದ ಮುಂದೆ ಇದೆ. ಇದು ಮೇಲಶಂಕರ ದೇವಾಲಯದ ಮುಂದೆ ಇರುವುದರಿಂದ ಇದಕ್ಕೆ ಮೊದಲು ಶಂಕರಬಾವಿ ಎಂದು ಇತ್ತು. ಅನಂತರ ಜನರ ವಾಡಿಕೆಯಲ್ಲಿ ಶಂಕರ, ಶಂಕರಬಾವಿ ಬದಲಾಗಿ ಸಕ್ರಿಬಾವಿಯಾಗಿ ಮಾರ್ಪಟ್ಟಿತೆಂದು ಹೇಳುತ್ತಾರೆ.

ಈ ದೊಡ್ಡದಾದ ಪುಷ್ಕರಣಿ ಮೇಲಶಂಕರ ದೇವಾಲಯದ ಉತ್ತರ ದಿಕ್ಕಿನಲ್ಲಿದ್ದು ಇದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮೇಲಶಂಕರ ದೇವರ ಪೂಜೆಗೆ ಮತ್ತು ಜನರು ಬಳಸಲು ಈ ಬಾವಿಯ ನೀರನ್ನು ಉಪಯೋಗಿಸುತ್ತಿದ್ದರು. ಇದರ ಪಶ್ಚಿಮ ಮತ್ತು ಪೂರ್ವದ ಮೆಟ್ಟಿಲುಗಳ ಬಳಿ ನೀರಿನ ಎರಡು ಬುಗ್ಗೆಗಳಿದ್ದು, ಶುದ್ಧವಾದ ನೀರಿನಿಂದ ತುಂಬಿರುತ್ತಿತ್ತು. ಆದರೆ ಈ ನೀರಿನ ಬುಗ್ಗೆ ಇಲ್ಲವಾಗಿದೆ. ಅದರ ಬದಲಾಗಿ ಮಳೆಯ ನೀರಿನಿಂದ ತುಂಬಿರುತ್ತದೆ. ಈಗ ಇಲ್ಲಿಯ ಜನರು ಬಟ್ಟೆ ದನಕರುಗಳಿಗೆ ಮಾತ್ರ ಈ ನೀರನ್ನು ಉಪಯೋಗಿಸುತ್ತಾರೆ. ಈ ಪುಷ್ಕರಣಿಗೆ ನಾಲ್ಕು ದಿಕ್ಕಿನ ಕಡೆಗೆ ಕಲ್ಲಿನಿಂದ ಮೆಟ್ಟಿಲುಗಳನ್ನು ನಿರ್ಮಾಣ ಮಾಡಿದ್ದು, ಒಳಗೆ ಹೋಗಿ ನೀರು ತುಂಬಿ ತರಲು ಅನುಕೂಲವಾಗಿದೆ. ಈ ಪುಷ್ಕರಣಿ ವಿಶಾಲವಾಗಿದ್ದು, ಈಗ ಪಶ್ಚಿಮ ಮತ್ತು ಪೂರ್ವದ ಕಡೆಗಿನ ಮೆಟ್ಟಿಲುಗಳು ಸ್ವಲ್ಪ ಕುಸಿದಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಗಬ್ಬೂರಿನಲ್ಲಿರುವ ಬೃಹತ್ ಪುಷ್ಕರಣಿಯಾಗಿದೆ(ದೇವದುರ್ಗ ತಾಲೂಕಿನ ಒಂದು ಸಾಂಸ್ಕೃತಿಕ ಅಧ್ಯಯನ, ಚನ್ನಬಸಪ್ಪ. ಬಿ).

೬. ಏಳುಬಾವಿ

ಹೆಸರೇ ಸೂಚಿಸುವಂತೆ ಈ ಬಾವಿಯಲ್ಲಿ ಏಳು ಪುಷ್ಕರಣಿಗಳಿರುವುದರಿಂದಲೇ ಇದಕ್ಕೆ ಏಳುಬಾವಿ ಎಂದು ಕರೆಯುತ್ತಾರೆ. ಅಂದರೆ ಒಂದೇ ಗುಂಡಾದಲ್ಲಿ (ತೆಗ್ಗು) ಏಳು ಪುಷ್ಕರಣಿಗಳಿದ್ದು, ಒಂದೊಂದು ಪುಷ್ಕರಣಿಯು ಒಂದೊಂದು ದೇವಾಲಯದ ತೀರ್ಥಗಳಾಗಿದ್ದವೆಂದು ತಿಳಿದುಬರುತ್ತದೆ. ಬಾವಿಯ ದಡದ ಮೇಲೆ ಏಳು ಬಾವಿ ಬಸವಣ್ಣ, ಹರಿಹರ, ವೆಂಕಟೇಶ್ವರ, ಈಶ್ವರ ಹೀಗೆ ಏಳು ದೇವಾಲಯದ ತೀರ್ಥಗಳೇ ಈ ಏಳು ಬಾವಿಗಳಾಗಿವೆ. ಏಳು ಬಾವಿ ಬಸವಣ್ಣ ದೇವರ ಮುಂದೆ ಇರುವ ಶಾಸನದಲ್ಲಿ ಈ ಏಳು ಬಾವಿಗೆ ನೀರಕೋಟೆಯೆಂದು ಕರೆಯಲಾಗಿದೆ. ಅಂದರೆ ಬಾವಿಯ ಪಕ್ಕದಲ್ಲಿ ದಕ್ಷಿಣ, ಪಶ್ಚಿಮಕ್ಕೆ ಕೋಟೆ ಇದೆ. ಆದ್ದರಿಂದ ಇದಕ್ಕೆ ನೀರಕೋಟೆಯೆಂದು ಹೆಸರುಬಂದಿದೆ. ಈ ಪುಷ್ಕರಣಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. ಏಕೆಂದರೆ ಈ ಬಾವಿಯ ಉತ್ತರ ದಡದಲ್ಲಿರುವ ದೇವಾಲಯದ ಶಾಸನಗಳಲ್ಲಿ ಉಲ್ಲೇಖಿತವಾಗಿದೆಯೆಂದು ತಿಳಿದುಬರುತ್ತದೆ.

ಈ ಏಳು ಬಾವಿಗಳು ಬಹಳ ವಿಶಾಲವಾಗಿದ್ದು, ಈಗ ಸದ್ಯ ನೋಡುವುದಕ್ಕೆ ಒಂದೇ ಬಾವಿ ಇದ್ದು, ಉಳಿದ ೬ ಬಾವಿಗಳ ಅವಶೇಷಗಳು ಕಾಣದಾಗಿವೆ. ಅಂದರೆ ಇವೆಲ್ಲಾ ಬಾವಿಗಳು ಒಂದೇ ಬಾವಿಯಲ್ಲಿ ನಿರ್ಮಾಣವಾದಂತೆ ಕಾಣುತ್ತದೆ. ಬಾವಿಯ ಗೋಡೆಗಳನ್ನು ಬೇರೆ ಬೇರೆ ಕಲ್ಲುಗಳಿಂದ ನಿರ್ಮಿಸಿದ್ದರು. ಇವೆಲ್ಲವುಗಳು ಈಗ ನಾಶವಾಗುತ್ತಲಿವೆ. ಸದ್ಯಕ್ಕೆ ಈ ಬಾವಿಗೆ ಪೂರ್ವದಲ್ಲಿ ಒಂದು ತೂಬು, ಪಶ್ಚಿಮದಲ್ಲಿ ಒಂದು ತೂಬು ಇದ್ದು ಮಳೆಗಾಲದಲ್ಲಿ ಈ ತೂಬುಗಳ ಮೂಲಕ ನೀರು ಬಾವಿಯ ಒಳಕೆ ಬರುತ್ತವೆ.

೭. ಸಿಡಿಲು ಬಾವಿ

ಹೆಸರೇ ಸೂಚಿಸುವಂತೆ ಇದು ಮಾನವರ ನಿರ್ಮಾಣವಲ್ಲ. ಇದು ನೈಸರ್ಗಿಕ ಕೊಡುಗೆಯಾಗಿದೆ. ಅಂದರೆ ಸಿಡಿಲು ಬಿದ್ದು ಮೂಡಿರುವ ಬಾವಿ. ಈ ಸಿಡಿಲು ಬಾವಿಯು ಸೂಗೂರೇಶ್ವರ ಬೆಟ್ಟದಲ್ಲಿದೆ. ಈ ಬಾವಿಯು ಒಂದು ಹಣ್ಣಿನ ಹೋಳಿನಾಕಾರದಂತಿದ್ದು ನೋಡಲು ಬಹು ಸುಂದರವಾಗಿದೆ. ಈ ಬಾವಿಯ ನೀರನ್ನು ಚನ್ನವೀರ ಸ್ವಾಮಿಗಳು ಮತ್ತು ಬೂದಿಬಸವೇಶ್ವರ ಸ್ವಾಮಿಗಳು ದಿನನಿತ್ಯದ ಪೂಜೆ ಪುನಸ್ಕಾರಕ್ಕೆ ಬಳಸುತ್ತಿದ್ದರು. ಈ ಬಾವಿಯಲ್ಲಿ ಇಂದಿಗೂ ನೀರಿನ ಬುಗ್ಗೆಯಿದ್ದು, ಮೂರು ಕಾಲದಲ್ಲಿಯೂ ಈ ಬಾವಿಯಲ್ಲಿ ನೀರು ಇರುತ್ತವೆ. ಈ ಬಾವಿಯ ನೀರು ಕುಡಿದರೆ ನಿಜವಾಗಿಯೂ ದೇವರ ತೀರ್ಥವನ್ನೇ ಕುಡಿದಂತಾಗುತ್ತದೆ. ಪೂರ್ವದಿಕ್ಕಿನಲ್ಲಿ ಈ ಬಾವಿಗೆ ಇತ್ತೀಚೆಗೆ ಸಣ್ಣ ಮೆಟ್ಟಿಲುಗಳನ್ನು ಮಾಡಿದ್ದಾರೆ. ಈಗ ಈ ಬಾವಿಯ ನೀರನ್ನು ಬೂದಿಬಸವ ಮಠದವರು ಬಳಸುತ್ತಾರೆ.

೮. ಸುಬ್ಬಣ್ಣ ಬಾವಿ

ಸಿರವಾರ ಅಗಸಿಯ ಸು.೧ ಕಿ.ಮೀ. ದೂರದಲ್ಲಿ ಅಂದರೆ ದಕ್ಷಿಣದಲ್ಲಿ ಈ ಪುಷ್ಕರಣಿ ಇದೆ. ಈ ಪುಷ್ಕರಣಿಯು ಅತ್ಯಂತ ಪ್ರಾಚೀನ ಕಾಲದಲ್ಲಿ ನಿರ್ಮಾಣವಾಗಿದ್ದು, ಉತ್ತರ ಮತ್ತು ಪೂರ್ವ ಭಾಗದಲ್ಲಿ ಈ ಬಾವಿ ಒಳಗೆ ಇಳಿದು ಹೋಗಲು ಮೆಟ್ಟಿಲುಗಳಿವೆ. ಉತ್ತರದ ಭಾಗದಲ್ಲಿ ಎತ್ತರದ ಜಗತಿಯ ಮೇಲೆ ೧೨ ಕಂಬಗಳಿಂದ ಕೂಡಿದ ಒಂದು ಉದ್ದನೆಯ ಮಂಟಪವಿದೆ. ಈ ಮಂಟಪವನ್ನು ರಾಜರ ಕಾಲದಲ್ಲಿ ಅವರು ಸ್ನಾನ ಮಾಡುವಾಗ ವಸ್ತ್ರಾಭರಣಗಳನ್ನಿಡಲು ಹಾಗೂ ಕುಳಿತು ವಿಶ್ರಾಂತಿ ತೆಗೆದುಕೊಳ್ಳಲು ಈ ಮಂಟಪ ಮಾಡಲಾಗಿದೆಯೆಂದು ಸ್ಥಳೀಯರು ಹೇಳುತ್ತಾರೆ. ಈ ಮಂಟಪದ ಬಾಗಿಲವಾಡದ ರೀತಿಯಲ್ಲಿ ಅಲಂಕಾರಗೊಂಡಿದೆ.

ಪೂರ್ವದ ಮೆಟ್ಟಿಲುಗಳಲ್ಲಿ ಸಣ್ಣಮಂಟಪವಿದೆ. ಇದು ಬಹುಶಃ ರಾಣಿಯರ ಕೋಣೆಯಾಗಿರಬೇಕು ಎಂದು ಬಾವಿಸಲಾಗಿದೆ. ಈಗ ಇದಕ್ಕೆ ಯಾವ ದ್ವಾರವೂ ಇರುವುದಿಲ್ಲ. ಇದಲ್ಲದೆ ದಕ್ಷಿಣದ ಭಿತ್ತಿಗೆ ದಿಗ್ಗಜರ ಮೂರ್ತಿಯುಳ್ಳ ಅನೇಕ ಕಲ್ಲುಗಳನ್ನು ಇತ್ತೀಚೆಗೆ ಈ ಪುಷ್ಕರಣಿಗೆ ಸೇರಿಸಲಾಗಿದೆ. ಇದರಲ್ಲಿ ನೀರಿನ ಬುಗ್ಗೆಯಿದ್ದು. ಈಗ ಅದು ಪ್ರಕೃತಿ ವಿಕೋಪಗಳಿಂದ ಇಲ್ಲವಾಗಿದೆ. ಸದ್ಯದಲ್ಲಿ ಈ ಬಾವಿಯಲ್ಲಿ ಬೃಹತ್‌ದ ಹುಣಿಸಿಮರ, ಬೇವಿನಮರ ಇತ್ಯಾದಿ ಮರಗಳು ಬೆಳದಿದ್ದು ಕಂಡುಬರುತ್ತದೆ.

೯. ನಾಗರಬಾವಿ

ನಾಗರ ಬೆಟ್ಟದ ಮುಂದೆ ಬರುವ ಈ ನಾಗರಬಾವಿಯು ಪ್ರಾಚೀನ ಕಾಲದ ಬಾವಿಯಾಗಿದ್ದು, ಬಾವಿಯನ್ನು ದೊಡ್ಡ ದೊಡ್ಡ ಗುಂಡು ಕಲ್ಲುಗಳಿಂದ ನಿರ್ಮಿಸಲಾಗಿದೆ. ಇಂದಿಗೂ ಬಾವಿಯ ನೀರು ಬೃಹತ್ ಬುಗ್ಗೆಯ ಮೂಲಕವೇ ಬರುತ್ತದೆ. ಈ ಬಾವಿಯ ಪೂರ್ವದ ಭಾಗದಲ್ಲಿ ನಾಗಭೂಷಣರ ದೇವಾಲಯವಿದೆ. ಮೊದಲು ಈ ನೀರು ನಾಗಭೂಷಣ ದೇವರ ಪೂಜೆಗೆ ಮೀಸಲು ಇದ್ದರೆ ಇಂದು ಈ ನೀರನ್ನು ತೋಟಗಾರಿಕೆಗೆ ಬಳಸುತ್ತಿದ್ದಾರೆ.

೧೦. ಕೂರವರ ಬಾವಿ

ಜೇಡರ ದಾಸಿಮಯ್ಯನನ್ನು ಉಲ್ಲೇಖಿಸುವ ಕ್ರಿ.ಶ.೧೧೪೮ರ ಶಾಸನವು ಗಬ್ಬೂರು ಗ್ರಾಮದ ಕೂರವರ ಬಾವಿಯ ಅಡಿಪಾಯಕ್ಕೆ ಹಾಕಿದ ಕಲ್ಲುಗಳಲ್ಲಿ ದೊರೆತಿದೆ. ಈ ಕೂರವರ ಬಾವಿಯು ಪ್ರಾಚೀನ ಕಾಲದ ಬಾವಿಯಾಗಿದ್ದು, ಮೊದಲು ನೀರಿನ ಬುಗ್ಗೆಯಿದ್ದು, ಈಗ ಮಳೆಗಾಲದ ನೀರು ಬಂದು ತುಂಬುತ್ತದೆ. ಈ ಬಾವಿಗೆ ಪೂರ್ವದಲ್ಲಿ ಮೆಟ್ಟಿಲುಗಳಿವೆ.

೧೧. ದಾಸರಬಾವಿ

ಈ ಬಾವಿಯು ಊರಿನ ಹೊರವಲಯದಲ್ಲಿದೆ. ಈ ಬಾವಿಯ ದಡದಲ್ಲಿ ಆಂಜನೇಯ ದೇವಾಲಯ, ಈಶ್ವರ ದೇವಾಲಯ ಮತ್ತು ಮಾರ್ತಾಂಡಪ್ಪನ ಗುಡಿಗಳಿವೆ. ಬಾವಿಯು ವೃತ್ತಾಕಾರದಲ್ಲಿದ್ದು ಈ ನೀರನ್ನು ದಾಸರು ಬಳಸುವುದರಿಂದ ಇದಕ್ಕೆ ದಾಸರ ಬಾವಿ ಎಂದು ಹೆಸರು ಬಂದಿದೆ.

೧೨. ಮಹಾನಂದೀಶ್ವರ


ಈ ಬಾವಿಯ ಊರಿನ ಪಶ್ಚಿಮ ಭಾಗದಲ್ಲಿರುವ ಮಹಾನಂದೀಶ್ವರ ದೇವಾಲಯದ ಎಡಭಾಗದಲ್ಲಿದೆ. ಈ ಬಾವಿಯು ಗಬ್ಬೂರು ಹಂಪಣ್ಣ ಕವಿಯ ಕಾಲಕ್ಕೆ ಸೇರಿದ್ದಾಗಿದೆ. ಈ ಬಾವಿಯ ನೀರನ್ನು ಹಂಪಣ್ಣ ಕವಿಯು ದಿನಾಲು ಈಶ್ವರ ದೇವರ ಪೂಜೆಗಾಗಿ ಬಳಸುತ್ತಿದ್ದನೆಂದು ತಿಳಿದುಬರುತ್ತದೆ. ಈ ಪುಷ್ಕರಣಿ ಸಣ್ಣ ಸಣ್ಣ ಗಟ್ಟಿಕಲ್ಲುಗಳಿಂದ ಇದರ ಭಿತ್ತಿಯನ್ನು ನಿರ್ಮಿಸಿದ್ದು, ದಕ್ಷಿಣದಿಂದ ಪಶ್ಚಿಮದಲ್ಲಿ ಹೋಗಿ ನೀರ ತರಲು ಸೋಪಾನಗಳನ್ನು ಮಾಡಲಾಗಿದೆ. ಇಂದಿಗೂ ಈ ಪುಷ್ಕರಣಿಗೆ ನೀರಿನ ಬುಗ್ಗೆಯಿದ್ದು, ಜೊತೆಗೆ ಬೆಟ್ಟದಿಂದ ಇಳಿದುಬರುವ ನೀರನ್ನು ಈ ಪುಷ್ಕರಣಿಗೆ ಹೋಗಲು ವ್ಯವಸ್ಥೆ ಮಾಡಲಾಗಿದೆ.

೧೩. ಹಂಪಣ್ಣ ಬಾವಿ

ಹಂಪಣ್ಣ ಗುಡಿಯ ಎಡಭಾಗದಲ್ಲಿ ಈ ಬಾವಿ ಇದ್ದು ಬಲಭಾಗದಲ್ಲಿ ತ್ರಿಭುವನ ಮಲ್ಲನ ಅಳ್ವಿಕೆಯ ಕ್ರಿ.ಶ.೧೦೮೫ರ ಶಾಸನವಿದೆ. ಇದರ ಮುಂದೆ ಐದು ವೀರಗಲ್ಲುಗಳಿವೆ. ಹಾಗೂ ನಾಗನಾಗಣಿಯರ ಮೂರ್ತಿಯಿದೆ. ಈ ಬಾವಿಗೆ ಪೂರ್ವಭಾಗದಲ್ಲಿ ಒಳಗೆ ಹೋಗಿ ನೀರು ತರಲು ಮೆಟ್ಟಿಲುಗಳಿವೆ. ಈಗ ಮೆಟ್ಟಿಲುಗಳು ಕುಸಿದಿದ್ದು ಸುತ್ತಲೂ ಜಾಲಿಯ ಮರಗಳು ಬೆಳೆದುಬಿಟ್ಟಿವೆ.


ಈ ಬಾವಿಗಳಲ್ಲದೆ ಪ್ರಾಚೀನ ಕಾಲದಲ್ಲಿ ಹಾಗೂ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಸಿದ್ಧರಬಾವಿ, ಬುಸ್ಸಣ್ಣಬಾವಿ ಅಂದನಾಬಾವಿ ಮುಂತಾದ ಬಾವಿಗಳ ಜೊತೆಗೆ ಹೈದರಾಬಾದಿನ ನಿಜಾಮರ ಕಾಲದಲ್ಲಿ ನಿರ್ಮಾಣವಾದ ಅನೇಕ ಸೇದುವ ಬಾವಿಗಳಿವೆ. ಈ ಎಲ್ಲ ಬಾವಿಗಳು ಚೌಕಾಕಾರ, ವೃತ್ತಾಕಾರವಾಗಿವೆ.

ರಾಮದುರ್ಗದ ಪುಷ್ಕರಣಿ



೧. ಸೋಪಾನಗಳು
೨. ಸೋಪಾನಗಳು
೩. ರಾಟೆ
೪. ಮಂಟಪ
೫. ದೇವ ಕೋಷ್ಠಗಳು

ದೇವದುರ್ಗ ತಾಲ್ಲೂಕಿನ ಪುಷ್ಕರಣಿ ಹಾಗೂ ಕೋಟೆಗಳು





ಪುಷ್ಕರಣಿಯ ಮಂಟಪ ರಾಮದುರ್ಗ



ಪುಷ್ಕರಣಿ ರಾಮದುರ್ಗ.



ಕೌರವರ ಬಾವಿ ಗಬ್ಬೂರು



ಸಿಡಿಲು ಬಾವಿ ರಾಮದುರ್ಗ ಬೆಟ್ಟ



ರಂಗನಾಥ ಪುಷ್ಕರಣಿ ಮಾನಸಗಲ್ಲ್



ಪುಷ್ಕರಣಿ ಮಾನಸಗಲ್ಲ್

ಅಧ್ಯಾಯ ೮

ಕಲೆ ಮತ್ತು ಸಾಹಿತ್ಯ

೮

ಕಲೆ ಮತ್ತು ಸಾಹಿತ್ಯ

೮.೧. ಕಲೆ

ದೇವದುರ್ಗ ತಾಲ್ಲೂಕು ಸಾಹಿತ್ಯಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅತ್ಯಂತ ಪ್ರಭಾವಯುತವಾದ ಇತಿಹಾಸ ಹೊಂದಿದೆ. ಇದು ಹಲವಾರು ಕಲಾವಿದರನ್ನು ಮತ್ತು ಇತರ ಕಲೆಗಳನ್ನು ಕೊಡುಗೆಯಾಗಿ ನೀಡಿದೆ. ಜಾನಪದ ಕಲೆಯ ಅಭಿವ್ಯಕ್ತಿಗಾಗಿ ಜಾತ್ರೆ, ಸುಗ್ಗಿಕಾಲ, ಹಬ್ಬ, ಹುಣ್ಣಿಮೆ, ಉತ್ಸವಗಳು ಪ್ರಧಾನ ವೇದಿಕೆಗಳಾಗಿದ್ದನ್ನು ನಾವು ಗಮನಿಸಬಹುದು. ಅಂದಿನಿಂದ ಇಂದಿಗೂ ಈ ಕಲೆಗಳು ಬೆಳೆದುಕೊಂಡು ಬಂದಿದ್ದನ್ನು ನಾವು ನೋಡಬಹುದಾಗಿದೆ.

ವಾದ್ಯಪ್ರಧಾನ ಕಲೆ : ಜಾನಪದ ಕಲೆಗಳಲ್ಲಿ ವಾದ್ಯಗಳು ಒಂದಾಗಿವೆ. ಇವುಗಳನ್ನು ನಾನಾ ರೂಪದಲ್ಲಿ ಕಾಣಬಹುದು. ಅದರಲ್ಲಿ ಡೊಳ್ಳು, ಹಲಗೆ, ನಗಾರಿ ಮುಂತಾದವುಗಳು. ಡೊಳ್ಳಿಗೆ ದೇವದುರ್ಗ ಚಂದನಕೇರಿ ಗಬ್ಬೂರು ಮಸೀದಿಪುರ, ಖಾನಾಪುರ ಮುಂತಾದ ಗ್ರಾಮಗಳು ಪ್ರಸಿದ್ಧವಾಗಿದೆ. ಡೊಳ್ಳಿನ ವಿಶೇಷತೆ ಏನೆಂದರೆ ಡೊಳ್ಳಿನ ಬಲಭಾಗಕ್ಕೆ ಬಡಿದಾಗ 'ಬ್ರಹ್ಮದೋಡ್' ಎಂದಾದರೆ, ಎಡಗಡೆ ಕೈಯಿಂದ ತಟ್ಟಿದರೆ 'ಡಾಂ' ಎಂದು ಆಗುತ್ತದೆ. ಎರಡು ಬಡಿತ ತಾರಕಕ್ಕೇರಿದಾಗ 'ಬ್ರಹ್ಮದೊಡ್ಡಾಂವ್' ಎಂದು ಆಗುತ್ತದೆ. ಡೊಳ್ಳಿಗೆ ಸಮವಾಗಿ ಕುಣಿಯುವವರು ಇದ್ದಾರೆ. ಇದೇ ರೀತಿಯಾಗಿ ಮೊಹರಂ, ಹಬ್ಬಗಳಲ್ಲಿ, ಇತರ ಸಂದರ್ಭಗಳಲ್ಲಿ ನಗಾರಿ, ಹಲಗೆ ಕೂಡಾ ಪ್ರಸಿದ್ಧವಾದ ವಾದ್ಯಪ್ರಧಾನ ಕಲೆಗಳಾಗಿವೆ.

ನೃತ್ಯಪ್ರಧಾನ ಕಲೆ : ಲಂಬಾಣಿಗರ ಸಂಖ್ಯೆ ಈ ತಾಲೂಕಿನಲ್ಲಿ ಗಣನೀಯವಾಗಿದೆ. ಭಾಷೆಯ ಗತ್ತಿನಿಂದ ಲಂಬಾಣಿ ಕುಣಿತಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಈ ತಾಲೂಕಿನಲ್ಲಿ ಅನೇಕ ಲಂಬಾಣಿ ತಾಂಡಗಳಿದ್ದು, ಇವರು ತಮ್ಮದೆ ಆದ ವಿಶಿಷ್ಟ ಬಗೆಯ ಸಂಸ್ಕೃತಿ ಮೈಗೂಡಿಸಿಕೊಂಡು ಬಂದಿದ್ದಾರೆ. ಇವರು ರಂಗುರಂಗಿನ ಉಡುಪು ತೊಟ್ಟ ಆ ಉಡುಪಿನ ಕನ್ನಡಿಯನ್ನು ಗೋಲಾಕಾರದಲ್ಲಿ ಅಂಟಿಸಿಕೊಂಡು ನಾಟ್ಯ ಮಾಡುತ್ತಾರೆ. ಇದು ಇಲ್ಲಿ ಹೆಸರುವಾಸಿಯಾಗಿದೆ. ಲಂಬಾಣಿಗರು ಹೋಳಿ ಹುಣ್ಣಿಮೆ, ದೀಪಾವಳಿ ಹಾಗೂ ಇತರೆ ಸಮಾರಂಭಗಳಲ್ಲಿ ನರ್ತನದಿಂದ ಕಂಗೊಳಿಸುತ್ತಾರೆ. ಇದರಲ್ಲಿ ಬಂಡೆಗುಡ್ಡ ಲಂಬಾಣಿ ತಾಂಡ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿ ಹೊಂದಿದೆ.

ಗೀತಪ್ರಧಾನ ಕಲೆ : ಗೀತಪ್ರಧಾನ ಕಲೆಗೆ ಸಂಬಂಧಿಸಿದಂತೆ ದೇವದುರ್ಗ ತಾಲ್ಲೂಕಿನಲ್ಲಿ ಸೋಬಾನೆ ಪದ ಗೀಗಿಪದ, ಕುಟ್ಟುವ, ಬೀಸುವ, ಹಂತಿಪದ, ತೊಟ್ಟಿಲು, ಮೊಹರಂ, ಲಾವಣಿ ಪದ, ದಾಸರು ಹಾಡುವ ಜಾನಪದಗಳು ಪ್ರಮುಖವಾಗಿವೆ. ಅದರಲ್ಲಿ ಹಿಂದೂ-ಮುಸ್ಲಿಂ ಸೌಹಾರ್ದತೆಯನ್ನು ಪ್ರತಿಬಿಂಬಿಸುವ ಮೊಹರು ಪದಗಳು ನಮ್ಮ ಸಂಸ್ಕೃತಿಯ ಕೊಡುಗೆಯಾಗಿವೆ. ಜನಪದ ಗೀತಗಳು ಇಂದು ನಮ್ಮ ನೆಲದಲ್ಲಿ ತಮ್ಮ ಪಳೆಯುಳಿಕೆಗಳನ್ನು ಬಿಟ್ಟರೂ ಅದನ್ನು ವ್ಯವಸ್ಥಿತವಾಗಿ ಬೆಳೆಸಿಕೊಂಡು ಹೋಗುವ ಇಂದಿನ ಪರಿಸ್ಥಿತಿಗೆ ಕಷ್ಟವಾಗಿದೆ. ಆದರೂ ಅಷ್ಟಿಷ್ಟು ಪ್ರತಿಭೆಗಳು ತಮ್ಮ ಕಲಾವಂತಿಕೆ ಮೆರೆದು ಈ ನೆಲದ ಕೀರ್ತಿಯನ್ನು ಮೆರೆದಿದ್ದಾರೆ. ಈ ಕಲೆಯನ್ನು ಹೀರೆಬೂದೂರು ಗಬ್ಬೂರು, ರಾಮದುರ್ಗ, ಜಾಗಟಕಲ್, ಮದರಕಲ್, ಇತರ ಗ್ರಾಮಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿದ್ದನ್ನು ಕಾಣಬಹುದು.

ಆರಾಧನಾ ಪ್ರಧಾನ ಕಲೆ : ಜಾನಪದ ಕಲೆಯಲ್ಲಿ ಆರಾಧನಾ ಕಲೆಗಿದ್ದ ಮಹತ್ವ ಬೇರಾವ ಕಲೆಗಿಲ್ಲ, ಈ ಕಲೆಯಲ್ಲಿ ಭಕ್ತಿಯ ಜೊತೆಗೆ ಆವೇಶವು ಪಾತ್ರ ವಹಿಸಿ ಭಕ್ತಿಯ ಪರಾಕಾಷ್ಠೆಯನ್ನು ಕಾಣಬಹುದು. ದೇವದುರ್ಗ ತಾಲೂಕಿನಲ್ಲಿ ಪುರವಂತರ ಕುಣಿತವಂತೂ ಜಾತ್ರೆ ಮಹೋತ್ಸವದಲ್ಲಿ ಗಮನ ಸೆಳೆಯುತ್ತದೆ. ಇದರ ಜತೆಗೆ ಎಲ್ಲಮ್ಮನ ಕುಣಿತ, ದುರಗಮ್ಮನ ಕುಣಿತ ಕೂಡಾ ಸೇರುತ್ತವೆ. ಇದನ್ನು ಗಬ್ಬೂರು, ದೇವದುರ್ಗ, ರಾಮದುರ್ಗ, ಅರಕೇರಾ ಮುಂತಾದ ಗ್ರಾಮಗಳಲ್ಲಿ ಕಾಣುತ್ತವೆ.

ರಂಗಭೂಮಿ ಕಲೆ : ಕನ್ನಡದ ಮೊದಲ ನಾಟಕ ಸಿಂಗರಾರ್ಯ ಬರೆದ ಮಿತ್ರವಿಂದಾಗೋವಿಂದಾ ಆದರೂ ಕರ್ನಾಟಕದಲ್ಲಿ ರಂಗಭೂಮಿಯ ಚಟುವಟಿಕೆಗಳು ಪ್ರಾಚೀನ ಕಾಲದಿಂದ ಬಂದಿವೆ. ದೇವದುರ್ಗ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಜಾತ್ರೆ, ಉತ್ಸವ, ಶರಣರ ಆರಾಧನೆಯ ಅಂಗವಾಗಿ ಇಲ್ಲಿ ರಂಗ ಕಲಾವಿದರು ರಂಗನಾಟಕಗಳನ್ನು ಮೊದಲಿನಿಂದ ಇಂದಿನವರೆಗೆ ಆಡುತ್ತಾ ಬಂದಿದ್ದಾರೆ. ಗಬ್ಬೂರು. ಮಲದಕಲ್ ಖಾನಾಪುರ, ದೇವದುರ್ಗ ಮುಂತಾದ ಗ್ರಾಮಗಳಲ್ಲಿ ರಂಗ ಕಲಾವಿದರು ಹಾಗೂ ನಾಟಕಗಳು ಇಂದಿಗೂ ಕಾಣುತ್ತವೆ.

ಬಯಲಾಟಗಳು : ಅಪರಾಳ ತಮ್ಮಣ್ಣನವರ ಸುಪ್ರಸಿದ್ಧವಾದ ಶ್ರೀಕೃಷ್ಣ ಪರಿಜಾತವನ್ನು ಕೊಟ್ಟಿರುವ ರಾಯಚೂರು ಜಿಲ್ಲೆ ಬಯಲಾಟಗಳಿಗೆ ತುಂಬಾ ಪ್ರಸಿದ್ಧವಾಗಿದೆ. ಬಯಲಾಟವು "ಸಾರಥಿ" ಮುಖಾಂತರ ಕತೆ ಆರಂಭಿಸುವ ಹಾಗೂ ಪ್ರತಿಯೊಂದು ಪಾತ್ರಗಳು ಸಾರಥಿ ಜತೆ ಸಂಭಾಷಿಸುವ ರೀತಿ ತುಂಬಾ ವೈಶಿಷ್ಟ್ಯಪೂರ್ಣವಾಗಿದೆ. ಗಬ್ಬೂರಿನ ನಾರಾಯಣಪ್ಪ ಹಾಗೂ ಜಾಲಾಪುರ ತಿಮ್ಮಪ್ಪ, ಕೃಷ್ಣಪ್ಪ, ರಾಮಣ್ಣ ಇತರೇ ಗ್ರಾಮಗಳಲ್ಲೂ ಈ ಕಲಾವಿದರನ್ನು ಕಾಣಬಹುದು.

ಬೀದಿನಾಟಕ : ದೇವದುರ್ಗದ ಸಣ್ಣ ಹಳ್ಳಿಗಳಲ್ಲಿ ಬಿಂಗಾರು ಅಥವಾ ವೇಷಧಾರಿಗಳು ಬೀದಿನಾಟಕಗಳನ್ನು ಹಾಡುತ್ತಾರೆ. ಮಹಾಭಾರತ, ರಾಮಾಯಣದ ಸಣ್ಣ ಸಣ್ಣ ಕಥೆಗಳನ್ನು ಆಯ್ದುಕೊಂಡು ಹಾಡು

ನೃತ್ಯಗಳೊಂದಿಗೆ ವೇಷಧಾರಿಗಳಾಗಿ ಬೀದಿ ನಾಟಕಗಳನ್ನು ಆಡುತ್ತಾರೆ. ಗಬ್ಬೂರಿನ ವೇಷಧಾರಿಗಳು ಇದಕ್ಕೆ ಹೆಸರುವಾಸಿಯಾಗಿದ್ದಾರೆ.

ಬಿದಿರುಕಲೆ : ದೇವದುರ್ಗ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಬಿದಿರಿನ ಕಲೆಯನ್ನು ಕಾಣಬಹುದು. ಅದರಲ್ಲಿ ಕೊರವ ಜನಾಂಗ ಬಿದಿರಿನಿಂದ ಬುಟ್ಟಿ, ಮಂಚ, ಚಾಪೆ, ವಿವಿಧ ರೀತಿಯ ಬಾರಿಗೆ ಮತ್ತು ಆಟದ ಸಾಮಾನುಗಳನ್ನು ಸುಂದರವಾಗಿ ಮಾಡುತ್ತಾರೆ. ಇದರ ಜೊತೆಗೆ ಮಣ್ಣಿನ ಕಲೆಯು ಒಂದಾಗಿದೆ. ಮಣ್ಣಿನಿಂದ ಕುಂಬಾರರು ಗಡಿಗೆ, ಮುಚ್ಚಳ ಹಾಗೂ ಇತರ ವಸ್ತುಗಳನ್ನು ಮಾಡುತ್ತಾರೆ.

೮.೨. ಸಾಹಿತ್ಯ

ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಸ್ಪಷ್ಟವಾಗಿ ಗೋಚರವಾಗುವುದು ಸಾಹಿತ್ಯದಲ್ಲಿ. ಸಾಹಿತ್ಯವು ಜನ ಜೀವನದ ಆದರ್ಶಗಳನ್ನು ಸಾಧನೆಯ ಸಾಹಸಗಳನ್ನು ಎತ್ತಿ ತೋರಿಸುವುದಾಗಿದೆ. ಇಂತಹ ಸಾಹಿತ್ಯವನ್ನು ಕವಿಗಳು ತಮ್ಮ ಸಾಹಿತ್ಯದ ಮೂಲಕ ಹೊರಹಾಕಿದ್ದಾರೆ.

ವಿಲಯಂ ಹೆನ್ರಿ ಹಡ್ಸನ್ ಎಂಬುವವನು ಸಾಹಿತ್ಯ ಚರಿತ್ರೆಯ ಬಗ್ಗೆ ಹೀಗೆ ಅಭಿಪ್ರಾಯಪಟ್ಟಿದ್ದಾನೆ. "ಯಾವುದೇ ದೇಶದ ಸಾಹಿತ್ಯ ಚರಿತ್ರೆ ಆ ದೇಶದ ಬುದ್ಧಿ ಮತ್ತು ಸ್ವಭಾವದ ಅಭಿವ್ಯಕ್ತಿಯ ದಾಖಲೆ, ಸಾಹಿತ್ಯ ಅವುಗಳ ಪಾಲಿಗೆ ಅತ್ಯಂತ ಮುಖ್ಯವಾದ ಒಂದು ಅಭಿವ್ಯಕ್ತ ವಿಧಾನ. ಈ ರೀತಿಯಲ್ಲಿ ಸಾಹಿತ್ಯ, ಚರಿತ್ರೆ ಎಂದು ಕರೆಯುವ ವಸ್ತುವಿಗೆ ಪೂರಕವೂ ವ್ಯಾಖ್ಯಾನವೂ ಆಗುತ್ತದೆ. ಚರಿತ್ರೆ ಮುಖ್ಯವಾಗಿ ಒಂದು ಜನಾಂಗದವರ ಬಾಹ್ಯ ನಾಗರಿಕತೆಗೆ ಸಂಬಂಧಿಸಿದೆ. ಅವರ ಅಸ್ತಿತ್ವದ ಹೊರರೀತಿಯನ್ನು ಚಿತ್ರಿಸುತ್ತದೆ. ಮತ್ತು ಅವರು ಜಗತ್ತಿನ ವಾಸ್ತವ ಕಾರ್ಯರಂಗದಲ್ಲಿ ಏನು ಸಾಧಿಸಿದರು, ಏನು ಸಾಧಿಸಲಿಲ್ಲ ಎಂಬುದನ್ನು ತಿಳಿಸುತ್ತದೆ. ಆದರೆ ಅವರ ಮಾನಸಿಕ ಮತ್ತು ನೈತಿಕ ಗುಣವಿಶೇಷಗಳನ್ನು ಅರಿಯಬೇಕಾದರೆ, ಅವರು ಆಂತರಿಕ ಕ್ರಿಯಾಜಗತ್ತಿನಲ್ಲಿ ಹುಡುಕಿದ್ದೇನು? ಪಡೆದದ್ದೇನು? ಎಂಬುದನ್ನು ತಿಳಿಯಬೇಕಾದರೆ, ಅವರ ಭಾವಸತ್ತ್ವಗಳನ್ನು ಪೋಷಿಸಿ, ಬೌದ್ಧಿಕ, ಆಧ್ಯಾತ್ಮಿಕ ಜೀವನವನ್ನು ರೂಪಿಸಿದ ಶಕ್ತಿಗಳ ಏರಿಳಿತವನ್ನು ಅವರ ಪರಿವರ್ತನಶೀಲ ಅದೃಷ್ಟದ ಘಟ್ಟಗಳ ಮೂಲಕ ಅನುಸರಿಸಬೇಕಾದರೆ, ಅವರ ಸಾಹಿತ್ಯಕ್ಕೆ ನಾವು ಮೊರೆ ಹೋಗಬೇಕಾಗುತ್ತದೆ."

"ಇಂತಹ ಕನ್ನಡ ಸಾಹಿತ್ಯಕ್ಕೆ ೨೦೦೦ ವರ್ಷಗಳ ಚರಿತ್ರೆಯಿದೆ. ಕನ್ನಡ ಸಾಹಿತ್ಯದಲ್ಲಿ ೩ ಪ್ರಧಾನ ಧಾರೆಗಳನ್ನು ಗುರುತಿಸಬಹುದು. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಜನ ಸಮೂಹ ತಮ್ಮ ಅಗತ್ಯಗಳಿಗೆ ತಕ್ಕಂತೆ ಸೃಷ್ಟಿಸಿಕೊಂಡಿರುವ ಮೌಖಿಕ ಸಾಹಿತ್ಯ. ಇನ್ನೊಂದು ತಮ್ಮ ಕಾಲದಲ್ಲಿ ಶಿಕ್ಷಣ ಪಡೆದು ತಮ್ಮ ಅನುಭವವನ್ನು ಬರವಣಿಗೆಯಲ್ಲಿ ಹಿಡಿದಿಟ್ಟಿರುವ ಲಿಖಿತ ಸಾಹಿತ್ಯ. ಮೌಖಿಕ ಸಾಹಿತ್ಯದ ಚರಿತ್ರೆಯನ್ನು ಗುರುತಿಸುವುದು ಕಷ್ಟ. ಅದು ತಲೆಮಾರಿನಿಂದ ತಲೆಮಾರಿಗೆ ಬಾಯಿ ಮಾತಿನ ಮುಖಾಂತರ

ದಾಟಿಕೊಂಡು ಬಂದಿದೆ. ಹಾಗೆ ಉಳಿದು ಬರುವಾಗ ಎಷ್ಟೋ ಬದಲಾವಣೆಗಳಿಗೂ ಒಳಗಾಗಿದೆ. ಹಾಡು, ಕಥೆ, ಒಗಟು, ಗಾದೆ ಇವೆಲ್ಲ ಮೌಖಿಕ ಸಾಹಿತ್ಯದಲ್ಲಿ ಹೇರಳವಾಗಿ ಇವೆ.''(ಕರ್ನಾಟಕ ಕನ್ನಡಿ, ವಿಭಾಗದ ಮುಖ್ಯಸ್ಥರು, ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಕನ್ನಡ ಸಾಹಿತ್ಯವು ಕಾಲ ಕಾಲಕ್ಕೆ ಪಡೆದುಕೊಂಡ ತಿರುವುಗಳನ್ನು ಅದರ ಚರಿತ್ರೆಯೊಂದಿಗೆ ನೋಡಲಾಗಿದೆ. ೨೦೦೦ ವರ್ಷಗಳ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯವು ಚಂಪು, ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮುಂತಾದ ರೂಪಗಳಲ್ಲಿ ಅರಳಿತು. ಆಧುನಿಕ ಕಾಲದಲ್ಲಿ ಹೊಸಗನ್ನಡ ಪ್ರಕಾರಗಳಾದ ಕಾವ್ಯ, ಕಾದಂಬರಿ, ಕಥೆ, ನಾಟಕ, ಲಲಿತಕಲೆ, ಪ್ರಬಂಧ, ವಿಮರ್ಶೆ ಮುಂತಾದವುಗಳಲ್ಲಿ ವೈವಿಧ್ಯಮಯವಾಗಿ ಬೆಳೆಯಿತು. ಇದರ ಜೊತೆಗೆ ಸಮುದಾಯಗಳಿಂದ ಸೃಷ್ಟಿಯಾದ ಜಾನಪದ ಸಾಹಿತ್ಯವು ಸಮೃದ್ಧವಾಗಿದೆ.

ಕನ್ನಡ ನಾಡಿನ ಶಾಸನ ಪ್ರಪಂಚಕ್ಕೆ ಸಾಹಿತ್ಯ ದೃಷ್ಟಿಯಿಂದ ಘನತೆಯನ್ನು ದೊರಕಿಸಿಕೊಟ್ಟವರು ಶಾಸನ ಕವಿಗಳು. ರಾಜಕೀಯ ಮತ್ತು ಸಾಂಸ್ಕೃತಿಕ ದಾಖಲೆಗಳಾದ ಶಾಸನಗಳನ್ನು ತಮ್ಮ ಪ್ರತಿಭಾ ಸ್ಪರ್ಶದಿಂದ ಸಾಹಿತ್ಯವನ್ನಾಗಿಸಿದ ಈ ಕವಿಗಳ ಸಂಖ್ಯೆ ಕರ್ನಾಟಕದಲ್ಲಿ ವಿಪುಲವಾಗಿದೆ. ನಮ್ಮ ನಾಡಿನ ಸುಮಾರು ೨೫೦೦೦ಕ್ಕೂ ಹೆಚ್ಚು ಶಾಸನಗಳನ್ನು ಬರೆದಿರುವ ಶಾಸನ ಕವಿಗಳು ತಮ್ಮ ಹೆಸರನ್ನು ಕೆಲವು ಕಡೆ ಹೇಳಿಕೊಂಡಿದ್ದಾರೆ, ಕೆಲವು ಕಡೆ ಹೇಳಿಕೊಂಡಿಲ್ಲ. ಇದರ ಜೊತೆಗೆ ದೇವದುರ್ಗ ತಾಲೂಕಿನಲ್ಲಿ ಬರುವ ವಚನಕಾರರು, ಶರಣರು, ಅನುಭಾವಿ ಕವಿಗಳು ದಾಸರು ಮುಂತಾದವರನ್ನು ಈ ಕೆಳಗಿನಂತೆ ಪರಿಚಯ ಮಾಡಬಹುದಾಗಿದೆ.

ಗಬ್ಬೂರಿನ ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ.೧೨೧೫ರ ನಾಗರಲಿಪಿ ಹಾಗೂ ಸಂಸ್ಕೃತ ಭಾಷೆಯ ಶಾಸನವು ಯಾದವ ಸಿಂಹಣನು ಗೋಪುರದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿದ. ಇದರೊಂದಿಗೆ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದ. ಗೋಪುರವನ್ನು ಇವನ ದಂಡನಾಯಕನಾದ ಲಕ್ಷ್ಮಿದೇವನು ಆಳುತ್ತಿದ್ದು, ಇವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ ವಿಷಯವನ್ನು ತಿಳಿಸುವುದರ ಜೊತೆಗೆ ಈ ಶಾಸನವನ್ನು ಶ್ರೀ ನಿತ್ಯವರದ ದಾಸೇಶ್ವರಾರ್ಯ್ಯೇಣ ರಚಿತೇಯಂ ಶಾಸನ ಎಂದು ಉಲ್ಲೇಖವಿದೆ. ಗೂಬ್ಬೂರಿನ ಮೇಲಶಂಕರ ದೇವಾಲಯದ ಮುಂದೆ ಇರುವ ಶಾಸನವನ್ನು ಮಲ್ಲಿದೇವ ರಚಿಸಿದನೆಂದು ತಿಳಿದುಬರುತ್ತದೆ(ಕವಿಶಾಸಂ ೭, ಪು.೬೧).

ದೇವದುರ್ಗ ತಾಲೂಕಿನ ಶಾಸನಗಳಲ್ಲಿ ಕವಿಗಳ ಹೆಸರು ಇಲ್ಲದಿದ್ದರೂ ಅನೇಕ ಶಾಸನಗಳಲ್ಲಿ ದಾಸರ ಅನೇಕ ದೇವಾಲಯಗಳು, ಮಠಗಳು ಮುಂತಾದ ಹೆಸರುಗಳ ಉಲ್ಲೇಖವನ್ನು ಕಾಣಬಹುದಾಗಿದೆ. ಅನೇಕ ಶರಣರು, ದಾಸರು, ತತ್ವ ಪದಕಾರರೂ, ವಚನಕಾರರು ಮುಂತಾದ ಕವಿಗಳನ್ನು ದೇವದುರ್ಗ ತಾಲೂಕಿನಲ್ಲಿ ನೋಡಬಹುದಾಗಿದೆ.

ದೇವದುರ್ಗದ ಚೆನ್ನಮಲ್ಲ (೧೮೫೦-೧೯೨೦)

ಚೆನ್ನಮಲ್ಲ ಕವಿಯು ಕ್ರಿ.ಶ.೧೮೫೦ರಲ್ಲಿ ದೇವದುರ್ಗದಲ್ಲಿ ಜನಿಸಿದರು. ಇವರು ತನ್ನ ವಿದ್ಯಾಭ್ಯಾಸವನ್ನು ದೇವದುರ್ಗದಲ್ಲಿಯೇ ಮುಗಿಸಿ, ನಂತರ ಗೃಹಸ್ಥ ಜೀವನ ಆರಂಭಿಸಿದನು. ಕೆಲವು ವರ್ಷಗಳ ನಂತರ ಹೆಂಡತಿ ಮತ್ತು ಮಗ ನಿಧನರಾದರು. ಆದರ ನಂತರ ವೈರಾಗ್ಯ ತಾಳಿದರು.

ಶಾಲಾ ಶಿಕ್ಷಕರಾಗಿದ್ದ ಇವರು ಮಕ್ಕಳಿಗೆ ಮತ್ತು ಹಿರಿಯರಿಗೂ ಪುರಾಣ ಪ್ರವಚನ ಹೇಳಿ ಜನ ಜಾಗೃತಿಯನ್ನುಂಟುಮಾಡುವುದರ ಮೂಲಕ ಗುರುವಿನ ಸ್ಥಾನ ಗಳಿಸಿದ್ದರು. ಇದನ್ನು ಕಂಡ ಸುರಪುರದ ದೊರೆಗಳು ಇವರನ್ನು ಬಹು ಗೌರವದಿಂದ ಕಾಣುತ್ತಿದ್ದರು. ಸುರಪುರ ತಾಲೂಕಿನ ಲಿಂಗಂಪೇಟೆಗೆ ಶಾಲಾ ಶಿಕ್ಷಕರಾಗಿ ಹೋದ ಚೆನ್ನಮಲ್ಲ, ಕೊನೆಗೆ ಕ್ರಿ.ಶ.೧೯೨೦ರಲ್ಲಿ ಅಲ್ಲಿಯೇ ನಿಧನರಾದರು. ಆ ಶಾಲಾಮಠದಲ್ಲಿ ಈತನ ಸಮಾಧಿಯನ್ನು ಕಾಣಬಹುದು.

ಸಂಸ್ಕೃತ ಕನ್ನಡ ಎರಡೂ ಭಾಷೆಯಲ್ಲಿ ಪಂಡಿತರಾಗಿದ್ದ ಇವರು ಈತ ಅನೇಕ ತತ್ವ ಪದಗಳನ್ನು ಹಾಗೂ 'ಕರುಣೇಶ್ವರ ಪುರಾಣ' ಮತ್ತು 'ಭಿಕ್ಷಾವರ್ತಿ ಶಿವಯೋಗಿಗಳ ಪುರಾಣ'ವನ್ನು ರಚಿಸಿದ್ದಾನೆ. 'ಸುರದುರ್ಗನಾಥ' ಈತನ ಅಂಕಿತನಾಮವಾಗಿದ್ದು, ಈ ಅಂಕಿತನಾಮದೊಂದಿಗೆ ಅನೇಕ ಪದಗಳನ್ನು ರಚಿಸಿದ್ದಾನೆ. ಈ ತತ್ವಪದಗಳಲ್ಲಿ ಮಳೆ-ಬೆಳೆ ಮುಂತಾದ ವಿಷಯಗಳಿಗೆ ಸಂಬಂಧಿಸಿವೆ. ಒಮ್ಮೆ ಮಳೆಯಿಲ್ಲದೆ ಜನರು ಕಂಗೆಟ್ಟಾಗ "ಶ್ರೀ ಗುರು ಶಂಕರ ಶಿವ ಸರ್ವೇಶ್ವರ ಶ್ರೀಕಂಠನೆ ಶಿವಲೀಲಾ ಈಗಲೇ ಸಂಕಟ ಪಡುವರು ಬಡವರು ಪಾಲಿಸು ಶಿವಶುಭಾಕರ" ಎಂಬ ಹಾಡನ್ನು ಹಾಡಿ ಮಳೆ ತರಿಸಿದನೆಂದು ಪ್ರತೀತಿಯಿದೆ. ಅತಿವೃಷ್ಟಿಯಾದಾಗ "ಮಳೆ ನಿಲ್ಲಿಸು ಮಹಾದೇವ" ಎಂಬ ಹಾಡನ್ನು ಹಾಡಿ ಮಳೆ ನಿಲ್ಲಿಸಿದನೆಂದು ಹೇಳುತ್ತಾರೆ. "ಲಿಂಗಬಾರೋ ಎನ್ನ ಮನಕೆ ಲೀಲೆ ತೋರುತ ಶಂಭು ಶೃಂಗಾರದಂಗದಿ ಸೌಖ್ಯಲಿಂಗನ ಮಾಡುವೆ ಲಿಂಗಯ್ಯ" ಎಂಬ ಹಾಡು ಅನುಭವದ ಹಾಡು ಇದಾಗಿದೆ(ರಾಯಚೂರು ಜಿಲ್ಲೆಯ ಶರಣರು, ಪು.೬೮, ಡಾ.ಚನ್ನಬಸವ ಹಿರೇಮಠ, ಸಿದ್ಧರಾಮಯ್ಯ ಹಿರೇಮಠ).

ದೇವದುರ್ಗದ ಆದಿ ಅಮಾತೆಪ್ಪ

ಆದಿ ಅಮಾತೆಪ್ಪ ಕ್ರಿ.ಶ.೧೮೬೫ರಲ್ಲಿ ದೇವದುರ್ಗದಲ್ಲಿ ಜನಿಸಿದ. ಈತ ಲಿಂಗಾಯತ ಸಮಾಜಕ್ಕೆ ಸೇರಿದ ಕವಿಯಾಗಿದ್ದ. ನೇಕಾರಿಕೆ ಈತನ ಮನೆತನದ ವೃತ್ತಿಯಾಗಿತ್ತು. ಅಮಾತೆಪ್ಪ ಶ್ರೀಮಂತನಾಗಿದ್ದು, ದಾನ-ಧರ್ಮಗಳನ್ನು ಮಾಡಿದ್ದಾನೆ. ಅಮಾತೆಪ್ಪ ತತ್ವಪದ ಮತ್ತು ವಚನಗಳನ್ನು ರಚಿಸಿದ್ದಾನೆ. ಈತನು "ದೇಹದುರ್ಗಾದೀಶ" ಎಂಬ ಅಂಕಿತದಿಂದ ಅನೇಕ ಹಾಡುಗಳನ್ನು ರಚಿಸಿದ್ದಾನೆ.

ಮೂಢನಂಬಿಕೆಗಳನ್ನು, ಗೊಡ್ಡು ಆಚರಣೆಗಳನ್ನು ಖಂಡಿಸಿರುವ ಅಮಾತೆಪ್ಪ ಸಂಸಾರದಲ್ಲಿದ್ದು ಕೊಂಡೇ, ಆಧ್ಯಾತ್ಮ ಸಾಧನೆ ಮಾಡಬೇಕೆಂದು ಹೇಳಿದ್ದಾನೆ. ಈತ ವಚನ ಪರಂಪರೆಗೆ ಹೆಚ್ಚು

ನಿಷ್ಠನಾಗಿದ್ದು, ಹೆಣ್ಣನ್ನೂ ಮಾಯೆಯೆಂದು ಅಲ್ಲಗಳೆಯದೆ ಆ ಮಾಯೆಯಿಂದಲೇ ಮೋಕ್ಷವೆಂದು ಸ್ಪಷ್ಟಪಡಿಸಿದ್ದಾನೆ.

"ಮಾಯನ್ನ ಬಿಡಬ್ಯಾಡೋ ಮಾಯಿ ನಿನಗ ಜೋಡೊ
ಮಾಯಿನ್ನ ಕೂಡ್ಯಾಡು ಮಾಯಿಂದ ಮೋಕ್ಷ ನೋಡು"

ಇನ್ನೊಂದು ವಚನದಲ್ಲಿ ಅಮಾತೆಪ್ಪನು ನರಮಾನವನಿಗೆ ಯಾವುದು ಸ್ಥಿರವಿಲ್ಲ. ಗುರುವಿನ ಅಧಿಕಾರ ಯಾರಿಗೂ ಇಲ್ಲವೆಂದು ಹೇಳುತ್ತಾನೆ.

ನರರಿಗೆ ಯಾವುದು ಸ್ಥಿರವಿಲ್ಲಾ ಗುರುವಿನಕ್ಕಿಂತ ಧಿಕ್ಕಾರಿಲ್ಲ ||ಪ||

ಬಂದುಬಳಗ ತಮ್ಮವರೆಂದು ನಂಬಿಕೊಂಡಿರುವರಲ್ಲಾ |
ಯಮದೂತರೆಳಿವಾಗ ಬಂದು ತಮ್ಮನ ಬಿಡಿಸುವವರ್ಯಾರಿಲ್ಲಾ ||||ಪ||

ಹೆಂಡತಿ ಮಕ್ಕಳಿಗೆ ಮುಂದೆ ಬೇಕೆಂದು ಸಂಕಟಬಿಟ್ಟು ಗಳಿಸುವರಲ್ಲಾ
ಮರಣ ಕಾಲದಿ ತಮ್ಮ ಸಂಗಡ ಯಾವುದು ಒಯ್ಯಾದಿಲ್ಲ."

ತಮ್ಮ ಎಂಬ ಪದವನ್ನು ಬಳಸಿ 'ಜೀವನನಶ್ವರ' ಎಂಬ ತತ್ವವನ್ನು ಈ ಮುಂದಿನ ಪದ್ಯದಲ್ಲಿ ಹೇಳಲು ಪ್ರಯತ್ನಿಸಿದ್ದಾರೆ.

"ತನುವು ತನ್ನದಲ್ಲ ತಮ್ಮ | ತನುವು ನಂಬಿಗಿಲ್ಲ ತಮ್ಮ
ತನುವಿನೊಳಗಿನ್ನೆಲ್ಲ ತಮ್ಮ | ತಿಳಿಯಬೇಕು ಎಲ್ಲ ತಮ್ಮ ||ಪ||

ತನುವಿನ ಗುಣವಲ್ಲತಮ್ಮ | ಬಿಡಬೇಕು ಎಲ್ಲ ತಮ್ಮ
ಸಗುಣ ಗುಣ ಅಳಿಯೋ ತಮ್ಮ | ನಿರ್ಗುಣದಿಂದ ನುಡಿಯೋ ತಮ್ಮ ||೧||

ಪ್ರಪಂಚಯೆಂಬುದು ತಮ್ಮ | ನಾಲ್ಕು ದಿವಸ ಸಂತೋಷ ತಮ್ಮ
ನೀರು ಮೇಲಿನ ಗುರುಳಿಯಂತೆ | ಅಡಗಿ ಹೋಗುವುದು ತಮ್ಮ ||೨||

ದೇಶಕ್ಕಧಿಕನೂ ತಮ್ಮ | ದೇಹ ದುರ್ಗೇಶನೂ ತಮ್ಮ
ಕೂಡಿಕೊಂಡು ಇದ್ದರೆ ತಮ್ಮ | ಅಂತಃಕರಣ ಮಾಡುವನೋ ತಮ್ಮ ||೩||

(ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು, ಪು.೭೦, ಡಾ.ಬಸವರಾಜ ಸಬರದ)

ಜಾಲಹಳ್ಳಿಯ ವೀರಭದ್ರಕವಿ

ಕ್ರಿ.ಶ.೧೮೩೫ರಲ್ಲಿ ಜಾಲಹಳ್ಳಿಯಲ್ಲಿ ವೀರಭದ್ರ ಎಂಬ ಹೆಸರಿನ ಕವಿಯು ಜನಿಸಿದನು. ಈತನ ತಂದೆಯಾದ ಬಸವಾಚಾರ್ಯನು ಜಾಲಹಳ್ಳಿಯ ಆಗಿನ ದೊರೆಯಾಗಿದ್ದ ರಂಗಪ್ಪನಾಯಕನ ವಿದ್ಯಾಗುರುವಾಗಿದ್ದನು. ತಂದೆಯಂತೆ ವೀರಭದ್ರಕವಿಯೂ ಸಹ ಜಾಣನೂ ಘನ-ಪಂಡಿತನೂ ಆಗಿದ್ದು, ಮನೆತನದ ವೃತ್ತಿಯಾದ ವಿದ್ಯೆಯನ್ನು ಕಲಿಸುವ ಕಾಯಕವನ್ನು ಮುಂದುವರಿಸಿದನು. ಕವಿ ತನ್ನ

ಹುಟ್ಟೂರು ಜಾಲಹಳ್ಳಿಯನ್ನು ಪ್ರೀತಿಯಿಂದ "ಜಾಲೇಂದ್ರಪುರ" ಎಂದು ಕರೆದಿದ್ದಾನೆ. ವೀರಭದ್ರ ಕವಿಯು ಕ್ರಿ.ಶ.೧೮೬೫ರಲ್ಲಿ ಅರವತ್ತಮೂರು ಪುರಾತನರ ಪುರಾಣನ್ನು ರಚಿಸಿದ್ದಾನೆ. ಕವಿ ತನ್ನನ್ನು ಕಾವ್ಯದಲ್ಲಿ 'ಸಾಧುಕಿಂಕರ', 'ನವವಿಧ ಕರ್ನಾಟಕ ಕವಿತಾ ಚತುರ', 'ಸುವಿವೇಕ ಸುಖಿ' ಮುಂತಾದ ವಿಶೇಷಣಗಳಿಂದ ಕರೆದುಕೊಂಡಿದ್ದಾನೆ.

ನಾಗಭೂಷಣನೆಂಬ ಶಿವಯೋಗಿ ಸಂಚರಿಸು ತಾಗಳಂ ಬಂದು ಎಲೆ ವೀರಭದ್ರಾಖ್ಯ ಕೇಳೀಗಳರುವತ್ತು ಮುವ್ವರುರ್ಪಾತನರ ಚರಿತ್ರೆಯಂ ವರ್ಣಿಕದೊಳಿಲ್ಲವು ರಾಗದಿಂದೀ ಪ್ರಬಂಧವನ್ನು ಕೇಳ್ವರ್ಗೆ ಸೊಗ ಸಾಗುವಂಕತಿ ಮನೋಹರವಪ್ಪ ತೆರೆದಿ ನೀ ಬೇಗನೇಸಗಲನ್ನ ಸುಕೃತಕೆಣೆಯಿಲ್ಲದ ಮಗನೇ ರಚಯಿಸ್ಟ ಎನಲ್ಕೇ"(ಬಿ.ಚನ್ನಬಸವ ದೇ.ತಾ.ಸಾ.ಅಧ್ಯಯನ) ಈ ಮೇಲಿನ ಪುರಾಣದಲ್ಲಿ ಅರವತ್ತ ಮೂರು ಪುರಾತನರ ಚರಿತ್ರೆಯು ಇದೆ. ಇದಲ್ಲದೆ ಶಿವಶರಣರ ವಚನಗಳ ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ ಹಾಗೂ ಅರವತ್ತುಮೂರು ಪುರಾತನರ ತ್ರಿಪದಿಗಳನ್ನು ರಚಿಸಿದ್ದಾನೆ.

ಹಿರೇಬೂದೂರಿನ ಹನುಮಂತರಾವ್

ಕ್ರಿ.ಶ.೧೮೯೨ರಲ್ಲಿ ದೇವದುರ್ಗ ತಾಲ್ಲೂಕಿನ ಹಿರೇಬೂದೂರಿನಲ್ಲಿ ಜನಿಸಿದನು. ಶ್ರೀನಿವಾಸರಾವ್ ಭೀಮಾಬಾಯಿ ಇವರ ತಂದೆ ತಾಯಿಗಳಾಗಿದ್ದರು. ರಾಯಚೂರು ಜಿಲ್ಲೆಯ ನೀರಲಕೇರಿ ಬಸವಲಿಂಗ ಶರಣರು ಹನುಮಂತರಾವ್ ಕವಿಯ ಆರಾಧ್ಯದೇವರಾಗಿದ್ದರು. ಆದರೆ ವೈಷ್ಣವ ಬ್ರಾಹ್ಮಣನಾಗಿ, ವೀರಶೈವ ಶರಣನಾಗಿದ್ದ ನೀರಲಕೇರಿ ಬಸವಲಿಂಗ ಶರಣನನ್ನು ಪೂಜಿಸುವುದು ಸರಿಯಿಲ್ಲವೆಂದು ಬ್ರಾಹ್ಮಣರು ಈತನ ತಂದೆಯಾದ ಶ್ರೀನಿವಾಸರಾವನಿಗೆ ಎಚ್ಚರಿಕೆ ನೀಡಿದರು. ಆದರೂ ಈತನ ಭಕ್ತಿ ಕಡಿಮೆಯಾಗಲಿಲ್ಲ. ಈತನ ತಂದೆಯನ್ನು ಊರಿನ ಬ್ರಾಹ್ಮಣರು ಶ್ರೀನಿವಾಸರಾವನನ್ನು ತಮ್ಮ ಧರ್ಮದಿಂದ ಬಹಿಷ್ಕರಿಸಿದರು. ನಂತರ ಶ್ರೀನಿವಾಸರಾವ್ ನಿಧನರಾದರು. ತಂದೆ ನಿಧನರಾದ ಕೂಡಲೇ ಹನುಮಂತರಾವ್ ವೀರಶೈವ ಗುರು ಅಡವೀಶಾರಾಧ್ಯರಿಂದ ಲಿಂಗದೀಕ್ಷೆ ಪಡೆದರು.

"ಅಡವೀಶಾರಾಧ್ಯ" ಎಂಬ ಅಂಕಿತ ನಾಮದಲ್ಲಿ ಹನುಮಂತರಾವ್ ಅನೇಕ ತತ್ವ ಪದಗಳನ್ನು ರಚಿಸಿದ್ದಾನೆ. ಹೀಗೆ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ ವೀರಶೈವನಾಗಿ ಬೆಳೆದು ಹನುಮಂತರಾವ್ ಅನುಭಾವಿಯಾಗಿ ವೀರಶೈವ ಧರ್ಮದ ಮಹತ್ವವನ್ನು ತನ್ನ ಹಾಡುಗಳಲ್ಲಿ ತಿಳಿಸಿದ್ದಾನೆ"(ರಾ.ಜಿ.ಅ.ಕವಿಗಳು, ಡಾ.ಬಸವರಾಜ ಸಬರದ, ಪು.೪೩).

ಜೋಳದ ಹೆಡಿಗೆ ಬಡೆ ಸಾಹೇಬ

ರಾಯಚೂರು ಜಿಲ್ಲೆ ಹಲವಾರು ಹರಿದಾಸರು ಹರಿದಾಡಿದ ಪುಣ್ಯಭೂಮಿ. ದಾಸ ಸಾಹಿತ್ಯದ ಎರಡನೆಯ ಘಟ್ಟಕ್ಕೆ ಈ ಭಾಗದ ಹರಿದಾಸರು ಕೊಟ್ಟ ಕಾಣಿಕೆ ಅಪಾರ. ಹರಿದಾಸರ "ತವರು ಮನೆ"

"ಹರಿದಾಸರ ತೊಟ್ಟಿಲು" ಎಂದು ಕರೆಯಿಸಿಕೊಳ್ಳುವ ಮಟ್ಟಿಗೆ ರಾಯಚೂರು ಜಿಲ್ಲೆಯ ಹರಿದಾಸ ಸಾಹಿತ್ಯ ಬೆಳೆದು ನಿಂತಿದೆ. ವಿಜಯದಾಸರು. ಜಗನ್ನಾಥದಾಸರು, ಗೋಪಾಲದಾಸರು, ಪ್ರಾಣೇಶದಾಸರು, ಅಸ್ಕಿಹಾಳ ಗೋವಿಂದದಾಸರು, ಶಾಮಸುಂದರದಾಸರು, ವರದೇಶ ವಿಠ್ಠಲರು, ಕೊಪ್ಪರ ನರಹರಿದಾಸರು, ಗೋಪಾಲದಾಸರು, ಹೀಗೆ ನೂರಾರು ಹರಿದಾಸರು ಸಾಹಿತ್ಯಕ್ಕೆ ಕಾಣಿಕೆಯನ್ನು ನೀಡಿದ್ದಾರೆ. ಇಂತಹ ಹರಿದಾಸರಲ್ಲಿ ಇಸ್ಲಾಂ ಧರ್ಮಕ್ಕೆ ಸೇರಿದ ಬಡೆಸಾಹೇಬ ಎಂಬುವರು ಒಬ್ಬರಾಗಿದ್ದಾರೆ.

ಬಡೇಸಾಹೇಬರು ದೇವದುರ್ಗ ತಾಲ್ಲೂಕಿನ ಜೋಳದ ಹೆಡಿಗಿ ಗ್ರಾಮದಲ್ಲಿ ಕ್ರಿ.ಶ.೧೮೮೫ರಲ್ಲಿ ಜನಿಸಿದರು. ಖಾಜಾ ಸಾಹೇಬ ಮತ್ತು ಜೀರಮ್ಮ ಇವರ ತಂದೆ ತಾಯಿಯಾಗಿದ್ದರು. ಇವರು ಪಿಂಜಾರ ಪಂಗಡಕ್ಕೆ ಸೇರಿದವರು. ಬಡತನದ ಬದುಕಿನಲ್ಲಿ ಹೆಚ್ಚಿಗೆ ವಿದ್ಯಾಭ್ಯಾಸವಿಲ್ಲದೆ ಕೇವಲ ಕನ್ನಡ ಬರೆದೋದುವ ಮಟ್ಟಿಗೆ ಕಲಿತವರು. ಬಡೇಸಾಹೇಬರು ಹರಿಭಕ್ತರಾಗುವುದಕ್ಕೆ ಕಾರಣ ಪುರುಷರು ಶ್ರೀ ರಾಮಾವಧೂತರು. ಶ್ರೀರಾಮಾವಧೂತರೂಡನೆ ಬಡೇಸಾಹೇಬ ಆಧ್ಯಾತ್ಮಿಕ ಚರ್ಚೆ, ಧ್ಯಾನ, ಉಪಾಸನಗಳಿಂದ ಪಾರಮಾರ್ಥಿಕ ಜ್ಞಾನವನ್ನು ಪಡೆದರು. ಇವರು "ಶ್ರೀರಾಮ" ಎಂಬ ಅಂಕಿತದಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.

ಕ್ರಿ.ಶ.೧೯೪೦ರಲ್ಲಿ ದಾಸರು ನಿಧನರಾದರು. ಇವರ ಸಮಾಧಿಯು ದೇವದುರ್ಗ ತಾಲ್ಲೂಕಿನ ಲಿಂಗದ ಹಳ್ಳಿಯಲ್ಲಿದೆ. ಇವರು ಸಂಸಾರವನ್ನು ಕುರಿತಂತೆ ಈ ರೀತಿಯಾಗಿ ಹೇಳಿದ್ದಾರೆ.

೧. ಜನಿಸಿ ನಾ ಬುವಿಯೊಳು ನಿನಗೆ ದುಡಿಯುವದಾಯ್ತು ಎನಗೇನು ಫಲ ಹೇಳು ಮಾಯವೇ ಎಲೆ ಜೀವವೆ"

೨. "ಏನಾಯ್ತು ಹರಿಪಾದ ನೆನೆವಲ್ಲಿ ಮನವೆ" ಶಾಂತನಾಗು ಮನಸೇ ನೀ ಶಾಂತನಾಗು. ಸಿಟ್ಟು ತ್ಯಜಿಸಲೇ ಖೊಟ್ಟಿ ಮನವೆ.

೩. ಎಣಿಕೆಗೆ ಮೀರಿದ ಹಳೆಗುದ್ದೂ ಇದು ಘನ ಘನ ಜನರನು ನುಂಗಿದ್ದೂ.

೪. ಏಸುರೂಪಾಯ್ಗ ಕೊಂಡು ಕೊಂಡೆವ್ವಾ ಒಸರುವ ಗಡಿಗೆ

ಏಸು ರೂಪಾಯ್ಗೆ ಕೊಂಡು ಕೊಂಡೆವ್ವಾ
ಎಂಥ ಕುಂಬಾರಿದನು ಮಾಡಿದ ಎಷ್ಟು ಕಾಲದಿ
ಕುಂತು ಇದಕೆ ಶೋಧ ಹುಡಕಿದ ಅವನು ದಾವ
ಸಂತೆಯೊಳಗೆ ಕುಂತು ಮಾರಿದ ಕೊಂಡೇನು ತಿಳಿದ
ತಂತು ತಿಳಿಯದೆ ಹೊತ್ತುಕೊಂಡು
ನಿಂತು ಇದರ ಖ್ಯಾಲಿನೊಳಗೆ

ಸಂತೆ ತೀರಿ ಹೋಗಲಾಗೇನಂತ ಹೇಳುವಿ

ಕೇಳುವ ವರಿಗೆ (ಸಿರಿದುರ್ಗ ತಾಲ್ಲೂಕು ಸ್ಮರಣ ಸಂಚಿಕೆ ಪು.೫೧-೫೨)

ಶ್ರೀ ಗೋಪಾಲದಾಸರು

ಶ್ರೀ ಗೋಪಾಲದಾಸರು ದೇವದುರ್ಗ ತಾಲೂಕಿನ ಮೊಸರಕಲ್ಲು ಗ್ರಾಮದಲ್ಲಿ ಕ್ರಿ.ಶ.೧೯೨೨ರಲ್ಲಿ ಜನಿಸಿದರು. ತಂದೆ ಮುರಾರಿರಾಯ ತಾಯಿ-ವೆಂಕಮ್ಮ. ಗೋಪಾಲದಾಸರ ಮೂಲ ಹೆಸರು ಭಾಗಣ್ಣ.

ಶ್ರೀ ವಿಜಯದಾಸರ ಪರಮಾಪ್ತ ಶಿಷ್ಯರೆನಿಸಿದ ಇವರು. ಶ್ರೀವಿಜಯದಾಸರಿಂದ ಶ್ರೀ ಗೋಪಾಲ ವಿಠಲ ಎಂಬ ನಾಮವನ್ನು ಪಡೆದು ಆಗ ಗೋಪಾಲ ದಾಸರಾದರು. ದಾಸ ಸಾಹಿತ್ಯದ ಪ್ರಕಾರಗಳೆನಿಸಿ ಕೀರ್ತನ, ಸುಳಾದಿ ಉಗಾಭೋಗಗಳನ್ನು ರಚಿಸಿದರು. ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಿಂದ ಈ ದಾಸರ ೧೭೯ ಕೃತಿಗಳು ಪ್ರಕಟಗೊಂಡಿವೆ.

ದಾಸರ ಕೃತಿಗಳಲ್ಲಿ ಮಧ್ವ ಸಿದ್ಧಾಂತಗಳ ನಿರೂಪಣೆಯೊಂದಿಗೆ, ಆತ್ಮಶೋಧವನ್ನು, ಸಮಷ್ಟಿ ಚಿಂತನೆ ಬೋಧನೆಯನ್ನು ಕಾಣುತ್ತೇವೆ.

"ಅನಂತ ಅಪರಾಧ ಎನ್ನಲ್ಲಿ ಉಂಟೋ ದೇವಾ ನಿನ್ನ ಚಿತ್ತ ಎನ್ನ ಭಾಗ್ಯ ಇನ್ನೊಂದೆನಗಿಲ್ಲವಯ್ಯಾ ಯಾತರವ ನಾನಯ್ಯ ನಿನ್ನಾದೀನವೆಲ್ಲ."

ಎಂಬಂತಹ ಶರಣಾಗತಿಯ ವಾಣಿಯನ್ನು ಕಾಣಬಹುದು. ಕೊನೆಗೆ ಕ್ರಿ.ಶ.೧೯೬೨ರಲ್ಲಿ ನಿಧನರಾದರು.

ಕೊಪ್ಪರ ನರಹರಿದಾಸರು

ಕೃಷ್ಣಾನದಿ ತೀರದಲ್ಲಿರುವ ಕೊಪ್ಪರ ಗ್ರಾಮದಲ್ಲಿ ಭೀಮಸೇನಾಚಾರ್ಯ ನರಸಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಇವರ ತಂದೆ ತಾಯಿಗಳು ಶ್ರೀ ಲಕ್ಷ್ಮೀ ನರಸಿಂಹ ದೇವರ ಅರ್ಚಕ ವಂಶಜರಾಗಿದ್ದರು. ನರಹರಿದಾಸರು ವ್ಯಾಕರಣ, ವೇದಾಂತ ಸಾಹಿತ್ಯ ಮುಂತಾದ ವಿದ್ಯೆಗಳನ್ನು ಕಲಿತರು. ದಾಸರು "ಕಾರ್ಪರಿ ನರಹರಿ" ಎಂಬ ಅಂಕಿತದಿಂದ ಸುಮಾರು ೧೨೦ ಕೀರ್ತನೆಗಳನ್ನು ರಚಿಸಿದ್ದಾರೆ. ಮಹಿಳೆಯರಿಗಾಗಿ ಅನೇಕ ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ಪ್ರಶ್ನೋತ್ತರ ಮಾಲಿಕೆಯಲ್ಲಿ ಬಾಗವತ ತತ್ವಗಳನ್ನು ಸಾರೋದ್ಧಾರ ರೂಪದಲ್ಲಿ ರಚಿಸಿದ್ದಾರೆ. ಬಯಲಾಟಗಳಿಗೂ ಪದಗಳನ್ನು ರಚಿಸಿದ್ದಾರೆ. 'ಕಾರ್ಪರ ಮಹಿಮಾ ವರ್ಣನೆ' ಎನ್ನುವ ಸುಧೀರ್ಘ ರಚನೆ ಇವರ ಇನ್ನೊಂದು ಮಹತ್ವದ ಕೊಡುಗೆ. ಇದು ೬೫ ನುಡಿಗಳಲ್ಲಿ ದಾಸ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವ ವಿಷಯಗಳನ್ನೊಳಗೊಂಡಿದೆ. ಶ್ರೀ ಕಾರ್ಪರ ನರಹರಿ ದಾಸರನ್ನು ಕುರಿತು ಶ್ರೀ ಲಕುಮೀಶಾಂಕಿತರು ಶ್ರೀ ರಂಗನಾಥ ಅಂಕಿತರು, ವೆಂಕಟ ಅಂಕಿತರು ಮುಂತಾದವರು ಸ್ತೋತ್ರ ಪದಗಳನ್ನು ರಚಿಸಿದ್ದಾರೆ.

'ಏನು ಕೊಡಲಿ ಗುರುದಕ್ಷಿಣೆ
ಈ ಕ್ಷೋಣಿಯಿತ್ತರು ಸರಿಗಾಣೆನಾ
ಧ್ಯಾನವ ಮಾಡುವೆ ಪ್ರತಿದಿನ ಬಿಂಬ
ಜ್ಞಾನವಿತ್ತು ರಕ್ಷಿಪರನ್ನೂ
ಎಂದು ಹೇಳುತಾ ಆತ್ಮಾರ್ಪಣೆಯೆ | ಗುರುದಕ್ಷಿಣೆ ಎನ್ನುತ್ತಾರೆ.

ಇವರು ಕೊನೆಗೆ ಕ್ರಿ.ಶ.೧೯೭೭ರಲ್ಲಿ ನಿಧನರಾದರು.

ಮುಕ್ತಾಯಕ್ಕ

ಇಂದಿನ ಗದಗ ಜಿಲ್ಲೆಯ ಲಕ್ಕುಂಡಿಯು ಮುಕ್ತಾಯಕ್ಕಳ ತವರೂರು ಆದರೆ ಇವಳ ಗಂಡನ ಊರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರಕಲ್ಲು. ಈ ಮೊಸರಕಲ್ಲಿನಲ್ಲಿ ಮುಕ್ತಾಯಕ್ಕನ ದೇವಾಲಯವಿದೆ. ಅಲ್ಲದೆ ಊರಿನ ಹೆಣ್ಣುಮಕ್ಕಳಿಗೆ ಮುಕ್ತಾಯಕ್ಕ ಎಂದು ಹೆಸರನ್ನು ಇಟ್ಟುಕೊಳ್ಳುವ ವಾಡಿಕೆ ಇಲ್ಲಿದೆ. ಗ್ರಾಮಕ್ಕೆ ಹತ್ತಿರದಲ್ಲಿ ಅಲ್ಲಮ ಪ್ರಭು ಸಂಚಾರದಲ್ಲಿ ತಂಗಿದ್ದನೆಂದು ಹೇಳುವ ಸ್ಥಳ (ಗೊಗಲ್ಲು)ವಿದೆ. ಇವು ಮುಕ್ತಾಯಕ್ಕ ದೇವದುರ್ಗ ತಾಲೂಕಿನ ಮೊಸರಕಲ್ಲು ಗ್ರಾಮದವಳೆಂಬುದನ್ನು ಸಮರ್ಥಿಸುತ್ತವೆ.

ಇದುವರೆಗೆ ಮುಕ್ತಾಯಕ್ಕನ ೩೨ ವಚನಗಳು ದೊರಕಿವೆ. ಈಕೆಯ ವಚನಗಳ ಅಂಕಿತ "ಅಜಗಣ್ಣ ತಂದೆ" ಎಂಬುದಾಗಿದೆ. ತನ್ನ ಅಣ್ಣನನ್ನು ಗುರುವೆಂದು ಸ್ವೀಕರಿಸಿ ಸಾಧನೆಯಲ್ಲಿ ತೊಡಗಿದವಳು. ವಚನಕಾರ್ತಿಯರಲ್ಲಿ ಅಕ್ಕಮಹಾದೇವಿಯ ನಂತರದ ಸ್ಥಾನ ಮುಕ್ತಾಯಕ್ಕಳದಾಗಿದೆ. ಮುಕ್ತಾಯಕ್ಕ ತನ್ನ ಅಣ್ಣನೂ, ಗುರುವೂ ಆದ ಅಜಗಣ್ಣನ ಮರಣದಿಂದ ದುಃಖಿಸುತ್ತಿರುವಾಗ ಅಲ್ಲಮ ಪ್ರಭುದೇವರು ಆಗಮಿಸಿ "ಅಂಗೈಯಲೊಂದು ಅರಳ್ದ ತೆಲೆಯ ಹಿಡಿದುಕೊಂಡು ಕಂಗಳ ಮುತ್ತು ಪೋಣಿಸುವಾಕೆ ನೀನಾರು ಹೇಳಾ" ಎಂಬ ಪ್ರಾರಂಭದ ನುಡಿಯೇ ಮಾಯೆಯನ್ನು ನಿವಾರಿಸುತ್ತದೆ. ಅಲ್ಲಮದೇವರಿಗೆ ಆಕೆ ಕೊಟ್ಟ ಉತ್ತರವೂ ಅಷ್ಟೇ ಮಾರ್ಮಿಕವಾಗಿದೆ.

"ಆರೆಂದು ಹೇಳಲಿ ಕಾಯಕದಲ್ಲಿ ಮಾಯವಿಲ್ಲ
ಭಾವದಲ್ಲಿ ಭ್ರಮೆಯಲ್ಲಿ ಕರೆದು ಹೇಳುವುದಾದರೆ ಒಂದು
ಕುರುಹಿಲ್ಲ ನಾನು ಅಜಗಣ್ಣ ತಂದೆಯ ಬಳವಳಿಯವಳು"

ಎಂದು ಹೇಳಿ ದುಃಖಿಸಿದಾಗ ಆಗ ಪ್ರಭುದೇವರು ಜ್ಞಾನಿಯಾದ ನೀನು ಸಾಮಾನ್ಯರಂತೆ ಅಳುವುದು ಸರಿಯೇ? ಅವನನ್ನು ಮರೆತ ಬಿಡು ಎಂದಾಗ "ಎಂಥ ಮರೆವೆನಯ್ಯ ಅಜಗಣ್ಣ ತಂದೆಯನು" ಎಂದು ಮುಕ್ತಾಯಕ್ಕ ಕೇಳುತ್ತಾಳೆ. ಹೀಗೆ ಅಲ್ಲಮ ಪ್ರಭುದೇವರ ಮತ್ತು ಮುಕ್ತಾಯಕ್ತನ ಮಧ್ಯ ನಡೆದ ಸಂವಾದ ಮುಕ್ತಾಯಕ್ಕನ ದುಃಖವನ್ನು ದೂರ ಮಾಡುತ್ತದೆ.

"ಗುರು ವಚನದಿಂದಲ್ಲದೆ ಲಿಂಗ ಜಂಗಮ
ಪ್ರಸಾದ ತಿಳಿಯದು
ಗುರು ವಚನದಿಂದಲ್ಲದೆ ತನ್ನ ತಾನರಿಯಲು
ಬಾರದು" ಹೀಗೆ ಮುಂತಾದ ವಚನಗಳನ್ನು ರಚಿಸಿದ್ದಾಳೆ. (ಸಿರಿದುರ್ಗ ಪು.೪೩)

ಗೊಗಲ್ಲು ಪರಪ್ಪಯ್ಯ

ಕ್ರಿ.ಶ.೧೭೮೦ರಲ್ಲಿ ಗುಲ್ಬರ್ಗ ಜಿಲ್ಲೆಯ ಶಾಹಪುರ ತಾಲೂಕಿನ ಬೆಂಡಗಂಬಳಿ ಗ್ರಾಮದಲ್ಲಿ ಪರಪಯ್ಯನವರು ಜನಿಸಿದರು. ಅಕ್ಕಸಾಲಿಗರ ಮತಕ್ಕೆ ಸೇರಿದ ಕಾಳಮ್ಮ ಮತ್ತು ಮಾನಪ್ಪ ಎಂಬುವರು ಇವರ ತಂದೆ ತಾಯಿಗಳಾಗಿದ್ದರು. ಬೆಂಡಗಂಬಳಿ ೧೨ನೇ ಶತಮಾನದಲ್ಲಿ "ಮರಿಕಲ್ಯಾಣ" ಎಂಬ ಹೆಸರು ಪಡೆದುಕೊಂಡಿತ್ತು. ಈ ಬೆಂಡಗಂಬಳಿ ಗ್ರಾಮ ಗೊಗಲ್ಲು ಪಕ್ಕದಲ್ಲಿ ಕೃಷ್ಣಾನದಿ ದಡದಲ್ಲಿದೆ.

ಪರಪ್ಪಯ್ಯನಿಗೆ ಓದು ಬರಹ ಕಲಿಸಬೇಕೆಂದು ತಂದೆ-ತಾಯಿಗಳು ಪ್ರಯತ್ನಿಸಿದರು. ಆದರೆ ಪರಪ್ಪಯ್ಯನಿಗೆ ಆಧ್ಯಾತ್ಮದ ಕಡೆಗೆ ಹೆಚ್ಚಿನ ಒಲವು ಇದ್ದಿತ್ತು. ನಂತರ ಪರಪ್ಪಯ್ಯನಿಗೆ ಸಾವಿತ್ರಮ್ಮ ಎಂಬ ಕನ್ಯೆಯೊಡನೆ ಮದುವೆ ಮಾಡಿದರು. ಪರಪ್ಪಯ್ಯನಿಗೆ ಸಂಸಾರದಲ್ಲಿಯೂ ಆಧ್ಯಾತ್ಮದಲ್ಲಿಯೂ ತೃಪ್ತಿಯಿಲ್ಲದಾಯಿತು. ಕೆಲವು ದಿನಗಳ ನಂತರ ಹೆಂಡತಿ-ಮಕ್ಕಳು ಮರಣಕ್ಕೀಡಾದರು. ಇದರಿಂದ ಪರಪ್ಪಯ್ಯನ ಮನಸ್ಸಿಗೆ ಆಘಾತವಾಗಿ ಏಕಾಂತ ಬಯಸತೊಡಗಿದನು. ಕೊನೆಗೆ ಏಕಾಂತ ಸ್ಥಳವಾಗಿದ್ದ ಗೊಗಲ್ಲುವಿನ ಪ್ರಭುದೇವರ ಗುಡಿಯೇ ಅಧ್ಯಾತ್ಮದ ಆಶ್ರಯವಾಯಿತು. ಕೊನೆಗೆ ಕ್ರಿ.ಶ.೧೮೫೦ರಲ್ಲಿ ಅಲ್ಲಿಯೇ ನಿಧನರಾದರು. ಈತನನ್ನು ಪ್ರಭುದೇವರ ಗುಡಿಯ ಮುಂಭಾಗದಲ್ಲಿ ಸಮಾಧಿ ಮಾಡಿ ಆ ಸ್ಥಳದಲ್ಲಿ ಸಣ್ಣದೊಂದು ಗುಡಿಯನ್ನು ಕಟ್ಟಿದ್ದಾರೆ. ಈತನು ನಾಲ್ಕು ಅಂಕಿತಗಳನ್ನು ಹೊಂದಿರುವುದು ತಿಳಿದು ಬರುತ್ತದೆ. ಅವು ಧರ್ಮ, ನಗರಪರ್ವ, ಪ್ರಭು ಮತ್ತು ಆನೆಗೊಂದಿ ವೀರಭದ್ರ. ಈತನ ರಚನೆಗಳಲ್ಲಿ ಆತ್ಮದ ಮೊರೆ. ದರ್ಶನದ ಹಂಬಲ ಬಾಳ ಬೇಗುದಿಯ ಚಿತ್ರಣ ಕಂಡುಬರುತ್ತವೆ.

ಪರಪ್ಪಯ್ಯನವರು ನದಿಗೆ ಬಟ್ಟೆ ಒಗೆಯಲು ಹೋದಾಗ ಗೃಹಿಣಿಯೊಬ್ಬಳಿಗೆ ಕಲ್ಲು ಬಿಡುವಂತೆ ಕೇಳುತ್ತಾ

"ಎನ್ನನು ಕಲ್ಲು ಬಿಡೆ | ಈ ಧೋತರ
ಚೆನ್ನಾಗಿ ತೊಳೆಯಬೇಕು"

ಈ ಹಾಡಿನಲ್ಲಿ ಈ ಶರೀರ ಹೊಲಸಾಗಿದೆ. ಅದನ್ನು ಒಗೆಯಬೇಕು ಅದೂ ಪ್ರಣವ ವೇಳೆ ಮುಗಿಯುವುದರೊಳಗಾಗಿ ಒಗೆಯಬೇಕು ಎಂದು ಪರಪ್ಪಯ್ಯ ಶರೀರಕ್ಕೂ ದೋತರಕ್ಕೂ ಕಲ್ಪಿಸಿದ ರೂಪಕ ಅರ್ಥಪೂರ್ಣವಾಗಿದೆ.

ಮೊರೆಹೊಕ್ಕೆ ನೀ ಕಾಯೋ ಮಲೆತ ಮಲ್ಲಿನ ಗೂಳಿ ಸೂಗೂರ ವೀರ |
ನೀ ಕರೆದರೆ ಓ ಎಂದು ಕಾಮಿತ ಫಲದಾಯ ಸೂಗೂರು ದೀರ
ಮಾತನಾಡೋ ಮಹಾದೇವ
ಮಾಯಾ ಕೋಲಹಲ ಅಲ್ಲಮಪ್ರಭು
ಜಾತ ವಿರಹಿತ ಈರೇಳು ಜಾಗದ ಜೀವಾಳ ||

ಎಂದು ಹೇಳಿದ್ದಾರೆ.

ಗಣೇಕಲ ಸಂಗವಿಭು

ಹತ್ತೊಂಬತ್ತನೆಯ ಶತಮಾನದ ವೀರಶೈವ ಕವಿ. ಲಕ್ಷ್ಮೀಶನನ್ನು ತಮ್ಮನೆಂದು ಷಡಕ್ಷರಿಯನ್ನು ಅಣ್ಣ ಎಂದು ಈತ ಹೇಳಿಕೊಂಡಿದ್ದನ್ನು ಗಮನಿಸಿದರೆ ಆ ಇಬ್ಬರು ಜನಪ್ರಿಯ ಕವಿಗಳನ್ನು ಈತ ವಿಶೇಷವಾಗಿ ಅಭ್ಯಾಸ ಮಾಡಿದ್ದನೆಂದು ಹೇಳಬಹುದು.

ಕವಿ ಸಂಗವಿಭು ತನ್ನ ಹುಟ್ಟೂರನ್ನಾಗಲೀ ಗಣೇಕಲ್ಲಿನ ವಿಚಾರವನ್ನಾಗಲೀ ತನ್ನ ಕಾವ್ಯಗಳಲ್ಲಿ ಹೇಳಿಕೊಂಡಿಲ್ಲವಾದರೂ ಈತನು ಕುಮಾರ ವಿಜಯದಲ್ಲಿನ ಕೆಲವು ಆಧಾರಗಳ ಮೇಲೆ ಇವನಿಗೆ ಸಂಗಪ್ಪ ಎಂಬ ಹೆಸರು ಇದ್ದಂತೆ ತಿಳಿಯುತ್ತದೆ. ಇವನು ಆಂಧ್ರಪ್ರದೇಶದ ರಾಜ್ಯದ ಆದವಾನಿ (ಆದೋನಿ) ತಾಲೂಕಿನ ನಂದವಾರ ಗ್ರಾಮದ ನಾಡಗೌಡ ಮನೆತನದವನಾಗಿದ್ದಾನೆ. ಈತ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗಣೇಕಲ್ ಗೌಡನ ಮನೆತನದ ಹೆಣ್ಣನ್ನು ಮಾಡಿಕೊಂಡು ತನ್ನ ಜೀವಿತದ ಬಹುಕಾಲವನ್ನು ತನ್ನ ಮಾವನ ಮನೆಯಲ್ಲಿಯೇ ಕಳೆದ. ಆತನ ಭಾವ ಮೈದುನ ಸಿದ್ಧಲಿಂಗಪ್ಪ ಸಂಸ್ಥಾನ (ಹಿಂದೆ ಈ ಗಣೇಕಲ್ ಸಂಸ್ಥಾನವು ೨೦೦ ಹಳ್ಳಿಗಳನ್ನು ಒಳಗೊಂಡಿತ್ತು)ದ ಕಾರಭಾರವನ್ನು ಈತನಿಗೆ ಒಪ್ಪಿಸಿದ. ಸಂಗವಿಭು ಕ್ರಿ.ಶ.ಸು.೧೮೩೨ ರಿಂದ ೧೮೫೭ರ ಅವಧಿಯಲ್ಲಿ ತನ್ನ ಕಾವ್ಯಗಳನ್ನು ರಚಿಸಿದ್ದು ಇವುಗಳು ಅವನ ಹುಟ್ಟೂರಾದ ನಂದವಾರದಲ್ಲಿ ಸಿಗದೇ ರಾಯಚೂರು ಜಿಲ್ಲೆಯ ಪ್ರದೇಶದಲ್ಲಿ ಸಿಗುತ್ತವೆ. ದೇವದುರ್ಗ ತಾಲೂಕಿನ ಗಣೇಕಲ್‌ನ ಸುತ್ತಮುತ್ತಲಿನ ಪ್ರದೇಶದಲ್ಲಿ ಈತ ರಚಿಸಿದ ಶತಕಗಳನ್ನು ಓದುವ ಪರಿಪಾಠವಿದೆ. ಇದುವರೆಗೂ ದೊರೆತ ಸಂಗವಿಭುವಿನ ಕಾವ್ಯಗಳು ನಾಲ್ಕಾಗಿದ್ದು ಅವುಗಳು

೧. ಭುವನೈಕನಾಯಕಿ ಶತಕ
೨. ಬಸವ ಶತಕ
೩. ಪಂಪಾಶತಕ
೪. ಕುಮಾರ ವಿಜಯ

ಚಂಪೂ ಕಾವ್ಯಗಳಾಗಿವೆ. ಬಸವ ಶತಕದಲ್ಲಿ ಕವಿ ತನ್ನ ಹೆಸರನ್ನು ಹೇಳಿಕೊಳ್ಳುತ್ತಾನೆ.

"ಮಂಗಳ ಮೂರ್ತಿ ನಿನ್ನ ಪದಸೇವೆಯೊಳಚ್ಯುತ ಭಕ್ತಿಯಿಂದನಲ್ಲಂಗಿ ಕುಲಾಢ್ಯ ಸಂಗವಿಭು ವರ್ಣಿತಮೀ ಶತಕ ಪ್ರಬಂಧವೊಂದಿಂಗತವಾಗಿ ತೆತ್ಕೆತ ಸಮರ್ಪಣ ಭಾವವನೊಪ್ಪಿ ಸತ್ಕೃಪಾಪಾಂಗದಲ್ಲೀಕ್ಷಿಸಯ್ಯಾ ಶರಣ ಶರಣಾಗತ ವಜ್ರಪಂಜರಾ"

ಕುಮಾರ ವಿಜಯ ಚಂಪು ಮಹಾಕಾವ್ಯದಲ್ಲಿ

"ಇಂತು ವಿಶಿಷ್ಟಾಶಿವಾದ್ವೈ

ತಂತಳೆದ ಮಹಾನು ಭಾವರೂಲವಿಂನಂವಿಂ

ಸಂತತ ಮತುಲಂ ತತಪದ

ಮಂತುತಿನ ಕುಮಾರ ಸಂಭವಂ ಕನ್ನಡಿಪೇರಿ

ಸಲ್ಕವಿ ಕಾಳಿದಾಸ ತಾಂ

ಪೇಳಿದ ಸತ್ಕತಾ ಸರಣಿ ವೈಖರಿಯಂ ನೆರೆಯಿಂದ ಬಣ್ಣಿಪರಿ"

ಷಡಕ್ಷರಿಯ ಕಾಲಕ್ಕೆ ನಿಂತು ಹೋಗಿದ್ದ ಚಂಪು ಯುಗವನ್ನು ತನ್ನವರೆಗೂ ನಡೆಸಿಕೊಂಡ ಬಂದ ಕೀರ್ತಿ ಸಂಗವಿಭುವಿಗೆ ಸಲ್ಲುತ್ತದೆ. ಸಂಗವಿಭುವಿನ ಶತಕಗಳಲ್ಲಿ ನೀತಿಯ ಬಗ್ಗೆ ರಸವತ್ತಾಗಿ ಹೇಳಿದ್ದಾನೆ.

"ಬಾಣನ ಭಕ್ತಿಯಂ ಮನೆಯ ಬಾಗಿಲು ಬಲ್ಲದು ಪಾರ್ಥ ಭಕ್ತಿಯಂ

ಬಾಣವು ಬಿಲ್ಲು ದೊಂದಡಿಯು ಬಲ್ಲದು ಕಣ್ಣನೊಪ್ಪ ಭಕ್ತಿಯಂ

ಮೊಣದ ನಿಮ್ಮ ಭಕ್ತಿಯನು ಚಿತ್ತವು ಬಲ್ಲದು ಚಿನ್ಮಯೋತ್ಮಕ

ಲ್ಯಾಣಪುರ ಪ್ರಸಿದ್ಧ ಶರಣಾ ಶರಣಾಗತ ವಜ್ರ ಪಂಜರಾ"

ಭುವನೈಕ ನಾಯಕೀ ಶತಕದಲ್ಲಿ ಪಾರ್ವತಿಯ ವರ್ಣನೆ ಮಾಡುವದರಲ್ಲಿ ಕವಿಯ ಭಕ್ತಿ ಗೌರವಗಳ ಜೊತೆಗೆ ಅವನ ದೃಷ್ಟಿ ಆಕೆಯ ಅಲೌಕಿಕ ಸೌಂದರ್ಯವನ್ನು ಕಂಡಿದೆ. ಪಂಪಾಶತಕವಂತೂ ತುಂಬಿ ಹರಿಯುವ ಪ್ರವಾಹದಂತೆ ನಿರರ್ಗಳವಾಗಿ ಸಾಗುತ್ತದೆ. ಸಂಸ್ಕೃತ ಭಾಷೆಯಷ್ಟೇ ಸಮರ್ಥವಾಗಿ ಅಚ್ಚಗನ್ನಡ ಮತ್ತು ಪ್ರಾದೇಶಿಕ ಶಬ್ದಗಳನ್ನು ಸಂಗವಿಭು ಸುಂದರವಾಗಿ ಜೋಡಿಸುತ್ತಾನೆ.

"ತೊಗೆಯುಂಟಾದೊಡೆ ತುಪ್ಪಮೆಂಬ ನೆರೆತುಪ್ಪಂ ನೀಡಲೇ ನೀ ಬರೇ

ಯಗಳೆಂತು ತುಂಬುವೆನೆಂದು ಸಾರುತರ ವೇಳಲ್ತಂದು ನೀಡಲ್ಕೆಮ |

ಜ್ಜಿಗೆ ಬೇಕೆಂಬುವಪ್ಪುಗೂಡಿ ಮನುಜಂಗೇ ನಿರ್ದರೇನಪ್ಪುದೇ

ಮಿಗೆ ತೃಪ್ತತ್ವಕ್ಕೆ ಸಾಲದೆಂಬನ ಭವಾ ಪಂಪಾ ಪುರಾಧೀಶ್ವರಾ |'

ಅಶಾಂತಿ ಅವ್ಯವಸ್ಥೆಗಳ ಕಾಲದಲ್ಲಿದ್ದವನಾದರೂ ಕವಿ ಮನಸ್ಸಿನ ಸ್ಥಿಮಿತವನ್ನು ಬೋಧಿಸುವ ಶತಕಗಳನ್ನು, ಚಂಪೂ ಕಾವ್ಯವನ್ನು ರಚಿಸಬಲ್ಲಂಥ ರಸಪ್ರಜ್ಞೆಯನ್ನು, ಸೃಜನಶೀಲತೆಯನ್ನು ಕಾಯ್ದು ಕೊಂಡಿರುವುದು ಗಮನಾರ್ಹವಾಗಿದೆ(ಬಿ.ಚನ್ನಬಸವ ದೇ.ತಾ.ಸಾ.ಅ.ಧಾ.ವಿ.ವಿ).

ಅಪರಾಳ ತಮ್ಮಣ್ಣ

ಉತ್ತರ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯಗೊಂಡಿರುವ ಬಯಲಾಟ ಶ್ರೀಕೃಷ್ಣ ಪರಿಜಾತ. ಈ ಬಯಲಾಟ ಪರಂಪರೆ ಕಥಾವಸ್ತುವಿಗೆ ಶ್ರೀಕೃಷ್ಣ ಪಾರಿಜಾತವೆಂಬ ಕಾವ್ಯವನ್ನು ಆಧಾರವಾಗಿಟ್ಟುಕೊಂಡಿದೆ. ಕಾವ್ಯದ ಕರ್ತೃ ಅಪರಾಳ ತಮ್ಮಣ್ಣ.

ಅಪರಾಳ ತಮ್ಮಣ್ಣ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅಪರಾಳ ಗ್ರಾಮದಲ್ಲಿ ಕ್ರಿ.ಶ.೧೭೫೨ರಲ್ಲಿ ಜನಿಸಿದನು. ಅಪರಾಳ ತಮ್ಮಣ್ಣ ಅರೆಗೊಳಿಸಿದ್ದ ಪಾರಿಜಾತವನ್ನು ಸಿರಗುಪ್ಪಿ ಸದಾಶಿವಯ್ಯನೆಂಬುವವನು ಪೂರ್ಣಗೊಳಿಸಿದನು. ಈ ವಿಷಯವನ್ನು ಮೊಟ್ಟ ಮೊದಲು ಬೆಳಕಿಗೆ ತಂದವರು ಡಾ.ಎಂ.ಎಂ.ಕಲಬುರ್ಗಿಯವರು. ಅಪರಾಳ ತಮ್ಮಣ್ಣನ ಕಾಲಕ್ಕೆ ಆಂಧ್ರಪ್ರದೇಶದಲ್ಲಿ ಶ್ರೀಕೃಷ್ಣ ಪಾರಿಜಾತಕ್ಕೆ ಸಂಬಂಧಪಟ್ಟ ಕಾವ್ಯರೂಪ ಮತ್ತು ದೃಶ್ಯ ರೂಪಗಳು ಕ್ರಮವಾಗಿ ನಂದಿ ತಿಮ್ಮಣ್ಣ ಮತ್ತು ಸಿದ್ದೇಂದ್ರಯೋಗಿಯಿಂದ ಬೆಳೆದು ನಿಂತಿದ್ದವು. ಇವುಗಳ ದಟ್ಟವಾದ ಪ್ರಭಾವಕ್ಕೆ ಒಳಗಾದ ಅಪರಾಳ ತಮ್ಮಣ್ಣ ಶ್ರೀ ಕೃಷ್ಣ ಪಾರಿಜಾತವೆಂಬ ಕೀರ್ತನ ಕಾವ್ಯವನ್ನು ಬರೆದ.

ಅಪರಾಳ ತಮ್ಮಣ್ಣನ ಜೀವನಕ್ಕೆ ಹೆಚ್ಚಿನ ಮಾಹಿತಿಗಳು ಲಭಿಸದಿದ್ದರೂ ತಮ್ಮಣ್ಣ ದಿನಾಲು ಕೃಷ್ಣಾ ನದಿಯಲ್ಲಿ ಸ್ನಾನ ಮಾಡಿ ಬಂದು ಒಂದು ಗುಡಿಯಲ್ಲಿ ಕುಳಿತುಕೊಂಡು ಪಾರಿಜಾತ ಕವಿತ್ವ ಮಾಡುತ್ತಿದ್ದ. ಹಿಂದೆ ಈ ಊರಿಗೆ "ಪಾರಿಜಾತ ಅಪರಾಳ" "ಪರಿಜಾತ ತಮ್ಮಣ್ಣನ ಪಟ್ಟಣ್ಣ" ಎಂದು ಕರೆಯುತ್ತಿದ್ದರಂತೆ. ಕ್ರಿ.ಶ.೧೯೦೦ರಲ್ಲಿ ದೇವನಾಗರ ಲಿಪಿಯಲ್ಲಿ ಪ್ರಕಟಗೊಂಡ ಶ್ರೀಕೃಷ್ಣ ಪಾರಿಜಾತದ ಪ್ರಸ್ತಾವನೆಯಲ್ಲಿ ಅಪರಾಳ ತಮ್ಮಣ್ಣನ ಜೀವನಕ್ಕೆ ಸಂಬಂಧಪಟ್ಟ ಘಟನೆಯ ಉಲ್ಲೇಖವಿದೆ. ಇದು ತಾನು ಬರೆಯುತ್ತಿದ್ದ ಶ್ರೀ ಕೃಷ್ಣ ಪಾರಿಜಾತ ಕಾವ್ಯವನ್ನು ಅರ್ಧಕ್ಕೆ ಏಕೆ ನಿಲ್ಲಿಸಿದ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಯಾವುದೋ ಅಪವಾದ ನಿಮಿತ್ತ ರಾಜನು ತಮ್ಮಣ್ಣನನ್ನು ಸೆರೆಯಲ್ಲಿಟ್ಟಿದ್ದನು. ತಮ್ಮಣ್ಣನು ಸೆರೆಯಲ್ಲಿದ್ದುಕೊಂಡು ಅದರ ಗೋಡೆಯ ಮೇಲೆ ಶ್ರೀಕೃಷ್ಣ ಪಾರಿಜಾತ ಕಾವ್ಯವನ್ನು ಬರೆಯ ತೊಡಗಿದನು. ಈ ಪುಣ್ಯಕಾರ್ಯಕ್ಕಾಗಿ ಅವನ ಕೈಕಾಲುಗಳಲ್ಲಿದ್ದ ಬೇಡಿಗಳು ತಾವಾಗಿಯೇ ಕಳಚಿಕೊಂಡವು. ಕಾವಲುಗಾರನು ರಾಜನಿಗೆ ಈ ವಿಷಯವನ್ನು ತಿಳಿಸಲು ಅವನು ಅದಕ್ಕಿಂತಲೂ ಭಾರವಾದ ಬೇಡಿಗಳನ್ನು ಹಾಕಲು ಅವು ಕೂಡ ಮುಂಚಿನ ಬೇಡಿಗಳಂತೆಯೇ ಕಳಚಿದವು. ತಮ್ಮಣ್ಣನಿಗೆ ದೊರೆತ ಈ ದೇವರ ಅನುಗ್ರಹಕ್ಕೆ ಮಾರುಹೋದ ರಾಜನು ತಮ್ಮಣ್ಣನನ್ನು ಬಂಧನದಿಂದ ಮುಕ್ತಗೊಳಿಸಿದನು.

ತಮ್ಮಣ್ಣನು ಮನೆಯಲ್ಲಿದ್ದುಕೊಂಡು ಗ್ರಂಥರಚನೆಯನ್ನು ಮುಂದುವರೆಸಿದನು. ಒಮ್ಮೆ ವಿದ್ವಾಂಸರೊಬ್ಬರು. ಊರಿಗೆ ಬಂದಾಗ ತಮ್ಮಣ್ಣನು ತನ್ನ ಗ್ರಂಥವನ್ನೊಯ್ದು ತೋರಿಸಿದನು. ವಿದ್ವಾಂಸರು ಗ್ರಂಥವೇನೊ ಒಳ್ಳೆಯದಾಗಿದೆ. ಆದರೆ 'ಹಿರಿಯವಳಾದರೇನು ಘನವಕ್ಕು' ಎಂಬ ಪದದಲ್ಲಿ

ಶ್ರೀಮಹಾಲಕ್ಷ್ಮಿಯರಿಗೆ ನೀಚ ವಿಶೇಷಣ ಕೊಟ್ಟಿರುವ ನಿಮಿತ್ತ ಇನ್ನು ಮುಂದೆ ಗ್ರಂಥ ಮುಗಿಸುವುದಕ್ಕೆ ನಿನಗೆ ಅಪ್ಪಣೆಯಲ್ಲ ಎಂದು ನುಡಿದರು. ಹೀಗೆ ಅರ್ಧಕ್ಕೆ ನಿಂತ ತನ್ನ ಕಾವ್ಯವನ್ನು ಸಂಗಯ್ಯನೆಂಬುವವನಿಗೆ ಹೇಳಿ ಅವನಿಂದ ಪೂರ್ಣಗೊಳಿಸಿದನು. ಇದೊಂದು ಮುದ್ರಿತ ಪ್ರತಿಯನ್ನು ಬಿಟ್ಟರೆ ಉಳಿದೆಲ್ಲಾ ಹಸ್ತ ಪ್ರತಿಗಳಲ್ಲಿ ಎರಡನೆ ಕವಿಯ ಹೆಸರು ಸದಾಶಿವಯ್ಯ ಎಂದಿದೆ. ಅಪರಾಳ ತಮ್ಮಣ್ಣ ಒಬ್ಬ ಹರಿದಾಸನೆಂದೂ 'ಗೋಪಾಲ' ಎಂಬ ಅಂಕಿತದಡಿಯಲ್ಲಿ ಕೆಲವು ದೇವರನಾಮಗಳನ್ನು ಬರೆದಿರುವನೆಂದು ವಿದ್ವಾಂಸರು ಉಲ್ಲೇಖಿಸುತ್ತಾರೆ. ಇದಕ್ಕೆ ಪುಷ್ಟಿ ಎಂಬಂತೆ ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ ಕಾವ್ಯದಲ್ಲಿ ಇಪ್ಪತ್ತು ಪದ್ಯಗಳಿಗೆ 'ಗೋಪಾಲ' ಎಂಬ ಮುದ್ರಿಕೆಯಿದೆ. ಇವರು ಅಪರಾಳ ತಮ್ಮಣ್ಣನ ಗುರುವೆಂದು ತಿಳಿದುಬಂದಿದೆ. ಅಪರಾಳ ತಮ್ಮಣ್ಣನ ಕಾಲದಲ್ಲಿ ರಾಯಚೂರು ಜಿಲ್ಲೆಯನ್ನು ಒಳಗೊಂಡಂತೆ ದೇವದುರ್ಗ ಪ್ರದೇಶದಲ್ಲಿ ಹರಿದಾಸ ಸಾಹಿತ್ಯ ಬಹಳ ಪ್ರಚುರದಲ್ಲಿತ್ತು. ಕ್ರಿ.ಶ.೧೭೨೨ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮೊಸರಕಲ್‌ನಲ್ಲಿ ಗೋಪಾಲದಾಸರು ಜನಿಸಿದರು. ಇವರು ದಾಸ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಮರವಾಗಿದೆ. ಇವರು ಅಪರಾಳ ತಮ್ಮಣ್ಣನ ಗುರುವಾಗಿದ್ದರೆಂದು ಊಹಿಸಲಾಗಿದೆ.

ಅಪರಾಳ ತನ್ನ ಜೀವಿತ ಕಾಲದಲ್ಲೆ ತನ್ನ ಕಾವ್ಯವನ್ನು ರಂಗಭೂಮಿಗೆ ಅಳವಡಿಸಿ ಮಗನೊಂದಿಗೆ ಆಡಿದ ಎಂಬ ಹೇಳಿಕೆಯೊಂದು ಆರ್.ಜಿ.ಕುಲಕರ್ಣಿಯವರಿಂದ ಸಂಪಾದಿಸಲ್ಪಟ್ಟ ಶ್ರೀ ಕೃಷ್ಣಪಾರಿಜಾತದ ಪ್ರಸ್ತಾವನೆಯಲ್ಲದೆ. ಜನರಲ್ಲಿ ಧರ್ಮ ಭಾವನೆಯನ್ನು ಲೋಕನೀತಿಯನ್ನು ಜಾಗೃತಗೊಳಿಸಬೇಕೆಂಬ ಉದ್ದೇಶದಿಂದ ಅಪರಾಳ ತಮ್ಮಣ್ಣನವರು ತಮ್ಮ ಮಗನೊಂದಿಗೆ ಇದನ್ನು ಅಭಿನಯಿಸುತ್ತಿದ್ದರೆ ಇದನ್ನು ಕಂಡು ಸಹಿಸದ ಕೆಲವು ಜನ ತಮ್ಮಣ್ಣನು ಮಾಧ್ವತತ್ವಜ್ಞಾನದ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ವ್ಯಾಸರಾಯ ಮಠದ ಸ್ವಾಮಿಗಳಾದ ಶ್ರೀ ವಿದ್ಯಾಪ್ರಸನ್ನ ತೀರ್ಥರಿಗೆ ದೂರು ಕೊಟ್ಟರು. ಈ ದೂರಿನ್ವಯ ಸ್ವಾಮಿಗಳು ತಮ್ಮಣ್ಣನನ್ನು ಬಹಿಷ್ಕರಿಸಿದರಂತೆ. ಆಗ ತಮ್ಮಣ್ಣನವರು ಸ್ವಾಮಿಗಳೆದುರು ನಾಟಕವನ್ನು ಪ್ರದರ್ಶಿಸಿ ಅವರನ್ನು ಮೆಚ್ಚಿಸಿ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳುವಂತೆ ಮಾಡಿದರೆಂದು ತಿಳಿದುಬರುತ್ತದೆ (ದೇ.ತ.ಸಾಂ ಅ., ಬಿ.ಚನ್ನಬಸವ ಮಲ್ಕಂದಿನ್ನಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ).

ಗಬ್ಬೂರು ಬಿಬ್ಬಿ ಬಾಚಯ್ಯ

ಹನ್ನೆರಡನೆಯ ಶತಮಾನದ ಪ್ರಮುಖ ಶರಣರಲ್ಲಿ ಗಬ್ಬೂರಿನ ಬಿಬ್ಬಿ ಬಾಚಯ್ಯನು ಒಬ್ಬ. ಬಿಬ್ಬ ಇಲ್ಲವೆ ಬಿಬ್ಬಿ ಬಾಚಯ್ಯನು ಬಾಚರಸ ಎಂಬ ಶರಣರಿಂದ (ಸಿದ್ಧರಾಮ) ಕರೆಸಿಕೊಂಡಿದ್ದಾನೆ. "ಏಣಾಂಕಧರ ಸೋಮೇಶ್ವರ" ಎಂಬ ವಚನಾಂಕಿತವನ್ನು ಇಟ್ಟುಕೊಂಡು ಅನೇಕ ವಚನಗಳನ್ನು ರಚಿಸಿದ್ದಾನೆ. ಈತನ 'ಪ್ರಸಾದ ಮಹಾತ್ಮೆ' ಪ್ರಸಿದ್ಧವಾದುದು. ಪ್ರಸಾದವನ್ನು ಎಂಜಲೆಂದು ನಿಂದಿಸಿದ

ಗಬ್ಬೂರಿನ ವಿಪ್ರರಿಗೆ ಶರಣರ ಪ್ರಸಾದ ಮಹಿಮೆಯನ್ನು ಮನಗಾಣಿಸಿದ ಪವಾಡವೊಂದು ಈತನ ಹೆಸರಿನಲ್ಲಿದೆ. ಅದು ಈ ಕೆಳಗಿನಂತಿದೆ.

ಗಬ್ಬೂರು ಒಂದು ಅಗ್ರಹಾರ. ಇಲ್ಲಿ ಆದಿತ್ಯದೇವ ಎಂಬ ವಿಪ್ರನ ಮಗ ಬಾಚಯ್ಯ ಕುಲದಿಂದ ವಿಪ್ರನಾದರೂ ಶರಣ ಮಾರ್ಗದ ಆಕರ್ಷಣೆಗೆ ಒಳಗಾಗಿ ತನ್ನ ಕುಲ ತೊರೆದು ಶರಣನಾದ. ಶರಣರ ಒಕ್ಕು ಮಿಕ್ಕ ಪ್ರಸಾದ ಜೀವಿಯಾದ. ಒಂದು ದಿನ ಪಕ್ಕದ ಹಳ್ಳಿಯಲ್ಲಿ ಜಂಗಮಾರಾಧನೆ ಮುಗಿಸಿ ಪ್ರಸಾದವನ್ನು ಬಂಡಿಯಲ್ಲಿ ತುಂಬಿಕೊಂಡು ಗಬ್ಬೂರಿಗೆ ಮರಳುವಾಗ, ಊರೊಳಗಿನ ವಿಪ್ರರು ಪ್ರಸಾದವನ್ನು ಎಂಜಲೆಂದು ನಿಂದಿಸುತ್ತಾರೆ. ಕೋಪಾವಿಷ್ಟನಾದ ಬಾವಯ್ಯನು ಅವರ ಕುಹಕ ನುಡಿಗಳಿಗೆ ಪ್ರತಿಯಾಗಿ ಪ್ರಸಾದವೆತ್ತಿ ಅವರ ಮನೆಗಳ ಮೇಲೆ ತೂರುತ್ತಾನೆ. ಮನೆಗೆ ಉರಿಬಿದ್ದು ಧಗಧಗಿಸ ತೊಡಗುತ್ತವೆ. ತಪ್ಪಾಯಿತೆಂದು ವಿಪ್ರರು ಬಾಚಯ್ಯನಿಗೆ ಶರಣ ಬರುತ್ತಾರೆ. ಬಾಚಯ್ಯ ಪ್ರಸಾದದ ಉರಿಯನ್ನು ಹಿಂತೆಗೆದುಕೊಳ್ಳಲಾಗಿ ಅವರ ಮನೆ ಮೊದಲಿನಂತಾಗುತ್ತದೆ. ಹೀಗೆ ಚಾರಿತ್ರಿಕ ಎನ್ನಬಹುದಾದ ಬಾಚಯ್ಯನ ಪ್ರಸಾದದ ಪವಾಡ ಮುಂದೆ ಕಾವ್ಯ ಪುರಾಣಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲದೆ ನಿರೂಪಿತವಾಗಿರುವುದು ಅರಿವಿಗೆ ಬರುತ್ತದೆ.

ಕ್ರಿ.ಶ.೧೧೯೫ರಲ್ಲಿ ರಚಿತವಾದ ಪಾಲ್ಕುರಿಕೆ ಸೋಮನಾಥ ಕವಿಯ ತೆಲುಗು 'ಬಸವ ಪುರಾಣ'ದಲ್ಲಿ ಎರಡು ಕಡೆ ಬಿಬ್ಬಿ ಬಾಚಯ್ಯನ ಪ್ರಸ್ತಾಪ ಬರುತ್ತದೆ. ಸಂಗಮೇಶ್ವರುಡು ಬಸವಣಿ ಮಾಡುವ ಕನ್ನಡುಗು ಕಥೆ ಹೇಳುವಲ್ಲಿ 'ಪ್ರಸಾದುಲು ಬಿಬ್ಬಿಬಾಚ್ಚಯ್ಯಗಾರು' (ಪ್ರಸಾದಿ ಬಿಬ್ಬಿಬಾಚಯ್ಯ) ವರ್ಣನೆ ಬರುತ್ತದೆ. ಮತ್ತೆ ಸಪ್ತಮಾಶ್ವಾಸನದಲ್ಲಿ 'ಬಿಬ್ಬಿ ಬಾಚಯ್ಯಗಾರ ಕಥೆ' ಎಂಬಲ್ಲಿ ಬಿಬ್ಬಿಬಾಚಯ್ಯನ ಕಥೆ ಬರುತ್ತದೆ. ಕ್ರಿ.ಶ.೧೪೬೦ರಲ್ಲಿದ್ದ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ

ಗೊಬ್ಬೂರಿನೊಳು ಬಿಬ್ಬಿಬಾಚಯ್ಯನುಂ
ಭಕ್ತ ಪ್ರಸಾದಮಂ ಕಯ ಕೊಳಲು ಮತ್ತೊರ್ವ
ಭಕ್ತಿ ಗ್ರಹದಿಂ ಪ್ರಸಾದದ ಭಂಡಿ ತುಂಬಿ ಬರೆ
ದ್ವಿಜರದಂ ಜರಿಯ ಕೇಳಿ
ಸುತ್ತ ಮನೆಗಳ ಮೇಲೆ ತಳೆಯ ಭಸ್ಮಗಳಾಗಿ
ಭಕ್ತಿಯಂ ವಿಪ್ರರುಂ ಬೇಡಿಕೊಳ್ಳಲಾಕ್ಷಣಂ

ಉತ್ಸವದ ಭವನಗಳ ಮಾಡಿ ತೋದವನವರ ಚರಣಾಂಬುಜಕ್ಕೆ ಶರಣು ಎಂದಿದ್ದಾನೆ.

ಕ್ರಿ.ಶ.೧೫೩೦ರಲ್ಲಿ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ

ಶಿವಚಿತ್ತರಾವಿಪ್ರರೊಂದೆಸೆ ಹಿರಿಯ ಭಕ್ತ
ರವರ ಕೆರೆಹಿನ ಕುಣಿಕೆಯೊಂದೆಸೆಯೊಳಿಟ್ಟು ತೂ

ಗುವ ಕಾಲದಲ್ಲಿ ಕೀಲಾಗದೇ ಪಾರ್ವರಾ ಬಿಬ್ಬಿ ಬಾಚರ ಬಂಡಿಯಾ
ನವ ಸುಪ್ರಸಾದಮಂಜರೆದು ಒಂದೆರಗರೇ

ಕ್ರಿ.ಶ.೧೫೫೦ರಲ್ಲಿದ್ದ ನಂಜುಂಡನ ಭೈರವೇಶ್ವರ ಕಾವ್ಯದಲ್ಲಿ

ಸವಿದುಳುಹಿದ ಪ್ರಸಾ
ದವೆ ಭವರೋಗಕ್ಕೆ ಮದ್ದು
ಅವಿರತ ಮುಕ್ತಿಗೆ
ತವರೆಂದು ನಂಬಿರ್ದ
ಭುವಿಯೊಳು ಬಿಬ್ಬಿಬಾಚಯ್ಯ

ಎಂಬುದಾಗಿ ಮೊದಲನೆಯ ಸಂಧಿಯಲ್ಲಿ ಬಂದರೆ

ಪರಮ ಪ್ರಸಾದವ
ತೆರುತಿರೆ ಕಂಡು ಭೂ
ಸುರರೆಲ್ಲ ನಿಂದಿಸಲವರ
ಪುರವ ಸುಡಲು ಬಂದು
ಶರಣ ಪೊಕ್ಕರಿಗೆಲ್ಲಿ
ಮರಳಿತ್ತ ಬಿಬ್ಬಿ ಬಾಚಯ್ಯ

ಎಂಬುದಾಗಿ ಐದನೆಯ ಸಂಧಿಯಲ್ಲಿ ಬರುತ್ತದೆ.

ಕ್ರಿ.ಶ.೧೬೫೦ರಲ್ಲಿದ್ದ ಪಂಚಯ್ಯನ ಭಕ್ತಿರಸದ ಸೋನೆಯಲ್ಲಿ

ಗಬ್ಬೂರೊಲಗೆ ಒಬ್ಬ ಬಿಬ್ಬಿಬಾಚಯ್ಯನು
ಉಬ್ಬಿ ಶೇಷವನೊಯಿವಾಗಾ
ಗಬ್ಬಿ ಪಾರುವರೆಲ್ಲಾ ಕೊಬ್ಬಿಂದ ಜರೆಯಲು
ಅಬ್ಬರದಲಿ ಸುಟ್ಟ ಪುರವ

ಹೀಗೆ ಬಿಬ್ಬಿ ಬಾಚಯ್ಯನ ಕಥೆ ವಿವಿಧ ಕಾವ್ಯಗಳಲ್ಲಿ, ಕಥೆಗಳಲ್ಲಿ ಬರುತ್ತಿದ್ದು ಎಲ್ಲೆಡೆಯೂ ನಾವೂ ನೋಡುವುದು ಬಿಬ್ಬಿ ಬಾಚಯ್ಯನ ಪ್ರಸಾದದ ಬಗ್ಗೆ ಇಟ್ಟಿದ್ದ ನಂಬುಗೆ. ರಾಯಚೂರು ಜಿಲ್ಲೆಯ ಈ ಗಬ್ಬೂರಿನ ಪೂರ್ವ ದಿಕ್ಕಿಗೆ ೨ ಕಿ.ಮೀ. ಅಂತರದಲ್ಲಿ ಬಿಬ್ಬಿ ಬಾಚಯ್ಯನ ಹೊಲವಿದೆ. ಈ ಹೊಲದಲ್ಲಿ ಬಾಚಯ್ಯ ಜಂಗಮರಿಗೆ ನಿತ್ಯ ಪ್ರಸಾಸದ ಅರ್ಪಿಸುತ್ತಿದ್ದ ಎಂದು ಹೇಳಲಾಗುವ 'ಅರ್ಪಣಕಟ್ಟೆ' ಇದೆ. ಈ ಕಟ್ಟೆಯ ಮೇಲೆ ಸೊಂಪಾಗಿ ಬೆಳೆದು ವಿಶಾಲವಾಗಿ ಹರಡಿಕೊಂಡು ನೆಲದವರೆಗೂ ಬಾಗಿ ಮೇಲೆದ್ದಿರುವ ವಿಲಕ್ಷಣ ಅಕರ್ಷಕವಾಗಿರುವ ಬನ್ನಿಯ ಮರ ಇದೆ. ಈ ಅರ್ಪಣಕಟ್ಟೆಯನ್ನು ಬಾಚಯ್ಯನವರ 'ಪ್ರಸಾದ ಅರ್ಪಣದ ಕಟ್ಟೆ' ಎಂದು ಹೇಳುವುದರ ಜೊತೆಗೆ

ಬಾಚಯ್ಯನವರ ಸಮಾಧಿ ಗದ್ದುಗೆ ಇದೆ. ಅರ್ಪಣ ಎಂದಾಗ ಪ್ರಸಾದದ ನೆನಪಾಗುತ್ತದೆ. (ವೀರಶೈವ ಪಾರಿಭಾಷಿಕ ಪದ ಅರ್ಪಣ) ಬಿಬ್ಬಿ ಬಾಚಯ್ಯ ಪ್ರಸಾದಿಕನೆಂದೇ ಪ್ರಸಿದ್ಧಿ. ಈ ಹಿನ್ನೆಲೆಯಲ್ಲಿ ಈ 'ಅರ್ಪಣ ಕಟ್ಟೆ' ಜಂಗಮ ದಾಸೋಹದ ಕಟ್ಟೆಯಾಗಿದ್ದಿರಬಹುದು ಎನಿಸುತ್ತದೆ. ಈ 'ಅರ್ಪಣ ಕಟ್ಟೆ'ಗೆ ನಿತ್ಯ ಪೂಜೆ ಸಲ್ಲುತ್ತಿದ್ದು, ಇದರ ಪೂಜಾರಿಗಳು ಗಾಂಜಿಗುಡಿ ಮಠ ಎಂಬ ವೀರಶೈವ ಜಂಗಮರಾಗಿದ್ದು ಅವರೇ ಈ ಹೊಲದ ಉಸ್ತುವಾರಿಯನ್ನು ನೋಡಿಕೊಳ್ಳುತ್ತ ಬಂದಿದ್ದಾರೆ. ಈ ಹೊಲಕ್ಕೆ ಸಂಬಂಧಿಸಿದ ವಿಶೇಷ ಆಚರಣೆ ಎಂದರೆ ಗಬ್ಬೂರು ಹಾಗೂ ಸುತ್ತಮುತ್ತಲಿನ ಜನ ಯಾರೂ ಹೊಲದಲ್ಲಿ ದನಗಳನ್ನು ಬಿಡುವುದಿಲ್ಲ, ಸುಗ್ಗಿಯಲ್ಲಿ ಕದಿಯುವುದಿಲ್ಲ, ಚಪ್ಪಲಿಯನ್ನು ಮೆಟ್ಟಿಕೊಂಡು ಯಾರು ಹೊಲದೊಳಗೆ ಪ್ರವೇಶಿಸುವುದಿಲ್ಲ. ಕಾರಣ ಕೇಳಿದರೆ ಬಿಬ್ಬಿ ಬಾಚಯ್ಯನವರು ಶರಣರು ಎಂದು ಹೇಳುತ್ತಾರೆ. ಬಾಚಯ್ಯನವರ ಬಗ್ಗೆ ಈ ಜನತೆ ಹೊಂದಿದ ಭಯ ಭಕ್ತಿ ಗಮನಾರ್ಹವಾದುದು.

ರಾಯಚೂರು ಜಿಲ್ಲೆ ಗಬ್ಬೂರಿನಲ್ಲಿ ಬಾಚಯ್ಯ, ಬಿಬ್ಬಣಯ್ಯ, ಬಿಬ್ಬಣ್ಣ, ಬಿಬಿಬಾಚರಸ ಎಂಬ ಹೆಸರಿಡುವುದು ತಲೆ ತಲೆಮಾರಿನಿಂದ ಬೆಳೆದು ಬಂದಿದೆ. ಈ ಊರಿನಲ್ಲಿ ಪ್ರತ್ಯೇಕವಾಗಿ ಬ್ರಾಹ್ಮಣರ ಓಣಿ ಇದ್ದು ಈ ಬ್ರಾಹ್ಮಣ ಮನೆತನದವರು ಮೇಲೆ ಹೇಳಿದ ಬಿಬ್ಬಿ ಬಾಚಯ್ಯನ ಅರ್ಪಣಕಟ್ಟೆಗೆ ನಡೆದುಕೊಳ್ಳುವುದು ಈಗಲೂ ಇದೆ. ಇದರ ಬಗ್ಗೆ ತಾವು ಹಿಂದೆ ಬಾಚಯ್ಯನವರ ಪ್ರಸಾದವನ್ನು ನಿಂದಿಸಿ ತಪ್ಪು ಮಾಡಿದ್ದಾಗಿ ಹೇಳುತ್ತಾರೆ. ಅವರ ಅನುಗ್ರಹಕ್ಕೆ ಈ ಪೂಜೆ ಎನ್ನುತ್ತಾರೆ.

ಬಿಬ್ಬಿಬಾಚಯ್ಯನವರ ೧೦೨ ವಚನಗಳಿವೆ. ಇವುಗಳಲ್ಲಿ ಅವರ ಅಂಕಿತನಾಮ 'ಏಣಾಂಕಧರ ಸೋಮೇಶ್ವರಲಿಂಗ' ಆಗಿದೆ. ಗಬ್ಬೂರಿನಿಂದ ೩ ಕಿ.ಮೀ.ದೂರದಲ್ಲಿ ಸೋಮೇಶ್ವರ(ಜಂಬುಲಿಂಗ) ದೇವಾಲಯವಿದ್ದು, ಈ ದೇವಾಲಯದ ಲಿಂಗದಲ್ಲಿ ಏಳು ಬಣ್ಣಗಳು ಕಾಣುತ್ತವೆ. ಈ ದೇವರ ಹೆಸರಿನಲ್ಲಿ ತಮ್ಮ ವಚನಗಳಿಗೆ ಅಂಕಿತವಿಟ್ಟುಕೊಂಡಿರಬಹುದೆಂದು ಊಹಿಸಲಾಗಿದೆ. ಬಿಬ್ಬಿ ಬಾಚಯ್ಯನವರ ಅನೇಕ ವಚನಗಳು ಸೂತ್ರಪ್ರಾಯವಾಗಿದ್ದು, ವ್ಯಾಖ್ಯಾನದ ಅಗತ್ಯವಿರದಷ್ಟು ಸರಳವಾಗಿವೆ ಮತ್ತು ಅರ್ಥಪೂರ್ಣವಾಗಿದೆ. ಮಾದರಿಗೆ ಕೆಳಗಿನ ಈ ವಚನವನ್ನು ಗಮನಿಸಬಹುದು.

ಸ್ವಪ್ನದಲ್ಲಿ ಸಕಲ ಭೋಗಂಗಳ ಕಂಡು
ಎಚ್ಚೆತ್ತು ನೋಡಿದರೆ ಮತ್ತಲ್ಲಿಯೆ ಬಚ್ಚಬಯಲಾಯಿತ್ತು
ಅದು ತನುವಿನ ಇರುವು, ಮನದ ಭ್ರಾಂತು
ತೋರ್ಕೆ ಅಡಗುವ ಭೇದ
ಏಣಾಂಕಧರ ಸೋಮೇಶ್ವರಲಿಂಗದಲ್ಲಿಯೇ ಐಕ್ಯ ||೨೨||
ಎಲೆಯಿಲ್ಲದ ವೃಕ್ಷದಲ್ಲಿ ಹೂವಿಲ್ಲದ ಕಾಯಾಗಿತ್ತು
ಕಾಯಿ ಉದುರಿ ಹಣ್ಣು ಬಲಿಯಿತ್ತು

ಕಣ್ಣಿಗೆ ಹಣ್ಣಲ್ಲದೆ ಮೆಲುವುದಕಲ್ಲ
ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ||೩೭||

ಯೋನಿಯಿಲ್ಲದ ಆಕಳಿನಲ್ಲಿ, ಬಾಯಿಯಿಲ್ಲದ ಕರು ಹುಟ್ಟಿತ್ತು
ಮೊಲೆಯಿಲ್ಲದ ಹಾಲಕುಡಿದು, ಒಡಲಿಲ್ಲದೆ ತಿರುಗಾಡುತ್ತದೆ
ಏಣಾಂಕಧರ ಸೋಮೇಶ್ವರಲಿಂಗ ಇದೇನು ಸೋಜಿಗವೆಂಬರಿಯೆ ||೩೮||

ಸ್ವಾದವಿಲ್ಲದ ಹಣ್ಣು, ಸೌರಭವಿಲ್ಲದ ಕುಸುಮ
ಸಾರವಿಲ್ಲದ ದ್ರವ್ಯ, ಅದಾರಿಗೆ ಯೋಗ್ಯ
ಅರಿವಿಲ್ಲದವರನ ಇಷ್ಟದ ಬರಿಯೇ ಡಂಬಕದ ಪೂಜೆ
ಅಡಿಯಿಡಲಿಲ್ಲ, ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ||೮೯||

೨. ಗಬ್ಬೂರು ಹಂಪಣ್ಣ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಿಯ ಗ್ರಾಮದ ಬಣಜಿಗರ ಮನೆತನದಲ್ಲಿ ಹುಟ್ಟಿದ ಹಂಪಣ್ಣ ವ್ಯಾಪಾರದ ಲೆಕ್ಕಾಚಾರ ಕಲಿಯುವುದರ ಬದಲು ಆಧ್ಯಾತ್ಮದೆತ್ತರಕ್ಕೇರಿದ ದೊಡ್ಡ ಅನುಬಾವಿ ಕವಿಯಾಗಿ ಬೆಳೆದು ಬದುಕಿನ ವ್ಯಾಪಾರದ ಏರಿಳಿತಗಳನ್ನು ತಿಳಿಸಿದ.

ಶಾಲೆಯಲ್ಲಿ ಏನೂ ಕಲಿಯದ ಹಂಪಣ್ಣ ಯೌವ್ವನಕ್ಕೆ ಬರುವಷ್ಟರಲ್ಲಿ ಆತನ ತಂದೆ ತಾಯಿಯ ನಿಧನರಾದರು. ಅಣ್ಣ ತಮ್ಮಂದಿರು ಈತನನ್ನು ಸೇರದೆ ಮನೆಯಿಂದ ಹೊರ ಹಾಕಿದರು. ಮನೆ ಊರು ಬಿಟ್ಟು ಹಂಪಣ್ಣ ಅಲ್ಲಿ ಇಲ್ಲಿ ಅಲೆದಾಡಿ ಅರಿವು ಬೆಳೆಸಿಕೊಂಡು ಗಬ್ಬೂರಿಗೆ ಬಂದು ನೆಲೆಸಿ ಗಬ್ಬೂರು ಹಂಪಣ್ಣನಾದ.

ಈ ಊರಿನ ಅರ್ಪಣಿಗೆ ಎಂಬುವರ ಮನೆಯಲ್ಲಿ ವಾಸ ಮಾಡಿದ ಹಂಪಣ್ಣ ವ್ಯಾಪಾರ ಮಾಡಲು ಪ್ರಾರಂಭಿಸಿದನು. ಅರಿಷಣ, ಬೆಳ್ಳೊಳ್ಳಿಗಳನ್ನು ಪುಟ್ಟಿಯಲ್ಲಿ ಹೊತ್ತು ಮಾರುವ ವ್ಯಾಪಾರ ಕೈಗೊಂಡ ಹಂಪಣ್ಣನಿಗೆ ಸಂಸಾರದಲ್ಲಿ ಆಸಕ್ತಿ ಇರಲಿಲ್ಲ. ಆದರೂ ಊರಿನ ಪ್ರಮುಖರ ಒತ್ತಾಯದ ಮೇರೆಗೆ ಅದೇ ಊರಿನ ಸಿದ್ಧಮ್ಮನೆಂಬ ಕನ್ಯೆಯೊಂದಿಗೆ ಮದುವೆಯಾದನು. ಆದರೆ ಅವರ ಸಂಸಾರ ಇತರ ಲೌಕಿಕ ಜನರಂತಿರದೆ, ಅದು ಅಧ್ಯಾತ್ಮ ಜ್ಞಾನಿಗಳ ಸಂಗಮವಾಗಿತ್ತು. ಮದುವೆಯಾದ ಮೂರು ನಾಲ್ಕು ವರ್ಷಗಳಲ್ಲಿ ಮಡದಿ ಸಿದ್ಧಮ್ಮ ಮರಣ ಹೊಂದಿದಳು. ನಂತರ ಹಂಪಣ್ಣನ ಜೀವನದಲ್ಲಿ ಪ್ರಮುಖ ಬದಲಾವಣೆಯಾಯಿತು. ಪೂಜೆ ತಪಸ್ಸಾಚರಣೆ ಮಾಡಿದ ಹಂಪಣ್ಣ ಗಬ್ಬೂರಿನ ಸಾಲಿ ದೊಡ್ಡ ಬಸಪ್ಪನವರಿಂದ ಅನುಗ್ರಹ ಪಡೆದುಕೊಂಡು, ಗಬ್ಬೂರಿನ ಮಹಾನಂದೀಶ್ವರ ಬೆಟ್ಟದಲ್ಲಿ ತಪಸ್ಸಿಗೆ ಕುಳಿತು ಮುಂದೆ ಅನುಭಾವಿಯಾಗಿ ಬೆಳೆದು ನಿಂತ.

ಹಂಪಣ್ಣನ ಹಾಡುಗಳಲ್ಲಿ ಅನುಭಾವದೆತ್ತರವಿದೆ. ಮಣಿಪುರಪತಿ ಘನವೃಷಭೇಂದ್ರ ಎಂಬುದು ಈತನ ಹಾಡುಗಳ ಅಂಕಿತವಾಗಿದೆ. ನೀನಿನ್ನ ಇಂಗಿತವರಿತು ಶಿವಲಿಂಗನಾಗೊ 'ಜೀವನದಲ್ಲಿ ಮನುಜ ನೀನೇ ಶಿವಸಹಜ', 'ಎಲೋ ಹುಚ್ಚು ಮಂಗ ನೀ ಮಾಡೋ ಸಜ್ಜನರ ಸಂಗ', 'ತಿಳಿದು ನೋಡೋ ಗಾಢ ತಿಳಿಯದೆ ಕೆಡುವೆ ಎಲ್ಲೋ ಮೂಢ' ಎಂಬಂತಹ ತತ್ವಪದಗಳಲ್ಲಿ ಅರಿವು, ತಿಳಿವು, ಜ್ಞಾನ, ಭಕ್ತಿ ಅನುಭಾವದ ಮಹತ್ವಗಳನ್ನು ತಿಳಿಸಿದ್ದಾನೆ.

ಹೆಂಗಸರ ಮತ್ತು ಗ್ರಾಮಗಳ ಹೆಸರುಗಳನ್ನು ತತ್ವಕ್ಕೆ ಹೊಂದಿಸಿ ಹಾಡಿದ ಪದ್ಯ, ಶ್ಲೇಷೆಯಷ್ಟೇ ಅಲ್ಲ, ಧ್ವನಿಪೂರ್ಣವೂ ಆಗಿದೆ.

"ತಿಳಿಯೆ ಬ್ರಹ್ಮಾನಂದ ಸವಿಯೆ ಸಕ್ಕರೆವ್ವ
ಘಳಿಲಳಿ ಹಮ್ಮವ್ವಾ"

ಅನುಭಾವಿಗಳಿಗೆ ಜಾತಿ-ಮತಗಳಿಲ್ಲವೆಂಬುದಕ್ಕೆ ಇವರ ಬದುಕು ಹಾಗೂ ಇವರ ರಚನೆಗಳೇ ಸಾಕ್ಷಿಯಾಗಿವೆ. ಹಂಪಣ ಈ ಭಾಗದಲ್ಲಿ ತಿರುಗಾಡಿ ಶಿವತತ್ವವನ್ನು ಪ್ರಸಾರ ಮಾಡಿದ ಅನುಭಾವಿ. ಜನತೆಯಲ್ಲಿ ಜಾಗೃತೆಯನ್ನುಂಟುಮಾಡಿದ ಈ ಕವಿ ಕಲ್ಯಾಣದ ಶರಣ ಸಂಸ್ಕೃತಿಯನ್ನು ವಿವರಿಸಿದ. ಅಂತಹ ಸಂಸ್ಕೃತಿಯ ಪರಂಪರೆಯ ಭಾಗವಾಗಿ ತಾನೂ ಬೆಳೆದು ನಿಂತ. ಆಧ್ಯಾತ್ಮಿಕ ಹಸಿವಿನ ಜೀವಿ ಬಾಗಲವಾಡ ಮುದಕಪ್ಪ, ಮುಗ್ಧನಾದ ಈತನಿಗೆ ಸಂಸಾರ ಸರಿಹೋಗಲಿಲ್ಲ. ಗುರುವನ್ನು ಆರಿಸಿಕೊಂಡು ಗಬ್ಬೂರಿಗೆ ಬಂದ. ಹಂಪಣ್ಣನಿಂದ ಅನುಗ್ರಹ ಪಡೆದ ಜ್ಯೋತಿಮುಟ್ಟಿ ಜ್ಯೋತಿಯಾದಂತೆ ಗುರು ಮುಟ್ಟಿ ಗುರುವಾದ ಮುದಕಪ್ಪ, ಹಂಪಣ್ಣನವರ ತರುವಾಯ ಅವರ ಸಂಪ್ರದಾಯವನ್ನು ಮುಂದುವರಿಸಿದ. ನಂತರ ಎಲೆ ಬೂದಣ್ಣ ಹಾಗೂ ಅರಿಷ್ಣಿಗಿ ಬೂದಣ್ಣ ಇವರ ತರುವಾಯ ಬಳೆ ಮುದುಕಪ್ಪ, ಉಪ್ಪಾರ ಬಸಣ್ಣ ಹೀಗೆ ಈ ವೇದಾಂತ ಪರಂಪರೆಯನ್ನು ಹಂಪಣ್ಣನ ಶಿಷ್ಯರಾಗಿ ಮುಂದುವರಿಸಿಕೊಂಡು ಇಂದಿಗೂ ಬೆಳೆದು ಬಂದಿದೆ. ಹಂಪಣ್ಣನ ಪದ್ಯಗಳಲ್ಲಿ ಬರುವ ಅಂಕಿತನಾಮ 'ಘನ ವೃಷಭೇಶ' ಎಂದು ಇದ್ದು, ಇದು ಗುರುವಿನ ಹೆಸರು ದೊಡ್ಡಬಸಪ್ಪ ಮತ್ತು ಇಷ್ಟ ದೇವರ ಹೆಸರು ಈಶ್ವರ. ಈ ಎರಡು ಹೆಸರುಗಳ ಸಮ್ಮಿಳನವೇ 'ಘನವೃಷಭೇಶ' ಎಂಬ ಅಂಕಿತನಾಮದೊಂದಿಗೆ ಹಂಪಣ್ಣನವರು ಅನೇಕ ಪದಗಳನ್ನು ರಚಿಸಿದ್ದಾರೆ. ಇವರ ಪದ್ಯಗಳಲ್ಲಿ ಮುಖ್ಯವಾಗಿ ಗುರುವಿನ ಸ್ತುತಿ, ಇಷ್ಟದೈವ ಸ್ತುತಿ, ಮಾಯಾ ಪ್ರಪಂಚದ ನಿರೂಪಣೆ, ನೀತಿ ಬೋಧನೆ, ಷಟ್ ಚಕ್ರದ ವಿವರಣೆಗಳಲ್ಲದೆ, ಜೀವನಕ್ಕೆ ಬೇಕಾದ ತತ್ವಗಳು ಒಳಗೊಂಡಿವೆ.

"ಎಲೋ ಎಲೋ ಹುಚ್ಚಮಗ"

ರಾಗ-ಭೈರವ : ಆದಿತಾಳ

ಎಲೋ ಎಲೋ ಹುಚ್ಚಮಂಗ ನೀ ಮಾಡೋ ಸಜ್ಜನರ ಸಂಗ!

ಸುಳ್ಳೆ ಬೀಳ ಬ್ಯಾಡ ಭವ ಭಂಗ ನಿನ್ನ ತಿಳಿಯೋ ನೀನೇ ಶಿವಲಿಂಗ ||ಪ||
ಅಂಗಾಪ್ತಸ್ಥಾನ ಸದ್ಭಾವ ಹಿಂಗದತಿ ಮಾಡೋ ಗುರು ಸೇವ!
ಅಂಗ ಲಿಂಗದ ಕೀಲನೊರೆವೆ ನೀ ಹಿಂಗಿಕೋ ನಿನ್ನ ಪರಿಭವವ ||೧||
ಸಾಸಿರದಳ ಪದ್ಮದಲಿ ಶಿವವಾಸವಾಗಿಹನಲ್ಲಿ!
ನಾಸಾಗ್ರದ ಬಲದಲ್ಲಿ ನೀ ಗುರು ಧ್ಯಾನ ಮಾಡಿ ತಿಳಿವಲ್ಲಿ ||೨||
ಧರೆಗಧಿಕ ಮಣಿಪುರ ವರ ಕುಂಡಲಿಗೆ ಪ್ರೇರಕನಿರುವ!
ಗುರು ಘನ ವೃಷಭದೇವನಿರುತದಿ ಮೆರೆ ಹುಕ್ಕವರನು ಪೊರೆವೆ ||೩||

೩. ಗಬ್ಬೂರು ಮಾರ್ತಾಂಡಪ್ಪ

ಮಾರ್ತಾಂಡಪ್ಪ ದೇವದುರ್ಗ ತಾಲೂಕಿನ ಗಬ್ಬೂರಲ್ಲಿ ಕ್ರಿ.ಶ.೧೮೮೦ರಲ್ಲಿ ಜನಿಸಿದ. ಈತನ ತಂದೆಯ ಹೆಸರು ಲಚುಮಣ್ಣ ಕಬ್ಬೇರ ವಂಶದಲ್ಲಿ ಹುಟ್ಟಿದ ಮಾರ್ತಾಂಡಪ್ಪನಿಗೆ ಮೂವರು ಪತ್ನಿಯರಿದ್ದರು. ಬಸಮ್ಮ, ರಾಚಮ್ಮ, ಅಕ್ಕಮ ಎಂಬ ಹೆಸರಿನ ಮೂವರು ಪಿತ್ನಯರಿಗೆ ಪ್ರಭು, ಬಂಡೆಪ್ಪ, ಹನುಮವ್ವ ಎಂಬ ಮೂವರು ಮಕ್ಕಳಿದ್ದರು. ಮಾರ್ತಾಂಡಪ್ಪನಿಗೆ ಮೂವರು ಸಹೋದರರು ಅವರಲ್ಲಿ ಮಾರ್ತಾಂಡಪ್ಪನ ತಮ್ಮನ ಹೆಂಡತಿ ಹನುಮವ್ವ ಹಾಗೂ ಆಕೆಯ ಮಗ ನಾಗಪ್ಪ ಈಗ ಗಬ್ಬೂರಿನಲ್ಲಿದ್ದಾರೆ.

ಮಾರ್ತಾಂಡಪ್ಪನು ಗುರು ಖೇಮಣ್ಣನ ಪ್ರಭಾವಕ್ಕೊಳಗಾಗಿ ಅಧ್ಯಾತ್ಮದ ಹಾದಿ ಹಿಡಿದ. ಖೇಮಣ್ಣನಂತೆ ಅನುಭಾವದೆತ್ತರವನ್ನೇರಿದ ವೆಂಕಟಾಪುರ, ಯಾದಗಿರಿ, ಖಾನಾಪುರ, ರಾಯಚೂರು, ಗಂಜಳ್ಳಿ, ಜಿನ್ನಾಪುರ, ರಂಗಾಪುರ, ಯದ್ಲಾಪುರ, ಶೋಲಾಪುರ, ಕೊರವಳ್ಳಿ, ಕೊರ್ತಕುಂದ, ಮುಂಬಾಯಿ, ಪೂನಾ, ಪೂಲಚಂತಿ, ಆದೋನಿ ಈ ಮುಂತಾದ ಊರುಗಳನ್ನು ಅಲೆದಾಡಿ ಅಪಾರ ಅನುಭವ ಹೊಂದಿದ ಮಾರ್ತಾಂಡಪ್ಪ ಲೌಕಿಕದ ಮೂಲಕ ವಿಚಾರಗಳನ್ನು ಹೇಳಿದ್ದಾನೆ.

ಮಾರ್ತಾಂಡಪ್ಪ ತನ್ನ ಗುರುವಿನ ಹೆಸರಿನಲ್ಲಿ ಅಂಕಿತವನ್ನಿಟ್ಟುಕೊಂಡಿದ್ದಾನೆ. 'ಖೇಮಾರ್ಯ' ಎಂಬ ಅಂಕಿತದಲ್ಲಿ ಮಹತ್ವದ ವಿಷಯಗಳ ಕುರಿತು ತತ್ವಪದ ರಚಿಸಿದ ಮಾರ್ತಾಂಡಪ್ಪ ಮಾಂಸವನ್ನು ಮಲ್ಲಿಗೆಯ ಹೂವನ್ನಾಗಿ ಮಾಡಿದನೆಂದು, ಹೆಂಡವನ್ನು ಹಾಲು ಮಾಡಿದನೆಂದು ಆತನ ಸುತ್ತ ಕೆಲವು ಪವಾಡ ಕಥೆಗಳನ್ನು ಹೆಣೆಯಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಮಾರ್ತಾಂಡಪ್ಪನ ಅನುಯಾಯಿಗಳಿದ್ದಾರೆ. ಮಾರ್ತಾಂಡಪ್ಪನ ತತ್ವಪದಗಳಲ್ಲಿ ಸತಿ-ಪತಿ ಭಾವ ಪ್ರಧಾನವಾಗಿರುವಂತೆ, ಅನುಭಾವದೆತ್ತರವನ್ನು ಕಾಣಬಹುದಾಗಿದೆ.

"ಗಂಡಗಂಜಿ ಬದುಕು ಮಾಡಮ್ಮ
ಮುತ್ತೈದಿತನ ಕಳಕಬೇಡ ತಿಳಿಕ ತಂಗಮ್ಮ"

ಎಂಬ ಈ ಪದದ ಪಲ್ಲವಿ ಸತಿ ಪತಿ ಭಾವದ ಮಹತ್ವವನ್ನು ಹೇಳುತ್ತದೆ. ಲೌಕಿಕ ಉದಾಹರಣೆಗಳ ಮೂಲಕ ಈ ಕವಿ ಅನೇಕ ಆಧ್ಯಾತ್ಮಿಕ ತತ್ವ ವಿಚಾರಗಳನ್ನು ಪ್ರತಿಪಾದಿಸಿದ್ದಾನೆ.

"ಊರು ದಣಿಯರು ಮೂವರಾರಮ್ಮ
ಆರು ಬಾಗಿಲು ಕದವ ಮುಚ್ಚಮ್ಮ"

ಇಂತಹ ನುಡಿಗಳಲ್ಲಿ ದಿನನಿತ್ಯದ ಆಡುಮಾತಿನ ಮೂಲಕ ಅಧ್ಯಾತ್ಮವನ್ನು ತಿಳಿದುಕೊಳ್ಳುವ ಮಹತ್ವಾಕಾಂಕ್ಷೆಯಿದೆ. ಆರುಬಣ್ಣದ ಸೀರೆ, ಮೂರು ಬಣ್ಣದ ಕುಪ್ಪಸ ಈ ಪದಗಳಲ್ಲಿ ಅಡಕವಾಗಿರುವ ಆಧ್ಯಾತ್ಮಿಕ ಪರಿಭಾಷೆಯನ್ನು ಗಮನಿಸಬಹುದಾಗಿದೆ. ಮಲತ್ರಯಗಳ ಷಡ್ ವೈರಿಗಳು ಈತನ ತತ್ವಪದಗಳಲ್ಲಿ ಪ್ರಸ್ತಾಪವಾಗಿವೆ.

"ಓಡಿ ಹೋಗಣು ಬಾ ಸುಂದರಿ|| ಕಡೆ ನೋಟಗಣ್ಣಿನ ವೈಯ್ಯಾರಿ|
ತಡ ಮಾಡದಲೆ ನಡೆಗಡೆ ದಾರಿ ಉಡಲಿಕ್ಕೆ ಕೊಡುವನು ಸೀರೆ ಜರ್ತಾರಿ!"

ಎಂಬ ತತ್ವಪದಗಳಲ್ಲಿ 'ಸತಿ-ಪತಿ'ಭಾವದ ಭಕ್ತಿಯ ಮೂಲಕ ಅನುಭಾವದ ವಿಚಾರಗಳನ್ನು ಹೇಳಲಾಗಿದೆ.

"ಊರು ಒಳಗೆ ಆರು ಮಂದಿ! ಪಾರು ತಿರುಗುತಾರೆ ಸಂಧಿ!" ಎಂಬ ನುಡಿಯಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಂತಹ ಅರಿಷಡ್ ವರ್ಗಗಳ ಪ್ರಸ್ತಾಪದ ಮೂಲಕ ಎಚ್ಚರಿಕೆಯನ್ನುಂಟು ಮಾಡಲಾಗಿದೆ. ಈತನ ತತ್ವಪದಗಳಲ್ಲಿ ಪ್ರಾಸಬದ್ಧ ಲಯವನ್ನು ಕಾಣಬಹುದಾಗಿದೆ. ಜಿಲ್ಲೆಯ ಭಜನೆ ಮೇಳಗಳಲ್ಲಿ ಮಾರ್ತಾಂಡಪ್ಪನ ಪದಗಳನ್ನು ಸೊಗಸಾಗಿ ಹಾಡುತ್ತಾರೆ. ಈತನು ಕ್ರಿ.ಶ.೧೯೬೦ರಲ್ಲಿ ನಿಧನ ಹೊಂದಿದ್ದಾನೆ. ರಾಯಚೂರು ತಾಲೂಕಿನ ಕೊರ್ವಿಹಾಳ ಗ್ರಾಮದಲ್ಲಿ ಈತನ ಸಮಾಧಿಯಿದೆ. ಗಬ್ಬೂರಿನ ಉತ್ತರ ದಿಕ್ಕಿನಲ್ಲಿ ಮಾರ್ತಾಂಡಪ್ಪನ ಗುಡಿ ಹಾಗೂ ಅದರಲ್ಲಿ ಆತನ ಮೂರ್ತಿಯಿದೆ(ಗ.ಶಾ.ದೇ, ಮಹೇಶ, ಪು.೮೨-೮೯).

ಅಧ್ಯಾಯ ೯

ಸಮಾರೋಪ

೬

ಸಮಾರೋಪ

ಇತಿಹಾಸದ ಪ್ರಮಾಣಭೂತವಾದ ಪುನ್‌ರಚನೆಗೆ ಇರುವ ಅತಿ ಪ್ರಮುಖವಾದ ಆಧಾರಗಳೆಂದರೆ ಶಾಸನಗಳು. ಈ ಶಾಸನಗಳು ನಾಡಿಗೆ ಸಂಬಂಧಿಸಿದಂತೆ ಎಷ್ಟೋ ಐತಿಹಾಸಿಕ ವಿಷಯಗಳಿಗೆ ತಮ್ಮ ಅಧಿಕೃತವಾದ ಸಮರ್ಥನೆಯನ್ನು ದೊರಕಿಸಿಕೊಟ್ಟಿವೆ. ಭಾರತ ಮತ್ತು ಕನ್ನಡ ನಾಡಿನ ಇತಿಹಾಸದಲ್ಲಿ ಸ್ಥಾನ ಪಡೆಯದೆ ಇದ್ದ ಅಥವಾ ಅವು ಕಾಲ್ಪನಿಕ ವಿಷಯಗಳೆಂದು ಭಾವಿಸಲಾಗಿದ್ದ ಸಂದರ್ಭದಲ್ಲಿ ಶಾಸನಗಳ ಸಹಾಯದಿಂದ ಅವು ಚಾರಿತ್ರಿಕ ಸಂಗತಿಗಳೆಂದು ಖಚಿತಪಡಿಸಲಾಗಿದೆ. ಈ ಶಾಸನಗಳ ಹಿನ್ನಲೆಯಲ್ಲಿಯೇ ದೇವದುರ್ಗ ತಾಲೂಕಿನ ಪುರಾತನ ಸಂಸ್ಕೃತಿ ಮತ್ತು ಐತಿಹಾಸಿಕ ಮಹತ್ವವನ್ನು ಪ್ರಸ್ತುತ ಪ್ರಬಂಧದಲ್ಲಿ ವಿವರಿಸಲಾಗಿದೆ.

ಪ್ರಾಗೈತಿಹಾಸಕ್ಕೆ ಸಂಬಂಧಿಸಿದಂತೆ ಭೌಗೋಳಿಕ ಲಕ್ಷಣಗಳು ಹಾಗೂ ಅನೇಕ ಪ್ರಾಗೈತಿಹಾಸಿಕ ಕಾಲದಲ್ಲಿ ಮಾನವನು ಕೊರೆದ ರೇಖಾ ಚಿತ್ರಗಳು ಮತ್ತು ಅವನು ಬಳಸಿದ ಸಾಮಗ್ರಿಗಳನ್ನು ಹಾಗೂ ಊರಿನ ಸ್ಥಳನಾಮಗಳು ಒಂದು ಹಿನ್ನೆಲೆಯನ್ನು ಆರಂಭದಲ್ಲಿ ಕಾಣಬಹುದು.

ದೇವದುರ್ಗ ತಾಲ್ಲೂಕಿನಲ್ಲಿ ಅನೇಕ ಅರಸು ಮನೆತನಗಳು ರಾಜ್ಯಭಾರ ಮಾಡುವುದರ ಮೂಲಕ ತಮ್ಮ ಆಡಳಿತದ ವೈಖರಿಯನ್ನು ಮೆರೆದು ಚಿರಸ್ಥಾಯಿಯಾಗಿದ್ದಾರೆ. ರಾಜರ ವಿಜಯೋತ್ಸವ ಹಾಗೂ ಕೀರ್ತಿ ಶಾಶ್ವತವಾಗಿರುವ ಅಂಶ ಮಾತ್ರವಿರದೆ ಅಂದಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಕಲೆ, ವಾಸ್ತುಶಿಲ್ಪದ ಬಗ್ಗೆ ಚಿತ್ರಣ ದೊರೆಯುತ್ತದೆ. ಅಲ್ಲದೆ ವಿದ್ಯಾಭ್ಯಾಸ, ಯುದ್ಧ ನೀತಿ, ವೀರ ಜೀವನ ಮತ್ತು ಆಡಳಿತ ವ್ಯವಸ್ಥೆ ಇತ್ಯಾದಿ. ಅಂಶಗಳ ಸಮಗ್ರ ವಿವರ ಶಾಸನಗಳಲ್ಲಿ ಅಡಕವಾಗಿರುತ್ತದೆ. ಹೀಗಾಗಿ ಶಾಸನಗಳ ಬಹುಮುಖ ಪರಿಚಯವಾಗುತ್ತದೆ. ಈ ನಾಡನ್ನು ಕರ್ನಾಟಕ ರಾಜ್ಯ ಮನೆತನಗಳು, ಸಾಮಂತರು, ದಂಡನಾಯಕರು ಹಾಗೂ ಇತರ ಸ್ಥಳೀಯ ನಾಯಕರು ಸಹ ರಾಜ್ಯಭಾರ ಗೈದಿರುವ ವಿಷಯ ಶಾಸನಗಳಿಂದ ಅರಿಯಲು ಸಾಧ್ಯವಾಗಿದೆ.

ಒಂದು ನಾಡಿನ ದೇವಾಲಯಗಳು ಅಲ್ಲಿನ ಸಾಂಸ್ಕೃತಿಕ ಸಂಪತ್ತಿನ ತೋರುಗಂಬಗಳಾಗಿವೆ. ದೇವದುರ್ಗ ತಾಲ್ಲೂಕಿನ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಿಂದ ಈ ತಾಲ್ಲೂಕಿಗೊಂದು ವಿಶಿಷ್ಟ

ಸ್ಥಾನವಿದೆ. ಇಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳು ಆಳ್ವಿಕೆಗೆ ಅನುಗುಣವಾಗಿ ಅನೇಕ ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಇವರು ಅನ್ಯಧರ್ಮ ಸಹಿಷ್ಣುಗಳಾಗಿದ್ದರು. ಅನ್ಯಮತೀಯರನ್ನು ಉದಾರಭಾವದಿಂದಲೇ ನೋಡಿದ ಮಹಾನುಭಾವದವರು. ಇಲ್ಲಿ ಎಲ್ಲ ಧರ್ಮಗಳು ಒಟ್ಟಿಗೆ ಅಸ್ತಿತ್ವದಲ್ಲಿದ್ದವು. ಈ ಎಲ್ಲಾ ಧರ್ಮಗಳಿಗೂ ಅರಸರ ಆಶ್ರಯ ಹಾಗೂ ಪ್ರೋತ್ಸಾಹವಿದ್ದಿತು. ಸರ್ವ ಧರ್ಮಗಳನ್ನು ಸನ್ಮಾನಿಸುವುದು ಇವರ ಮುಖ್ಯ ನೀತಿಗಳಲ್ಲೊಂದಾಗಿತ್ತು. ಪರಧರ್ಮ ಸಹಿಷ್ಣತೆಯ ಬೀಡಾಗಿದ್ದ ನಮ್ಮ ನಾಡು ಧರ್ಮಗಳನ್ನಾಶ್ರಯಿಸಿತ್ತು. ಶೈವ, ವೈಷ್ಣವ, ಜೈನ, ಇಸ್ಲಾಂ ಧರ್ಮಕ್ಕೆ ಸೇರಿದ ಅನೇಕ ದೇವಾಲಯಗಳು ಮಸೀದಿಗಳು ಬಸದಿಗಳು ಇದಕ್ಕೆ ಸಾಕ್ಷಿಯಾಗಿವೆ. ಕ್ಷೇತ್ರಕಾರ್ಯವನ್ನು ಕೈಗೊಂಡು ಪ್ರಮುಖ ದೇವಾಲಯಗಳ ಮಾಹಿತಿಯನ್ನು ಇಲ್ಲಿ ವಿವರಿಸಲಾಗಿದೆ. ಈ ದೇವಾಲಯಗಳ ಜೊತೆಗೆ ಅನೇಕ ಮಠಗಳು ನಡೆದು ಬಂದ ಪರಂಪರೆ ಮತ್ತು ಮಠದ ಕಾರ್ಯಗಳು ಹಾಗೂ ಇತ್ಯಾದಿ ಅಂಶಗಳನ್ನು ಇಲ್ಲಿ ಸ್ಥೂಲವಾಗಿ ನೋಡಲಾಗಿದೆ.

ಸಾಮಾಜಿಕ ಜೀವನದ ನೆಮ್ಮದಿಗೆ ಬೇಕಾದ ಮೂಲಭೂತವಾದ ಅಂಶಗಳನ್ನು ಶಾಸನಗಳು ಸೂಚಿಸುತ್ತವೆ. ದೇವಾಲಯಗಳಿಗೆ, ಮಠಗಳಿಗೆ, ಶಿಕ್ಷಣಕ್ಕಾಗಿ ನೀಡಿದ ದಾನ, ಬ್ರಾಹ್ಮಣರ ನಿವಾಸಕ್ಕಾಗಿ ಬಿಟ್ಟುಕೊಟ್ಟ ಗ್ರಾಮಗಳು, ರಾಜಕೀಯ, ಧಾರ್ಮಿಕ, ಸಾಮಾಜಿಕ ರಂಗಗಳಲ್ಲಿ ಸ್ತ್ರೀಯರಿಗೆ ಕೊಟ್ಟ ಸ್ಥಾನಮಾನ ಅವರು ಮಾಡಿದ ಸಾಧನೆಯ ಬಗ್ಗೆ ಶಾಸನಗಳು ಸಾರುತ್ತವೆ. ಅಲ್ಲದೆ ಸಾಮಾಜಿಕ ವ್ಯವಸ್ಥೆಯಲ್ಲಿರುವ ಪ್ರಮುಖ ಜಾತಿಗಳು, ವರ್ಗಗಳು, ಜಾತಿ ವ್ಯಾಪಾರಿಗಳು, ಅಲ್ಲಿಯ ಸಂಪ್ರದಾಯ, ನಂಬಿಕೆಗಳು, ಶಿಕ್ಷಣ, ಸಾರ್ವಜನಿಕ ಕಾರ್ಯಗಳ ಬಗ್ಗೆ ಅನೇಕ ಅಂಶಗಳನ್ನು ಗಮನಿಸಲಾಗಿದೆ.

ಪ್ರಾಚೀನ ಕಾಲದ ಆರ್ಥಿಕ ವ್ಯವಸ್ಥೆಯ ಸ್ಥೂಲ ಪರಿಚಯವನ್ನು ಶಾಸನಗಳು ಒದಗಿಸುತ್ತವೆ. ಅಂದಿನ ಜನರ ದುಡಿಮೆಯ ಪರಿಶ್ರಮ ಗಣನೀಯವಾಗಿತ್ತು. ಆಡಳಿತ ಬೆಳೆದಂತೆ ಅನೇಕ ಬಗೆಯ ತೆರಿಗೆಗಳೂ ಮತ್ತು ಅವುಗಳನ್ನು ಅನುಸರಿಸುವ ಕಠಿಣ ಪದ್ಧತಿಯೂ ಜಾರಿಯಲ್ಲಿತ್ತು. ಇಲ್ಲಿಯ ಭೂಮಿಯ ವಿಧಗಳು ವ್ಯವಸಾಯಕ್ಕೆ ಸಂಬಂಧಿಸಿದಂತೆ ಕೃಷಿ, ತೋಟಗಾರಿಕೆ, ಕೈಗಾರಿಕೆಗಳು, ಪಶುಸಂಗೋಪನೆ, ವಿವಿಧ ವರ್ತಕರು, ವ್ಯಾಪಾರ, ಶ್ರೇಣಿಗಳು ಅಥವಾ ವೃತ್ತಿ ಸಂಘಗಳು ಮುಂತಾದ ವಿಷಯಗಳನ್ನು ಆರ್ಥಿಕ ಮೂಲದಿಂದ ತಿಳಿಯಬಹುದು.

ಒಂದು ರಾಜ್ಯದ ಅತ್ಯವಶ್ಯಕವಾದ ಸಪ್ತಾಂಗಗಳ ಕೋಟೆಯು ಒಂದು. ರಾಜ್ಯದ ರಾಜಧಾನಿ ಭದ್ರಬುನಾದಿಯಂತಿದ್ದ ಕೋಟೆಗಳು ರಾಜ್ಯವನ್ನು ಶತ್ರುಗಳಿಂದ ಸಂರಕ್ಷಿಸುವ ಕಾವಲುಗಳಂತಿದ್ದವು. ರಾಜ್ಯಗಳು ಸ್ಥಾಪನೆಯಾಗಿ ಅರಸರು ತಮ್ಮ ರಾಜ್ಯವನ್ನು ಆಳುವುದರ ಮೂಲಕ ಆ ರಾಜ್ಯದ ಸಂರಕ್ಷಣಾರ್ಥವಾಗಿ ಗಡಿ ಪ್ರದೇಶಗಳಲ್ಲಿ ಬಲವಾದ ಕೋಟೆಗಳನ್ನು ನಿರ್ಮಿಸಿದ್ದರು. ಇವುಗಳ ಜೊತೆಗೆ

ದೇವದುರ್ಗ ತಾಲ್ಲೂಕಿನ ಅನೇಕ ಗ್ರಾಮಗಳ ಪುರಾತನ ಕಾಲದ ಸುಂದರವಾದ ಅನೇಕ ಪುಷ್ಕರಣಿಗಳು ಹಾಗೂ ಅಗಸಿಗಳನ್ನು ಕಾಣಬಹುದು. ಶಾಸನಗಳು ಅರಸರ ಪರಾಕ್ರಮವನ್ನಷ್ಟೇ ಅಲ್ಲದೆ ಅವರ ರಕ್ಷಣೆಗಾಗಿ ಹೋರಾಡಿ ಮಡಿದ ವೀರರ ಹಾಗೂ ನಾಡಿನ ರಕ್ಷಣೆಗಾಗಿ ಪ್ರಾಣ ತ್ಯಜಿಸಿದ ಊರೊಡೆಯರು, ಊರಗಾವುಂಡರು. ನಾಯಕರು ಮತ್ತು ಸಾಮಾನ್ಯ ಜನ ಹುತಾತ್ಮರಾದ ವೀರರ ಸ್ಮರಣೆಯನ್ನು ಇಲ್ಲಿರುವ ವೀರ ಸ್ಮಾರಕಗಳಿಂದ ಸ್ಪಷ್ಟವಾಗುತ್ತವೆ. ಇವರ ಜೊತೆ ಚಿತೆಯನ್ನು ಹಾರುವುದರ ಮೂಲಕ ಹಿಂದೂ ಸಂಪ್ರದಾಯವನ್ನು ಎತ್ತಿ ಹಿಡಿಯುವಲ್ಲಿ ಮಹಾಸತಿಯರು ಪ್ರಮುಖರಾಗಿದ್ದಾರೆ. ಇವರ ಸ್ಮರಣಾರ್ಥವಾಗಿ ನಿಲ್ಲಿಸಿದ ಸ್ಮಾರಕಗಳು ಇಲ್ಲಿ ಲಭ್ಯವಾಗಿದೆ. ಇದರ ಜೊತೆಗೆ ಆಗಿನ ಕಾಲದ ರಾಜರು, ಸಾಮಂತರು ಇತರ ನಾಯಕರು ವ್ಯಕ್ತಿಗಳು ನಿರ್ಮಿಸಿದ ಅನೇಕ ಮೂರ್ತಿಶಿಲ್ಪಗಳು ಕಲಾ ನೈಪುಣ್ಯತೆಗೆ ಸಾಕ್ಷಿಯಾಗಿವೆ. ಕಲೆಯ ತವರೂರೆನಿಸಿದ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ವಿವಿಧ ಕಲೆಗಳಾದ ನಾಟಕ, ಬಯಲಾಟ, ಜಾನಪದ ಲಂಬಾಣಿ ಕುಣಿತ ಮುಂತಾದವುಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಹಾಗೆಯೇ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ತಾಲೂಕಿನಲ್ಲಿ ಅನೇಕ ತತ್ವಪದಕಾರರು. ಕವಿಗಳು, ಸಾಹಿತಿಗಳು, ವಚನಕಾರರು ಹುಟ್ಟಿ ಈ ತಾಲ್ಲೂಕಿನ ಸಾಹಿತ್ಯ ಲೋಕಕ್ಕೆ ಕೊಟ್ಟ ಕಾಣಿಕೆ ಶ್ರೀಮಂತವಾದದ್ದು.

ಶಾಸನಗಳ ಹಿನ್ನೆಲೆಯಲ್ಲಿ ಮಾಡಿದ ಈ ಒಂದು ಅಧ್ಯಯನದಿಂದ ದೇವದುರ್ಗ ತಾಲ್ಲೂಕಿನ ಇತಿಹಾಸ ಮತ್ತು ಪುರಾತನ ಸಂಸ್ಕೃತಿಯನ್ನು ಚಿತ್ರಿಸುವ ಪ್ರಯತ್ನ ಇದಾಗಿದೆ. ಈ ಮೂಲಕ ನಮ್ಮ ನಾಡು, ಕಾಲದಿಂದ ಕಾಲಕ್ಕೆ ಆಳಿದ ರಾಜರ ಆಡಳಿತ, ಅಂದಿನ ರಾಜಕೀಯ ಸಾಮಾಜಿಕ ಪರಿಸ್ಥಿತಿ, ಅನುಸರಿಸಿದ ಧರ್ಮ, ಕಲೆ, ಸಾಹಿತ್ಯ ಜನ ಜೀವನದ ರೀತಿ, ಆಚಾರ-ವಿಚಾರಗಳನ್ನು ಅರಿಯಬಹುದಾಗಿದೆ. ನಾಡು ತನ್ನ ಆಡಳಿತದ ಅವಧಿಯಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದೆ. ಇದಕ್ಕೆ ಸಾಕ್ಷಿಯಾಗಿ ಇಂದು ನಮಗೆ ತಾಲ್ಲೂಕಿನಲ್ಲಿ ದೊರಕಿರುವ ಶಾಸನಗಳು, ಸ್ಮಾರಕಗಳು ನಮಗೆ ಸಮಗ್ರ ಮಾಹಿತಿಯನ್ನು ನೀಡಿವೆ. ಈ ಮಾಹಿತಿಯ ಮೂಲಕ ಈ ತಾಲ್ಲೂಕಿನ ಪ್ರಾಚೀನ ಗತವೈಭವದ ಬದುಕಿನ ಮೇಲೆ ಬೆಳಕು ಚೆಲ್ಲುವುದರ ಮೂಲಕ ಈ ತಾಲ್ಲೂಕಿನ ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮಹತ್ವವನ್ನು ಎತ್ತಿ ಹಿಡಿಯಲಾಗಿದೆ. ಹೀಗೆ ಆಯಾ ಕಾಲಗಳಲ್ಲಿ ಆಳ್ವಿಕೆ ಮಾಡಿದ ಅರಸರು ದಾನದತ್ತಿಗಳನ್ನು ಕೊಡುವುದರ ಮೂಲಕ ಶಾಸನ ಮತ್ತು ಸ್ಮಾರಕಗಳನ್ನು ನಿರ್ಮಿಸುವುದರ ಮೂಲಕ ದೇವದುರ್ಗ ತಾಲ್ಲೂಕಿನ ಸಾಂಸ್ಕೃತಿಕ ವೈಭವವನ್ನು ಹೇಗೆ ಹೆಚ್ಚಿಸಿದರೆಂಬುದನ್ನು ಇಲ್ಲಿ ನಿರೂಪಿಸಲಾಗಿದೆ.

ಪ್ರಸ್ತುತ ಅಧ್ಯಯನದ ಇತಿ ಮಿತಿಗಳಲ್ಲಿ ಆಕರಗಳನ್ನು ಸಂಗ್ರಹಿಸಿ, ವಿಷಯವನ್ನು ವಿಶ್ಲೇಷಿಸಿ ಸಂಯೋಜಿಸಲಾಗಿದೆ. ಈ ತಾಲ್ಲೂಕಿನಲ್ಲಿರುವ ಅನೇಕ ದೇವಾಲಯಗಳು ಸ್ಮಾರಕಗಳು, ಶಾಸನಗಳನ್ನು

ರಕ್ಷಿಸಿ ಮತ್ತೆ ಪುನಾರಚಿಸುವ ಕಾರ್ಯ ಗ್ರಾಮಸ್ಥರದ್ದಾಗಿದೆ. ಪುರಾತತ್ವ ವಿಷಯಗಳಾದ ಬಂಡೆರೇಖಾ ಚಿತ್ರ, ಪ್ರಾಚೀನ ಕಾಲದ ಬೂದಿದಿಬ್ಬಗಳು, ಸಮಾಧಿಗಳು ಮುಂತಾದವನ್ನು ಕುರಿತ ವ್ಯವಸ್ಥಿತ ಕ್ಷೇತ್ರಕಾರ್ಯ ನಡೆಸಿ ವಿವರ ಸಂಗ್ರಹಿಸಬೇಕಾಗಿದೆ. ಹೀಗೆ ಹಾಳುಬಿದ್ದು ನಶಿಸುತ್ತಿರುವ ಇವುಗಳನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಅನುಬಂಧಗಳು

೧. ವಚನಕಾರರ ಮತ್ತು ಕವಿಗಳ ಹಾಡು ಮತ್ತು ವಚನಗಳು
೨. ಗ್ರಂಥಋಣ
೩. ಶಾಸನಗಳ ಪಾಠ ಮತ್ತು ಇತರ ಶಾಸನಗಳು

ಅನುಬಂಧ ೧

೧ ಗೂಬ್ಬೂರು ಹಂಪಣ್ಣನ ಪದ

ತಿಳಿಯೆ ಬ್ರಹ್ಮಾನಂದ ಸವಿಯೆ ಸಕ್ಕರೆವ್ವ
ರಾಗ-ಘಂಟ : ಆದಿತಾಳ

ತಿಳಿಯೆ ಬ್ರಹ್ಮಾನಂದ ಸವಿಯೆ ಸಕ್ಕರೆವ್ವ
ಘಳಿಲಳಿ ಹಮ್ಮವ್ವಾ ||ಪ||

ಹಮ್ಮದಜ್ಞಾನದ ಕತ್ತಲ ಕಾಳವ್ವ |
ಹಮ್ಮಿನೊಳಕೆ ಗೂಳವ್ವ |
ಹಮ್ಮಿನೊಡನೆ ಕೂಡಿರು ತಿಳಿಕಾಡವ್ವ |
ಹಮ್ಮಳಿದು ಸತ್ಪುರುಷರೊಳಾಡವ್ವ |
ಒಮ್ಮನಗೂಡವ್ವ ||೧||

ದುರುಳರೊಡನೆ ಕೂಡಾಡ್ವದು ಮಂಗವ್ವ |
ದುರಿತದ ಸಂಗವ್ವ |
ಜರಿದು ಗುರುವಿನಿಂದರಿ ನೀ ಲಿಂಗವ್ವ |
ಇರುವಳು ಕಂಗಳ ಮುಂದೆ ತಾ ರಂಗವ್ವ |
ನೆರೆ ತಿಳಿ ಗಂಗವ್ವ ||೨||

ಪರಗುರು ಚರಣಸೇವದಿ ಶೂರವ್ವ |
ನಿರುತದಿ ಈರವ್ವ |
ಮರೆದೆಮ ಮುಟ್ಟ ನೀನವನಿಗೆ ಮಾರೆವ್ವ |
ವರಮಣಿಪುರಪತಿ ಕರುಣದಿ ನಂದವ್ವ |
ಇರು ನೀ ಚಂದವ್ವ ||೩||

(ಮುತ್ತಿನಹಾರ, ರಾಮಸ್ವಾಮಿ ನುಲಿ, ಪು.೨೦)

೨. ಗಬ್ಬೂರು ಹಂಪ್ಪಣ್ಣನ ಪದ

ತಿಳಿನೋಡೋ ತಿಳಿನೋಡೋ

ರಾಗ-ತೋಡಿ : ಆದಿತಾಳ

ತಿಳಿನೋಡೋ | ತಿಳಿನೋಡೋ |
ತಿಳಿಯದೆ ಕೆಡುಬ್ಯಾಡೋ ||ಪ||

ನಾನೆಂತೆಂಬಭಿಮಾನವದಲ್ಲ |
ತಾನದನರಿವುದೇ ಬರಿಯರಿವಲ್ಲ |
ನಾನೆಂತೆಂಬುದು | ಸ್ವಾನುಭಾವ ಸುಜ್ಞಾನದಿ
ನಾನತ್ವವನದು ಪುಸಿದು | ||೧||.

ನಾನು ಜೀವನವೆಂತೆಂಬುದದ |
ನೇನು ಹಿಡಿದು ತಿಳಿದಿರುವೆಲೆ ನೀನು |
ತಾನದು ವಿಜ್ಞಾನ ಪರೋಕ್ಷವನು |
ನಾನೆನುತಲಿ ಧ್ಯಾನಿಸುತಿರು ನೀನು ||೨||.

ಕನ್ನಡಿ ಎದುರಲಿ ನಿಂದು |
ಕುನ್ನಿಯ ಇನ್ನೊಂದೊದಗಿತೆಂದು |
ಸಂನ್ನರಿಯದೆ ಕೂಗಿ ತನ್ನ ಮರದು ಬಲ |
ಬನ್ನ ಬಡುವ ಕುನ್ನಿಯ ವೋಲ್ಕೆಡದಿರು ||೩||

ಶರಧಿಯಲ್ಲಿ ತೆರೆಗಳನು
ತೋರುವ ತೆರದಲಿ ತೋರ್ಕಿದು ತಾನು |
ಅರಿವಂಬುಧಿಯಲಿ | ಧರೆ ಸ್ವರ್ಗಗಳಂತೆ |
ಪರಿಕಲ್ಪಿತ ರೂಪ ನಾಮಗಳನ್ನು ||೪||

ಘಟ ಮಠವಳಿಯಲು ಒಂದೇ ಬಯಲನು |
ದಿಟವಾಗಿರುವದುಯೆಂದು | ಘಟಿಸಿರುವ |
ಘಟ ಭಾವವನಳಿಯೆ | ನೀ
ನಟಿಸುವ ಮಣಿಪುರವರ | ನಿಟಿಲಾಕ್ಷನು ||೫||

(ಮುತ್ತಿನಹಾರ, ರಾಮಸ್ವಾಮಿ ನುಲಿ, ಪು.೧೮-೧೯)

೩. ಗೂಗಲ್ಲು ಪರಪ್ಪಯ್ಯನ ತತ್ವಪದ

ನೀನ ಯಾರೋ ನಿನ್ನ ದೇಹ ಬ್ಯಾರೋ |
ನಾಚಿ ಯೀಪರಿಯಲಿ ಶಿವನ ನೀ ಕಂಡ್ಯಾ ಮನುಜಾ ||ಪ||

ಮಡದಿ ಮಕ್ಕಳು ಯಾರೋ ವಡವಿ ಬಂಗಾರ ಬ್ಯಾರೋ
ಪಡೆದ ತಂದೆ-ತಾಯಿ ವಡಹುಟ್ಟಿದವರ್ಯಾರೋ |
ಕಡೆಯ ಕಾಲಕ ಯಮ ಕರದ್ಯೆಳದೊಯಿವಾಗ
ನುಡಿ ಸಂಗುತ್ಯಾರಿಲ್ಲೊ ನುಗ್ಗಾದಿ ಮನುಜಾ ||೧||

ಗಿಳಿಯ ಬಾಂಧವ ನೆಂಟ ಅಳಿಯ ಬೀಗನ್ಯಾರೋ
ಒಳಗ ಭಾಗ್ಯ ಬದುಕು ಬಾವ ಮ್ಯೆದುನರ್ಯಾರೊ |
ವಳ ಪ್ರಾಣನಾಥ ಹೊರಹೊಂಟು ಹೋಗುವಾಗ
ತಳಿಗಿ ತಂಬಿಗಿ ಮೂರ್ತಿ ಸಳೆಮಂಚವ್ಯಾರೋ ||೨||

ಯರವಿನ ಬದುಕಿಗಿಯೇನು ಬಂದೆಲೊ ಪ್ರಾಣಿ
ಮರುಳಾಗಿ ಮಲಹರನ ಮರಿಯದಿರು ಜಾಣೆ |
ಪರವನ ನುಡಿಗೇಳಿ ಪಂಚೆ ಐವರು ಕೂಡಿ
ಪರಶಿವನ ನೆರೆನಂಬಿ ಘನಪದವಿ ನಿಮಗುಂಟೆ ||೩||

(ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು, ಡಾ.ಬಸವರಾಜ ಸಬರದ, ಪು.೬೩)

೪. ಆದಿ ಅಮಾತೆಪ್ಪನ ತತ್ವಪದ

ತನುವು ತನ್ನದಲ್ಲ ತಮ್ಮ | ತನುವು ನಂಬಿಗಿಲ್ಲ ತಮ್ಮ
ತನುವಿನೊಳಗಿನ್ನೆಲ್ಲ ತಮ್ಮ | ತಿಳಿಯಬೇಕು ಎಲ್ಲ ತಮ್ಮ ||ಪ||

ತನುವಿನ ಗುಣವಲ್ಲ ತಮ್ಮ | ಬಿಡಬೇಕು ಎಲ್ಲ ತಮ್ಮ
ಸಗುಣ ಗುಣ ಅಳಿಯೋ ತಮ್ಮ | ನಿರ್ಗುಣದಿಂದ ನುಡಿಯೋ ತಮ್ಮ ||೧||

ಪ್ರಪಂಚಯೆಂಬುದು ತಮ್ಮ | ನಾಲ್ಕು ದಿವಸ ಸಂತೋಷ ತಮ್ಮ
ನೀರು ಮೇಲಿನ ಗುರುಳಿಯಂತೆ ¦ ಅಡಗಿ ಹೋಗುವುದು ತಮ್ಮ ||೨||

ದೇಶಕ್ಕಧಿಕನೋ ತಮ್ಮ | ದೇಹ ದುರ್ಗೇಶನೊ ತಮ್ಮ
ಕೂಡಿಕೊಂಡು ಇದ್ದರೆ ತಮ್ಮ | ಅಂತಃಕರಣ ಮಾಡುವನೋ ತಮ್ಮ ||೩||

(ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು, ಡಾ.ಬಸವರಾಜ ಸಬರದ, ಪು.೭೦)

೫. ಗಬ್ಬೂರ ಮಾರ್ತಾಂಡಪ್ಪನ ತತ್ವಪದ

ಓಡಿ ಹೋಗೂಣು ಬಾ ಸುಂದರೀ
ಕಡೆ ನೋಟಗಣ್ಣಿನ ವೈಯಾರಿ ।
ತಡ ಮಾಡದಲಿ ಓಡಿ ಗುಡಿದಾರಿ
ಉಡಲಿಕ್ಕೆ ಕೊಡುವೆನು ಸೀರೆ ಜರ್ತಾರಿ ||ಪ||

ಅತ್ತೆ ಮಾವಗ ಮೋಸ ಮಾಡಿ
ತುರ್ತು ಭಾವ ಗಂಡಗ ಮೆಚ್ಚು ಮಾಡಿ ।
ಹತ್ತೆಂಟು ಬಳಗಕ್ಕೆ ಮರ್ಯಾದಿ ಮಾಡಿ
ಮತ್ತೇಳು ಮಂದಿಗೆ ಸಿಗದಂಗೆ ಓಡಿ ||೧||

ಊರ ಒಳಗೆ ಆರು ಮಂದಿ
ಪಾರು ತಿರುಗತಾರೆ ಸರ್ವಸಂಧಿ ।
ಘೋರ ರಾತ್ರಿಯೊಳು ಪೂರಾ ಎಚ್ಚರದಿಂದಿ
ಆರಿಗೆ ಸಿಗದಂಗೆ ಸಣ್ಣಗಾಡಿಲಿ ಬಂದಿ ||೨||

ಒಳಗೆ ನೋಡಲು ಬಹಳ ಮೋಹ
ಗಿಳಿ ಕೋಗಿಲೆಗಳ ಕಲಲ ಧ್ವನಿಯು ।
ಥಳಥಳ ಹೊಳಿಯುವ ಪವಳದಾರತಿಯು
ಬಿಳಿ ಪುಷ್ಪರಾಶಿಯೊಳು ಬರಿ ಏಕಾಂತವು ||೩||

ನೋಡು ಮೂಡಲ ಕೆಂಪೇರಿತು
ಗಾಢ ಕತ್ತಲ್ಹರಿದು ಬೆಳಕಾಯಿತು ।
ಅಡಿಯಿಡು ಮನದೊಳು ತೊಡರೇಕಾಯಿತು
ಕಡೆಗಾಗಿ ಆತ್ಮವು ಸನಿಹಕ್ಕೆ ಬಂತು ||೪||

ನನಗೆ ನಿನಗೆ ಬಲು ಭೇದವಿಲ್ಲ
ನೀನು ತಾನಾದ ಸುಖ ಖೇಮ ಬಲ್ಲ ।
ನಾನು ನೀನೆಂಬ ಭೇದವಿನ್ನು ಸರಿಯಲ್ಲ
ಸನ್ಮತದಿಂದಲಿ ಕೂಡಿ ಬಾಳೋಣ ಎಲ್ಲ ||೫||

(ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು, ಡಾ.ಬಸವರಾಜ ಸಬರದ, ಪು.೭೧)

೬. ಗಬ್ಬೂರು ಬಿಬ್ಬಿಬಾಚಯ್ಯನ ವಚನಗಳು

೧. ಬೆಣ್ಣೆ ಕೆಚ್ಚಲ ನುಂಗಿ, ಕಣ್ಣು ತಲೆಯ ನುಂಗಿ
ತುದಿ ಬೇರಿನಲ್ಲಿ ಅಡಗಿತ್ತು
ಏಣಾಂಕಧರ ಸೋಮೇಶ್ವರ ಲಿಂಗವೆಂಬುದು
ಅಲ್ಲಿಯೇ ಅಡಗಿತ್ತು.

೨. ಸ್ವಾದವಿಲ್ಲಚ ಹಣ್ಣು, ಸೌರಭವಿಲ್ಲದ ಕುಸುಮ
ಸಾರವಿಲ್ಲದ ದ್ರವ್ಯ ಆದಾರಿಗೆ ಯೋಗ್ಯ
ಅರಿವಿಲ್ಲದವನ ಇಷ್ಟದ ಬರಿಯ ಡಂಬಕದ ಪೂಜೆ
ಅಡಿಯಿಡಲಿಲ್ಲ, ಏಣಾಂಕಧರ ಸೋಮೇಶ್ವರ ಲಿಂಗಕ್ಕೆ

೩. ಗಂಧ ಪುಷ್ಪದಂತೆ, ಚಂದನ ಲೀಲೆಯಂತೆ
ಕಂಜ ಕಿರಣದಂತೆ, ಬಿಂದು ಸಸಿಯಂತೆ
ಹಿಂಗದಿರಬೇಕು ಅಂಗಲಿಂಗ ಸಂಬಂಧ
ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ

೪. ಕಂಬವಿಲ್ಲದ ಮನೆಯಲ್ಲಿ ಅಂಗವಿಲ್ಲದ ಗರತಿ
ಉರಿಯಿಲ್ಲದ ಹೊಗೆ ತಾಗಿ, ಕಣ್ಣಿಗೆ ಬಾಧೆಯಾಯಿತ್ತು
ಓಗರ ಬೆಂದು ಅಕ್ಕಿಯಾಗಿತ್ತು
ಇದೇನು ಚೋದ್ಯವೆಂದರಿಯೆ ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ

೫. ಮರನ ಹೂ ನುಂಗಿ
ಅಡಿಯಾಳಗಡಗಿ ಹಣ್ಣಾಯಿತ್ತು
ಹಣ್ಣು ಎಳೆಗಾಯಿ ನುಂಗಿ
ಹೂ ಮರನ ಉಗುಳಿತ್ತು
ಮರ ಮರಣಕ್ಕೆ ತೆರಹಿಲ್ಲ
ಏಣಾಂಕಧರ ಸೋಮೇಶ್ವರ ಲಿಂಗವನರಿತೆಹನೆಂದು

(ಬಿಬ್ಬಿಬಾಚಯ್ಯನ ವಚನಗಳು, ಡಾ.ಬಸಲಿಂಗ ಸೊಪ್ಪಿಮಠ)

ಅನುಬಂಧ ೨

ಗ್ರಂಥ ಋಣ

೧. ದೇವರಕೊಂಡಾರೆಡ್ಡಿ(ಸಂ), ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೭, ರಾಯಚೂರು ಜಿಲ್ಲೆ ೨೦೦೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಮಹೇಶ ಬಿ., ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು, ಎಂ.ಫಿಲ್. ನಿಬಂಧ, ೨೦೦೨, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ-೧೯೬೮, ೧೯೯೨, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

೪. ಶೀಲಾಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನಶಿಲ್ಪ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಅಪರ್ಣ ಕೂ.ಸ., ದೇವಾಲಯದ ವಾಸ್ತುಶಿಲ್ಪ ಪರಿಚಯ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ನಾರಾಯಣ ಕೆ.ವಿ., ಸ್ಥಳನಾಮಗಳು : ಪರಿವರ್ತನೆ ಮತ್ತು ಪ್ರಭಾವ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ಚನ್ನಬಸವ ಹಿರೇಮಠ, ಎಡದೊರೆ ನಾಡು, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಶಿವತಾರಕ ಕೆ.ಬಿ., ಕರ್ನಾಟಕದ ಪುರಾತತ್ತ್ವ ನೆಲೆಗಳು, ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ನಾಗಭೂಷಣಸ್ವಾಮಿ ಓ.ಎಲ್., ಕರ್ನಾಟಕ ಕನ್ನಡಿ, ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೧. ದೇವರಕೊಂಡಾರೆಡ್ಡಿ, ತಲಕಾಡಿನ ಗಂಗರ ದೇವಾಲಯಗಳು : ಒಂದು ಅಧ್ಯಯನ, ೧೯೯೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೨. ದೇವರಕೊಂಡಾರೆಡ್ಡಿ, ಗಂಗರ ಶಿಲ್ಪಕಲೆ, ೧೯೯೩, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೧೩. ರಾಮಸ್ವಾಮಿ ನುಲಿ, ಮುತ್ತಿನಹಾರ (ಗೊಬ್ಬರ ಹಂಪಣ್ಣ), ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೪. ಚನ್ನಬಸವ ಹಿರೇಮಠ ಮತ್ತು ಸಿದ್ಧರಾಮಯ್ಯ ಹಿರೇಮಠ, ರಾಯಚೂರು ಜಿಲ್ಲೆಯ ಶರಣರು, ೨೦೦೦, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಾಯಚೂರು

೧೫. ಬಸವರಾಜ ಸಬರದ, ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು, ೧೯೯೬, ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು

೧೬. ಶಿವಾನಂದ ವಿ., ಹೈದರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, ೧೯೯೨, ಕನ್ನಡ ಪೀಠ, ಬನಾರಸ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ

೧೭. ಪಾಟೀಲ್ ಸಿ.ಎಸ್., ಕರ್ನಾಟಕ ಕೋಟೆಗಳು ಭಾಗ ೧, ೨೦೦೦, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. Channabasappa S.Patil, **Temples of Raichur and Bellary Districts,** 1992, Directorate of Archaeology and Museums, Mysore

೧೯. Bhatsoori K.G., **Sculpture in the Government Museum Raichur,** 1997, Directorate of Archaeology Museums, Mysore

೨೦. **A.R.Hydrabad Dept of Archaeology,** 1932

೨೧. Yascen Quddusi M.Sitaram Jagirdar, **Persian Arabic and Urdu Inscriptions of Karnataka,** 2001, Kannada University, Hampi

೨೨. ಸಿ.ಪಿ.ಕೆ.(ಅನು), ಸಾಹಿತ್ಯ ಪ್ರವೇಶ, ವಿಲಿಯಂ ಹೆನ್ರಿ ಹಡ್ಸನ್(ಮೂಲ), ಸಹಕಾರಿ ಪ್ರಕಾಶನ ಮಂದಿರ ನಿಯಮಿತ, ಬೆಂಗಳೂರು

೨೩. ಚನ್ನಬಸವ ಹಿರೇಮಠ, ರಾಯಚೂರು-ಕೊಪ್ಪಳ ಜಿಲ್ಲೆಯ ಶಾಸನಗಳು, ೧೯೯೯, ಚೇತನ ಪ್ರಕಾಶನ, ಮಸ್ಕಿ

೨೪. ಬಸವಲಿಂಗ ಸೊಪ್ಪಿನಮಠ, ಗೊಬ್ಬೂರು ಶ್ರೀ ಬಿಬ್ಬಿಬಾಚರಸರು, ೧೯೯೭ ಕಿಸಾನ್ ಪ್ರೆಸ್

೨೫. ಶ್ರೀ ಬೂದಿಬಸವ ಚರಿತಾಮೃತ, ೧೯೯೯, ಬೂದಿಬಸವ ಪ್ರಕಾಶನ, ಗಬ್ಬೂರು

೨೬. ರಾಯಸಿರಿ, ೨೦೦೩, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು

೨೭. ಚಂದ್ರಶೇಖರ, ಸಿರಿದುರ್ಗ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ದೇವದುರ್ಗ

೨೮. ತಿರುಳ್ಗನ್ನಡ, ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ

೨೯. ಬಸವಲಿಂಗ ಸೊಪ್ಪಿನಮಠ, ಇತಿಹಾಸ ದರ್ಶನ, ಗಬ್ಬೂರು ಬಿಬ್ಬಿಬಾಚಯ್ಯನ ಕೆಲವು ಹೊಸ ವಿಚಾರಗಳು, ಸಂ.೮, ೧೯೯೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೩೦. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ೧೯೮೬, ಕರ್ನಾಟಕ ಸರಕಾರ, ಬೆಂಗಳೂರು
೩೧. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ: ನೆಲೆ-ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೩೨. ಹಿರೇಮಠ ಎಸ್.ಎಂ., ಶಾಸನಾಧ್ಯಯನ, ೧೯೯೮, ವಿದ್ಯಾನಿಧಿ ಪ್ರಕಾಶನ, ಗದಗ
೩೩. ಕೃಷ್ಣಮೂರ್ತಿ ಸಿ.ಪಿ.ಕೆ, ಭಾರತೀಯ ಶಾಸನಶಾಸ್ತ್ರ ಪರಿಚಯ, ಸುರುಚಿ ಪ್ರಕಾಶನ, ಮೈಸೂರು
೩೪. ಚಂದ್ರಶೇಖರ ನಾರಾಯಣಪುರ, ಕರ್ನಾಟಕದ ವೀರಶೈವ ಮಠಗಳು, ಸಂ.೧, ಗೆಳೆಯ ಪ್ರಕಾಶನ, ಚಿಕ್ಕಮಗಳೂರು
೩೫. ಚನ್ನಬಸವ ಬಿ., ದೇವದುರ್ಗ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩೬. ಸುಜಾತ ಮಲ್ಲನಗೌಡ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳ ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩೭. ಕೃಷ್ಣಮಾಚಾರ್ಯ ಬಿ., ಮರೆಯಲಾಗದ ಸುರಪುರ ರಾಜರ ಚರಿತ್ರೆ
೩೮. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೩೯. ದೀಕ್ಷಿತ್ ಜಿ.ಎಸ್., ಕೃಷ್ಣದೇವರಾಯನ ಜೀವನ ಸಾಧನೆಗಳು, ೧೯೯೭, ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು
೪೦. ಹಿರೇಮಠ ಬಿ.ಆರ್., ಶಾಸನಗಳ ಕನ್ನಡ ವರ್ತಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೪೧. ಆಂಧ್ರಪ್ರದೇಶದ ಕನ್ನಡ ಶಾಸನ ಸಂಪುಟ ೫, ಅಲ್ಲಂಪುರ, ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೪೨. ಸ್ವಾಮಿ ಬಿ.ಎಸ್., ಬಸವ ಯುಗದ ಶರಣರು, ೧೯೯೭, ನವೀನ ಪ್ರಕಾಶನ, ಬೆಂಗಳೂರು
೪೩. ಚಂದ್ರಶೇಖರ, ಅರಕೇರಿಯ ವೀರಗಲ್ಲುಗಳು, ರಾಯಚೂರು ವಾಣಿ ದಿನಪತ್ರಿಕೆ
೪೪. ಕಿಡಿಗೇಣಯ್ಯಸ್ವಾಮಿ, ಶರಣರ ವಿಚಾರ ಮಂಥನ ಮಾಸ ಪತ್ರಿಕೆ
೪೫. ರಾಮಲಿಂಗಪ್ಪ ಚಂದನಕೇರಿ, ಆಕ್ರಮಣ ಪಾಕ್ಷಿಕ ಪತ್ರಿಕೆ

ಅನುಬಂಧ ೩

A. ಗಬ್ಬೂರು ಸೂಗೂರೇಶ್ವರ ದೇವಾಲಯದ ಕಂಬದಲ್ಲಿ

೧. ಸ್ವಸ್ತಿ ಸಮಸ್ತ ಕಳಚೂಯ್ಯನ ಚ

೨. ಕ್ರ ವರ್ತಿ ಸೋವಿದೇವ ಶ

೩. ದ. ಶ್ರೀಮುಖ ಸಂತ್ಸ

೪. ರದ ಶ್ರಾವಣ ಶುದ್ದ ೧೪ ಸೋಮ

೫. ವಾರ ದಂದು ಹಿರ್ಯ ಗೊಬ್ಬೂ

೬. ರಬಂ ಶ್ರೀ ಕಲಿದೇವೆರ್ಗ್ಗೆ ವಟ್ಟದೆ

೭. ದಣ ರಮಕ್ಕಳ ಮಾಧವದ

೮. ಟ್ಟರಮ...........ದಯ

೯. ....ರರ

೧೦.......................ಹ

೧೧. ....ಆ...........ಓ ಹೋಮ

೧೨. ದ..................ಳ್ಳಿರ.............ಳಾಳಿಯ

೧೩. .... ೧

೧೪. ....

ಅದೇ ದೇವಾಲಯ ಕಂಬದ ಎಡದಲ್ಲಿ

೧. ....ಮಾ......................ಮಾ

೨. ವನ ಪ್ರಥಮ..................ಅ.

೩. ಗಿ ದ್ವಿತೀಯ ತೃತೀಯ...........ಚತು

೪. ರ್ತ್ರಿ...................................ಣ

೫. ....ತೋಟಂ

೬. ....ಯ

೭. ....ಯ......................ನ ಪುಣಮಿಯು

೮. ....ಮೂ ಮಿ

೯. ಲ...............................ಗಾಗಿ

೧೦. ನೂ....................ನಾರಾ................ಯಂಣ್ಣಂಗೆ

೧೧. ಳು.............ಕೊಟ್ಟರು...................ಇದಮ್ಮ್ರವನ

೧೨. ಆ...................................

೧೩. ....ಳಿ

೧೪. ....ವಿಲೆ

B ಹಿರೇಬೂದುರು ಆಂಜನೇಯ ದೇವಾಲಯದಲ್ಲಿ

೧. ಸ್ವಸ್ತಿ ಸಮಸ್ತ ಭೂವನಾಶ್ರಯ

೨. ಪ್ರಥ್ವಿವಲ್ಲಬಂ ಮಹಾರಾಜಧಿ

೩. ಯೇಸ್ವರ ಪರಮ ಒಟ್ಟಾರ ಕಂ ಸತ್ಯಾ

೪. ಯ ಕುಲ ತಿಲಕಂ ಚಾಲುಕ್ಯಾಧರ ಣ

೫. ಶ್ರೀ ಮಜ್ಞ ಗೆ ದೇಕಮಲ್ಲ ದೇವರ ಪೃ

೬. ಥ್ವೀರಾ ಜಯಂ....ಗೆಯ್ದು ಪೂ....

೭. ಱಿಯ..........ನೆಲೆವೀಡಿನೊಳು

೮. ಸಂತಥಾ ವಿನೋದದಿಂ ರಾಜ್ಯಂ

೯. ಲ್ಲುತ್ತಿರೆ ಸ್ವಸ್ತ್ಯ ನವರತಹ

೧೦. ಕಲ್ಯಾಣಾಬ್ಯುದಯ ಸಂ

೧೧. ಭೋಗ ಭಾಗಿ ನಿ ದ್ವಿತೀಯ

೧೨. ಆಶ್ರಿತ ಜನ

೧೩. ಪ್ರ..........ಣ..................ಶ್ರೀ

೧೪. ಗ...............ದರುದ

೧೫. ....ಕ.............ಕಲಿತ............ದುರ.......ಜ

೧೬. ....ದೃಸೆದಿಪ್ಪಟ್ಟವ

೧೭. ....ಮುಖ ದರ್ಪ್ಪಣ ಗುಣ

೧೮. ......ಸರಣಾಗತ

೧೯. ಶ್ರೀಮಜ್ಞದೇಕ....................

C ಗಬ್ಬೂರು ಮಠದ ವೀರಗಲ್ಲಿನಲ್ಲಿ

೧. ....

೨. ....ಕಿ.............ಮಿಕೆಚರ

೩. ಯ ಗು.......................ವಣ

ಇತರೆ ಶಾಸನಗಳು (ತ್ರುಟಿತ ಶಾಸನಗಳು)

ಗಬ್ಬೂರಿನ ಬಂಗಾರು ಬಸವಣ್ಣ ದೇವಾಲಯದ ಬಲಭಾಗದಲ್ಲಿರುವ ಕ್ರಿ.ಶ.೧೧೨೪ರ ಶಾಸನದಲ್ಲಿ ಗೊಬ್ಬೂರ ಪಟ್ಟಣ ಕೇಶವ ದೇವರಿಗೆ ಬೇತಾಳಿಯ ಸೊಮೇಶ್ವರ ಭಟ್ಟನ ಮಗ ಮಲ್ಲಿದೇವಭಟ್ಟನು ದಾನ ನೀಡಿದ ಉಲ್ಲೇಖವಿದೆ. ಗಬ್ಬೂರಿನ ಪೇಟೆ ಆಂಜನೇಯ ದೇವಾಲಯದ ತಳಹದಿಯಲ್ಲಿರುವ ೧೭ನೇ ಶತಮಾನದ ಶಾಸನವು ಆದಿಲ್ ಶಾಹಿಗಳ ಅಂತಿಮ ಕಾಲದ್ದಿರಬೇಕು. ಕನ್ನಡ ಭಾಷೆಯು ಹೆಚ್ಚಿಗೆ ಉರ್ದುಮಯವಾಗಿದೆ. ಗೊಬ್ಬೂರ ಹೊಲದ ಬೆಳೆಯಲ್ಲಿನ ಬೆಳೆ ಪಾಲನ್ನು ಮಾಪು ಮಾಡಿದಂತೆ ತಿಳಿಯುತ್ತದೆ. ಅದೇ ದೇವಾಲಯದ ವಿಗ್ರಹದ ಮೇಲಿರುವ ಶಾಸನವು ೧೨-೧೩ನೇಯ ಶತಮಾನದ್ದಾಗಿದೆ. ಸಂಕರದಾಸಲಿಂಗ ಸನ್ಯಾಸಿ ಕೇಶವಪಂಡಿತ್ತನೆಂದಿದೆ. ಅದೇ ಊರಿನ ಮಸೀದಿಯಲ್ಲಿರುವ ಹೊಲ್ಲಜೀಯ ಗೂಜ್ಜೇಶ್ವರ ದೇವರಿಗೆ ಮತ್ತು ರಾಮನಾಥದೇವರಿಗೆ ದಾನವನ್ನು ಕೊಟ್ಟಂತೆ ತಿಳಿಯಬಹುದು. ಹಾಗೂ ದೇವರ ದಾಸಿಮಯ್ಯನ ಉಲ್ಲೇಖವಿದೆ. ಅದೇ ಊರಿನ ಸಿದ್ಧರ ಬಾವಿಯ ಕಟ್ಟಡಕ್ಕೆ ಇರುವ ಶಾಸನದಲ್ಲಿ ಯಾದವ ಚಕ್ರವರ್ತಿಯ ಉಲ್ಲೇಖವಿದೆ. ಉಳಿದ ವಿವರಗಳು ಸ್ಪಷ್ಟವಾಗಿಲ್ಲ. ಉಪ್ಪಾರ ಕಟ್ಟಿಮನೆ ಬಳಿ ಹನುಮಂತದೇವರ ಕಟ್ಟೆಯಲ್ಲಿರುವ ಶಾಸನದ ಆರಂಭದ ಶ್ಲೋಕವಿದು. ಇದು ೧೨ನೇ ಶತಮಾನಕ್ಕೆ ಸೇರಿದುದ್ದಾಗಿದೆ. ಗೂಗಲ್ಲು ಅಲ್ಲಮಪ್ರಭುಸ್ವಾಮಿ ಗುಡಿಯ ಗಂಟೆಯಲ್ಲಿರುವ ಶಾಸನವು ಕ್ರಿ.ಶ.೧೮೭೫ರಲ್ಲಿ ದೇವಾಲಯದ ಗಂಟೆಯನ್ನು ಗೊಬ್ಬರ ವೈಶ್ಯ ಕಂಚಗಾರ ಅಮ್ಮ ಪ್ರಭುಸ್ವಾಮಿ ಮುಂತಾದವರು ಮಾಡಿಸಿದಂತೆ ಹೇಳಲಾಗಿದೆ. ಚಿಂಚೋಡಿ ಗ್ರಾಮದ ಅಗಸಿ ಎದುರ ಕಟ್ಟೆಯ ಮೇಲಿರುವ ವೀರಗಲ್ಲಿನಲ್ಲಿ ತ್ರುಟಿತ ಶಾಸನವಾಗಿದ್ದು ಉಳಿದ ವಿವರಗಳು ಸ್ಪಷ್ಟವಾಗಿಲ್ಲ. ಮುಂಡರಗಿ ಬೆಟ್ಟದ ಶಿವರಾಮ ದೇವಾಲಯ ಬಲ ಪಕ್ಕದ ಬಂಡೆಯಲ್ಲಿರುವ ಶಾಸನವು ಸಿದ್ಧಲಿಂಗದೇವರ ಭಕ್ತರಾದ ಲಿಂಗಸ್ವಾಮಿ ಮಗನಾದ ಲಿಂಗಪ್ಪದೇವ ಎಂಬುವವನು ಗುಡಿಯನ್ನು ಕಟ್ಟಿಸಿ ಮುಂಡರಗಿಯ ಭೂಮಿಯನ್ನು ದೇವರ ಫಲಕಾರ್ಯಕ್ಕಾಗಿ ಬಿಟ್ಟ ಉಲ್ಲೇಖವಿದೆ. ಗಲಗ್ ಊರಿನ ಬಸವನಗುಡಿ ಕಟ್ಟೆಗೆ ಹಾಕಿರುವ ಕಲ್ಲಿನಲ್ಲಿ ಕ್ರಿ.ಶ. ೧೭೨೭ರ ಕಾಲಕ್ಕೆ ಸಂಬಂಧಿಸಿದ್ದು, ಗಲಗು ಮತ್ತು ರಾಯದುರ್ಗದ ಸೀಮೆಯಲ್ಲಿ ಯಾರೂ ದಂಡವನ್ನು ತೆಗೆದುಕೊಳ್ಳಬಾರದೆಂದೂ, ನ್ಯಾಯದಿಂದ ಕೊಡಬೇಕೆಂದು ಕಟ್ಟಳೆ ವಿಧಿಸಿದೆ. ಶ್ಯಾವಂತಗಲ್ ಚಿರತೆಗುಡ್ಡದ ಬಳಿ ದೊಡ್ಡ ಬಂಡೆಯಲ್ಲಿರುವ ಶಾಸನವು ತಿಮ್ಮನಗೌಡನು ತಿಮರಸ ಎಂಬುವವನಿಗೆ ಭೂಮಿಯನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ. ಕ್ಯಾದಿಗೇರಾ ಗ್ರಾಮದ ವೀರಭದ್ರ ದೇವಾಲಯದ ಬಲಕ್ಕೆ ದೊಡ್ಡ ಗುಂಡಿನ ಮೇಲಿರುವ ಕ್ರಿ.ಶ.೧೭-೧೮ನೇ ಶತಮಾನದ ಶಾಸನದಲ್ಲಿ ಕೇದಿಗೆರೆಯ ಗವುಡರಾದ ಹನಿರೆಡಿ, ಲಿಂಗಿರೆಡಿ, ಕುಲಕರ್ಣಿ ಅಂತರಸ ಮೊದಲಾದ ಸಮಸ್ತ ಪೂಜೆ, ಸೆಟ್ಟಿಗಳು ಸೇರಿ ಬಾಲವೀರಯ, ಲಿಂಗದ ವೀರಯ ಇವರಿಗೆ ಅಕಸಾಲಿ ಕೆಂಚನ ಹೊಲದ ಪೈಕಿ ಹನ್ನೆರಡುವರೆ ಮಾನ್ಯ ಎಂದು ಗುತ್ತಿಗೆ ಬರೆಸಿ ನೀಡುತ್ತಾರೆ. ಇದೇ ಗ್ರಾಮದ ಬೆಟ್ಟದಲ್ಲಿನ ಗುಂಡಿನ ಮೇಲೆ ಇರುವ ಶಾಸನವು

ಕೇದಿಗೆರೆಯಲ್ಲಿದ್ದ ಹೋಬೋಜನ ಮಗನಾದ ಮುದಕಪನನ್ನು ಹೆಸರಿಸುತ್ತದೆ. ಚಂದನಕೇರಿಯ ಗ್ರಾಮದ ಅಗಸಿಯಲ್ಲಿರುವ ಶಾಸನವು ಅರಸಿಯಕೆರೆಯ ಉಲ್ಲೇಖವಿದ್ದು ಕರೆ ಮಾಡಿದ್ದಕ್ಕೆ ಕೆಲವು ತೆರಿಗೆಗಳನ್ನೂ ತಿಳಿಯಬಹುದಾಗಿದೆ. ಅದೇ ಗ್ರಾಮದ ಹನುಮಂತ ದೇವಾಲಯದ ಗೋಡೆಗೆ ಸೇರಿಸಿರುವ ಶಾಸನವು ಬಣಜಿಗರು ೫೦೦ ಜನರು ಬಿಟ್ಟ ದಾನಗಳನ್ನು ಉಲ್ಲೇಖಿಸುತ್ತದೆ. ಹೆಜ್ಜುಂಕ ಬಿಲ್ಕೊಡೆಯ ಅಧಿಕಾರಿಗಳ ಮತ್ತು ಸೋಮೇಶ್ವರ ದೇವರ ಉಲ್ಲೇಖವಿದೆ. ಅದೇ ಗ್ರಾಮದ ಶಾಲೆಯ ಎಡಭಾಗದಲ್ಲಿರುವ ಶಾಸನವು ಚಾಳುಕ್ಯರ ವಂಶಾವಳಿಯನ್ನು ಆರಂಭಿಸಿ ತ್ರೈಲೋಕ್ಯಮಲ್ಲನವರೆಗೂ ಹೇಳಿದೆ. ಇವನ ಚೋಳರಾಜನನ್ನು ಕೊಂದು ಅವನ ರಾಜಕ್ಕೆ ದಾಳಿಯಿಟ್ಟು, ಕಾಂಚಿಪುರವನ್ನು ವಶಕ್ಕೆ ತೆಗೆದುಕೊಂಡನು ಎಂದು ಹೇಳಿದೆ. ಇವನ ಮಗ ವಿಕ್ರಮಾದಿತ್ಯದೇವನನ್ನು ಹೆಸರಿಸಿದೆ. ಅದೇ ಗ್ರಾಮದ ಸೋಮಶೇಖರಪ್ಪನವರ ತೋಟದ ಬಾವಿಯ ಬಳಿಯಲ್ಲಿರುವ ಶಾಸನದ ಆರಂಭದಲ್ಲಿ ಚಾಳುಕ್ಯ ರಾಜನ ಪ್ರಶಸ್ತಿ ಇದೆ. ಹಾಗೂ ಪ್ರೌಢರೇಖಾ ರೇವಂತ, ಸತ್ಯರಾಧೇಯ ಅಭಿನವ ಕೃಷ್ಣರಾಜ ಮುಂತಾಗಿ ಬಿರುದುಗಳನ್ನು ಒಳಗೊಂಡ ಉಲ್ಲೇಖವಿದೆ. ದೇವದುರ್ಗದ ಗುಡ್ಡದ ಬಂಡೆಯ ಮೇಲೆ ಇರುವ ಶಾಸನವು ಚಂದನಕೇರಿ ಗುರು ಕೃಷ್ಣಯ್ಯನ ಉಲ್ಲೇಖವಿದೆ ಹಾಗೂ ನೂರೊಂದು ಗಣಂಗಳ ಪಾದವೇ ಗತಿಯೆಂದು ಹೇಳಲಾಗಿದೆ.

ಅದರ ಪಕ್ಕದಲ್ಲಿರುವ ಶಾಸನದಲ್ಲಿ ಗುರುಲಿಂಗದ ಪಾದವೇ ಗತಿ ಎಂದಿದೆ. ಅಲ್ಲೇ ಇರುವ ಇನ್ನೊಂದು ಶಾಸನದಲ್ಲಿ ಶಿವನನ್ನು ಹೊಗಳಿದೆ. ಅದೇ ಸ್ಥಳದಲ್ಲಿರುವ ಇನ್ನೊಂದು ಶಾಸನದಲ್ಲಿ ದೇವದುರ್ಗವನ್ನು ರತ್ನಮೇಕಲಗಿರಿ ಎಂದು ಕರೆಯಲಾಗಿದೆ. ಅದೇ ಸ್ಥಳದಲ್ಲಿರುವ ಕ್ರಿ.ಶ.೧೮ನೇ ಶತಮಾನದ ಶಾಸನದಲ್ಲಿ ಪವಿನಾಯಕನ ಹೆಸರು ಬಂದಿದೆ. ಅದೇ ಸ್ಥಳದ ಇನ್ನೊಂದು ಶಾಸನದಲ್ಲಿ ಅಯ್ಯನ ಪಾದದ ಉಲ್ಲೇಖವಿದೆ. ಅದೇ ಗ್ರಾಮದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಂಡೆಯಲ್ಲಿರುವ ಕ್ರಿ.ಶ.೧೮ನೆಯ ಶತಮಾನದ ಶಾಸನದಲ್ಲಿ ಚಂದನಕೆರೆ ಚನ್ನಬಸವಣ್ಣನ ಉಲ್ಲೇಖವಿದೆ ಹಾಗು ನೂರೊಂದು ಅಯ್ಯನ ಪಾದವೇ ಗತಿ ಎಂದಿದೆ. ಅದೇ ಗ್ರಾಮದ ಕೇರಿ ದಾರಿಯಲ್ಲಿ ಬಂಡೆಯಲ್ಲಿರುವ ೧೮ನೇ ಶತಮಾನದ ಶಾಸನದಲ್ಲಿ ದೊಡ್ಡ ಬಸಪ್ಪ ಮತ್ತು ನೂರೊಂದಯ್ಯನ ಪಾದವೇ ಗತಿಯೆಂದು ಬರೆಯಲಾಗಿದೆ. ಬೂದ್ದಿನ್ನಿ ಗ್ರಾಮದ ಯಂಕಪ್ಪ, ಉಪ್ಪಾರರ ಹೊಲದಲ್ಲಿರುವ ಶಾಸನವು ಪ್ರಮದೀಚ ಸಂವತ್ಸರ ನಾಡಾಗ ಉಡ ಎಂಬ ಉಲ್ಲೇಖವಿದೆ. ಗಬ್ಬೂರಿನ ಏಳೂಬಾವಿ ಬಸವಣ್ಣ ದೇವಾಲಯದ ಆವರಣದಲ್ಲಿ ನೆಲಕ್ಕೆ ಹಾಸಿರುವ ಕ್ರಿ.ಶ.೧೨-೧೩ರ ಶಾಸನ ವಿವರಗಳು ಸ್ಪಷ್ಟವಾಗಿಲ್ಲ. ರಾಮದುರ್ಗದ ಬೆಟ್ಟದ ರಾಮಲಿಂಗೇಶ್ವರ ದೇವಾಲಯದ ಬಂಡೆಯ ಮೇಲಿರುವ ಕ್ರಿ.ಶ.೧೬೧೬ ಶಾಸನದಲ್ಲಿ ಮುಂಮಡಿ ಪ್ರತಾಪರಾಯನೆಂಬುವವನು ಪರಗಗೆ ಬೆಳದೋಣಿಯ ರಾಮಲಿಂಗದೇವರಿಗೆ ಮೌಜೆ ಗೋಕುಲದಿಂದ ಗ್ರಾಮವನ್ನು ರಾಮಲಿಂಗದೇವರಿಗೆ ಏಕಭೋಗವಾಗಿ ಕೊಟ್ಟ ಉಲ್ಲೇಖವಿದೆ.